ಗಳುಂಟು. ಸವಿಷಗಳಲ್ಲಿ ನಾಗರ ಹಾವು ಮುಖ್ಯ. ಅದರಲ್ಲಿ ಕರೆ ಜಾತಿ, ಬಿಳೆ ಜಾತಿ, ಬೇರೆ ಬೇರೆಯುಂಟು. ಈ ಹಾವು ಕಡಿದ ಬಳಿಕ ನಾಲ್ಕೈದು ತಾಸಿನೊಳಗೆ ಮನುಷ್ಯನು ಸಾಯುತ್ತಾನೆ. ಬೇರೆ ವಿಷಯುಕ್ತ ಸರ್ಪಗಳು ಚಿಣಗೀ ಹಾವು (ಘುಸರ್), ಮಂಡೋಳ (ಘೋಣಸ) ನಾನೆತ (ಮಣಿಯಾರ), ಸುಂಕಪಾಳ, ಜೋಗಿ, ಸುರ್ಗಂಡ, ಅಜಗರ, ಮುಂತಾದವುಗಳು ಪ್ರಸಿದ್ಧ ಉಂಟು.

ನಿರ್ವಿಷ ಸರ್ಪಗಳಲ್ಲಿ ಹೆಬ್ಬಾವು ಶ್ರೇಷ್ಠ. ಇವಲ್ಲದೆ ಮಣ್ಣುಮುಕ್ಕ, ಧಿವಡ, ಧಾಮಣ, ಅಧೇಲಾ, ಹಸರು ಹಾವು, ಮುಂತಾದ ಜಾತಿಗಳು ಹಲವುಂಟು.

ಮೀನುಗಳು.—ಮುಂಡಗೋಡ ಮಹಾಲು, ಸುಪೇ ತಾಲೂಕು, ಇವೆರಡು ಹೊರ್ತಾಗಿ, ಕಾನಡಾ ಜಿಲ್ಲೆಯ ಶೀ ನೀರಲ್ಲಿಯೂ ಉಪ್ಪು ನೀರಿನಲ್ಲಿಯೂ ಮೀನುಗಳು ಸಮೃದ್ಧಿಯಾಗಿ ಇರುತ್ತವೆ. ಸಿದ್ದಾಪುರದ ನೈರುತ್ಯದಲ್ಲಿ ೬ ಮೈಲಿನ ಮೇಲೆ ಇರುವ ಭಾವನಗಿರಿ ಯೆಂಬ ಸರೋವರದೊಳಗಿನ ಮೀನುಗಳು ಪವಿತ್ರವೆಂದು ಯೆಣಿಸಲ್ಪಡುತ್ತವೆ. ಅವುಗಳನ್ನು ಯಾರು ಕೊಲ್ಲುವದಿಲ್ಲ; ಕೆಲವುಗಳ ಪಕಗಳಿಗೆ ಬಂಗಾರದ ಉಂಗುರಗಳನ್ನು ಹಾಕಿಸಿದ್ದಾರೆ. ಕಾರವಾಡದಲ್ಲಿ ಕರ್ಜ ಯೆಂಬ ಜಾತಿಯನ್ನು ಕೊಲ್ಲುವದಿಲ್ಲ. ಕೆರೆಗಳಲ್ಲಿಯ ಮೀನುಗಳು ಪೊಳೆಗಳಲ್ಲಿಯವುಗಳಿಗಿಂತ ದೊಡ್ಡವಿರುತ್ತವೆ. ಫೆಬ್ರುವಾರಿಯಿಂದ ಮೇ ವರೆಗೆ ಶೀ ನೀರಿನಲ್ಲಿ ಮೀನ ಹಿಡಿಯುವ ಕೆಲಸವು ಬಹಳ ನಡಿಯುತ್ತದೆ; ಅಗಟಂಬರಿನಿಂದ ಜನವರಿಯ ವರೆಗೆ ಯೆಲ್ಲಕ್ಕೂ ಕಡಿಮೆ. ಕಾನಡಾ ಜಿಲ್ಲೆಯಲ್ಲಿ ೧೯೩ ಜಾತಿಗಳ ಮೀನುಗಳು ದೊರೆಯುತ್ತವೆ. ಅವುಗಳಲ್ಲಿ ಗೊಬ್ಬರ ಮಚ್ಛಿ ಯೆಂಬ ಮೀನು ಯೆಲ್ಲಕ್ಕೂ ದೊಡ್ಡದು, ೧೨ ಫೂಟು ಉದ್ದ, ನಾಲ್ಕು ಫೂಟು ಅಗಲು ಇರುತ್ತದೆ. ಸಮುದ್ರದಲ್ಲಿ ಮೀನ ಹಿಡಿಯುವ ಕೆಲಸವು ನವೆಂಬರಿನಿಂದ ಫೆಬ್ರುವಾರಿಯ ವರೆಗೆ ಬಹಳ ನಡಿಯುತ್ತದೆ; ಮಳೆಗಾಲದಲ್ಲಿ ನಡಿಯುವದಿಲ್ಲ.

# ೩ನೇ ಭಾಗ—ನಿವಾಸಿಗಳು.

ಸನ್ ೧೮೮೧ನೇ ವರ್ಷದ ಖಾನೇಸುಮಾರಿಯಂತೆ, ಮುಂಬಯಿ ಕರ್ನಾಟಕ ಭಾಗದ ನಾಲ್ಕೂ ಜಿಲ್ಲೆಗಳ ವೊಟ್ಟು ಜನಸಂಖ್ಯೆ ೨೮೦೭೨೫೪, ಚಚ್ಚೌಕು ಮೈಲಿಗೆ ೧೮೮.೮—ಒಟ್ಟು ಜನಸಂಖ್ಯೆದಲ್ಲಿ ಗಂಡಸರು ೧೪೧೩೭೭೭ ಜನ, ಹೆಂಗಸರು ೧೩೯೩೪೭೭ ಜನ; ಅಥವಾ ನೂರರಲ್ಲಿ ಗಂಡಸರು ೫೦.೩೬, ಹೆಂಗಸರು ೪೯.೬೪—ಒಟ್ಟು ಜನಸಂಖ್ಯೆದಲ್ಲಿ ಹಿಂದೂ ಜನರು ೨೫೨೪೯೦೦ ಅಥವಾ ನೂರರಲ್ಲಿ ೯೦.೦೨ ಜನ; ಮುಸಲ್ಮಾನರು ೨೬೦೩೩೨ ಅಥವಾ ನೂರರಲ್ಲಿ

**ಸಂಖ್ಯೆ.**

೮.೫೭; ಕ್ರಿಸ್ತೀ ಜನರು ೨೩೮೧೨ ಅಥವಾ ನೂರರಲ್ಲಿ ೧.೧೩; ಯಹೂದಿಯರು ೧೩೨; ಪಾರ್ಸೀ ಜನರು ೧೩೮; ಇತರರು ೧೫. ಸನ್ ೧೮೭೨ನೇ ವರ್ಷದ ಖಾನೇಸುಮಾರಿಯಲ್ಲಿ ಇದ್ದ ವೊಟ್ಟು ಜನಸಂಖ್ಯೆ ೩೧೩೩೯೨೧, ಚಚ್ಚೌಕು ಮೈಲಿಗೆ ೧೬೬.೧೯. ಈ ಒಟ್ಟು ಜನಸಂಖ್ಯೆಯಲ್ಲಿ ಹಿಂದೂ ಜನರು ೨೮೩೨೫೫೧, ಅಥವಾ ನೂರರಲ್ಲಿ ೯೦.೧೫ ಜನ; ಮುಸಲ್ಮಾನರು ೨೯೫೨೦೧, ಅಥವಾ ನೂರರಲ್ಲಿ ೮.೮೪; ಕ್ರಿಸ್ತೀ ಜನರು ೨೦೭೬೨, ಅಥವಾ ನೂರರಲ್ಲಿ ೧.೩; ಯಹೂದಿಯರು ೧೯೨, ಪಾರ್ಸೀ ಜನರು ೧೦೩, ಇತರರು ೧. ಇವರಿಂದ ನೋಡಲಾಗಿ ಸನ್ ೧೮೭೬—೭೭ನೇ ವರ್ಷದ ಬರದಲ್ಲಿ ಜನ ಸತ್ತದ್ದರಿಂದಲೂ, ಪರಸ್ಥಳಕ್ಕೆ ಹೋದದ್ದರಿಂದಲೂ ೧೦ ವರ್ಷದೊಳಗೆ ವೊಟ್ಟು ಜನಸಂಖ್ಯೆದಲ್ಲಿ ೩೪೨೦೮೧ ಜನ, ಅಂದರೆ ನೂರರಲ್ಲಿ ೧೧.೭೪, ಕಡಿಮೆಯಾಯಿತೆಂದು ತಿಳಿಯುತ್ತದೆ.

ಈ ಕರ್ನಾಟಕ ಭಾಗದ ನಿವಾಸಿಗಳಲ್ಲಿ ಈ ಭಾಗದ ನಾಲ್ಕು ಜಿಲ್ಲೆಗಳಲ್ಲಿ ಹುಟ್ಟಿದವರದೂ, ಪರಸ್ಥಳದಲ್ಲಿ ಹುಟ್ಟಿ ಈ ಭಾಗದಲ್ಲಿ ಬಂದು ವಾಸಿಸುವವರದೂ ಪ್ರಮಾಣ ನೋಡಲಾಗಿ ತಿಳಿಯುವ ಸಂಖ್ಯೆಗಳು ಹ್ಯಾಗಂದರೆ— ನಾಲ್ಕು ಜಿಲ್ಲೆಗಳಲ್ಲಿ ಹುಟ್ಟಿದವರು (ಗಂಡಸರು ೧೩೩೧೪೮೯ + ಹೆಂಗಸರು ೧೨೭೩೫೫೩ =) ೨೬೦೫೦೪೨, ಅಥವಾ ನೂರರಲ್ಲಿ ೯೨.೩೯; ದಕ್ಷಿಣ ಮಹಾರಾಷ್ಟ್ರದ ಸಂಸ್ಥಾನಗಳಿಂದ ಬಂದವರು ೫೭೬೦೨; ಮೈಸೂರ ಶೀಮೆಯಿಂದ ಬಂದವರು ೧೫೩೪೨; ಗೋವೆಯ ಪ್ರಾಂತದಿಂದ ಬಂದವರು ೮೮೨೫; ಕೊಂಕಣ ಜಿಲ್ಲೆಗಳಿಂದ ಬಂದವರು ೫೧೧೫; ಮದ್ರಾಸ ಇಲಾಖೆಯಿಂದ ಬಂದವರು ೨೦೩೮೧; ಕೊಲ್ಲಾಪುರ ಸಂಸ್ಥಾನದಿಂದ ೨೫೭೫೫; ನಿಜಾಮನ ರಾಜ್ಯದಿಂದ ೪೪೨೬೯; ಸೊಲ್ಲಾಪುರದ ಜಿಲ್ಲೆಯಿಂದ ೬೯೧೭; ಸಾತಾರೆಯ ಜಿಲ್ಲೆಯಿಂದ ೯೯೧೨; ಪುಣೆ ಜಿಲ್ಲೆಯಿಂದ ೧೩೮೩; ಅಹಮ್ಮದನಗರ ಜಿಲ್ಲೆಯಿಂದ ೩೪೧; ನಾಸಿಕ ಜಿಲ್ಲೆಯಿಂದ ೬೬; ಖಾನದೇಶ ಜಿಲ್ಲೆಯಿಂದ ೧೯೯; ಮುಂಬಯಿಯಿಂದ ೧೦೫೨; ಗುಜರಾಥದಿಂದ ೧೪೯೨; ಬೇರೆ ಪ್ರದೇಶಗಳಿಂದ ೪೧೧೦.

**ಭಾಷೆಗಳು.**

ಭಾಷೆಗಳ ಸಂಬಂಧದಿಂದ ಜನರ ಪ್ರಮಾಣಗಳು ಹ್ಯಾಗಂದರೆ— ಕನ್ನಡ ಭಾಷೆಯವರು (ಗಂಡಸರು ೧೦೨೬೧೬೫ + ಹೆಂಗಸರು ೧೦೧೬೭೮೨ =) ೨೦೪೩೯೪೭, ಅಥವಾ ನೂರರಲ್ಲಿ ೭೧.೫೧; ಮಹಾರಾಷ್ಟ್ರ ೪೫೧೩೭೧, ಅಥವಾ ನೂರರಲ್ಲಿ ೧೭.೯೧; ಹಿಂದುಸ್ತಾನಿ ೨೩೯೩೦೪, ಅಥವಾ ನೂರರಲ್ಲಿ ೮.೪೨; ತೆಲಗು ೫೦೧೯೨, ಅಥವಾ ನೂರರಲ್ಲಿ ೧.೪೬; ಗುಜರಾಥಿ ೪೭೬೨; ಮಾರವಾಡಿ ೩೨೩; ಹಿಂದಿ ೧೦೧೪೪; ಮಲಿಯಾಳಿ ೩೧೭; ಕೊಂಕಣಿ ೧೦೬೦; ತುಳು ೫೯೫; ತಮಿಳ ೨೮೦೫; ಕೊಡಗು ೨೬; ಇಂಗ್ಲಿಷ ೧೫೫೫; ಅರಬೀ ೫೬; ಚಿನಯಿ ೨೧; ಪಾರ್ಸಿ ೯೪; ಪಂಜಾಬಿ ೩೫; ಜರ್ಮನ್ ೨೯; ಪುಸ್ತು ೩.

ಈ ದಕ್ಷಿಣ ಭಾಗದಲ್ಲಿ ಲಗ್ನವಾಗದವರು, ಲಗ್ನವಾದವರು, ವಿಧುರರು ಅಥವಾ ವಿಧವೆಗಳು ಇವರ ಪ್ರಮಾಣವನ್ನು ಕೆಳಗಿನ ಕೋಷ್ಟಕದಲ್ಲಿ ವಿವರಿಸಿದ್ದೇವೆ.

# ಲಗ್ನವಾದವರು, ಲಗ್ನವಾಗದವರು, ವಿಧವೆ ವಿಧುರರು.

| ಜಾತಿ | ಹತ್ತು ವರ್ಷದ ಕೆಳಗೆ | | ೧೦ರಿಂದ ೧೪ | | ೧೫ರಿಂದ ೧೯ | | ೨೦ರಿಂದ ೩೯ | | ೪೦ ಅಥವಾ ಹೆಚ್ಚು | | ಒಟ್ಟು | |
|---|---|---|---|---|---|---|---|---|---|---|---|---|
| | ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. | ಗಂ. | ಹೆಂ. |
| **ಹಿಂದೂ.** | | | | | | | | | | | | |
| ಲಗ್ನವಾಗದವರು... | ೨೯೩೪೦೩ | ೨೫೮೧೯೩ | ೧೫೫೫೨೬ | ೫೫೦೩೦ | ೬೧೩೮೫ | ೬೬೪೨ | ೫೪೨೬೧ | ೧೦೫೦೩ | ೧೯೨೩೩ | ೧೩೪೮೯ | ೫೭೮೮೧೩ | ೩೪೩೮೫೭ |
| ಲಗ್ನವಾದವರು.... | ೭೧೧೭ | ೪೦೯೮೯ | ೨೭೮೦೫ | ೯೨೧೩೫ | ೪೦೪೦೭ | ೮೦೬೦೭ | ೧೭೦೩೫೨ | ೨೧೧೭೬೭ | ೩೫೬೨೫೦ | ೧೯೯೦೧೪ | ೬೦೧೯೪೧ | ೬೧೩೫೧೨ |
| ವಿಧವೆ ವಿಧುರರು... | ೭೨೩ | ೨೧೯೬ | ೩೭೨೧ | ೮೦೬೩ | ೪೨೨೪ | ೭೬೨೯ | ೧೪೧೭೯ | ೩೪೯೯೫ | ೭೦೫೮೫ | ೨೩೯೩೮೫ | ೯೩೪೩೨ | ೨೯೨೩೬೮ |
| **ಮುಸಲ್ಮಾನರು.** | | | | | | | | | | | | |
| ಲಗ್ನವಾಗದವರು... | ೩೦೯೫೫ | ೨೯೯೬೩ | ೧೮೩೩೩ | ೧೦೬೭೨ | ೮೫೧೪ | ೧೩೪೬ | ೮೬೩೭ | ೮೧೫ | ೨೪೪೨ | ೭೩೦ | ೬೮೩೮೧ | ೫೨೪೨೬ |
| ಲಗ್ನವಾದವರು.... | ೩೯೧ | ೧೪೮೭ | ೧೩೨೭ | ೫೧೨೨ | ೨೧೨೩ | ೬೯೮೩ | ೧೩೯೫೯ | ೨೧೭೨೯ | ೩೬೦೨೮ | ೨೧೩೨೮ | ೫೩೮೨೮ | ೫೬೭೪೯ |
| ವಿಧವೆ ವಿಧುರರು... | ೩೧ | ೧೦೨ | ೯೭ | ೩೭೨ | ೨೧೪ | ೪೪೭ | ೧೧೫೦ | ೨೯೮೨ | ೫೫೮೩ | ೨೩೪೭೦ | ೭೫೨೫ | ೨೮೩೨೩ |
| **ಕ್ರಿಸ್ತೀ.** | | | | | | | | | | | | |
| ಲಗ್ನವಾಗದವರು... | ೨೬೩೩ | ೨೯೯೯ | ೧೩೧೯ | ೯೯೫ | ೮೮೦ | ೨೬೦ | ೧೩೪೨ | ೧೯೦ | ೮೪೯ | ೧೦೯ | ೭೪೪೦ | ೪೫೫೩ |
| ಲಗ್ನವಾದವರು.... | ೯ | ೨೭ | ೪೮ | ೧೫೪ | ೧೧೮ | ೫೯೧ | ೧೩೩೮ | ೧೭೯೦ | ೩೫೯೬ | ೧೫೧೧ | ೫೦೯೫ | ೪೦೬೨ |
| ವಿಧವೆ ವಿಧುರರು... | ೦ | ೨ | ೧ | ೧೦ | ೩ | ೪೮ | ೬೪ | ೩೦೨ | ೪೩೨ | ೧೭೯೭ | ೫೦೦ | ೨೧೫೯ |
| **ಇತರರು.** | | | | | | | | | | | | |
| ಲಗ್ನವಾಗದವರು... | ೨೮ | ೨೧ | ೧೯ | ೧೫ | ೫ | ೨ | ೮ | ೧ | ೭ | ೧ | ೬೭ | ೩೫ |
| ಲಗ್ನವಾದವರು.... | ೦ | ೧ | ೨ | ೧ | ೦ | ೧೦ | ೨೮ | ೮ | ೨೯ | ೧೬ | ೫೯ | ೩೬ |
| ವಿಧವೆ ವಿಧುರರು... | ೦ | ೦ | ೦ | ೦ | ೦ | ೦ | ೦ | ೦ | ೩ | ೫ | ೩ | ೫ |

ಜನರ ಜೀವನೋಪಾಯಗಳನ್ನು ಅನುಸರಿಸಿ ಸನ್ ೧೮೮೧ನೇ ವರ್ಷದ ಖಾನೇ ಸುಮಾರಿಯಲ್ಲಿ ಆರು ವರ್ಗಗಳು ಮಾಡಲ್ಪಟ್ಟವೆ. ಅವುಗಳ ವಿವರ ಹ್ಯಾಗಂದರೆ.

೧ನೇ ವರ್ಗ — ಸರಕಾರೀ ನೌಕರಿ, ವಿದ್ಯೋಪಜೀವನ, ವಿದ್ಯಾಭ್ಯಾಸ, ಕಲಾ ಕೌಶಲ್ಯ, ಇವೆಲ್ಲ ಕೂಡಿ ೪೮೨೭೯, ಅಥವಾ ನೂರರಲ್ಲಿ ೧·೬೯.

೨ನೇ ವರ್ಗ — ಮನೆ ಚಾಕರಿ ೨೪೭೭೬ ಅಥವಾ ನೂರರಲ್ಲಿ ೦·೯೧.

೩ನೇ ವರ್ಗ — ವ್ಯಾಪಾರ ೧೩೬೧೧೮ ಅಥವಾ ನೂರರಲ್ಲಿ ೪·೫೩.

೪ನೇ ವರ್ಗ — ಒಕ್ಕಲತನ ೯೨೪೯೩೧ ಅಥವಾ ನೂರರಲ್ಲಿ ೩೩·೫೭.

೫ನೇ ವರ್ಗ — ಕೈಗಾರಿಕೆ ಶಿಲ್ಪ ೪೩೮೧೦೨ ಅಥವಾ ನೂರರಲ್ಲಿ ೧೪·೮೫.

೬ನೇ ವರ್ಗ — ಗೊತ್ತಿಲ್ಲದಂಥ ಅನುತ್ಪಾದಕವಾದ ಉದ್ಯೋಗಗಳು, ಹುಡುಗರು ಸಹಿತವಾಗಿ ೧೪೫೭೫೫೩ ಅಥವಾ ನೂರರಲ್ಲಿ ೪೭·೪೧.

೧೦೦೦೦ಕ್ಕಿಂತ ಹೆಚ್ಚು ಜನರು ವೊಕ್ಕಲಾಗಿದ್ದಂಥ ಗ್ರಾಮಗಳು ಧಾರವಾಡ ಜಿಲ್ಲೆಯಲ್ಲಿ ೪, ವಿಜಾಪುರ ಜಿಲ್ಲೆಯಲ್ಲಿ ೩ ಮಾತ್ರ ಇರುತ್ತವೆ; ಆದರೆ ನೂರಕ್ಕಿಂತ ಕಡಿಮೆ ಜನರುಳ್ಳಂಥ ಹಳ್ಳಿಗಳು ಧಾರವಾಡದಲ್ಲಿ ೧೧೩, ವಿಜಾಪುರದಲ್ಲಿ ೧೩೪; ೫೦೦೦ಕ್ಕಿಂತ ಹೆಚ್ಚು ಜನರುಳ್ಳ ಗ್ರಾಮಗಳು, ಎರಡೂ ಜಿಲ್ಲೆಗಳಲ್ಲಿಯೂ ವೊಂಬೊಂಬತ್ತು ಇರುತ್ತವೆ. ಧಾರವಾಡ ಜಿಲ್ಲೆಯಲ್ಲಿ ಪ್ರತಿ ೩·೫೬ ಚಚ್ಚೌಕು ಮೈಲಿಗೆ ವೊಂದು ಹಳ್ಳಿ ಬೀಳುತ್ತಿದ್ದು ಪ್ರತಿ ಹಳ್ಳಿಗೆ ಸರಾಸರೀ ಮಾನದಿಂದ ೫೭೮ ನಿವಾಸಿಗಳು ಬೀಳುತ್ತಾರೆ; ವಿಜಾಪುರ ಜಿಲ್ಲೆಯಲ್ಲಿ ಪ್ರತಿ ೫೦೯ ಚ. ಮೈಲಿಗೆ ವೊಂದು ಹಳ್ಳಿ ಬೀಳುತ್ತಿದ್ದು, ಪ್ರತಿ ಹಳ್ಳಿಗೆ ಸರಾಸರೀ ಮಾನದಿಂದ ೪೮೬ ಜನರು ಬೀಳುತ್ತಾರೆ. ಈ ವಿವರುಗಳಿಂದ ಉಳಿದ ೨ ಜಿಲ್ಲೆಗಳ ವಿವರುಗಳನ್ನು ತರ್ಕಿಸ ಬಹುದು.

ಸನ್ ೧೮೮೧ ಇಸವಿಯ ಖಾನೇಸುಮಾರಿಯಂತೆ ಮುಂಬಯಿ ಕರ್ನಾಟಕದಲ್ಲಿ ವೊಟ್ಟಿಗೆ ೬೨೪೭೨೩ ಮನೆಗಳು ಇದ್ದವು. ಅವುಗಳಲ್ಲಿ ೪೯೯೩೨೧ ಮನೆಗಳು ವೊಕ್ಕಲಾಗಿದ್ದವು. ೧೨೫೪೦೨ ಮನೆಗಳು ಹಾಳು ಬಿದ್ದಿದ್ದವು. ಒಟ್ಟು ಮನೆಗಳೊಳಗೆ ಧಾರವಾಡ ಜಿಲ್ಲೆಯಲ್ಲಿದ್ದ ೨೦೬೪೧೯ ಮನೆಗಳಲ್ಲಿ ವೊಕ್ಕಲಾದ ಮನೆಗಳು ೧೬೧೧೫೦, ಹಾಳು ೪೫೨೬೯; ಬೆಳಗಾವೀ ಜಿಲ್ಲೆಯಲ್ಲಿದ್ದ ೧೮೮೬೯೪ ಮನೆಗಳಲ್ಲಿ ವೊಕ್ಕಲಾದ ಮನೆಗಳು ೧೫೪೮೦೬, ಹಾಳು ೩೩೮೮೮. ವಿಜಾಪುರ ಜಿಲ್ಲೆಯಲ್ಲಿದ್ದ ೧೫೪೬೧೯ ಮನೆಗಳಲ್ಲಿ ವೊಕ್ಕಲಾದ ಮನೆಗಳು ೧೧೪೫೩೩, ಹಾಳು ೪೦೦೮೬; ಕಾನಡಾ ಜಿಲ್ಲೆಯಲ್ಲಿದ್ದ ೭೪೯೯೧ ಮನೆಗಳಲ್ಲಿ ವೊಕ್ಕಲಾದ ಮನೆಗಳು ೬೮೮೩೨, ಹಾಳು ೬೧೫೯. ಈ ಕರ್ನಾಟಕ ಭಾಗದಲ್ಲಿ ಮನೆಗಳ ಪ್ರಮಾಣವು ವೊಂದು ಚಚ್ಚೌಕು ಮೈಲಿಗೆ ೧೩೨·೫೩. ಒಕ್ಕಲಾದ ಮನೆಗಳ ಜನಸಂಖ್ಯೆದ ಸರಾಸರೀ ಪ್ರತಿ ವೊಂದು ಮನೆಗೆ ೫·೫೪. ಪೂರ್ವದಲ್ಲಿ ದೇಶದೊಳಗೆ ಬಂದೋಬಸ್ತು ಇಲ್ಲದ್ದರಿಂದಲೂ, ತಿಂದುಂಡು ಸೌಖ್ಯದಲ್ಲಿದ್ದದ್ದನ್ನು ಕಂಡರೆ ಹೆಚ್ಚು ತೆರಿಗೆ ಕಟ್ಟುವರೆಂಬ ಅಂಜಿಕೆಯಿಂದಲೂ, ಮನೆಗಳಿಗೆ ದೊಡ್ಡ ದೊಡ್ಡ ಕಿಡಿಕಿಗಳನ್ನೂ ಬಾಗಿಲುಗಳನ್ನೂ ಹಚ್ಚಿದರೆ ಕಳ್ಳರ ಕಾಟ ತಪ್ಪಿಸುವದು ಕಷ್ಟವಾಗುವದೆಂಬ ಭಯದಿಂದಲೂ,

ಶ್ರೀಮಂತರು ಸಹ ತೀರ ಕನಿಷ್ಟ ತರದ ಮನೆಗಳನ್ನು ಕಟ್ಟುತ್ತಿದ್ದರು. ಮತ್ತು ಮನೆಗಳಿಗೆ ಸಣ್ಣ ಬಾಗಿಲುಗಳನ್ನು ಹಚ್ಚುತ್ತಿದ್ದರು. ಮನೆಯೊಳಗೆ ಹವೆ, ಬೆಳಕು ಬರಲಿಕ್ಕೆ ಮಾರ್ಗವೆಂದರೆ ಈ ಸಣ್ಣ ಬಾಗಿಲುಗಳೇ. ಕೆಲಕೆಲವು ಕಡೆಯಲ್ಲಿ ಮಾಳಿಗೆಯಲ್ಲಿ ಬೆಳಕಂಡಿಗಳನ್ನು ಬಿಡುತ್ತಿದ್ದರು. ಹಿಂದೂ ಜನರ ಮನೆಗಳಿಗೂ ಮುಸಲ್ಮಾನರ ಮನೆಗಳಿಗೂ ವೊಂದು ದೊಡ್ಡ ಭೇದವುಂಟು. ಹಿಂದೂ ಜನರ ಮನೆಗಳು ವೊಳಭಾಗಗಳೆಲ್ಲ ವೊಮ್ಮೆಲಿ ಕಾಣುವಂತೆ ಕಟ್ಟಿರುತ್ತವೆ. ಆದರೆ ಮುಸಲ್ಮಾನರ ಮನೆಗಳು ಹಾಗೆ ಕಟ್ಟಿರುವದಿಲ್ಲ. ಹೊರಗಿಂದ ಅವರ ಮನೆಯ ವೊಳಭಾಗಗಳು ಕಾಣುವಂತೆ ಇರುವದಿಲ್ಲ. ಇತ್ತಲಾಗಿ ಇಪ್ಪತ್ತು ಮೂವತ್ತು ವರುಷಗಳಿಂದ ಮನೆಗಳು ಸುಧಾರಿಸುತ್ತ ನಡೆದವೆ.

## ಬ್ರಾಹ್ಮಣರು.

| | ಗಂಡಸರು. | ಹೆಂಗಸರು. | ಒಟ್ಟು. |
|---|---|---|---|
| ದೇಶಸ್ಥರು | ೩೬೦೮೨ | ೩೩೮೭೬ | ೬೯೯೫೮ |
| ಗೋಳಕರು | ೭೭ | ೭೪ | ೧೫೧ |
| ಕನೋಜರು | ೨೩೬ | ೧೭೮ | ೪೧೪ |
| ಕಾಣ್ಣವರು | ೯೧೭ | ೮೪೪ | ೧೭೬೧ |
| ಕರಾಡಸ್ಥರು | ೭೯೬ | ೭೧೭ | ೧೫೧೩ |
| ಕೊಂಕಣಸ್ಥರು | ೧೯೧೬ | ೧೮೨೪ | ೩೭೪೦ |
| ಶೇಣವೀರು (ಸಾರಸ್ವತರು) | ೫೭೪೯ | ೫೫೦೩ | ೧೧೨೫೨ |
| ಸರ್ವರಿಯರು | ೮ | ೭ | ೧೫ |
| ಸವ್ವಾಶೇರು | ೩೬ | ೪೮ | ೮೪ |
| ಶ್ರೀ ವೈಷ್ಣವರು (ರಾಮಾನುಜರು) | ೧೦ | ೩ | ೧೩ |
| ತೆಲಗರು | ೧೮೦ | ೧೫೫ | ೩೩೫ |
| ತಿರಗುಳರು | ೧೮೯ | ೧೯೧ | ೩೮೦ |
| ಗುಜರಾಥೀ ಬ್ರಾಹ್ಮಣರು | ೫೦ | ೬ | ೫೬ |
| ಮಾರವಾಡೀ ಬ್ರಾಹ್ಮಣರು | ೧೫ | ೧೦ | ೨೫ |
| ವಿದುರರು | ೪೧ | ೪೬ | ೮೭ |
| ಹೈಗರು | ೨೦೬೪೯ | ೧೯೦೬೧ | ೩೯೭೧೦ |
| ಕೋಟ ಬ್ರಾಹ್ಮಣರು | ೧೮೫ | ೨೦೪ | ೩೮೯ |
| ಜೋಯಿಸರು | ೧೧೧ | ೧೦೨ | ೨೧೩ |
| ಸಕಳಾಪುರಿಗಳು | ೫೫ | ೪೧ | ೯೬ |
| ಆಂಧ್ರರು | ೫ | ೪ | ೯ |
| ಶಿವಳ್ಳಿಗಳು | ೩ | ೨ | ೫ |
| ಸಾಷ್ಟೀಕರರು | ೪೫೬೩ | ೪೨೯೫ | ೮೮೫೮ |
| ಕುಶಸ್ಥಳಿಗಳು | ೫೯೫ | ೫೩೬ | ೧೧೩೧ |
| ಬಾರದೇಶಕರರು | ೩೪೦ | ೩೧೭ | ೬೨೪ |
| ಕುಡಾಳ ದೇಶಕರರು | ೧೬೭ | ೧೫೭ | ೩೨೪ |
| ಪೇಡನೇಕರರು | ೪೫ | ೫೭ | ೧೦೨ |
| ಅಂತು ಒಟ್ಟು.... | ೭೩೦೨೦ | ೬೮೨೫೮ | ೧೪೧೨೭೮ |

ದೇಶಸ್ಥರು.—ಇವರು ಮುಂಬಯಿ ಕರ್ನಾಟಕದಲ್ಲಿ ಬಹುತರ ಯೆಲ್ಲ ಕಡೆಯಲ್ಲಿಯೂ ಇದ್ದಾರೆ. ಇದರೊಳಗೆ ಮಾಧ್ವರು ಅಂದರೆ ವೈಷ್ಣವರು ಅಥವಾ ದ್ವೈತರು ಮತ್ತು ಸ್ಮಾರ್ತರು ಅಥವಾ ಅದ್ವೈತರು, ಯೆಂಬ ಯೆರಡು ಮುಖ್ಯ ವರ್ಗಗಳುಂಟು. ಇವುಗಳಲ್ಲದೆ ಋಗ್ವೇದಿಗಳೂ, ಆಪಸ್ತಂಬರೂ, ಯಜುರ್ವೇದಿಗಳೂ, ಕಣ್ವವರೂ, ಮಾಧ್ಯಂದಿನರೂ, ಯೆಂಬ ಹಲವು ಭೇದಗಳುಂಟು.

**ದೇಶಸ್ಥರು.**

ವೈಷ್ಣವರು.—ದೊಡ್ಡ ದೊಡ್ಡ ಊರುಗಳಲ್ಲಿ ಇವರು ಇರುವದೇ ಬಹಳ. ಇವರು ಹಳ್ಳಿಪಳ್ಳಿಗಳಲ್ಲಿ ಬಹುತರ ಇರುವದಿಲ್ಲ. ಕ್ರಿಸ್ತೀ ಶಕದ ಹನ್ನೆರಡನೇ ಶತಮಾನದಲ್ಲಿ ಮಧ್ವಾಚಾರ್ಯನೆಂಬ ಘನವಿದ್ವಾಂಸನಾದ ವಿರಕ್ತ ಪುರಷನು ವೈಷ್ಣವ ಮತವನ್ನು ಬಲಗೊಳಿಸಿದನು. ಅದರಿಂದ ಅದಕ್ಕೆ ಮಾಧ್ವ ಮತವೆಂದು ಹೆಸರು ಬಂದದೆ. ಮಧ್ವಾಚಾರ್ಯನಿಗೆ ಸರ್ವಜ್ಞಾಚಾರ್ಯನೆಂತಲೂ ಅನ್ನುವರು. ಇವನು ಮಂಗಳೂರು ಪ್ರಾಂತದಲ್ಲಿ ಉಡಪಿ, ಮಧ್ಯತಲ, ಸುಬ್ರಹ್ಮಣ್ಯ, ಯೆಂಬ ಮೂರು ಸ್ಥಳಗಳಲ್ಲಿ ಮೂರು ಮಠಗಳನ್ನು ಸ್ಥಾಪಿಸಿ ವೊಂದೊಂದು ಮಠಕ್ಕೆ ವೊಬ್ಬೊಬ್ಬ ಸ್ವಾಮಿಯನ್ನು ನೇಮಿಸಿದನು. ಮಧ್ಯತಲ ಸುಬ್ರಮಣ್ಯಗಳ ಸ್ವಾಮಿಗಳು ಬೇರೆ ಬೇರೆ ಶಾಖೆಗಳ ಮುಖ್ಯಸ್ಥರಾದರು. ಇವರ ಶಿಷ್ಯರು ಸ್ವಲ್ಪ ಜನರು ಇದ್ದು ಯೆಲ್ಲರೂ ಬಹುತರವಾಗಿ ಮಂಗಳೂರು ಶೀಮೆಯಲ್ಲಿದ್ದಾರೆ. ಸರ್ವಜ್ಞಾಚಾರ್ಯರು ಉಡಪಿಯ ಸಂಸ್ಥಾನದಲ್ಲಿ ಯೆಂಟು ಮಠಗಳನ್ನು ಸ್ಥಾಪಿಸಿ ವೊಂದೊಂದಕ್ಕೆ ವೊಬ್ಬೊಬ್ಬ ಸ್ವಾಮಿಯನ್ನು ನೇಮಿಸಿದರು. ಮತ್ತು ಈ ಯೆಂಟು ಮಂದಿ ಸ್ವಾಮಿಗಳಲ್ಲಿ ಪ್ರತಿ ಒಬ್ಬನು ಯೆರಡೆರಡು ವರುಷಗಳ ವರೆಗೆ ಉಡಪಿಯ ಶ್ರೀ ಕೃಷ್ಣ ದೇವರ ಪೂಜೆಯನ್ನು ಮಾಡಬೇಕೆಂದು ಗೊತ್ತು ಮಾಡಿದರು. ಈ ಪೂಜೆಯ ಸರತಿಯು ಪ್ರತಿ ವೊಬ್ಬ ಸ್ವಾಮಿಗೆ ಯೆರಡೆರಡು ವರುಷಕ್ಕೊಮ್ಮೆ ಮಕರ ಸಂಕ್ರಾಂತಿಗೆ ಬರುತ್ತದೆ. ಆ ಸಮಯದಲ್ಲಿ ಉಡಪಿಯಲ್ಲಿ ದೊಡ್ಡ ಜಾತ್ರೆ ನೆರೆದು ಲಕ್ಷಾವಧಿ ಜನರು ದೇವರಿಗೆ ಕಾಣಿಕೆಗಳನ್ನು ಕೊಡುತ್ತಾರೆ.

**ವೈಷ್ಣವರು.**

ಸರ್ವಜ್ಞಾಚಾರ್ಯರು ತಮ್ಮ ಪ್ರೀತಿಯ ನಾಲ್ಕು ಜನ ಶಿಷ್ಯರೊಡನೆ ಹಿಂದುಸ್ಥಾನದಲ್ಲೆಲ್ಲ ಪ್ರವಾಸ ಮಾಡಿ ವೈಷ್ಣವರ ಗುರುಗಳೆಂದು ಹೆಸರು ಪಡೆದರು. ಇವರು ರಚಿಸಿದ ವೇದಾಂತ ಗ್ರಂಥಗಳಲ್ಲಿ ೩೭ ಸಂಸ್ಕೃತ ಗ್ರಂಥಗಳು ಈಗಲೂ ಉಂಟು. ಇವುಗಳಲ್ಲಿ ಕೆಲವು ವೈಷ್ಣವರ ಆಚರಣೆಯ ನಿಯಮಗಳನ್ನು ಹೇಳುತ್ತವೆ. ಈ ಗುರುಗಳು ೮೦ ವರುಷಗಳ ವರೆಗೆ ವೊಳ್ಳೇ ಯಶಸ್ಸಿನಿಂದ ಪಟ್ಟವನ್ನು ಆಳಿ ಆ ಕಾಲಕ್ಕೆ ಯೆದುರಿಗೆ ಬಂದ ಯಾವತ್ತು ಪರ ಮತಸ್ಥರ ಗುರುಗಳನ್ನು ವಾದದಲ್ಲಿ ಸೋಲಿಸಿದರು. ಬಳಿಕ ತಮ್ಮ ನಾಲ್ಕು ಜನ ಶಿಷ್ಯರಲ್ಲಿ ಮುಖ್ಯ ಶಿಷ್ಯನಾದ ಪದ್ಮನಾಭ ತೀರ್ಥನಿಗೆ ಪಟ್ಟ ಗಟ್ಟಿ ತಾವು ಹಿಮಾಲಯದಲ್ಲಿರುವ ಬದರಿಕಾಶ್ರಮಕ್ಕೆ ಶಕೆ ೧೧೯೯ ಮಾಘ ಶುದ್ಧ ನವಮಿಯ ದಿವಸ ತೆರಳಿದರು. ಈ ಹೊತ್ತಿಗೆ ಅವರು ಅಲ್ಲಿಯೇ ಇರುವರೆಂತಲೂ ಅವರು ಹನುಮಂತ ದೇವರ ಅವತಾರವೆಂತಲೂ, ವೈಷ್ಣವರ ನಂಬಿಕೆಯುಂಟು. ಮಧ್ವಾಚಾರ್ಯರಿಂದ ಇದು ವರೆಗೆ

ವೊಟ್ಟಿಗೆ ೩೫ ಜನ ಸ್ವಾಮಿಗಳು ಆಳಿದರು. ಅವರೊಳಗೆ ಮಧ್ವಾಚಾರ್ಯರ ತರುವಾಯ ದಲ್ಲಿ ಧೊಂಡೋರಘುನಾಥ, ಸತ್ಯಬೋಧರು, ಜಯರಾಯಾಚಾರ್ಯರು, ಯೆಂಬ ಮೂರು ಮಂದಿ ಮಹಾ ಸತ್ಪುರುಷರಾದರೆಂದು ವೈಷ್ಣವರೊಳಗೆ ಪ್ರಸಿದ್ಧಿಯುಂಟು.

ಈ ಪ್ರಾಂತದ ಮಾಧ್ವ ಬ್ರಾಹ್ಮಣರು ವೊಳ್ಳೇ ವರ್ಚಸ್ಸುಳ್ಳವರಾಗಿದ್ದಾರೆ. ಇವರು ಆಡುವ ಭಾಷೆ ಕನ್ನಡವಿದ್ದು, ಅದರೊಳಗೆ ಮರಾಠಿ ಭಾಷೆಯ ಶಬ್ದಗಳು ಕೆಲವು ಮಟ್ಟಿಗೆ ಕೂಡಿರುತ್ತವೆ. ಹಲಕೆಲವು ಮನೆತನದವರು ಮನೆಯಲ್ಲಿ ಕನ್ನಡದಂತೆ ಮರಾಠೀ ಭಾಷೆಯನ್ನಾದರೂ ಆಡುವರು. ಇವರೊಳಗೆ ಅಡ್ಡ ಹೆಸರುಗಳಿಲ್ಲ. ಎಷ್ಟೋ ಮನೆತನಗಳಿಗೆ ಆಯಾ ಮನೆತನದ ಪೂರ್ವಜರು ಇದ್ದ ಊರುಗಳಿಂದ ಇಲ್ಲವೇ ಅವರ ಗುಣಗಳಿಂದ ಅಡ್ಡ ಹೆಸರುಗಳು ಬಂದಿರುತ್ತವೆ. ಉಡಪಿಯ ಕೃಷ್ಣ ದೇವರು, ಮದ್ರಾಸ ಇಲಾಖೆಯೊಳಗಿನ ಅಹೋಬಲದ ನರಸಿಂದೇವರು, ನಿಜಾಮನ ಶೀಮೆಯೊಳಗಿನ ಕೊಪ್ರದ ನರಸಿಂಹ ದೇವರು, ಶ್ರೀರಂಗ ಪಟ್ಟಣದ ರಂಗನಾಥ, ತಿರುಪತಿಯ ವೆಂಕಟರಮಣ, ಪಂಢರಿಪುರದ ವಿಠೋಬಾ, ಮುಂತಾದ ದೇವತೆಗಳನ್ನು ಇವರು ಆರಾಧಿಸುವರು.

ಮಾಧ್ವರು ಚಲುವರೂ, ಕಸುವುಳ್ಳವರೂ, ವೊಳ್ಳೇ ಮೈ ಕಟ್ಟುಳ್ಳವರೂ, ಇರುತ್ತಾರೆ. ಪಶ್ಚಿಮ ಕಡೆಯ ಮಾಧ್ವರು ಕೆಂಪಗಿರುತ್ತಾರೆ; ಪೂರ್ವದ ಕಡೆಯವರು ಕಪ್ಪು. ಇವರು ಶ್ರೀ ಮುದ್ರೆಗಳನ್ನೂ ಉದ್ದ ನಾಮಗಳನ್ನೂ ಧರಿಸುವರು. ಆದರೆ ಸ್ಮಾರ್ತರು ವಿಭೂತಿಯನ್ನೂ ಹಣೆಯ ಮೇಲೆ ಅಡ್ಡ ಗಂಧವನ್ನೂ ಹಚ್ಚಿ ಕೊಳ್ಳುವರು. ಮಾಧ್ವ ವೈದಿಕರು ಊಟ ಮಾಡುವದರಲ್ಲಿ ಹೆಸರಾದವರು. ಇವರು ಸಾಧಾರಣವಾಗಿ ದಿನಕ್ಕೆ ವೊಮ್ಮೇ ಉಣ್ಣುತ್ತಾರೆ. ಗೃಹಸ್ಥರು ಮಿತಾಹಾರಿಗಳಾಗಿದ್ದು ಯೆರಡು ಸಾರಿ ಉಣ್ಣುವರು. ಇವರೊಳಗೆ ಶುಭಾಶುಭ ಕಾರ್ಯಗಳಲ್ಲಿ ಮಾಡುವ ಪಕ್ವಾನ್ನಗಳು ಬಹುತರ ವೊಂದೇ ಇರುತ್ತವೆ. ಶುಭ ಕಾರ್ಯಗಳಲ್ಲಿ ತುಕ್ಕಡಿಗಳನ್ನು ಮಾತ್ರ ಮಾಡ ಕೂಡದು. ಇವರು ಊಟಕ್ಕೆ ಬಡಿಸುವಾಗ ಮೊದಲು ಉಪ್ಪು ಕಡೆಗೆ ತುಪ್ಪ ಬಡಿಸುತ್ತಾರೆ. ಆದರೆ ಅಶುಭ ಕಾರ್ಯಗಳಲ್ಲಿ ಮೊದಲು ತುಪ್ಪವನ್ನು ಬಡಿಸುವರು, ಉಪ್ಪು ಬಡಿಸುವದೇ ಇಲ್ಲ; ಉದ್ದು ಮಾಂಸದ ಪ್ರತಿನಿಧಿಯೆಂದು ತಿಳಿಯುವರು. ಶುಭ ಕಾರ್ಯಗಳಲ್ಲಿ ಉದ್ದಿನ ಪದಾರ್ಥಗಳು ಇಲ್ಲದಿದ್ದರೂ ಸಾಗುವದು. ಆದರೆ ಅಶುಭ ಕಾರ್ಯಗಳಲ್ಲಿ ಅವು ಆವಶ್ಯವಾಗಿ ಇರಬೇಕು. ಅಡಿಗೆಯು ಸಿದ್ಧವಾದ ಬಳಿಕ ಅದನ್ನು ಮೊದಲು ವಿಷ್ಣುವಿಗೆ ನೈವೇದ್ಯ ತೋರಿಸಿ ಆ ಮೇಲೆ ಇತರ ದೇವತೆಗಳಿಗೆ ತೋರಿಸುವರು. ವೈದಿಕರು ಊಟಕ್ಕೆ ಕೂತ ಬಳಿಕ ಗೃಹಸ್ಥರು ಕೂಡ್ರುತಕ್ಕ ಸಾಂಪ್ರದಾಯ ಉಂಟು. ಯಾವನೊಬ್ಬ ಗೃಹಸ್ಥನು ಮೊದಲೇ ಊಟಕ್ಕೆ ಕೂತರೆ ವೈದಿಕರೆಲ್ಲರು ತಮಗೆ ಅಪಮಾನವಾಯಿತೆಂದು ತಿಳಿದು ವೊಮ್ಮೇಲೆ ಹೊರಟು ಹೋಗುತ್ತಾರೆ. ಮಾಧ್ವ ಬ್ರಾಹ್ಮಣರಲ್ಲಿ ವಿಷ್ಣುವಿಗೆ ನೈವೇದ್ಯ ತೋರಿಸುವ ಹಕ್ಕಿನ ಬಗ್ಯೆ ವ್ಯಾಜ್ಯ ನಡಿಯುವದು ಬಹಳ. ಶುಭ ಕಾರ್ಯಗಳಲ್ಲಿ ಊಟದ ಕಾಲಕ್ಕೆ ಬಾಳೇ ಯೆಲೆಗಳನ್ನು ಉಪಯೋಗಿಸಿದರೆ ಅವುಗಳ ತುದಿಗಳನ್ನು ಊಟಕ್ಕೆ ಕೂಡ್ರುವವನ ಯೆದುರಿಗಾಗಲಿ ಯೆಡಕ್ಕಾಗಲಿ ಮಾಡುವರು. ಆದರೆ ಅಶುಭ ಕಾರ್ಯ

ಗಳಲ್ಲಿ ಯೆಲೆಯ ತುದಿಯನ್ನು ಬಲಕ್ಕೆ ಮಾಡುವರು. ಇವರು ರಾತ್ರಿಯಲ್ಲಿ ಬ್ರಾಹ್ಮಣ ಭೋಜನ ಮಾಡಿಸಿದರೆ ಹೆಚ್ಚು ಪುಣ್ಯ ಬರುತ್ತದೆಂದು ತಿಳಿಯುತ್ತಾರೆ.

ಮನೆಯೊಳಗೆ ಗಂಡನಾಗಲಿ ಮಕ್ಕಳಾಗಲಿ ಮತ್ತ್ಯಾರಾದರು ಸಮೀಪದ ಆಪ್ತರಾಗಲಿ ಬಹಳ ಬೇನೆ ಬಿದ್ದಾಗ ಇಲ್ಲವೆ ಅವರಿಗೆ ಯಾವದೊಂದು ದೊಡ್ಡ ಕಂಟಕ ಬಂದಾಗ ಈ ಸಂಕಟದೊಳಗಿಂದ ಪಾರು ಮಾಡಿದರೆ ನಾನು ನನ್ನ ತಲೆಯ ಮೇಲಿನ ಕೂದಲುಗಳನ್ನು ಅರ್ಪಿಸುವೆನು, ಯೆಂದು ಹೆಂಗಸರು ತಿರುಪತಿಯ ವೆಂಕಟರಮಣ ದೇವರಿಗೆ ಒಮ್ಮೊಮ್ಮೆ ಹರಿಕೆ ಹೊರುವದುಂಟು. ಮಾಧ್ವ ಬ್ರಾಹ್ಮಣರು ಬಹುತರವಾಗಿ ಚತುರರೂ, ಘಟ್ಟಿಗರೂ, ನಿರ್ಮಲರೂ, ಬುದ್ಧಿವಂತರೂ, ಆದರಾತಿಥ್ಯ ಮಾಡುವವರೂ ಇರುತ್ತಾರೆ.

ಗೃಹಸ್ಥರಿಗೆ ಶಾಸ್ತ್ರ ಪುರಾಣಗಳನ್ನು ಹೇಳುವದು, ವೈದಿಕ ಕಾರ್ಯಗಳಲ್ಲಿ ನೆರವಾಗುವದು, ಯಾಚನೆಯನ್ನು ಬೇಡುವದು, ಇವೇ ವೈದಿಕರ ಮುಖ್ಯವಾದ ಹೋರೆಗಳು. ಮೇಲು ಪ್ರತಿಯ ಗೃಹಸ್ಥರು ಸರಕಾರದಲ್ಲಿ ಚಿಕ್ಕ ದೊಡ್ಡ ಅಧಿಕಾರಗಳನ್ನು ಸಂಪಾದಿಸಿದ್ದಾರೆ. ಕೆಲವರು ವ್ಯಾಪಾರ, ಕೆಲವರು ಚಿನಿವಾರಿಕೆ, ಕೆಲವರು ಬಡ್ಡಿ ವ್ಯವಹಾರ, ಮಾಡುವರು. ಕೆಲವರು ಭೂಮಿಗಳನ್ನು ಮಾಡಿಸುತ್ತಾರೆ. ಹುಡುಗರು ಹದಿನೈದು ಹದಿನಾರು ವರುಷದವರಾದ ಮೇಲೆ ಯಾವದೊಂದು ಉದ್ಯೋಗದಲ್ಲಿ ಶೇರುತ್ತಾರೆ. ಕೆಲವರು ಸಾಲೆಗಳಿಗೂ ಹೆಚ್ಚಿನ ವಿದ್ಯಾಲಯಗಳಿಗೂ ಹೋಗಿ ದೊಡ್ಡ ದೊಡ್ಡ ಪದವಿಗಳನ್ನು ಪಡೆಯುತ್ತಾರೆ. ಹೆಂಗಸರು ಮನೆ ಕೆಲಸವನ್ನು ಮಾಡುವರು. ಗಂಡಸರ ಕೆಲಸಕ್ಕೆ ನೆರವಾಗುವದಿಲ್ಲ.

ಮುಂಬಯಿ ಕರ್ನಾಟಕದ ಹಿಂದೂ ಜನರಲ್ಲಿ ವೈಷ್ಣವರು ಮುಖ್ಯಸ್ಥರಾಗಿದ್ದಾರೆ. ಸ್ಮಾರ್ತ, ಕೊಂಕಣಸ್ಥ, ಕರಾಡೆ, ಕಾಣ್ವ, ತೆಲಗು, ದ್ರವಿಡ ಬ್ರಾಹ್ಮಣರೊಡನೆ ವೈಷ್ಣವರಲ್ಲಿ ಕೆಲವರು ವೊಮ್ಮೊಮ್ಮೆ ಅನ್ನ ವ್ಯವಹಾರವನ್ನು ಮಾಡುವದುಂಟು. ಜೈನರೂ, ಲಿಂಗವಂತರೂ, ಇವರ ಸಂಗಡ ಅನ್ನ ವ್ಯವಹಾರ ಮಾಡುವದಿಲ್ಲ. ಮಧ್ಯಮ ಸ್ಥಿತಿಯ ಗೃಹಸ್ಥರ ಕುಟುಂಬದಲ್ಲಿ ತಿಂಗಳಿಗೆ ವೊಬ್ಬೊಬ್ಬರಿಗೆ ಸಾಧಾರಣವಾಗಿ ನಾಲ್ಕು ರೂಪಾಯಿಯಂತೆ ಖರ್ಚು ಹಿಡಿಯುತ್ತದೆ. ವೈದಿಕರು ಗೃಹಸ್ಥರ ಮನೆಗೆ ಮೇಲಿಂದ ಮೇಲೆ ಊಟಕ್ಕೆ ಹೋಗುವದರಿಂದ ಅವರಿಗೆ ಗೃಹಸ್ಥರ ಅರ್ಧಕ್ಕಿಂತಲು ಕಡಿಮೆ ಖರ್ಚು ಬೀಳುತ್ತದೆ. ವೈಷ್ಣವರೊಳಗೆ ಹಬ್ಬಗಳು ಬಹಳ. ಮುಖ್ಯವಾದ ಹಬ್ಬಗಳು ಯಾವವೆಂದರೆ—೧. ಯುಗಾದಿ (ಚೈತ್ರ ಶುದ್ಧ ಪ್ರತಿಪದೆ). ೨. ರಾಮ ನವಮಿ (ಚೈತ್ರ ಶುದ್ಧ ನವಮಿ) ಈ ದಿವಸ ರಾಮನು ಹುಟ್ಟಿದ್ದರಿಂದ ವೈಷ್ಣವರು ಹಬ್ಬ ಮಾಡುವರು, ಸ್ಮಾರ್ತರು ಉಪೋಷಣ ಮಾಡುವರು. ೩. ಅಕ್ಷತೃತೀಯೆ (ವೈಶಾಖ ಶುದ್ಧ ತೃತೀಯೆ). ೪. ನಾಗರ ಪಂಚಮಿ (ಶ್ರಾವಣ ಶುದ್ಧ ಪಂಚಮಿ). ೫. ಶ್ರಾವಣಿ (ಶ್ರಾವಣ ಶುದ್ಧ ಪೌರ್ಣಿಮೆ). ೬. ಗೋಕುಲಾಷ್ಟಮಿ (ಶ್ರಾವಣ ವದ್ಯ ಅಷ್ಟಮಿ) ಈ ದಿವಸ ವೈಷ್ಣವರು ಉಪವಾಸ ಮಾಡುತ್ತಾರೆ. ೭. ಗಣೇಶ ಚತುರ್ಥಿ (ಭಾದ್ರಪ ಶುದ್ಧ ಚತುರ್ಥಿ). ೮. ನವರಾತ್ರಿ, ದಸರೆ (ಆಶ್ವಿನ ಶುದ್ಧ ಪ್ರತಿಪದದಿಂದ ದಶಮಿಯ ವರೆಗೆ). ೯. ದೀಪಾವಳಿ (ಆಶ್ವಿನ ಬಹುಳ ಚತುರ್ದಶಿಯಿಂದ

ಕಾರ್ತಿಕ ಶುದ್ಧ ತೃತೀಯೆಯ ವರೆಗೆ). ೧೦. ಮಕರ ಸಂಕ್ರಾಂತಿ (ಪೌಶ ಮಾಸದಲ್ಲಿ). ೧೧. ಮಹಾ ಶಿವರಾತ್ರಿ (ಮಾಘ ವದ್ಯ ಚತುರ್ದಶಿ) ಈ ದಿವಸ ಸ್ಮಾರ್ತರು ಉಪವಾಸ ಮಾಡುತ್ತಾರೆ, ವೈಷ್ಣವರು ಹಬ್ಬ ಮಾಡುವರು. ೧೨. ಹೋಳೀ ಹುಣ್ಣಿವೆ (ಫಾಲ್ಗುಣ ಶುದ್ಧ ಪೌರ್ಣಿಮೆ). ಈ ಹಬ್ಬದ ದಿವಸಗಳಲ್ಲಿ ಚೈತ್ರ ಶುದ್ಧ ಪ್ರತಿಪದೆ, ಆಶ್ವಿನ ಶುದ್ಧ ದಶಮಿ, ಕಾರ್ತಿಕ ಶುದ್ಧ ಪ್ರತಿಪದೆ, ಇವು ಮೂರು ಪೂರ್ಣ ಮುಹೂರ್ತಗಳೆಂತಲೂ, ವೈಶಾಖ ಶುದ್ಧ ತೃತೀಯೆ ಅರ್ಧ ಮುಹೂರ್ತವೆಂತಲೂ, ಒಟ್ಟಿಗೆ ವರುಷದೊಳಗೆ ಮೂರುವರೆ ಉತ್ಕೃಷ್ಟವಾದ ಮುಹೂರ್ತಗಳುಂಟೆಂದು ತಿಳಿಯುವರು. ಪ್ರತಿ ತಿಂಗಳಲ್ಲಿ ಯೆರಡು ಏಕಾದಶಿಗಳು, ಶ್ರಾವಣ ವದ್ಯ ೮ ಅಷ್ಟಮಿ, ಇವು ವೈಷ್ಣವರ ಪೂರ್ಣ ಉಪವಾಸದ ದಿವಸಗಳು; ಪೂರ್ವ ರಾತ್ರಿಯಲ್ಲಿ ಸಹ ಭೋಜನವಿಲ್ಲ. ಹಾಗೂ ಹುಣ್ಣಿವೆ, ಅಮಾವಾಸ್ಯ, ಸಂಕ್ರಾಂತಿಗಳು, ಹಿರಿಯರ ಶ್ರಾದ್ಧದ ದಿವಸಗಳು, ತಮ್ಮ ಸ್ವಾಮಿಯ ಮೃತ್ಯು ತಿಥಿ, ಪಕ್ಷಮಾಸ, ಇವೆಲ್ಲ ಅರ್ಧ ಉಪವಾಸದ ದಿವಸಗಳಾಗಿವೆ. ಅರ್ಧ ಉಪವಾಸದ ದಿವಸ ಒಪ್ಪತ್ತೇ ಊಟ ಮಾಡುವರು. ವೈಷ್ಣವರು ಮಾಡುವ ಅನೇಕ ವ್ರತಗಳಲ್ಲಿ ಏಕಾನ್ನ, ಮೌನವ್ರತ, ಚಾಂದ್ರಾಯಣವ್ರತ, ಭೀಷ್ಮಪಂಚಕ, ಇವೇ ಮುಖ್ಯವಾದವು.

ವೈಷ್ಣವರು ಯಾತ್ರೆಗೆ ಹೋಗುವ ಮುಖ್ಯ ಸ್ಥಳಗಳು ಯಾವವೆಂದರೆ—೧. ಮದ್ರಾಸ ಇಲಾಖೆಯೊಳಗಿನವು:—ಉತ್ತರ ಆರ್ಕಾಟದಲ್ಲಿರುವ ತಿರುಪತಿಯ ವೆಂಕಟರಮಣ, ಕರ್ನೂಲದಲ್ಲಿರುವ ಅಹೋಬಲ ನರಸಿಂಹ ದೇವರು, ಮಂಗಳೂರ ಜಿಲ್ಲೆಯಲ್ಲಿರುವ ಉಡಪಿಯ ಕೃಷ್ಣ ದೇವರು, ಕಂಚಿಯ ವರದ ರಾಜ, ಕಲಸ್ತ್ರಿಯ ಕಲ್ಹಸ್ತೇಶ್ವರ, ರಾಮೇಶ್ವರದ ಶ್ರೀರಾಮ, ಶ್ರೀರಂಗ ಪಟ್ಟಣದ ರಂಗನಾಥ.

೨. ನಿಜಾಮನ ರಾಜ್ಯದಲ್ಲಿ—ತುಳಜಾಪುರದ ಅಂಬಾಭವಾನಿ.

೩. ಮುಂಬಯಿ ಇಲಾಖೆಯಲ್ಲಿ—ಉತ್ತರ ಕಾನಡಾ ಜಿಲ್ಲೆಯಲ್ಲಿ ಗೋಕರ್ಣದ ಮಹಾಬಳೇಶ್ವರ, ಕೊಲ್ಲಾಪುರದ ಮಹಾಲಕ್ಷ್ಮಿ, ಪಂಢರಿಪುರದ ವಿಠೋಬಾ, ಬಾದಾಮಿಯ ಬನಶಂಕರಿ, ನಾಸಿಕದ ಶ್ರೀರಾಮ, ದ್ವಾರಕೆಯ ಕೃಷ್ಣ.

೪. ಬಂಗಾಲ ಇಲಾಖೆಯಲ್ಲಿ—ಕಾಶಿಯಲ್ಲಿ ವಿಶ್ವೇಶ್ವರ, ಬಿಂದುಮಾಧವ, ಗೋಕುಲದ ಕೃಷ್ಣ, ವೃಂದಾವನ ಕೃಷ್ಣ, ಬದರಿಯ ನಾರಾಯಣ, ಗಯೆಯ ವಿಷ್ಣುಪಾದ.

ಭೂತ, ಪಿಶಾಚ, ದೇವರು ಹೇಳೋಣ, ಮಂತ್ರ, ತಂತ್ರ, ಇವುಗಳ ಮೇಲೆ ವೈಷ್ಣವರ ನಂಬಿಗೆಯುಂಟು. ಇವರಲ್ಲಿ ಒಟ್ಟಿಗೆ ನಾಲ್ವತ್ತು ಸಂಸ್ಕಾರಗಳುಂಟು. ಅವುಗಳಲ್ಲಿ ಅವಶ್ಯವಾಗಿ ಆಗ ತಕ್ಕಂಥ ಹದಿನಾರು ಸಂಸ್ಕಾರಗಳು ಯಾವವೆಂದರೆ:—ಗರ್ಭಾಧಾನ, ಪುಂಸವನ, ಅನವಲೋಭನ, ಸೀಮಂತೋನ್ನಯನ, ವಿಷ್ಣುಬಲಿ, ಜಾತಕರ್ಮ, ನಾಮಕರಣ, ಸೂರ್ಯಾವಲೋಕನ, ನಿಷ್ಕ್ರಮಣ, ಉಪದೇಶನ, ಅನ್ನಪ್ರಾಶನ, ಚೌಲ, ಉಪನಯನ, ಸಮಾವರ್ತನ, ವಿವಾಹ, ಸ್ವರ್ಗಾರೋಹಣ. ಗರ್ಭಾಧಾನ ಸಂಸ್ಕಾರವನ್ನು ಹೆಣ್ಣು ಮಕ್ಕಳು ಮೈನೆರೆದ ಮೇಲೆ ಮಾಡುವರು. ಮುಂದೆ ಹೆಂಗಸು ಬಸುರಾದ ಬಳಿಕ ಪುಂಸವನ, ಯೇಳನೇ ತಿಂಗಳಲ್ಲಿ ಅನವಲೋಭನ, ಆರನೇ ಅಥವಾ ಯೆಂಟನೇ ತಿಂಗ

ಳಲ್ಲಿ ಸೀಮಂತೋನ್ನಯನ, ಯೆಂಟನೇ ತಿಂಗಳಲ್ಲಿ ವಿಷ್ಣುಬಲಿ, ಮಾಡುವ ರೂಢಿ ಉಂಟು. ಜನನವಾದ ಬಳಿಕ ಜಾತಕರ್ಮ, ಹಡಿದ ಹನ್ನೆರಡನೇ ದಿವಸ ನಾಮಕರಣ, ಮೂರನೇ ತಿಂಗಳಲ್ಲಿ ಸೂರ್ಯಾವಲೋಕನ ಮತ್ತು ನಿಷ್ಕ್ರಮಣ, ಐದನೇ ತಿಂಗಳಲ್ಲಿ ಉಪವೇಶನ, ಐದನೇ ಅಥವಾ ಆರನೇ ತಿಂಗಳಲ್ಲಿ ಅನ್ನಪ್ರಾಶನ, ನಾಲ್ಕನೇ ಅಥವಾ ಐದನೇ ವರುಷದಲ್ಲಿ ಚೌಲ, ಯೇಳನೇ ಅಥವಾ ಯೆಂಟನೇ ವರುಷದಲ್ಲಿ ಉಪನಯನ, ಮುಂದೆ ಕೆಲವು ಕಾಲದಲ್ಲಿ ಸಮಾವರ್ತನ, ಅನಂತರ ಇಪ್ಪತ್ತು ವರುಷದ ವೊಳಗಾಗಿ ವಿವಾಹ ಮಾಡುವರು. ಹೆಣ್ಣು ಮಕ್ಕಳ ಲಗ್ನವನ್ನು ನಾಲ್ಕರಿಂದ ಹನ್ನೊಂದು ವರುಷದವರಾಗುವ ವರೆಗೆ ಮಾಡುವರು.

ದೇಶಸ್ಥರು ಹೆಣವನ್ನು ಸುಡುತ್ತಾರೆ. ಆದರೆ ಸನ್ಯಾಸಾಶ್ರಮ ತಕ್ಕೊಂಡವರ ಹೆಣಗಳನ್ನೂ ಮೂರು ವರುಷದೊಳಗಿನ ಕೂಸುಗಳನ್ನೂ ಹುಗಿಯುವರು. ಜನನ ಮರಣಗಳಾದ ಮೇಲೆ ಹತ್ತು ದಿವಸದ ವರೆಗೆ ವೃದ್ಧಿ ಸೂತಕವನ್ನು ಹಿಡಿಯುವರು. ಈ ಅಶುಚಿ ದಿವಸಗಳಲ್ಲಿ ಮುಖ್ಯವಾಗಿ ಸೂತಕದಲ್ಲಿ ದೇವರ ಪೂಜೆ ಅರ್ಚೆಗಳನ್ನು ಮಾಡುವದಿಲ್ಲ. ದೇವರ ಕೋಣೆಯಲ್ಲಿ ಹೋಗುವದಿಲ್ಲ. ಮನೆಯೊಳಗಿನ ಸಾಮಾನವನ್ನಾಗಲಿ ಸ್ನೇಹಿತರನ್ನಾಗಲಿ, ಮುಟ್ಟುವದಿಲ್ಲ. ಅಕ್ಷತಿ ಹಚ್ಚಿಕೊಳ್ಳದೆ ಬರೇ ಗೋಪಿಚಂದನ, ಅಂಗಾರಗಳನ್ನು ಧರಿಸುವರು; ಹೆಂಗಸರು ಅರಿಷಿಣ, ಕುಂಕುಮಗಳನ್ನು ಹಚ್ಚಿಕೊಳ್ಳುವದಿಲ್ಲ. ವೃಷ್ಟಾನ್ನ ಭೋಜನವನ್ನು ಮಾಡುವದಿಲ್ಲ. ಓಣಿಯೊಳಗೆ ಯಾರಾದರೂ ಸತ್ತರೆ ಹೆಣವನ್ನು ವೊಯ್ಯುವ ವರೆಗೆ ಓಣಿಯೊಳಗಿನವರೊಬ್ಬರೂ ಊಟ ಮಾಡುವದಿಲ್ಲ. ದೇಶಸ್ಥರೊಳಗೆ ಹೆಣ ಹೊರುವದಕ್ಕೆ ಬಹಳ ಹಿಂದೆ ಮುಂದೆ ನೋಡುತ್ತಾರೆ. ಬಡವರ ಮನೆಯಲ್ಲಿ ಯಾರಾದರು ಸತ್ತರೆ ಹಣ ಕೊಟ್ಟ ಹೊರ್ತು ಹೆಣ ವೊಯ್ಯುವದಿಲ್ಲ. ಹತ್ತು ಹನ್ನೆರಡು ವರುಷಗಳಿಂದಿತ್ತ ವೈದಿಕರು ತಮ್ಮ ಮಕ್ಕಳನ್ನು ಸರಕಾರೀ ಶಾಲೆಗಳಿಗೆ ಕಳಿಸಹತ್ತಿದ್ದಾರೆ. ವೈದಿಕರಲ್ಲಿ ನೂರಕ್ಕೆ ವೊಬ್ಬರು ತಮ್ಮ ವೈದಿಕ ವೃತ್ತಿಯನ್ನು ಬಿಟ್ಟು, ಸರಕಾರೀ ಇಲ್ಲವೆ ಖಾಸಗಿ ನೌಕರೀ, ವಕೀಲಿ, ಬಡ್ಡಿ ವ್ಯವಹಾರ, ಮುಂತಾದ ಉದ್ಯೋಗಗಳನ್ನು ಮಾಡುವರು. ಕೆಲವರು ತಮ್ಮ ಹೆಣ್ಣು ಮಕ್ಕಳನ್ನು ವೊಂಬತ್ತು ಹತ್ತು ವರುಷದವರಾಗುವ ವರೆಗೆ ಶಾಲೆಗೆ ಕಳಿಸುವರು. ವೈಷ್ಣವರು ವೊಳ್ಳೇ ಸೌಖ್ಯದಿಂದಿದ್ದಾರೆಂದು ಹೇಳ ಬಹುದು.

**ಅದ್ವೈತರು.**

ಸ್ಮಾರ್ತರು ಅಥವಾ ಅದ್ವೈತರು.—ಇವರು ಮುಂಬಯಿ ಕರ್ನಾಟಕದಲ್ಲಿಯೆಲ್ಲ ಕಡೆಯಲ್ಲಿ ಇದ್ದಾರೆ. ಇವರ ಭಾಷೆ ಕನ್ನಡ. ಇವರ ಕುಲದೇವತೆಗಳು ಶಿವ, ಪಾರ್ವತಿ. ಇವರು ಸಾಧಾರಣವಾಗಿ ಚಲುವರು. ಮನೆಮಾರುಗಳನ್ನು ಸ್ವಚ್ಛ ಇಡುತ್ತಾರೆ. ಯಜ್ಞ ಯಾಗಾದಿಗಳ ಹೊರ್ತು ಮದ್ಯ ಮಾಂಸಾದಿಗಳನ್ನು ಮುಟ್ಟುವದಿಲ್ಲ. ಇವರು ಪ್ರಮಾಣಿಕರೂ ವೊಳಿತಾಗಿ ದುಡಿಯುವವರೂ, ಸಿಟ್ಟಿನವರೂ, ಆದರಾತಿಥ್ಯ ಮಾಡುವವರೂ, ಇರುತ್ತಾರೆ. ಗೃಹಸ್ಥರು ಸರಕಾರೀ ನೌಕರಿ, ಚಿನಿವಾರಿಕಿ, ವ್ಯಾಪಾರಗಳನ್ನು ಮಾಡುವರು. ವೈದಿಕರು ಯಾಚನಾ

ವೃತ್ತಿಯಿಂದ ಜೀವಿಸುವರು. ಐದು ಮಂದಿಯ ಕುಟುಂಬವಿದ್ದರೆ ಊಟಕ್ಕೆ ತಿಂಗಳಿಗೆ ಸುಮಾರು ಹದಿನೈದು ರೂಪಾಯಿ, ವಸ್ತ್ರಕ್ಕೆ ವರ್ಷಕ್ಕೆ ಸುಮಾರು ಇಪ್ಪತ್ತೈದು ರೂಪಾಯಿ, ಖರ್ಚು ಹಿಡಿಯುತ್ತದೆ. ಶಂಕರಾಚಾರ್ಯರು ಇವರ ಧರ್ಮಗುರುಗಳು. ಅದ್ವೈತರು ಮೇಲೆ ಬರೆದ ವೈಷ್ಣವರ ಹಬ್ಬಗಳನ್ನೂ ಉಪವಾಸಗಳನ್ನೂ ಮಾಡುವದಲ್ಲದೆ ಶ್ರಾವಣ ಸೋಮವಾರ, ಸಂಕಷ್ಟಿ, ಶನಿಪ್ರದೋಷ, ಮುಂತಾದವುಗಳನ್ನು ಮಾಡುವರು.

ದೇಶಸ್ಥರೊಳಗೆ ಋಗ್ವೇದಿಗಳ ಸಂಖ್ಯೆಯು ಬಹಳ ಇದ್ದು, ಅವರು ಆಪಸ್ತಂಬರ ಕೂಡ ಲಗ್ನ ವ್ಯವಹಾರವನ್ನು ಮಾಡುತ್ತಾರೆ. ಇವೆರಡೂ ಶಾಖೆಯವರು ಸೋದರಳಿಯಂದಿರಿಗೆ ತಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡಿ ಕೊಟ್ಟರೆ ಪುಣ್ಯ ಬರುತ್ತದೆಂದು ತಿಳಿಯುವರು. ಒಮ್ಮೊಮ್ಮೆ ಸೋದರ ಮಾವನು ತನ್ನ ಸೋದರ ಸೊಸಿಯನ್ನು ಲಗ್ನವಾಗುತ್ತಾನೆ. ಶ್ವೇತ ಮತ್ತು ಕೃಷ್ಣ ಯಜುರ್ವೇದಿಗಳಲ್ಲಿ ಪರಸ್ಪರ ಲಗ್ನ ಸಂಬಂಧವಾಗುವದಿಲ್ಲ. ಮಾಧ್ಯಂದಿನರು ದೇಶಸ್ಥರೊಳಗೆ ಕಡಿಮೇ ಪ್ರತಿಯ ಬ್ರಾಹ್ಮಣರು. ಋಗ್ವೇದಿಗಳಂತೆ ಇವರು ತಮ್ಮ ಹೆಣ್ಣು ಮಕ್ಕಳನ್ನು ಸೋದರಳಿಯಂದಿರಿಗೆ ಲಗ್ನ ಮಾಡಿ ಕೊಡುವದಿಲ್ಲ. ದೇಶಸ್ಥರು ಮಿತವ್ಯಯಿಗಳಲ್ಲ. ಮನಸಿಗೆ ಬಂದಂತೆ ಖರ್ಚು ಮಾಡುವರು.

ವಿಜಾಪುರ ಜಿಲ್ಲೆಯಲ್ಲಿ ಕೆಲವು ದೇಶಸ್ಥ ಬ್ರಾಹ್ಮಣರು ಒಕ್ಕಲತನ ಮಾಡುವದುಂಟು. ಇವರು ದಿನಕ್ಕೆ ಮೂರು ಸಾರಿ ಉಣ್ಣುವರು. ಬೆಳಿಗ್ಗೆ ಯೆದ್ದು ಸ್ನಾನ ಮಾಡಿದ ಮೇಲೆ ತಂಗಳ ಊಟ ಉಂಡು ಹೊಲಕ್ಕೆ ಹೋಗುವರು.

ಕಾರವಾಡದ ದೇಶಸ್ಥರು ಲಗ್ನದ ಮೂರನೇ ದಿವಸ ಮೆರವಣಿಗೆಯಲ್ಲಿ ಮದಿಮಗನನ್ನು ಕುದುರೆಯ ಮೇಲೆ ಕುಳ್ಳಿರಿಸಿ, ಮದಿಮಗಳನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸುವರು. ಅವರಿಬ್ಬರಿಗೆ ಮುಸಲ್ಮಾನರಂತೆ ಪೋಷಾಕು ಹಾಕಿ ಮದಿಮಗನ ಕೈಯಲ್ಲಿ ಕತ್ತಿಢಾಲುಗಳನ್ನು ಕೊಡುವರು. ಮದಿಮಗಳಿಗೆ ಬುರಕಿ ಹಾಕುವರು. ಇವರಲ್ಲಿ ಯಾರಾದರೂ ಸತ್ತರೆ, ಹೆಣದ ಮೋರೆಗೆ ಶೇಡೀ ಮಣ್ಣು ಹಚ್ಚುವರು.

**ಗೋಳಕರು (ಗೋವರ್ಧನರು).**—ಇವರು ಬೆಳಗಾವಿ, ಧಾರವಾಡ, ಕಾರವಾರ ಜಿಲ್ಲೆಗಳಲ್ಲಿ ಸ್ವಲ್ಪ ಜನರು ಇದ್ದಾರೆ. ಇವರೊಳಗೆ ಕುಂಡಗೋಳಕರೆಂತಲೂ, ರಂಡಗೋಳಿಕರೆಂತಲೂ, ಯೆರಡು ಭೇದಗಳುಂಟು. ಗಂಡುಳ್ಳ ಬ್ರಾಹ್ಮಣ ಸ್ತ್ರೀಯರ ವ್ಯಭಿಚಾರಕ್ಕೆ ಹುಟ್ಟಿದವರು ಕುಂಡಗೋಳಿಕರು. ಬ್ರಾಹ್ಮಣ ವಿಧವೆಯ ಸಂತತಿಗೆ ರಂಡಗೋಳಕರೆಂಬ ಹೆಸರು. ಇವರು ಇತರ ಬ್ರಾಹ್ಮಣರಲ್ಲಿ ಉಣ್ಣುತ್ತಾರೆ. ಆದರೆ ಬ್ರಾಹ್ಮಣರು ಇವರ ಕೂಡ ಅನ್ನ ವ್ಯವಹಾರ ಲಗ್ನ ಸಂಬಂಧಗಳನ್ನು ಮಾಡುವದಿಲ್ಲ. ಗೋಳಕರ ಮೈಬಣ್ಣ ಬಹಳ ಕೆಂಪೂ ಅಲ್ಲ, ಬಹಳ ಕಪ್ಪೂ ಅಲ್ಲ, ಮಧ್ಯಮ ತರದ್ದಿರುತ್ತವೆ. ಇವರು ಮರಾಠಿ ಇಲ್ಲವೆ ಕನ್ನಡ ಭಾಷೆಯನ್ನು ಆಡುವರು. ಇವರು ವಿಷ್ಣು, ಮಹಾದೇವ, ಗಣಪತಿ, ದುರ್ಗೆ, ಮುಂತಾದ ದೇವತೆಗಳನ್ನು ಆರಾಧಿಸುವರು. ಇವರ ನಡೆನುಡಿ, ಆಚಾರ ವಿಚಾರಗಳೆಲ್ಲ ಬ್ರಾಹ್ಮಣರಂತೆ. ಚಿನಿವಾರಿಕೆ, ವ್ಯಾಪಾರ, ಜ್ಯೋತಿಷ ಹೇಳೋಣ, ಒಕ್ಕಲತನ, ತೋಟ ಮಾಡೋಣ,

**ಗೋಳಕರು.**

ಇವೇ ಇವರ ಮುಖ್ಯ ಉದ್ಯೋಗಗಳು. ಇವರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವರು. ಇವರ ಸ್ಥಿತಿಯು ಸಾಧಾರಣವಾಗಿ ನೆಟ್ಟಗಧೆ.

**ಕನೋಜರು.** **ಕನೋೀಜರು.**— ಇವರು ಉತ್ತರ ಹಿಂದುಸ್ತಾನದಲ್ಲಿರುವ ಕನೋಜ ಪಟ್ಟಣದವರಾದ ಕಾರಣ ಇವರಿಗೆ ಈ ಹೆಸರು ಬಂದಪೆ. ಈ ಕನೋಜರು ಮನೆಯಲ್ಲಿ ಬ್ರೀಜ ಅಥವಾ ಹಿಂದೀ ಭಾಷೆಯನ್ನಾಡುವರು. ದೇಶಸ್ಥರಿಗಿಂತ ಹೆಚ್ಚು ಗಟ್ಟಿಗರೂ ಪುಷ್ಟರೂ ಇರುತ್ತಾರೆ. ಇವರು ಸಾಧಾರಣವಾಗಿ ನಿರ್ಮಲರೂ, ಶ್ರಮ ಮಾಡುವವರೂ, ಗರ್ವಿಷ್ಠರೂ, ಹಟಮಾರಿಗಳೂ, ಅತ್ಯಾಶೆಯುಳ್ಳವರೂ, ಇರುತ್ತಾರೆಂದು ಹೇಳಬಹುದು. ಶಿಪಾಯಿಯ ಕೆಲಸವೇ ಇವರ ಮುಖ್ಯ ಉದ್ಯೋಗವು. ಹಲವರು ಒಕ್ಕಲತನ ವ್ಯಾಪಾರಗಳನ್ನಾದರೂ ಮಾಡುವರು. ಇವರಲ್ಲಿ ಗಂಡು ಮಕ್ಕಳ ಲಗ್ನ ಹದಿನೈದರಿಂದ ಮೂವತ್ತು ವರ್ಷದ ವರೆಗೆ, ಹೆಣ್ಣು ಮಕ್ಕಳ ಲಗ್ನ ಐದರಿಂದ ಹದಿನೈದು ವರ್ಷದ ವರೆಗೆ ಆಗುವದುಂಟು. ಇವರಲ್ಲಿ ಭಂಗೀ ಶೇದುವ ಚಟಯು ಬಹಳ. ಇವರಿಗೆ ಬಹುತರ ಮನೆಮಾರುಗಳು ಇರುವದಿಲ್ಲ. ಎಷ್ಟೋ ಜನರು ಭಿಕ್ಷೆ ಬೇಡಿ ಜೀವಿಸುವರು.

**ಕಾಣ್ವರು.** **ಕಾಣ್ವವರು.**— ಇವರು ಯಜುರ್ವೇದಿ ಅಥವಾ ಪ್ರಥಮ ಶಾಖೆಯ ಬ್ರಾಹ್ಮಣರು. ಕಾಣ್ವವರೆಂಬ ಬಿಳೀ ಯಜುರ್ವೇದದ ಶಾಖೆಗೆ ಹೊಂದಿದವರಾದ ಕಾರಣ ಇವರಿಗೆ ಈ ಹೆಸರು ಬಂದದೆ. ಇವರು ಶುದ್ಧ ಕನ್ನಡ ಭಾಷೆಯನ್ನು ಆಡುವರು. ಮೈಲಾರವು ಇವರ ಕುಲ ದೇವತೆ. ವೈಷ್ಣವರು, ಸ್ಮಾರ್ತರು, ಯೆಂಬ ಯೆರಡು ಭೇದಗಳು ಉಂಟು. ಇವರ ಮೈಬಣ್ಣ ಕಪ್ಪು; ಮೈಕಟ್ಟು ಬಲವುಳ್ಳದ್ದು; ಇವರು ಚಲೋ ಹಂಚಿನ ಮನೆಗಳಲ್ಲಿ ಇರುವರು. ಅಕ್ಕಿ ಬೇಳೆ ಮುಂತಾದ ಧಾನ್ಯಗಳೂ, ತರತರದ ಶಾಕಗಳೂ ಇವರ ಆಹಾರವು. ಮದ್ಯ ಮಾಂಸಗಳನ್ನು ಮುಟ್ಟುವದಿಲ್ಲ. ಇವರು ಶಿಟ್ಟಿನವರೂ, ಆದರಾತಿಥ್ಯ ಮಾಡುವವರೂ ಇರುತ್ತಾರೆ. ಆದರೆ ಇವರಿಗೆ ಶ್ರಮ ಮಾಡುವದೂ ನಿರ್ಮಲರಾಗಿರುವದೂ ಬೇಡ. ಇವರು ಒಕ್ಕಲತನ, ವೈದಿಕಿ, ಅರಳಿ ಧಾನ್ಯಗಳ ವ್ಯಾಪಾರ, ಚಿನಿವಾರಿಕಿ, ಮುಂತಾದ ಉದ್ಯೋಗಗಳನ್ನು ಮಾಡುವರು. ಹಲವರು ಸರಕಾರದಲ್ಲಿ ಶಾನಭೋಗಕಿ, ಕಾರಕೂನಿ, ಮುಂತಾದ ಕೆಲಸಗಳನ್ನು ಮಾಡುವರು. ಕೆಲವರು ಅಡಿಗೇ ಮಾಡಿ, ಕೆಲವರು ನೀರು ಹೊತ್ತು, ಉಪಜೀವಿಸುವರು. ಕಾಣ್ವವರು ಬಹುತರವಾಗಿ ಧರ್ಮನಿಷ್ಠರಿರುತ್ತಾರೆ. ಮನೆಯಲ್ಲಿ ಶಿವ, ವಿಷ್ಣು, ಗಣಪತಿ, ಶಕ್ತಿ, ಮುಂತಾದ ದೇವತೆಗಳನ್ನು ಆರಾಧಿಸುವರು. ಇವರ ಹಬ್ಬಗಳೂ ನಡಾವಳಿಗಳೂ ದೇಶಸ್ಥ ಬ್ರಾಹ್ಮಣರಂತೆ. ಆದರೆ ಕಾಣ್ವವರು ಕಡಿಮೇ ಪ್ರತಿಯ ಬ್ರಾಹ್ಮಣರೆಂದು ತಿಳಿದು ದೇಶಸ್ಥರು ಅವರ ಕೂಡ ಅನ್ನ ವ್ಯವಹಾರ ಲಗ್ನ ಸಂಬಂಧಗಳನ್ನು ಮಾಡುವದಿಲ್ಲ. ತೆಲಗರೂ ಕೊಂಕಣಸ್ಥರೂ ಕಾಣ್ವವರೊಡನೆ ಅನ್ನ ವ್ಯವಹಾರ ಮಾಡುವದುಂಟು. ಕಾಣ್ವವರಿಗೆ ಧರ್ಮ ಗುರುವಿಲ್ಲ. ಇವರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವರು. ಧಾರವಾಡ ವಿಜಾಪುರ ಜಿಲ್ಲೆಗಳಲ್ಲಿ ಮಾತ್ರ ಕಂಡು ಬರುತ್ತಾರೆ.

ಇವರಿಗೆ ಹೊಲಸು ಉದ್ಯೋಗಗಳು ಶೇರುವದಿಲ್ಲ. ಇವರು ಸಾಧಾರಣವಾಗಿ ಸ್ಥಿತಿವಂತ ರಾಗಿದ್ದಾರೆಂದು ಹೇಳ ಬಹುದು.

**ಕರಾಡಸ್ಥರು.**

ಕರಾಡಸ್ಥರು.—ಸಾತಾರಾ ಜಿಲ್ಲೆಯೊಳಗಿನ ಕರಾಡವೆಂಬ ಗ್ರಾಮವೇ ಇವರ ಮೂಲಸ್ಥಾನವು. ಇವರ ಉಡಿಕೆ ತೊಡಿಗೆ ಆಚಾರ ವಿಚಾರಗಳೆಲ್ಲ ಬಹುತರವಾಗಿ ಚಿತಪಾವನರಂತೆ. ಸಾತಾರೆ ಕೊಲ್ಲಾಪುರ ಪ್ರಾಂತಗಳಲ್ಲಿ ಕರಾಡಸ್ಥರು ವೈಷ್ಣವ ದೇಶಸ್ಥರೊಡನೆ ಅನ್ನ ವ್ಯವಹಾರ ಲಗ್ನ ಸಂಬಂಧಗಳನ್ನು ಮಾಡುತ್ತಾರೆ. ಆದರೆ ಮುಂಬಯಿ ಕರ್ನಾಟಕದಲ್ಲಿ ದೇಶಸ್ಥರು ಕರಾಡಸ್ಥರೊಡನೆ ಲಗ್ನ ವ್ಯವಹಾರ ಮಾಡುವದಿಲ್ಲ. ಇವರೊಳಗೆ ಬುನಾದಿಯಲ್ಲಿ ದಸರೆ ದೀಪಾವಳಿ ಮುಂತಾದ ದೊಡ್ಡ ದೊಡ್ಡ ಹಬ್ಬಗಳಲ್ಲಿ ತಮ್ಮ ಆರ್ಯದುರ್ಗೆ, ಮ್ಹಾಳಸಾ, ವಿಜಯ ದುರ್ಗೆ, ಯೆಂಬ ಕುಲದೇವತೆಗಳಿಗೆ ಮನುಷ್ಯ ಬಲಿಯನ್ನು ಕೊಟ್ಟು ಆ ದೇವತೆಗಳನ್ನು ಪೊಲಿಸಿ ಕೊಳ್ಳುವ ಪದ್ಧತಿ ಇತ್ತು. ಈಗ ಆ ಪದ್ಧತಿಯು ಕಾಣದಿದ್ದರೂ ಹಲಕೆಲವರು ಕರಾಡಸ್ಥರ ಮನೆಯಲ್ಲಿ ಊಟ ಮಾಡುವದಕ್ಕೆ ಹಿಂದೆ ಮುಂದೆ ನೋಡುತ್ತಾರೆ. ಶಂಕರಾಚಾರ್ಯನು ಇವರ ಧರ್ಮಗುರುವು. ಇವರಿಗೆ ಹೊಸ ಉದ್ಯೋಗಗಳು ಶೇರುತ್ತಿರುವದರಿಂದ ಇವರ ಸ್ಥಿತಿಯು ಸುಧಾರಿಸುತ್ತಾ ನಡೆದದೆ. ಇವರು ಮರಾಠಿ ಭಾಷೆಯನ್ನು ಆಡುವರು. ಆದರೆ ಕಾನಡಾ ಜಿಲ್ಲೆಯೊಳಗಿನ ಕರಾಡಸ್ಥರು ಕನ್ನಡ ಭಾಷೆಯನ್ನಾಡುವರು. ವೈದಿಕಿ, ವ್ಯಾಪಾರ, ಕಾರಕೂನಿ, ಹೊಲ ಮಾಡಿಸೋಣ, ಇವೇ ಇವರ ಮುಖ್ಯ ಉದ್ಯೋಗಗಳು. ಇವರು ಬುದ್ಧಿವಂತರೂ ಮಿತವ್ಯಯಿಗಳೂ, ಕೆಲಸಕ್ಕೆ ಮೆಚ್ಚಿದವರೂ, ಸುಂದರರೂ, ನಿರ್ಮಲರೂ, ಇರುತ್ತಾರೆ. ಇವರು ಒಂದೆರಡು ಅಂತಸ್ತಿನ ಮನೆಗಳಲ್ಲಿ ವಾಸಿಸುವರು. ಇವರು ಸ್ಮಾರ್ತರಿದ್ದು ಶಿವಶಕ್ತಿಗಳನ್ನು ಪೂಜಿಸುವರು. ವೈದಿಕರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವದು ಅಪರೂಪ. ಅವರಿಗೆ ಮನೆಗಳಲ್ಲಿಯೇ ವೈದಿಕಿ ಅಭ್ಯಾಸ ಮಾಡಿಸುವರು.

**ಕೊಂಕಣಸ್ಥರು.**

ಕೊಂಕಣಸ್ಥರು (ಚಿತಪಾವನರು).—ಕೊಂಕಣವೇ ಇವರ ಮೂಲಸ್ಥಾನವು. ಇವರು ಮುಂಬಯಿ ಕರ್ನಾಟಕದಲ್ಲಿ ಬಹುತರ ಯೆಲ್ಲ ಕಡೆಯಲ್ಲಿ ಇದ್ದಾರೆ. ಸನ್ ೧೭೫೩ ಇಸವಿಯಲ್ಲಿ ಬಾಳಾಜೀ ಬಾಜೀರಾವ ಉರ್ಫ ನಾನಾ ಸಾಹೇಬ ಪೇಶ್ವನು ಈ ಕರ್ನಾಟಕ ಪ್ರಾಂತವನ್ನು ಜಯಿಸಿದಂದಿನಿಂದ ಕೊಂಕಣಸ್ಥರು ಇಲ್ಲಿಗೆ ಬಂದಂತೆ ತೋರುತ್ತದೆ. ಇವರ ಮೈಬಣ್ಣ ಕೆಂಪು, ಮೈಕಟ್ಟು ತೆಳ್ಳಗೆ, ಮುಖಚರ್ಯವು ಉಲ್ಲಾಸವುಳ್ಳದ್ದು ಇರುತ್ತದೆ. ಇವರ ಕಣ್ಣುಗಳು ಬಹುತರ ಬೆಕ್ಕಿನ ಕಣ್ಣಿನಂತೆ ಇದ್ದು ದೊಡ್ಡವಿರುತ್ತವೆ. ಇವರು ಮರಾಠಿ ಭಾಷೆಯನ್ನಾಡುವರು. ಹಂಚಿನ ಇಲ್ಲವೆ ಮಾಳಿಗೆಯ ಮನೆಗಳಲ್ಲಿ ವಾಸ ಮಾಡುವರು. ಅಕ್ಕಿ, ಬೇಳೆ, ಮಜ್ಜಿಗೆ, ಕಾಯಿಪಲ್ಯಗಳು, ಇವರ ಆಹಾರವು; ಪಳದೆಯ ಮೇಲೆ ಇವರ ಪ್ರೀತಿಯು ಬಹಳ ಇರುವದರಿಂದ ಇವರಿಗೆ "ಪಳದೆಗಳು" ಯೆಂಬ ಚೇಷ್ಟೆಯ ಉಪನಾಮವು ಬಂದದೆ. ಇವರು ದೊಡ್ಡ ದೊಡ್ಡ ಯಜ್ಞ ಯಾಗಾದಿಗಳಲ್ಲಿ ಅಲ್ಲದೆ ಬೇರೆ ಸಮಯದಲ್ಲಿ ಮಾಂಸ

ವನ್ನು ಮುಟ್ಟುವದಿಲ್ಲ. ಇವರು ಮಿತವ್ಯಯಿಗಳೂ, ಕಪಟಿಗಳೂ, ಬುದ್ಧಿವಂತರೂ, ತಮ್ಮ ಕೆಲಸವನ್ನು ಸಾಧಿಸಿ ಕೊಳ್ಳುವದಿದ್ದರೆ ಪೊಳ್ಳೇ ನಮ್ರತೆಯಿಂದ ನಡೆಯುವವರೂ, ಅಧಿಕಾರ ಬಂದಾಗ ಗರ್ವದಿಂದಲೂ ಅಹಂಕಾರದಿಂದಲೂ ಮೆರೆಯುವವರೂ ಇರುತ್ತಾರೆ. ಇವರು ಬಹುತರವಾಗಿ ಸರಕಾರೀ ಉದ್ಯೋಗಗಳನ್ನು ಮಾಡಿ ಜೀವಿಸುವರು. ಆದರೆ ಕೆಲವರು ಪೋಲ ಮಾಡಿಸೋಣ, ವ್ಯಾಪಾರ, ಬಡ್ಡಿ ವ್ಯವಹಾರ ಮುಂತಾದ ಉದ್ಯೋಗ ಗಳನ್ನು ಮಾಡುವರು. ಇವರು ಪ್ರೌಢ್ರಿ ಊರ್ಜಿತ ಸ್ಥಿತಿಯಲ್ಲಿ ಬಹುಶಃ ಧರ್ಮನಿಷ್ಠರಿ ರುತ್ತಾರೆ. ಇವರಲ್ಲಿ ಸ್ವಜಾತಿಯ ಅಭಿಮಾನವು ಅತಿಶಯ. ಶಂಕರಾಚಾರ್ಯನು ಇವರ ಧರ್ಮ ಗುರುವು. ಇವರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವರು. ಇವರಿಗೆ ಹೊಸ ಉದ್ಯೋಗಗಳು ಶೇರುತ್ತ ನಡೆದದರಿಂದ ಇವರ ಸ್ಥಿತಿಯು ಪೊಳಿತಾಗಿ ಸುಧಾರಿಸುತ್ತಾ ನಡೆದದೆ.

**ಶೇಣವೇರು.** ಶೇಣವೇರು.—ಇವರು ಮುಂಬಯಿ ಕರ್ನಾಟಕದಲ್ಲಿ ಬಹುತರ ಯೆಲ್ಲ ಕಡೆ ಯಲ್ಲಿ ಇದ್ದಾರೆ. ಪೂರ್ವ ಕಾಲದಲ್ಲಿ ಪರಶುರಾಮನು ಬಂಗಾಲದೊಳಗಿನ ತ್ರಿಹೋತ್ರ (ತಿರಹೂತ)ನೆಂಬ ಪಟ್ಟಣದಿಂದ ತೊಂಬತ್ತಾರು ಬ್ರಾಹ್ಮಣರ ಕುಟುಂಬಗಳನ್ನು ತಂದು ಕೊಂಕಣದಲ್ಲಿರುವ ಗೋವೇ ಪ್ರಾಂ ತದಲ್ಲಿ ಇಟ್ಟನೆಂದು ಕಥೆಯುಂಟು. ಅಲ್ಲಿಂದ ಹದಿನಾರನೇ ಶತಮಾನದ ಆರಂಭದಲ್ಲಿ ಪೋರ್ತುಗೀಸರು ಗೋವೇ ಪ್ರಾಂತವನ್ನು ತಕ್ಕೊಂಡ ಕಾಲಕ್ಕೆ ಶೇಣವೇರು ಈ ಕರ್ನಾ ಟಕ ಪ್ರಾಂತವನ್ನು ಶೇರಿದರಂತೆ. ಆ ತೊಂಬತ್ತಾರು (ಷಣ್ಣವತಿ) ಬ್ರಾಹ್ಮಣರ ವಂಶದ ವರೇ ಈಗಿರುವ ಶೇಣವೀ ಜನರೆಂದು ಹೇಳುತ್ತಾರೆ. ಆ ಪಟ್ಟಣದಲ್ಲಿ ಬ್ರಾಹ್ಮಣರಿಗೆ ಶರ್ಮರೆಂಬ ಸಾಮಾನ್ಯಾಭಿಧಾನವಿತ್ತಂತೆ. ಈಗ ಗೋವೆಯಲ್ಲಿರುವ ಮೆಂಗೇಶ, ಶಾಂತಾ ದುರ್ಗೆ, ದೇವತೆಗಳ ಪ್ರತಿಮೆಗಳು ಆ ಶರ್ಮರು ತಮ್ಮ ಸಂಗಡ ಬಂಗಾಲದಿಂದ ತಂದ ಪ್ರತಿಮೆಗಳೇ ಯೆಂದು ತಿಳಿದು ಶೇಣವೀ ಜನರು ಅವುಗಳನ್ನು ಬಹಳ ಮನ್ನಿಸುತ್ತಾರೆ. ಶೇಣವೇರಿಗೆ ಪೂರ್ವದಲ್ಲಿ ಸಾರಸ್ವತರೆಂಬ ಹೆಸರು ಇತ್ತು. ಈ ಹೆಸರಿನ ಜನರು ಈಗ ಶೇಣವೀ ಜನರಿಂದ ಬೇರೆಯಾಗಿದ್ದಾರೆ. ಕೆಲವರು ಶೇಣವೀ ಜನರ ಮೂಲ ಪೀಠಿಕೆ ಯನ್ನು ಬೇರೆ ಬಗೆಯಾಗಿ ವಿವರಿಸುವರು. ಇವರ ಮುಖ ಲಕ್ಷಣ ಸುಂದರ, ನಿಲುವಿಕೆ ಮಧ್ಯಮ, ಮೈಬಣ್ಣ ಕೆಂಪು, ಮೈಕಟ್ಟು ಸ್ವಲ್ಪ ಸ್ಥೂಲ. ಹೆಂಗಸರು ಗಂಡಸರಿಗಿಂತ ಸ್ವಲ್ಪ ಗಿಡ್ಡಿಯರು. ಇವರ ಮುಖಲಕ್ಷಣ ಕಣ್ಣು, ಕೂದಲು, ಮೈಕಟ್ಟು, ಹಾವಭಾವಗ ಳೆಲ್ಲ ವರ್ಣಿಸ ತಕ್ಕಂಥವಿರುತ್ತವೆ. ಇವರಿಗೆ ತಲೆಯಲ್ಲಿ ಹೂಗಳನ್ನು ಮುಡಿಯುವ ಪ್ರೀ ತಿಯು ಬಹಳ. ಶೇಣವೀ ಜನರ ಮುಖ್ಯ ಆಹಾರವು ಅಕ್ಕಿ, ಜೋಳ, ಬೇಳೆ, ವಿಧವಿಧದ ಶಾಕಗಳು. ಕೆಲವರು ಮೀನುಗಳನ್ನು ತಿನ್ನುವರು. ಇವರಲ್ಲಿ ಬೆಳಿಗ್ಗೆ ಗಂಜಿ ಕುಡಿ ಯುವ ಪದ್ಧತಿಯುಂಟು. ಇವರಲ್ಲಿ "ಬಾಬ" ಯೆಂಬ ಸನ್ಮಾನಾರ್ಥಕ ಪದವಿಯು ಯೆ ಷ್ಟೋ ಜನರಿಗೆ ಇರುತ್ತದೆ. ಇದು ಬಂಗಾಲದೊಳಗಿನ "ಬಾಬು" ಎಂಬ ಪದವಿಯ ರೂಪಾಂತರವಿರುತ್ತದೆಂದು ಕೆಲವರ ಮತವುಂಟು. ಗೋವೇ ಪ್ರಾಂತದಲ್ಲಿರುವ ಮಂಗೇಶ,

ಶಾಂತಾದುರ್ಗೆ, ನಾಗೇಶ, ಮ್ಹಾಳಸಾ, ಮುಂತಾದವುಗಳೇ ಇವರ ಕುಲದೇವತೆಗಳು. ಕೆಲವರು ಶಕ್ತಿಯ ಆರಾಧನೆಯನ್ನು ಮಾಡುವರು. ಶೇಣವೇರು ಶಕ್ತಿಗೆ ಮದ್ಯ ಮಾಂಸಗಳ ನೈವೇದ್ಯ ತೋರಿಸಿ, ಮುಚ್ಚು ಮರ್ಯಾದೆಯಿಂದ ಅವುಗಳನ್ನು ಭಕ್ಷಿಸುವರು. ಇವರೊಳಗೆ ತಮ್ಮ ಕುಲದೇವತೆಗೆ ಕನಿಷ್ಟ ಪಕ್ಷಕ್ಕೆ ನಾಲ್ಕೈದು ವರ್ಷಕ್ಕೊಮ್ಮೆಯಾದರೂ ಹೋಗಬೇಕೆಂದು ನಿರ್ಬಂಧವಿರುತ್ತದೆ. ಇವರಲ್ಲಿ ಹತ್ತು ಗೋತ್ರಗಳೂ, ಇತರ ಬ್ರಾಹ್ಮಣರಂತೆ ಹದಿನಾರು ಸಂಸ್ಕಾರಗಳೂ, ಉಂಟು. ಶೇಣವೆರೊಳಗೆ ಸ್ಮಾರ್ತ ವೈಷ್ಣವರೆಂಬ ಯೆರಡು ಭೇದಗಳುಂಟು. ಸ್ಮಾರ್ತರ ಸ್ವಾಮಿಯು ಕಾನಡಾ ಜಿಲ್ಲೆಯಲ್ಲಿರುವ ಸೋನ್ವಾಡ ಯೆಂಬ ಗ್ರಾಮದಲ್ಲಿರುತ್ತಾನೆ. ವೈಷ್ಣವರ ಸ್ವಾಮಿಯು ಗೋವೆಯಲ್ಲಿರುವನು. ಸ್ಮಾರ್ಥರಿಗೂ ವೈಷ್ಣವರಿಗೂ ಅನ್ನ ವ್ಯವಹಾರ ಲಗ್ನ ಸಂಬಂಧಗಳಾಗುತ್ತವೆ. ಶೇಣವೀ ಜನರು ಮನೆಯಲ್ಲಿ ಕೊಂಕಣಿ ಭಾಷೆಯನ್ನಾಡುವರು. ಆದರೆ ಕಾಗದ ಪತ್ರ ಲೆಕ್ಕ ಮುಂತಾದವುಗಳನ್ನು ಮರಾಠಿ ಭಾಷೆಯಲ್ಲಿ ಬರೆಯುವರು. ಇವರ ಮನೆಗಳು ವೊಂದು ಇಲ್ಲವೆ ಯೆರಡು ಅಂತಸ್ತಿನವಿದ್ದು ಭದ್ರವಾಗಿ ಕಟ್ಟಲ್ಪಟ್ಟಿರುತ್ತದೆ. ಇವರಲ್ಲಿ ಕೆಲವರು ಸರಕಾರೀ ನೌಕರರೂ, ಕೆಲವರು ನಾಡ ಗೌಡರೂ ಶಾನಭೋಗರೂ, ಕೆಲವರು ವಕೀಲರೂ, ವ್ಯಾಪಾರಸ್ಥರೂ, ಮಕ್ತೆದಾರರೂ, ಕೆಲವರು ವತನದಾರರೂ, ಚಿನಿವಾರರೂ, ಕೆಲವರು ಸಾವಕಾರರೂ, ಇರುತ್ತಾರೆ. ಶೇಣವೀ ಜನರು ಡಾಂಭಿಕರಾಗಿಯೂ, ಸ್ವಲ್ಪ ದುಂದುಗಾರರಾಗಿಯೂ ಇರುತ್ತಾರೆ. ಲಗ್ನದಲ್ಲಿ ವಧೂವರರಿಗೆ ಊಟಣೆ, ಅಡಿಕೇ ಅಡಗಿಸೋಣ, ವಧುವನ್ನು ಅಡಗಿಸಿ ಇಡೋಣ, ಮುಂತಾದ ವಿನೋದಗಳು ಬಹಳ ನಡಿಯುತ್ತವೆ. ಶೇಣವೀ ಹೆಂಗಸರಿಗೆ ಪುನರ್ವಿವಾಹವಿಲ್ಲ. ಹಡೆದ ದಿವಸದಿಂದ ಆರನೇ ದಿವಸ ರಾತ್ರಿಯಲ್ಲಿ ಷಷ್ಠೀ ಪೂಜನವನ್ನು ಮಾಡುವರು. ಒಂದು ಕಲಶವನ್ನು ಪೂಜಿಸಿ, ಆ ದಿವಸ ರಾತ್ರಿ ಬ್ರಹ್ಮನು ಮುಪ್ಪಿನ ಹೆಂಗಸಿನ ರೂಪದಿಂದ ಕೂಸಿನ ಹಣೆಬರಹವನ್ನು ಬರೆಯಲಿಕ್ಕೆ ಬರುತ್ತಾನೆಂದು ನೆನಸಿ, ಆ ಕಲಶದ ಹತ್ತರ ವೊಂದು ಬಿಳೀಕಾಗದ, ಮಸಿ, ಲೆಕ್ಕಣಿಕೆ, ಚೂರಿಗಳನ್ನು ಇಡುವರು. ಮತ್ತೂ ಮನೆಯೊಳಗಿನ ಗಂಡಸರು ಹಲಕೆಲವು ಧರ್ಮ ಸಂಬಂಧದ ಪುಸ್ತಕಗಳನ್ನು ಓದುತ್ತಾ ಕೂಡ್ರುವರು. ಹೆಂಗಸರು ಬಿಂದಿಗೆಗಳನ್ನು ಊದುತ್ತ ಫುಗಡೀ ಹಾಕಿ ರಾತ್ರಿಯನ್ನು ಕಳೆಯುವರು. ಕೂಸು ಹುಟ್ಟಿದ ಮುಹೂರ್ತವು ಮಧ್ಯಮವಿದ್ದರೆ, ತಂದೆಯು ಅದರ ಮೋರೆಯನ್ನು ನೋಡುವ ಪೂರ್ವದಲ್ಲಿ ಅದರ ನೆರಳನ್ನು ತುಪ್ಪದೊಳಗೆ ನೋಡಲಿಕ್ಕೆ ಬೇಕು. ಮುಹೂರ್ತವು ಬಹಳ ಕೆಟ್ಟದಿದ್ದರೆ ಕೂಸನ್ನು ಆಕಳ ಹೊಟ್ಟೀ ಬುಡಕ್ಕೆ ಹಾಯಿಸಿ, ನೆರಮನೆಯಲ್ಲಿ ಕೆಲವು ಹೊತ್ತು ವೈದಿಟ್ಟು ಮನೆಗೆ ತರುವರು. ವಿಶೇಷವಾಗಿ ತಂದೆ ತಾಯಿಗಳಿಗೆ ಅನಿಷ್ಟವಾದಂಥ ಮುಹೂರ್ತದಲ್ಲಿ ಕೂಸು ಹುಟ್ಟಿದರೆ ಅದನ್ನು ಪರರಿಗೆ ಸಾಕಲಿಕ್ಕೆ ಕೊಟ್ಟು ಬಿಡುವರು. ಶೇಣವೀ ಜನರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವರು. ಒಟ್ಟಿಗೆ ಈ ಜನರ ಸ್ಥಿತಿಯು ಚನ್ನಾಗಿರುತ್ತದೆಂದು ಹೇಳ ಬಹುದು.

ಸರ್ವರಿಯರು.—ಇವರು ಗೌಡ ಬ್ರಾಹ್ಮಣರೊಳಗೆ ಯೆಣಿಸಲ್ಪಡುತ್ತಾರೆ. ಸುಮಾರು

ಇಪ್ಪತ್ತೈದು ವರುಷಗಳ ಹಿಂದೆ ಇವರ ಪೂರ್ವಜರು ಉತ್ತರ ಹಿಂದುಸ್ತಾನದಿಂದ ಬಂದು *ಧಾರವಾಡದಲ್ಲಿ ವಾಸ ಮಾಡಿದರಂತೆ. ಸರ್ವರಿಯರ ಸಂಖ್ಯೆ* ತೀರ ಸ್ವಲ್ಪ ಇರುತ್ತದೆ. ಇವರಿಗೆ ಅಡ್ಡ ಹೆಸರುಗಳಿಲ್ಲ. ಮಹಾದೇವ, ಗಣಪತಿ, ಎಲ್ಲಮ್ಮ, ಮಹಾಲಕ್ಷ್ಮಿ, ಮುಂತಾದವುಗಳು ಇವರ ಕುಲದೇವತೆಗಳು. ಇವರು ಬಲಶಾಲಿಗಳೂ ಪುಷ್ಟರೂ ಇರುತ್ತಾರೆ. ಅಕ್ಕಿ, ಗೋದಿ, ಶಾಕಗಳು, ಹಾಲು, ತುಪ್ಪ, ಮುಂತಾದವುಗಳು ಇವರ ಆಹಾರವು. ಇವರು ಮದ್ಯ ಮಾಂಸಗಳನ್ನು ಮುಟ್ಟುವದಿಲ್ಲ. ಇವರಲ್ಲಿ ವಿಧವೆಯರು ಇತರ ಬ್ರಾಹ್ಮಣ ವಿಧವೆಯರಂತೆ ಮುಂಡನ ಮಾಡಿಸುವದಿಲ್ಲ. ಇವರು ಪ್ರಮಾಣಿಕರೂ, ನಿರ್ಮಲರೂ, ಶ್ರಮ ಮಾಡುವವರೂ, ಆದರಾತಿಥ್ಯ ಮಾಡುವವರೂ ಇದ್ದಾಗ್ಯೂ, ಸಿಟ್ಟಿನವರೂ, ಜಗಳಗಂಟರೂ, ಇರುತ್ತಾರೆ. ಹೊಲ ಮಾಡಿಸೋಣ, ವ್ಯಾಪಾರ, ಸರಕಾರೀ ನೌಕರಿ, ವೈದಿಕಿ, ಇವೇ ಇವರ ಮುಖ್ಯ ಉದ್ಯೋಗಗಳು. ಇವರು ಧರ್ಮನಿಷ್ಠರು. ಇವರ ಧರ್ಮ ಗುರುವಿಗೆ ದಂಡಿಸ್ವಾಮಿ ಅನ್ನುವರು. ಆತನ ವಾಸಸ್ಥಳವು ಕಾಶಿಯ ಹತ್ತರ ಇರುತ್ತದೆ.

**ಸರ್ವರಿಯರು.**

ಸವ್ವಾಶೆ ಬ್ರಾಹ್ಮಣರು.—ಇವರು ಧಾರವಾಡ ಜಿಲ್ಲೆಯಲ್ಲಿ ಮಾತ್ರ ಇದ್ದಾರೆ. ರಾಮನು ವನವಾಸಕ್ಕೆ ಹೋದಾಗ ಆತನ ಜತೆಯಲ್ಲಿದ್ದ "ಸಹವಾಸಿ" ಯೆಂಬವನು ತಮ್ಮ ಜಾತಿಯ ಮೂಲಸ್ಥಾಪಕನೆಂದು ಇವರು ಹೇಳುವರು. ಆದರೆ ಸಮ್ಮಗಾರನ ಮಗಳನ್ನು ಲಗ್ನ ಮಾಡಿಕೊಂಡಂಥಾ ವೊಬ್ಬ ಬ್ರಾಹ್ಮಣನ ಮನೆಯಲ್ಲಿ ೧೨೫ ಮನೆತನದ ಬ್ರಾಹ್ಮಣರು ಊಟ ಮಾಡಿದ್ದರಿಂದ ಅವರೆಲ್ಲರನ್ನು ಕುಲದಿಂದ ಹೊರಗಿಟ್ಟರಂತೆ. ಆ ಕುಲಗೆಟ್ಟ ಬ್ರಾಹ್ಮಣರ ವಂಶದವರೇ ಈಗಿನ ಸವ್ವಾಶೆ ಬ್ರಾಹ್ಮಣರೆಂದು ಜನರು ವಾಡಿಕೆಯಾಗಿ ತಿಳಿಯುವರು. ರಾಘವೇಂದ್ರ ಸ್ವಾಮಿಯ ಮಠದ ಬ್ರಾಹ್ಮಣರು ಮಾತ್ರ ಇವರ ಪಂಕ್ತಿಗೆ ಭೋಜನ ಮಾಡುತ್ತಾರೆ. ಇವರು ಪೂರ್ವದಲ್ಲಿ ಮಾಧ್ವ ಬ್ರಾಹ್ಮಣರಿದ್ದರು. ಚಿನಿವಾರಕಿ, ವ್ಯಾಪಾರ, ಇವೇ ಇವರ ಮುಖ್ಯ ಉದ್ಯೋಗಗಳುಂಟು. ಇವರ ಆಚಾರ ವಿಚಾರಗಳೆಲ್ಲ ವೈಷ್ಣವರಂತೆ ಇದ್ದು, ಇವರು ಒಳ್ಳೇ ಸ್ಥಿತಿವಂತರಾಗಿರುತ್ತಾರೆ.

**ಸವ್ವಾಶಿಗಳು.**

ಶ್ರೀ ವೈಷ್ಣವರು (ರಾಮಾನುಜರು).—ಇವರು ಧಾರವಾಡ ಜಿಲ್ಲೆಯಲ್ಲಿ ಮಾತ್ರ ಸ್ವಲ್ಪ ಜನರು ಇದ್ದಾರೆ. ಇವರ ಭಾಷೆ ತಮಿಳ. ಇವರಿಗೆ ಅಡ್ಡ ಹೆಸರುಗಳಿಲ್ಲ. ಶ್ರೀ ವೈಷ್ಣವರ ಮೈಬಣ್ಣ ಕೆಂಪು. ಇವರು ಒಳ್ಳೇ ಮೈಕಟ್ಟುಳ್ಳವರೂ ಘಟ್ಟಿಗರೂ ಇರುತ್ತಾರೆ. ಇವರ ಆಹಾರ ಉಡಿಗೆ ತೊಡಿಗೆಗಳೆಲ್ಲ ಬಹುತರವಾಗಿ ಮಾಧ್ವ ಬ್ರಾಹ್ಮಣರಂತೆ. ಆದರೆ ಇವರ ಅಡಿಗೆಯಲ್ಲಿ ಹುಳಿ, ಉಪ್ಪು, ಕಾರ, ಇವು ವಿಶೇಷವಾಗಿರುತ್ತವೆ. ಇವರು ಚಿತ್ರಾನ್ನ ಮಾಡುವದರಲ್ಲಿ ಹೆಸರಾದವರು. ಇವರು ಶ್ರಮ ಮಾಡುವವರೂ, ನಿರ್ಮಲರೂ, ನಿಪುಣರೂ, ಆದರೋಪಚಾರ ಮಾಡುವವರೂ ಇರುತ್ತಾರೆ. ಚಿನಿವಾರಿಕಿ, ಸರಕಾರೀ ನೌಕರಿ, ವ್ಯಾಪಾರ, ಇವೇ ಇವರ ಮುಖ್ಯ ಉದ್ಯೋಗಗಳು. ಇವರು ಧರ್ಮನಿಷ್ಠರಿದ್ದು ವಿಷ್ಣುವನ್ನು ಆರಾಧಿಸುವರು. ಇವರಿಗೆ

**ಶ್ರೀ ವೈಷ್ಣವರು.**

ಮದ್ರಾಸ ಇಲಾಖೆಯೊಳಗಿನ ಅಹೋಬಲ ಯೆಂಬ ಗ್ರಾಮದಲ್ಲಿರುವ ಅಹೋಬಲ ಸ್ವಾಮಿಯೆಂತಲೂ ಮೈಸೂರಲ್ಲಿರುವ ಪರಕಲ ಸ್ವಾಮಿಯೆಂತಲೂ ಇಬ್ಬರು ಧರ್ಮ ಗುರುಗಳುಂಟು. ಮಕರ ಸಂಕ್ರಮಣ, ಯುಗಾದಿ, ರಾಮನವಮಿ, ನರಸಿಂಹ ಜಯಂತಿ, ಕೃಷ್ಣ ಜಯಂತಿ, ಇವೇ ಇವರ ಮುಖ್ಯ ಹಬ್ಬಗಳು. ಶ್ರೀ ವೈಷ್ಣವರು ಮಿಾಶಿಯ ಮೇಲಿನ ನೀರು ಬಾಯೊಳಗೆ ಹೋದರೆ ಅದು ಮದ್ಯ ಸಮಾನವೆಂದು ತಿಳಿದು ತಮ್ಮ ತಾಯಿತಂದೆಗಳು ಇದ್ದರೂ ಮಿಾಶಿಗಳನ್ನು ಬೋಳಿಸುವರು. ಹೆಂಗಸರು ಕಾಜಿನ ಬಳಿಗಳು ಅಶುದ್ಧವೆಂದು ತಿಳಿದು ಅವುಗಳನ್ನು ಕೈಯಲ್ಲಿ ಇಟ್ಟುಕೊಳ್ಳುವದಿಲ್ಲ. ಇವರಲ್ಲಿ ಜಾತ್ಯಾಭಿಮಾನವು ಬಹಳ.

**ತೆಲಗು ಬ್ರಾಹ್ಮಣರು.**

ತೆಲಗು ಬ್ರಾಹ್ಮಣರು (ತೈಲಂಗರು).—ಈ ಜನರನ್ನು ಧಾರವಾಡ ಬೆಳಗಾವಿ ಜಿಲ್ಲೆಗಳಲ್ಲಿ ಮಾತ್ರ ಕಾಣ ಬಹುದು. ಮದ್ರಾಸ ಇಲಾಖೆಯಿಂದ ದೇಶಾವರ ಬೇಡುವದಕ್ಕೆ ಇಲ್ಲಿಗೆ ಬರುವರು. ಇವರು ಮುಂಬಯಿ ಕರ್ನಾಟಕದಲ್ಲಿ ಮನೆ ಮಾಡಿಕೊಂಡಿರುವದು ಅಪರೂಪ. ಇವರೊಳಗೆ ಕಾಸಲನಾಡು, ಮುರಿಕಿನಾಡು, ತೆಲಗನ್ಯ, ವಾಗನಾಡು, ವೇಲನಾಡು, ಎಂದು ಐದು ವೊಳಭೇದಗಳುಂಟು. ಈ ವೊಳ ಭೇದಗಳಲ್ಲಿ ಪರಸ್ಪರ ಅನ್ನ ವ್ಯವಹಾರವಾಗುತ್ತದೆ; ಆದರೆ ಲಗ್ನ ಸಂಬಂಧವಿಲ್ಲ. ಇವರು ತೆಲಗು ಭಾಷೆಯನ್ನಾಡುವರು. ತೆಲಗರು ಕಸುವುಳ್ಳವರು; ಮೈಬಣ್ಣ ಕಪ್ಪು; ನಿಲುವಿಕೆ ಯೆತ್ತರ; ಒಳ್ಳೇ ತಿನ್ನಬಾಕರು; ಹುಳಿಯ ಮೇಲೆ ಪ್ರೀತಿ ಬಹಳ. ಇವರು ನಿರ್ಮಲರೂ, ಸೋಮಾರಿಗಳೂ, ಜಗಳಗಂಟರೂ, ಶಿಟ್ಟಿನವರೂ, ಜಿಪುಣರೂ, ಧರ್ಮನಿಷ್ಠರೂ, ಇರುತ್ತಾರೆ. ಶಂಕರಾಚಾರ್ಯರೇ ಇವರ ಧರ್ಮ ಗುರುವು. ಇವರೊಳಗೆ ಹಡೆದ ಮೇಲೆ ಕೂಸಿನ ಹೊಕ್ಕಳ ಹುರಿಯನ್ನು ಹುಗಿಯದೆ ಬಾಣಂತಿಯ ಕೋಣೆಯಲ್ಲಿ ವೊಣಗಿಸುವರು. ಐದನೇ ದಿವಸ ಮಧ್ಯಾನ್ಹದಲ್ಲಿ ನೆಲದ ಮೇಲೆ ಬೀಸುವ ಕಲ್ಲು ಇಟ್ಟು, ಅದರ ಮೇಲೆ ಶಟವಿಯ ಪ್ರತಿಮೆಯನ್ನೂ, ಹೊಕ್ಕಳ ಹುರಿಯನ್ನೂ ಇರಿಸಿ ಪೂಜಿಸುವರು. ಮನೆಯಲ್ಲಿ ಯಾರಾದರೂ ಸತ್ತರೆ, ಹತ್ತನೇ ದಿವಸ ಮನೆಯೊಳಗಿನ ಗಂಡಸರೆಲ್ಲರೂ, ನದಿಗೆ ಹೋಗಿ ಪಿಂಡ ಕೊಡುವರು. ಆಗ ಆರು ಇಂಚು ಯೆತ್ತರವಾದ ಕೆಂಪು ನಿಶಾನೆಗಳನ್ನು ಹಿಡಿದು ಅನ್ನದ ಪಿಂಡನ್ನು ಮುಟ್ಟುವದಕ್ಕೆ ಕಾಗೆಯನ್ನು ಕರೆಯುವರು. ಕಾಗೆಯು ಪಿಂಡವನ್ನು ಮುಟ್ಟಿದ ಕೂಡಲೆ ಅವರು "ಅಶ್ಮದ" ಅಂದರೆ ಜೀವದ ಕಲ್ಲಿನ ಮೇಲೆ ಯೆಳ್ಳು ನೀರು ಬಿಟ್ಟು ಅದನ್ನು ನೀರೊಳಗೆ ಚಲ್ಲುವರು. ಅನ್ನ, ಮಜ್ಜಿಗಿ, ಕಾಯಿಪಲ್ಲೆಗಳೇ ಇವರ ಆಹಾರವು. ಗಂಡಸರು ಪಂಜಿ ಉಡುವರು. ಮೈಯಲ್ಲಿ ವೊಂದು ಗಿಡ್ಡಂಗಿ, ಮೈ ಮೇಲೆ ಒಂದು ಧೋತರ, ತಲೆಯ ಮೇಲೆ ರುಮಾಲು, ಇಷ್ಟು ಬಟ್ಟೆಗಳನ್ನು ಧರಿಸುವರು. ಕಾಲಲ್ಲಿ ಮೊಚ್ಚಿ ಮೆಟ್ಟುವದು ಅಪರೂಪ. ಹೆಂಗಸರು ಶೀರೆ ಕುಬ್ಬಸಗಳನ್ನು ಧರಿಸುವರು. ಇವರ ಹಬ್ಬ, ಉಪವಾಸ ದಿವಸಗಳು, ಇತರ ಬ್ರಾಹ್ಮಣರಂತೆ. ಇವರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವರು. ಇವರಿಗೆ ಹೊಸ ಉದ್ಯೋಗಗಳು ಶೇರುವದಿಲ್ಲ. ಒಟ್ಟಿಗೆ ಇವರು ಸ್ಥಿತಿವಂತರಾಗಿರುತ್ತಾರೆ.

**ತಿರಗುಳರು.**

ತಿರಗುಳರು (ಎಲೆ ಬಳ್ಳಿಯ ಬ್ರಾಹ್ಮಣರು).—ಇವರು ಕಾರವಾರ ಜಿಲ್ಲೆ ವೊಂದು ಬಿಟ್ಟು ಉಳಿದ ಮೂರು ಜಿಲ್ಲೆಗಳಲ್ಲಿ ಇದ್ದಾರೆ. ತಿರಗುಳರು ವೀಳ್ಯದೆಲೆಯ ತೋಟಗಳನ್ನು ಮಾಡುವರು. ಇಂಥಾ ತೋಟಗಳನ್ನು ಮಾಡುವಾಗ ಹುಳಗಳನ್ನು ಕೊಲ್ಲ ಬೇಕಾಗುವದರಿಂದ ಬ್ರಾಹ್ಮಣ ಜಾತಿಯೊಳಗೆ ಇವರ ಯೋಗ್ಯತೆಯು ಕಡಿಮೆಯಾಯಿತಂತೆ. ಬುನಾದಿಯಲ್ಲಿ ಇವರು ದೇಶಸ್ಥ ಬ್ರಾಹ್ಮಣರು. ಇವರ ಮನೆಗಳು ಮೇಲ್ತರದವಿರುತ್ತವೆ. ಅಕ್ಕಿ, ಗೋದಿ, ತರತರದ ಶಾಕಗಳು, ತುಪ್ಪ, ಮೊಸರು, ಇವೇ ಇವರ ಆಹಾರವು. ತಿರಗುಳರ ನಡೆ ನುಡಿ, ಉಡಿಗೆ ತೊಡಿಗೆಗಳು ಬಹುತರ ದೇಶಸ್ಥ ಬ್ರಾಹ್ಮಣರಂತೆ. ಇವರಲ್ಲಿ ಕೆಲವರು ವ್ಯಾಪಾರ ಮಾಡುವವರೂ, ಕೆಲವರು ಜಮೀನದಾರರೂ, ಕೆಲವರು ಎಲೆ ತೋಟಗಳನ್ನು ಮಾಡುವವರೂ, ಕೆಲವರು ವೊಕ್ಕಲತನ ಮಾಡುವವರೂ, ಇದ್ದಾರೆ. ಇವರು ಸ್ಮಾರ್ತರಿದ್ದು ಇತರ ಬ್ರಾಹ್ಮಣರ ದೇವತೆಗಳನ್ನು ಆರಾಧಿಸುವರು. ಇವರ ಭಾಷೆ ಕನ್ನಡ; ಮೈಬಣ್ಣ ಕಪ್ಪು, ನಿಲುವಿಕೆ ಮಧ್ಯಮ; ಶ್ರಮ ಮಾಡುವದು ಇವರಿಗೆ ಶೇರುತ್ತದೆ. ದೇಶಸ್ಥ ಬ್ರಾಹ್ಮಣರು ಇವರು ತಂದ ನೀರು ಕುಡಿಯುವರು; ಆದರೆ ಇವರ ಕೈಯಿಂದ ಉಣ್ಣುವದಿಲ್ಲ.

**ಗುಜರಾಥೀ ಬ್ರಾಹ್ಮಣರು.**

ಗುಜರಾಥೀ ಬ್ರಾಹ್ಮಣರು.—ಇವರು ಬೆಳಗಾವೀ ಜಿಲ್ಲೆಯಲ್ಲಿ ಮಾತ್ರ ಇದ್ದಾರೆ. ಇವರೊಳಗೆ ನಾಗರ, ಶ್ರೀಮಾಲಿ, ಪೋಕರ್ನ, ಯೆಂಬ ಮೂರು ವೊಳ ಭೇದಗಳುಂಟು. ಗುಜರಾಥದ ವಾಣಿ ಭಾಟೇ ಜನರ ಮನೆಯಲ್ಲಿ ಇವರು ಉಪಾಧ್ಯಾಯರಂತೆ ನಡಕೊಳ್ಳುವರು. ಇವರು ಚಲುವರಿದ್ದು ಅಶಕ್ತರಿರುತ್ತಾರೆ; ಗುಜರಾಥೀ ಭಾಷೆಯನ್ನಾಡುವರು. ಇವರಿಗೆ ಮನೆ ಮಾರುಗಳಿಲ್ಲ. ಇವರು ಬಹುತರವಾಗಿ ತಮ್ಮ ಯಜಮಾನರ ಮನೆಗಳಲ್ಲಿಯೇ ವಾಸವಾಗಿರುವರು. ಇವರು ತಲೆಗೆ ರುಮಾಲಸುತ್ತದೆ ಮುಂಡಾಸಹಾಕುವರು. ಧಾನ್ಯ ಕಾಯಿ ಪಲ್ಲೆಗಳೇ ಇವರ ಆಹಾರವು. ಇವರು ಮದ್ಯ ಮಾಂಸಗಳನ್ನು ಯೆಂದಿಗೂ ಮುಟ್ಟುವದಿಲ್ಲ.

**ಮಾರವಾಡೀ ಬ್ರಾಹ್ಮಣರು.**

ಮಾರವಾಡೀ ಬ್ರಾಹ್ಮಣರು.—ಇವರು ಬೆಳಗಾವೀ ಜಿಲ್ಲೆಯಲ್ಲಿ ಮಾತ್ರ ಸ್ವಲ್ಪ ಜನರು ಉಂಟು. ಇಲ್ಲಿ ಇವರು ಮನೆ ಮಾಡಿಕೊಂಡು ಸ್ಥಿರವಾಗಿ ನಿಂತಿಲ್ಲ. ಹಲ ಕೆಲವರು ಮಾರವಾಡೀ ವಾಣೀ ಜನರಲ್ಲಿ ಅಡಿಗೆ ಮಾಡುವರು. ಆದರೆ ಯೆಷ್ಟೋ ಜನರು ವ್ಯಾಪಾರ ಮಾಡಿಕೊಂಡು ಚನ್ನಾಗಿರುವರು.

**ವಿದುರರು.**

ವಿದುರರು.—ಇವರು ವಿಜಾಪೂರ ಜಿಲ್ಲೆಯಲ್ಲಿ ಮಾತ್ರ ಇದ್ದಾರೆ. ಇವರು ವ್ಯಭಿಚಾರದಿಂದ ಹುಟ್ಟಿದ ಬ್ರಾಹ್ಮಣರ ವಂಶಸ್ಥರಂತೆ. ಮಹಾಭಾರತದಲ್ಲಿ ಪ್ರಖ್ಯಾತನಾದ ವ್ಯಾಸ ಋಷಿಯ ವ್ಯಭಿಚಾರದಿಂದ ಹುಟ್ಟಿದ ವಿದುರನೇ ಇವರ ಮೂಲ ಪುರುಷನೆಂದು ಹೇಳುವರು. ಇವರ ನಡೆನುಡಿಗಳೆಲ್ಲಾ ದೇಶಸ್ಥ ಬ್ರಾಹ್ಮಣರಂತೆ ಇರುತ್ತವೆ. ಆದರೆ ಅವರು ವಿದುರರ ಕೂಡ ಅನ್ನ ವ್ಯವಹಾರ ಲಗ್ನ ಸಂಬಂಧಗಳನ್ನು ಮಾಡುವದಿಲ್ಲ.

**ಹವಿಕರು.**

ಹವಿಕರು (ಹೈಗರು).—ಇವರು ಕಾನಡಾ ಜಿಲ್ಲೆಯಲ್ಲಿ ಯೆಲ್ಲ ಕಡೆಯಲ್ಲಿ ವಾಸಿಸುತ್ತಾರೆ. ಆದರೂ ಕರಿಕಿ, ಗೋಕರ್ಣ, ಬನವಾಸಿ, ಅಗ್ರಹಾರ, ಮುಂತಾದ ಗ್ರಾಮಗಳಲ್ಲಿ ವಿಶೇಷ. ಕದಂಬ ವಂಶದ ಮಯೂರ ವರ್ಮನೆಂಬ ಅರಸು ಕ್ರಿಸ್ತೀ ಶಕದ ೫ನೇ ಶತಕದ ಕಡೆಯಲ್ಲಿ ಅಹಿಛತ್ರವೆಂಬ ಪಟ್ಟಣದಿಂದ ತಮ್ಮನ್ನು ಈ ಪಶ್ಚಿಮ ಸಮುದ್ರತೀರಕ್ಕೆ ತಂದನೆಂದು ಇವರು ಹೇಳುತ್ತಾರೆ. ಇವರು ಕನ್ನಡ ಭಾಷೆಯನ್ನು ಆಡುತ್ತಿದ್ದಾಗ್ಯೂ ಮಲಿಯಾಳೀ ಭಾಷೆಯ ಸ್ವರದಿಂದ ಆಡುವರು. ಇವರ ಗೋತ್ರಗಳು ಕಶ್ಯಪ, ವಸಿಷ್ಠ, ಗೌತಮ, ಜಮದಗ್ನಿ, ವಿಶ್ವಾಮಿತ್ರ, ಅಂಗಿರಾ. ಗೃಹಸ್ಥರು ತಮ್ಮ ಹೆಸರಿನ ಮುಂದೆ "ಹೆಗಡೆ" ಯೆಂಬ ಪದವಿಯನ್ನು ಹಚ್ಚಿಕೊಳ್ಳುವರು. ಭಿಕ್ಷುಕರು "ಭಟ್ಟ" ಯೆಂಬ ಪದವಿಯನ್ನು ಬಳಿಸುವರು. ಗಂಡುಳ್ಳ ಹೆಂಗಸರಿಗೆ "ಅಮ್ಮ" "ಅವ್ವ," ವಿಧವೆಗಳಿಗೆ "ಅಬಚಿ," ಗಂಡು ಮಕ್ಕಳಿಗೆ "ಮಾಣಿ," ಹೆಣ್ಣು ಮಕ್ಕಳಿಗೆ "ಪುಟ್ಟಿ," ಯೆಂದೆನ್ನುವರು. ಇಡಗುಂಜಿ ಯೆಂಬಲ್ಲಿಯ ಗಣಪತಿಯೇ ಇವರ ಕುಲದೇವತೆ. ಕೋಟರು, ಸಕಳಾಪುರಿ, ಶಿವಳ್ಳಿ, ಇವು ಮೂರು ಹೈಗರೊಳಗಿನ ವೊಳ ಭೇದಗಳು. ಇವರು ಪರಸ್ಪರ ಲಗ್ನ ಸಂಬಂಧ ಮಾಡುವದಿಲ್ಲ. ಆದರೆ ಕೋಟರ ಹೊರ್ತು ಉಳಿದವರೆಲ್ಲರು ತಮ್ಮ ತಮ್ಮೊಳಗೂ ಬೇರೆ ದ್ರವಿಡ ಬ್ರಾಹ್ಮಣರ ಸಂಗಡಲೂ ಅನ್ನ ವ್ಯವಹಾರ ಮಾಡುವರು. ಗಂಡಸರ ಮೈಬಣ್ಣ ಕೆಂಪು. ನಿಲುವಿಕೆ ಮಧ್ಯಮ. ಮೈಕಟ್ಟು ತೆಳ್ಳಗೆ. ಹೆಂಗಸರು ಗಂಡಸರ ಹಾಗೇ, ಆದರೆ ಹೆಚ್ಚು ಕೆಂಪು. ಹೈಗರ ಮನೆಗಳ ಮುಂದೆ ಅಂಗಳು ವೊಂದು ಚಪ್ಪರ ಸಹಿತ ಇರುತ್ತದೆ. ಇವರು ತಮ್ಮ ಮನೆಯ ನೆಲವನ್ನು ಬಹು ಶ್ರಮ ಪಟ್ಟು ನುಣುಪು ಮಾಡುವರು. ಇವರ ಮುಖ್ಯ ಆಹಾರ ಅಕ್ಕಿ, ರಾಗಿ. ಅಕ್ಕೀ ಪಾಯಸ, ದೋಸೆ, ಮುಖ್ಯ ಪಕ್ವಾನ್ನಗಳು; ಮಜ್ಜಿಗೆ, ಮೆಣಸು ಇವರಿಗೆ ಬಹಳ ಬೇಕು. ಇವರು ದಿನಕ್ಕೆ ಮೂರು ಸಾರಿ ಭೋಜನ ಮಾಡುವರು. ಬೆಳಿಗ್ಗೆ ತಂಗಳೂಟ ಮಾಡುವರು; ಗಡಿಗೆಯಲ್ಲಿ ಅಡಿಗೆ ಮಾಡುವರು. ಗಂಡಸರು ವಾಡಿಕೆಯಾಗಿ ಪಂಚೆಗಳನ್ನು ಉಡುವರು. ಹೆಂಗಸರು ಘಟ್ಟದ ಮೇಲೆ ಕಿರಿಶರಗು ತೆಗೆದು ಅದನ್ನು ಕೊರಳಲ್ಲಿ ಕಟ್ಟಿದ್ದೊಂದು ದಾರಕ್ಕೆ ತಿಗಿಸುವರು. ಘಟ್ಟದ ಮೇಲೂ ಕೆಳಗೂ ಹೆಂಗಸರು ಕಚ್ಚೆ ಹಾಕುವದಿಲ್ಲ.

ಹೈಗರು ಮುಖ್ಯವಾಗಿ ತೋಟಗಳನ್ನು ಮಾಡುವರು. ಇವರ ತೋಟಗಳಲ್ಲಿ ತೆಂಗು, ಅಡಿಕೆ, ಮೆಣಸು, ಯಾಲಕ್ಕಿ, ಮುಂತಾದವುಗಳು ಬೆಳೆಯುತ್ತವೆ. ಗಂಡಸರು ಬೆಳಿಗ್ಗೆ ತಂಗಳುಂಡು ತೋಟದ ಕೆಲಸಕ್ಕೆ ಹೋಗುವರು. ಹೆಂಗಸರು ಮನೆಗೆಲಸ ಮಾಡುವರು. ಕೆಲವರು ಭಟ್ಟರು ವೇದ ಮಂತ್ರಗಳನ್ನು ಕಲಿಯುವರು; ಪುರಾಣ ಹೇಳುವರು; ಜ್ಯೋತಿಷ ಕಲಿಯುವರು. ಬಹು ಸ್ವಲ್ಪ ಜನರು ಮಾತ್ರ ಸರಕಾರೀ ನೌಕರಿಯನ್ನು ಹುಡುಕುವರು. ತೋಟಿಗರಲ್ಲಿ ಬಹು ಜನರಿಗೆ ಓದ ಬರಿಯಲಿಕ್ಕೆ ಬರುತ್ತಿರುವದಿಲ್ಲ. ಹೈಗರು ಬಹಳ ಉದ್ಯೋಗಿಗಳೂ, ಪ್ರಮಾಣಿಕರೂ, ತಮ್ಮ ಹಕ್ಕು ಪಡಿಯಲಿಕ್ಕೆ ಕಡೆ ತನಕ ಸಾಹಸ ಮಾಡುವವರೂ ಇರುತ್ತಾರೆ.

ಹೈಗರು ಅದ್ವೈತ ಮತದವರು. ಇವರ ಸ್ವಾಮಿಗಳು ಇಬ್ಬರುಂಟು. ಮೈಸೂರ ಸೀಮೆಯಲ್ಲಿ ರಾಮಚಂದ್ರಪುರವೆಂಬಲ್ಲಿ ಇರುವವನಿಗೆ "ಭಾರತಿ" ಯೆಂಬುವರು. ಸ್ವಾದಿಯಲ್ಲಿ ಇರುವವನಿಗೆ "ಸರಸ್ವತಿ" ಯೆನ್ನುವರು. ರಥೋಚ್ಛಾಹಕ್ಕೆ ಹೈಗರು ಬಹಳ ಮೆಚ್ಚುವರು. ಹೈಗರಲ್ಲಿ ಇತರ ಬ್ರಾಹ್ಮಣರಂತೆ ಹದಿನಾರು ಸಂಸ್ಕಾರಗಳು ನಡಿಯುತ್ತವೆ. ಕನ್ಯಾ ವಿಕ್ರಯದ ನಡಾವಳಿ ಇವರಲ್ಲಿ ವಿಶೇಷ. ಧನವಂತರು ವರದಕ್ಷಿಣೆಯನ್ನು ಕೊಡುವರು. ಗಂಡು ಮಕ್ಕಳ ಲಗ್ನವನ್ನು ಹನ್ನೆರಡನೇ ವರುಷದ ತರುವಾಯ ಮಾಡುವರು. ಹೆಣ್ಣು ಮಕ್ಕಳ ಲಗ್ನವು ಹತ್ತು ವರ್ಷದೊಳಗೆ ಆಗಲಿಕ್ಕೆ ಬೇಕು. ಲಗ್ನದ ಮೂರನೇ ದಿವಸ ವಧೂವರರು ಸಮಾರಂಭದಿಂದ ಕೆರೆಯ ದಂಡಿಗೆ ಹೋಗಿ ನೀರೊಳಗೆ ಅಕ್ಕೀ ಕಾಳು ಚಲ್ಲಿ ಮೀನುಗಳು ಅವನ್ನು ತಿನ್ನಲಿಕ್ಕೆ ಬಂದ ಕೂಡಲೆ ಪಂಜಿಯಲ್ಲಿ ಅವನ್ನು ಹಿಡಿಯುವರು. ತರುವಾಯ ವೊಂದೇ ಮೀನವನ್ನಿಟ್ಟು ಕೊಂಡು ಅದರ ಮೈಮಲವನ್ನು ಇಬ್ಬರೂ ಹಣೆಗೆ ಹಚ್ಚಿಕೊಂಡು ಮನೆಗೆ ಹೋಗುವರು. ಹೈಗರಲ್ಲಿ ಹೆಂಗಸರಿಗೆ ಪುನರ್ವಿವಾಹವಿಲ್ಲ.

ಮರಣದ ಸಂಸ್ಕಾರಗಳು ಇತರ ಬ್ರಾಹ್ಮಣರಂತೆ. ಆದರೆ ಶವವನ್ನು ಸುಟ್ಟು ಮನೆಗೆ ಬಂದ ಬಳಿಕ ಸೂತಕಿಗಳೆಲ್ಲರು ಕ್ಷೌರ ಮಾಡಿಸಿ ಕೊಳ್ಳುವರು. ಸತ್ತ ದಿವಸ ಮನೆಯಲ್ಲಿ ಇಟ್ಟ ದೀಪಕ್ಕೆ ಹತ್ತು ದಿವಸಗಳ ವರೆಗೆ ಪಿಂಡ ಪ್ರದಾನ ಮಾಡುವರು.

**ಕೋಟ ಬ್ರಾಹ್ಮಣರು.**

ಕೋಟ ಬ್ರಾಹ್ಮಣರು.—ಇವರು ಕಾರವಾಡ ಜಿಲ್ಲೆಯಲ್ಲಿ ಮಾತ್ರ ಇದ್ದಾರೆ. ಮಂಗಳೂರ ದಕ್ಷಿಣಕ್ಕೆ ಅರವತ್ತು ಮೈಲಿನ ಮೇಲೆ ಇರುವ ಕೋಟೇಶ್ವರವೆಂಬ ಗ್ರಾಮದಿಂದ ಇವರು ಬಂದವರಾದ ಕಾರಣ ಇವರಿಗೆ ಕೋಟರೆಂಬ ಹೆಸರು ಬಂದದೆ. ಇದರಿಂದಲೂ, ಯಾವತ್ತು ಹೈಗರ ಭಾಷೆಯಲ್ಲಿ ಮಲಿಯಾಳೀ ಸ್ವರವೂ ಶಬ್ದಗಳೂ ಬರುತ್ತಿರುವ ಕಾರಣದಿಂದಲೂ, ಹೈಗರು ಮಲಿಯಾಳ ದೇಶದಿಂದ ಬಂದವರೆಂದು ಕೆಲವರು ತರ್ಕಿಸುತ್ತಾರೆ. ಇವರ ಆಚಾರ, ಆಹಾರ, ಉಡಿಗೆ, ಭಾಷೆ, ಧರ್ಮ, ಯಾವತ್ತು ಹೈಗರಂತೆ. ಹೈಗರು ಇವರ ಸಂಗಡ ಅನ್ನ ವ್ಯವಹಾರ ಮಾಡುತ್ತಾರೆಂದು ಹಿಂದೆ ಹೇಳಿದ್ದೇವೆ. ತೋಟದ ಕೆಲಸವೇ ಇವರ ಮುಖ್ಯ ಉದ್ಯೋಗವು.

**ಜೋಯಿಸರು.**

ಜೋಯಿಸರು.—ಇವರು ಕಾರವಾಡ ಜಿಲ್ಲೆಯಲ್ಲಿ ಮಾತ್ರ ಇರುತ್ತಾರೆ. ಮಂಗಳೂರ ಜಿಲ್ಲೆಯೊಳಗಿನ ನೀಲೇಶ್ವರವೆಂಬಲ್ಲಿಯ ಜೋಯಿಸರಿಗೂ ಇವರಿಗೂ ಶರೀರ ಸಂಬಂಧಗಳಾಗುತ್ತವೆ. ಆದರೆ ಇವರು ಮುಂಡಾಸ ಹಾಕುವರು. ಇವರ ಕಣ್ಣುಗಳು ಬೆಕ್ಕಿನ ಕಣ್ಣಿನ ಹಾಗೆ ಇರುತ್ತವೆ. ಇವರು ತಾವು ಗೋದಾವರೀ ತೀರದಿಂದ ಬಂದವರೆಂದು ಹೇಳುತ್ತಾರೆ. ಶಕ್ತಿಯ ಆರಾಧನೆಯು ಇವರಲ್ಲಿ ವಿಶೇಷ. ಒಕ್ಕಲಿಗರಿಗೆ ಪಚಾಂಗ ಹೇಳುವದೇ ಇವರ ಮುಖ್ಯ ಉದ್ಯೋಗವು. ಆದರೂ ತಕ್ಕಮಟ್ಟಿಗೆ ವತನ ಸಂಪಾದಿಸಿ ಕೊಂಡು ಇವರು ಸುಖಿಯಾಗಿದ್ದಾರೆ. ಕಾನಡಾ ಜಿಲ್ಲೆಯ ಬೇರೆ ಯಾವ ಬ್ರಾಹ್ಮಣರು ಇವರ ಸಂಗಡ ಅನ್ನ ವ್ಯವಹಾರ ಮಾಡುವದಿಲ್ಲ. ಇವರು ಆಡುವ ಕನ್ನಡ ಭಾಷೆಯು ಕೊಮಾರ ಪೈಕರ ಭಾಷೆಯನ್ನು ಹೋಲುತ್ತದೆ.

**ಸಕಳಾಪುರಿಗಳು.**

ಸಕಳಾಪುರಿಗಳು.—ಇವರು ಕಾರವಾಡ ಜಿಲ್ಲೆಯಲ್ಲಿ ಮಾತ್ರ ಉಂಟು. ಇವರು ಸುಮಾರು ಇಪ್ಪತ್ತು ವರ್ಷದ ಈಚೆಯಲ್ಲಿ ಹೈಗರಿಂದ ಬೇರೆಯಾದರು. ಇವರು ಭಟಕಳದಲ್ಲಿ ಇರುವ ಸಕಳಾಪುರಿ ಯೆಂಬ ಮಠದ ಶಿಷ್ಯರಾದದರಿಂದ ಇವರಿಗೆ ಈ ಹೆಸರು ಬಂತು. ಇವರ ಸಂಖ್ಯೆವು ಗಂಡಸರು ಹೆಂಗಸರು ಕೂಡಿ ತೊಂಬತ್ತಾರಕ್ಕಿಂತ ಹೆಚ್ಚಿಲ್ಲ.

**ಆಂಧ್ರರು.**

ಆಂಧ್ರರು.—ಇವರು ಕಾರವಾಡ ಜಿಲ್ಲೆಯ ಸ್ವಲ್ಪ ಕಡೆಯಲ್ಲಿ ಮಾತ್ರ ಉಂಟು. ಗೋತ್ರ, ಆಚಾರ, ಧರ್ಮ, ದೇಶಸ್ಥರಂತೆ. ನಡಿಯುವ ಶತಕದ ಆರಂಭದಲ್ಲಿ ಇವರು ಸರಕಾರೀ ನೌಕರರಲ್ಲಿ ಪ್ರಮುಖರಾಗಿದ್ದರು; ಆದರೆ ಈಗ ಬಡತನದಲ್ಲಿರುತ್ತಾರೆ. ಇವರಿಗೂ ದ್ರವಿಡ ಬ್ರಾಹ್ಮಣರಿಗೂ ಅನ್ನ ವ್ಯವಹಾರವಾಗುತ್ತದೆ. ಶರೀರ ಸಂಬಂಧವಾಗುವದಿಲ್ಲ.

**ಶಿವಳ್ಳಿಗಳು.**

ಶಿವಳ್ಳಿಗಳು.—ಇವರು ಕಾರವಾಡ ಜಿಲ್ಲೆಯಲ್ಲಿ ಶಿರ್ಶೀ ತಾಲೂಕಿನಲ್ಲಿ ಇರುತ್ತಾರೆ. ನಾಲ್ವತ್ತು ವರ್ಷದ ಈಚೆಯಲ್ಲಿ ಹೈಗರಿಂದ ಬೇರೆಯಾದರು. ಇವರ ಸಂಖ್ಯೆವು ಐದಕ್ಕಿಂತ ಹೆಚ್ಚಿಲ್ಲ.

**ಸಾಷ್ಟೀಕರರು.**

ಸಾಷ್ಟೀಕರರು (ಕೊಂಕಣಿಗರು).—ಇವರು ಕಾನಡಾ ಜಿಲ್ಲೆಯಲ್ಲಿ ಯೆಲ್ಲ ಕಡೆಯಲ್ಲಿಯೂ ವಾಸಿಸುತ್ತಾರೆ. ಆರಂಭದಲ್ಲಿ ಗೋವೆ ಶೀಮೆಯೊಳಗಿನ ಸಾಸಷ್ಟಿ (೬೬ ಹಳ್ಳಿಗಳುಳ್ಳ) ಯೆಂಬ ಪ್ರಾಂತದಿಂದ ಬಂದರೆಂದು ಹೇಳುತ್ತಾರೆ. ಇವರ ಮುಖ್ಯ ಉದ್ಯೋಗ ವ್ಯಾಪಾರ; ಕೆಲವರು ವತನದಾರರುಂಟು. ಬಹುತರ ಸ್ವಲ್ಪ ಜನರು ಸರಕಾರೀ ನೌಕರಿಯಲ್ಲಿ ಶೇರುವರು. ಇವರು ಕೆಂಪು ಮೈಬಣ್ಣದವರಾಗಿ ಸುರೂಪಿಗಳಾಗಿ ಇದ್ದಾಗ್ಯೂ, ಉಡಿಗೆ ತೊಡಿಗೆಗಳನ್ನು ಧರಿಸಲಿಕ್ಕೆ ಅರಿಯರು. ಇವರು ವ್ಯವಹಾರದಲ್ಲಿ ಪ್ರಮಾಣಿಕರಲ್ಲೆಂಬ ಬಗ್ಗೆ "ಕಾಡು ಬೆಳಿದರೆ ಆಡು ಬಿಡು, ಊರು ಬೆಳಿದರೆ ಕೊಂಕಣಿಗನ ಬಿಡು" ಯೆಂಬ ಗಾದೆಯು ಸಾಕ್ಷಿ ಕೊಡುತ್ತದೆ. ಇವರು ಮನೆಯಲ್ಲಿ ಕೊಂಕಣೀ ಭಾಷೆಯನ್ನು ಕನ್ನಡ ಶಬ್ದಗಳನ್ನು ಬೆರಿಸಿ ಆಡುತ್ತಾರೆ. ಜೈಮಿನಿ ಮುಂತಾದ ಹಲಕೆಲವು ಕನ್ನಡ ಗ್ರಂಥಗಳನ್ನು ಸ್ವಲ್ಪ ಜನರು ಕಲಿಯುವರು. ಕೊಂಕಣಿಗರೆಲ್ಲರು ವೈಷ್ಣವ ಮತದವರುಂಟು. ಇವರ ಗುರುವು ಗೋವೆಯ ಶೀಮೆಯಲ್ಲಿ ಇರುತ್ತಾನೆ. ವೆಂಕಟರಮಣನೇ ಇವರ ಮುಖ್ಯ ದೈವತವು. ಇವರ ಮುಖ್ಯಾಹಾರ ಅಕ್ಕಿ, ಪಲ್ಯ, ಮೀನು. ಬೆಳಿಗ್ಗೆ ಎದ್ದು ಕೂಡಲೆ ತಂಗಳ ಅನ್ನ, ಮೊಸರು, ಉಣ್ಣುವರು. ಉಳ್ಳೀಗಡ್ಡಿ ಬೆಳ್ಳುಳ್ಳಿಗಳನ್ನು ಕೊಂಕಣಿಗರು ತಿನ್ನುವದಿಲ್ಲ.

ಕೊಂಕಣಿಗರಲ್ಲಿ ಯೆಲ್ಲ ಕೂಡಿ ಯೇಳು ಗೋತ್ರಗಳುಂಟು. ಅವು ಭರದ್ವಾಜ, ಕಶ್ಯಪ, ವತ್ಸ, ಜಮದಗ್ನಿ, ವಿಶ್ವಾಮಿತ್ರ, ಗೌತಮ, ಅತ್ರಿ. ಲಗ್ನದಲ್ಲಿ ಇವರು ಮದಿ ಮಗನ ಬಾಸಿಂಗಕ್ಕೆ ಬಿಳೇ ನೂಲಿನ ಜಾಳಿಗೆಯನ್ನು ಕಟ್ಟುವರು. ಶ್ರಾವಣ ಪೂರ್ಣಿಮೆಯಲ್ಲಿ ಕಣಕದ ಮೀನುಗಳನ್ನು ಮಾಡಿ ತಿನ್ನುವರು. ಕುಲದೇವತೆಯ ದರ್ಶನಕ್ಕೆ ಹೋದಾಗ ಚಿಕ್ಕ ಹೆಣ್ಣು ಮಕ್ಕಳ ತಲೆಗಳನ್ನು ಬೋಳಿಸುವರು.

ಕುಶಸ್ಥಳಿಗಳು (ಸಾರಸ್ವತರು).—ಇವರು ಶೇಣವೀ ಜನರೊಳಗಿನವರೇ. ಗೋವೇ ಪ್ರಾಂತದೊಳಗಿನ ಕುಶಸ್ಥಳಿ ಯೆಂಬ ಗ್ರಾಮದಿಂದ ಬಂದಕಾರಣ ಇವರಿಗೆ ಈ ಹೆಸರು ಬಂದದೆ. ಕಾನಡಾ ಜಿಲ್ಲೆಯಲ್ಲಿ ಬಂದು ನಿಂತಾಗ ಇವರು ಶೇಣವೀ ಜನರಿಂದ ಬೇರೆ ಆಗಿದ್ದಿಲ್ಲ. ಮುಂದೆ ಬಹುಕಾಲದ ನಂತರ ಶೇಣವೀ ಜನರ ಗುರುವು ತೀರಿದ ಬಳಿಕ ಅವನ ಇಬ್ಬರು ಶಿಷ್ಯರು ಅವನ ಗದ್ದಿಗೆಗಾಗಿ ವ್ಯಾಜ್ಯ ನಡಿಸಲು, ವೊಬ್ಬವನ ಪಕ್ಷವನ್ನು ವಹಿಸಿ ಕುಶಸ್ಥಳಿಗಳು ಶೇಣವೀ ಜನರಿಂದ ಬೇರೆಯಾದರು. ಶೇಣವೀ ಜನರಲ್ಲಿ ವತ್ಸ, ಕೌಶಿಕ, ಕೌಂಡಿಣ್ಯ, ಯೆಂಬ ಮೂರು ಗೋತ್ರಗಳುಂಟು. ಇವುಗಳ ಹೊರ್ತು ಭಾರದ್ವಾಜ, ಅತ್ರಿ, ಇವೆರಡು ಗೋತ್ರಗಳು ಕೊಂಕಣಿಗರಿಂದ ಇವರೊಳಗೆ ಬಂದಂತೆ ತೋರುತ್ತದೆ. ಅಂದರೆ ಇವೆರಡು ಗೋತ್ರಗಳ ಕೊಂಕಣಿಗರು ಸಾರಸ್ವತರೊಳಗೆ ಕೂಡಿರ ಬಹುದೆಂದು ತರ್ಕ ವುಂಟು. ಆದರೆ ಈಗ ಸಾರಸ್ವತರು ಶೇಣವೀ ಜನರ ಸಂಗಡಲೂ, ಕೊಂಕಣಿಗರ ಸಂಗಡಲೂ ಅನ್ನ ವ್ಯವಹಾರ ಶರೀರ ಸಂಬಂಧಗಳನ್ನು ಮಾಡುವದಿಲ್ಲ. ಇವರ ಉಡಿಗೆ, ತೊಡಿಗೆಗಳು, ಭಾಷೆ, ಧರ್ಮ, ಆಹಾರ, ನಡಾವಳಿ, ಇವೆಲ್ಲ ಶೇಣವೀ ಜನರಂತೆ ಇರುತ್ತವೆ. ಆದರೆ ಕುಲದೇವತೆಯ ದರ್ಶನಕ್ಕೆ ಹೋದಾಗ ಕೊಂಕಣಿಗರಂತೆ ಇವರು ತಮ್ಮ ಹೆಣ್ಣು ಮಕ್ಕಳ ತಲೆಗಳನ್ನು ಬೋಳಿಸುವರು. ಸಾರಸ್ವತರ ಗುರುವು ಹೊನ್ನಾವರದ ಹತ್ತರ ಶಿರಾಳಿ ಯೆಂಬ ಗ್ರಾಮದಲ್ಲಿ ಇರುತ್ತಾನೆ. ಇವರ ಉಡಿಗೆಗಳು ಶೇಣವೀ ಜನರಿಗಿಂತ ಪೋಲಿಮೆಯಾಗಿರುತ್ತವೆ, ಮತ್ತು ಇವರು ವಿದ್ಯಾಭ್ಯಾಸಕ್ಕೆ ಹೆಚ್ಚು ಮೆಚ್ಚಿದವರು. ಸರಕಾರೀ ನೌಕರಿಯೇ ಸಾರಸ್ವತರ ಮುಖ್ಯ ಉದ್ಯೋಗವು.

**ಕುಶಸ್ಥಳಿಗಳು.**

ಬಾರ್ದೇಶಕರರು.—ಗೋವೆಯ ಶೀಮೆಯೊಳಗಿನ ಬಾರ್ದೇಶವೆಂಬ ಹನ್ನೆರಡು ಗ್ರಾಮಗಳ ಪ್ರಾಂತದಿಂದ ಬಂದವರಾದ ಕಾರಣ ಇವರಿಗೆ ಈ ಹೆಸರು ಬಂದದೆ. ಇವರು ಮುಖ್ಯವಾಗಿ ಕಾರವಾಡ ಜಿಲ್ಲೆಯಲ್ಲಿ ಹೊನ್ನಾವರ, ಕುಮಟಾ, ಶಿರಶಿ, ತಾಲೂಕುಗಳಲ್ಲಿ ಇರುತ್ತಾರೆ. ಇವರು ಮೂಲದಲ್ಲಿ ಕೊಂಕಣಿಗರೊಳಗಿನವರು. ಆದರೆ ಬಹು ದಿವಸ ಕೊಂಕಣಿಗರಿಗೂ ಇವರಿಗೂ ಅನ್ನ ವ್ಯವಹಾರ ನಡಿಯುತ್ತಿದ್ದಿಲ್ಲ. ಒಳಗಡೆಯಲ್ಲಿ ಇವೆರಡೂ ವರ್ಗಗಳು ಮತ್ತೆ ಕೂಡಿರುತ್ತವೆ. ಈಗ ಪರಸ್ಪರ ಶರೀರ ಸಂಬಂಧಗಳು ಸಹ ಆಗುತ್ತವೆ. ಬಾರ್ದೇಶಕರರ ಆಚಾರ, ಆಹಾರ, ಧರ್ಮ, ಗೋತ್ರ, ಭಾಷೆ, ಮುಂತಾದವುಗಳೆಲ್ಲ ಕೊಂಕಣಿಗರಂತೆ. ಅವರಂತೆ ಇವರಾದರೂ ವೈಷ್ಣವ ಮತದವರಾಗಿ ಮುಖ್ಯವಾಗಿ ವ್ಯಾಪಾರದಿಂದ ಜೀವಿಸುವರು.

**ಬಾರ್ದೇಶಕರರು.**

ಕುಡಾಳದೇಶಕರರು.—ಇವರು ಕಾರವಾರ ಜಿಲ್ಲೆಯೊಳಗೆ ಸುಪಾ ತಾಲೂಕಿನಲ್ಲಿ ಮಾತ್ರ ಇದ್ದಾರೆ. ಗೋವೆಯೇ ಇವರ ಮೂಲಸ್ಥಾನವು. ಗೋವೆಯನ್ನು ಬಿಟ್ಟ ಬಳಿಕ ಕೆಲವು ಕಾಲ ಸಾವಂತವಾಡಿ ಸಂಸ್ಥಾನದಲ್ಲಿರುವ ಕುಡಾಳವೆಂಬ ಗ್ರಾಮದಲ್ಲಿ ವಾಸ ಮಾಡಿದ್ದರಿಂದ ಇವರಿಗೆ ಕುಡಾಳ

**ಕುಡಾಳ ದೇಶಕರರು.**

ದೇಶಕರರೆಂಬ ಹೆಸರು ಬಂದದೆ. ಇವರ ಗೋತ್ರ, ಕುಲದೇವತೆ, ಆಚಾರವಿಚಾರಗಳೆಲ್ಲ, ಶೇಣವೀ ಜನರಂತೆ. ಇವರು ಮನೆಯಲ್ಲಿ ಕೊಂಕಣೀ ಭಾಷೆಯನ್ನಾಡುವರು. ಇವರು ನಮ್ರ ಸ್ವಭಾವದವರಿರುತ್ತಾರೆ. ಶೇಣವೀ ಸಾರಸ್ವತರ ಕೂಡ ಇವರು ಊಟ ಮಾಡುವರು; ಆದರೆ ಆ ಜನರು ಇವರಲ್ಲಿ ಉಣ್ಣುವದಿಲ್ಲ. ಹೊಲ ಮಾಡಿಸುವದೇ ಇವರ ಮುಖ್ಯ ಉದ್ಯೋಗವು. ಇವರು ಸ್ಮಾರ್ತ ಮತದವರಿದ್ದು ಮೈಸೂರಲ್ಲಿರುವ ಶ್ರಿಂಗೇರೀ ಸ್ವಾಮಿಯೇ ತಮ್ಮ ಧರ್ಮಗುರುವೆಂದು ತಿಳಿಯುತ್ತಾರೆ. ಇವರು ಕನ್ನಡ ಮರಾಠಿ ಓದ ಬರಹವನ್ನು ಅಲ್ಪ ಸ್ವಲ್ಪ ಬಲ್ಲರು. ಈ ಜನರು ಇತ್ತಿತ್ತ ವ್ಯಾಪಾರದಲ್ಲಿ ಮನಸು ಹಾಕ ಹತ್ತಿದ್ದಾರೆ.

**ಪೇಡಣೇಕರರು.**

ಪೇಡಣೇಕರರು.—ಇವರು ಕಾರವಾಡ ಜಿಲ್ಲೆಯಲ್ಲಿ ಕಾರವಾಡ, ಕುಮಟಾ ತಾಲೂಕುಗಳಲ್ಲಿ ಇರುತ್ತಾರೆ. ಗೋವೇ ಪ್ರಾಂತದೊಳಗಿನ ಪೇಡಣೇ ಯೆಂಬ ಗ್ರಾಮದಿಂದ ಇವರಿಗೆ ಪೇಡಣೇಕರರೆಂಬ ಹೆಸರು ಬಂತು. ಇವರಾದರೂ ಕೊಂಕಣಿಗರೊಳಗಿನವರೇ. ಇವರ ಸಂಖ್ಯೆ ಬಹು ಸ್ವಲ್ಪ ಉಂಟು.

**ಲೇಖಕರು.**

ಲೇಖಕರು.—ಈ ವರ್ಗದಲ್ಲಿ ಮೂರು ಜಾತಿಗಳು ಬರುತ್ತವೆ. ಅವರೆಲ್ಲ ಕೂಡಿ ಬೆಳಗಾವೀ ಜಿಲ್ಲೆಯಲ್ಲಿ* ೪೨೬ ಜನರುಂಟು. ಈ ಮೂರು ಜಾತಿಗಳ ವಿವರ—ಕಾಯಸ್ಥ ಪರಭುಗಳು ೯೪; ಮುದ್ಲಿಯಾರರು ೨೪೪; ನಾಯಡುಗಳು ೪೪.

**ಕಾಯಸ್ಥ ಪರಭುಗಳು.**

ಕಾಯಸ್ಥ ಪರಭುಗಳು.—ಇವರು ಬೆಳಗಾವಿಯಲ್ಲಿಯೂ ಚಿಕ್ಕೋಡಿಯಲ್ಲಿಯೂ ವಾಸಿಸುತ್ತಾರೆ. ಖಾನಾಪುರ ತಾಲೂಕಿನಲ್ಲಿ ಪಾರಗಡವೆಂಬಲ್ಲಿ ಮೂರು ಮನೆತನಗಳುಂಟು. ಅವರನ್ನು ಶಿವಾಜಿಯು ಕುಲಾಬಾ ಪ್ರಾಂತದಿಂದ ತಂದನೆಂದು ಹೇಳುತ್ತಾರೆ. ಅವರಲ್ಲಿ ಒಂದು ಮನೆತನಕ್ಕೆ "ಶುಭೇದಾರ" ಯೆಂಬ ಪದವಿಯುಂಟು. ಅವರಿಗೆ ಸರಕಾರದಿಂದ ಕೆಲವು ನಗದ ನೇಮಣೂಕು ದೊರೆಯುತ್ತದೆ. ಈ ಜಿಲ್ಲೆಯೊಳಗಿನ ಕಾಯಸ್ಥರು ಕುಲಾಬಾ ಪ್ರಾಂತದೊಳಗಿನ ಕಾಯಸ್ಥರಿಗಿಂತ ಕಪ್ಪು ಇರುತ್ತಾರೆ. ಇವರ ಉಡಿಗೆ ಈ ಶೀಮೆಯ ಬ್ರಾಹ್ಮಣರಂತೆ ಇರುತ್ತದೆ. (ಮುಂಡಾಸವಿಲ್ಲ). ಮೀನು, ಕುರಿ, ಪಕ್ಷಿಗಳನ್ನು ಇವರು ತಿನ್ನುವರು; ಆದರೆ ಕೋಳಿಗಳನ್ನು ತಿನ್ನುವದಿಲ್ಲ. ಇವರು ಮನೆಯಲ್ಲಿ ಮರಾಠೀ ಭಾಷೆಯನ್ನಾಡುವರು, ನಿರ್ಮಲವಾಗಿ ಇರುವರು, ಮೈಮುರಿದು ಶ್ರಮ ಮಾಡುವರು. ಇವರಲ್ಲಿ ಬಹು ಜನರಿಗೆ ಭೂಮಿಗಳುಂಟು; ಇವರ ಕುಲದೇವತೆಗಳು ಖಂಡೋಬಾ, ಭವಾನಿ; ಪುರೋಹಿತರು ದೇಶಸ್ಥ ಬ್ರಾಹ್ಮಣರು; ಗುರು ಶಂಶೇಶ್ವರದ ಸ್ವಾಮಿಯು. ಇವರಲ್ಲಿ ವಿಧವೆಗಳ ತಲೆ ಬೋಳಿಸುವರು, ಹೆಣವನ್ನು ಸುಡುವರು. ಇವರ ಮಕ್ಕಳು ಶಾಲೆಗಳಲ್ಲಿ ಕಲಿಯುವರು. ಒಟ್ಟಿಗೆ ಕಾಯಸ್ಥರು ಸುಖದಿಂದಿದ್ದಾರೆ.

*ಈ ಜಾತಿಗಳು ಉಳಿದ ಮೂರು ಜಿಲ್ಲೆಗಳಲ್ಲಿಯೂ ಉಂಟು. ಆದರೆ ಆ ಜಿಲ್ಲೆಗಳಲ್ಲಿಯ ವಿವರಗಳನ್ನು ಮೂಲಗ್ರಂಥದಲ್ಲಿ ಕೊಟ್ಟಿಲ್ಲ.

**ಮುದ್ಲಿಯಾರರು.**

ಮುದ್ಲಿಯಾರರು.—ಇವರು ಮುಖ್ಯವಾಗಿ ಬೆಳಗಾವಿಯಲ್ಲಿರುತ್ತಾರೆ; ಲಿಂಗವಂತ ರಿಗಿಂತ ಗಿಡ್ಡರೂ ಅಶಕ್ತರೂ. ಇವರ ಮೈಬಣ್ಣ, ಕೂದಲೂ ಕಪ್ಪು; ಕಣ್ಣು ಕಪ್ಪು, ಮಿಣಕು ಳುವು, ಬುದ್ಧಿಯ ಲಕ್ಷಣ ತೋರಿಸುವಂಥವು; ಜನ್ಮಭಾಷೆ ತಮಿಳ; ಇವರು ನಿರ್ಮಲರೂ, ವ್ಯವಸ್ಥಿತರೂ, ಶ್ರಮ ಮಾಡುವವರೂ, ಸಮಾಧಾನಿಗಳೂ, ಮಿತವ್ಯಯಿಗಳೂ, ಸರಳ ಸ್ವಭಾವದವರೂ, ಪರರಿಗೆ ಸತ್ಕಾರ ಮಾ ಡುವಂಥವರೂ ಇರುತ್ತಾರೆ. ಇವರು ಮನೆಯಲ್ಲಿ ತಮಿಳ ಭಾಷೆ ಆಡುವರು. ಮುದ್ಲಿಯಾ ರರು ಬಳಗದವರನ್ನು ಬಹಳ ಪ್ರೀತಿಸುವರು; ಒಬ್ಬನು ಕ್ಷೇಮದಿಂದಿದ್ದರೆ ಅವನ ಮನೆ ಯಲ್ಲಿ ಹತ್ತಿ ಹೊಂದಿದವರು ಬಂದು ಶೇರುವರು. ಇವರಲ್ಲಿ ಕೆಲವರಿಗೆ ಭೂಮಿಗಳುಂಟು; ಆದರೆ ಇವರು ಹೊಲದ ಹೋರೆಯನ್ನು ತಾವೇ ಬಹುತರ ಮಾಡುವದಿಲ್ಲ, ಕೂಲಿಯಿಂದ ಮಾಡಿಸುವರು. ವ್ಯಾಪಾರ, ಅಂಗಡಿ, ಸರಕಾರೀ ಚಾಕರಿ, ಮುಂತಾದ ಹೋರೆಗಳನ್ನು ಇವರು ಮಾಡುವರು. ವಿಜಾಪುರ ಜಿಲ್ಲೆಯ ಮುದ್ಲಿಯಾರರು ವ್ಯಾಪಾರದ ಹೊರ್ತು ಬೇರೆ ಹೋರೆಯನ್ನು ಬಹುತರ ಮಾಡುವದಿಲ್ಲ. ಇವರ ಮನೆಗಳು ಸಣ್ಣವು, ಓರಣವಾ ಗಿರುತ್ತವೆ; ಆಹಾರದಲ್ಲಿ ಮದ್ಯ ಮಾಂಸಗಳಿಗೆ ಅಡ್ಡಿ ಇಲ್ಲ. ಗಂಡಸರು ೫ ಮೊಳದ ಪಂಜಿ ಯನ್ನುಟ್ಟುಕೊಂಡು ವಾಡಿಕೆಯಾಗಿ ಕೆಂಪು ರುಮಾಲ ಸುತ್ತುವರು. ಹೆಂಗಸರು ಕುಬ್ಬಸ ತೊಡುವರು, ಕಚ್ಚೆ ಹಾಕುವದಿಲ್ಲ. ವಿಧವೆಗಳು ಬಿಳಿ ಬಟ್ಟೆಯನ್ನುಡುವರು. ಬಡವರಿಗೆ ಸಹ ಕಿವಿಯಲ್ಲಿ ಆಭರಣವಿರಲಿಕ್ಕೆ ಬೇಕು. ಕೂಸು ಹುಟ್ಟಿದ ಕೂಡಲೆ ಪುರೋಹಿತನು ಜನ್ಮಪತ್ರಿಕೇ ಬರಿಯುತ್ತಾನೆ. ೧೦ನೇ, ೧೩ನೇ ದಿವಸ ಕೂಸಿಗೆ ಹೆಸರಿಡುವರು. ಆಗ ತಾಯಿ ತಂದೆಗಳು ನೆಲದ ಮೇಲೆ ಕೂತು ತಾಯಿಯು ಕೂಸನ್ನು ಎತ್ತಿಕೊಂಡ ಬಳಿಕ ಹೆಸರು ಮೂರು ಸಾರಿ ಗಟ್ಟಿಸಿ ನುಡಿಯುವರು. ಹೆಣ್ಣು ಮಕ್ಕಳ ಲಗ್ನವನ್ನು ೮ನೇ, ೯ನೇ ವರ್ಷ, ಇಲ್ಲವೆ ಮೈನೆರಿದ ಬಳಿಕ ಮಾಡುವರು. ಸಾಯುವ ಮನುಷ್ಯನ ಬಾಯೊಳಗೆ ತುಳಸೀ ಪತ್ರ, ನೀರು, ಹಾಕಿ ದೇವರ ನಾಮೋಚ್ಚಾರವನ್ನು ಗಟ್ಟಿಸಿ ಮಾಡುವರು. ಇದ ರಿಂದ ಸತ್ತವನಿಗೆ ಮೋಕ್ಷ ದೊರೆಯುತ್ತದಂತೆ. ಸತ್ತ ಬಳಿಕ ಹಿರಿ ಮಗನು ಸತ್ತವನ ತಲೆ ತೊಳಿದು ಯೆಣ್ಣೆ ಹಚ್ಚುವನು, ಹೆಣಕ್ಕೆ ಹೊಸ ವಸ್ತ್ರ ಹೊದಿಸಿ ಬಾಯೊಳಗೆ ಅಡಿಕೆ ಅಕ್ಕೀ ಕಾಳುಗಳನ್ನು ಹಾಕುವರು. ಹಿರಿ ಮಗನು ಬೆಂಕಿ ಹಿಡಿಯುವನು; ಹೆಣದ ಮುಂದೆ ವಾದ್ಯಗಳನ್ನು ಬಾರಿಸುವರು. ಸುಡುಗಾಡಿಗೆ ಹೋದ ಬಳಿಕ ಹೆಣವನ್ನು ದಕ್ಷಿಣಕ್ಕೆ ಕಾಲು ಮಾಡಿ ತಾಳಿಯ ಮೇಲೆ ಮಲಗಿಸಿ, ಅದರ ಬಾಯಿ ಮೇಲೆ ಬಳಗದವರು ಮೂ ರಾವರ್ತಿ ಅಕ್ಕೀ ಕಾಳುಗಳನ್ನು ಚಲ್ಲುವರು. ಹೆಣ ಸುಡುವ ವಿಧಾನವೆಲ್ಲ ಬ್ರಾಹ್ಮಣರಂತೆ. ಮುದ್ಲಿಯಾರರು ಮರಣದ ಸೂತಕವನ್ನು ೧೬ ದಿವಸ ಹಿಡಿದು, ಸೂತಕದಲ್ಲಿ ಒಪ್ಪೊತ್ತು ಮಾತ್ರ ಉಣ್ಣುವರು. ೧೭ನೇ ದಿವಸ ಬ್ರಾಹ್ಮಣರ ಭೋಜನ ಮುಂತಾದ ವಿಧಾನವೆಲ್ಲ ಬ್ರಾಹ್ಮಣರಂತೆ. ಮುದ್ಲಿಯಾರರು ಮನೆಯಲ್ಲಿ ದೇವರ ಮೂರ್ತಿಗಳನ್ನಿಟ್ಟು ಪೂಜಿಸಿ, ಬ್ರಾಹ್ಮಣರಿಗೆ ಭಕ್ತಿಯಿಂದ ನಡಕೊಳ್ಳುವರು. ಇವರು ಕ್ಷೇಮಿಗಳು, ನಿತ್ಯ ಕ್ರಮದಲ್ಲಿ

ಮಿತದಿಂದ ಹಣ ವೆಚ್ಚ ಮಾಡುವರು; ಆದರೆ ಲಗ್ನಕಾರ್ಯಗಳಲ್ಲಿ ದುಂದಿನಿಂದ ವೆಚ್ಚ ಮಾಡುವರು. ಇವರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಾರೆ.

**ನಾಯಡುಗಳು.**

ನಾಯಡುಗಳು.—ಮದ್ರಾಸಿನಿಂದ ಬಂದು ಬೆಳಗಾವಿಯಲ್ಲಿ ವಾಸಿಸುತ್ತಾರೆ; ಇವರ ಮೈಬಣ್ಣ ಮುಖಲಕ್ಷಣಗಳು ಮುಧ್ಲಿಯಾರರಂತೆ, ಆದರೆ ಜನ್ಮಭಾಷೆ ತೆಲಗು. ಇವರ ಉಡಿಗೆ, ನಡಾವಳಿಗಳೆಲ್ಲ ಬಹುತರ ಮುಧ್ಲಿಯಾರರಂತೆ. ಮುಧ್ಲಿಯಾರರಿಗೂ ಇವರಿಗೂ ಅನ್ನ ವ್ಯವಹಾರವಾಗುತ್ತದೆ, ಆದರೆ ಶರೀರ ಸಂಬಂಧವಾಗುವದಿಲ್ಲ. ಇವರ ಜಾತಿ ಸಂಬಂಧದ ವ್ಯಾಜ್ಯಗಳನ್ನು ದೇಸಾಯಿ ಶೆಟ್ಟಿಯೆಂಬ ಹಿರಿ ಮನುಷ್ಯನು ತೀರಿಸುವನು. ಇವರು ಕ್ಷೆಮಿಗಳಾಗಿ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವರು.

**ಲಿಂಗವಂತರು.**

## ಲಿಂಗವಂತರು (ಲಿಂಗಾಯತರು).—ಇವರು ಮುಂಬಯಿ ಕರ್ನಾಟಕದಲ್ಲಿ ಯಾವತ್ತು ಕಡೆಯಲ್ಲಿ ಇದ್ದಾರೆ. ಇವರ ಜನಸಂಖ್ಯೆ ೭೫೮೦೩೨ ಅಂದರೆ ಪೊಟ್ಟು ಹಿಂದೂ ಜನರಲ್ಲಿ ನೂರಕ್ಕೆ೩೦·೦೨ದಂತೆ ಇದ್ದಾರೆ. ಲಿಂಗಾಯತರಿಗೆ ವೀರ ಶೈವರೆಂತಲೂ ಹೆಸರುಂಟು. ಇವರೊಳಗೆ ಗೃಹಸ್ಥರೆಂತಲೂ ಜಂಗಮರೆಂತಲೂ ಯೆರಡು ಮುಖ್ಯ ಭೇದಗಳು ಉಂಟು. ಜಂಗಮರೊಳಗೆ ವಿರಕ್ತರೂ (ವಿವಾಹವಾಗದವರೂ) ಗುರು ಸ್ಥಳದವರೂ (ವಿವಾಹವಾದವರು) ಯೆಂದು ಯೆರಡು ಒಳಭೇದಗಳುಂಟು. ಲಿಂಗಾಯತರಲ್ಲಿ ಪೊಟ್ಟಿಗೆ ೩೧ ಪೊಳಭೇದಗಳು. ಧೂಳಪಾವಡದವರು, ಶೀಲವಂತರು, ಬಣಜಿಗರು, ಪಂಚಮಸಾಲಿಯವರು, ಇವರೇ ಮೇಲಾದ ಲಿಂಗಾಯತರು. ಇವರು ಬಹಳ ಧರ್ಮನಿಷ್ಠೆಯುಳ್ಳವರಿದ್ದು ಪಂಕ್ತಿಯಲ್ಲಿ ಅಯ್ಯನವರು ಇಲ್ಲದಾಗ ಇತರ ಲಿಂಗಾಯತರೊಡನೆ ಭೋಜನ ಮಾಡುವದಿಲ್ಲ. ಉಳಿದ ಲಿಂಗಾಯತರಿಗೆ ಉದ್ಯೋಗದ ಮೇಲಿಂದ ಹೆಸರು ಬಂದದೆ. ಲಿಂಗಾಯತರು ಅಘೋರ, ಈಶಾನ, ಸದ್ಯೋಜಾತ, ತತ್ಪುರುಷ, ವಾಮದೇವ, ಯೆಂಬ ಮಹಾ ದೇವನ ಐದು ಮುಖಗಳಿಂದ ನಾವು ಉತ್ಪನ್ನರಾಗಿದ್ದೇವೆಂತಲೂ ನಂದಿಯ ಅವತಾರವಾದ ಬಸವನು ಲಿಂಗಧಾರಣ ಮಾಡುವ ಪದ್ಧತಿಯನ್ನು ಪ್ರಚಾರದಲ್ಲಿ (೧೧೦೦-೧೧೬೦) ತಂದನೆಂತಲೂ, ಹೇಳುತ್ತಾರೆ. ಬಸವನು ಹಳೇ ಶೈವ ಮತವನ್ನು ಪುನರುಜ್ಜೀವನ ಮಾಡಿದ್ದು ನಿಜವಿರಬಹುದು.

ಬಸವೇಶ್ವರನ ತಂದೆಯ ಹೆಸರು ಮಾದಿಗರಾಯ, ತಾಯಿ ಮಹದಾಂಬಾ. ಇವರಿಬ್ಬರು ಆರಾಧ್ಯ ಬ್ರಾಹ್ಮಣರು. ಇವರು ವಿಜಾಪುರದ ನೈಋತ್ಯದಲ್ಲಿ ಸುಮಾರು ನಾಲ್ವತ್ತು ಮೈಲುಗಳ ಮೇಲೆ ಇರುವ ಬಾಗೇವಾಡಿಯ ಹತ್ತರ ಹಿಂಗಲೇಶ್ವರವೆಂಬಲ್ಲಿ ವಾಸವಾಗಿರುತ್ತಿದ್ದರು. ಇವರು ಶಿವನ ಪೂರ್ಣ ಭಕ್ತರಿದ್ದದರಿಂದ ಶಿವನ ವಾಹನನಾದ ನಂದಿಯು ಇವರ ಹೊಟ್ಟೆಯಲ್ಲಿ ಬಸವನೆಂಬ ಹೆಸರಿನಿಂದ ಅವತರಿಸಿದನಂತೆ. ಇವನ ಮುಂಜಿಯಲ್ಲಿ ಯಜ್ಞೋಪವೀತವನ್ನು ಹಾಕ ತೊಡಗಲು, ಬಸವನು ಗಾಯತ್ರಿ ಮಂತ್ರವನ್ನು ಅನ್ನಬೇಕಾದ್ದರಿಂದ ಯಜ್ಞೋಪವೀತ ಧರಿಸುವದಿಲ್ಲೆಂತಲೂ; ಶಿವನ ಹೊರ್ತು ಬೇರೆ ಗುರು

ವನ್ನು ನಾನು ನಂಬುವದಿಲ್ಲೆಂತಲೂ, ಹೇಳಿದ್ದರಿಂದ ತಂದೆಯು ಅವನನ್ನು ಮನೆಯ ಹೊರಗೆ ಅಟ್ಟಿದನು. ಬಳಿಕ ಅವನೂ ಅವನ ಸಹೋದರಿಯಾದ ಅಕ್ಕನಾಗಮ್ಮನೂ ಕೂಡಿ ಕಲ್ಯಾಣಕ್ಕೆ ಓಡಿ ಹೋದರು (೧೧೫೬). ಆಗ ಕಲ್ಯಾಣವು ಉತ್ತರ ಕರ್ನಾಟಕದಲ್ಲಿ ಮುಖ್ಯ ಪಟ್ಟಣವಿದ್ದು, ಅಲ್ಲಿ ಬಿಜ್ಜಳನೆಂಬ ಕಲಚೂರ್ಯ ಕುಲದ ಜೈನ ಅರಸು ಆಳುತ್ತಿದ್ದನು. ಬಸವನ ಸೋದರ ಮಾವನು ಕಲ್ಯಾಣಪುರದಲ್ಲಿ ದಂಡನಾಯಿಕನಾಗಿರುವದರಿಂದ ಈ ಬಸವನಿಗೆ ಆಶ್ರಯ ಕೊಟ್ಟು ತನ್ನ ಮಗಳಾದ ಗಂಗಮ್ಮನನ್ನು ಮದುವೆ ಮಾಡಿ ಕೊಟ್ಟನು. ಬಸವನು ಅರಸನಿಗೆ ತನ್ನ ಅಕ್ಕನನ್ನು ಮದುವೆ ಮಾಡಿ ಕೊಟ್ಟದ್ದರಿಂದ ಬಸವನ ವರ್ಚಸ್ಸು ಬೆಳೆಯಿತು. ಮುಂದೆ ಬಸವನ ಮಾವನು ತೀರಿದ ನಂತರ ಬಿಜ್ಜಳನು ಬಸವನನ್ನು ಮುಖ್ಯ ಮಂತ್ರಿಯಾಗಿಯೂ ಸೇನಾನಾಯಕನಾಗಿಯೂ ನೇಮಿಸಿದನು. ಬಸವನು ಅಧಿಕಾರವನ್ನು ಪಡೆದನಂತರ ಹಳೇ ಉದ್ಯೋಗಸ್ಥರನ್ನೆಲ್ಲ ತೆಗೆದು ಹಾಕಿ ಅವರಿಗೆ ಬದಲಾಗಿ ತನಗೆ ಬೇಕಾದ ಜನರನ್ನು ನೇಮಿಸಿ ಕೊಂಡನು. ಅವನು ಮನಸಿಗೆ ಬಂದಂತೆ ದಾನ ಧರ್ಮವನ್ನು ಮಾಡಿ ಬಹಳ ಜನರನ್ನು ವೊಲಿಸಿ ಕೊಂಡನು. ಅವನ ಅಧಿಕಾರವು ನೆಲೆಗೊಂಡ ಬಳಿಕ ಜೈನರು, ಸ್ಮಾರ್ತರು, ವೈಷ್ಣವರು, ಈ ಯಾವತ್ತು ಜನರ ಮತಗಳಿಗೆ ವಿರುದ್ಧವಾಗಿ ಲಿಂಗ ಪೂಜೆಯ ಧರ್ಮವನ್ನು ಬೋಧಿಸ ಹತ್ತಿದನು. ಕಡೆಗೆ ಬಿಜ್ಜಳನು ಬಸವನ ವರ್ತನವನ್ನು ನೋಡಿ ಶಿಟ್ಟಾದ್ದರಿಂದಲೂ ಜೈನರು ಹುರಿದುಂಬಿಸಿದ್ದರಿಂದಲೂ ಅವನನ್ನು ಹಿಡಿಯ ಬೇಕೆಂದು ಯತ್ನೈಸಿದನು. ಆದರೆ ಬಸವನು ಓಡಿ ಹೋಗಿ ದೊಡ್ಡ ಸೈನ್ಯವನ್ನು ಕೂಡಿಸಿ ಬಂಡಾಯವನ್ನು ಮಾಡಲು, ಬಿಜ್ಜಳನು ಬಸವನ ಬಂಡಾಯವನ್ನು ಮುರಿಯಲಿಕ್ಕೆ ಮುಂದರಿದು ಬಸವನಿಂದ ಅಪಜಯ ಪಟ್ಟನು. ತರುವಾಯ ಬಸವನು ಬಿಜ್ಜಳನಿಂದ ತನ್ನ ಮಂತ್ರೀ ಕೆಲಸವನ್ನು ಬಲಾತ್ಕಾರದಿಂದ ಪುನಃ ಸಂಪಾದಿಸಿದನು. ಮುಂದೆ ಬಸವನು ಬಿಜ್ಜಳನನ್ನು ಕೊಲ್ಲ ಬೇಕೆಂದು ನಿಶ್ಚೈಸಿ ಭೀಮಾ ನದಿಯ ದಂಡೆಯ ಮೇಲೆ ಬಿಜ್ಜಳನಿಗೆ ವಿಷಪ್ರಯೋಗ ಮಾಡಿದನು. ನಂತರ ಬಿಜ್ಜಳನ ಮಗನಾದ ರಾಯ ಮುರಾರಿಯು ತನ್ನ ತಂದೆಯನ್ನು ಕೊಂದದ್ದಕ್ಕೆ ಬಸವನ ಶೇಡು ತಕ್ಕೊಳ್ಳುವದಕ್ಕಾಗಿ ಅವನ ಮೇಲೆ ಸಾಗಿ ಹೋಗಲು, ಬಸವನು ಯೆದೆಗುಂದಿ ಉತ್ತರ ಕಾನಡಾ ಜಿಲ್ಲೆಯಲ್ಲಿರುವ ಉಳಿವಿಗೆ ಪಲಾಯನ ಮಾಡಿದನು. ಅಲ್ಲಿಯೂ ರಾಯ ಮುರಾರಿಯು ಅವನನ್ನು ಬೆನ್ನಟ್ಟಲಾಗಿ, ಬಸವನು ನಿರಾಶೆಯಿಂದ ವೊಂದು ಭಾವಿಯೊಳಗೆ ಮುಳುಗಿ ಮಡಿದು ಹೋದನೆಂದು ಜೈನರ ಇತಿಹಾಸದಿಂದ ತಿಳಿಯುತ್ತದೆ. ಆದರೆ ಈ ಬಗ್ಗೆ ಲಿಂಗಾಯತರು ಹೇಳುವ ವೃತ್ತಾಂತವು ಬೇರೆ ಉಂಟು. ಅದೇನೆಂದರೆ, ಬಸವನಿಗೂ ಬಿಜ್ಜಳ ಅರಸನಿಗೂ ಕದನ ಹುಟ್ಟಲಿಕ್ಕೆ ಬಿಜ್ಜಳನು ಬಸವನ ಇಬ್ಬರು ಜೀವದ ಗೆಳೆಯರ ಕಣ್ಣು ಕಿತ್ತಿಸಿದ್ದೇ ಕಾರಣವೆಂದು ಹೇಳುವರು. ಬಸವನು ಅರಸನ ಕ್ರೂರತನದ ಬಗ್ಗೆ ಅವನನ್ನು ಶಿಕ್ಷಿಸುವ ಕೆಲಸವನ್ನು ತನ್ನ ಸ್ನೇಹಿತನಾದ ಜಗದ್ದೇವನಿಗೆ ಬಿಟ್ಟುಕೊಟ್ಟು, ಕಲ್ಯಾಣವನ್ನು ಶಪಿಸಿ, ಬಳ್ಳಾರಿಯ ಪಶ್ಚಿಮಕ್ಕೆ ಸುಮಾರು ನೂರು ಹರದಾರಿಯ ಮೇಲೆ ಇರುವ ಸಂಗಮೇಶ್ವರವೆಂಬ ಪವಿತ್ರ ಸ್ಥಾನಕ್ಕೆ ಹೊರಟು ಹೋದನು. ಮುಂದೆ ಜಗದ್ದೇ

ವನು ಇಬ್ಬರು ಲಿಂಗವಂತ ಸನ್ಯಾಸಿಗಳ ಸಹಾಯದಿಂದ ಬಿಜ್ಜಳನನ್ನು ಕೊಂದನಂತೆ ಬಸವನು ಹಳೇ ಧರ್ಮವನ್ನು ಪುನಃ ಸ್ಥಾಪಿಸುವ ಕೆಲಸವನ್ನು ಮುಗಿಸಿದ್ದರಿಂದ ಈ ಜನ್ಮ ದಿಂದ ಮುಕ್ತಿಯಾಗಬೇಕೆಂದು ಶಿವನನ್ನು ಬೇಡಿಕೊಳ್ಳಲಾಗಿ ಶಿವನೂ ಪಾರ್ವತಿಯೂ ಬಂದು ಬಸವನನ್ನು ಯೆತ್ತಿಕೊಂಡು ಹೋಗಲು, ಅವನು ಅದ್ರುಶ್ಯನಾದನು. ಬಸವನು ಯೆಷ್ಟೋ ಅಮಾನುಷ ಕೃತ್ಯಗಳನ್ನು ಮಾಡಿದ್ದರಿಂದ ಅವನ ಧರ್ಮವು ಹಬ್ಬಿತೆಂದು ಲಿಂಗವಂತರು ಹೇಳುವರು. ಬಸವನ ಧರ್ಮದ ಮುಖ್ಯವಾದ ತತ್ವಗಳು ಯಾವವೆಂ ದರೆ, ಮನುಷ್ಯನನ್ನು ರಕ್ಷಿಸುವ ದೇವರು ವೊಬ್ಬನೇ. ಯಜ್ಞ, ಯಾಗ, ತಪಶ್ಚರ್ಯ, ಯಾತ್ರೆ, ಉಪವಾಸ, ಇವುಗಳನ್ನು ಮಾಡುವ ಅವಶ್ಯವಿಲ್ಲ. ಲಿಂಗಧಾರಣ ಮಾಡುವವ ರೆಲ್ಲರು ಸಮಾನಸ್ಕಂಧರಾದದರಿಂದ ಜಾತಿ ಭೇದವಿಲ್ಲ. ಶಿವನಲ್ಲಿ ನಂಬಿಗೆಯುಳ್ಳವನೂ ಲಿಂಗವನ್ನು ಧಾರಣ ಮಾಡುವವನೂ ಯಾವಾಗಲೂ ಶುಚಿಯಾಗಿರುವದರಿಂದ, ಹಡೆದಾ ಗ, ಮುಟ್ಟಾದಾಗ, ಮರಣ ವೊದಗಿದಾಗ, ಲಿಂಗವಂತನಿಗೆ ಅಶುಚಿಯು ತಟ್ಟದು. ಶಿವ ನಲ್ಲಿ ನಿಜವಾಗಿ ನಂಬಿಗೆಯುಳ್ಳವನು ನೆಟ್ಟಗೆ ಸ್ವರ್ಗ ಲೋಕಕ್ಕೆ ತೆರಳುವನು. ಶಿವನು ಸರ್ವಶಕ್ತನಾಗಿರುವದರಿಂದ ಭೂತ, ಪಿಶಾಚ, ಯಂತ್ರ, ಮಂತ್ರ, ತಂತ್ರಗಳಿಂದ ಲಿಂಗ ವಂತನಿಗೆ ಯೇನೂ ಅಪಾಯವಾಗದು. ಆದರೆ ಈ ಧರ್ಮಸಂಬಂಧವಾದಂಥ ಯೆಷ್ಟೋ ತತ್ವಗಳನ್ನು ಶೀಲವಂತ ಬಣಜಿಗ ಮುಂತಾದ ಯಾವ ಲಿಂಗವಂತರೂ ಪಾಲಿಸುವದಿಲ್ಲ. ಲಿಂಗವೇ ಮುಖ್ಯ ದೇವರೆಂದು ತಿಳಿದಾಗ್ಯೂ ವೀರಭದ್ರ, ಮಲ್ಲಿಕಾರ್ಜುನ, ದ್ಯಾಮವ್ವ, ದುರಗವ್ವ, ಹನುಮಂತ, ಮುಂತಾದ ದೇವತೆಗಳನ್ನು ಪೂಜಿಸುವರು. ಇವರಲ್ಲಿ ವಿಧವೆ ಯರಿಗೆ ಪುನರ್ವಿವಾಹ ಉಂಟು. ಇವರಲ್ಲಿ ವ್ಯಾಪಾರಸ್ಥರೂ, ಸರಕಾರಿ ನೌಕರರೂ, ವೊಕ್ಕಲಿಗರೂ, ಗಾಣಿಗರೂ, ಶಿಂಪಿಗರೂ, ಬಣ್ಣಗಾರರೂ, ಪತ್ತಾರರೂ, ನೇಕಾರರೂ, ಕುಂಬಾರರೂ, ಹೂಗಾರರೂ, ಕೆಲಸಿಗರೂ, ಅಗಸರೂ, ಮುಂತಾದ ಅನೇಕ ಉದ್ಯೋ ಗಗಳನ್ನು ಮಾಡುವ ಜನರುಂಟು. ಇವರ ಭಾಷೆ ಕನ್ನಡ. ಇವರು ಮದ್ಯ ಮಾಂಸಗಳ ನ್ನು ತಿನ್ನುವದಿಲ್ಲ, ಧಾನ್ಯ, ಕಾಯಿಪಲ್ಲೆಗಳೇ ಇವರ ಆಹಾರವು. ಕೂಸು ಹುಟ್ಟಿದ ಕೂಡಲೆ ಅದರ ಕೊರಳಲ್ಲಿ ಲಿಂಗ ಕಟ್ಟಿ, ಬಳಿಕ ಲಿಂಗವನ್ನು ತೊಟ್ಟಿಲಿನ ಕಾಲಿಗೆ ಕಟ್ಟು ವರು. ಮರಣದ ಕಾಲಕ್ಕೆ ಜಂಗಮರ ಪಾದೋದಕವನ್ನು ಸಾಯುವ ಮನುಷ್ಯನ ಬಾಯಲ್ಲಿ ಹಾಕುವರು. ಮತ್ತು ಜಂಗಮರಿಗೂ ಬಳಗದವರಿಗೂ ಊಟಕ್ಕೆ ಹಾಕುವರು. ಆ ಮೇಲೆ ಜಂಗಮನು ತನ್ನ ಬಲಗಾಲನ್ನು ಸಾಯುವ ಮನುಷ್ಯನ ತಲೆಯ ಮೇಲೆ ಇಡುವನು. ಸತ್ತ ಬಳಿಕ ವೊಂದೆರಡು ದಿವಸ ಹೆಣವನ್ನು ಇಟ್ಟು ಆಪ್ತ ಇಷ್ಟರೆಲ್ಲರು ಕೂಡಿ ವೊಳ್ಳೇ ಸಂಭ್ರಮದಿಂದ ವೈದು ಹುಗಿಯುವರು. ಲಿಂಗವಂತರು ತಮ್ಮ ಮಕ್ಕ ಳಿಗೆ ವಿದ್ಯ ಕಲಿಸುವರು. ಒಟ್ಟಿಗೆ ನೋಡಲಾಗಿ ಇವರು ಸೌಖ್ಯದಿಂದ ಇದ್ದಾರೆ.

ಲಿಂಗವಂತ (ವೀರಶೈವ) ಮತವು ಸಾಮಾನ್ಯತಃ ಅದ್ವೈತ ಮತದ ಹಾಗೇ ಇರು ತ್ತದೆ. ಇದರಲ್ಲಿ ವಿಶೇಷವೇನೆಂದರೆ, ಪ್ರಕೃತಿಯ ಯೋಗದಿಂದ ಸಗುಣ ಬ್ರಹ್ಮನಾದ ಶಿವನಿಗೂ ಅವನ ಕುಟುಂಬದವರಿಗೂ ಹೊರ್ತಾಗಿ ಬೇರೆ ಯಾವ ದೇವತೆಗೂ ಕೈಮುಗಿ

ಯ ಬಾರದು. ಶಿವನ ಆತ್ಮವೂ ಮನುಷ್ಯನ ಆತ್ಮವೂ ಒಂದೇ. ಮೈಮೇಲಿನ ಲಿಂಗವು ಆ ಆತ್ಮದ ಕುರುಹೆಂದು ಅದನ್ನು ಪೂಜಿಸ ಬೇಕು. ಮೂರ್ತಿಗಳನ್ನು ಪೂಜಿಸ ಕೂಡದು. ದಾನವೆಂಬ ಕರ್ಮದ ಹೊರ್ತು ಬೇರೆ ಯಾವ ಕರ್ಮವೂ ಮುಕ್ತಿಗೆ ಅವಶ್ಯವಿಲ್ಲ. ಲಿಂಗವಂತರಿಗೆ ಅಷ್ಟಾವರಣಗಳು (ಎಂಟು ಹೊದಿಕೆಗಳು) ಇರತಕ್ಕವು. ಅವು ೧. ವಿಭೂತಿ, ೨. ರುದ್ರಾಕ್ಷ, ೩. ಮಂತ್ರ (ಶಿವಾಯನಮಃ), ೪. ಗುರು, ೫. ಲಿಂಗ, ೬. ಜಂಗಮ, ೭. ಪಾದೋದಕ, ೮. ಪ್ರಸಾದ. ಲಿಂಗವಂತರ ಗುರುಗಳು ೫ ಜನರುಂಟು. ಅವರಿಗೆ ಪಂಚಾಚಾರ್ಯರೆನ್ನುವರು. ರೇವಣಾರಾಧ್ಯ, ಮರುಳಾರಾಧ್ಯ, ಪಂಡಿತಾರಾಧ್ಯ, ಏಕೋರಾಮ, ವಿಶ್ವಾರಾಧ್ಯ. ಇವರು ಬಸವನಿಗಿಂತ ಪ್ರಾಚೀನರು. ಇವರೇ ಅಯ್ಯತನವನ್ನು (ಬಹುಶಃ ವೀರಶೈವ ಮತವನ್ನು) ಉಂಟು ಮಾಡಿದರೆಂದು ಹೇಳುತ್ತಾರೆ. ಈಗಿನ ಅಯ್ಯಗಳಲ್ಲಿ ಪ್ರತಿ ವೊಬ್ಬನು ಈ ಐವರಲ್ಲಿ ವೊಬ್ಬನ ಸೂತ್ರದವನು, ಅಂದರೆ ಶಿಷ್ಯ ಮನೆತನದವನು ಇರುತ್ತಾನೆ. ಒಂದೇ ಸೂತ್ರದವರಲ್ಲಿ ಶರೀರ ಸಂಬಂಧವಾಗುವದಿಲ್ಲ. ಮುಂದೆ ಅಯ್ಯನಾಗ ತಕ್ಕ ಹುಡುಗನಿಗೆ ೮ನೇ ವರ್ಷ ಮೌಂಜಿಯ ಹಾಗೆ "ಅಯ್ಯತನ"ವೆಂಬ ಸಂಸ್ಕಾರವನ್ನು ಮಾಡುತ್ತಾರೆ.

ಲಿಂಗವಂತರ ಮುಖ್ಯ ಗುರುವು ಮೈಸೂರ ಶೀಮೆಯಲ್ಲಿ ಚಿತ್ರಗಲದುರ್ಗವೆಂಬಲ್ಲಿ ಇರುತ್ತಾನೆ. ಆ ಗುರುವಲ್ಲದೆ, ಲಿಂಗವಂತರ ಮೇಲೆ ಹೆಚ್ಚುಕಡಿಮೆ ಅಧಿಕಾರ ನಡಿಸುವಂಥ, ಬಹು ಜನರಿಗೆ ಗುರುಸ್ಥಾನವೆನಿಸುವಂಥ ಅಯ್ಯಗಳು ಬಹಳ ಕಡೆಯಲ್ಲಿ ಇರುತ್ತಾರೆ.

ಲಿಂಗವಂತರಲ್ಲಿ ನಿಜ ಲಿಂಗವಂತರು, ಸ್ವೀಕರಿಸಿದ ಲಿಂಗವಂತರು, ಅರ್ಧ ಲಿಂಗವಂತರು, ಯೆಂಬ ಮೂರು ದೊಡ್ಡ ವರ್ಗಗಳನ್ನು ಮಾಡ ಬಹುದು. ಮೊದಲನೇ ನಿಜ ಲಿಂಗವಂತರೆಂಬ ವರ್ಗದಲ್ಲಿ ಜಂಗಮರು, ಶೀಲವಂತರು, ಬಣಜಿಗರು, ಪಂಚಮಸಾಲಿಯವರು, ಯೆಂಬ ನಾಲ್ಕು ಜಾತಿಗಳು ಬರುತ್ತವೆ.* ಇವೇ ಲಿಂಗವಂತರಲ್ಲಿ ಯೆಲ್ಲಕ್ಕೂ ಶ್ರೇಷ್ಠ ಜಾತಿಗಳು ಇರುತ್ತವೆ. ಕಡಿಮೇ ಜಾತಿಗಳ ಜನರು ಈ ಜಾತಿಗಳಲ್ಲಿ ಶೇರಲಾರರು. ಈ ನಾಲ್ಕು ಜಾತಿಗಳ ಆಚಾರ ವ್ಯವಹಾರಾದಿಗಳು ಹ್ಯಾಗಂದರೆ—

**ಜಂಗಮರು.** ಜಂಗಮರು.—ಜಂಗಮರೆಂದರೆ ತಿರುಗಾಡುವ ಶಿವಸ್ವರೂಪಿಗಳು. ಇವರು ಯಾವತ್ತು ಲಿಂಗವಂತ ಜಾತಿಗಳಿಗೆ ವಂದ್ಯರೆನಿಸಿಕೊಳ್ಳುತ್ತಾರೆ. ಇವರಲ್ಲಿ ವಿರಕ್ತರು, ಸಾಹೂನ್ಯರು, ಗಣಾಚಾರಿಗಳು, ಮಠಪತಿಗಳು, ಯೆಂಬ ನಾಲ್ಕು ವೊಳಭೇದಗಳಿರುತ್ತವೆ. ಇವರಲ್ಲಿ ವಿರಕ್ತರೇ ಯೆಲ್ಲಕ್ಕೂ ಶ್ರೇಷ್ಠರು. ಇವರು ಲಗ್ನ ಮಾಡಿಕೊಳ್ಳುವದಿಲ್ಲ; ಹೆಂಗಸರ ಮೋರೆಯನ್ನು ನೋಡುವದಿಲ್ಲ; ಜಡಿ ಬೆಳಿಸುವರು, ಗಡ್ಡ ಬಿಡುವರು, ಮಠದಲ್ಲಿ ವಾಸಿಸುವರು, ಕೌಪೀನ ಧರಿಸುವರು, ಶಾಟಿಯನ್ನು ಹೊರುವರು, ಭಿಕ್ಷೆಯಿಂದ ಜೀವಿಸುವರು. ಇವರ ಕೊರಳಲ್ಲಿಯೂ ತಲೆಯ

* ಮೂಲ ಇಂಗ್ಲಿಷ ಗ್ರಂಥದಲ್ಲಿ ಈ ನಾಲ್ಕು ಜಾತಿಗಳ ಸಂಖ್ಯೆಗಳನ್ನು ಬೇರೆ ಬೇರೆಯಾಗಿ ಯಾವ ಜಿಲ್ಲೆಯಲ್ಲಿಯೂ ವಿವರಿಸಿಲ್ಲ. ವಿಜಾಪುರ ಜಿಲ್ಲೆಯಲ್ಲಿ ಈ ನಾಲ್ಕು ಜಾತಿಗಳ ವೊಟ್ಟು ಸಂಖ್ಯೆಯು ೧೧೦೦೦೦ ಇರುತ್ತದೆ.

ಮೇಲಿನ ಟೊಪ್ಪಿಗೆಗೂ ರುದ್ರಾಕ್ಷ ಮಾಲೆಗಳಿರುವವು. ಸಾಮಾನ್ಯ ಜಂಗಮರಿಗೆ ವಾಡಿಕೆಯಾಗಿ ಅಯ್ಯಗಳೆಂದೆನ್ನುವರು. ವಿರಕ್ತರಂತೆ ಇವರಿಗೂ "ಅಯ್ಯತನದ" ಸಂಸ್ಕಾರವಾಗುತ್ತದೆ. ಇವರು ಲಗ್ನ ಮಾಡಿಕೊಂಡು ಮನೆಗಳಲ್ಲಿ ವಾಸಿಸುವರು. ಭಿಕ್ಷೆಯೇ ಇವರ ಉಪಜೀವನದ ಹೋರೆಯು; ಆದರೆ ಕೆಲವರು ವೊಕ್ಕಲತನ, ವ್ಯಾಪಾರ, ಮುಂತಾದ ಹೋರೆಗಳನ್ನು ಮಾಡುವರು. ಯಾವತ್ತು ಬಗೆಯ ಲಿಂಗವಂತರಲ್ಲಿ ಲಗ್ನಕಾರ್ಯಗಳನ್ನೂ ಮರಣದ ಸಂಸ್ಕಾರಗಳನ್ನೂ ಮಾಡಿಸುವವರು ಇವರೆ. ಇವರಲ್ಲಿ "ಪಟದಯ್ಯ" ಯೆಂಬ ಪದವಿಯರು ಕೆಲವರಿರುತ್ತಾರೆ. ಅವರು ಭಿಕ್ಷೆ ಬೇಡುವಾಗ ಬಲಗಾಲಿಗೆ ಜಂಗು ಕಟ್ಟುವರು. ಕೆಲವರು ನಾನಾ ಪ್ರಕಾರದ "ಕಾಯಕ"ಗಳಿಂದ, ಅಂದರೆ ಶರೀರವನ್ನು ವ್ಯಥೆ ಪಡಿಸುವದರಿಂದ, ಉಪಜೀವನ ಮಾಡುವರು. ಮಠಪತಿಗಳಿಗೂ ಗಣಾಚಾರಿಗಳಿಗೂ ಅಯ್ಯತನದ ಸಂಸ್ಕಾರವಾಗುವದಿಲ್ಲ; ಆದದರಿಂದ ಇವರು ಸಾಮಾನ್ಯರಿಗಿಂತ ಕಡಿಮೇ ಯೋಗ್ಯತೆಯವರೆಂದು ಯೆಣಿಸಲ್ಪಡುತ್ತಾರೆ. ಇವರು ಪರಸ್ಪರ ಶರೀರ ಸಂಬಂಧ ಮಾಡುವರು; ಆದರೆ ಸಾಮಾನ್ಯರು ಇವರ ಕೂಡ ಶರೀರ ಸಂಬಂಧ ಮಾಡುವದಿಲ್ಲ. ಇವರು ವಿರಕ್ತರಿಗೂ ಸಾಮಾನ್ಯ ಅಯ್ಯಗಳಿಗೂ ಊಳಿಗದವರಂತೆ ಸಹಾಯ ಮಾಡತಕ್ಕವರು. ಈ ಕಾರಣದಿಂದ ಮಠಪತಿಗಳಿಗೂ ಗಣಾಚಾರಿಗಳಿಗೂ ಇನಾಮು ಭೂಮಿಗಳಿರುತ್ತವೆ. ಹೆಣ ಶೃಂಗರಿಸುವ ಕೆಲಸವನ್ನು ಮಠಪತಿಯು ಮಾಡಲಿಕ್ಕೆ ಬೇಕು; ಉಡಿಕೆಗಳನ್ನು ಗಣಾಚಾರಿಯ ಹೊರ್ತು ಯಾರೂ ಮಾಡಿಸುವದಿಲ್ಲ. ಯಾರಾದರು ವಿರಕ್ತರು ಬಂದರೆ, ಅವರು ಹೇಳಿದ ಕೆಲಸವನ್ನು ಗಣಾಚಾರಿಯು ಮಾಡಲಿಕ್ಕೆ ಬೇಕು. ಲಗ್ನಕಾರ್ಯವು ಗಣಾಚಾರಿಯ ಹೊರ್ತು ನಡಿಯುವದಿಲ್ಲ. ಮಠಪತಿ, ಗಣಾಚಾರಿ, ಇವರ ಮಕ್ಕಳಿಗೆ ಅಯ್ಯತನದ ಸಂಸ್ಕಾರವಾದರೆ ಅವರು ಸಾಮಾನ್ಯ ಜಂಗಮರಾಗ ಬಹುದು. ಚಲವಾದಿಗಳು, ಸಮ್ಮಗಾರರು, ಇವರ ಹೊರ್ತು ಲಿಂಗಧಾರಣ ಮಾಡುವಂಥ ಬೇಕಾದ ಜಾತಿಯವರ ಮನೆಯಲ್ಲಿ ಜಂಗಮರು ಊಟಕ್ಕೆ ಹೋಗುವರು.

**ಶೀಲವಂತರು.**

ಶೀಲವಂತರ ಸಂಖ್ಯವು ಬಹು ಸ್ವಲ್ಪವಿರುತ್ತದೆ. ಇವರು ಅಂಗಡಿಯ ವ್ಯಾಪಾರ, ಸೊನ್ನಗಾರಿಕೆ, ಮುಂತಾದ ಹೋರೆಗಳನ್ನು ಮಾಡುವರು. ಇವರು ತಮ್ಮ ನೀರು ಸಹ ಪರರ ದೃಷ್ಟಿಗೆ ಬೀಳಗೊಡುವದಿಲ್ಲವಾದ್ದರಿಂದ ಇವರಿಗೆ ಈ ಹೆಸರು ಬಂದದೆ. ವಿಜಾಪುರ ಜಿಲ್ಲೆಯ ಇಲಕಲ್ಲು ಮುಂತಾದ ಗ್ರಾಮಗಳಲ್ಲಿ ವಾಸಿಸುವ ಶೀಲವಂತರು ಹೊಳೆ ಹಳ್ಳಗಳ ದಂಡೆಯಲ್ಲಿ ವೊರತಿಗಳನ್ನು ಅಗಿದು ಅದರಲ್ಲಿಯ ನೀರು ಮಾತ್ರ ತಕ್ಕೊಳ್ಳುವರು.

**ಬಣಜಿಗರು.**

ನಿಜಲಿಂಗವಂತರಲ್ಲಿ ಬಣಜಿಗರ ಸಂಖ್ಯವು ಜಂಗಮರಿಗಿಂತ ಹೆಚ್ಚಿರುತ್ತದೆ. ಇವರನ್ನು ನಾಲ್ಕೂ ಜಿಲ್ಲೆಗಳಲ್ಲಿ ಕಾಣ ಬಹುದು. ಇವರ ಮುಖ್ಯ ಹೋರೆ ವ್ಯಾಪಾರವು; ಆದರೆ ಕೆಲವರು ವೊಕ್ಕಲತನವನ್ನೂ ಮಾಡುವರು. ಇವರಲ್ಲಿ "ಲೋಕಬಳಿಕೆ," "ಧೂಳಪಾವಡ", ಯೆಂಬ ಯೆರಡು ಭೇದಗಳಿರುತ್ತವೆ. ವಿಜಾಪುರ ಜಿಲ್ಲೆಯಲ್ಲಿ "ಹೊಳೆಯಾಚೆ ಬಾಳ್ಕಿಯವರು," "ಚಳಗೇರಿ ಬಾಳ್ಕಿ

ಯವರು", ಯೆಂಬೆರಡು ಬೇರೆ ವರ್ಗಗಳುಂಟು. ಇವರಲ್ಲಿ ಪರಸ್ಪರ ಅನ್ನ ವ್ಯವಹಾರ ಶರೀರ ಸಂಬಂಧಗಳಾಗುತ್ತವೆ.

**ಪಂಚಮಸಾಲಿಯವರು.**

ಮೇಲಿನ ಮೂರು ವರ್ಗಗಳಿಗಿಂತ ಪಂಚಮಸಾಲಿಯವರ ಸಂಖ್ಯೆಯು ಬಹಳ ಹೆಚ್ಚಿರುತ್ತದೆ. ಒಕ್ಕಲತನವೇ ಇವರ ಹೋರೆಯು. ಬಣಜಿಗರೂ ಶೀಲವಂತರೂ ಪಂಚಮಸಾಲಿಯವರಿಂದಲೇ ಉಂಟಾದರೆಂದು ಹೇಳುತ್ತಾರೆ. ಈ ಹೊತ್ತಿಗೆ ಪಂಚಮಸಾಲಿಯ ಮನುಷ್ಯನು ದೀಕ್ಷೆಯನ್ನು ತಕ್ಕೊಂಡು ಬಣಜಿಗನಾಗಲಿಕ್ಕೆ ಅಡ್ಡಿ ಇಲ್ಲ. ಪಂಚಮಸಾಲಿಯ ಹುಡುಗರು ಅಯ್ಯತನದ ಸಂಸ್ಕಾರ ಹೊಂದಿ ಜಂಗಮರಾಗ ಬಹುದು; ವಿರಕ್ತರಾಗಲಿಕ್ಕೆ ಸಹ ಅವರಿಗೆ ಅಡ್ಡಿ ಇಲ್ಲ. ಈ ಅಧಿಕಾರವು ಸ್ವೀಕರಿಸಿದ ಲಿಂಗವಂತರಿಗಿಲ್ಲ. ಪಂಚಮಸಾಲಿಯವರಂತೆ ಬಣಜಿಗರೂ ಶೀಲವಂತರೂ ಜಂಗಮರಾಗ ಬಹುದು.

ಮೇಲಿನ ನಾಲ್ಕು ಜಾತಿಗಳಲ್ಲಿ ಅನ್ನ ವ್ಯವಹಾರ, ಶರೀರ ಸಂಬಂಧ, ಇವುಗಳ ನಿಯಮಗಳು ತೊಡಕುಳ್ಳವಿರುತ್ತವೆ. ಜಂಗಮ, ಶೀಲವಂತ, ಬಣಜಿಗ, ಪಂಚಮಸಾಲಿ, ಇವರ ಯೋಗ್ಯತೆಯು ಉತ್ತರೋತ್ತರವಾಗಿ ಕಡಿಮೆಯಾಗುತ್ತದೆಂದು ಯೆಣಿಸಲ್ಪಡುತ್ತದೆ. ಕೆಳಗಿನ ಜಾತಿಯವರು ಮೇಲಿನ ಜಾತಿಯವರ ಮನೆಯಲ್ಲಿ ಉಣ್ಣ ಬಹುದು; ಆದರೆ ಮೇಲಿನ ಜಾತಿಯವರು ಕೆಳಗಿನ ಜಾತಿಯವರ ಮನೆಯಲ್ಲಿ ಉಣ್ಣ ಕೂಡದು; ಇದು ಸಾಧಾರಣ ನಿಯಮವು. ಇದಕ್ಕೆ ಅಪವಾದಗಳು ಹಲವುಂಟು. ಜಂಗಮರು ಹಿಂದೆ ಹೇಳಿದಂತೆ ಲಿಂಗಧಾರಣ ಮಾಡಿದಂಥ ಬೇಕಾದ ಜಾತಿಯವರಲ್ಲಿ ಊಟಕ್ಕೆ ಹೋಗುವರು. ಮಠದಲ್ಲಿ ಜಾತಿ ನಿರ್ಬಂಧವಿಲ್ಲದೆ ಬೇಕಾದ ಜಾತಿಯ ಲಿಂಗವಂತರು ವೊಂದೇ ಪಂಗ್ತಿಯಲ್ಲಿ ಕೂತು ಊಟ ಮಾಡುವರು; ಆದರೆ ಅಲ್ಲಿ ಜಂಗಮನಿರಲಿಕ್ಕೆ ಬೇಕು. ಜಂಗಮನು ಭಿಕ್ಷೆ ಬೇಡಿ ತಂದ ಅನ್ನವನ್ನು ಹಲವು ಜಾತಿಗಳ ಜನರು ವೊಂದೇ ಪಂಗ್ತಿಯಲ್ಲಿ ಕೂತು ಉಣ್ಣ ಬಹುದು. ಇದೇ ಮೇರೆಗೆ ಅರವಟ್ಟಿಗೆಯಲ್ಲಿಯೂ ಹೊಲದಲ್ಲಿಯೂ ಜಾತಿ ನಿರ್ಬಂಧದ ಕಟ್ಟಳೆಯು ಸಡಿಲಾಗುತ್ತದೆ. ಯಾವನಾದರೂ ಲಿಂಗವಂತನು ಹೊಸ ಗಡಿಗೆಗಳಲ್ಲಿ ಅಡಿಗೇ ಮಾಡಿಸಿ, ಉತ್ತಮ ಕುಲದ ಲಿಂಗವಂತರನ್ನು ಭೋಜನಕ್ಕೆ ಕರಿದರೆ, ಅವರು ನಿರಾತಂಕವಾಗಿ ಅವನ ಮನೆಯಲ್ಲಿ ಭೋಜನ ಮಾಡಿ ಬರುವರು. ಆದರೆ ನಾದಿಗರು, ಗೌಳಿಗರು, ಅಗಸರು, ಬೇಡರು, ಮುಂತಾದ ಕುಲಗಳಿಗೆ ಈ ಮೇಲಿನ ಕಟ್ಟಳೆಗಳು ಹತ್ತುವದಿಲ್ಲ.

ಇದೇ ಮೇರೆಗೆ ಕೆಳಗಿನ ಜಾತಿಯವರ ಹೆಣ್ಣನ್ನು ಮೇಲಿನ ಜಾತಿಯವರು ಮಾಡಿಕೊಳ್ಳ ಬಹುದು. ಆ ಹೆಣ್ಣಿಗೆ ದೀಕ್ಷೆಯನ್ನು ಮಾತ್ರ ಕೊಡ ಬೇಕಾಗುತ್ತದೆ. ಆದರೆ ಶೀಲವಂತರು ತಮ್ಮ ಹೆಣ್ಣು ಮಕ್ಕಳನ್ನು ಜಂಗಮರಿಗೆ ಬಹುತರ ಕೊಡುವದಿಲ್ಲೆಂದು ತೋರುತ್ತದೆ. ಮೇಲಿನ ಜಾತಿಯವರು ತಮ್ಮ ಹೆಣ್ಣು ಮಕ್ಕಳನ್ನು ಕೆಳಗಿನ ಜಾತಿಯವರಿಗೆ ಕೊಡುವದಿಲ್ಲ. ಆದರೂ ಬಣಜಿಗರಲ್ಲಿ ಕೆಲವರು ತಮ್ಮ ಹೆಣ್ಣು ಮಕ್ಕಳನ್ನು

ಪಂಚಮಸಾಲಿಯವರಿಗೆ ಕೊಡುವ ನಡಾವಳಿಯುಂಟು. ಜಂಗಮರು ಪಂಚಮಸಾಲಿಯವರ ಹೆಣ್ಣು ಮಾಡಿ ಕೊಳ್ಳುವದು ಅಪರೂಪವು.

ಹಿಂದೆ ಹೇಳಿದ ಗಾಣಿಗರು, ಬಣಗಾರರು, ನೇಕಾರರು, ಶಿಂಪಿಗರು, ಮೊದಲಾದ ಅಸಂಖ್ಯ ಲಿಂಗವಂತ ಜಾತಿಗಳು ಸ್ವೀಕರಿಸಿದ ಲಿಂಗವಂತರಲ್ಲಿ ಇಲ್ಲವೆ ಅರ್ಧ ಲಿಂಗವಂತರಲ್ಲಿ ಬರುತ್ತವೆ. ಅವರ ವಿವರವು ಮುಂದೆ ಹೋರೆಗಳ ವರ್ಗೀಕರಣವನ್ನು ಅನುಸರಿಸಿ ಆಯಾ ಹೋರೆಯ ಕೆಳಗೆ ಬರುವದು.

**ಜೈನರು.**

ಜೈನರು.—ಇವರು ಕಾನಡಾ ಹೊರ್ತಾಗಿ ಉಳಿದ ಮೂರು ಜಿಲ್ಲೆಗಳಲ್ಲಿ ವಾಸಿಸುತ್ತಾರೆ. ಇವರ ಜನ್ಮ ಭಾಷೆ ಕನ್ನಡ. "ಜಿನ" ಯೆಂಬ ದೇವತೆಯನ್ನು ಆರಾಧಿಸುವ ಕಾರಣ ಇವರಿಗೆ ಜೈನರೆಂಬ ಹೆಸರು ಬಂದದೆ. ಇವರ ಧರ್ಮದ ತತ್ವಗಳು ಬೌದ್ಧ ಧರ್ಮಕ್ಕೆ ಹೊಂದುತ್ತವೆ. ಜೀವ ಹಿಂಸೆ ಮಾಡಬಾರದೆಂಬ ನಿಯಮವು ಬೌದ್ಧ ಧರ್ಮದಷ್ಟೇ ನಿರ್ಬಂಧದಿಂದ ಜೈನರಲ್ಲಿ ನಡಿಯುತ್ತದೆ. ಜೀವ ಹಿಂಸೆಯ ಸಂಶಯದಿಂದ ಇವರು ನೀರು ಸೋಸಿ ಕುಡಿಯುವರು, ಹೊತ್ತು ಇರುವಾಗಲೇ ಸಂಜೆಯ ಊಟ ತೀರಿಸುವರು, ಮಾಂಸಾಹಾರವನ್ನು ಯೆಷ್ಟು ಮಾತ್ರವೂ ಅರಿಯರು. ಇವರಲ್ಲಿ ಬೇರೆ ಹಿಂದೂ ಜನರಂತೆ ಬ್ರಾಹ್ಮಣ ಮುಂತಾದ ನಾಲ್ಕು ವರ್ಗಗಳೂ ೧೬ ಸಂಸ್ಕಾರಗಳೂ ಉಂಟು. ಹಿಂದೂ ಜನರ ಹಬ್ಬಗಳೇ ಇವರ ಹಬ್ಬಗಳು; ಇವರ ಮುಖ್ಯ ದೇವಸ್ಥಾನವು ಮೈಸೂರಿನ ಶೀಮೆಯಲ್ಲಿ "ಶ್ರಾವಣ ಬೆಳಗುಳ"ವೆಂಬ ಗ್ರಾಮವಿರುತ್ತದೆ. ಇವರು ಗಣೇಶ ಚತುರ್ಥಿಯಲ್ಲಿ ಗೌತಮನೆಂಬ ಧರ್ಮಗುರುವನ್ನು ಗಣಪತಿಯ ಹೆಸರಿನಿಂದ ಪೂಜಿಸುವರು; ನವರಾತ್ರಿಯಲ್ಲಿ ಭರತ ರಾಜನನ್ನು ಆರಾಧಿಸುವರು; ಆದರೆ ಹಿಂದೂ ಹಬ್ಬಗಳನ್ನೆಲ್ಲ ಮಾಡುವರು, ಹೆಣಗಳನ್ನು ಸುಡುವರು. ಚಂಡಿಕೆ ಜನಿವಾರಗಳು ಯೆಲ್ಲರಿಗೂ ಇರುತ್ತವೆ.

ಜೈನರು ೨೦ ಜನ ತೀರ್ಥಂಕರರೆಂಬ ಸತ್ಪುರುಷರನ್ನು ಪರಮೇಶ್ವರನಂತೆ ಪೂಜಿಸುತ್ತಾರೆ. ಈ ತೀರ್ಥಂಕರರ ಮೂರ್ತಿಗಳು ಬೌದ್ಧ ಮೂರ್ತಿಗಳಂತೆ ಬತ್ತಲೆ ಇರುತ್ತವೆ. ಮಹಾವೀರನೆಂಬ ಕಡೆಯ ತೀರ್ಥಂಕರನು ಕ್ರಿಸ್ತೀ ಶಕದ ೩ನೇ ಶತಕದಲ್ಲಿ ಇದ್ದನೆಂದು ಹೇಳುತ್ತಾರೆ. ಈ ತೀರ್ಥಂಕರರು ತಪಶ್ಚರ್ಯದಿಂದ ಚಿರಕಾಲ ಮುಕ್ತಿಯನ್ನು ಹೊಂದಿ ಪರಮೇಶ್ವರನಿಗೆ ಸರಿಯಾದ ಪದವಿಯನ್ನು ಹೊಂದಿದರಂತೆ. ಶಿವ, ವಿಷ್ಣು, ವಿಠೋಬ, ಪದ್ಮಾವತಿ, ಮುಂತಾದ ದೇವತೆಗಳನ್ನು ಕಡಿಮೇ ಪ್ರತಿಯ ದೇವತೆಗಳೆಂದು ತಿಳಿದು ಜೈನರು ಪೂಜಿಸುತ್ತಾರೆ. ಋಗ್ವೇದ ಮುಂತಾದ ನಾಲ್ಕು ವೇದಗಳು ಅನಾದಿಯೆಂದು ಇವರು ವೊಡಂಬಡುವದಿಲ್ಲ; ಯಜ್ಞಯಾಗಾದಿ ಕರ್ಮಗಳನ್ನು ಮಾಡುವದಿಲ್ಲ.

ಜೈನ ಧರ್ಮೋಪದೇಶಕರಲ್ಲಿ ಇಂದ್ರರು, ಯತಿಗಳು, ಯೆಂಬೆರಡು ವರ್ಗಗಳುಂಟು. ಇಂದ್ರರೆಂಬವರು ಗ್ರಹಸ್ಥರ ಮನೆಗಳಲ್ಲಿಯ ಮೂರ್ತಿಗಳನ್ನು ಪೂಜಿಸುವರು, ಧರ್ಮಕಾರ್ಯಗಳನ್ನು ಮಾಡಿಸುವರು, ಮುಹೂರ್ತ ಗ್ರಹಬಲ ಮುಂತಾದವುಗಳನ್ನು ಹೇಳುವರು. ಇವರು ಲಗ್ನ ಮಾಡಿಕೊಂಡು ಪ್ರಪಂಚ ಮಾಡುವರು. ಯತಿಗಳಿಗೆ ಲಗ್ನವಿಲ್ಲ. ಅವರಲ್ಲಿ ದಿಗಂಬರರೆಂತಲೂ ಶ್ವೇತಾಂಬರರೆಂತಲೂ ಯೆರಡು ಭೇದಗಳುಂಟು. ದಿಗಂಬ

ರರು ಸರ್ವಕಾಲವೂ ಬತ್ತಲೆ ಇರುವರು, ಶ್ವೇತಾಂಬರರು ಬಿಳಿ ಬಟ್ಟೆಯನ್ನು ಉಡುವರು. ಇವರು ಹನ್ನೆರಡು ಸ್ವರ್ಗಗಳುಂಟೆಂತಲೂ ಇಪ್ಪತ್ತುನಾಲ್ಕು ಜನ ಇಂದ್ರರಿದ್ದಾರೆಂತಲೂ ಹೇಳುತ್ತಾರೆ. ಆದರೆ ದಿಗಂಬರರು ಹದಿನಾರು ಸ್ವರ್ಗಗಳನ್ನು ಕಲ್ಪಿಸಿ, ಅವುಗಳಲ್ಲೆಲ್ಲ ಕೂಡಿ ನೂರು ಜನ ಇಂದ್ರರಿದ್ದಾರೆಂದು ಪ್ರತಿವಾದಿಸುತ್ತಾರೆ. ಶ್ವೇತಾಂಬರರು ದಿಗಂಬರರಾಗ ಬಹುದು, ದಿಗಂಬರರು ಶ್ವೇತಾಂಬರರಾಗ ಬಹುದು. ಗೃಹಸ್ಥಾ ಶ್ರಮಿಗಳು ಹರಿಕೆಯ ಕಾರಣದಿಂದ ತಮ್ಮ ಮಕ್ಕಳನ್ನು ಈ ಯತಿಗಳ ಮಠಕ್ಕೆ ನೀಡುವರು. ಒಬ್ಬ ಯತಿಯು ತೀರಿದ ಬಳಿಕ ಈ ಮರಿಗಳಲ್ಲಿ ಕೆಲವೊಬ್ಬನು ಅವನ ಪಟ್ಟವನ್ನು ಪಡಿಯುವನು. ಯತಿಗಳ ಹೆಣಗಳನ್ನು ಸುಡುವರು.

ಸೃಷ್ಟಿಯು ಅನಾದಿಯಾದದ್ದೆಂದು ಜೈನರು ಹೇಳುತ್ತಾರೆ. ಇದರಲ್ಲಿ ಪಾತಾಳ, ಭೂಲೋಕ, ಆಕಾಶ, ಯೆಂಬ ಮೂರು ಮುಖ್ಯ ವಿಭಾಗಗಳುಂಟು. ಪಾತಾಳದಲ್ಲಿ ಅಧೋಗತಿ, ನರಕ, ಪಾವನಲೋಕ, ಯೆಂಬ ಮೂರು ಲೋಕಗಳಿವೆ. ಅಧೋಗತಿಗೆ ಹೋದವನು ಅಲ್ಲಿಂದ ಯೆಂದೂ ಬಿಡುಗಡೆ ಹೊಂದುವದಿಲ್ಲ, ಚಿರಕಾಲ ಅಲ್ಲಿಯೇ ಕ್ಲೇಶ ಪಡುತ್ತಿರುವನು. ನರಕಕ್ಕೆ ಹೋದವನು ತನ್ನ ಪಾಪದ ಭೋಗವನ್ನು ತೀರಿಸಿದ ಕೂಡಲೆ ಅಲ್ಲಿಂದ ಬಿಡುಗಡೆ ಹೊಂದಿ ಜನ್ಮಕ್ಕೆ ಬರುವನು. ಪುಣ್ಯವಂತರು ಸ್ವಲ್ಪ ದುಷ್ಕರ್ಮವನ್ನು ಮಾಡಿದ್ದರೆ, ಅವರು ಪಾವನ ಲೋಕಕ್ಕೆ ಹೋಗಿ ಅಲ್ಲಿ ಮಲವನ್ನೆಲ್ಲ ಕಳೆದುಕೊಂಡು ಪವಿತ್ರರಾಗಿ ಸ್ವರ್ಗಕ್ಕೆ ಹೋಗುವರು. ಭೂಲೋಕದಲ್ಲಿ ಸಮುದ್ರಗಳಿಂದ ಹಲವು ದ್ವೀಪಗಳುಂಟಾಗಿವೆ. ಬೇರೆ ಬೇರೆ ದ್ವೀಪದಲ್ಲಿ ಬೇರೆ ಬೇರೆ ಪ್ರಕಾರದ ಪ್ರಾಣಿಗಳು ವಾಸಿಸುವರು. ಆಕಾಶದಲ್ಲಿ ಹಲವು ಲೋಕಗಳಿರುತ್ತವೆ. ಎಲ್ಲಕ್ಕೂ ಕೆಳಗೆ ಅಂದರೆ ಭೂಲೋಕಕ್ಕೆ ಅತಿ ನಿಕಟವಾಗಿ, ಮಂತ್ರಲೋಕವಿರುತ್ತದೆ. ಅದರಲ್ಲಿ ಭೂತಾದಿಗಳು ವಾಸಿಸುತ್ತವೆ. ಅದರ ಮೇಲೆ ವಿದ್ಯಾಧರರೆಂಬ ಜನರು ವಾಸಿಸುವ ವಿದ್ಯಾಧರ ಲೋಕವಿರುತ್ತದೆ; ಅದರ ಮೇಲೆ ದೇವಲೋಕವು, ಇತ್ಯಾದಿ. ಎಲ್ಲಕ್ಕೂ ಮೇಲೆ ಮೋಕ್ಷಲೋಕವಿದೆ. ಅಲ್ಲಿ ಅರ್ಹತ್ ಅಥವಾ ಜಿನೇಶ್ವರನೆಂಬ ಪರಮಾತ್ಮನು ಇರುತ್ತಾನೆ; ಅವನಿಗೆ ೧೦೦೮ ಹೆಸರುಗಳುಂಟು. ಅವನು ಮೂರು ಲೋಕಗಳಿಗೆ ವಂದ್ಯನು, ಸರ್ವಜ್ಞನು, ಸರ್ವಶಕ್ತಿಯು, ಸರ್ವವ್ಯಾಪಿಯು. ಆದರೆ ಜಿನೇಶ್ವರನು ಸೃಷ್ಟಿಯನ್ನು ಮಾಡುವದಿಲ್ಲ, ಪ್ರಾಣಿಗಳಲ್ಲಿ ದಯವಿಡುತ್ತಾನೆ. ಪ್ರಾಣಿಗಳ ಸುಖಕ್ಕೋಸ್ಕರವಾಗಿ ಜಿನೇಶ್ವರನು ಹನ್ನೆರಡು ವೇದಗಳನ್ನು ಪ್ರಕಟಿಸಿದ್ದಾನೆ. ಈ ವೇದಗಳು, ಜಗತ್ತು, ಕಾಲ, ಆತ್ಮ, ಧರ್ಮ, ಪುಣ್ಯ, ಇವೆಲ್ಲ ಕಡೆ ಮೊದಲು ಇಲ್ಲದಂಥವುಗಳೆಂದು ಜಿನೇಶ್ವರನು ಹೇಳಿದ್ದಾನೆ. ಇವನಿಗೆ ನಾಲ್ಕು ಮುಖಗಳುಂಟು; ಅಶೋಕ ವೃಕ್ಷದ ಕೆಳಗೆ ವಾಸವು; ಮೂರು ಗಾಲಿಯ ರಥವೇ ವಾಹನವು; ತ್ರಿಪುಟಗಳುಳ್ಳ ಛತ್ರವುಂಟು. ಈ ಮೋಕ್ಷ ಲೋಕದಲ್ಲಿಯೇ ೭೦ ಜನ ತೀರ್ಥಂಕರರು ಜಿನೇಶ್ವರನಿಗೆ ಸರಿಯಾದ ಪದವಿಯಿಂದ ವಾಸಿಸುತ್ತಾರೆ. ಅವರಲ್ಲಿ ೨೪ ಜನ ಹಿಂದಿನ ಯುಗದವರು, ೨೪ ಜನ ನಡಿಯುವ ಯುಗದವರು, ೨೪ ಜನ ಮುಂದೆ ಬರುವ ಯುಗದವರು. ನಡಿಯುವ ಯುಗದ ೨೪ ಜನರಲ್ಲಿ ಋಷಭ

ದೇವನು ಮೊದಲಿನವನು, ಮಹಾ ವೀರನು ಕಡೆಯವನು. ಇವರಲ್ಲಿ ಇಬ್ಬಿಬ್ಬರು ಬಿಳುಪು, ಕೆಂಪು, ಹಳದಿ, ನೀಲ, ಕಪ್ಪು, ಈ ಐದು ಬಣ್ಣಗಳುಳ್ಳವರು, ಉಳಿದ ೧೪ ಜನ ಚಿನ್ನದ ಬಣ್ಣದವರು. ಋಷಭ ದೇವನು ೫೦೦ ತಾಲ ಪ್ರಮಾಣನಾಗಿ ೮೪೦೦೦೦೦ ವರ್ಷ ಬದುಕಿದನಂತೆ. ಮುಂದಿನ ತೀರ್ಥಂಕರರ ನಿಲುವಿಕೆ ಆಯುಷ್ಯಗಳು ಬರ ಬರುತ್ತ ಕಡಿಮೆಯಾಗಿ ಕಡೆಯಲ್ಲಿ ಮಹಾ ವೀರನು ಸಾಧಾರಣ ಮನುಷ್ಯರಷ್ಟೇ ಯೆತ್ತರವಾಗಿ ಬೆಳೆದು ೪೦ ವರ್ಷ ಮಾತ್ರ ಬದುಕಿದನು. ಗೌತುಮನು ಮಹಾ ವೀರನ ಶಿಷ್ಯನಂತೆ.

ಜೈನರಲ್ಲಿ ಧರ್ಮಗ್ರಂಥಗಳಲ್ಲದೆ ಪುರಾಣ, ಕಾವ್ಯ, ನಾಟಕ, ಅಲಂಕಾರ, ಜ್ಯೋತಿಷ, ಮುಂತಾದ ಅಸಂಖ್ಯ ಗ್ರಂಥಗಳಿರುತ್ತವೆ. ಇವರಲ್ಲಿ ಕೆಲವರು ತಮ್ಮ ಮೂಲಾರಂಭವನ್ನು ಹೇಳುವದು ಹ್ಯಾಗಂದರೆ—ಬುನಾದಿಯಲ್ಲಿ ಇಕ್ಷ್ವಾಕುವೆಂಬ ಅರಸನ ಬಳಿಯಲ್ಲಿ ನಾರದ ಪರ್ವತ, ಯೆಂಬಿಬ್ಬರು ಬ್ರಾಹ್ಮಣರಿದ್ದರು. ಹಿಂಸೆಯ ಬಗ್ಗೆ ಇವರಿಬ್ಬರಲ್ಲಿ ವ್ಯಾಜ್ಯ ನಡಿದು, ಯಜ್ಞದಲ್ಲಿ ಪರ್ವತನು ಕುರಿಗಳನ್ನು, ನಾರದನು ಹುರಿದ ಕಾಳುಗಳನ್ನು ಆಹುತಿ ಕೊಡುತ್ತಿದ್ದರು. ಪರ್ವತನ ವಂಶದವರು ಹಿಂದೂ ಜನರಾದರು, ನಾರದನ ವಂಶದವರು ಜೈನರಾದರು. ಮೇಲೆ ಹೇಳಿದ ೪ ಜಾತಿಗಳ ಹೊರ್ತು ಜೈನರಲ್ಲಿ ಪಂಚಮರೆಂಬದೊಂದು ಜಾತಿಯುಂಟು. ಅವರು ಮುಖ್ಯವಾಗಿ ಒಕ್ಕಲತನದಿಂದ ಜೀವಿಸುವರು. ಅವರಲ್ಲಿ ವಿಧವೆಗಳ ಲಗ್ನವಾಗುತ್ತದೆ. ಬ್ರಾಹ್ಮಣರಲ್ಲಿ. ವಿಧವೆಗಳಿಗೆ ಲಗ್ನವಿಲ್ಲ, ಆದರೂ ತಲೆ ಬೋಳಿಸುವದಿಲ್ಲ. ಕ್ಷತ್ರಿಯರಂತು ಈಗ ಇಲ್ಲವೇ ಇಲ್ಲ. ಪೂರ್ವ ಕಾಲದಲ್ಲಿ ಇವರು ತಮ್ಮೊಳಗಿನ ನೂರು ಮನೆತನಗಳನ್ನು ಕುಲದಿಂದ ಹೊರಗಿಟ್ಟರು. ಅವರ ಸಂತತಿಯವರಿಗೆ "ಶತಕಾಲ"ರೆಂದೆನ್ನುವರು. ಅವರಿಗೂ ಶುದ್ಧ ಜೈನರಿಗೂ ಅನ್ನ ವ್ಯವಹಾರವಾಗುವದಿಲ್ಲ. ಜೈನರಲ್ಲಿ ಹೆಣ್ಣು ಮಕ್ಕಳ ಲಗ್ನವು ೧೦ ವರ್ಷದೊಳಗೇ ಆಗುವದು. ಆದರೆ ಮೈಸೂರು ಶೀಮೆಯ ಜೈನರು ತಮ್ಮ ಹೆಣ್ಣು ಮಕ್ಕಳು ನೆರಿದ ಬಳಿಕ ಅವರ ಲಗ್ನ ಮಾಡುವರು. ವ್ಯಾಪಾರ, ಮುಖ್ಯವಾಗಿ ಪಾತ್ರೆಗಳನ್ನು ಮಾರುವದು, ಒಕ್ಕಲತನ, ಇವೇ ಜೈನರ ವಾಡಿಕೆಯ ಹೋರೆಗಳು. ಪಾತ್ರೆಗಳನ್ನು ಮಾರುವವರಿಗೆ ತಾಂಬಟಗಾರರೆನ್ನುವರು. ಇವರ ಸಮಾಜವು ಬೆಳಗಾವಿ ಶಹಾಪುರಗಳಲ್ಲಿ ಬಹಳ ಉಂಟು. ಧಾರವಾಡ ಹುಬ್ಬಳ್ಳಿಗಳಲ್ಲಿಯೂ ತಾಂಬಟಗಾರರು ಕೆಲವರುಂಟು. ವಿಜಾಪುರ ಕಾನಡಾ ಜಿಲ್ಲೆಗಳಲ್ಲಿಯ ಜೈನರು ಮುಖ್ಯವಾಗಿ ವೊಕ್ಕಲತನದಿಂದ ಬಾಳುವರು. ಉಡಿಗೆ ತೊಡಿಗೆಯಲ್ಲಿ ಬೇರೆ ಹಿಂದೂ ಜನರಿಗೂ ಇವರಿಗೂ ಅಭ್ಯಂತರವಿಲ್ಲ. ಜೈನರು ಉದ್ಯೋಗಕ್ಕೆ ಮೆಚ್ಚುವರು, ಮಿತದಿಂದ ವೆಚ್ಚ ಮಾಡುವರು, ವ್ಯವಹಾರದಲ್ಲಿ ಪ್ರಮಾಣಿಕತನದಿಂದ ನಡಿಯುವರು. ಉತ್ತಮ ಜಾತಿಯ ಜೈನರಲ್ಲಿ ವಿದ್ಯಾಭ್ಯಾಸವು ಕುಲ ಪರಂಪರಾಗತವಾದದ್ದರಿಂದ ಅವರು ವಾಡಿಕೆಯಾಗಿ ಬುದ್ಧಿವಂತರಿರುತ್ತಾರೆ. ಇವರು ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ, ಲೌಕಿಕದಲ್ಲಿ ಬೆಳುವಣಿಗೆ ಹೊಂದುತ್ತಲಿದ್ದಾರೆ.

ನಾಲ್ಕೂ ಜಿಲ್ಲೆಗಳಲ್ಲಿಯ ಜೈನರ ಸಂಖ್ಯೆಗಳನ್ನು ಕೆಳಗಿನ ವರ್ತಕರ ಕೋಷ್ಟಕದಲ್ಲಿ ವಿವರಿಸಿದ್ದೇವೆ.

## ವರ್ತಕರ ಜಾತಿಗಳು.

| | ಜಾತಿ. | ಧಾರವಾಡ. | | | ಬೆಳಗಾವಿ. | | | ವಿಜಾಪುರ. | | | ಕಾನಡಾ. | | | |
|---|---|---|---|---|---|---|---|---|---|---|---|---|---|---|
| | | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | |
| ೧ | *ಆದಿ ಬಣಜಿಗರು...... | ೪೩೬೦ | ೪೧೪೮ | ೮೫೦೮ | ೨೮೨೯ | ೨೭೫೩ | ೫೫೮೨ | ೩೦೦೬ | ೩೦೭೩ | ೬೦೭೯ | „ | „ | „ | * ಬೆಳಗಾವೀ ಜಿಲ್ಲೆಯಲ್ಲಿ ೩ ಅಂಗಳು. ವಿಜಾಪುರ ಜಿಲ್ಲೆಯಲ್ಲಿ ಅರೇ ಬಣಜಿಗರು. |
| ೨ | ಗುಜ್ಜರು .......... | ೮೨ | ೬೬ | ೧೪೮ | ೫೮ | ೪೪ | ೧೦೨ | ೧೬೬ | ೧೮೮ | ೩೫೪ | ೨೧ | ೧೬ | ೩೭ | |
| ೩ | ಜೈನರು .......... | ೫೩೭೨ | ೫೧೫೪ | ೧೦೫೨೬ | ೨೨೭೧೯ | ೨೨೨೭೨ | ೪೪೯೯೧ | | | ೨೬೮೦ | ೮೯೮ | ೭೫೫ | ೧೬೫೩ | |
| ೪ | ಲಾಡರು, ಇಲ್ಲವೆ ದಕ್ಷಿಣದ ಗುಜ್ಜರು .... | ೭೨೩ | ೭೫೩ | ೧೪೭೬ | „ | „ | „ | ೫೧೫ | ೪೯೮ | ೧೦೧೩ | ೧೪೩ | ೧೨೯ | ೨೭೨ | |
| ೫ | ಲವಾಣರು, ಇಲ್ಲವೆ ಲಂಬಾಡಿಗರು .... | ೨೧೪೪ | ೨೦೦೨ | ೪೧೪೬ | „ | „ | „ | „ | „ | „ | „ | „ | „ | |
| ೬ | ಬಣಜಿಗರು (ಲೋಕ ಬಣಜಿಗರು ಸಹಿತ) ... | ೧೨೦೬೬ | ೧೨೪೭೩ | ೨೪೫೩೯ | „ | „ | „ | „ | „ | „ | ೬೫೫ | ೪೨೭ | ೧೦೮೨ | ಲಿಂಗವಂತರ ವರ್ಣನೆ ನೋಡು. |
| ೭ | ಮಾರವಾಡಿಗಳು...... | ೧೬ | ೧ | ೧೭ | ೩೬ | ೧೪ | ೫೦ | ೧೯೮ | ೩೭ | ೨೩೫ | ೧೯ | ೨ | ೨೧ | |
| ೮ | ನಾರ್ವೇಕರರು....... | ೧೦೫ | ೧೫೩ | ೨೫೮ | ೧೦೮೯ | ೧೦೧೩ | ೨೧೦೨ | „ | „ | „ | ೧೭೦ | ೧೫೨ | ೩೨೨ | ಧಾರವಾಡ ಜಿಲ್ಲೆಯಲ್ಲಿ ಬಾಂದೇಕರರು ಸಹಿತ. |
| ೯ | ಬಾಂದೇಕರರು ....... | „ | „ | „ | ೬೩೩ | ೬೫೪ | ೧೨೮೭ | „ | „ | „ | ೨೬೦ | ೨೧೭ | ೪೭೭ | |
| ೧೦ | ಶೀಲವಂತರು....... | ೪೯೬ | ೫೭೫ | ೧೦೭೧ | „ | „ | „ | | | | | | | ಲಿಂಗವಂತರ ವರ್ಣನೆ ನೋಡು. |
| ೧೧ | ತೆಲಗು ಬಣಜಿಗರು..... | ೬೯೧ | ೬೬೧ | ೧೩೫೨ | „ | „ | „ | „ | „ | „ | ೨೩೬ | ೨೨೧ | ೪೫೭ | |
| ೧೨ | ತೆಲಗು ಒಕ್ಕಮರು..... | ೯೫ | ೮೮ | ೧೮೩ | „ | „ | „ | „ | „ | „ | „ | „ | „ | |

| | | | | | | | | | | | | | |
|---|---|---|---|---|---|---|---|---|---|---|---|---|---|
| ೧೩ | ಕೋಮಟಿಗರು, ಇಲ್ಲವೆ ವೈಶ್ಯರು | ೪೩೪ | ೩೮೯ | ೮೨೩ | ೯೧ | ೬೭ | ೧೫೮ | ೨೪೨ | ೨೨೭ | ೪೬೯ | ೧೨೫ | ೧೩೬ | ೨೬೧ |
| ೧೪ | ಭಾಟಿಯರು | ,, | ,, | ,, | ೪೩ | ೨೭ | ೭೦ | .. | .. | .. | ೬೭ | ೪೫ | ೧೧೨ |
| ೧೫ | ಕಾಲವಾಡಿಗಳು | ,, | ,, | ,, | ೩೬ | ೪೧ | ೭೭ | .. | .. | .. | ,, | ,, | ,, |
| ೧೬ | ಬಾವಕುಳೆಯರು | ,, | ,, | ,, | .. | .. | .. | .. | .. | .. | ೧೭೭೦ | ೧೫೬೨ | ೩೩೩೨ |
| ೧೭ | ಕನ್ನಡ ವೈಶ್ಯರು | ,, | ,, | ,, | .. | .. | .. | .. | .. | .. | ೨೫೭ | ೨೭೦ | ೫೨೭ |
| ೧೮ | ಮಲ್ಲವರು | ೧೧೩ | ೧೧೭ | ೨೩೦ | .. | .. | .. | .. | .. | .. | ೧೦೫೭ | ೮೬೦ | ೧೯೧೭ |
| ೧೯ | ಲೋಹಾಣರು | ,, | ,, | ,, | .. | .. | .. | .. | .. | .. | ೨೯ | ೩೦ | ೫೯ |
| ೨೦ | ಪಡನೇಕರ ವೈಶ್ಯರು | ,, | ,, | ,, | .. | .. | .. | .. | .. | .. | ೪೫ | ೫೨ | ೯೭ |
| ೨೧ | ಅಗರವಾಲರು | ,, | ,, | ,, | ,, | ,, | ,, | ೧೦ | ೧೦ | ೨೦ | ,, | ,, | ,, |
| ೨೨ | ಶಟ್ಟಿಯರು | ,, | ,, | ,, | ,, | ,, | ,, | ೧೬ | ೨೦ | ೩೬ | ,, | ,, | ,, |
| ೨೩ | ಶಟ್ಟೇರು | ,, | ,, | ,, | ,, | ,, | ,, | ೧೯೬ | ೨೨೪ | ೪೨೦ | ,, | ,, | ,, |
| ೨೪ | ಕೊಮುವಿನ ಶಟ್ಟಿಗಳು | ,, | ,, | ,, | ,, | ,, | ,, | ೧೨೦೬ | ೧೨೪೦ | ೨೪೪೬ | ,, | ,, | ,, |
| ೨೫ | ಮಾಲಗಾರರು | ,, | ,, | ,, | ,, | ,, | ,, | ೧೩೪ | ೧೧೯ | ೨೫೩ | ,, | ,, | ,, |

3133
6-6-84

ಆದಿ ಬಣಜಿಗರು.

**ಆದಿ ಬಣಜಿಗರು.**—ಇವರು ಹುಬ್ಬಳ್ಳಿಯ ಹೊರ್ತು ಧಾರವಾಡದ ಯಾವತ್ತು ತಾಲೂಕುಗಳಲ್ಲಿಯೂ ಬೆಳಗಾವೀ, ಚಿಕ್ಕೋಡೀ ತಾಲೂಕುಗಳಲ್ಲಿಯೂ ಇರುತ್ತಾರೆ. ಇವರು ಉತ್ತಮ ಕುಲದ ಲಿಂಗವಂತರಾದ ಕಾರಣ ಹಿಂದೆ ಲಿಂಗವಂತರ ಆಚಾರ ವ್ಯವಹಾರಾದಿಗಳನ್ನು ವಿವರಿಸಿದಂತೆ ಇವರ ಸ್ಥಿತಿ ರೀತಿಗಳಿರುತ್ತವೆ. ಒಬ್ಬನ ಹೊಟ್ಟೆಗೆ ತಿಂಗಳಿಗೆ ಯೆರಡು ರೂಪಾಯಿ ಸಾಕು. ಇವರು ಮದುವೆಗೆ ಸುಮಾರು ೨೦೦ ರೂಪಾಯಿ, ಮರಣ ಸಂಸ್ಕಾರಕ್ಕೆ ೨೦ ರೂಪಾಯಿ ವೆಚ್ಚ ಮಾಡುವರು. ಬೆಳಗಾವೀ ಜಿಲ್ಲೆಯಲ್ಲಿ ಇವರಿಗೆ ತಿಳಾರರೆಂತಲೂ ವಿಜಾಪುರ ಜಿಲ್ಲೆಯಲ್ಲಿ ಆರೆ ಬಣಜಿಗರೆಂತಲೂ ಅನ್ನುವರು. ಇವರ ಮುಖ್ಯ ಹೋರೆ ವೊಕ್ಕಲತನವು.

ಗುಜ್ಜರು.

**ಗುಜ್ಜರು.**—ಇವರು ನಾಲ್ಕೂ ಜಿಲ್ಲೆಗಳಲ್ಲಿ ಇರುತ್ತಾರೆ; ಮನೆಯಲ್ಲಿ ಗುಜರಾಥೀ ಭಾಷೆಯನ್ನಾಡುವರು, ಮದ್ಯ ಮಾಂಸಗಳನ್ನು ತಿನ್ನುವದಿಲ್ಲ; ತಮ್ಮ ಜಾತಿಯ ಬ್ರಾಹ್ಮಣರಿಲ್ಲದಾಗ ಈ ಶೀಮೆಯ ಬ್ರಾಹ್ಮಣರನ್ನು ಕಾರ್ಯ ಪ್ರಯೋಜನಗಳಲ್ಲಿ ಕರೆಯುವರು; ಲಗ್ನಕ್ಕೆ ಬಹಳ ಹಣ ವೆಚ್ಚ ಮಾಡುವರು. ಇವರಲ್ಲಿ ಮದುವೆಯಾದವರು ಸತ್ತರೆ ಸುಡುವರು, ಮದುವೆಯ ಪೂರ್ವದಲ್ಲಿ ಸತ್ತವರನ್ನು ಹುಗಿಯುವರು. ಹೆಣದ ಮುಂದೆ ಅಳುವದಕ್ಕೋಸ್ಕರ ಕೂಲಿಯ ಹೆಂಗಸರನ್ನು ತಂದು ದಿನಕ್ಕೆ ೩, ೪ ಆಣೆ ಕೂಲಿ ಕೊಡುವರು. ಇವರ ಮುಖ್ಯ ಹೋರೆ ವ್ಯಾಪಾರ, ಅಂಗಡಿ; ಕೆಲವರು ವೊಕ್ಕಲತನವನ್ನೂ ಮಾಡುವರು. ಇವರು ಸುಖಿಯಾಗಿದ್ದಾರೆ; ಆದರೆ ಇವರ ಮಕ್ಕಳು ಶಾಲೆಗೆ ಬಹುತರ ಹೋಗುವದಿಲ್ಲ.

ಜೈನರು.

**ಜೈನರು.**—ಇವರ ವರ್ಣನೆಯನ್ನು ಹಿಂದೆ ೯೭ನೇ ಪುಟದಲ್ಲಿ ನೋಡು.

ಲಾಡರು.

**ಲಾಡರು ಇಲ್ಲವೆ ದಕ್ಷಿಣದ ಗುಜ್ಜರು.**—ಇವರು ಸುಮಾರು ೨೦೦ ವರ್ಷದ ಹಿಂದೆ ಗುಜರಾಥದಿಂದ ಬಂದು, ಧಾರವಾಡ, ಕಾನಡಾ ಜಿಲ್ಲೆಗಳಲ್ಲಿ ವಾಸವಾಗಿದ್ದಾರೆ. ಕೋಡ ತಾಲೂಕಿನಲ್ಲಿ ಮಾತ್ರ ಇವರು ಕಾಣುವದಿಲ್ಲ. ಇವರು ಕನ್ನಡವನ್ನು ಕೆಡಿಸಿ ಆಡುವರು; ಕೃಷ್ಣ, ಪಾಂಡುರಂಗ, ತುಳಜಾಭವಾನಿ, ಯೆಲ್ಲಮ್ಮ, ಮುಂತಾದ ದೇವತೆಗಳಿಗೆ ನಡಕೊಳ್ಳುವರು; ಮೈಕಟ್ಟಿನಲ್ಲಿ ಕಸುವುಳ್ಳವರಾಗಿ ಕಾಣುವರು; ತೋರಿಕೆಯಲ್ಲಿ ಶಿಂಪಿಗರನ್ನು ಹೋಲುವರು; ಮದ್ಯ ಮಾಂಸಗಳನ್ನು, ತಕ್ಕೊಳ್ಳುವದಿಲ್ಲ. ಇವರ ಮನೆಗಳು ಸಣ್ಣವು, ಆದರೆ ನಿರ್ಮಲವಾಗಿರುತ್ತವೆ; ಉಡಿಗೆಗಳೂ ನಿರ್ಮಲವಿರುತ್ತವೆ. ಇವರ ಸ್ವಭಾವ ಸರಳ, ನಡತೆ ಪ್ರಮಾಣಿಕತನದ್ದು; ಸೋಮಾರಿತನವೇ ಇವರ ಮುಖ್ಯ ದುರ್ಗುಣವು. ಇವರಲ್ಲಿ ಯೆಲ್ಲಕ್ಕೂ ಉತ್ತಮ ಕುಲದವರು, ಅಂದರೆ ಕ್ಷತ್ರಿಯರು, ಸುಗಂಧ ದ್ರವ್ಯಗಳ ಮಾರಾಟದಿಂದ ಜೀವಿಸುವರು; ಬ್ರಾಹ್ಮಣರ ಹೊರ್ತು ಬೇರೆ ಯಾರ ಅನ್ನವನ್ನು ಇವರು ತಕ್ಕೊಳ್ಳುವದಿಲ್ಲ. ಇವರ ಧರ್ಮಗುರು ಸನ್ಯಾಸಿಯು, ಕಾಶಿಯಲ್ಲಿರುತ್ತಾನೆ. ಇವರು ಲಗ್ನ ಮುಂತಾದ ಕಾರ್ಯಗಳಲ್ಲಿ ಬ್ರಾಹ್ಮಣರನ್ನು ಕರೆಯುವರು; ಹತ್ತು ವರ್ಷದೊಳಗೇ ಹೆಣ್ಣು ಮಕ್ಕಳ ಲಗ್ನ

ಮಾಡುವರು; ಸತ್ತವರನ್ನು ಹುಗಿಯುವರು; ಆದರೂ ೧೦ ದಿವಸ ಸೂತಕ ಹಿಡಿಯುವರು. ಇವರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವರು.

ಕಾನಡಾ ಜಿಲ್ಲೆಯ ಲಾಡರಿಗೆ ಸೂರ್ಯವಂಶಿಗಳೆಂತಲೂ ಹೆಸರುಂಟು. ಇವರು ಹಲ್ಯಾಳ, ಯಲ್ಲಾಪುರ ಶಿರಶಿ ತಾಲೂಕುಗಳಲ್ಲಿ ಇರುತ್ತಾರೆ. ಇವರ ಕುಲದೇವತೆ ಭವಾನಿ; ಆ ದೇವಿಯ ಪೂಜಾರಿಗಳು ಲಗ್ನ ಮಾಡಿಕೊಳ್ಳುವದಿಲ್ಲ. ಲಾಡರು ಗಂಡು ಮಕ್ಕಳಿಗೆ ಮುಂಜೀ ಸಂಸ್ಕಾರ ಮಾಡುವರು; ವಿಧವೆಗಳ ಲಗ್ನವನ್ನು ಮಾಡುದಿಲ್ಲ; ಹೆಣಗಳನ್ನು ಸುಡುವರು. ವಿಜಾಪುರ ಜಿಲ್ಲೆಯ ಲಾಡರು ಕಟಕರ ಹೋರೆಯನ್ನು ಮಾಡುತ್ತಾರೆ. ಅವರು ಮದ್ಯ ಮಾಂಸಗಳನ್ನು ನಿರಾತಂಕವಾಗಿ ತಕ್ಕೊಳ್ಳುವರು; ಸತ್ತವರನ್ನು ಹುಗಿಯುವರು, ಇಲ್ಲವೆ ಸುಡುವರು; ಹನ್ನೊಂದನೇ ದಿವಸ ಸತ್ತ ಮನುಷ್ಯನ ತಾಳಿಯನ್ನು ಮಾಡಿ ಮನೆಯ ದೇವರೊಳಗಿಟ್ಟು ಪೂಜಿಸುವರು.

ಲವಾಣರು, ಇಲ್ಲವೆ ಲಂಬಾಡಿಗರು.—ಇವರು ವಾಡಿಕೆಯಾಗಿ ಅಡವಿಯ ಹತ್ತರ ಇಲ್ಲವೆ ಗುಡ್ಡದ ಮೇಲೆ ಇರುತ್ತಾರೆ. ಇವರ ಮನೆಗಳಿಗೆ ಹುಲ್ಲಿನ ಚಪ್ಪರವಿರುತ್ತದೆ.

**ಲವಾಣರು.**

ಮಾಳಿಗೇ ಮನೆಯಲ್ಲಿಯೂ ಹಂಚಿನ ಮನೆಯಲ್ಲಿಯೂ ಇವರು ಇರುವದಿಲ್ಲ. ಯಾಕಂದರೆ ಬುನಾದಿಯಲ್ಲಿ ಇವರ ಪೂರ್ವಜನೊಬ್ಬನು ಮಾಳಿಗೇ ಮನೆಯನ್ನು ಕಟ್ಟಿಸಲಾಗಿ, ಅವನೂ ಅವನ ಮನೆಯವರೂ ತತ್ಕಾಲಕ್ಕೆ ಮರಣ ಹೊಂದಿದರಂತೆ. ಇವರು ಮರಾಠೀ, ಗುಜರಾಥೀ, ಹಿಂದುಸ್ತಾನೀ ಭಾಷೆಗಳನ್ನು ಬೆರಿಸಿ ಆಡುತ್ತಾರೆ. ಗಂಡಸರ ಹೆಸರುಗಳು ಇನಾಮ, ಲಾಲೂ, ಮಾಣಸಿ, ರೂಪ, ವಲ್ಯಾ, ಇ.; ಹೆಂಗಸರ ಹೆಸರುಗಳು ಧಾವಿ, ರಾಮಲಿ, ಜಾಕಿ, ಸೀತಿ, ಇ.— ಇವರು ವೆಂಕಟರಮಣನಿಗೆ ನಡಕೊಳ್ಳುವರು, ಆದರೆ ಬ್ರಾಹ್ಮಣರಿಗೆ ಮಾನಕೊಡುವದಿಲ್ಲ. ಇವರಿಗೆ ಗುರುವಿಲ್ಲ. ಇವರು ವೆಂಕಟರಮಣನ ಮೂರ್ತಿಯನ್ನು ಮನೆಯಲ್ಲಿ ಗಂಟನೊಳಗೆ ಕಟ್ಟಿ ಇಟ್ಟು ವರ್ಷದಲ್ಲಿ ವೊಮ್ಮೆರಡು ಸಾರಿ ಪೂಜಿಸುವರು. ಬೇಡರು, ರಜಪೂತರು, ಮುಸಲ್ಮಾನರು, ಹೊಲಿಯರು ಸಹ ಇವರೊಳಗೆ ಕೂಡಿ ಲವಾಣರೆಂಬ ಹೆಸರು ಪಡೆಯುವರು; ಆದರೆ ಲವಾಣರು ಇವರ ಸಂಗಡ ಅನ್ನ ವ್ಯವಹಾರ ಮಾಡುವದಿಲ್ಲ. ಲವಾಣರು ಗಿಡ್ಡರು, ಕೊಬ್ಬುಳ್ಳವರು, ಕಪ್ಪು ಮೈಬಣ್ಣದವರು. ಗಂಡಸರು ಕೆಂಪು ಅರಿವೇ ಪಟ್ಟಿಗೆ ಕವಡಿ, ಶಂಖ, ಶಿಂಪುಗಳನ್ನು ಹೊಲಿದು ಆ ಪಟ್ಟಿಯನ್ನು ರುಮಾಲದ ಮೇಲೆ ಸುತ್ತಿಕೊಂಡು, ಕೈಯಲ್ಲಿ ಇವೇ ಅಲಂಕಾರಗಳುಳ್ಳಂಥ ತಂಬಾಕದ ಚೀಲುಗಳನ್ನು ಹಿಡಿಯುವರು. ಹೆಂಗಸರ ತಲೆಯಲ್ಲಿ ಹಿಂದೆ ವೊಂದು, ಯೆರಡೂ ಕಿವಿಗಳ ಮೇಲೆ ವೊಂದೊಂದು, ಹೀಗೆ ಮೂರು ಹೆರಳುಗಳಿರುತ್ತವೆ. ಮದುವೆಯಾದ ಹೆಂಗಸು ಕಿವಿಗಳ ಮೇಲಿನ ಹೆರಳುಗಳಲ್ಲಿ ಹಿತ್ತಾಳಿಯ ಟೊಪ್ಪಿಗೆ ಹಾಕಿದಂಥ ಕೆಂಪು ರೇಶಿಮೆಯ ಗೊಂಡೆಗಳನ್ನು ಧರಿಸುವಳು. ಈ ಗೊಂಡೆಗಳು ಲಗ್ನದ ಕುರುಹು ಇರುತ್ತವೆ. ಎಲ್ಲ ಹೆಂಗಸರು ಪರಿಕರ ಉಟ್ಟು ಕೊಂಡು, ಗುಜರಾಥಿ ಹೆಂಗಸರಂತೆ ಕುಪ್ಪಸದ ಗಂಟು ಬೆನ್ನಿನ ಮೇಲೆ ಹಾಕಿ, ಬಲಕ್ಕೆ ಶೆರಗು ಹೊದ್ದು ಕೊಳ್ಳುವರು; ಆನೇ ಹಲ್ಲಿನ ಬಳೆಗಳನ್ನು ಮೊಳ

ಕೈ ವರೆಗೆ ಹಾಕಿ ಕೊಳ್ಳುವರು. ಲಂಬಾಡಿಗರಲ್ಲಿ ಮದ್ಯ ಮಾಂಸಗಳಿಗೆ ಎಷ್ಟು ಮಾತ್ರವೂ ಅಡ್ಡಿ ಇಲ್ಲ. ಇವರು ಪ್ರಮಾಣಿಕರು, ಶ್ರಮಕ್ಕೆ ಮೆಚ್ಚುವರು; ಆದರೆ ಹೊಲಸುತನವು ಇವರ ದೊಡ್ಡ ದುರ್ಗುಣವು. ಇವರು ಯೆತ್ತಿನ ಮೇಲೆ ಕಾಳು ಮುಂತಾದ ಸರಕುಗಳನ್ನು ಹೇರಿ ಕೊಂಡು ಹೋಗಿ ವ್ಯಾಪಾರ ಮಾಡುವರು; ಈ ವ್ಯಾಪಾರ ನಡಿಯದಿದ್ದಾಗ ಕೂಲಿಯೇ ಇವರ ಉಪಜೀವನದ ಹೋರೆಯು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ. ಒಟ್ಟಿಗೆ ಇವರು ಇಳಿತರದ ಸ್ಥಿತಿಯಲ್ಲಿರುತ್ತಾರೆ.

**ಬಣಜಿಗರು.**

ಬಣಜಿಗರು.—ಇವರು ಉತ್ತಮ ಕುಲದ ಲಿಂಗವಂತರು, ನಾಲ್ಕೂ ಜಿಲ್ಲೆಗಳಲ್ಲಿ ವಾಸಿಸುತ್ತಾರೆ. ಇವರ ಜನ್ಮ ಭಾಷೆ ಕನ್ನಡ. ಇವರ ಧರ್ಮ, ಆಚಾರ ಮುಂತಾದವುಗಳನ್ನು ಹಿಂದೆ "ಲಿಂಗವಂತರು" ಯೆಂಬ ಸದರಿನ ಕೆಳಗೆ ವಿವರಿಸಿದ್ದೇವೆ. ಇವರ ಹೆಂಗಸರು ಕಚ್ಚೆ ಹಾಕುವದಿಲ್ಲ, ಹಚ್ಚೀ ಬೊಟ್ಟು ಹಣೆ ಮುಂಗೈಗಳ ಮೇಲೆ ಚುಚ್ಚಿ ಕೊಳ್ಳುವರು. ಲಿಂಗವಂತರು ಉಳವಿಗೂ, ಉತ್ತರ ಆರ್ಕಾಟ ಶೀಮೆಯಲ್ಲಿ ಪರ್ವತ ಗುಡ್ಡದ ಮೇಲಿರುವ ಮಲ್ಲಿಕಾರ್ಜುನವೆಂಬ ದೇವಸ್ಥಾನಕ್ಕೂ ಯಾತ್ರೆಗೆ ಹೋಗುತ್ತಾರೆ. ಇವರಲ್ಲಿ ಹೆಣ್ಣು ಮಕ್ಕಳು ಮೈನೆರಿದ ಬಳಿಕ ಅವರ ಲಗ್ನವಾಗಲಿಕ್ಕೆ ಅಡ್ಡಿ ಇಲ್ಲ, ವಿಧವೆಗಳ ಲಗ್ನಕ್ಕೂ ಅಡ್ಡಿ ಇಲ್ಲ. ಬಣಜಿಗರ ಮುಖ್ಯ ಹೋರೆ ವ್ಯಾಪಾರವು. ಚಿಕ್ಕ ತಕ್ಕಡೀ ಅಂಗಡಿ, ಕಾಳು, ಅರಳಿ, ವಸ್ತ್ರ, ಹುಂಡಿ, ಮುಂತಾದವುಗಳೇ ಇವರ ವ್ಯಾಪಾರದ ಮುಖ್ಯ ಪ್ರಕಾರಗಳು. ಕೆಲವರು ವೊಕ್ಕಲತನವನ್ನೂ ಮಾಡುವರು. ಒಟ್ಟಿಗೆ ಬಣಜಿಗರು ಸುಖದಿಂದಿದ್ದಾರೆ. ಇವರಲ್ಲಿ ಬುನಾದಿಯಿಂದ ಓದು ಬರಹ ಕಲಿಯುವ ನಡಾವಳಿಯುಂಟು. ಈಗಿನ ಸರಕಾರೀ ಶಾಲೆಗಳಲ್ಲಿ ಇವರು ತಮ್ಮ ಮಕ್ಕಳನ್ನು ಪ್ರೀತಿಯಿಂದ ವಿದ್ಯಾಭ್ಯಾಸಕ್ಕೆ ಕಳಿಸುತ್ತಾರೆ.

**ಮಾರವಾಡಿಗಳು.**

ಮಾರವಾಡಿಗಳು.—ವಿಜಾಪುರ ಹೊರ್ತಾಗಿ ಉಳಿದ ಮೂರು ಜಿಲ್ಲೆಗಳಲ್ಲಿ ಅಲ್ಪಸ್ವಲ್ಪ ಜನರನ್ನು ಕಾಣ ಬಹುದು. ಆದರೂ ಇವರು ದೊಡ್ಡ ಪಟ್ಟಣಗಳಲ್ಲಿ ಇರುವದೇ ಬಹಳ. ಇವರು ವ್ಯಾಪಾರದ ನಿಮಿತ್ತವಾಗಿ ತಮ್ಮ ಮಾರವಾಡ ದೇಶದಿಂದ ಈ ಶೀಮೆಗೆ ಬಂದವರು. ಆದದರಿಂದ ಇವರು ಮನೆಯಲ್ಲಿ ಮಾರವಾಡೀ ಭಾಷೆಯನ್ನೇ ಆಡುವರು; ಆದರೂ ತಮ್ಮ ವ್ಯಾಪಾರಕ್ಕೆ ತಕ್ಕಷ್ಟು ಮಹಾರಾಷ್ಟ್ರ ಕನ್ನಡ ಭಾಷೆಗಳನ್ನು ಅಡ್ಡತಿಡ್ಡ ಸ್ವರದಿಂದ ಕೆಡಿಸಿ ಮಾತಾಡುತ್ತಿರುತ್ತಾರೆ. ಇವರಲ್ಲಿ ಶ್ರಾವಕ, ಅಂದರೆ ಜೈನ, ಮಿಶ್ರಿ, ಅಂದರೆ ವೈಷ್ಣವ, ಯೆಂಬ ಯೆರಡು ಮುಖ್ಯ ಧರ್ಮ ಪಂಥಗಳುಂಟು. ಒಂದು ಪಂಥದವರು ಯೆರಡನೇ ಪಂಥದವರ ಸಂಗಡ ಅನ್ನ ವ್ಯವಹಾರ ಮಾಡುವದಿಲ್ಲ. ಮಾರವಾಡಿಗಳಲ್ಲಿ ವೊಂಬತ್ತು ಜಾತಿಗಳುಂಟು; ಅವರಲ್ಲಿ ಕೆಲವರನ್ನು ಮಾತ್ರ ಈ ಶೀಮೆಯಲ್ಲಿ ಕಾಣ ಬಹುದು. ಶ್ರಾವಕ ಪಂಥದವರು ತಮ್ಮ ತೀರ್ಥಂಕರರಲ್ಲದೆ ಬಾಲಾಜಿಯನ್ನು ಸಹ ಪೂಜಿಸುವರು. ಮಾರವಾಡಿಗಳಲ್ಲಿ ಬಾಬ, ರಟೂರ, ಸೋಲಂಕಿ, ಮುಂತಾದ ಹಲವು ಗೋತ್ರಗಳಿರುತ್ತವೆ. ಒಂದೇ ಗೋತ್ರದವರು ತಮ್ಮ ತಮ್ಮೊಳಗೆ ಲಗ್ನ ಸಂಬಂಧ ಮಾಡುವದಿಲ್ಲ. ಗಂಡಸರು ತಲೆಯ

ಮೇಲೆ ಚಂಡಿಕೆಯಿಲ್ಲದೆ ಜುಲಿಪೆಗಳನ್ನು ಕಾಯುವರು. ಇವರು ವಾಡಿಕೆಯಾಗಿ ಹತ್ತೆಂಟು ಮೊಳ ಉದ್ದವಾದ ಕೆಂಪು ಮುಂಡಾಸ ತಲೆಗೆ ಸುತ್ತಿ ಕೊಳ್ಳುವರು. ಹೆಂಗಸರು ಪರಿಕರವನ್ನುಟ್ಟುಕೊಂಡು, ಬಲಕ್ಕೆ ಶರಗು ಹೊದ್ದು ಕೊಳ್ಳುವರು; ಕುಬ್ಬುಸದ ಗಂಟು ಬೆನ್ನಿನ ಮೇಲೆ. ಇವರು ಮೊಣಕೈ ವರೆಗೆ (ಲಂಬಾಡಿಗರಂತೆ) ಆನೇ ಹಲ್ಲಿನ ಬಳೆಗಳನ್ನು ಇಟ್ಟು ಕೊಳ್ಳುವರು. ಮಾರವಾಡಿಗಳು ಮದ್ಯ ಮಾಂಸಗಳನ್ನು ತಕ್ಕೊಳ್ಳುವದಿಲ್ಲ; ಸ್ವದೇಶದ ಬ್ರಾಹ್ಮಣರಿಗೆ ಮಾತ್ರ ಮಾನ ಕೊಡುತ್ತಾರೆ. ಇವರಲ್ಲಿ ವಿಧವೆಗಳಿಗೆ ಲಗ್ನವಿಲ್ಲ, ಕ್ಷೌರವೂ ಇಲ್ಲ, ಹೆಣಗಳನ್ನು ಸುಡುತ್ತಾರೆ. ಭಾದ್ರಪದ ಮಾಸದಲ್ಲಿ ಇವರು ಬಹಳ ಉಪೋಷಣಗಳನ್ನು ಮಾಡುವರು. ಮಾರವಾಡಿಗಳು ತಾಳ್ಮೆಯಿಂದ ಶ್ರಮ ಮಾಡುವವರೂ, ಬಹಳ ಕೃಪಣರೂ, ಧೈರ್ಯಶಾಲಿಗಳೂ ಇರುತ್ತಾರೆ. ನಿರ್ದಯತ್ವ, ಅಪ್ರಮಾಣಿಕತನ, ಇವೆರಡು ಇವರ ದೊಡ್ಡ ದುರ್ಗುಣಗಳು. ಇವರು ಅರಿವೆ, ಕಾಳು, ಮುಂತಾದ ಹಲವು ಬಗೆಯ ವ್ಯಾಪಾರ ಮಾಡುವರು; ಆದರೆ ಬಡಜನರಿಗೆ ಸಾಲ ಕೊಡುವದೇ ಯೆಲ್ಲಕ್ಕೂ ಹೆಚ್ಚು ಲಾಭದ ವ್ಯಾಪಾರವು. ಬಡಜನರು, ವಿಶೇಷವಾಗಿ ವೊಕ್ಕಲಿಗರು, ಇವರ ಕೈಯಲ್ಲಿ ಶಿಕ್ಕರೆಂದರೆ ಅವರ ಮನೆ ಹಾಳಾಗದೆ ಇರದು. ಆದದರಿಂದ ಮಾರವಾಡಿ ಯೆಂದರೆ ಕ್ಷಯರೋಗವೆಂದು ಜನರು ಯೆಣಿಸುವರು. ಇವರು ವ್ಯಾಪಾರದಲ್ಲಿ ತಕ್ಕಮಟ್ಟಿಗೆ ಹಣಗಳಿಸಿ ಕೊಂಡ ಬಳಿಕ ಬಹುತರ ಈ ದೇಶದಲ್ಲಿ ನಿಲ್ಲುವದಿಲ್ಲ; ಸ್ವದೇಶಕ್ಕೆ ಹೊರಟು ಹೋಗುವರು.

**ನಾರ್ವೇಕರರು.**

ನಾರ್ವೇಕರರು.—ಇವರು ಗೋಮಂತಕ ಶೀಮೆಯಲ್ಲಿ ನಾರ್ವೆ ಯೆಂಬ ಗ್ರಾಮದಿಂದ ಸುಮಾರು ೨೦೦ ವರ್ಷಗಳ ಹಿಂದೆ ಬೆಳಗಾವೀ ಜಿಲ್ಲೆಯಲ್ಲಿ ಬಂದರೆಂದು ಹೇಳುತ್ತಾರೆ. ಆ ಜಿಲ್ಲೆಯಲ್ಲಿಯೇ ಇವರ ವಸ್ತಿ ಬಹಳ ಇರುತ್ತದೆ; ಕಾನಡಾ ಜಿಲ್ಲೆಯಲ್ಲಿ ಸ್ವಲ್ಪ. ಇವರು ಮನೆಯಲ್ಲಿ ಕೊಂಕಣೀ ಭಾಷೆಯನ್ನಾಡುವರು; ಶೈವ ಮತದವರು, ಶಂಕೇಶ್ವರದ ಸ್ವಾಮಿಗೆ ನಡಕೊಳ್ಳುವರು. ಆದರೆ ಇವರ ಮುಖ್ಯ ಕುಲದೇವತೆ ಗೋಮಂತಕ ಪ್ರಾಂತದ ಮ್ಹಾಳಸಾ ಯೆಂಬ ದೇವಿಯು. ನಾರ್ವೇಕರರಲ್ಲಿ ಸುಖಿಯಾಗಿದ್ದವರು ಬ್ರಾಹ್ಮಣರಂತೆ ಉಡಿಗೆಗಳನ್ನು ಧರಿಸುವರು, ಉಳಿದವರು ಶೂದ್ರರಂತೆ; ಆದರೂ ಹೆಂಗಸರು ಕಚ್ಚೆ ಹಾಕಿಕೊಂಡು ಕುಂಕುಮ ಹಚ್ಚಿಕೊಳ್ಳುವರು. ನಾರ್ವೇಕರರು ತಾವು ವೈಶ್ಯರೆಂದು ಹೇಳಿ, ಲಗ್ನದ ಕಾಲಕ್ಕೆ ಯಜ್ಞೋಪವೀತ ಹಾಕಿ ಕೊಳ್ಳುವರು, ಹೆಣಗಳನ್ನು ಸುಡುವರು. ಆದರೂ ಮದ್ಯ ಮಾಂಸಗಳನ್ನು ನಿರಾತಂಕವಾಗಿ ತಕ್ಕೊಳ್ಳುವರು. ಕೆಲವರು ವಿಧವೆಗಳಿಗೆ ಲಗ್ನ ಮಾಡುತ್ತಾರೆ, ಕೆಲವರು ಮಾಡುವದಿಲ್ಲ; ಹೆಣ್ಣು ಮಕ್ಕಳ ಲಗ್ನವು ನೆರೆಯುವ ಪೂರ್ವದಲ್ಲಿ ಆಗಲಿಕ್ಕೆ ಬೇಕು. ಉದ್ಯೋಗ, ಸಮಾಧಾನ, ಆದರ, ಇವೇ ನಾರ್ವೇಕರರ ಮುಖ್ಯ ಸದ್ಗುಣಗಳು. ಇವರು ಯೆಲ್ಲ ಬಗೆಯ ವ್ಯಾಪಾರಗಳನ್ನು ಮಾಡುವರು. ಆದರೂ ತುಪ್ಪದ ಮಾರಾಟ, ಅವಲಕ್ಕೀ ಕುಟ್ಟುವದು, ಚುರಮುರೀ ಹುರಿಯುವದು, ಇವೇ ಇವರ ಕುಲದ ಹೋರೆಗಳು. ನಾರ್ವೇಕರರು ಹೊಟ್ಟೆಗೆ ಸುಖಿಯಾಗಿದ್ದಾರೆ, ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವರು.

ಬಾಂದೇಕರರು.—ಇವರ ವಸ್ತಿಯಾದರೂ ಬೆಳಗಾವೀ ಜಿಲ್ಲೆಯಲ್ಲಿ ಹೆಚ್ಚು, ಕಾನಡಾ ಜಿಲ್ಲೆಯಲ್ಲಿ ಅಷ್ಟಿಲ್ಲ. ಉಳಿದ ಯೆರಡು ಜಿಲ್ಲೆಗಳಲ್ಲಿ ಇವರ ವಸ್ತಿ ಇಲ್ಲ. ಗೋವೇ ಶೀಮೆಯಲ್ಲಿ ಪೋರ್ತುಗೀಸರು ಜನರನ್ನು ಕುಲಗೆಡಿಸಿದ ಕಾಲಕ್ಕೆ ಅಲ್ಲಿಂದ ಇವರ ಪೂರ್ವಜರು ಓಡಿ ಬಂದರೆಂದು ಹೇಳುತ್ತಾರೆ. ಇವರು ತಾವು ಶೂದ್ರರೆಂದು ಹೇಳುತ್ತಾರೆ. ಇವರ ಧರ್ಮ, ನಡಾವಳಿ, ಊಟ, ಉಡಿಗೆಗಳೆಲ್ಲ ಸಾರ್ವೇಕರರಂತೆ. ಇವರ ಮುಖ್ಯ ಹೋರೆ ಅಂಗಡಿ; ಕೆಲವರು ಚುರುಮುರೀ ಹುರಿಯುವರು.

**ಬಾಂದೇಕರರು.**

ಶೀಲವಂತರು.—ಇವರು ಉತ್ತಮ ಕುಲದ ಲಿಂಗವಂತರು. ಆದರೂ ಬುನಾದಿಯಲ್ಲಿ ಇವರು ಪರನಾಡಿನಿಂದ ಬಂದರೆಂದು ಹೇಳುತ್ತಾರೆ. ಧಾರವಾಡ ವಿಜಾಪುರ ಜಿಲ್ಲೆಗಳಲ್ಲಿ ಮಾತ್ರ ಇವರನ್ನು ಕಾಣ ಬಹುದು. ಇವರು ಬಹಳ ಮಡಿ ಮಾಡುತ್ತಿರುವ ಕಾರಣ ಇವರಿಗೆ ಶೀಲವಂತರೆಂಬ ಹೆಸರು ಬಂದದೆ. ಇವರ ನೀರು ಸಹ ಪರಕೀಯರು ನೋಡ ಕೂಡದು. ಹೊಳೆ ಹಳ್ಳಗಳ ನೆರೆಯಲ್ಲಿ ಇರುವ ಶೀಲವಂತರು ಪ್ರತಿ ದಿವಸ ಹೊಸ ವೊರತಿಯನ್ನು ತೆಗಿದು ಅದರೊಳಗಿನ ನೀರು ಮನೆಗೆ ವೊಯ್ಯುವರು. ಅಯ್ಯಗಳ ಮೇಲೆ ಇವರ ಭಕ್ತಿ ಬಹಳ; ಅವರ ಪಾದೋದಕವನ್ನು ಕುಡಿಯುವರು, ಮೈ ತುಂಬ ಹಚ್ಚಿ ಕೊಳ್ಳುವರು. ಇವರ ನಡಾವಳಿಗಳೂ ಧರ್ಮ ಕೃತ್ಯಗಳೂ ವಾಡಿಕೆಯಾಗಿ ಬಣಜಿಗರಂತೆ ಇರುತ್ತವೆ. ವ್ಯಾಪಾರವೇ ಇವರ ಹೋರೆಯು. ಆದರೆ ಕೆಲವರು ಬಡಿಗಿತನದ ಹೋರೆ ಮಾಡುವರು, ಕೆಲವರು ಸೊನ್ನಗಾರರ ಹೋರೆ ಮಾಡುವರು.

**ಶೀಲವಂತರು.**

ತೆಲಗು ಬಣಜಿಗರು.—ಇವರು ಬಂಕಾಪುರ, ಗದಗು, ನವಲಗುಂದ ತಾಲೂಕುಗಳಲ್ಲಿ ಮಾತ್ರ ಇರುತ್ತಾರೆ; ಆದರೆ ಲಿಂಗವಂತರಲ್ಲ. ಇವರ ಕುಲದೇವರು ವೆಂಕಟರಮಣ; ಧರ್ಮಗುರು ತಿರುಮಲ ತಾತಾಚಾರ್ಯನೆಂಬ ಶ್ರೀ ವೈಷ್ಣವ ಬ್ರಾಹ್ಮಣನು. ಇವರು ಮನೆಯಲ್ಲಿ ತೆಲಗು, ತಮಿಳ ಭಾಷೆಗಳನ್ನು ಆಡುವರು. ಆದದರಿಂದ ಕೆಲಕಾಲದ ಪೂರ್ವದಲ್ಲಿ ಇವರು ಮದ್ರಾಸ ಇಲಾಖೆಯಿಂದ ಬಂದರೆಂದು ತೋರುತ್ತದೆ. ಇವರ ಮೈಬಣ್ಣ ಕಪ್ಪು, ನಿಲಿವಿಕೆ ಯೆತ್ತರ, ಮೈಕಟ್ಟು ತಿಳುವು. ಇವರು ಬಾಳೇ ಯೆಲೆ, ಪತ್ರಾವಳಿಗಳಲ್ಲಿ ಉಣ್ಣುವರು, ತಳಿಗೆಯಲ್ಲಿ ಉಣ್ಣುವದಿಲ್ಲ. ಇವರ ಗುರುವು ಇವರಿಗೆ ತಪ್ತಮುದ್ರೆಯನ್ನು ಕೊಡುವನು. ಆದರೆ ಮದ್ಯ ಮಾಂಸಗಳನ್ನು ತಕ್ಕೊಳ್ಳುಲಿಕ್ಕೆ ಇವರಿಗೆ ಅಡ್ಡಿ ಇಲ್ಲ. ತೆಲಗು ಬಣಜಿಗರು ನಿರ್ಮಲರು, ಬುದ್ಧಿವಂತರು, ಪ್ರಮಾಣಿಕರು, ಉದ್ಯೋಗಿಗಳು, ಸರಳ ಸ್ವಭಾವದವರು, ಮಿತವ್ಯಯಿಗಳು. ಅರಿವೆ ಕಾಳುಗಳ ಮಾರಾಟವೇ ಇವರ ಮುಖ್ಯ ಹೋರೆಯು; ಕೆಲವರು ಸಾವಕಾರಿಕೇ ಮಾಡುವರು, ಕೆಲವರು ಸರಕಾರೀ ನೌಕರಿಯನ್ನು ಮಾಡುವರು. ಇವರ ಹೆಣ್ಣು ಮಕ್ಕಳ ಲಗ್ನವು ನೆರಿಯುವ ಪೂರ್ವದಲ್ಲಿಯೂ ನೆರಿದ ಬಳಿಕೂ ಆಗುತ್ತದೆ. ಲಗ್ನದಲ್ಲಿ ಭೋರ ಜಗುಲಿಯ ಯೆಡಬಲದಲ್ಲಿ ಹೊಸ ಗಡಿಗೆಗಳ ಅಡಿಕಿಲು ಯೆರಿಸಿ

**ತೆಲಗು ಬಣಜಿಗರು.**

ಇಡುವರು; ಸಸಿಗಳನ್ನು ಹಾಕಿಡುವರು. ನಾಲ್ಕನೇ ದಿವಸ ಆ ಅಡಿಕಿಲುಗಳಲ್ಲಿಯ ಗಡಿಗೆಗಳನ್ನು ತೆಗಿದು ಅವುಗಳಲ್ಲಿ ನೀರು ಹಾಕಿ, ಕೆಲವೊಂದರೊಳಗೆ ಉಂಗುರವನ್ನಾಗಲಿ ನತ್ತಾಗಲಿ ಚಲ್ಲಿ ಅದನ್ನು ಹುಡುಕಲಿಕ್ಕೆ ಮದಿಮಕ್ಕಳನ್ನು ಹಚ್ಚುವರು. ಇದಕ್ಕೆ ನಾಗಾವಳಿ ಯೆಂದೆನ್ನುವರು. ಆ ಅಲಂಕಾರವನ್ನು ಹುಡುಕಿ ತೆಗಿದವರು ಮುಂದೆ ಮನೆಯ ಹಿರಿತನವನ್ನು ಪಡೆಯುವರೆಂದು ಇವರ ನಂಬಿಗೆಯುಂಟು. ಇವರಲ್ಲಿ ವಿಧವೆಗಳಿಗೆ ಲಗ್ನವಿಲ್ಲ. ಯಾರಾದರೂ ಸತ್ತರೆ, ಹೆಣದ ಭುಜಗಳ ಮೇಲೆ ಬಿದರಿನ ಶಂಕಚಕ್ರಗಳನ್ನು ಮಾಡಿ ಪೊತ್ತಿ ಹೆಣವನ್ನು ಸುಡಲಿಕ್ಕೆ ವೊಯ್ಯುವರು. ಇವರು ಸುಖದಿಂದ ಕಾಲಕ್ಷೇಪ ಮಾಡುತ್ತಾರೆ, ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ.

**ತೆಲಗು ಒಷ್ಟಮರು.**

ತೆಲಗು ಒಷ್ಟಮರು.—ಇವರಾದರೂ ಮದ್ರಾಸ ಇಲಾಖೆಯಿಂದ ಬಂದವರು, ಧಾರವಾಡ ಜಿಲ್ಲೆಯಲ್ಲಿ ಮಾತ್ರ ಇರುತ್ತಾರೆ, ಮನೆಯಲ್ಲಿ ತೆಲಗು ಭಾಷೆಯನ್ನಾಡುವರು. ಇವರ ಕುಲದೇವತೆಗಳು ಹನುಮಂತ, ಹುಲಗೆಮ್ಮ; ಕಂಚಿಯಲ್ಲಿ ಇರುವ ತಾತಾಚಾರ್ಯನೆಂಬ ಶ್ರೀ ವೈಷ್ಣವ ಬ್ರಾಹ್ಮಣನು ಗುರು. ಇವರ ಮುಖಲಕ್ಷಣ, ನಿಲಿವಿಕೆ, ಉಡಿಗೆ, ಆಹಾರ, ಇವೆಲ್ಲ ತೆಲಗು ಬಣಜಿಗರಂತೆ. ಇವರು ಯಾವ ಕಾರ್ಯಕ್ಕೂ ಬ್ರಾಹ್ಮಣರನ್ನಾಗಲಿ ಲಿಂಗವಂತರನ್ನಾಗಲಿ ಕರೆಯುವದಿಲ್ಲ, ಹೆಣವನ್ನು ಹುಗಿಯುವರು. ಹಲ್ಲುಪುಡಿ, ಕುಂಕುಮ, ಬುಕ್ಕಿಟ್ಟುಗಳನ್ನು ಮಾಡಿ ಮಾರುವದೇ ಇವರ ಉಪಜೀವನದ ಹೋರೆಯು. ಇವರು ಮಕ್ಕಳನ್ನು ಶಾಲೆಗೆ ಕಳಿಸುವದಿಲ್ಲ.

**ಕೊಮಟಗರು.**

ಕೊಮಟಗರು ಇಲ್ಲವೆ ವೈಶ್ಯರು.—ಇವರು ನಾಲ್ಕೂ ಜಿಲ್ಲೆಗಳಲ್ಲಿ ಇರುತ್ತಾರೆ. ಇವರ ಜನ್ಮ ಭಾಷೆ ಕನ್ನಡ; ಆದರೆ ಕೆಲವರು ಮನೆಯಲ್ಲಿ ತೆಲಗು ಭಾಷೆಯನ್ನಾಡುವರು. ಇವರಲ್ಲಿ ಬ್ರಾಹ್ಮಣರಂತೆ ೧೬ ಸಂಸ್ಕಾರಗಳಾಗುತ್ತವೆ. ಇವರು ಶಂಕೇಶ್ವರದ ಸ್ವಾಮಿಯ ಶಿಷ್ಯರು, ಬ್ರಾಹ್ಮಣರಿಗೆ ಮಾನ ಕೊಡುವರು, ವಿಧವೆಗಳ ಲಗ್ನ ಮಾಡುವದಿಲ್ಲ, ಹೆಣ್ಣು ಮಕ್ಕಳ ಲಗ್ನವನ್ನು ನೆರೆಯುವ ಪೂರ್ವದಲ್ಲಿ ಮಾಡುವರು. ವಿಜಾಪುರ, ಕಾನಡಾ ಜಿಲ್ಲೆಗಳಲ್ಲಿಯ ಕೆಲವರು ಕೊಮಟಗರು ಬಳ್ಳಾರೀ ಜಿಲ್ಲೆಯಲ್ಲಿ ಇರುವ ಕಬೀರ ಭಾಸ್ಕರಾಚಾರ್ಯನೆಂಬ ಗುರುವಿಗೆ ನಡಕೊಳ್ಳುವರು. ಕೊಮಟಗರಲ್ಲಿ ತುಪ್ಪದ ಕೊಮಟಗರೆಂತಲೂ, ಯೆಣ್ಣೆಯ ಕೊಮಟಗರೆಂತಲೂ ಯೆರಡು ವೊಳಭೇದಗಳುಂಟು. ಅವರಲ್ಲಿ ಪರಸ್ಪರ ಅನ್ನ ವ್ಯವಹಾರವಾಗುವದಿಲ್ಲ. ಇವರಲ್ಲಿ ೧೦೧ ಗೋತ್ರಗಳಿವೆ; ಒಂದೇ ಗೋತ್ರದವರಲ್ಲಿ ಶರೀರ ಸಂಬಂಧವಾಗುವದಿಲ್ಲ. ಕೊಮಟಗರು ಮದ್ಯ ಮಾಂಸಗಳ ಸಂಪರ್ಕ ಮಾಡುವದಿಲ್ಲ, ಸತ್ತವರ ಸೂತಕವನ್ನು ೧೫ ಹಿಡಿಯುವರು. ಇವರಲ್ಲಿ ಸೋದರಮಾವನ ಮಗಳನ್ನು ಲಗ್ನ ಮಾಡಿ ಕೊಳ್ಳಲಿಕ್ಕೆ ಬೇಕೆಂಬ ನಿರ್ಬಂಧವಿರುತ್ತದೆ. ವಾಡಿಕೆಯಾಗಿ ಇವರ ಆಚಾರಗಳು ಬ್ರಾಹ್ಮಣರಂತೆ ಇರುತ್ತವೆ. ಕೊಮಟಗರು ಯೆಲ್ಲ ಬಗೆಯ ವ್ಯಾಪಾರ ಮಾಡುವರು; ಕಾಳು, ತುಪ್ಪ, ಬೆಣ್ಣೆಗಳ ಮಾರಾಟ, ಚಿಕ್ಕ ತಕ್ಕಡೀ ಅಂಗಡಿ, ಅರಿವೆಯ ಅಂಗಡಿ, ಇವೇ ಇವರ ಮುಖ್ಯ ಹೋರೆಗಳು. ಕೊಮಟಗರು, ವಿಶೇಷವಾಗಿ ಧಾರವಾಡ ಜಿಲ್ಲೆಯವರು, ತಂತ್ರಗಾರರೆಂತಲೂ

ಧೂರ್ತರೆಂತಲೂ ಹೆಸರಾಗಿದ್ದಾರೆ. ಇವರು ಬೆಳುವಣಿಗೆಯ ಸ್ಥಿತಿಯಲ್ಲಿದ್ದಾರೆ, ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ.

**ಭಾಟಯರು.**

ಭಾಟಯರು.—ಇವರು ಸುಮಾರು ೩೦ ವರ್ಷದ ಹಿಂದೆ ಕಚ್ಛ ಪ್ರಾಂತದಿಂದ ಬಂದು ಬೆಳಗಾವಿ, ಚಿಕ್ಕೋಡಿ, ಕುಮಟಾ, ಕಾರವಾಡ, ಈ ಗ್ರಾಮಗಳಲ್ಲಿ ವಾಸಿಸುತ್ತಾರೆ. ಇವರು ಮನೆಯಲ್ಲಿ ಕಚ್ಛೀ ಭಾಷೆಯನ್ನಾಡುವರು. ಬೆಳಗಾವೀ ಜಿಲ್ಲೆಯೊಳಗಿನ ಭಾಟಯರು ಮೊದಲು ತಮ್ಮ ಜಾತಿಯವರಂತೆ ಮುಂಡಾಸ ಹಾಕುವರು; ಆದರೆ ಈಗ ಜರದ ಅಂಚಿನ ರುಮಾಲ ಸುತ್ತಿಕೊಳ್ಳುತ್ತಾರೆ. ಇವರು ಗುಜರಾಥದೊಳಗಿನ ವಲ್ಲಭಾಚಾರ್ಯ ಮತದ ವೈಷ್ಣವರು; ಕೃಷ್ಣನೇ ಇವರ ಕುಲದೇವತೆ; ಆದರೂ ಇವರು ಯಾವತ್ತು ಹಿಂದೂ ದೇವತೆಗಳಿಗೆ ನಡಕೊಳ್ಳುವರು, ಧರ್ಮ ಕಾರ್ಯಗಳಲ್ಲಿ ಬ್ರಾಹ್ಮಣರನ್ನು ಕರೆಯುವರು; ಲಗ್ನ ಕಾರ್ಯಕ್ಕೆ ಮಾತ್ರ ತಮ್ಮ ಕುಲದ ಪ್ರೋಕರ್ಣರೆಂಬ ಬ್ರಾಹ್ಮಣರನ್ನು ಮುಂಬಯಿಯಿಂದ ಕರಿಸುವರು. ಭಾಟಯರು ಮದ್ಯ ಮಾಂಸಗಳನ್ನು ಮುಟ್ಟುವದಿಲ್ಲ, ವಿಧವೆಗಳ ಲಗ್ನ ಮಾಡುವದಿಲ್ಲ, ಆದರೂ ವಿಧವೆಗಳಿಗೆ ಕ್ಷೌರದ ಬಲಾತ್ಕಾರವಿಲ್ಲ. ಇವರು ಸುರೂಪಿಗಳೂ, ಉದ್ಯೋಗಿಗಳೂ ಪ್ರಮಾಣಿಕರೂ ಇರುತ್ತಾರೆ. ವ್ಯಾಪಾರದಲ್ಲಿ ಭಾಟಯರು ಬಹು ಘಟ್ಟಿಗರೂ ಧೈರ್ಯವುಳ್ಳವರೂ ಇರುವದರಿಂದ ದೊಡ್ಡ ದೊಡ್ಡ ವ್ಯಾಪಾರಗಳಿಗೆ ಕೈಹಾಕುವರು; ಅರಳಿ, ಕಾಳು, ತೆಂಗಿನಕಾಯಿ, ಕೊಬ್ಬರಿ, ಅಡಿಕೆ, ಸಕ್ಕರಿ, ತುಪ್ಪ, ಮುಂತಾದ ಸರಕುಗಳ ವ್ಯಾಪಾರ ಮಾಡುವರು. ಇವರು ತಮ್ಮ ಸರಕುಗಳನ್ನು ಹುಬ್ಬಳ್ಳಿ, ವೆಂಗುರ್ಲೆ, ಮುಂಬಯಿಗಳಿಗೆ ಕಳಿಸುವದು ಬಹಳ. ಇವರು ಬೆಳುವಣಿಗೆಯ ಸ್ಥಿತಿಯಲ್ಲಿದ್ದಾರೆ, ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ.

**ಕಾಲವಾಡಿಗಳು.**

ಕಾಲವಾಡಿಗಳು.—ನಾಲ್ವತ್ತು ವರ್ಷಗಳ ಹಿಂದೆ ಕಾನಪುರದಿಂದ ಬಂದು ಬೆಳಗಾವಿಯಲ್ಲಿ ವಾಸಿಸುತ್ತಾರೆ. ಇವರು ಗಂಡುಗಚ್ಚೆಯ ಹಾಕುತ್ತಾರೆ; ಮೊದಲು ಮಾರವಾಡಿಗಳಂಥ ಮುಂಡಾಸ ಇಲ್ಲವೆ ಟೊಪ್ಪಿಗೆ ಹಾಕುತ್ತಿದ್ದರು; ಆದರೆ ಈಗ ರುಮಾಲ ಸುತ್ತಿಕೊಳ್ಳುತ್ತಾರೆ. ಹೆಂಗಸರು ಪರಿಕಾರ ಉಟ್ಟುಕೊಂಡು, ಮಾರವಾಡಿ ಹೆಂಗಸರಂತೆ ಕುಬ್ಬಸ ತೊಟ್ಟುಕೊಂಡು ಬಲಕ್ಕೆ ಶೆರಗು ಹೊದ್ದುಕೊಳ್ಳುತ್ತಾರೆ; ಬಳೆ ಇಟ್ಟು ಕೊಳ್ಳುವರು, ಕುಂಕುಮ ಹಚ್ಚಿ ಕೊಳ್ಳುವರು, ಆದರೆ ಮಂಗಳಸೂತ್ರ ಕಟ್ಟಿ ಕೊಳ್ಳುವದಿಲ್ಲ. ಕಾಲವಾಡಿಗಳಲ್ಲಿ ಮದ್ಯ ಮಾಂಸಗಳಿಗೆ ಅಡ್ಡಿ ಇಲ್ಲ; ಹಬ್ಬದ ದಿವಸ ಇವರಿಗೆ ಮಾಂಸಾಹಾರ ಬೇಕು. ಇವರಿಗೆ ಧರ್ಮಗುರುವಿಲ್ಲ; ಆದರೂ ಸರ್ವರಿಯರೆಂಬ ಬ್ರಾಹ್ಮಣರಿಗೆ ಇವರು ನಡಕೊಳ್ಳುವರು; ಮಹಾದೇವನಲ್ಲಿ ಭಕ್ತಿ ಹೆಚ್ಚು. ಉದ್ಯೋಗ, ನಿರ್ಮಲತನ, ಶೀಘ್ರಕೋಪ, ಇವೇ ಇವರ ಮುಖ್ಯ ಗುಣಗಳು. ಹೆಣ್ಣು ಮಕ್ಕಳು ನೆರೆಯುವ ಪೂರ್ವದಲ್ಲಿ ಅವರ ಲಗ್ನವಾಗುವದು; ಹುಟ್ಟಿದ ದಿವಸವೇ ಕೂಸಿಗೆ ಹೆಸರಿಡುವರು; ಗಂಡ ಸತ್ತರೆ ೧೦ನೇ ದಿವಸ, ಹೆಂಗಸು ಸತ್ತರೆ ೯ನೇ ದಿವಸ ಕರ್ಮ ಮಾಡುವವನು ಮೀಶಿ ಬೋಳಿಸಿ ಕೊಳ್ಳುವನು. ಲಗ್ನದಲ್ಲಿ ಹೆಣಿನ ತಾಯಿ ತಂದೆಗಳು ಅಳಿಯನ ಮನೆಗೆ ಊಟಕ್ಕೆ ಹೋಗುವದಿಲ್ಲ. ಇವರಲ್ಲಿ

ಹಣವುಳ್ಳವರು ಸಾವಕಾರಿಕೆ ಮಾಡುವರು, ಬಡವರು ಟಪಾಲಖಾತೆಯಲ್ಲಿ ನೌಕರೀ ಮಾಡುವರು. ಕಾಲವಾಡಿಗಳು ಹೊಟ್ಟೆಗೆ ದೈವುಳ್ಳವರೆನಿಸಿ ಕೊಳ್ಳುತ್ತಾರೆ, ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ.

ಬಾವಕುಳೆಯರು.

ಬಾವಕುಳೆಯರು.—ಇವರು ಗೋವೆಯಿಂದ ಬಂದು ಕಾರವಾಡದಲ್ಲಿ ವಾಸಿಸುತ್ತಾರೆ. ಇವರ ಹೆಸರಿನ ಮುಂದೆ "ಶೇಟ" ಯೆಂಬ ಬಹುಮಾನದ ಶಬ್ದವನ್ನು ಹಚ್ಚುವರು; ಆದರೆ ಇವರು ಬಾಂದೇಕರರ ಕುಲದವರೇ ಇರುತ್ತಾರೆ; ಮಾಂಸ ತಿನ್ನುವರು, ಆದರೆ ಸರಾಯಿ ಕುಡಿಯುವದಿಲ್ಲ. ಬಾವಕುಳೆಯರು ಅಕ್ಕಿ, ತೆಂಗಿನಕಾಯಿ, ವೀಳ್ಯದೆಲೆ, ಹಣ್ಣು, ಮಿಠಾಯಿ, ಇವುಗಳ ಬುಟ್ಟಿಯನ್ನು ತಲೆಯ ಮೇಲಿಟ್ಟುಕೊಂಡು ಮನೆ ಮನೆಗೆ ಮಾರುತ್ತ ತಿರುಗುವರು; ಕೆಲವರು ಹೊಕ್ಕಲತನ ಮಾಡುವರು. ಇವರ ನಡಾವಳಿ, ಧರ್ಮ, ಉಡಿಗೆ, ಸ್ವರೂಪ, ಗುಣ, ಆಹಾರ ಇವೆಲ್ಲ ಬಾಂದೇಕರರಂತೆ.

ಕನ್ನಡ ವೈಶ್ಯರು.

ಕನ್ನಡ ವೈಶ್ಯರು.—ಇವರು ಕಾನಡಾ ಜಿಲ್ಲೆಯಲ್ಲಿ ಘಟ್ಟದ ಮೇಲೂ ಕೆಳಗೂ ವಾಸಿಸುತ್ತಾರೆ; ಘಟ್ಟದ ಕೆಳಗೆ ವಿಶೇಷ. ಇವರು ಗಿಡ್ಡರು, ಕಪ್ಪು ಮೈಬಣ್ಣದವರು, ಕಸುವಿನ ಮೈಕಟ್ಟಿನವರು; ಮೀನ ತಿನ್ನುವರು, ಇವರ ಧರ್ಮ ಶೈವ, ಬ್ರಾಹ್ಮಣರೇ ಇವರ ಪುರೋಹಿತರು. ಇವರು ಗಂಡು ಮಕ್ಕಳ ಮುಂಜಿಯನ್ನು ೧೧ ವರ್ಷ ತುಂಬುವದರೊಳಗೆ ಬ್ರಾಹ್ಮಣರ ಕೈಯಿಂದ ಮಾಡಿಸುವರು; ವಿಧವೆಗಳ ಕ್ಷೌರ ಮಾಡಿಸುವರು; ಹೆಣವನ್ನು ಸುಡುವರು. ಇವರ ನಡಾವಳಿಗಳು ಕೊಂಕಣಿಗರ ನಡಾವಳಿಗಳಿಗೆ ಹೊಂದುತ್ತವೆ. ಇವರು ಕಾಳು, ಅರಿವೆ, ಮುಂತಾದವುಗಳ ಅಂಗಡಿಗಳನ್ನು ಹಾಕುವರು; ಬಾಂದೇಕರರಿಗಿಂತ ನೆಟ್ಟಗಿದ್ದಾರೆ, ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ.

ಮಲ್ಲವರು.

ಮಲ್ಲವರು.—ಇವರು ಧಾರವಾಡ ಜಿಲ್ಲೆಯಲ್ಲಿಯೂ ಕಾನಡಾ ಜಿಲ್ಲೆಯ ಘಟ್ಟದ ಮೇಲಿನ ತಾಲೂಕುಗಳಲ್ಲಿಯೂ ಇರುತ್ತಾರೆ. ಧಾರವಾಡ ಜಿಲ್ಲೆಯವರ ಮುಖ್ಯ ಹೋರೆ ಹೊಕ್ಕಲತನ, ಕಾನಡಾ ಜಿಲ್ಲೆಯವರು ವರ್ತಕರು. ಇವರು ಉತ್ತಮ ಕುಲದ ಲಿಂಗವಂತರು; ಇವರ ಜನ್ಮ ಭಾಷೆ ಕನ್ನಡ. ಇವರ ಆಚಾರ, ಆಹಾರ, ಧರ್ಮ, ನಡಾವಳಿ, ಮುಂತಾದವುಗಳೆಲ್ಲ ಬಣಜಿಗರಂತೆ.

ಪೆಡಣೇಕರ ವೈಶ್ಯರು.

ಪೆಡಣೇಕರ ವೈಶ್ಯರು.—ಪೆಡಣೇಕರ ಬ್ರಾಹ್ಮಣರಂತೆ ಇವರಾದರೂ ಪೆಡಣೆಯೆಂಬ ಗ್ರಾಮದಿಂದ ಬಂದವರು. ಇವರು ಕಾರವಾಡ ಅಂಕೋಲಾ, ಕುಮಟಾ, ಹೊನ್ನಾವರ, ಸಿರಸಿ, ಈ ಗ್ರಾಮುಗಳಲ್ಲಿ ವಾಸಿಸುತ್ತಾರೆ. ಇವರ ಆಚಾರ ವ್ಯವಹಾರಾದಿಗಳೆಲ್ಲ ಪೆಡಣೇಕರ ಬ್ರಾಹ್ಮಣರಂತೆಯೇ ಇರುತ್ತವೆ. ಇವರು ತಮ್ಮ ಹೆಸರಿಗೆ "ಶೇಟ" "ನಾಯಿಕ" ಯೆಂಬ ಉಪಪದಗಳನ್ನು ಜೋಡಿಸುತ್ತಾರೆ; ಕದ್ದು ಮುಚ್ಚಿ ಮಾಂಸಾಹಾರ ತಕ್ಕೊಳ್ಳುವರು. ಪೆಡಣೇಕರ ಬ್ರಾಹ್ಮಣರೇ ಇವರ ಮನೆಗಳಲ್ಲಿ ಮುಂಜಿ, ಲಗ್ನ ಮುಂತಾದ ಕಾರ್ಯಗಳನ್ನು ಮಾಡಿಸುತ್ತಾರೆ.

ಅವಲಕ್ಕೀ ಕುಟ್ಟುವದು, ಚುರಮುರೀ ಹುರಿಯುವದು, ಇವೆರಡು ಪೆಡಣೇಕರ ವೈಶ್ಯರ ಮುಖ್ಯ ಹೋರೆಗಳು. ಆದರೆ ಕೆಲವರು ತೆಂಗು, ಬಾಳೀಹಣ್ಣು, ವೀಳ್ಯದೆಲೆ, ಅಡಿಕೆ, ಮುಂತಾದವುಗಳನ್ನು ಕೊಂಡು ಮಾರುವರು. ಇವರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವದಿಲ್ಲ.

**ಲೋಹಾಣರು.**

ಲೋಹಾಣರು.—ಭಾಟಿಯರಂತೆ ಇವರಾದರೂ ಕಚ್ಛ ದೇಶದಿಂದ ಕಾನಡಾ ಜಿಲ್ಲೆಗೆ ಬಂದವರು. ಇವರ ಮನೆಯಲ್ಲಿಯ ಭಾಷೆ, ಆಹಾರ, ಆಚಾರ, ಉಡಿಗೆ, ಧರ್ಮ, ಇವೆಲ್ಲ ಭಾಟಿಯರಂತೆ ಇರುತ್ತವೆ. ಇವರು ಭಾಟಿಯರ ಮನೆಯಲ್ಲಿ ಉಣ್ಣುವರು, ಆದರೆ ಭಾಟಿಯರು ಇವರ ಮನೆಯಲ್ಲಿ ಉಣ್ಣುವದಿಲ್ಲ. ಇವರು ಅರಳಿ, ಅರಿವೆ, ಯಾಲಕ್ಕಿ, ಅಡಿಕೆ, ಉತ್ತತ್ತಿ, ಮುಂತಾದವುಗಳ ಅಂಗಡಿಯ ಹಾಕಿ ಮಾರಾಟ ಮಾಡುವರು. ಇವರಲ್ಲಿ ವಿಧವೆಗಳಿಗೆ ಲಗ್ನವಿಲ್ಲ; ಆದರೆ ಅವರ ತಲೆ ಬೋಳಿಸುವದಿಲ್ಲ. ಇವರು ಹೊಟ್ಟೆಗೆ ಬೆಳುವಣಿಗೆಯ ಸ್ಥಿತಿಯಲ್ಲಿದ್ದಾರೆ.

**ಅಗರವಾಲರು.**

ಅಗರವಾಲರು.—ಇವರು ಪಂಢರಿಪುರದಿಂದ ಸುಮಾರು ೧೫೦ ವರ್ಷಗಳ ಹಿಂದೆ ಬಂದು ವಿಜಾಪುರದಲ್ಲಿ ವಾಸಿಸುತ್ತಾರೆ. ಇವರು ರಜಪೂತ ಕುಲದವರೆಂದು ತೋರುತ್ತದೆ. ಇವರ ಮುಖಚರ್ಯೆ, ಮೈಕಟ್ಟು, ರಜಪೂತರಂತೆ ಇರುತ್ತವೆ. ಇವರು ಮನೆಯಲ್ಲಿ ಮಹಾರಾಷ್ಟ್ರ ಭಾಷೆಯನ್ನಾಡುವರು. ಪಂಢರಪುರದ ಅಗರವಾಲರಿಗೂ ಇವರಿಗೂ ಶರೀರ ಸಂಬಂಧವಾಗುತ್ತದೆ. ಊದಿನ ಕಡ್ಡಿ, ಬುಕ್ಕಿಟ್ಟು, ಮುಂತಾದ ಸುಗಂಧ ದ್ರವ್ಯಗಳನ್ನು ಮಾಡಿ ಮಾರುವದೇ ಇವರ ಮುಖ್ಯ ಹೋರೆಯು; ಕೆಲವರು ಹೊಕ್ಕಲತನವನ್ನೂ ಮಾಡುವರು. ಇವರು ತಮ್ಮ ಮಕ್ಕಳಿಗೆ ಮನೆಯಲ್ಲಿ ಓದುಬರಹ ಕಲಿಸುತ್ತಾರೆ. ಇವರ ಲಗ್ನ ಕಾರ್ಯದಲ್ಲಿ ವಿಶೇಷವೇನೆಂದರೆ, ಹೊಂದು ಕಂಬ ನಡಿಸಿ, ಅದರ ಮುಂದೆ ಗೋದೀ ಹರವಿ, ಲಗ್ನದ ಪೂರ್ವ ದಿವಸ ಆ ಗೋದಿಯ ಮೇಲೆ ನೀರಿನ ಪಾತ್ರೆಯನ್ನಿಟ್ಟು, ಅದರ ಮೇಲೆ ಹೊಂದು ದೀಪ ಹಚ್ಚಿ ಇಡುವರು. ಮದಿಮಕ್ಕಳು ಲಗ್ನದ ಕಾಲಕ್ಕೆ ಆ ದೀಪದೆದುರಿಗೆ ಕೂಡ್ರುವರು.

**ಶಟ್ಟಿಯರು.**

ಶಟ್ಟಿಯರು.—ಇವರು ಸುಮಾರು ೭೦ ವರ್ಷಗಳ ಹಿಂದೆ ಮದ್ರಾಸ ಶೀಮೆಯಿಂದ ಬಂದು ಬಾಗಲಕೋಟೆಯಲ್ಲಿ ವಾಸಿಸುತ್ತಾರೆ. ಇವರ ಮುಖಲಕ್ಷಣಗಳು ಮುದಲಿಯಾರರಂತೆ ಇರುತ್ತವೆ; ಅವರಂತೆ ಇವರಾದರೂ ಮನೆಯಲ್ಲಿ ತಮಿಳ ಭಾಷೆಯನ್ನಾಡುವರು. ಇವರ ಗೋತ್ರಗಳು ಹ್ಯಾಗಂದರೆ— ಗುಂಡಮುದ್ಯ, ಕಲ್ಲುಮುದ್ಯ, ಮಲುದ್ಯ, ಮುದಿಪಲ್ಲುದ್ಯ, ಪಲರುದ್ಯಮಹರ್ಷಿ, ವೈಮುದ್ಯಮಹರ್ಷಿ! ಶಟ್ಟಿಯರು ಕುರಿ, ಕೋಳಿ, ಮೀನು, ಮೊಲ, ಇವುಗಳ ಮಾಂಸವನ್ನು ಮಾತ್ರ ತಿನ್ನುತ್ತಾರೆ; ಸರಾಯ ಕುಡಿಯುವರು, ತಂಬಾಕ ಶೇದುವರು, ಆದರೂ ಇವರಿಗೆ ಜನಿವಾರವಿರುತ್ತದೆ. ಇವರ ಉಡಿಗೆಗಳು ಲಿಂಗವಂತರನ್ನು ಹೋಲುತ್ತದೆ. ಇವರು ಗಿರಿಯ ವೆಂಕಟರಮಣನಿಗೆ ಮುಖ್ಯವಾಗಿ ನಡಕೊಳ್ಳುವರು. ಮದ್ರಾಸ ಶೀಮೆಯಲ್ಲಿ

ಇರುವ ಪಂಚಮ್ಮ, ಅಂಗಲಮ್ಮ, ಯೆಂಬ ದೇವತೆಗಳು ಇವರ ಕುಲದೇವತೆಗಳು. ಶಟ್ಟಿಯರು ಬ್ರಾಹ್ಮಣರಿಗೆ ನಡಕೊಳ್ಳುವರು, ಬ್ರಾಹ್ಮಣರ ಮನೆಯಲ್ಲಿ ಮಾತ್ರ ಉಣ್ಣುವರು. ಹುಟ್ಟಿದ ಕೂಸಿನ ಜಾವಳವನ್ನು ತೆಗಿಯುವಾಗ ಮೊದಲು ಸೊನ್ನಗಾರನು ವೊಂದು ಕೂದಲು ಕತ್ತರಿಸಿದ ಬಳಿಕ ನಾದಿಗನ ಕೈಯಿಂದ ತಲೆ ಬೋಳಿಸುವರು. ಮುಂಜಿಯ ಸಂಸ್ಕಾರವು ಶಿಷ್ಟಾಚಾರವಾಗಿರುತ್ತದೆ, ಧರ್ಮ ನಿರ್ಬಂಧದ್ದಲ್ಲ. ಲಗ್ನದಲ್ಲಿ ಅಂತಃಪಟ ಹಿಡಿಯುವದಿಲ್ಲ. ಮೈ ನೆರಿದ ಹುಡಿಗಿಯನ್ನು ೯ ದಿವಸದ ವರೆಗೆ ಹೊರಗೆ ಕೂಡ್ರಿಸುವರು. ಶಟ್ಟಿಯರು ಹೆಣಗಳನ್ನು ಸುಡುವರು, ಬಡವರು ಮಾತ್ರ ಹುಗಿಯುವರು; ಇವರಿಗೆ ೧೬ ದಿವಸ ಸೂತಕವಿರುತ್ತದೆ. ಶಟ್ಟಿಯರು ಮುಖ್ಯವಾಗಿ ಅಂಗಡಿಯ ವ್ಯಾಪಾರ ಮಾಡುವರು; ಕೆಲವರು ಚಿನಿವಾರಿಕೆಯ ಅಂಗಡೀ ಹಚ್ಚುವರು. ಇವರು ತಮ್ಮ ಗಂಡು ಹೆಂಣು ಮಕ್ಕಳನ್ನು ಶಾಲೆಗೆ ಕಳಿಸುವರು.

**ಚಟ್ಟೇರು.**

ಚಟ್ಟೇರು ಅಂದರೆ ಖಣ ಮಾರುವವರು.— ಇವರು ಬಾಗಲಕೋಟೆ ಬಾಗೇವಾಡಿ, ಇಂಡಿ, ಈ ಮೂರು ಗ್ರಾಮಗಳಲ್ಲಿ ವಾಸಿಸುತ್ತಾರೆ. ಇವರು ನಾಗಲಿಕರೆಂಬ ಕುಲದವರ ವಳ ಭೇದವೆಂದು ತೋರುತ್ತದೆ; ಆದರೆ ಈಗ ಅವರಿಗೂ ಇವರಿಗೂ ಯೆಷ್ಟು ಮಾತ್ರವೂ ಸಂಬಂಧವಿಲ್ಲ. ಇವರು ಕನ್ನಡ ಆಡುವರು; ತೋರಿಕೆಯಲ್ಲಿ ಪಂಚಮಸಾಲಿಯವರಂತೆ ಕಾಣುತ್ತಾರೆ. ಇವರ ಧರ್ಮ, ಆಚಾರ, ವ್ಯವಹಾರಗಳೆಲ್ಲ ನಿಜಲಿಂಗವಂತರಂತೆ ಇರುತ್ತವೆ. ಇವರು ಕುಬಸದ ಖಣಗಳನ್ನು ನೆಯಿದು ಮಾರಾಟ ಮಾಡುತ್ತಾರೆ; ಕೆಲವರು ವೊಕ್ಕಲತನವನ್ನೂ ಮಾಡುವರು. ಚಟ್ಟೇರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ.

**ಕುರುವಿನ ಶಟ್ಟಿಗಳು.**

ಕುರುವಿನ ಶಟ್ಟಿಗಳು.— ಇವರಿಗೆ ಹಿರೇ ಕುರುವಿನವರೆಂತಲೂ ಅನ್ನುವರು. ಇವರು ವಿಜಾಪುರ ಜಿಲ್ಲೆಯ ಯೆಲ್ಲ ಭಾಗಗಳಲ್ಲಿ ಇರುತ್ತಾರೆ. ಇವರೂ ಚಿಕ್ಕ ಕುರುವಿನವರೂ (ಕೈಗಾರಿಕೆಯವರ ವರ್ಗದಲ್ಲಿ ನೋಡು) ಮೊದಲಿಗೆ ವೊಂದೇ ಕುಲದವರು; ಆದರೆ ಇವರು ಬಹು ಕಾಲದ ಪೂರ್ವದಲ್ಲಿ ಲಿಂಗವಂತರಾದರು; ಚಿಕ್ಕ ಕುರುವಿನವರು ವೊಳಗಡೆಯಲ್ಲಿ ಆದರು. ಇವರಲ್ಲಿ ೬೬ ಗೋತ್ರಗಳಿವೆ; ಅವುಗಳಲ್ಲಿ ೩೩ ಶಿವನವು, ೩೩ ಪಾರ್ವತಿಯವು. ಈ ಶಟ್ಟಿಗಳು ಮದ್ಯ ಮಾಂಸ ತಕ್ಕೊಳ್ಳುವದಿಲ್ಲ, ನಾಯಿಯನ್ನು ಮುಟ್ಟುವದಿಲ್ಲ. ಇವರು ಸರಳ ಸ್ವಭಾವದವರೂ, ವ್ಯವಸ್ಥಿತರೂ ಶ್ರಮ ಮಾಡುವವರೂ, ಆದಾಗ್ಯೂ ಸ್ವಚ್ಛತನವನ್ನು ಅರಿಯರು. ಇವರಲ್ಲಿ ಸೂಳೆಯ ಮನೆಗೆ ಹೋಗುವವನು ಜಾತಿ ಬಾಹ್ಯನಾಗುತ್ತಾನೆ. ತರಡು ಬಡಿದ ಯೆತ್ತನ್ನು ಇವರು ಮನೆಯಲ್ಲಿ ಸಾಕುವದಿಲ್ಲ, ಮುಟ್ಟುವದಿಲ್ಲ. ಕಿರಾಣೀ ವ್ಯಾಪಾರವೇ ಇವರ ಮುಖ್ಯ ಹೋರೆಯು. ಇವರು ಸ್ವೀಕರಿಸಿದ ಲಿಂಗವಂತರೊಳಗಿನವರು. ಇವರ ಲಗ್ನಗಳನ್ನೂ ಹುಗಿಯುವ ವಿಧಿಯನ್ನೂ ಜಂಗಮರು ಮಾಡಿಸುವರು. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಮಾಲಗಾರರು.**

ಮಾಲಗಾರರು.—ಇವರು ಬಾಗೇವಾಡಿ, ಇಂಡಿ, ಈ ಯೆರಡು ಗ್ರಾಮಗಳಲ್ಲಿ ಇರುತ್ತಾರೆ. ಇವರಿಗೆ ಆರೇ ಬಣಜಿಗರೆಂತಲೂ ಅನ್ನುವರು. ಇವರು ಮೊದಲು ಆರೇ ದೇಶದವರಾದಾಗ್ಯೂ ಈಗ ಯೆಲ್ಲ ಬಗೆಯಿಂದ ಲಿಂಗವಂತರನ್ನು ಹೋಲುತ್ತಾರೆ; ಲಿಂಗವಂತ ಧರ್ಮವನ್ನೇ ಪಾಲಿಸುತ್ತಾರೆ. ಇವರಲ್ಲಿ ಹಲವು ವೊಳಭೇದಗಳಿರುತ್ತವೆ; ಆದರೆ ಯೆಲ್ಲರಲ್ಲಿ ಪರಸ್ಪರ ಶರೀರ ಸಂಬಂಧಗಳಾಗುತ್ತವೆ. ಇವರು ತೋಟಗಳಲ್ಲಿ ಹೂ, ಪಲೆ, ಫಲಗಳು, ಮುಂತಾದವುಗಳನ್ನು ಬೆಳಿದು ಮಾರಾಟ ಮಾಡುತ್ತಾರೆ.

## ಯುದ್ಧೋಪಜೀವಿ ಜಾತಿಗಳು.

| | ಧಾರವಾಡ. | | | ಬೆಳಗಾವಿ. | | | ವಿಜಾಪುರ. | | | ಕಾನಡಾ | | |
|---|---|---|---|---|---|---|---|---|---|---|---|---|
| | ಗಂಡಸು | ಹೆಂಗಸು | ಒಟ್ಟು | ಗಂಡಸು | ಹೆಂಗಸು | ಒಟ್ಟು | ಗಂಡಸು | ಹೆಂಗಸು | ಒಟ್ಟು | ಗಂಡಸು | ಹೆಂಗಸು | ಒಟ್ಟು |
| ೧ ಆರೇರು.... | ೨೨೦೨೯ | ೨೨೦೫೬ | ೪೪೦೮೫ | ೬೦೩೫೮ | ೫೮೯೪೪ | ೧೧೯೩೦೨ | ೭೯೭೫ | ೭೯೦೨ | ೧೫೮೭೭ | ೧೩೯೦೮ | ೧೩೩೫೦ | ೨೭೨೫೮ |
| ೨ ರಜಪೂತರು.. | ೧೭೨೨ | ೧೭೨೮ | ೩೪೫೦ | ೧೩೪೩ | ೧೩೫೪ | ೨೬೯೭ | ೨೩೩೩ | ೨೦೮೧ | ೪೪೧೪ | ೨೧೯ | ೧೨೫ | ೩೪೪ |
| ೩ ನಾಯರರು.. | ,, | ,, | ,, | ,, | ,, | ,, | ,, | ,, | ,, | ೧೨೩ | ೮ | ೧೩೧ |
| ೪ ರಾಚೆವಾರರು. | ,, | ,, | ,, | ,, | ,, | ,, | ,, | ,, | ,, | ೧೦ | ೮ | ೧೮ |

೧೮೯೩

**ಆರೇರು.**

ಆರೇರು.—ಇವರನ್ನು ನಾಲ್ಕೂ ಜಿಲ್ಲೆಗಳಲ್ಲಿ ಕಾಣ ಬಹುದು. ಶಿವಾಜಿ ಮಹಾರಾಜನ ಕಾಲಕ್ಕೆ ಬಹು ಜನ ಆರೇರು ಈ ಕರ್ನಾಟಕ ಭಾಗದಲ್ಲಿ ಬಂದು ವಾಸಿಸಿದರೆಂದು ಹೇಳುತ್ತಾರೆ. ಆದರೆ ಅದಕ್ಕೂ ಪೂರ್ವದಲ್ಲಿ ಇವರ ವಸ್ತಿಯು ಈ ಶೀಮೆಯಲ್ಲಿ ಇತ್ತೆಂಬದಕ್ಕೆ ಆಧಾರವುಂಟು. ಇವರಲ್ಲಿ ಬಾರಮಾಸೇ, ಅಕರಮಾಸೆ, ಯೆಂಬೆರಡು ವರ್ಗಗಳಿರುತ್ತವೆ. ಬಾರಮಾಸೆ ಯೆಂಬ ಉತ್ತಮ ವರ್ಗದವರು ತಾವು ರಜಪೂತರ ವಂಶದವರೆಂದು ಹೇಳುತ್ತಾರೆ. ಅಕರಮಾಸೆ ಅಥವಾ ಸಿಂದೆ ಯೆಂಬವರು ಬ್ರಾಹ್ಮಣರು ಇಲ್ಲವೆ ಉತ್ತಮ ಕುಲದ ಆರೇರು ಇಟ್ಟುಕೊಂಡ ಹೆಂಗಸರ ಹೊಟ್ಟೆಯವರು. ಈ ಭೇದವನ್ನು ದೈವುಳ್ಳವರು ವಿಶೇಷವಾಗಿ ಲಕ್ಷಿಸುತ್ತಾರೆ. ಅವರು ಸಿಂದೆ ಯೆಂಬ ವರ್ಗದವರ ಕೂಡ ಶರೀರ ಸಂಬಂಧ ಮಾಡುವದಿಲ್ಲ. ಬಡವರಲ್ಲಿ ಈ ನಿರ್ಬಂಧ ನಡಿಯುವದು ಬಹು ಕಡಿಮೆ. ಕೆಲವರು ಕುಣಬೀ ಯೆಂಬ ವೊಕ್ಕಲಿಗರ ಕೂಡ ಸಹ ಶರೀರ ಸಂಬಂಧ ಮಾಡುತ್ತಾರೆ. ಊಟದ ಬಳಿಕೆಯು ಯೆಲ್ಲ ಬಗೆಯ ಆರೇರಿಗೂ ಕುಣಬೀ ಜನರಿಗೂ ನಿರ್ಬಾಧವಾಗಿ ನಡಿಯುತ್ತದೆ. ಆರೇರು ಮನೆಯಲ್ಲಿ ಬಹುತರ ಆರೇ ಮಾತು ಆಡುವರು; ಆದರೆ ಬಹು ಕಾಲದಿಂದ ಈ ಶೀಮೆಯಲ್ಲಿ ವಾಸಿಸುವವರಿಗೆ ಆರೇ ಮಾತು ಬರುತ್ತಿರುವದಿಲ್ಲ, ಕನ್ನಡೇ ಅವರ ಜನ್ಮ ಭಾಷೆಯು. ಆರೇ

ರೆಲ್ಲ ಬಹುತರ ಶೈವ ಮತದವರೇ; ಇವರ ಗುರು ಶಂಕೇಶ್ವರದ ಸ್ವಾಮಿಯು. ತಾವು ಆರೇರೆಂಬ ಅಭಿಮಾನ ವಹಿಸುವವರು ಜನಿವಾರ ಹಾಕಿ ಕೊಳ್ಳುವರು, ಮುರಿಗೆಯ ಮುಂಡಾಸ ಸುತ್ತುವರು; ಆದರೆ ಬಹು ಜನರು ಜನಿವಾರವಿಲ್ಲದೆ ರುಮಾಲ ಸುತ್ತಿಕೊಂಡು ಹೆಗಲ ಮೇಲೆ ಕಂಬಳಿಯನ್ನು ಚಲ್ಲಿ ಕೊಂಡು ವೊಕ್ಕಲಿಗರಂತೆ ತಿರುಗಾಡುವರು. ಹೆಂಗಸರಲ್ಲಿಯೂ ಇದೇ ಪ್ರಕಾರದ ಭೇದವುಂಟು. ಉತ್ತಮ ಕುಲದವರೂ ಸ್ವಜಾತಿಯ ಅಭಿಮಾನವುಳ್ಳವರೂ ಬ್ರಾಹ್ಮಣರ ಹೆಂಗಸರಂತೆ ಕುಂಕುಮ ಹಚ್ಚಿಕೊಂಡು ಕಚ್ಚೀ ಹಾಕಿ ಶೀರೇ ಉಟ್ಟುಕೊಳ್ಳುವರು; ಅವರು ಬಹುತರ ಬುರಕೆಯ ಹೊರ್ತು ಹೊರಬೀಳುವದಿಲ್ಲ. ಉಳಿದವರು ವೊಕ್ಕಲಿಗರ ಹೆಂಗಸರಂತೆ ಕುಂಕುಮ ಕಚ್ಚಿಗಳಿಲ್ಲದೆ ವರ್ತಿಸುವರು. ಉತ್ತಮ ಸ್ಥಿತಿಯ ಗಂಡಸರ ಹಣೆಯ ಮೇಲೆ ಗಂಧದ ಬೊಟ್ಟು, ನಾಮ, ಇಲ್ಲವೆ ಅಕ್ಷಂತಿ ಇರುವದು. ಆರೇರು ಮದ್ಯ ಮಾಂಸಗಳನ್ನು ನಿರಾತಂಕವಾಗಿ ತಕ್ಕೊಳ್ಳುವರು. ಇವರು ಕಸುವುಳ್ಳವರೂ, ಧೈರ್ಯಶಾಲಿಗಳೂ, ಶಿಟ್ಟಿನವರೂ, ಸರಳ ಸ್ವಭಾವದವರೂ, ಉದ್ಯೋಗಿಗಳೂ ಇರುತ್ತಾರೆ. ಇವರಲ್ಲಿ ಲಗ್ನ ಮುಂತಾದ ಕಾರ್ಯಗಳನ್ನು ಮಾಡಿಸುವವರು ಬ್ರಾಹ್ಮಣರೇ; ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ; ಹೆಣಗಳನ್ನು ಸುಡುವರು. ಲಗ್ನ, ಜನ್ಮ, ಮರಣ, ಮುಂತಾದ ಕಾರ್ಯಗಳ ವಿಧಾನಗಳೆಲ್ಲ ಬ್ರಾಹ್ಮಣರ ಪದ್ಧತಿಯನ್ನು ಹೋಲುತ್ತವೆ. ಆರೇರಲ್ಲಿ ಕೆಲವರು ದಂಡಿನ ಶಿಪಾಯಿಗಳಾಗುವರು, ಕೆಲವರು ಪೋಲೀಸ ಶಿಪಾಯಿಗಳಾಗುವರು, ಕೆಲವರು ಸರಕಾರೀ ಕಚೇರಿಗಳಲ್ಲಿ ಶಿಪಾಯಿಗಳಾಗುವರು, ಕೆಲವರು ಬ್ರಾಹ್ಮಣರ ಮನೆಯಲ್ಲಿಯೂ ಆರೇರ ಮನೆಯಲ್ಲಿಯೂ ಚಾಕರಿಗೆ ನಿಲ್ಲುವರು; ಆದರೆ ಬಹು ಜನರು ವೊಕ್ಕಲತನದಿಂದ ಬಾಳುತ್ತಾರೆ, ಕೆಲವರು ಅರಿವೆ, ಕಾಳು, ಮುಂತಾದವುಗಳ ಅಂಗಡಿ ಹಾಕಿ ವ್ಯಾಪಾರ ಮಾಡುವರು, ಕೆಲವರು ವಿದ್ಯಾಭ್ಯಾಸ ಮಾಡಿ ಸಣ್ಣ ದೊಡ್ಡ ಸರಕಾರೀ ಉದ್ಯೋಗಗಳನ್ನು ಸಂಪಾದಿಸಿದ್ದಾರೆ. ಆರೇರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ; ಒಟ್ಟಿಗೆ ಬೆಳುವಣಿಗೆಯ ಸ್ಥಿತಿಯಲ್ಲಿದ್ದಾರೆ.

**ರಜಪೂತರು.**

ರಜಪೂತರು.—ಇವರು ನಾಲ್ಕೂ ಜಿಲ್ಲೆಗಳಲ್ಲಿ ಇರುತ್ತಾರೆ; ತಾವು ಕ್ಷತ್ರಿಯರ ವಂಶದವರೆಂದು ಹೇಳುತ್ತಾರೆ. ಬ್ರಾಹ್ಮಣರಂತೆ ಇವರಿಗೆ ೧೬ ಸಂಸ್ಕಾರಗಳಿರುತ್ತವೆ. ಎಲ್ಲರೂ ಜನಿವಾರ ಹಾಕುವರು. ಇವರಲ್ಲಿಯ ಶುಭಾಶುಭ ಕಾರ್ಯಗಳನ್ನು ಗೌಡಬ್ರಾಹ್ಮಣರು ಮಾಡಿಸುತ್ತಾರೆ; ಆದರೆ ಕೆಲವರು ಈ ಕಾರ್ಯಗಳಿಗಾಗಿ ದಕ್ಷಿಣೀ ಬ್ರಾಹ್ಮಣರನ್ನು ಕರಿಯುವರು. ಕೆಲವರು ಶಂಕೇಶ್ವರದ ಸ್ವಾಮಿಗೆ ನಡಕೊಳ್ಳುತ್ತಾರೆ, ಕೆಲವರು ನಡಕೊಳ್ಳುವದಿಲ್ಲ. ಇವರು ವಿಶೇಷವಾಗಿ ಶೈವ ಮತದವರಾದಾಗ್ಯೂ ರಾಮ, ಕೃಷ್ಣ, ವೆಂಕಟರಮಣ, ಈ ದೇವತೆಗಳಿಗೆ ನಡಕೊಳ್ಳುವರು. ಭವಾನಿಯು ಇವರ ಮುಖ್ಯ ದೇವತೆ. ರಜಪೂತರು ಮನೆಯಲ್ಲಿ ಹಿಂದುಸ್ಥಾನೀ ಭಾಷೆಯನ್ನಾಡುವರು; ಕನ್ನಡದ ಸ್ವರಗಳೂ ಉಚ್ಚಾರಗಳೂ ಇವರಿಗೆ ನೆಟ್ಟಗೆ ಬರುವದಿಲ್ಲ. ಇವರಲ್ಲಿ ಸೂರ್ಯವಂಶೀ, ಚಂದ್ರವಂಶೀ, ಯೆಂಬೆರಡು ಮುಖ್ಯ ಕುಳಗಳಿವೆ; ಇವಲ್ಲದೆ ಬೇರೆ ಬೇರೆ ಗೋತ್ರಗಳೂ ಉಪನಾಮಗಳೂ ಉಂಟು. ಗಂಡ

ಸರ ಹೆಸರಿನ ಮುಂದೆ ಸಿಂಗ (ಸಿಂಹ) ಯೆಂಬ ಉಪಪದವಿರುತ್ತದೆ. ರಜಪೂತರು ಮಾಂಸಾಹಾರ ತಕ್ಕೊಳ್ಳುವರು, ಆದರೆ ಸರಾಯಿಯನ್ನು ಕದ್ದು ಮುಚ್ಚಿ ಕುಡಿಯುವರು. ಇವರಲ್ಲಿ ಆಫೀಮು, ಗಾಂಜಿ, ಭಂಗಿ, ಇವುಗಳ ವ್ಯಸನವು ಬಹು ಜನರಿಗಿರುತ್ತದೆ. ಇವರ ನಿಲಿವಿಕೆ ಯೆತ್ತರ; ಮುಖಲಕ್ಷಣ ಶೌರ್ಯದ್ದು, ಕಳೆಯುಳ್ಳದ್ದು, ಶಿಷ್ಟನದು; ಮೈಬಣ್ಣ ಕೆಂಪು; ಭಾಷಣ, ನಡಿಗೆ ಗಂಭೀರವಾದದ್ದು. ರಜಪೂತರು ಸರಳ ಸ್ವಭಾವದವರೂ, ಸೋಮಾರಿಗಳೂ, ಶಿಷ್ಟನವರೂ, ದೊಡ್ಡ ಮನಸಿನವರೂ, ಖರ್ಚಿಕರೂ ಇರುತ್ತಾರೆ. ಇವರ ಉಡಿಗೆ ತೊಡಿಗೆಗಳು ಬಹುತರ ಆರೇರಂತೆಯೇ ಇರುತ್ತವೆ. ಆದರೆ ಆರೇರ ಮನೆಯಲ್ಲಿ ಇವರು ಉಣ್ಣುವದಿಲ್ಲ, ಬ್ರಾಹ್ಮಣರಲ್ಲಿ ಮಾತ್ರ ಉಣ್ಣುವರು. ಇವರ ಹೆಂಗಸರು ಬುರಿಕೆಯ ಹೊರ್ತು ಹೊರಗೆ ಹೋಗುವದಿಲ್ಲ. ಅವರು ಕುಂಕುಮ ಹಚ್ಚಿ ಕೊಳ್ಳುವರು, ಆದರೆ ಕಚ್ಚೆ ಹಾಕುವದಿಲ್ಲ. ರಜಪೂತ ಹೆಂಗಸಿನ ಮುಖ್ಯ ಕುರುಹು ಆಕೆಯ ನತ್ತು; ಅದು ಯೆರಡು ಇಂಚಿನ ವ್ಯಾಸಕ್ಕಿಂತ ಸಣ್ಣದು ಇರುವದೇ ಇಲ್ಲ; ಕೆಲವರು ಆರು ಇಂಚು, ಇಲ್ಲವೆ ವೊಂದು ಫೂಟು ವ್ಯಾಸವುಳ್ಳ ನತ್ತನ್ನು ಮೂಗಿನೊಳಗೆ ಇಟ್ಟು ಕೊಳ್ಳುವರು; ಅದರ ಭಾರವನ್ನು ಯೆತ್ತಿ ಹಿಡಿಯುವದಕ್ಕೋಸ್ಕರ ಅದಕ್ಕೆ ಚಿನ್ನದ ಸರಪಣಿಯನ್ನು ಹಚ್ಚಿ ಅದನ್ನು ಕೂದಲಿಗೆ ಇಲ್ಲವೆ ಕಿವಿಗೆ ಸಿಗಿಸುವರು. ಲಗ್ನದ ಕಾಲಕ್ಕೆ ಮದಿಮಗನು ವೊಂದು ಕಂಬಕ್ಕೆ ಯೇಳು ಪ್ರದಕ್ಷಿಣೆಗಳನ್ನು ಹಾಕಿ ನಿಂತ ಬಳಿಕ ಹೆಣ್ಣಿನ ತಂದೆಯು, ಇವನ ದುರಾಚಾರಗಳೇನಾದರೂ ನಿಮಗೆ ಗೊತ್ತುಂಟೋ, ಯೆಂದು ನೆರಿದ ಜನರಿಗೆ ಕೇಳುವನು; ಏನು ಇಲ್ಲವೆಂದು ಅವರು ಉತ್ತರ ಹೇಳಿದ ಬಳಿಕ ಲಗ್ನದ ಸಮಾರಂಭವಾಗುವದು. ರಜಪೂತರು ದಂಡಿನೊಳಗಾಗಲೀ ಪೋಲೀಸರೊಳಗಾಗಲೀ ಶಿಪಾಯಿತನದ ಹೋರೆಯನ್ನು ಮೊದಲು ಹುಡುಕುವರು. ಅದು ದೊರಿಯದಿದ್ದರೆ ವೊಕ್ಕಲತನ, ವ್ಯಾಪಾರ, ಮುಂತಾದ ಹೋರೆಗಳನ್ನು ಕೈಕೊಳ್ಳುವರು. ಚಿಕ್ಕಂದಿನಿಂದ ಗರಡೀಸಾಧಕ, ದಾಂಡಪಟೆ, ಕುಸ್ತಿ, ಮುಂತಾದ ಶೌರ್ಯದ ಅಭ್ಯಾಸಗಳನ್ನು ಇವರು ಮಾಡುತ್ತಾರೆ. ಕುಸ್ತಿಯಲ್ಲಿ ಹೆಸರು ಪಡಿದಂಥ ರಜಪೂತರನ್ನು ಯೆಲ್ಲ ಕಡೆಯಲ್ಲಿ ಕಾಣ ಬಹುದು. ಇವರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ; ಒಟ್ಟಿಗೆ ಸೌಖ್ಯದ ಸ್ಥಿತಿಯಲ್ಲಿದ್ದಾರೆ.

**ನಾಯರರು.**

ನಾಯರರು.—ಇವರು ಮಲಿಯಾಳ ಶೀಮೆಯಿಂದ ಕಾನಡಾ ಜಿಲ್ಲೆಗೆ ಯಾತ್ರೆಯ ನಿಮಿತ್ತವಾಗಿ ಬಂದವರು. ಆ ಜಿಲ್ಲೆಯಲ್ಲಿ ಇವರ ಮನೆಮಾರುಗಳಿಲ್ಲ. ಇವರ ಕುಲದ ಹೆಂಗಸರೂ ಇಲ್ಲ. ನಾಯರರಲ್ಲಿ ೧೧ ಜಾತಿಗಳಿವೆ. ೧ನೇ ಉತ್ತಮ ಜಾತಿಯವರು ಕಿರಿತರು ಅಥವಾ ಕಿರಣರು; ಕೆಳಗಿನ ಜಾತಿಗಳ ವ್ಯಾಜ್ಯ ತೀರಿಸುವದೇ ಇವರ ಹೋರೆಯು. ೨ನೇ ಜಾತಿಯವರು ಶೂದ್ರರು, ವೈದ್ಯತನ ಮಾಡುವರು. ೩ನೇ ಜಾತಿಯವರು ಚರನಾಡುಗಳು ಜಾತಕಗಳನ್ನು ಬರಿಯುವರು. ೪ನೇ ಜಾತಿಯವರು ವಿಳಿತರು ಪಲ್ಲಕ್ಕಿಗಳನ್ನು ಹೊರುವರು. ೫ನೇ ಜಾತಿಯವರು ವಟ್ಟಕಟ್ಟ[illegible] ಹೋರೆಯನ್ನು ಮಾಡುವರು. ೬ನೇ ಜಾತಿಯವರು ಅತ್ತೆಕೊರ್ಚಿಗಳು ನಾಯರ ಕುಲದವರು ಸೂತಕದಿಂದ ಶುದ್ಧವಾಗುವಾಗ ಅವರ ತಲೆಯ

ಮೇಲೆ ಪಂಚಗವ್ಯವನ್ನು ಹಾಕುವರು. ೭ನೇ ಜಾತಿಯವರು ವೊಳಕುಟ್ಟರು ನಾದಿಗರ ಹೋರೆಯನ್ನು ಮಾಡುವರು. ೮ನೇ ಜಾತಿಯವರು ವೊಳತರಟರು ಅಗಸರ ಕೆಲಸ ಮಾಡುವರು. ೯ನೇ ಜಾತಿಯವರು ತುರಣರು ಶಿಂಪಿಗರ ಹೋರೆ ಮಾಡುವರು. ೧೦ನೇ ಜಾತಿಯವರು ಅಣದುರರು ಕುಂಬಾರರ ಕೆಲಸ ಮಾಡುವರು. ೧೧ನೇ ಜಾತಿಯವರು ತೊರಗಣರು ಕೂಲಿಯ ಹೋರೆ ಮಾಡುವರು. ಮೇಲಿನ ಮೂರು ಜಾತಿಗಳವರು ತಮ್ಮ ತಮ್ಮೊಳಗೆ ಊಟದ ಬಳಿಕೆ ಮಾಡುವರು, ಮತ್ತೂ ಅವರಲ್ಲಿ ಮೇಲಿನ ಜಾತಿಯವರು ಕೆಳಗಿನ ಜಾತಿಯವರ ಹೆಣ್ಣು ತಕ್ಕೊಳ್ಳುವರು. ಉಳಿದ ೮ ಜಾತಿಯವರು ಉತ್ತಮ ಕುಲದವರು ಅಡಿಗೆ ಮಾಡಿದರೆ ವೊತ್ತಟ್ಟಿಗೆ ಕೂತು ಉಣ್ಣುವರು, ಆದರೆ ತಮ್ಮ ತಮ್ಮ ಜಾತಿಗಳಲ್ಲಿ ಮಾತ್ರ ಶರೀರ ಸಂಬಂಧ ಮಾಡುವರು. ಮೇಲಿನ ಜಾತಿಯವರು ತೊರಗಣರನ್ನು ಮುಟ್ಟಿದರೆ ಸ್ನಾನ ಮಾಡುವರು. ನಾಯರರ ಮೈಬಣ್ಣ ಕೆಂಪು ಮೈಕಟ್ಟು ಕಸುವುಳ್ಳದ್ದು, ಹೋರೆ ಚಲುವಾದದ್ದು. ಇವರ ವಸ್ತ್ರ ಪಾತ್ರೆಗಳು ಜಳಜಳವಾಗಿರುವವು. ಶಿಟ್ಟು, ಆಲಸ್ಯ, ದುಂದುಗಾರಿಕೆ, ಇವು ನಾಯರರ ಜಾತಿ ಲಕ್ಷಣಗಳಿರುತ್ತವೆ. ಇವರು ಮನೆಯಲ್ಲಿ ಮಲಿಯಾಳೀ ಭಾಷೆಯನ್ನಾಡುವರು; ಕನ್ನಡ ಭಾಷೆಯನ್ನೂ ಇವರು ಸ್ವರ ಶುದ್ಧವಾಗಿ ಆಡ ಬಲ್ಲರು. ಗಂಡಸರು ನೆತ್ತಿಯ ಮೇಲೆ ಜಾವಳ ಕಾಯುವರು; ಹೆಂಗಸರು ಕಿವಿಯಲ್ಲಿ ಬೆಂಡುವಾಲಿಯ ತೂತು ಬಹಳ ದೊಡ್ಡದಾಗಿ ಬೆಳಿಸುವರು. ಗಂಡಸರೂ ಹೆಂಗಸರೂ ವೊಂದೇ ಪ್ರಕಾರವಾಗಿ ಮುಂಡವೆಂಬ ವಸ್ತ್ರವನ್ನು ನಡುವಿಗೆ ಸುತ್ತಿ ಕೊಳ್ಳುತ್ತಾರೆ, ಕಚ್ಚೀ ಹಾಕುವದಿಲ್ಲ. ಹೆಂಗಸರು ಯೆದೆಯ ಮೇಲೆ ಬೇರೊಂದು ಸಣ್ಣ ಅರಿವೆಯನ್ನು ಕಟ್ಟಿಕೊಳ್ಳುತ್ತಾರೆ. ನಾಯರರಲ್ಲಿ ಮದ್ಯ ಮಾಂಸಗಳಿಗೆ ದೋಷವಿಲ್ಲ; ಆದರೂ ಅಕ್ಕಿ ಪಲ್ಲೆಗಳೇ ಅವರ ಮುಖ್ಯ ಆಹಾರವು. ಇವರು ಭದ್ರಕಾಳಿ, ಗುರವಯ್ಯ (ಕೃಷ್ಣ), ಶಾಸ್ತರ ಅಯ್ಯಪ್ಪ, ಯೆಂಬ ದೇವತೆಗಳನ್ನು ಪೂಜಿಸುವರು. ಮಲಿಯಾಳದ ನಂಬುರೀ ಕುಲದ ಬ್ರಾಹ್ಮಣರಲ್ಲಿ ನಾಯರರ ಭಕ್ತಿ ಬಹಳ. ಮಲಿಯಾಳದಲ್ಲಿ ಇಂಗ್ಲಿಷ ಸರಕಾರದವರ ಅಮಲು ಆಗುವ ಪೂರ್ವದಲ್ಲಿ ನಾಯರರು ದಂಡಿನಲ್ಲಿ ಶಿಪಾಯಿಗಳಾಗುವರು. ಈಗ ಕೆಲವರು ಸರಕಾರೀ ನೌಕರಿಯ ಮಾಡುವರು, ಕೆಲವರು ವೊಕ್ಕಲತನದಿಂದ ಜೀವಿಸುವರು. ಕಾನಡಾ ಜಿಲ್ಲೆಯಲ್ಲಿ ಇರುವವರು ಮುಖ್ಯವಾಗಿ ವೈದ್ಯಕ, ಜೋತಿಷ, ಮಾಟ, ಇವುಗಳಿಂದ ಬದುಕುತ್ತಾರೆ.

ಮೊದಲಿನ ಯೆರಡು ಜಾತಿಗಳಲ್ಲಿ ನಂಬುರೀ ಬ್ರಾಹ್ಮಣರ ಸಂತತಿಯವರು ಕೆಲವರುಂಟು. ಅವರಿಗೆ ನಂಬೀಯರರೆಂದೆನ್ನುವರು. ನಂಬೀಯರರ ಸೋದರಳಿಯಂದಿರು ಮಾತ್ರ ಈ ಹೆಸರು ಧರಿಸ ಬಹುದು. ನಂಬೀಯರರ ಹೆಣ್ಣು ಮಕ್ಕಳು ನಂಬುರೀ ಬ್ರಾಹ್ಮಣರ ಪ್ರೀತಿಯನ್ನು ಸಂಪಾದಿಸಲಿಕ್ಕೆ ಯತ್ನೈಸುತ್ತಿರುತ್ತಾರೆ. ಆ ಬ್ರಾಹ್ಮಣರು ತಮ್ಮ ಮನೆಯಲ್ಲಿ ಬಂದು ನಿಂತರೆ, ಆ ಹೆಂಗಸರು ಅವರಿಗೆ ಅನ್ನ ವಸ್ತ್ರ ಕೊಡುವದಲ್ಲದೆ ಕೈಲಾದ ಮಟ್ಟಿಗೆ ಹಣವನ್ನು ಸಹ ಕೊಡುವರು. ನಾಯರರು ವೈಷ್ಣವ ಮತದವರಾದಾಗ್ಯೂ ಭಸ್ಮರುದ್ರಾಕ್ಷಗಳನ್ನು ಧಾರಣ ಮಾಡುವರು, ತಮ್ಮ ದೇವತೆಗಳಿಗೆ ಪಶುಗಳ ಬಲಿ ಕೊಡುವರು,

ನಂಬುರಿ ಬ್ರಾಹ್ಮಣರೇ ನಾಯರರ ಉಪಾಧ್ಯಾಯರು. ಅವರು ನಾಯರ ಸ್ತ್ರೀಯರ ಶರೀರ ಸೌಖ್ಯವನ್ನು ನಿರಾತಂಕವಾಗಿ ಭೋಗಿಸ ಬಹುದು. ಮಲಿಯಾಳದ ದಕ್ಷಿಣ ಭಾಗದಲ್ಲಿ ನಾಯರರ ಹೆಂಗಸರು ಗಂಡನ ಮನೆಯಲ್ಲಿ ಇರುವದೇ ಇಲ್ಲ. ಅವರು ತಂದೆಯ ಇಲ್ಲವೆ ಅಣ್ಣ ತಮ್ಮಂದಿರ ಮನೆಯಲ್ಲಿ ನಿಂತು ಬ್ರಾಹ್ಮಣ ಮುಂತಾದ ಉತ್ತಮ ಕುಲದವರ ಸ್ನೇಹ ದಲ್ಲಿ ಜನ್ಮ ಕಳಿಯುವರು. ಆದರೆ ಗಂಡನು ಹೆಂಡತಿಯ ವೆಚ್ಚವನ್ನು ಶಕ್ತಿಯ ಪ್ರಕಾರ ನಡಿಸಲಿಕ್ಕೇ ಬೇಕು. ಉತ್ತರ ಭಾಗದಲ್ಲಿ ಗಂಡ ಹೆಂಡರು ಕೂಡುವರು; ಆದರೂ ಬ್ರಾಹ್ಮಣ ಮುಂತಾದ ಉತ್ತಮ ಕುಲದವರ ಸ್ನೇಹ ಸಂಪಾದಿಸಲಿಕ್ಕೆ ಹೆಂಡತಿಗೆ ಅಡ್ಡಿ ಇಲ್ಲ. ನಾಯರ ಕುಲದ ಹೆಂಗಸಿನ ಮೇಲೆ ಯಾವನಾದರೂ ಬ್ರಾಹ್ಮಣನ ಮನಸು ಹೋ ದರೆ, ಅವನು ತಲೆಬಾಗಿಲಿಗೆ ಕಟ್ಟಿದ್ದೊಂದು ಹಗ್ಗಕ್ಕೆ ತನ್ನ ಅಂಗ ವಸ್ತ್ರವನ್ನು ತೂಗ ಹಾಕುವನು. ಅದನ್ನು ನೋಡಿದ ಕೂಡಲೆ ಮನೆಯವರು ಆ ಹೆಂಗಸನ್ನು ಅವನಿಗೆ ಒಪ್ಪಿಸಿ ಬದಿಗಾಗುವರು. ಒಬ್ಬ ಹೆಂಗಸು ಬೇಕಾದಷ್ಟು ಜನ ಉತ್ತಮ ಕುಲದವರ ಸ್ನೇಹ ಸಂಪಾದಿಸ ಬಹುದು. ಆದರೆ ನೀಚ ಕುಲದವರ ಸ್ನೇಹ ಮಾಡಿದರೆ ಆಕೆ ಜಾತಿಯನ್ನು ಕಳಕೊಳ್ಳುವಳು. ನಾಯರರಲ್ಲಿ ತಂದೆಯ ಆಸ್ತಿಗೆ ಮಗನು ಬಾಧ್ಯನಾಗುವದಿಲ್ಲ, ಸೋದರಳಿಯನಾಗುತ್ತಾನೆ. ಮನೆಯ ಹಿರಿತನವೆಲ್ಲ ಹೆಂಗಸರ ಕೈಯಲ್ಲಿ ಇರುತ್ತದೆ. ಪರಕೀಯಳಾದ ಹೆಂಡತಿಯು ಗಂಡನ ಮನೆಯಲ್ಲಿ ನಿಲ್ಲುವದಿಲ್ಲಾದ ಕಾರಣ ಮನೆತನದ ಕುಟುಂಬವು ಬಹಳ ದೊಡ್ಡದಾಗಿ ಬೆಳೆಯುತ್ತದೆ. ನಂಬುರೀ ಬ್ರಾಹ್ಮಣರಲ್ಲಿ ಹಿರಿಮಗನ ಲಗ್ನ ಮಾಡುವರು. ಉಳಿದ ಮಕ್ಕಳೆಲ್ಲ ನಾಯರ ಕುಲದ ಹೆಂಗಸಿನ ಮನೆಯಲ್ಲಿ ನಿಂತು ಆಕೆ ಮಾಡಿದ ಅಡಿಗೆಯನ್ನು ಉಂಡು ಜನ್ಮ ಕಳಿಯ ಬಹುದು. ನಾಯರ ಕುಲದ ಹೆಂಗಸು ಸತ್ತರೆ, ನಂಬುರೀ ಬ್ರಾಹ್ಮಣನ ಸಂಗಡ ಆಕೆಯ ಹೆಣಕ್ಕೆ ಲಗ್ನ ಮಾಡುವರು; ಈ ಲಗ್ನದ ನಿಮಿತ್ತ ಆ ಬ್ರಾಹ್ಮಣನಿಗೆ ಹಣ ದೊರಿಯುತ್ತದೆ. ಹಣ ಕೊಡುವ ಸಾಮರ್ಥ್ಯವಿಲ್ಲದವರು ಹೆಣಕ್ಕೆ ತೆಂಗಿನ ಮರದ ಕೂಡ ಲಗ್ನ ಮಾಡುವರು, ಈ ಲಗ್ನ ಮಾಡಿ ಕೊಂಡ ಬ್ರಾಹ್ಮಣನು ಕ್ಷೌರ ಮಾಡಿಸಿ ಕೊಂಡು ೧೫ ದಿವಸ ಸೂತಕ ಹಿಡಿಯುವನು. ನಾಯರರು ತಮ್ಮ ಹೆಣಗಳನ್ನು ಸುಡುವರು; ಇವರಲ್ಲಿ ಮುಂಜಿಗೆ ಬದಲಾಗಿ ಹದಿನಾರನೇ ವರ್ಷದ ವಯಸಿನಲ್ಲಿ ಹುಡುಗರ ನಡುವಿಗೆ ಛೂರಿಯನ್ನು ಕಟ್ಟುವರು.

**ರಾಚಿವಾರರು.**

ರಾಚಿವಾರರು, ಅಥವಾ ಕೊಂಗರು. — ಇವರು ಕಾರವಾಡ ತಾಲೂಕಿನಲ್ಲಿ ಶಿವೇಶ್ವರವೆಂಬಲ್ಲಿ ಇರುತ್ತಾರೆ; ತಾವು ಕೊಂಗ ದೇಶವೆಂದರೆ ಕೊಯಿಮ್ಮುತ್ತೂರ ಶೀಮೆಯಿಂದ ಬಂದ ಕ್ಷತ್ರಿಯರೆಂದು ಹೇಳುತ್ತಾರೆ. ಇವರಲ್ಲಿ ನಾಲ್ಕು ಗೊತ್ರಗಳಿವೆ. ಕೊಂಗರು ಮುಂಜಿ, ಲಗ್ನ, ಮುಂತಾದ ಸಂಸ್ಕಾರಗಳನ್ನು ಬ್ರಾಹ್ಮಣರ ಕೈಯಿಂದ ಮಾಡಿಸುವರು; ಎಲ್ಲರೂ ಜನಿವಾರ ಹಾಕಿ ಕೊಳ್ಳುವರು. ಇವರ ಕುಲದೇವತೆಗಳು ವೆಂಕಟರಮಣ, ದುರ್ಗೆ; ಆಹಾರದಲ್ಲಿ ಮದ್ಯ ಮಾಂಸಗಳಿಗೆ ಅಡ್ಡಿ ಇಲ್ಲ; ವಿಧವೆಗಳಿಗೆ ಲಗ್ನವಿಲ್ಲ. ಸೋಮಾರಿತನದಲ್ಲಿ ಜನ್ಮ ಕಳೆದು ಬಡವರಾಗಿ, ಇವರು ಕ್ಷಯ ಹೊಂದುತ್ತ ನಡಿದಿದ್ದಾರೆ. ಬಹುತರ ಇವರೆಲ್ಲರಿಗೂ ಇನಾಮು ಭೂಮಿ

ಗಳುಂಟು; ಆದರೆ ಅವು ಬಡ್ಡಿಯೊಳಗೆ ಸಾವುಕಾರರ ಕೈ ಶೇರಿರುತ್ತವೆ. ಶೌರ್ಯದ ಮುಖ ಚರ್ಯೆ, ದುಂದುಗಾರಿಕೆ, ಯೆತ್ತರವಾದ ನಿಲಿವಿಕೆ, ಇವೇ ಕೊಂಗರ ಲಕ್ಷಣಗಳು. ಇವರಲ್ಲಿ ಮುದುಕರು ಮಾತ್ರ ಮನೆಯಲ್ಲಿ ತಮಿಳ ಭಾಷೆಯನ್ನಾಡುವರು, ಉಳಿದವರೆಲ್ಲ ಕೊಂಕಣೀ ಭಾಷೆಯನ್ನಾಡುವರು. ಇವರು ಲಗ್ನ ಮುಂತಾದ ಸಂಸ್ಕಾರಗಳನ್ನು ಮಾಡಿಸಲಿಕ್ಕೆ ಚಿತಪಾವನರನ್ನಾಗಲಿ ಕರಾಡಸ್ಥರನ್ನಾಗಲಿ ಕರೆಯುವರು. ಇವರಲ್ಲಿ ವೊಂದೊಂದು ಗೋತ್ರದವರೆಲ್ಲ ತಮ್ಮ ಹಿರಿಯನ ಮನೆಯಲ್ಲಿ ಕೂಡಿ ಕುಲಧರ್ಮದ ಸಮಾರಂಭ ಮಾಡುವರು. ಹ್ಯಾಗಂದರೆ—ಹಾಲು ಮೊಸರು ಹಾಕಿ ಅನ್ನ ಕಲಿಸಿ, ಅದರಿಂದ ಹೆಂಗಸಿನ ಮೂರ್ತಿಯನ್ನು ಮಾಡುವರು; ಅದನ್ನು ದೇವರಂತೆ ಪೂಜಿಸಿ, ಅದರ ಮುಂದೆ ಕುರಿಯನ್ನು ಕಡಿಯುವರು. ಬಳಿಕ ಆ ಮೂರ್ತಿಯನ್ನು ಮುರಿದು ಬಳಗದವರೆಲ್ಲ ಆ ಅನ್ನವನ್ನು ಉಣ್ಣುವರು, ಕುಲದವರಿಗೆ ಮಾಂಸ, ಪಾಯಸ, ವಡಿ, ಮುಂತಾದ ಭೋಜನ ಹಾಕುವರು. ಇವರ ಕುಲದವರು ಬಹಳ ದೂರ ಇರುವ ಕಾರಣ ಲಗ್ನಕ್ಕೆ ಬಹಳ ತೊಂದರೆ ಬರುತ್ತದೆ. ಈ ಕಾರಣದಿಂದಲೂ ಸೋಮಾರಿತನದ ಕಾರಣದಿಂದಲೂ ಇವರು ಕ್ಷಯ ಹೊಂದುತ್ತ ನಡಿದಿದ್ದಾರೆ. ಕೊಂಗರು ತಮ್ಮ ಮಕ್ಕಳಿಗೆ ಮನವಮುಟ್ಟ ವಿದ್ಯಾಭ್ಯಾಸ ಮಾಡಿಸುವದಿಲ್ಲ.

## ಗುಡಿಗಳ ಪರಿಚಾರಕರ ಜಾತಿಗಳು.

| | ಧಾರವಾಡ. | | | ಬೆಳಗಾವಿ. | | | ವಿಜಾಪುರ. | | | ಕಾರವಾರ. | | |
|---|---|---|---|---|---|---|---|---|---|---|---|---|
| | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು | ಗಂಡಸರು | ಹೆಂಗಸರು | ಒಟ್ಟು |
| ೧ ಗೊರವರು .. | ೮೫೯ | ೮೬೭ | ೧೭೨೬ | ೬೯೮ | ೭೦೪ | ೧೪೦೨ | ೮೫೬ | ೭೬೬ | ೧೬೨೨ | ೪೭ | ೪೨ | ೮೯ |
| ೨ ದಾಸರು.... | ೨೯೯ | ೩೪೧ | ೬೪೦ | ೨೭೪ | ೩೦೦ | ೫೭೪ | ೩೫೩ | ೩೮೦ | ೭೩೩ | ,, | ,, | ,, |
| ೩ ಯಾಕ್ಲರು... | ,, | ,, | ,, | ,, | ,, | ,, | ೭೦ | ೬೨ | ೧೩೨ | ,, | ,, | ,, |
| ೪ ಫಾಡಿಗಳು .. | ,, | ,, | ,, | ,, | ,, | ,, | ,, | ,, | ,, | ೫೪೨ | ೫೮೭ | ೧೧೨೯ |
| ೫ ಪಾತಾಳಿಗಳು. | ,, | ,, | ,, | ,, | ,, | ,, | ,, | ,, | ,, | ೩೮ | ೪೩ | ೮೧ |
| ೬ ಐಗಳು .... | ,, | ,, | ,, | ,, | ,, | ,, | ,, | ,, | ,, | ೯೨ | ,, | ೯೨ |

**ಗೊರವರು.**—ಇವರಿಗೆ ಕೆಲವು ಕಡೆಯಲ್ಲಿ ಜೀರರೆಂತಲೂ ಕೆಲವು ಕಡೆಯಲ್ಲಿ ಹೂಗಾರರೆಂತಲೂ ಅನ್ನುವರು. ಇವರಲ್ಲಿ ಕನ್ನಡ ಭಾಷೆಯನ್ನಾಡುವವರೇ ಬಹಳ; ಆದರೆ ಬೆಳಗಾವೀ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ವಾಸಿಸುವವರು ಮಹಾರಾಷ್ಟ್ರ ಭಾಷೆಯನ್ನಾಡುವರು, ಕಾನಡಾ ಜಿಲ್ಲೆಯವರು ಕೊಂಕಣೀ ಭಾಷೆಯನ್ನಾಡುವರು. ಧಾರವಾಡ ಜಿಲ್ಲೆಯ ಹೂಗಾರರು ಲಿಂಗವಂತರುಂಟು; ಅವರು ಲಿಂಗವನ್ನು ಧರಿಸುವರು. ಬೆಳಗಾವಿ ಕಾನಡಾ ಜಿಲ್ಲೆಗಳ ಗೊರವರು

ಜನಿವಾರ ಹಾಕಿ ಕೊಳ್ಳುವರು; ಅವರು ಬ್ರಾಹ್ಮಣರ ಕೈಯಿಂದ ತಮ್ಮಲ್ಲಿಯ ಶುಭಾ ಶುಭ ಕಾರ್ಯಗಳನ್ನು ಮಾಡಿಸುವರು. ವಿಜಾಪುರ ಜಿಲ್ಲೆಯ ಗೊರವರಲ್ಲಿ ಕೆಲವರು ಜನಿವಾರ ಹಾಕಿ ಕೊಳ್ಳುವರು, ಕೆಲವರು ಲಿಂಗವನ್ನು ಧರಿಸುವರು, ಬೇರೆ ಕೆಲವರು ಜನಿವಾರ, ಲಿಂಗ, ಇವೆರಡನ್ನೂ ಧರಿಸುವರು. ಈ ಭೇದಗಳನ್ನು ಅನುಸರಿಸಿ ಅವರವರ ಆಚರಣಗಳಿರುತ್ತವೆ. ಲಿಂಗಧಾರಣ ಮಾಡುವವರು ಹೆಣಗಳನ್ನು ಹುಗಿಯುವರು, ಜನಿ ವಾರ ಹಾಕಿ ಕೊಳ್ಳುವವರು ಸುಡುವರು. ಗುಡಿಗಳಲ್ಲಿ ದೇವರ ಪೂಜೆ ಮಾಡುವದೇ ಇವರ ಮುಖ್ಯ ಹೋರೆಯುಂಟು. ಊರ ಹನುಮಂತ ದೇವರ ಪೂಜಾರಿಯು ಗೊರವ ನೇ ಇರ ತಕ್ಕವನು. ಅವನು ತನ್ನ ಧರ್ಮದಂತೆ ಹನುಮಂತ ದೇವರಿಗೂ ಧರ್ಮ ವನ್ನು ಕೆಲಕೆಲವು ಕಡೆಯಲ್ಲಿ ಕೊಡುವನು. ಜನಿವಾರ, ಲಿಂಗ, ಇವೆರಡೂ ಹಾಕಿ ಕೊ ಳ್ಳುವ ಗೊರವನು ತನ್ನ ಹನುಮಂತ ದೇವರಿಗೂ ಲಿಂಗ ಕಟ್ಟಿ ಜನಿವಾರ ಹಾಕುವನು. ಊರ ದೇವರ ಪೂಜೆಗಾಗಿ ಗೊರವರಿಗೆ ಇನಾಮು ಭೂಮಿಗಳಿರುತ್ತವೆ. ಕಾನಡಾ ಜಿಲ್ಲೆ ಹೊರ್ತಾಗಿ ಬಹುತರ ಯೆಲ್ಲ ಕಡೆಯಲ್ಲಿ ಗೊರವರು ಬಜಂತ್ರಿಯವರ ಹಿಂದೆ ಸಂಬಾಳ ಬಾರಿಸುವರು; ಕೆಲವರು ಮದ್ದಲಿಯನ್ನು ಬಾರಿಸುವರು; ಕೆಲವರು ಗಾಯನ ಕಲಿಯು ವರು, ಪತ್ರಾವಳಿಗಳನ್ನು ಹಚ್ಚಿ ಊರೊಳಗಿನ ಮುಖ್ಯ ಮನುಷ್ಯರಿಗೆ ಪತ್ರಾವಳಿಗಳನ್ನು ಕೊಡುವದೂ ಹೂಗಳನ್ನು ಕೊಡುವದೂ ಬಹಳ ಕಡೆಯಲ್ಲಿ ಗೊರವರ ಕೆಲಸವಿರುತ್ತದೆ. ಅವರು ಬೇರೆ ಜನರಿಗೆ ಪತ್ರಾವಳಿಗಳನ್ನೂ ಹೂಗಳನ್ನೂ ಮಾರುವರು. ಸುಗ್ಗಿಯ ಕಾಲ ಕ್ಕೆ ಹೊಲಗಳಲ್ಲಿ ಹೋಗಿ ಗೊರವರು ಕಾಳು ಭಿಕ್ಷೆ ಬೇಡಿ ತರುವರು. ವಿಜಾಪುರ ಜಿಲ್ಲೆ ಯಲ್ಲಿ ಪಾತರದವರು ಬಸುರಾದರೆ, ಅವರು ಗೊರವರ ಕೈಯಿಂದ ಹಲ್ಲುಪುಡಿಯನ್ನು ಹಚ್ಚಿಸಿ ಕೊಳ್ಳಲಿಕ್ಕೆ ಬೇಕು; ಹಾಗೆ ಮಾಡದಿದ್ದರೆ ಅವರು ಜಾತಿಗೆಡುವರು. ಗೊರವರು ಯೆಲ್ಲಿಯೂ ಮದ್ಯವನ್ನು ತಕ್ಕೊಳ್ಳುವದಿಲ್ಲ, ಕೆಲವರಲ್ಲಿ ಹದಿನಾರು ಸಂಸ್ಕಾರಗಳೆಲ್ಲ ಆಗು ತ್ತವೆ. ಕಾನಡಾ ಜಿಲ್ಲೆಯ ಗೊರವರು ಮಾಂಸ ತಿನ್ನುವರು; ಉಳಿದ ಮೂರು ಜಿಲ್ಲೆಗ ಳಲ್ಲಿಯರು ಅದರ ಸಂಪರ್ಕ ಮಾಡುವದಿಲ್ಲ. ಕಾನಡಾ ಜಿಲ್ಲೆಯ ಗೊರವರಲ್ಲಿ ವಿಧವೆ ಗಳಿಗೆ ಲಗ್ನವಾಗುವದಿಲ್ಲ; ಉಳಿದ ಕಡೆಯಲ್ಲಿ ಆಗುತ್ತದೆ. ಗೊರವರು ತಮ್ಮ ಮಕ್ಕಳ ನ್ನು ಶಾಲೆಗೆ ಕಳಿಸುವರು, ಕೆಲವು ಕಡೆಯಲ್ಲಿ ಹೆಣ್ಣು ಮಕ್ಕಳನ್ನು ಸಹ ಕಳಿಸುವರು.

**ದಾಸರು.**

ದಾಸರು:—ಇವರು ಕಾನಡಾ ಹೊರ್ತಾಗಿ ಉಳಿದ ಮೂರು ಜಿಲ್ಲೆಗಳಲ್ಲಿ ವಾಸಿ ಸುತ್ತಾರೆ. ಇವರಲ್ಲಿ ಗಲ್ಲ ದಾಸರು, ವೊಳ್ಳೇ ದಾಸರು, ತೆಲಗು ದಾಸರು, ಗಂಡು ದಾಸರು, ತಿರುಮಲ ದಾಸರು, ಬ್ಯಾಡ ದಾಸರು, ಹೊಲೆ ದಾಸರು, ಯೆಂದು ಹಲವು ವರ್ಗಗಳುಂಟು. ಬ್ಯಾಡ ದಾಸರು ಬೇಡರ ಕುಲದ ವರು, ಹೊಲೆ ದಾಸರು ಹೊಲಿಯರು; ತೆಲಗು ದಾಸರು ತೆಲಗು ದೇಶದಿಂದ ಬಂದ ಕಬ್ಬಲಿಗೇರ ಕುಲದವರು; ಉಳಿದ ಕನ್ನಡ ದಾಸರು ಸಹ ಕಬ್ಬಲಿಗೇರ ಕುಲದವರೇ ಯೆಂದು ತೋರುತ್ತದೆ. ಇವರೆಲ್ಲರು ವಿಷ್ಣು, ಹನುಮಂತ ದೇವರು, ಈ ಯೆರಡು ದೇವ ತೆಗಳ ಸೇವಕರೆಂದೆನಿಸಿ ಕೊಳ್ಳುತ್ತಾರೆ. ಎಲ್ಲರೂ ತ್ರಿಪುಂಡ್ರ ನಾಮ ಹಚ್ಚುವರು, ವೆಂಕಟ

ರಮಣನನ್ನೂ ಹನುಮಂತನನ್ನೂ ಮಾತ್ರ ಪೂಜಿಸುವರು; ಗಿರಿಯ ಯಾತ್ರೆಗೆ ಹೋಗುವರು; ನೆರೆಹೊರೆಯಲ್ಲಿ ಹನುಮಂತ ದೇವರ ಪ್ರಸಿದ್ಧ ದೇವಸ್ಥಾನದಲ್ಲಿ ಜಾತ್ರೆಯಾಗುವಾಗ, ವಿಶೇಷವಾಗಿ ಹಂಸನೂರೆಂಬಲ್ಲಿಯ ಹನುಮಂತ ದೇವರ ಜಾತ್ರೆಗೆ, ಹೋಗುವರು. ದಾಸರಲ್ಲಿ ಈಗ ಒಕ್ಕಲತನ ಮಾಡುವ ಸ್ವಲ್ಪ ಜನರು ಮಾತ್ರ ಒಂದೇ ಕಡೆಯಲ್ಲಿ ಮನೆ ಮಾಡಿ ಕೊಂಡು ವಾಸಿಸುವರು; ಉಳಿದವರೆಲ್ಲರು ಯಾವಾಗಲೂ ಊರೂರು ತಿರುಗುತ್ತಿರುವವರು. ಇವರಲ್ಲಿ ಮದ್ಯ ಮಾಂಸಗಳಿಗೂ ವಿಧವೆಗಳ ಲಗ್ನಕ್ಕೂ ಅಡ್ಡಿ ಇಲ್ಲ. ಹನುಮಂತನಲ್ಲಿ ಇವರ ಭಕ್ತಿ ಬಹಳ; ಶುಭ ಕಾರ್ಯಗಳಲ್ಲಿಯೂ ಮರಣದ ಸಂಸ್ಕಾರಗಳಲ್ಲಿಯೂ ಹನುಮಂತನನ್ನು ಪೂಜಿಸುವರು. ಶನಿವಾರವು ಹನುಮಂತನ ವಾರವೆಂದೆಣಿಸಿ, ಆ ದಿವಸ ಬಹು ಜನರು ಉಪವಾಸ ಮಾಡುವರು; ದೆವ್ವ ಬಡಿದವರನ್ನು ಹನುಮಂತನ ಗುಡಿಯಲ್ಲಿ ಒಯಿದು ಹಾಕುವರು. ಧಾರವಾಡ ಜಿಲ್ಲೆಯಲ್ಲಿ ಗಲ್ಲ ದಾಸರೆಂಬವರು ಒಕ್ಕಲತನದಿಂದ ಜೀವಿಸುವರು. ಬ್ಯಾಡ ದಾಸರು ದೀವಿಗೆ, ಝೂಗಟ, ಶಂಕಗಳನ್ನು ತಕ್ಕೊಂಡು ಮನೆ ಮನೆ ಭಿಕ್ಷೆ ಬೇಡುವರು. ಹೊಲೆ ದಾಸರು ಗೋಪಾಳ ಬುಟ್ಟಿಯನ್ನು ತಕ್ಕೊಂಡು ದೇವರ ಪದಗಳ ಹಾಡುತ್ತ ಭಿಕ್ಷೆ ಬೇಡುವರು. ತೆಲಗು ದಾಸರು ತಮ್ಮ ಹೆಂಗಸರಿಗೆ ಗಾಯನ ವರ್ತನ ಕಲಿಸಿ, ರಾತ್ರಿಯಲ್ಲಿ ಬೈಲೊಳಗೆ ಆಟ ಮಾಡುವರು. ಈ ಹೆಂಗಸರ ಹಾದರದಿಂದ ಅವರಿಗೆ ಒಳಿತಾಗಿ ಲಾಭವಾಗುತ್ತದೆ. ಗಂಡು ದಾಸರು ಸಹ ಇದೇ ಪ್ರಕಾರ ಆಟ ಮಾಡುವರು. ಆದರೆ ಅವರು ತಮ್ಮ ಹೆಂಗಸರನ್ನು ಬೈಲಿಗೆ ತರದೆ, ಗಂಡು ಹುಡುಗರಿಗೆ ಆಟದಲ್ಲಿ ಹೆಣ್ಣು ಸೋಗು ಹಾಕುವರು. ಬ್ಯಾಡ ದಾಸರೂ ಹೊಲೆ ದಾಸರೂ ಊರ ಹನುಮಂತನ ಪೂಜೆಯ ಕಾಲಕ್ಕೆ ಗುಡಿಗೆ ಹೋಗಿ ತಂಬೂರಿಯ ಸಂಗಡ ಹಾಡುವರು. ದಾಸರಲ್ಲಿ ಒಕ್ಕಲತನದವರೂ ಆಟ ಮಾಡುವವರೂ ಮಾತ್ರ ಮಕ್ಕಳನ್ನು ಕೆಲವು ದಿವಸ ಶಾಲೆಗೆ ಕಳಿಸುವರು; ಅವರು ತಕ್ಕ ಮಟ್ಟಿಗೆ ಒಳಿತಾಗಿ ಇದ್ದಾರೆ. ಉಳಿದವರೆಲ್ಲ ಬಡವರು; ತಿರಿಕೆಯಿಂದ ಜೀವಿಸುವರು.

**ಯಾಕ್ಲರು.**

ಯಾಕ್ಲರು.—ಇವರು ಬಾದಾವಿ, ಬಾಗಲಕೋಟೆ, ಹುನಗುಂದ, ಈ ಮೂರು ಗ್ರಾಮಗಳಲ್ಲಿ ಇರುತ್ತಾರೆ. ಇವರ ಕುಲದೇವತೆ ಕಟ್ಟಿಗೇರಿಯ ಕಾಂಚನವ್ವ, ಹನುಮಂತ ದೇವರು. ಇವರ ಜನ್ಮಭಾಷೆ ಕನ್ನಡ, ನಡಾವಳಿಗಳು ಬಹುತರ ಗೊರವರ ನಡಾವಳಿಗಳನ್ನು ಹೋಲುತ್ತವೆ. ಕೆಲವರು ಬ್ರಾಹ್ಮಣರ ಕೈಯಿಂದ ತಮ್ಮಲ್ಲಿಯ ಕಾರ್ಯಗಳನ್ನು ಮಾಡಿಸುವರು, ಕೆಲವರು ಲಿಂಗವಂತರ ಕೈಯಿಂದ ಮಾಡಿಸುವರು. ಕೆಲವರು ಹೆಣಗಳನ್ನು ಸುಡುವರು, ಕೆಲವರು ಹುಗಿಯುವರು. ಯಾಕ್ಲರಲ್ಲಿ ಕೆಲವರು ಹನುಮಂತ ದೇವರ ಪೂಜಾರಿಯ ಕೆಲಸ ಮಾಡುವರು, ಕೆಲವರು ಕಾಂಚನವ್ವನ ಪೂಜಾರಿಗಳಾಗುವರು. ಮನೆಯಲ್ಲಿ ಕಾಂಚನವ್ವನ ಪೂಜೆ ಮಾಡುವಾಗ ಜಗಲೀ ಮೇಲೆ ಮಗಿಯನ್ನಿಟ್ಟು ಅದಕ್ಕೆ ಶೀರೆ ಉಡಿಸಿ, ಅದರ ಮೇಲೆ ಕಾಂಚನವ್ವನ ಮೂರ್ತಿಯನ್ನಿಟ್ಟು ಪೂಜಿಸುವರು. ಯಾಕ್ಲರಲ್ಲಿ ಕೆಲವರು ಒಕ್ಕಲತನದ ಹೋರೆಯನ್ನೂ ಕೂಲಿಯನ್ನೂ ಮಾಡುವದುಂಟು. ಇವರನ್ನು ಬೇರೆ ಜಾತಿಯ

ವರು ಕುರುಬರಂತೆ ಯೆಣಿಸುವರು. ಪೂಜಾರಿಗಳು ಮಾತ್ರ ಮದ್ಯ ಮಾಂಸಗಳನ್ನು ತಕ್ಕೊಳ್ಳುವದಿಲ್ಲ, ಉಳಿದವರು ತಕ್ಕೊಳ್ಳುವರು. ಯಾಕ್ಲರ ಲಗ್ನಗಳನ್ನು ಮಾತ್ರ ಬ್ರಾಹ್ಮಣರು ಮಾಡಿಸುವರು, ಬೇರೆ ಕಾರ್ಯಗಳನ್ನು ಅವರ ಸ್ವಂತ ಜಾತಿಯ ಉಪಾಧ್ಯಾಯರು ಮಾಡಿಸುವರು. ಲಗ್ನದ ಕಾಲಕ್ಕೆ ಮದಿಮಗನನ್ನು ಅಸೀ ಕಲ್ಲಿನ ಮೇಲೆ, ಮದಿಮಗಳನ್ನು ಬುಟ್ಟಿಯೊಳಗೆ ಜೋಳ ಹಾಕಿ ಆ ಜೋಳದ ಮೇಲೆ ನಿಲ್ಲಿಸಿ, ನಡುವೆ ನಾಂದೀ ಬರಿದ ಅಂತಃಪಟ ಹಿಡಿದು ಅಕ್ಕೀಕಾಳು ಹಾಕುವರು. ಇವರಲ್ಲಿ ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಘಾಡಿಗಳು.**—ಇವರು ಕಾರವಾಡ, ಯಲ್ಲಾಪುರ, ಕುಮಟಾ, ಈ ಗ್ರಾಮಗಳಲ್ಲಿ ಇರುವರು. ಇವರ ಭಾಷೆ, ಉಡಿಗೆ ಆಹಾರ, ನಡಾವಳಿಗಳು ಕೊಮಾರ ಪೈಕರಂತೆ. ಹೆಂಗಸರು ಕುಬ್ಬಸ ತೊಡುವದಿಲ್ಲ. ಘಾಡಿಗಳು ಶೃಂಗೇರಿಯ ಮಠಕ್ಕೆ ನಡಕೊಳ್ಳುವರು, ಲಗ್ನ ಮುಂತಾದ ಕಾರ್ಯಗಳಿಗೆ ಬ್ರಾಹ್ಮಣರನ್ನು ಕರಿಯುವರು. ಶಕ್ತಿಯುಳ್ಳವರು ಹೆಣಗಳನ್ನು ಸುಡುವರು, ಉಳಿದವರು ಹುಗಿಯುವರು. ಗುಡಿಗಳಿಗೆ ಬಲಿ ಕೊಟ್ಟ ಪಶುಗಳನ್ನು ಕೊಲ್ಲುವದೂ ದೇವರು ಹೇಳುವದೂ, ಇವೆರಡು ಇವರ ಕುಲದ ಹೋರೆಗಳು. ಆದರೆ ಈಗ ಕೆಲವರು ಹೊಲ ಮನೆ ಮಾಡಿಕೊಂಡಿರುತ್ತಾರೆ. ಒಟ್ಟಿಗೆ ಘಾಡಿಗಳು ಸೌಖ್ಯದಿಂದಿದ್ದಾರೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಘಾಡಿಗಳು.**

**ಪಾತಾಳಿಗಳು ಇಲ್ಲವೆ ಸ್ಥಾನಿಕರು.**—ಇವರು ಕುಲಗೆಟ್ಟ ಹೈಗ ಬ್ರಾಹ್ಮಣರ ಹೆಂಗಸರ ಸಂತತಿಯವರು. ಪೂರ್ವ ಕಾಲದಲ್ಲಿ ಗಂಡನನ್ನು ವೊಲ್ಲದ ಹೆಂಗಸು ಗುಡಿಯಲ್ಲಿ ಹೋಗಿ ದೇವರ ಮುಂದಿನ ದೀಪದೊಳಗಿನ ಯೆಣ್ಣೆಯನ್ನು ತಲೆಗೆ ಹಚ್ಚಿಕೊಂಡು ಗುಡಿಯಲ್ಲೇ ಇರುವಳು. ಇಂಥಾ ಹೆಂಗಸರು ಉತ್ತಮ ಕುಲದವರ ಸಂಗಡ ನಿರಾತಂಕವಾಗಿ ಸ್ನೇಹ ಮಾಡುವರು. ಪಾತಾಳಿಗಳು ಈ ಬಗೆಯ ಹೈಗ ಹೆಂಗಸರ ವಂಶದವರು. ಇವರ ಧರ್ಮ, ಆಚಾರ, ಆಹಾರ, ಉಡಿಗೆ, ಭಾಷೆ, ಸ್ವಭಾವ, ಇವೆಲ್ಲ ಹೈಗರಂತೆ. ಇವರು ಗುಡಿಗಳನ್ನು ಉಡಿಗಿ, ಸಾರಿಸಿ, ದೇವರಿಗಾಗಿ ಹೂಗಳನ್ನು ತಂದು, ದೇವರ ಪಲ್ಲಕ್ಕಿಯನ್ನು ಹೊತ್ತು ಜೀವಿಸುವರು. ಕೆಲವರು ತೋಟ ಮಾಡುವರು; ಕೆಲವರು ಕುಲಕರಣಿಯ ಕೆಲಸ ಮಾಡುವರು. ಇವರ ವಿಧವೆಗಳು ಕ್ಷೌರ ಮಾಡಿಸಿ ಕೊಳ್ಳುತ್ತಾರೆ. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಪಾತಾಳಿಗಳು.**

**ಐಗಳು.**—ಇವರು ಕೊಂಕಣದಿಂದ ಬಂದು ಅಂಕೋಲಾ ತಾಲೂಕಿನಲ್ಲಿ ವಾಸಿಸುತ್ತಾರೆ. ಇವರು ಕೊಂಕಣರೆಂಬ ವೊಕ್ಕಲಿಗರ ಸಂಗಡ ಅನ್ನ ವ್ಯವಹಾರ ಶರೀರ ಸಂಬಂಧಗಳನ್ನು ಮಾಡುವರು. ಹೆಂಗಸರು ಕುಬ್ಬಸ ತೊಡುವದಿಲ್ಲ. ಗುಡಿಗಳಲ್ಲಿ ಇವರು ಹೂಗಳನ್ನು ತಂದು ಬೇರೆ ಹಲವು ಕೆಲಸಗಳನ್ನು ಮಾಡುವರು. ಇವರು ಮನೆಯಲ್ಲಿ ಕೊಂಕಣೀ ಭಾಷೆಯನ್ನಾಡುತ್ತಾರೆ. ಮದ್ಯ ಮಾಂಸಗಳನ್ನು ತಕ್ಕೊಳ್ಳುವರು. ವಿಧವೆಗಳಿಗೆ ಲಗ್ನವಿಲ್ಲ. ಇವರಲ್ಲಿ ಕೆಲವರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ.

**ಐಗಳು.**

## ಒಕ್ಕಲತನದ ಜಾತಿಗಳು.

| | | ಧಾರವಾಡ. | | | ಬೆಳಗಾವಿ. | | | ವಿಜಾಪುರ. | | | ಕಾನಡಾ. | | |
|---|---|---|---|---|---|---|---|---|---|---|---|---|---|
| | | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. |
| ೧ | ಕಾಮಾಠಿಗಳು ............ | ೯೯೫ | ೯೩೭ | ೧೯೩೨ | ೧೧ | ೮ | ೧೯ | ,, | ,, | ,, | ,, | ,, | ,, |
| ೨ | ಕುಡವೊಕ್ಕಲಿಗರು ......... | ೩೮೮೨ | ೩೮೧೨ | ೭೬೯೪ | ,, | ,, | ,, | ೪೦೧೭ | ೪೦೯೧ | ೮೧೦೮ | | | |
| ೩ | ರಡ್ಡೇರು ............... | ೧೦೯೭೦ | ೧೦೫೫೯ | ೨೧೫೨೯ | ೩೧೬೩ | ೩೧೪೭ | ೧೩೧೦ | ೧೪೫೦೪ | ೧೪೫೫೧ | ೨೯೦೫೫ | ,, | ,, | ,, |
| ೪ | ಸಾದರು ................ | ೨೧೯೫೬ | ೨೧೪೬೬ | ೪೩೪೨೨ | ,, | ,, | ,, | ,, | ,, | ,, | ೨೫೫ | ೨೪೪ | ೪೯೯ |
| ೫ | ಛತ್ರೇರು ............... | ೨೧೪ | ೨೩೧ | ೪೪೫ | ೭೧೨೬ | ೭೧೬೩ | ೧೪೨೮೯ | ೩೧೮೬ | ೩೨೫೮ | ೬೪೪೪ | ೩೪೫ | ೩೦೧ | ೬೪೬ |
| ೬ | ಹಣಬರು............... | ,, | ,, | ,, | ೭೦೮೬ | ೭೦೮೩ | ೧೪೧೬೯ | ೩೧೨ | ೩೪೫ | ೬೫೭ | ೪೨೨ | ೩೭೩ | ೭೯೫ |
| ೭ | ಕುಲಮರು.............. | ,, | ,, | ,, | ೩೬ | ೩೯ | ೭೫ | ,, | ,, | ,, | ,, | ,, | ,, |
| ೮ | ಕುಣಬಿಗಳು. ............ | ,, | ,, | ,, | ೨೧೫೪೬ | ೨೧೧೦೫ | ೪೨೬೫೧ | ೫೬೬ | ೫೪೯ | ೧೧೧೫ | ೮೦೩೩ | ೬೦೩೭೯ | ೧೪೮೧೨ |
| ೯ | ಮುಷ್ಟಿಗೇರು............. | ,, | ,, | ,, | ,, | ,, | ,, | ೩೬೦೬ | ೩೬೪೭ | ೭೨೫೩ | ,, | ,, | ,, |
| ೧೦ | ಒಷ್ಟಮರ ............... | ,, | ,, | ,, | ,, | ,, | ,, | ೨೭ | ೩೫ | ೬೨ | ,, | ,, | ,, |
| ೧೧ | ರಾವಳರು .............. | ,, | ,, | ,, | ,, | ,, | ,, | ೬೧ | ೬೯ | ೧೩೦ | ,, | ,, | ,, |
| ೧೨ | ಹಂಡೆಯವರು........... | ,, | ,, | ,, | ,, | ,, | ,, | ೨೯೮ | ೨೮೭ | ೫೮೫ | ,, | ,, | ,, |
| ೧೩ | ಕಬ್ಬೇರು .............. | ,, | ,, | ,, | ,, | ,, | ,, | ೧೦೬೮ | ೧೧೦೫ | ೨೧೭೩ | ,, | ,, | ,, |
| ೧೪ | ಹಾಲ್ವಕ್ಕೀ ಒಕ್ಕಲಿಗರು....... | ,, | ,, | ,, | ,, | ,, | ,, | ,, | ,, | ,, | ೧೩೪೬೪ | ೧೨೯೩೧ | ೨೬೩೯೫ |
| ೧೫ | ಗಾವ ವೊಕ್ಕಲ........... | ,, | ,, | ,, | ,, | ,, | ,, | ,, | ,, | ,, | ೫೨೮೭ | ೫೨೮೫ | ೧೦೫೭೨ |
| ೧೬ | ಕರೆ ವೊಕ್ಕಲ............ | ,, | ,, | ,, | ,, | ,, | ,, | ,, | ,, | ,, | ೫೨೨೦ | ೪೬೨೪ | ೯೮೪೪ |

| | | ಧಾರವಾಡ. | | | ಬೆಳಗಾವಿ. | | | ವಿಜಾಪುರ. | | | ಕಾನಡಾ. | | |
|---|---|---|---|---|---|---|---|---|---|---|---|---|---|
| | | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. |
| ೧೭ | ಕೊಂಕಣೀ ಮಹಾರಾಷ್ಟ್ರರು .... | ,, | ,, | ,, | ,, | ,, | ,, | ,, | ,, | ,, | ೩೯೧೬ | ೩೮೯೮ | ೭೮೧೪ |
| ೧೮ | ತೋಕ್ರಿನಾಡೋರು ........ | ,, | ,, | ,, | ,, | ,, | ,, | ,, | ,, | ,, | ೨೩೦೪ | ೧೨೭೨ | ೩೫೭೬ |
| ೧೯ | ಶೇರೊಗಾರರು ............ | ,, | ,, | ,, | ,, | ,, | ,, | ,, | ,, | ,, | ೧೫೮೨ | ೧೪೮೮ | ೩೦೭೦ |
| ೨೦ | ಪಡತಿಗಳು............. | ,, | ,, | ,, | ,, | ,, | ,, | ,, | ,, | ,, | ೧೫೧೫ | ೧೩೯೮ | ೨೯೧೩ |
| ೨೧ | ಉಪ್ಪು ನಾಡೋರು ........ | ,, | ,, | ,, | ,, | ,, | ,, | ,, | ,, | ,, | ೧೧೦೦ | ೧೦೧೦ | ೨೧೧೦ |
| ೨೨ | ಸೂದಿರರು ............. | ,, | ,, | ,, | ,, | ,, | ,, | ,, | ,, | ,, | ೬೫೧ | ೫೫೮ | ೧೨೦೯ |
| ೨೩ | ಸತಾರಕರು............. | ,, | ,, | ,, | ,, | ,, | ,, | ,, | ,, | ,, | ೨೬೦ | ೨೨೯ | ೪೮೯ |
| ೨೪ | ಕಾಮತಿಗಳು............ | ,, | ,, | ,, | ,, | ,, | ,, | ,, | ,, | ,, | ೨೪೨ | ೨೦೬ | ೪೪೮ |
| ೨೫ | ಹಬ್ಬುಗಳು............. | ,, | ,, | ,, | ,, | ,, | ,, | ,, | ,, | ,, | ೧೩೦ | ೧೦೪ | ೨೩೪ |
| ೨೬ | ಅತ್ತೆ ವೊಕ್ಕಲಿಗರು......... | ,, | ,, | ,, | ,, | ,, | ,, | ,, | ,, | ,, | ೭೧ | ೫೪ | ೧೨೫ |
| ೨೭ | ನೊಣಬರು............. | ,, | ,, | ,, | ,, | ,, | ,, | ,, | ,, | ,, | ೫೪ | ೫೯ | ೧೧೩ |
| ೨೮ | ಕೀಲುಂಗಿಗಳು........... | ,, | ,, | ,, | ,, | ,, | ,, | ,, | ,, | ,, | ೭೫ | ೧೯ | ೯೪ |
| ೨೯ | ಗೊಂಗಡಿಕಾರರು......... | ,, | ,, | ,, | ,, | ,, | ,, | ,, | ,, | ,, | ೧೩ | ೧೬ | ೨೯ |
| ೩೦ | ಕೊಟ ವೊಕ್ಕಲಿಗರು ....... | ,, | ,, | ,, | ,, | ,, | ,, | ,, | ,, | ,, | ೧೦೦೩ | ೮೧೯ | ೧೮೨೨ |
| ೩೧ | ತಿಗಳರು ............... | ,, | ,, | ,, | ,, | ,, | ,, | ,, | ,, | ,, | ೧೦ | ೧೧ | ೨೧ |
| ೩೨ | ಬುಣಗಾರರು............ | ,, | ,, | ,, | ,, | ,, | ,, | ,, | ,, | ,, | ೯೧ | ೧೦೧ | ೧೯೨ |
| ೩೩ | ಪದಮುಸಾಳಿಗಳು ......... | ,, | ,, | ,, | ,, | ,, | ,, | ,, | ,, | ,, | ೨೨ | ೪೧ | ೬೩ |

ಕಾಮಾಠಿಗಳು.—ಇವರು ಧಾರವಾಡ ಜಿಲ್ಲೆಯ ಧಾರವಾಡ, ಹಾನಗಲ್ಲು, ಕೋಡ, ರಾಣೀ ಬಿನ್ನೂರು ತಾಲೂಕುಗಳಲ್ಲಿಯೂ ಬೆಳಗಾವಿಯಲ್ಲಿಯೂ ಇರುತ್ತಾರೆ. ಧಾರವಾಡದ ಕಾಮಾಠಿಗಳು ಮನೆಯಲ್ಲಿಯೂ ಹೊರಗೂ ಕನ್ನಡ ಭಾಷೆಯನ್ನಾಡುವರು, ಬೆಳಗಾವಿಯವರು ಮನೆಯಲ್ಲಿ ತೆಲಗನ್ನೂ ಹೊರಗೆ ಮರಾಠಿಯನ್ನೂ ಆಡುವರು. ಧಾರವಾಡದವರು ತೋರಿಕೆಯಲ್ಲಿ ಕನ್ನಡ ಕೂಲಿಕಾರರಂತೆ ಕಾಣುವರು, ಬೆಳಗಾವಿಯವರು ಕುಣಬಿಗಳಂತೆ ಕಾಣುವರು. ಕಾಮಾಠಿಗಳು ವೆಂಕಟರಮಣನಿಗೂ ಮಾರುತಿಗೂ ನಡಕೊಳ್ಳುತ್ತಾರೆ; ಬ್ರಾಹ್ಮಣರ ಕೈಯಿಂದ ಲಗ್ನ ಕಾರ್ಯ ಮಾಡಿಸುವರು; ಮದ್ಯ ಮಾಂಸಗಳನ್ನು ತಕ್ಕೊಳ್ಳುವರು. ಒಕ್ಕಲತನವೇ ಇವರ ಮುಖ್ಯ ಹೋರೆಯು. ಇವರು ಶ್ರಮದಿಂದ ಕೆಲಸ ಮಾಡುವವರೂ ವೊಳ್ಳೇ ಸ್ವಭಾವದವರೂ ಆದಾಗ್ಯೂ ಮಲಿನರೂ ಅವ್ಯವಸ್ಥಿತರೂ ಇರುತ್ತಾರೆ. ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ, ಹೆಣಗಳನ್ನು ಹುಗಿಯುವರು. ಧಾರವಾಡದ ಕಾಮಾಠಿಗಳು ಲಿಂಗವಂತರಂತೆ ಹೆಣವನ್ನು ವಿಮಾನದಲ್ಲಿ ವೊಯ್ಯುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಕಾಮಾಠಿಗಳು.**

ಕುಡವೊಕ್ಕಲಿಗರು.—ಇವರು ಧಾರವಾಡ ವಿಜಾಪುರ ಜಿಲ್ಲೆಗಳಲ್ಲಿ ಇರುತ್ತಾರೆ. ಇವರು ಕನ್ನಡ ಭಾಷೆಯನ್ನಾಡುವರು. ಇವರಲ್ಲಿ ದಂಡಾವತಿಗಳು, ಮಿಣಿಗಡಿಕರು, ತಡ್ಡೊಡಿಗಳು, ಯೆತ್ತಿರಕರು, ಯೆಂಬ ನಾಲ್ಕು ವೊಳ ಭೇದಗಳಿರುತ್ತವೆ. ಎರಡನೇ ನಾಲ್ಕನೇ ವರ್ಗದವರು ಬಹು ಸ್ವಲ್ಪ ಜನರು ಕ್ವಚಿತ್ತಾಗಿ ದೃಷ್ಟಿಗೆ ಬೀಳುವರು. ಉಳಿದ ಯೆರಡು ವರ್ಗಗಳಲ್ಲಿ ಪರಸ್ಪರ ಹೆಣ್ಣು ಗಂಡು ಆಗುವದಿಲ್ಲ. ಬಸವಣ್ಣ, ಯೆಲ್ಲಮ್ಮ, ವೀರಭದ್ರ, ಈ ದೇವತೆಗಳಿಗೆ ಕುಡವೊಕ್ಕಲಿಗರು ನಡಕೊಳ್ಳುವರು. ಇವರು ಲಿಂಗಧಾರಣ ಮಾಡಿದಾಗ್ಯೂ ಚೆಂಡಿಕೇ ಕಾಯುವರು, ಲಗ್ನ ಕಾರ್ಯಕ್ಕೆ ಬ್ರಾಹ್ಮಣರನ್ನು ಕರಿಯುವರು; ಹೆಣಗಳನ್ನು ಹುಗಿಯುವರು; ಮರಣ ಸಂಸ್ಕಾರವನ್ನು ಜಂಗಮರ ಕೈಯಿಂದ ಮಾಡಿಸುವರು. ಒಕ್ಕಲತನವೇ ಇವರ ಕುಲ ಪರಂಪರಾಗತವಾದ ಹೋರೆಯು. ವಿಧವೆಗಳಿಗೆ ಲಗ್ನವಿಲ್ಲ. ವಿಜಾಪುರ ಜಿಲ್ಲೆಯವರು ಮಕ್ಕಳನ್ನು ಶಾಲೆಗೆ ಕಳಿಸುವರು, ಧಾರವಾಡದವರು ಕಳಿಸುವದಿಲ್ಲ.

**ಕುಡವೊಕ್ಕಲಿಗರು.**

ರಡ್ಡೇರು.—ಇವರು ಕಾನಡಾ ಜಿಲ್ಲೆಯ ಹೊರ್ತು ಯೆಲ್ಲ ಕಡೆಯಲ್ಲಿ ವಾಸಿಸುತ್ತಾರೆ. ಇವರಲ್ಲಿ ಕೆಲವರು ತಮ್ಮ ಮೂಲ ಪೀಠಿಕೆಯನ್ನು ಹೇಳುವದು ಹ್ಯಾಗಂದರೆ—ಕುರುಬರ ಮೂಲ ಪುರುಷನಾದ ಕುರುಪಿ ಯೆಂಬವನಿಗೆ ಕುಡವೊಕ್ಕಲಿಗನೆಂಬ ಸಹೋದರನಿದ್ದನು. ಕುಡವೊಕ್ಕಲಿಗನ ಮಗನ ಹೆಸರು ಹೇಮರಡ್ಡಿ. ಹೇಮನು ಕಸುವುಳ್ಳ ರಟ್ಟೆಯವನಾಗಿದ್ದ ಕಾರಣ ಅವನಿಗೆ "ಹೇಮರಟ್ಟ" ಯೆಂಬ ಹೆಸರು ಬಂದು, ಮುಂದೆ "ರಟ್ಟ"ಗೆ ಬದಲಾಗಿ "ರಡ್ಡಿ" ಯೆಂಬ ಅಡ್ಡ ಹೆಸರು ಹೇಮನ ವಂಶದವರಿಗೆ ಬಿತ್ತು. ಇದರಿಂದ ಕುಡವೊಕ್ಕಲಿಗರಿಂದ ರಡ್ಡೇರಾದರೆಂದು ತಿಳಿಯುತ್ತದೆ. ಆದರೆ ರಡ್ಡೇರಿಂದ ಕುಡವೊಕ್ಕಲಿಗರಾದರೆನ್ನಲಿಕ್ಕೆ ಬಲವಾದ ಆಧಾರ

**ರಡ್ಡೇರು.**

ಉಂಟು. ಮಲ್ಲವ್ವರಡ್ಡಿ ಯೆಂಬ ಹೆಂಗಸು ಗಿರಿಯ ವೆಂಕಟರಮಣನ ಭಕ್ತಳಿದ್ದಳು. ಆಕೆ ತನ್ನ ಕುಲದವರಿಗೆ ಚಿರಕಾಲ ಸಂಪತ್ತು ಇರಲೆಂಬ ವರವನ್ನು ವೆಂಕಟರಮಣನಿಂದ ಪಡಿದಳೆಂದು ಹೇಳುತ್ತಾರೆ. ರಡ್ಡೇರಲ್ಲಿ ಚಿಟನಟ, ಮಟಮಟ, ಪಾಕನಾಕ, ನಿರ್ಮಳ, ನಾಮದ, ಇತ್ಯಾದಿ ಅವಾಂತರ ಜಾತಿಗಳಿರುತ್ತವೆ. ಇವರಲ್ಲಿ ನಾಮದ ರಡ್ಡೇರು ಮಾತ್ರ ತ್ರಿಪುಂಡ್ರ ನಾಮ ಹಚ್ಚಿಕೊಂಡು ಬ್ರಾಹ್ಮಣರ ಧರ್ಮವನ್ನು ಪಾಲಿಸುವರು. ಉಳಿದವರೆಲ್ಲ ಲಿಂಗವಂತರು. ಆದರೂ ಅವರಲ್ಲಿ ಬಹು ಜನರು ಚಂಡಿಕೆಯನ್ನು ಕಾಯುವರು; ವೆಂಕಟರಮಣ, ಹನುಮಂತ, ಯೆಲ್ಲಮ್ಮ, ಈ ದೇವತೆಗಳಿಗೆ ನಡಕೊಳ್ಳುವರು; ಲಗ್ನ ಕಾರ್ಯಕ್ಕೆ ಬ್ರಾಹ್ಮಣರನ್ನು ಕರಿಯುವರು. ಆದಾಗ್ಯೂ ಕೆಲವರು ಲಿಂಗವಂತ ರಡ್ಡೇರು ನಿಜಲಿಂಗವಂತರಂತೆ ವರ್ತಿಸುವರು, ಬ್ರಾಹ್ಮಣರನ್ನು ಯಾತಕ್ಕೂ ಕರೆಯುವದಿಲ್ಲ. ನಾಮದ ರಡ್ಡೇರು ಹೆಣಗಳನ್ನು ಸುಡುವರು, ಉಳಿದವರು ಹುಗಿಯುವರು. ರಡ್ಡೇರು ಮದ್ಯ ಮಾಂಸಗಳ ಸಂಪರ್ಕ ಮಾಡುವದಿಲ್ಲ; ವಿಧವೆಗಳ ಲಗ್ನವನ್ನು ವೊಮ್ಮೆ ಮಾತ್ರ ಮಾಡುವರು. ವಿಜಾಪುರ ಜಿಲ್ಲೆಯಲ್ಲಿ ಪಾಕನಾಕ ರಡ್ಡಿಗಳೇ ಬಹು ಜನರುಂಟು; ಅವರಲ್ಲಿ ಯೆಷ್ಟೋ ಜನರು ಗೌಡಕಿಯ ವತನವನ್ನು ಉಣ್ಣುತ್ತಾರೆ. ಬಾಗಲಕೋಟೆಯ ನೆರೆಹೊರೆಯಲ್ಲಿ ನಾಮದ ರಡ್ಡೇರ ವಸ್ತಿಯು ಬಹಳ ಇರುತ್ತದೆ. ಬೆಳಗಾವೀ ಜಿಲ್ಲೆಯಲ್ಲಿ ಕೆಲವರು ಪಾಕನಾಕ ರಡ್ಡೇರು ಪ್ರಶ್ನ ಹೇಳುವ ತಾಡವಾಲೆಯ ಪುಸ್ತಕ ತಕ್ಕೊಂಡು ಮನೆ ಮನೆ ತಿರುಗಿ ಪ್ರಶ್ನ ಹೇಳಿ ಭಿಕ್ಷೆ ಬೇಡುವರು*. ರಡ್ಡೇರಲ್ಲಿ ಯೆಲ್ಲ ಕೂಡಿ ೩೬ ಬೆಡಗಗಳೆಂದರೆ ಮನೆತನಗಳು ಇಲ್ಲವೆ ಗೋತ್ರಗಳು ಇರುತ್ತವೆ. ಒಂದೇ ಬೆಡಗದವರಲ್ಲಿ ಹೆಣ್ಣು ಗಂಡು ಆಗುವದಿಲ್ಲ. ಲಿಂಗವಂತ ರಡ್ಡೇರೊಳಗೆ ಪರಸ್ಪರ ಊಟದ ಬಳಿಕೆಯಾಗುತ್ತದೆ; ಆದರೆ ಶರೀರ ಸಂಬಂಧವು ಅವರವರ ಜಾತಿಯಲ್ಲಿ ಮಾತ್ರ ಆಗುತ್ತದೆ. ಪಾಕನಾಕ ರಡ್ಡೇರಲ್ಲಿ ಕೆಲವರು ಮನೆಯಲ್ಲಿ ತೆಲಗು ಭಾಷೆಯನ್ನಾಡುವರು. ಆದರೆ ವಾಡಿಕೆಯಾಗಿ ರಡ್ಡೇರು ಕನ್ನಡಿಗರೇ ಯೆಂದು ಹೇಳ ಬಹುದು. ಒಕ್ಕಲತನವೇ ರಡ್ಡೇರ ಕುಲ ಪರಂಪರಾಗತವಾದ ಹೋರೆ. ಆದರೂ ಸ್ವಲ್ಪ ಜನರು ಕಾಳಿನ ಮಾರಾಟ ಮಾಡುವರು; ಕೆಲವರು ಚಿನಿವಾರಿಕೆಯ ಅಂಗಡಿಯನ್ನು ಹಚ್ಚುವರು. ರಡ್ಡೇರು ಕೂರಿಗೆಯ ಪೂಜೆ, ಚರಗ ಚಲ್ಲುವದು, ಶೀಗಿಗೌರಿಯ ಪೂಜೆ, ರಾಶಿಯ ಪೂಜೆ, ಮುಂತಾದ ವೊಕ್ಕಲತನದ ಸಮಾರಂಭಗಳನ್ನು ಕುಲ ಧರ್ಮದಂತೆ ಭಕ್ತಿಯಿಂದ ಮಾಡುವರು. ಇವರ ಮೈಬಣ್ಣ ಸ್ವಲ್ಪ ಕಪ್ಪು, ನಿಲಿಪಿಕೆ ಮಧ್ಯಮ. ಮುಖಚರ್ಯೆ ಕಳೆಯುಳ್ಳದ್ದು, ಮೈಕಟ್ಟು ಕಸುವುಳ್ಳದ್ದು. ಇವರು ಪ್ರಮಾಣಿಕರು, ಮೈಮುರಿದು ದುಡಿಯುವವರು, ವ್ಯವಸ್ಥಿತರು, ಸರಳ ಸ್ವಭಾವದವರು. ಆದರೆ ಇವರ ಮನೆಯಲ್ಲಿ ಹೊಲಸು ಬಹಳ; ಅಧಿಕಾರದ ಅಮಲು ತೋರಿಸುವವರಿಗೆ ಮಾತ್ರ ಮಣಿಯುವರು. ಲಿಂಗವಂತ ರಡ್ಡೇರ ಉಡಿಗೆ ತೊಡಿಗೆಗಳೂ ನಡಾವಳಿಗಳೂ ಪಂಚಮ ಸಾಲಿಯವರಂತೆ. ರಡ್ಡೇರು ತಮ್ಮ ಮಕ್ಕಳನ್ನು ಬಹಳವಾಗಿ ಶಾಲೆಗೆ ಕಳಿಸುವದಿಲ್ಲ. ಮಕ್ಕಳನ್ನು ಶಾಲೆಗೆ ಕಳಿಸುವದಕ್ಕೆ ಬದಲಾಗಿ ದನ ಕಾಯುವ ಮುಂತಾದ ವೊಕ್ಕಲತನದ ಸಣ್ಣ

* ಇವರು ಲಿಂಗವಂತರಾದಾಗ್ಯೂ ಮದ್ಯ ಮಾಂಸಗಳನ್ನು ನಿರಾತಂಕವಾಗಿ ತಕೊಳ್ಳುತ್ತಾರೆಂದು ಮೂಲಗ್ರಂಥದಲ್ಲಿ ಬರಿದದೆ.

ಫುಟ್ಟ ಕೆಲಸಕ್ಕೆ ಹಚ್ಚುವದರಲ್ಲಿ ಹೆಚ್ಚು ಲಾಭವಿರುತ್ತದೆಂದು ಇವರು ಯೆಣಿಸುತ್ತಾರೆ. ಒಟ್ಟಿಗೆ ರಡ್ಡೇರು ಬೆಳುವಣಿಗೆಯ ಸ್ಥಿತಿಯಲ್ಲಿದ್ದಾರೆ.

**ಸಾದರು.** ಸಾದರು.—ಇವರು ತಮ್ಮ ಹೆಸರು "ಸಾಧು" ಯೆಂಬ ಶಬ್ದದಿಂದ ಹುಟ್ಟಿರುತ್ತದೆಂದು ಹೇಳುತ್ತಾರೆ. ಧಾರವಾಡ ಜಿಲ್ಲೆಯಲ್ಲಿ ಯೆಲ್ಲ ಕಡೆಯಲ್ಲಿ ಇವರು ಇರುತ್ತಾರೆ. ಕಾನಡಾ ಜಿಲ್ಲೆಯ ಘಟ್ಟದ ಮೇಲಿನ ಭಾಗದಲ್ಲಿಯೂ ಇವರ ವಸ್ತಿಯು ಸ್ವಲ್ಪವಿರುತ್ತದೆ. ಇವರು ಮೈಸೂರು ಶೀಮೆಯಿಂದ ಬಂದವರೆಂದು ತೋರುತ್ತದೆ. ಇವರ ಜನ್ಮಭಾಷೆ ಕನ್ನಡ, ಧರ್ಮ ಲಿಂಗವಂತಮತ. ಇವರ ಉಡಿಗೆ, ಆಹಾರ, ಮುಂತಾದವುಗಳೆಲ್ಲ ಪಂಚಮ ಸಾಲಿಯವರಂತೆ. ಆದರೆ ಇವರಲ್ಲಿ ಕೆಲವರು ಲಗ್ನ ಕಾರ್ಯಕ್ಕೆ ಬ್ರಾಹ್ಮಣರನ್ನು ಕರಿಯುವರು. ಒಕ್ಕಲತನವೇ ಇವರ ಮುಖ್ಯ ಹೋರೆಯು; ಕೆಲವರು ವ್ಯಾಪಾರವನ್ನು ಮಾಡುವರು; ಕೆಲವರು ಗೌಡಿಕೆಯ ಕೆಲಸ ಮಾಡುವರು. ಸಾದರಲ್ಲಿ ಕುಂಬಳ ಬಡಕರೆಂತಲೂ ಯೆತ್ರಿಕರೆಂತಲೂ ಯೆರಡು ಭೇದಗಳಿವೆ. ಆವರು ಪರಸ್ಪರ ಅನ್ನ ವ್ಯವಹಾರ ಮಾಡುತ್ತಾರೆ; ಶರೀರ ಸಂಬಂಧ ಮಾಡುವದಿಲ್ಲ. ಇವರು ಹೊಟ್ಟೆಗೆ ಸೌಖ್ಯದಿಂದಿದ್ದಾರೆ.

**ಛತ್ರೇರು.** ಛತ್ರೇರು.—ಇವರು ನಾಲ್ಕೂ ಜಿಲ್ಲೆಗಳಲ್ಲಿ ಇರುತ್ತಾರೆ, ತಾವು ಕ್ಷತ್ರಿಯರ ವಂಶದವರೆಂದು ಹೇಳುತ್ತಾರೆ. ಆದರೆ ಕನ್ನಡ ಹೊರ್ತಾಗಿ ಇವರಿಗೆ ಬೇರೆ ಯಾವ ಭಾಷೆಯೂ ಬರುತ್ತಿರುವದಿಲ್ಲ. ಆದರೂ ವಿಜಾಪುರ ಬೆಳಗಾವಿ ಜಿಲ್ಲೆಗಳ ಛತ್ರೇರ ನಡಾವಳಿಗಳು ರಜಪೂತರ ನಡಾವಳಿಗಳನ್ನು ಇಲ್ಲವೆ ಮರಾಠೀ ಕುಣಬಿಗಳ ನಡಾವಳಿಗಳನ್ನು ಹೋಲುತ್ತವೆ. ಅವರ ಉಡಿಗೆ ಆಹಾರ ಮುಂತಾದವುಗಳಾದರೂ ಮರಾಠೀ ಜನರಂತೆಯೇ. ಇವರ ಮೈಬಣ್ಣ ಕಪ್ಪು, ಸ್ವಭಾವ ಶಿಟ್ಟಿನದು. ಇವರು ವೆಂಕಟರಮಣನಿಗೂ ಹನುಮಂತನಿಗೂ ನಡಕೊಳ್ಳುವರು, ಬ್ರಾಹ್ಮಣರ ಕೈಯಿಂದ ಲಗ್ನ ಮುಂತಾದ ಸಂಸ್ಕಾರಗಳನ್ನು ಮಾಡಿಸುವರು. ಈ ಯೆರಡು ಜಿಲ್ಲೆಗಳಲ್ಲಿ ಇವರು ವೊಕ್ಕಲತನ, ಹಳ್ಳಿಗಳ ಕಾವಲು, ದಿನಗೂಲಿ, ಇವುಗಳನ್ನು ಮಾಡಿ ಜೀವಿಸುವರು. ವಿಜಾಪುರ ಜಿಲ್ಲೆಯಲ್ಲಿ ಬಹು ಜನರು ಗೌಡಿಕೆಯ ಕೆಲಸ ಮಾಡುತ್ತಾರೆ. ಅವರ ಸಂಖ್ಯೆಯು ಮಹಾರಾಷ್ಟ್ರರಿಗಿಂತ ಹೆಚ್ಚಾಗ ಬಹುದು.

ಧಾರವಾಡ ಜಿಲ್ಲೆಯ ಛತ್ರೇರು ಕೀಳು ಜನರಾಗಿ ಬಾಳುತ್ತಾರೆ. ಇವರಲ್ಲಿ ಕೆಲವರು ಮೀನ ಬಲೆಗಾರರಾಗಿ, ಕೆಲವರು ಕಿಳ್ಳೀಕೇತನ ಆಟ ಮಾಡಿ ಜೀವಿಸುತ್ತಾರೆ. ಇವರು ಹೊಲಸುತನದಿಂದ ಹುಲ್ಲಿನ ಗುಡುಸಲುಗಳಲ್ಲಿ ವಾಸಿಸುತ್ತಾರೆ; ಭರಮಪ್ಪ, ಹುಲಗೆವ್ವ, ಯೆಂಬ ದೇವತೆಗಳಿಗೆ ನಡಕೊಳ್ಳುವರು. ಬ್ರಾಹ್ಮಣರು ಇವರ ಮನೆಯ ಕಾರ್ಯಗಳಿಗೆ ಹೋಗುವದಿಲ್ಲ. ಶಕ್ತಿ ಇದ್ದವರು ಹೆಣಗಳನ್ನು ಸುಡುವರು, ಗತಿ ಇಲ್ಲದವರು ಹುಗಿಯುವರು, ಇವರ ಅಡ್ಡ ಹೆಸರುಗಳು ಅಲ್ಲಕ, ಪಾಚಂಗೆ, ಸಿಂಧೆ, ಇತ್ಯಾದಿಗಳಿರುವ ಕಾರಣ

ಇವರು ಮಹಾರಾಷ್ಟ್ರರ ವಂಶದವರೆಂದು ತೋರುತ್ತದೆ. ಮರಾಠೀ ಭಾಷೆಯನ್ನು ಇವರು ಯೆಷ್ಟು ಮಾತ್ರವೂ ಅರಿಯರು.*

ಕಾನಡಾ ಜಿಲ್ಲೆಯ ಛತ್ರೇರು ಸಿದ್ಧಾಪುರ, ಯೆಲ್ಲಾಪುರ ತಾಲೂಕುಗಳಲ್ಲಿ ಇರುತ್ತಾರೆ. ಇವರ ಮುಖ್ಯ ಹೋರೆಗಳು ವೊಕ್ಕಲತನ, ವ್ಯಾಪಾರ. ಇವರಲ್ಲಿ ಭರದ್ವಾಜ, ಕಶ್ಯಪ ಮುಂತಾದ ಗೋತ್ರಗಳುಂಟು; ಗರ್ಭಾಧಾನ, ಸೀಮಂತ, ನಾಮಕರಣ, ಚೌಲ, ಮೌಂಜಿ, ಲಗ್ನ, ಉತ್ತರಕಾರ್ಯ, ಇಷ್ಟು ಸಂಸ್ಕಾರಗಳನ್ನು ಬ್ರಾಹ್ಮಣರು ಮಾಡಿಸುತ್ತಾರೆ. ಲಗ್ನದಲ್ಲಿ ಮದಿಮಗನ ಕೈಯಲ್ಲಿ ಕಠಾರಿ ಇರುತ್ತದೆ. ಈ ಕಾರಣಗಳಿಂದ ಇವರು ಕ್ಷತ್ರಿಯರ ವಂಶದವರೆಂದು ತೋರುತ್ತದೆ. ಆದರೆ ಇವರು ತಮ್ಮ ಅಡ್ಡ ಹೆಸರುಗಳನ್ನೂ ಮೂಲ ಭಾಷೆಯನ್ನೂ ಮರೆತು ಬಿಟ್ಟಿದ್ದಾರೆ. ಇವರು ರಾಮಾನುಜ ಮತವನ್ನು ಸ್ವೀಕರಿಸಿ ವೆಂಕಟರಮಣನಿಗೆ ನಡಕೊಳ್ಳುತ್ತಾರೆ. ಇವರ ಧರ್ಮಗುರು ತಾತಾಚಾರ್ಯನೆಂಬ ಶ್ರೀವೈಷ್ಣವನು. ಇವರು ಮದ್ಯ ಮಾಂಸಗಳ ಸಂಪರ್ಕ ಮಾಡುವದಿಲ್ಲ, ವಿಧವೆಗಳ ಲಗ್ನ ಮಾಡುವದಿಲ್ಲ. ಹೆಣವನ್ನು ಸುಟ್ಟು ಬಂದ ಕೂಡಲೆ ಸತ್ತವನ ಹೆಂಡತಿಯ ಬಳೆ, ಮಂಗಳಸೂತ್ರ, ಬುಗಡಿ, ನತ್ತು, ಇವುಗಳನ್ನು ತೆಗಿಸುವರು; ಆದರೆ ಕೂದಲ ತೆಗಿಸುವದಿಲ್ಲ.

ಧಾರವಾಡ ಜಿಲ್ಲೆಯವರು ಹೊರ್ತಾಗಿ ಉಳಿದ ಮೂರೂ ಜಿಲ್ಲೆಗಳ ಛತ್ರೇರು ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ, ಸೌಖ್ಯದಿಂದಿದ್ದಾರೆ.

**ಹಣಬರು.**

ಹಣಬರು.—ಇವರು ಧಾರವಾಡ ಜಿಲ್ಲೆ ಹೊರ್ತಾಗಿ ಉಳಿದ ಮೂರು ಜಿಲ್ಲೆಗಳಲ್ಲಿ ಇರುತ್ತಾರೆ. ಇವರ ನಿಲಿವಿಕೆ ಯೆತ್ತರ, ಮೈಬಣ್ಣ ಕಪ್ಪು, ಮೈಕಟ್ಟು ಕಸುವುಳ್ಳದ್ದು, ಸ್ವಭಾವ ತಿಟ್ಟನದು.

ವಿಜಾಪುರ ಜಿಲ್ಲೆಯ ಹಣಬರು ಕನ್ನಡ ಆಡುವರು. ಬಾದಾಮೀ ತಾಲೂಕಿನಲ್ಲಿ ಇವರ ವಸ್ತಿ ಹೆಚ್ಚು. ಇವರಲ್ಲಿ ಬಿಳಿ ಶೀರೆಯವರೆಂತಲೂ ಬಣ್ಣದ ಶೀರೆಯವರೆಂತಲೂ ಯೆರಡು ವರ್ಗಗಳುಂಟು; ಅವರವರೊಳಗೆ ಅನ್ನ ವ್ಯವಹಾರ ಸಹ ಆಗುವದಿಲ್ಲ. ಈ ಜಿಲ್ಲೆಯವರೆಲ್ಲರು ಬಹುತರ ಬಿಳಿ ಶೀರೆಯವರೇ. ಬಣ್ಣದ ಶೀರೆಯವರು ಮುಲ್ಲಾಡದಲ್ಲಿ ಬಹಳ. ಇವರು ಮಾಂಸ ತಿನ್ನುತ್ತಾರೆ; ಆದರೆ ಸರಾಯಿ, ಗಾಂಜಿ, ಭಂಗಿ, ಅಫು, ಇವುಗಳನ್ನು ಮುಟ್ಟುವದಿಲ್ಲ. ಇವರ ಮುಖ್ಯ ಹೋರೆ ವೊಕ್ಕಲತನವು; ಕೆಲವರು ಕಟ್ಟಿಗೆಯ ವ್ಯಾಪಾರ ಮಾಡುವರು. ಇವರು ವ್ಯವಹಾರದಲ್ಲಿ ಕುರುಬರಿಗೆ ಸರಿಯಾಗಿ ಯೆಣಿಸಲ್ಪಡುತ್ತಾರೆ; ಮಂಗಳವ್ವ, ಯೆಲ್ಲಮ್ಮ, ಹನುಮಂತ, ಈ ದೇವರಿಗೆ ನಡಕೊಳ್ಳುತ್ತಾರೆ; ಬ್ರಾಹ್ಮಣರನ್ನು ಯಾವ ಕೆಲಸಕ್ಕೂ ಕರೆಯುವದಿಲ್ಲ, ಅವರಿಗೆ ಮಾನ ಕೊಡುವದಿಲ್ಲ. ಇವರ ಉಪಾಧ್ಯಾಯರು ಇವರ ಜಾತಿಯವರೇ ಇರುತ್ತಾರೆ. ಕೆಲವರು ಹೆಣಗಳನ್ನು ಸುಡುವರು, ಕೆಲವರು ಹುಗಿಯುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

ಬೆಳಗಾವೀ ಜಿಲ್ಲೆಯ ಹಣಬರು ಚಿಕ್ಕೋಡಿ, ಖಾನಾಪುರ, ಬೆಳಗಾವಿ, ಈ ತಾಲೂಕುಗಳಲ್ಲಿ ವಾಸಿಸುತ್ತಾರೆ. ಇವರಾಡುವ ಭಾಷೆ ಮರಾಠಿ. ಇವರಲ್ಲಿ ಹಳೇ, ಹೊಸ, ಯೆಂಬೆ

* ಧಾರವಾಡ ಜಿಲ್ಲೆಯಲ್ಲಿ ಉತ್ತಮ ಸ್ಥಿತಿಯ ಛತ್ರೇರು ಬಹು ಜನರುಂಟು. ಆದರೆ ಅವರ ಉಲ್ಲೇಖವು ಮೂಲಗ್ರಂಥದಲ್ಲಿ ಇಲ್ಲ.

ರಡು ವರ್ಗಗಳುಂಟು. ಆದರೆ ಅವರವರೊಳಗೆ ಹೆಣ್ಣು ಗಂಡು ಆಗುತ್ತವೆ. ಹಳ್ಳಿಗಳಲ್ಲಿ ಇರುವವರ ಉಡಿಗೆ ತೊಡಿಗೆಗಳು ಕುಣಬೀ ಜನರಂತೆ ಇರುತ್ತವೆ; ಗುಡ್ಡಗಾಡಿನಲ್ಲಿ ಇರುವವರು ಲಂಗೋಟಿಯು ಹಾಕಿಕೊಂಡು ತಲೆಗೆ ಸಣ್ಣದೊಂದು ಅರಿವೆ ಸುತ್ತಿ ಕೊಳ್ಳುವರು; ಅವರ ತಲೆಯ ಕೂದಲು ಜಡಿಗಟ್ಟಿರುತ್ತದೆ. ಹಳ್ಳಿಗಳಲ್ಲಿ ಇರುವವರು ವೊಕ್ಕಲತನದಿಂದ ಜೀವಿಸುವರು; ಕಾಡಿನಲ್ಲಿ ಇರುವವರು ಯೆಮ್ಮಿ ಆಕಳುಗಳನ್ನು ಸಾಕಿ, ಹಾಲು, ಮೊಸರು, ಬೆಣ್ಣೆಗಳನ್ನು ಮಾರುವರು. ಈ ಜಿಲ್ಲೆಯ ಹಣಬರು ಮದ್ಯ ಮಾಂಸಗಳನ್ನು ತಕ್ಕೊಳ್ಳುವರು, ಗಾಂಜೀ ಶೇದುವರು; ಹನುಮಂತ, ಯೆಲ್ಲಮ್ಮ, ಈ ದೇವತೆಗಳಿಗೆ ನಡಕೊಳ್ಳುವರು; ಲಗ್ನ ಮುಂತಾದ ಕಾರ್ಯಗಳಿಗೆ ಬ್ರಾಹ್ಮಣರನ್ನು ಕರಿಯುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

ಕಾನಡಾ ಜಿಲ್ಲೆಯ ಹಣಬರು ಮುಖ್ಯವಾಗಿ ಶಿರಸೀ ತಾಲೂಕಿನಲ್ಲಿ ಇರುತ್ತಾರೆ. ಇವರು ಮಹಾರಾಷ್ಟ್ರ ಮಿಶ್ರವಾದ ಕನ್ನಡ ಭಾಷೆಯನ್ನಾಡುವರು. ಇವರ ಉಡಿಗೆ ಲಂಗೋಟಿ, ಕಂಬಳಿ. ಒಕ್ಕಲತನವೇ ಇವರ ಮುಖ್ಯ ಹೋರೆಯು; ಬಹುತರ ಯಾರಿಗೂ ಸಾಲವಿಲ್ಲ. ಹಳೆ, ಹೊಸ, ಯೆಂಬ ವರ್ಗದವರು ಪರಸ್ಪರ ಅನ್ನ ವ್ಯವಹಾರ ಮಾಡುವದಿಲ್ಲ. ಇವರಲ್ಲಿ ಹೆಣ್ಣು ಮಕ್ಕಳ ಲಗ್ನವು ನೆರಿದ ಬಳಿಕ ಆಗುವದು. ಇವರ ನಡಾವಳಿಗಳು ಈ ಜಿಲ್ಲೆಯ ಶೂದ್ರರ ನಡಾವಳಿಗಳನ್ನು ಹೋಲುತ್ತವೆ. ಇವರ ದೇವರು ಹಣಮಪ್ಪ, ಬೀರಪ್ಪ; ಆದರೆ ಇವರು ಬ್ರಾಹ್ಮಣರನ್ನು ತಮ್ಮ ಮನೆಗೆ ಕರಿಯುತ್ತಾರೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಕುಲಮರು.**

ಕುಲಮರು ಅಂದರೆ ಕುಲಿಮೆಯವರು.—ಇವರು ಬಿಜಾಪುರ ಸಂಪಗಾವೀ ತಾಲೂಕುಗಳಲ್ಲಿ ಸ್ವಲ್ಪ ಜನರು ಮಾತ್ರ ಉಂಟು. ಇವರ ಪೂರ್ವಜರು ಕಬ್ಬಿಣದ ಕಲ್ಲು ಕರಗಿಸಿ ಕಬ್ಬಿಣ ಮಾಡುವ ಹೋರೆಯನ್ನು ಮಾಡುತ್ತಿದ್ದರು. ಒಳಗಡೆಯಲ್ಲಿ ಆ ಹೋರೆ ಮುಗ್ಗಿದ್ದರಿಂದ ಇವರು ವೊಕ್ಕಲತನವನ್ನು ಮಾಡುತ್ತಾರೆ. ಇವರು ಕುಣಬಿಗಳ ಕೆಳಗೆ ಯೆಣಿಸಲ್ಪಡುತ್ತಾರೆ; ಮಹಾರಾಷ್ಟ್ರ ಭಾಷೆಯನ್ನಾಡುವರು; ಲಂಗೋಟಿಯು ಹಾಕುವರು; ಮದ್ಯ ಮಾಂಸಗಳನ್ನು ತಕ್ಕೊಳ್ಳುವರು; ಬ್ರಾಹ್ಮಣರಿಗೆ ಅಂಕಿತರಾಗಿ ನಡಿಯುವರು; ವಿಧವೆಗಳ ಲಗ್ನ ಮಾಡುವರು. ಇವರ ಕುಲದೇವತೆ ಯೆಲ್ಲಮ್ಮ; ಹುಡುಗರು ಶಾಲೆಗೆ ಹೋಗುವದಿಲ್ಲ.

**ಕುಣಬಿಗಳು.**

ಕುಣಬಿಗಳು.—ಇವರು ಧಾರವಾಡ ಜಿಲ್ಲೆ ಹೊರ್ತಾಗಿ ಯೆಲ್ಲ ಜಿಲ್ಲೆಗಳಲ್ಲಿ ಇರುತ್ತಾರೆ. ಇವರಲ್ಲಿ ಮರಾಠೀ ಕುಳವಾಡಿ, ಕೊಂಕಣೀ ಕುಣಬೀ ಯೆಂಬ ಯೆರಡು ವೊಳಭೇದಗಳಿರುತ್ತವೆ. ಮರಾಠೀ ಕುಳವಾಡಿ ಯೆಂಬವರು ವಿಜಾಪುರ ಬೆಳಗಾವೀ ಜಿಲ್ಲೆಗಳಲ್ಲಿ ಇರುತ್ತಾರೆ; ಕೊಂಕಣೀ ಕುಣಬಿಗಳು ಬೆಳಗಾವೀ ಜಿಲ್ಲೆಯ ಪಶ್ಚಿಮ ಭಾಗದಲ್ಲಿಯೂ ಕಾನಡಾ ಜಿಲ್ಲೆಯ ಹಲ್ಯಾಳ, ಕಾರವಾಡ, ಅಂಕೋಲಾ ತಾಲೂಕುಗಳಲ್ಲಿಯೂ ಇರುತ್ತಾರೆ.

ಮರಾಠೀ ಕುಣಬಿಗಳಲ್ಲಿ ೯೦ ಅಡ್ಡ ಹೆಸರುಗಳಿರುತ್ತವೆ. ಇವರು ಮರಾಠೀ ಭಾಷೆಯನ್ನಾಡುತ್ತಾರೆ. ಇವರ ಕುಲದೇವತೆಗಳು ಕೇದಾರಲಿಂಗ ಅಥವಾ ಜೋತೀಬಾ, ತುಳಜಾ ಭವಾನಿ, ಸೋಮನಾಥ, ಖಂಡೋಬಾ, ಯೆಲ್ಲಮ್ಮ. ಇವರಲ್ಲಿ ಕೆಲವರು ತಾವು ಸೂರ್ಯವಂಶದವರೆಂದು ಹೇಳುತ್ತಾರೆ. ಇವರ ನಿಲಿವಿಕೆ ಮಧ್ಯಮ, ಮೋರೆ ದೀರ್ಘವರ್ತುಳ, ಮೂಗು ಯೆದ್ದದ್ದು, ತುಟ ಸಣ್ಣ, ಮೈಕಟ್ಟು ದಪ್ಪ, ಮೋರೆಯ ಮೇಲೆ ಕೂದಲು ಬಹಳ. ಇವರು ಮದ್ಯ ಮಾಂಸಗಳನ್ನು ತಕ್ಕೊಳ್ಳುತ್ತಾರೆ; ಆದರೆ ಸಿಂದೀ ಕುಡಿಯುವದಿಲ್ಲ; ವ್ಯವಹಾರದಲ್ಲಿ ಪ್ರಮಾಣಿಕರೂ, ಸಾಧಾ ಸ್ವಭಾವದವರೂ, ಶ್ರಮ ಮಾಡುವವರೂ, ತಾಳ್ಮೆಯುಳ್ಳವರೂ, ಪರರಿಗೆ ಸತ್ಕಾರ ಮಾಡುವವರೂ, ಆದಾಗ್ಯೂ ಸ್ವಚ್ಛತನಕ್ಕೆ ಮೆಚ್ಚಿದವರಲ್ಲ. ಒಕ್ಕಲತನವೇ ಇವರ ಮುಖ್ಯ ಹೋರೆ; ಕೆಲವರು ತೋಟಗಳನ್ನೂ ಮಾಡುವರು; ಕೆಲವರು ಕೂಲೀ ಮಾಡುವರು. ಇವರ ಹೆಂಗಸರು ಗಂಡಸರಿಗೆ ಸಹಾಯ ಮಾಡುವದಲ್ಲದೆ ಬೆಣ್ಣೀ ಮಾರಿ ದುಡ್ಡುಗಳಿಸುವರು. ಇವರು ಸಂಕೇಶ್ವರದ ಸ್ವಾಮಿಗೆ ನಡಕೊಳ್ಳುತ್ತಿದ್ದಾಗ್ಯೂ ಇವರ ಸ್ವಂತ ಜಾತಿಯ ಗುರು, ಗೋಸಾವಿಯು, ಬೇರೆ ಇರುತ್ತಾನೆ. ಬ್ರಾಹ್ಮಣರೇ ಇವರ ಉಪಾಧ್ಯಾಯರು; ಹೆಣ್ಣು ಮಕ್ಕಳ ಲಗ್ನವನ್ನು ನೆರಿದ ಬಳಿಕ ಮಾಡಲಿಕ್ಕೆ ಅಡ್ಡಿ ಇಲ್ಲ; ವಿಧವೆಗಳ ಲಗ್ನಕ್ಕೂ ಅಡ್ಡಿ ಇಲ್ಲ; ಹೆಣಗಳನ್ನು ವಾಡಿಕೆಯಾಗಿ ಹುಗಿಯುವರು; ಆದರೆ ಸೂತಕವು ಹನ್ನೆರಡು ದಿವಸ ಇರುತ್ತದೆ. ಸತ್ತವರ ದಿನಕಾರ್ಯ ತೀರಿದ ಬಳಿಕ "ಮಾಳಲಾವಣೇ" (ಮಾಲೆ ಯೇರಿಸುವದು) ಯೆಂಬದೊಂದು ವಿಧಾನವನ್ನು ಇವರು ಮಾಡುತ್ತಾರೆ. ಅದರ ವಿವರ ಹ್ಯಾಗಂದರೆ— ಈ ವಿಧಾನ ಮಾಡತಕ್ಕವನು ಮೊದಲು ಗುರುವಿನ ಭೆಟ್ಟಿಗೆ ಹೋಗುತ್ತಾನೆ. ಆಗ ಗೋಸಾವಿಯು ಅವನಿಗೆ ಹತ್ತು ಹದಿನೈದು ತೆಂಗಿನ ಕಾಯಿ, ಅಷ್ಟೇ ಬಾಳೇ ಹಣ್ಣು, ಉತ್ತತ್ತಿ, ಶೇರು ಅಡಿಕೆ, ೫೦ ವೀಳ್ಯದೆಲೆ, ಶೇರು ಕೊಬ್ಬರಿ, ತೊಲಿ ಕಪ್ಪರ, ಹತ್ತೆಂಟು ಊದಿನ ಕಡ್ಡಿ, ವೊಂದು ಕುರಿ, ವೊಂದು ಸರಾಯಿಯ ಕುಪ್ಪಿ, ಸತ್ತವನು ಗಂಡಸಿದ್ದರೆ ವೊಂದು ರುಮಾಲ, ವೊಂದು ಧೋತರ, ಹೆಂಗಸಿದ್ದರೆ ವೊಂದು ಶೀರೆ, ವೊಂದು ಖಣ, ಇಷ್ಟು ತರ ಹೇಳುತ್ತಾನೆ. ಇಷ್ಟೆಲ್ಲ ತಂದ ಬಳಿಕ ನೇಮಿಸಿದ ದಿವಸ ರಾತ್ರಿ ವೊಂಬತ್ತು ಬಡಿಯುವ ಸುಮಾರಿನಲ್ಲಿ ಮಾಲೆ ಯೇರಿಸ ತಕ್ಕವನು ತನ್ನ ಬಳಗದವರನ್ನೂ ಗೆಳಿಯರನ್ನೂ ಕರೆಕೊಂಡು ಗುರುವಿನ ಮನೆಗೆ ಹೋಗುತ್ತಾನೆ. ಅಲ್ಲಿ ವೊಂದು ಕೋಣೆಯನ್ನು ಸಾರಿಸಿ ಚಾಪಿ ಹಾಸಿಇಟ್ಟಿರುತ್ತಾರೆ. ಆ ಚಾಪಿಯ ಮೇಲೆ ಸುಮಾರು ಯೆರಡು ಫೂಟು ಚಚ್ಚೌಕಾದದ್ದೊಂದು ಕಂಬಳಿಯ ಗಳಿಗೆಯನ್ನಿಟ್ಟು ಅದರ ಮೇಲೆ ಹೊಸ ವಸ್ತ್ರವನ್ನು ಹಾಸುವರು. ಅದರ ಮೇಲೆ ಅಕ್ಕೀ ಹರವಿ, ಅದರ ಮೇಲೊಂದು ನೀರು ತುಂಬಿದ ತಂಬಿಗೆಯನ್ನಿಟ್ಟು ಅದರಲ್ಲಿ ನಾಲ್ಕೈದು ದುಡ್ಡುಗಳನ್ನು ಚಲ್ಲಿ ಬಾಯಿಗೆ ಕಲಶದಂತೆ ವೀಳ್ಯದೆಲೆಗಳನ್ನು ಹಾಕಿ ಮೇಲೆ ತೆಂಗಿನ ಕಾಯಿಯನ್ನಿಡುವರು. ಆ ಕಲಶದ ಮೇಲೆಲ್ಲ ಗಂಧ ಕುಂಕುಮಗಳ ಬೊಟ್ಟುಗಳನ್ನು ಹಚ್ಚುವರು. ಕಲಶದ ಸುತ್ತು ಮುತ್ತು ಸುಮಾರು ಮೂರು ಮೊಳ ಉದ್ದವಾದ ಕಟ್ಟಿಗೆಗಳನ್ನು ನಿಲ್ಲಿಸಿ, ಅವುಗಳ ತುದಿಗಳನ್ನು ವೊಟ್ಟುಗೂಡಿಸಿ ಕಟ್ಟಿ,

ಆ ಕಟ್ಟಿದ ಸ್ಥಳದಿಂದ ಹೂವಿನ ಮಾಲೆಯನ್ನು ಕಲಶದ ಮೇಲೆ ಇಳಿಬಿಡುವರು. ಬಳಿಕ ಗೋಸಾವಿಯು ತೆಂಗಿನ ಕಾಯಿ, ಬಾಳೇ ಹಣ್ಣು, ಉತ್ತತ್ತಿ, ಕೊಬ್ಬರಿ, ಅಡಿಕೆ, ಯೆಲೆ, ಮುಂತಾದವುಗಳನ್ನು ಸರಾಯಿ ಸಹಿತ ಕಲಶದ ಮುಂದಿಟ್ಟು ಸತ್ತವನ ಹೆಸರಿನಿಂದ ಅದರ ಪೂಜೆ ಮಾಡಿ ನೆರಿದ ಜನರ ಕೈಯಲ್ಲಿ ಅಕ್ಕೀ ಕಾಳು ಕೊಡುವನು. ತರುವಾಯ ಗೋಸಾವಿಯು ಕುರಿಯನ್ನು ಕಲಶದ ಮುಂದೆ ನಿಲ್ಲಿಸಿ, ಗಂಧ ಪುಷ್ಪಗಳಿಂದ ಅದರ ಪೂಜೆ ಮಾಡಿ, ಸತ್ತ ಮನುಷ್ಯನಿಗಾಗಿ ನಿನ್ನ ಬಲಿ ಕೊಡುತ್ತೇವೆಂದು ಅದರ ಕಿವಿಯಲ್ಲಿ ಹೇಳುವನು. ಕೂಡಲೆ ಯೆಲ್ಲರು ಕಲಶದ ಮೇಲೆ ಅಕ್ಕೀ ಕಾಳು ಚಲ್ಲಿ ಸಾಷ್ಟಾಂಗ ನಮಸ್ಕಾರ ಹಾಕಿ ಹಾಡುವರು. ಕಡೆಯಲ್ಲಿ ಕುರಿಯನ್ನು ಕಡಿದ ಬಳಿಕ ಗೋಸಾವಿಯು ಶಿಷ್ಯರಾಗ ತಕ್ಕವರಿಗೆ ಉಪದೇಶ ಹೇಳುವನು. ಹ್ಯಾಗಂದರೆ — ಗುರುವಿಗೆ ಮಾನ ಕೊಡು, ಸತ್ಯ ಮಾತಾಡು, ಕದಿಯ ಬೇಡ, ನೆರೆಯಲ್ಲಿ ಯಾರಾದರೂ ಸತ್ತಿದ್ದರೆ, ಹೆಣ ವೊಯ್ಯುವ ವರೆಗೆ ಉಣ್ಣ ಬೇಡ, ಉಣ್ಣುವಾಗ ದೀಪ ಹೋದರೆ ಊಟ ಬಿಡು. ಇಷ್ಟಾದ ಬಳಿಕ ಬೆಳತನಕ ಊಟದ ಸಮಾರಂಭವಾಗುವದು.

ಕುಣಬಿಗಳಲ್ಲಿ ಬಿಗಿಯಾದಂಥ ಸಮಾಜದ ಕಟ್ಟಳೆಗಳು ನಡಿಯುತ್ತವೆ. ಜಾತಿಯ ಪಂಚರು ವಂಶ ಪರಂಪರೆಯಾಗಿ ಇರುವರು. ಜಾತಿಯ ವ್ಯಾಜ್ಯಗಳನ್ನೆಲ್ಲ ಅವರೇ ನಿರ್ಣಯಿಸ ತಕ್ಕವರು. ಆದರೂ ವಿಧವೆಗಳ ಬಸರು, ನೀಚ ಜಾತಿಯವರಲ್ಲಿ ಊಟ, ಇಂಥಾ ದೊಡ್ಡ ಅಪರಾಧಗಳ ನಿರ್ಣಯ ಮಾಡುವ ಅಧಿಕಾರ ಅವರಿಗಿಲ್ಲ; ಸಂಕೇಶ್ವರದ ಸ್ವಾಮಿಯು ಆ ನಿರ್ಣಯ ಮಾಡುವನು. ಇವರಲ್ಲಿ ಗೋಸಾವಿಯ ಅಧಿಕಾರವೇನು ಇರುವದಿಲ್ಲ. ಕುಣಬಿಗಳು ಮಕ್ಕಳನ್ನು ಶಾಲೆಗೆ ಕಳಿಸುವದಿಲ್ಲ.

ಕೊಂಕಣೀ ಕುಣಬಿಗಳಿಗೆ ಕಾಳೆಕುಣಬೀ ಯೆಂತಲೂ ಅನ್ನುವರು. ಅವರ ನಡಾವಳಿಗಳು ಬಹುತರ ಮರಾಠೀ ಕುಣಬಿಗಳಂತೆಯೇ ಇರುತ್ತವೆ. ಭೇದವೇನೆಂದರೆ — ಇವರು ಕೊಂಕಣೀ ಭಾಷೆಯನ್ನಾಡುವರು; ಬಿರಾಮಣಿ, ಪಂಚಮಾಯಾ, ಸಾತೆರಿ, ಯೆಂಬ ದೇವತೆಗಳಿಗೆ ನಡಕೊಳ್ಳುವರು. ಇವರದೊಂದು ಕುಟುಂಬದಲ್ಲಿ ೧೦೦, ೧೫೦ರ ವರೆಗೆ ಜನರಿರುವರು; ಆದದರಿಂದ ಇವರ ಮನೆಗಳು ಬಹಳ ದೊಡ್ಡವಿರುತ್ತವೆ. ಕುರಿ, ಕೋಳಿ, ಕೋಳಿಯ ತತ್ತಿ, ಇಷ್ಟು ಹೊರ್ತಾಗಿ ಮರಾಠೀ ಕುಣಬಿಗಳು ತಿನ್ನುವ ಯೆಲ್ಲ ಬಗೆಯ ಮಾಂಸವನ್ನು ಇವರು ತಿನ್ನುವರು; ಆದರೆ ಮದ್ಯ ಮುಟ್ಟುವದಿಲ್ಲ. ಇವರ ಹೆಂಗಸರು ಕುಬ್ಬಸ ತೊಡುವದಿಲ್ಲ. ಇವರಲ್ಲಿ ಕೆಲವರಿಗೆ ಗುರುಗೋಸಾವಿ ಇರುತ್ತಾನೆ, ಕೆಲವರಿಗೆ ಇರುವದಿಲ್ಲ; ಇಲ್ಲದವರು ಬೇಕಾದಾಗ ಗುರುವನ್ನು ಮಾಡಿಕೊಳ್ಳ ಬಹುದು. ಗುರುವಿನ ಉಪದೇಶದ ವಿವರವು ಮೇಲೆ ಹೇಳಿದಂತೆ. ಕಾಳೇ ಕುಣಬಿಗಳಲ್ಲಿ ವಿಧವೆಗಳಿಗೆ ಲಗ್ನವಿಲ್ಲ. ಮಾಲೆ ಯೇರಿಸುವ ವಿಧಾನವು ಇವರಲ್ಲಿಯೂ ಆಗುತ್ತದೆ.

ಕಾನಡಾ ಜಿಲ್ಲೆಯ ಕಾಳೆ ಕುಣಬಿಗಳು ಉಳವಿಯ ಬಸವಣ್ಣನಿಗೆ ನಡಕೊಳ್ಳುವರು. ಅವರಲ್ಲಿಯ ಕಾರ್ಯಗಳನ್ನು ಮಾಡಿಸುವವರು ಜಂಗಮರೇ. ಆದರೂ ಅವರು ಲಿಂಗ ಧಾರಣ ಮಾಡುವದಿಲ್ಲ; ಅಡವಿಯ ಪಶುಗಳ ಮಾಂಸ ತಿನ್ನುವರು; ಸಾಕಿದ ಪಶು

ಗಳ ಮಾಂಸ ತಿನ್ನುವವನನ್ನು ಕುಲದಿಂದ ಹೊರಗೆ ಇಡುವರು. ಇವರ ಹಳ್ಳಿಗಳು ಅಡ ವಿಯ ನೆರೆಯಲ್ಲಿ ಇರುತ್ತವೆ. ಹಳ್ಳಿಗೆ ಹಿರಿಯನಾದವನ ಮನೆಯಲ್ಲಿ ಮಾತ್ರ ತುಳಸೀ ಗಿಡವಿರ ತಕ್ಕದ್ದು. ಕುಲದೇವತೆಯ ಮೂರ್ತಿಯಾದರೂ ಅವನ ಮನೆಯಲ್ಲಿಯೇ ಇರುವದು. ಇವರ ಹಣೆಯ ಮೇಲೆ ಹಾಲ್ವಕ್ಕೀ ವೊಕ್ಕಲಿಗರಂತೆ ನಾಮವಿರುತ್ತದೆ, ಮತ್ತೂ ಹೆಂಗಸರು ಕರೆಮಣಿಯ ಸರಗಳನ್ನು ಕೊರಳಲ್ಲಿ ಹಾಕಿ ಕೊಳ್ಳುವರು. ಅವರಿಗೆ ಕುಬ್ಬಸವಿಲ್ಲ. ಈ ಕುಣಬಿಗಳು ಮೊದಲು ಕುಮ್ರಿ ಭೂಮಿಯನ್ನು ಮಾಡುವರು. ಆದರೆ ಈಗ ಸರಕಾರದವರು ಕುಮ್ರಿ ಕಡಿಯಗೊಡುವದಿಲ್ಲಾದ ಕಾರಣ ಇವರು ಕೂಲಿಯಿಂದ ಹೊಟ್ಟೆ ತುಂಬಿ ಕೊಳ್ಳುವರು; ಹೆಂಗಸರು ಚಾಪೀ ಹೆಣೆಯುವರು. ಈ ಕೊಂಕಣರು ಹಾಲ್ವಕ್ಕೀ ವೊಕ್ಕಲಿಗರಂತೆ ಸೊಪ್ಪು ಸುಲಿಯದಿದ್ದ ತೆಂಗಿನ ಕಾಯಿಯನ್ನು ಮನೆಯಲ್ಲಿ ಇಟ್ಟು ಹಿರಿಯರ ಮೂರ್ತಿ ಯೆಂದು ಅದನ್ನು ಪೂಜಿಸುವರು. ಇವರು ಹಡಿಯುವ ಹೆಂಗ ಸಿಗಾಗಿ ಪಡಸಾಲೆಯಲ್ಲಿ ತಟ್ಟೀ ಕಟ್ಟಿ ಸ್ಥಳ ಮಾಡುವರು. ಹಡಿದ ನಾಲ್ಕನೇ ದಿವಸ ಅಗಸನು ಬಂದು ಯಾವತ್ತು ಮನೆಗೂ ಮನೆಯೊಳಗಿನ ಜನರಿಗೂ ಬೂದಿ ಕೂಡಿದ ನೀರು ಶಿಡಿಸಿ ಶುದ್ಧ ಮಾಡುವನು. ಐದನೇ ದಿವಸ ಮರದೊಳಗೆ ಅಕ್ಕೀ ಹರವಿ ತೆಂಗಿನ ಕಾಯಿ ವೀಳ್ಯಗಳನ್ನು ಇಟ್ಟ ಬಳಿಕ ಬಾಣತಿಯು ಅದಕ್ಕೆ ನಮಸ್ಕಾರ ಮಾಡಿ ಆ ಮರ ದೊಳಗೆ ಕೂಸು ಮಲಗಿಸುವಳು. ಬಳಿಕ ಇಬ್ಬರು ಮುತ್ತೈದಿಯರು ಮರದ ಯೆರಡೂ ಮಗ್ಗಲಿಗೆ ನಿಂತು ಕೂಸನ್ನು ನಾಲ್ಕಾರು ಸಾರಿ ಯೆತ್ತೆತ್ತಿ ತಾಯಿಯ ತೊಡೆಯ ಮೇಲೆ ಹಾಕಿದನಂತರ ಆ ಕೂಸಿಗೆ ಹೆಸರಿಡುವರು. ಮರದೊಳಗಿನ ಅಕ್ಕಿಯನ್ನು ಜೋಗಿಗಳಿಗೆ ಕೊಟ್ಟು ಕರೆಮಣಿಗಳನ್ನು ಕೊಂಡು ಕೂಸಿನ ಕೊರಳೊಳಗೆ ಕಟ್ಟುವರು. ಕೂಸುಗಳಿಗೆ ಹಲ್ಲು ಬರುವಾಗ ಮೇಲಿನ ಹಲ್ಲು ಮೊದಲು ವೊಡಿದರೆ, ಸೋದರ ಮಾವನಿಗೂ ಚಿಕ್ಕ ದೊಡ್ಡಪ್ಪಗಳಿಗೂ ವೊಳಿತಲ್ಲ. ಈ ಗಂಡಾಂತರವನ್ನು ನೀಗುವವಕ್ಕೋಸ್ಕರ ಸೋದರ ಮಾವನು ಕೂಸಿನ ಮೋರೆಯ ಮೇಲೆ ಅರಿವೇ ಹೊಚ್ಚಿ, ಅದರ ಹಣೆಗೆ ಸೂಜೀ ಚುಚ್ಚಿ ರಕ್ತ ತೆಗಿಯುವನು. ಮಕ್ಕಳು ಹೆಣ್ಣಾಗಲಿ ಗಂಡಾಗಲಿ ಮೂರು ವರ್ಷದವಾದವೆಂದರೆ ಅವುಗಳ ತಲೆ ಬೋಳಿಸಿ, ಗಂಡು ಮಕ್ಕಳ ಕೂದಲನ್ನು ಹಲಸಿನ ಮರದ ಬೊಡ್ಡಿಗೆ, ಹೆಣ್ಣು ಮಕ್ಕಳದನ್ನು ಬಾಳೇ ಗಿಡದ ಬೊಡ್ಡೆಗೆ ಚಲ್ಲುವರು. ಲಗ್ನದಲ್ಲಿ ಮದಿಮಕ್ಕಳ ನಡುವೆ ಅಂತಃಪಟ ಹಿಡಿದು ಅವರನ್ನು ಯೆದುರು ಬದರಾಗಿ ನಿಲ್ಲಿಸಿದ ಬಳಿಕ ಜಂಗಮನು ಬಂದು ಅವರಿಬ್ಬರ ಕೈಗಳನ್ನು ಹೊಂದಿಸಿ ನೀರೆರಚುವನು, ಮತ್ತೂ ವೇವಳೀ ಕುಲದ ಮುತ್ತೈದಿಯು ಮದಿಮಗಳ ಕೊರಳಲ್ಲಿ ಮಂಗಳಸೂತ್ರ ಕಟ್ಟುವಳು. ತರುವಾಯ ಮದಿ ಮಗಳ ವೊಡ ಹುಟ್ಟಿದವನು ಆ ಗಂಡ ಹೆಂಡರ ಶೆರಗುಗಳಿಗೆ ಗಂಟು ಹಾಕಿದ ಬಳಿಕ ನೆರೆದ ಜನರು ಮದಿಮಕ್ಕಳ ಮೇಲೆ ಅಕ್ಕೀಕಾಳು ಹಾಕುವರು, ಮತ್ತೂ ಹೆಂಗಸರು ಕೊಂಕಣೀ ಪದಗಳನ್ನು ಹಾಡುವರು. ಹೆಣ್ಣು ಮಕ್ಕಳ ಲಗ್ನ ನೆರೆಯುವ ಮುಂಚೆ ಆಗ ಬೇಕೆಂಬ ನಿಯಮವಿಲ್ಲ, ವಿಧವೆಗಳಿಗೆ ಲಗ್ನ ಉಂಟು. ಈ ಕೊಂಕಣಿಗರು ಹೆಣಗ ಳನ್ನು ಹುಗಿಯುವರು. ಮರಣದ ಸೂತಕ ಮೂರೇ ದಿವಸ; ಅಗಸನ ನೀರಿನಿಂದ

ಶುದ್ಧಿ. ಈ ಕಾಳೀ ಕುಣಬಿಗಳು ಇರುವ ಹಳ್ಳಿಯಲ್ಲಿ ಬುದ್ಧಿವಂತನೆಂಬವನೊಬ್ಬ ಅಧಿಕಾರಿ ಇರುವನು. ಇದಲ್ಲದೆ ಕೆಲವು ಹಳ್ಳಿಗೆ ಕೂಡಿ ಮಹಾಲೆಂಬ ಹೆಸರಿಟ್ಟು, ಆ ಮಹಾಲಿನ ಮುಖ್ಯ ಸ್ಥಳದಲ್ಲಿ ಮಹಾಲಿನ ಬುದ್ಧಿವಂತನನ್ನು ಗೊತ್ತು ಮಾಡುವರು. ಊರ ಬುದ್ಧಿವಂತರು ಮಹಾಲಿನ ಬುದ್ಧಿವಂತನ ಕೈಕೆಳಗಿನವರು. ಈ ಯಾವತ್ತು ಬುದ್ಧಿವಂತರ ಮೇಲಧಿಕಾರಿಯು ಫೊಂಡಿಯನೆಂಬವನು ಗೋವೆಯಲ್ಲಿ ಇರುತ್ತಾನೆ. ಬೇರೆ ಜಾತಿಯವರ ಸಂಗಡ ಬಳಿಕೆ, ಹೆಂಗಸರ ಹಾದರ, ಮುಂತಾದ ತಪ್ಪುಗಳಿಗಾಗಿ ಊರ ಬುದ್ಧಿವಂತನು ಬೇಕಾದವರನ್ನು ಕುಲದಿಂದ ಹೊರಗೆ ತೆಗಿಯುವನು. ತಪ್ಪುಗಾರನನ್ನು ಕಡೆಗೇ ಕುಲದಿಂದ ಹೊರಗೆ ತೆಗಿಯುವ ಅಧಿಕಾರವು ಮಹಾಲಿನ ಬುದ್ಧಿವಂತನಿಗೆ ಇರುತ್ತದೆ. ಈ ಪ್ರಕಾರ ಬಹಿಷ್ಕೃತರಾದವರನ್ನು ಕುಲದೊಳಗೆ ತಕ್ಕೊಳ್ಳುವ ಅಧಿಕಾರವು ಫೊಂಡಿಯನಿಗೆ ಮಾತ್ರ ಇರುತ್ತದೆ. ಊರ ಬುದ್ಧಿವಂತನು ನೂರು ರೂಪಾಯಿಯ ವರೆಗೆ ದಂಡ ಮಾಡ ಬಹುದು. ಫೊಂಡಿಯನು ಪ್ರತಿ ವರ್ಷ ಈ ಕುಣಬಿಗಳ ಕೈಯಿಂದ ಮನೆಗೆ ನಾಲ್ಕರಿಂದ ಯೆಂಟು ಆಣೆಯ ವರೆಗೆ ಕಪ್ಪವೆತ್ತುವನು. ಈ ಕಪ್ಪವನ್ನು ಮೂರು ವರ್ಷಕ್ಕೊಮ್ಮೆ ಯೆತ್ತುವರು. ಆಗ ಜಾತಿ ಸಂಬಂಧದ ದೊಡ್ಡ ದೊಡ್ಡ ಸಂಗತಿಗಳಿಗಾಗಿ ದೊಡ್ಡ ದೊಡ್ಡ ಸಭೆಗಳು ಕೂಡುವವು. ಆ ಸಭೆಗಳ ವೆಚ್ಚವನ್ನು ವಂತಿಗೆಯಿಂದ ಮಾಡುವರು.

**ತಿಳಾರಿಗಳು.**

ತಿಳಾರಿಗಳು.— ಬೆಳಗಾವಿ ಜಿಲ್ಲೆಯಲ್ಲಿ ಆದಿ ಬಣಜಿಗರಿಗೆ ಈ ಹೆಸರು ಇರುತ್ತದೆ. ತಿಳಾರಿಗಳ ಮುಖ್ಯ ಹೋರೆ ವೊಕ್ಕಲತನವು. ಆದಿ ಬಣಜಿಗರ ವರ್ಣನೆ ನೋಡು.

**ಆರೇ ಬಣಜಿಗರು.**

ಆರೇ ಬಣಜಿಗರು.— ವಿಜಾಪುರ ಜಿಲ್ಲೆಯಲ್ಲಿ ಆದಿ ಬಣಜಿಗರಿಗೆ ಈ ಹೆಸರು ಇರುತ್ತದೆ. ಆರೇ ಬಣಜಿಗರ ಹೋರೆಯಾದರೂ ವೊಕ್ಕಲತನವೇ. ಆದಿ ಬಣಜಿಗರ ವರ್ಣನೆ ನೋಡು.

**ಮುಷ್ಟಿಗೇರು.**

ಮುಷ್ಟಿಗೇರು.* — ಇವರು ವಿಜಾಪುರ ಜಿಲ್ಲೆಯಲ್ಲಿ ಇರುತ್ತಾರೆ; ತಮ್ಮ ಹೆಸರಿನ ಮುಂದೆ ಮುಷ್ಟಿಗೇರ, ಇಲ್ಲವೆ ಛತ್ರಿ ಯೆಂಬ ಉಪಪದವನ್ನು ಹಚ್ಚುವರು, ಭಿಮಪ್ಪಾ ಮುಷ್ಟಿಗೇರ, ಹಣಮಪ್ಪಾ ಛತ್ರಿ, ಇತ್ಯಾದಿ. ಮುಷ್ಟಿಗೇರು ಕಾಳಮ್ಮ, ಯೆಲ್ಲಮ್ಮ, ಹನುಮಂತ, ವೆಂಕಟರಮಣ, ಈ ದೇವತೆಗಳಿಗೆ ನಡಕೊಳ್ಳುವರು; ಇವರ ಗುರು ಓಪ್ಪಮ ಜಾತಿಯವನಿರುತ್ತಾನೆ. ಇವರು ಮದ್ಯಮಾಂಸಗಳನ್ನು ನಿರಾತಂಕವಾಗಿ ತಕ್ಕೊಳ್ಳುವರು, ಕೆಲವರು ಭಂಗಿಯನ್ನು ಸಹ ಕುಡಿಯುವರು. ಒಕ್ಕಲತನವೇ ಇವರ ಕುಲದ ಹೋರೆಯು, ಕೆಲವರು ಕೂಲೀ ಮಾಡುವರು; ಹೆಂಗಸರು ಹಾಲು ಬೆಣ್ಣೆಗಳನ್ನು ಮಾರುವರು. ಇವರಲ್ಲಿಯ ಲಗ್ನ ಮುಂತಾದ ಕಾರ್ಯಗಳನ್ನು ಬ್ರಾಹ್ಮಣರು ಮಾಡಿಸುತ್ತಾರೆ; ಆದರೆ ಜನ್ಮ ಮರಣಗಳ ಮುಡಚೆಟ್ಟು ಹೋಗುವಾಗ ಓಪ್ಪಮ ಜಾತಿಯವರು ಬಂದು ತುಳಸೀ ಪತ್ರ ಕೂಡಿದ ನೀರು ಇವರಿಗೆ ಹಾಕಲಿಕ್ಕೆ

* ಮೂಲಗ್ರಂಥದಲ್ಲಿ ಇವರು ಛತ್ರೇರೆಂದು ಹೇಳಿರುತ್ತದೆ. ಆದರೆ ನಡೆನುಡಿ, ಧರ್ಮ, ಆಹಾರಗಳಲ್ಲಿ ಇವರಿಗೂ ಛತ್ರೇರಿಗೂ ಮಹದಭ್ಯಂತರವಿರುತ್ತದೆ.

ಬೇಕು. ಇವರ ಲಗ್ನದಲ್ಲಿ ವೊಬ್ಬ ಬ್ರಾಹ್ಮಣ, ವೊಬ್ಬ ವೊಪ್ಪಮ, ಕಟ್ಟೀ ಮನೆಯವನೆಂಬ ಜಾತಿಯ ಹಿರಿಮನುಷ್ಯ, ಹೀಗೆ ಮೂವರು ಇರಲಿಕ್ಕೆ ಬೇಕು. ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ. ಬಾಣತಿಗೆ ಹನ್ನೆರಡು ದಿವಸ ಮುಡಚೆಟ್ಟು ಇರುತ್ತದೆ; ಆದರೆ ಮರಣದ ಸೂತಕ ಹತ್ತೇ ದಿವಸ. ಹೆಣಗಳನ್ನು ಸುಡುವರು. ಜಾತಿಯ ವ್ಯಾಜ್ಯವನ್ನು ಕಟ್ಟೀ ಮನೆಯೆಂಬ ಅಧಿಕಾರಿಯ ಅನುಮತಿಯಿಂದ ಪಂಚರು ತೀರಿಸುವರು. ಕೆಲವರು ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ.

**ಓಪ್ಪಮರು.**—ಇವರು ಬಾದಾವಿ, ಹುನಗುಂದ, ವಿಜಾಪುರ ತಾಲೂಕುಗಳಲ್ಲಿ ಇರುತ್ತಾರೆ. ಇವರು ಕುಲಗೆಟ್ಟ ತೆಲಗು ಬ್ರಾಹ್ಮಣರೆಂದು ತೋರುತ್ತದೆ; ಆದರೆ ಚಂಡಿಕೆ ಜನಿವಾರಗಳಿರುವದಿಲ್ಲ. ಗಂಡಸಿನ ಹೆಸರಿನ ಮುಂದೆ "ಅಯ್ಯ" ಹೆಂಗಸಿನ ಹೆಸರಿನ ಮುಂದೆ "ಅಮ್ಮ" ಯೆಂಬ ಉಪಪದಗಳು ಬರುತ್ತವೆ. ಇವರ ಕುಲದೇವರು ವೆಂಕಟರಮಣ, ಆದರೆ ಆ ದೇವರಿಗೆ ಇವರು "ಹವ್ಮಿಾ ರಮನಾರ" ಯೆಂದೆನ್ನುವರು. ಇವರಲ್ಲಿ ನಾಂಬೇರೆಂತಲೂ ಸಾತಾನರೆಂತಲೂ ಯೆರಡು ವೊಳಭೇದಗಳಿವೆ; ಅವರವರೊಳಗೆ ಊಟದ ಬಳಿಕೆಯಾಗುವದಿಲ್ಲ; ವಿಜಾಪುರ ಜಿಲ್ಲೆಯ ಓಪ್ಪಮರೆಲ್ಲರೂ ನಾಂಬೇರಿರುತ್ತಾರೆ. ಇವರು ಮನೆಯಲ್ಲಿ ತೆಲಗು ಮಾತಾಡುವರು, ಶಾಲಿಗ್ರಾಮದ ಪೂಜೆ ಮಾಡುವರು; ಊಟಕ್ಕೆ ಕೂಡ್ರುವಾಗ ಬ್ರಾಹ್ಮಣರಂತೆ ಪರಿಷೇಚನ ಚಿತ್ರಾಹುತಿಗಳನ್ನು ಹಾಕಿ ಪಂಚಪ್ರಾಣಾಹುತಿ ತಕ್ಕೊಳ್ಳುವರು. ಮದ್ಯ ಮಾಂಸ ತಕ್ಕೊಳ್ಳುವವನು ಜಾತಿ ಬಾಹ್ಯನಾಗುತ್ತಾನೆ. ಇವರ ಉಪಾಧ್ಯಾಯನ ಹೆಸರು ಗೋಪ್ಪಪೆದ್ದನು; ಅವನು ಇವರ ಜಾತಿಯವನೇ. ಓಪ್ಪಮರು ತ್ರಿಪುಂಡ್ರನಾಮ ಹಚ್ಚುವರು; ಇವರ ಕುಲಗುರು ಭಂಗಾರ ಲೋಕಾಚಾರ್ಯನೆಂಬ ಶ್ರೀ ವೈಷ್ಣವನು ಮದ್ರಾಸ ಇಲಾಖೆಯಲ್ಲಿ ಇರುತ್ತಾನೆ. ಓಪ್ಪಮರು ಬ್ರಾಹ್ಮಣರಿಗೆ ಮಾನ ಕೊಡುವದಿಲ್ಲ, ಯಾರ ಮನೆಯಲ್ಲಿಯೂ ಉಣ್ಣುವದಿಲ್ಲ; ಇವರ ಹೆಂಗಸರಿಗೆ ಕಚ್ಚೆ ಕುಂಕುಮಗಳಿರುತ್ತವೆ. ಆದರೆ ಇವರಲ್ಲಿ ಮೌಂಜಿಯ ಸಂಸ್ಕಾರವಿಲ್ಲ; ಲಗ್ನದಲ್ಲಿ ಐರಣೀ ಪೂಜೆ ಮಾಡುವರು; ವಿಧವೆಗಳಿಗೆ ಲಗ್ನವಿಲ್ಲ; ಹೆಣಗಳನ್ನು ಸುಡುವರು. ಸತ್ತವನಿಗೆ ತ್ರಿಪುಂಡ್ರನಾಮ ಹಚ್ಚಿ, ಹೆಣದ ಬಾಯೊಳಗೆ ತುಳಸೀಪತ್ರದ ನೀರು ಹಾಕುವರು. ಸೂತಕ ಹತ್ತು ದಿವಸ, ಪ್ರತಿದಿವಸದ ವಿಧಿಯಾಗಲಿಕ್ಕೇ ಬೇಕು. ಆದರೆ ಸಪಿಂಡಿ ಇಲ್ಲ, ವರ್ಷ ಶ್ರಾದ್ಧ ಮಾಡುವರು. ಓಪ್ಪಮರಲ್ಲಿ ಬೇರೆ ವೊಕ್ಕಲಿಗರಂತೆ ಪ್ರಮಾಣಿಕತನ, ದುಡತ, ಮುಂತಾದ ಗುಣಗಳಿರುತ್ತವೆ; ಹೊಲಸುತನವೂ ವೊಕ್ಕಲಿಗರಂತೆ. ಇವರು ಮೊದಲು ಭಿಕ್ಷೆ ಬೇಡಿ ಜೀವಿಸುವರು; ಆದರೆ ಈಗ ನುರಿತಂಥ ವೊಕ್ಕಲಿಗರಾಗಿದ್ದಾರೆ. ಕೆಲವರು ಮುಟ್ಟಿಗೇರ ಗುರುತನವನ್ನು ಮಾಡುವರು; ಕೆಲವರು ಹನುಮಂತ ದೇವರ ಪೂಜಾರಿಗಳಾಗಿರುವರು; ಕೆಲವರು ಕೂಲೀ ಮಾಡುವರು. ಹೆಂಗಸರು ಗಂಡಸರಿಗೆ ನೆರವಾಗಿ, ಹಾಲು ಮೊಸರು, ಬೆಣ್ಣೆಗಳನ್ನು ಮಾರುವರು; ಕೆಲವರು ಸೂಜಿ ಸಾಣೀ ಕಲ್ಲುಗಳನ್ನು ಮಾರುತ್ತ ಊರೊಳಗೆ ಭಿಕ್ಷೆ ಬೇಡುವರು. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

ರಾವಳರು.—ಇವರು ಸಿಂದಗಿ, ಮುದ್ದೇಬಿಹಾಳ ಹೊರ್ತಾಗಿ ವಿಜಾಪುರ ಜಿಲ್ಲೆಯಲ್ಲಿ ಯೆಲ್ಲ ಕಡೆಯಲ್ಲಿ ಇರುತ್ತಾರೆ. ಇವರಲ್ಲಿ ಕೆಲವರು ಮನೆಯಲ್ಲಿ ಮರಾಠೀ ಭಾಷೆಯನ್ನಾಡುವರು, ಕೆಲವರು ಕನ್ನಡ ಆಡುವರು. ಇವರ ಉಡಿಗೆ, ಆಹಾರ, ಆಚಾರ, ಧರ್ಮ, ಇವೆಲ್ಲ ಕುಣಬಿಗಳಂತೆ ಇರುತ್ತವ. ಇವರಲ್ಲಿ ಕೆಲವರು ವೊಕ್ಕಲತನ ಮಾಡುತ್ತಾರೆ, ಕೆಲವರು ಟಪಾಲ ಖಾತೆಯಲ್ಲಿ ನೌಕರೀ ಮಾಡುತ್ತಾರೆ, ಕೆಲವರು ಬಟ್ಟೇ ನೆಯ್ಯುವರು, ಕೆಲವರು ಭಿಕ್ಷೆ ಬೇಡುತ್ತಾರೆ. ಕುಣಬಿಗಳಂತೆ ಇವರು ವಿಧವೆಗಳ ಲಗ್ನ ಮಾಡುವರು, ಹೆಣಗಳನ್ನು ಹುಗಿಯುವರು. ಕೆಲವರು ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ.

**ರಾವಳರು.**

ಹಂಡೆಯವರು.—ಇವರು ಬಾದಾಮಿಯಲ್ಲಿಯೂ ವಿಜಾಪುರದಲ್ಲಿಯೂ ಇರುತ್ತಾರೆ. ಇವರು ವೊದಲು ಕಬ್ಬಲಿಗೇರು, ಆದರೆ ಲಿಂಗವಂತ ಧರ್ಮವನ್ನು ಸ್ವೀಕರಿಸಿ ಮೀನ ಹಿಡಿಯುವ ಹೋರೆಯನ್ನು ಬಿಟ್ಟಿದ್ದಾರೆ. ಇವರ ನಡತೆ, ಆಹಾರ, ಉಡಿಗೆಗಳೆಲ್ಲ ಕಡಿಮೇ ಪ್ರತಿಯ ಲಿಂಗವಂತರಂತೆ. ಇವರು ಈಗ ಬಹಳವಾಗಿ ವೊಕ್ಕಲತನ ಮಾಡುತ್ತಾರೆ; ಕೆಲವರು ತಳವಾರರಾಗಿದ್ದಾರೆ, ಕೆಲವರು ಪೂಜಾರಿಗಳಾಗಿದ್ದಾರೆ. ಮದಿವೆಯಾಗುವ ವರೆಗೆ ಇವರು ಲಿಂಗಧಾರಣ ಮಾಡುವದಿಲ್ಲ; ಜಂಗಮರು ಇವರಲ್ಲಿ ಉಣ್ಣುವದಿಲ್ಲ. ಇವರ ಲಗ್ನಗಳನ್ನು ಜಂಗಮರೇ ಮಾಡಿಸುವರು; ಆದರೆ ಬ್ರಾಹ್ಮಣರ ಆಚಾರಗಳನ್ನೂ ಇವರು ಮಾಡುತ್ತಾರೆ. ಹೆಣಗಳನ್ನು ಹುಗಿಯುವರು; ದಿನಕಾರ್ಯಕ್ಕೆ ಜಂಗಮರೇ ಬರುವರು.

**ಹಂಡೆಯವರು.**

ಕಬ್ಬೇರು.—ಇವರು ಬಾಗೇವಾಡಿ, ವಿಜಾಪುರ ಹೊರ್ತಾಗಿ ವಿಜಾಪುರದ ಯೆಲ್ಲ ತಾಲೂಕುಗಳಲ್ಲಿ ಇರುತ್ತಾರೆ; ಕಬ್ಬಲಿಗೇರಂತೆ ಕನ್ನಡ ಭಾಷೆಯನ್ನಾಡುವರು. ಇವರ ಕುಲದೇವತೆಗಳು ಬರಮಪ್ಪ, ಉಕ್ಕಲೀ ಪರಮಾನಂದ, ದ್ಯಾಮವ್ವ, ದುರ್ಗವ್ವ, ಗಂಗವ್ವ, ಹುಲಿಗೆವ್ವ. ಇವರಲ್ಲಿ ಬಾರಕೇರೆಂತಲೂ ಕಬ್ಬಲಿಗೇರೆಂತಲೂ ಯೆರಡು ವರ್ಗಗಳಿವೆ; ಅವರಲ್ಲಿ ಪರಸ್ಪರ ಶರೀರ ಸಂಬಂಧವಾಗುತ್ತದೆ. ಇವರ ಕುಲದ ಹೋರೆಯು ವೊಕ್ಕಲತನ; ಆದರೆ ಕೆಲವರು ಅಂಬಿಗರಾಗಿ ನಾವೆಗಳನ್ನು ನಡಿಸುತ್ತಾರೆ. ಇವರನ್ನು ಕಬ್ಬಲಿಗೇರೊಳಗೆ ಯೆಣಿಸುತ್ತಾರೆ. ಇವರು ಕುರುಬರಲ್ಲಿ ಸಹ ಉಣ್ಣುವರು, ಚಂಡಿಕೆ ಕಾಯುವದಿಲ್ಲ, ಬ್ರಾಹ್ಮಣರಿಗೂ ಲಿಂಗವಂತರಿಗೂ ಮಾನ ಕೊಡುತ್ತಾರೆ; ಆದರೆ ಬ್ರಾಹ್ಮಣರೇ ಇವರ ಉಪಾಧ್ಯಾಯರು. ಹೆಣ ಹುಗಿಯುವಾಗ ಮಾತ್ರ ಜಂಗಮರನ್ನು ಕರಿಯುವರು. ಇವರು ಭೂತಗಳಲ್ಲಿ ಮನೆಯ ಭೂತಗಳೆಂತಲೂ ಹೊರಗಿನ ಭೂತಗಳೆಂತಲೂ ಯೆರಡು ಭೇದಗಳನ್ನು ಮಾಡುತ್ತಾರೆ. ಇವರ ಮನೆಯ ಭೂತಗಳು ಬಹಳ ಪೀಡಿಸುವದಿಲ್ಲ; ಬೇಡಿದ್ದು ಕೊಟ್ಟು ಅವುಗಳನ್ನು ಸಮಾಧಾನ ಪಡಿಸುವರು. ಹೊರಗಿನ ಭೂತಗಳನ್ನು ಬಡಿದು ಹೊಡಿದು ಮಂತ್ರ ತಂತ್ರಗಳಿಂದ ಹೊರಗೆ ಹಾಕುವರು. ಲಗ್ನದಲ್ಲಿ ವಧೂವರಗಳ ನಡುವೆ ಅಂತಃಪಟ ಹಿಡಿದು, ಅಕ್ಕೀಕಾಳಿಗೆ ಬದಲಾಗಿ ಜೋಳದ ಕಾಳುಗಳನ್ನು ಅವರ ತಲೆಯ

**ಕಬ್ಬೇರು.**

ಮೇಲೆ ಚಲ್ಲುವರು. ಮದ್ಯ ಮಾಂಸಗಳನ್ನು ಕಬ್ಬೇರು ನಿರಾತಂಕವಾಗಿ ತಕ್ಕೊಳ್ಳುವರು, ಹೆಣ್ಣು ಮಕ್ಕಳ ಲಗ್ನವನ್ನು ನೆರಿದ ಬಳಿಕ ಮಾಡುವರು, ವಿಧವೆಗಳ ಲಗ್ನ ಮಾಡುವರು. ಇವರ ಹೆಂಗಸರು ಹಡಿದ ಮುಡಚಟ್ಟೊ ಕಡೆಗಾದ ಮುಡಚಟ್ಟೊ ಹಿಡಿಯುವದಿಲ್ಲ. ಕಟ್ಟಿಮನಿ ಯೆಂಬ ಅಧಿಕಾರಿಯು ಜಾತಿ ವ್ಯಾಜ್ಯಗಳನ್ನು ತೀರಿಸುತ್ತಾನೆ. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಹಾಲ್ವಕ್ಕೀ ವೊಕ್ಕಲಿಗರು.**

ಹಾಲ್ವಕ್ಕೀ ವೊಕ್ಕಲಿಗರು.—ಇವರು ಕಾನಡಾ ಜಿಲ್ಲೆಯಲ್ಲಿ ಘಟ್ಟದ ಕೆಳಗೆ ಮುಖ್ಯವಾಗಿ ವಾಸಿಸುತ್ತಾರೆ. ಹಾಲಿನಂತೆ ಬಿಳುವಾದ ಮೇಲ್ತರದ ಅಕ್ಕಿಯನ್ನು ಬೆಳಿಯುವ ಕಾರಣ ಇವರಿಗೆ ಈ ಹೆಸರು ಬಂದದೆ. ಇವರು ಬಹು ಕಾಲದ ಹಿಂದೆ ಮೈಸೂರು ಶೀಮೆಯಿಂದ ಬಂದಂತೆ ತೋರುತ್ತದೆ. ಇವರ ಮೈಕಟ್ಟು ಕಸುವುಳ್ಳದ್ದು, ಮೈಬಣ್ಣ ಕಪ್ಪು, ತಲೆ ಸಣ್ಣದು, ಹಣೆ ಹಿಂದಕ್ಕೆ ಶಟದದ್ದು, ಗಲ್ಲ ಉಬ್ಬು, ಗದ್ದ ಮುಂಜೊಲುಳ್ಳದ್ದು, ಎದೆ ಹರವು, ಕೂದಲು ಕಪ್ಪು, ಉದ್ದ ಗಂಡಸರು ಲಂಗೋಟೀ ಹಾಕಿ ಕೊಂಡು, ಹೆಗಲ ಮೇಲೆ ಕಂಬಳೀ ಚಲ್ಲಿ ಕೊಂಡು, ಕೈಯಲ್ಲಿ ತಂಬಾಕದ ಚೀಲುಗಳನ್ನು ಹಿಡಕೊಂಡು, ಅಡ್ಡಾಡುವರು. ಹೆಂಗಸರು ಕಚ್ಚೆ ಹಾಕುವದಿಲ್ಲ, ಕುಬ್ಬಸ ತೊಡುವದಿಲ್ಲ; ಕರೆಮಣಿಯ ಸರಗಳ ಜೂಪೆಗಳಿಂದ ಯೆದೆಯನ್ನು ಮುಚ್ಚಿ ಕೊಳ್ಳುವರು. ಈ ವೊಕ್ಕಲಿಗರು ಗ್ರಾಮ್ಯವಾದ ಕನ್ನಡವನ್ನಾಡುವರು. ಹ್ಯಾಗಂದರೆ—"ನಮ ಬಾವ ಮನೆ ಮೇಗೆ ಹೋಗಿಯಾ, ಕಂಡ್ಯಾ," "ಶಾನಭೋಗರ ಮನೇಲಿ ಮದ್ವಿ, ಬಿಟ್ಟಿಗೆ ಹಿಡುಕೆ ಬಂದಾರೆ, ಪಾಯಸ ಸಿಕ್ಕದು ತಮ್ಮಾ." ಇವರ ಮುಖ್ಯಾಹಾರ ಅಕ್ಕಿ, ರಾಗಿ; ಮಾಂಸಾಹಾರಕ್ಕೆ ಅಡ್ಡಿ ಇಲ್ಲ; ಆದರೆ ಶರೆಯ ಸಂಪರ್ಕ ಮಾಡುವದಿಲ್ಲ. ವೆಂಕಟರಮಣನೇ ಇವರ ಮುಖ್ಯ ದೇವತೆಯು. ಮನೆಯಲ್ಲಿ ತುಳಸೀಕಟ್ಟೆಯಲ್ಲಿ ಚಂದನದ ವೆಂಕಟರಮಣನನ್ನು ಕೂಡ್ರಿಸಿಡುವರು. ಇದಲ್ಲದೆ ಇವರು ಮನೆಯಲ್ಲಿ ವೊತ್ತಟ್ಟಿಗೆ ಜುಟ್ಟಿಲ್ಲದ ತೆಂಗಿನ ಕಾಯಿಯನ್ನು ದೇವರಂತೆ ಕೂಡ್ರಿಸಿಡುವರು. ಅದಕ್ಕೆ ಬಲೀಂದ್ರವೆಂಬ ಹೆಸರು; ಅದು ಮನೆತನದ ಪೂರ್ವಜರ ಮೂರ್ತಿ ಯೆಂದು ಯೆಣಿಸಲ್ಪಡುತ್ತದೆ. ಈ ಬಲೀಂದ್ರನನ್ನು ಇವರು ಬಹು ಭಕ್ತಿಯಿಂದ ಆರಾಧಿಸುವರು. ಇವರಲ್ಲಿ ಜನ್ಮ, ಜಾವಳ, ಲಗ್ನ, ಮರಣ, ಇಷ್ಟರ ಸಂಸ್ಕಾರಗಳು ಮಾತ್ರ ಉಂಟು; ಆದರೆ ಬ್ರಾಹ್ಮಣರನ್ನು ಯಾವ ಸಂಸ್ಕಾರಕ್ಕೂ ಇವರು ಕರೆಯುವದಿಲ್ಲ. ವಿಧವೆಗಳ ಉಡಕೀ ಮಾಡಿ ಅವರನ್ನು ಹಿತ್ತಲ ಬಾಗಿಲಿನಿಂದ ಕಳಿಸುವರು. ಲಗ್ನವಾಗಿ ಸತ್ತವರನ್ನು ಸುಡುವರು, ಆಗದೆ ಸತ್ತವರನ್ನು ಹುಗಿಯುವರು.

ಹಾಲ್ವಕ್ಕೀ ವೊಕ್ಕಲಿಗರಲ್ಲಿ ಯೆಂಟು ಕುಲಗಳುಂಟು; ಅವುಗಳಿಗೆ ಬಳ್ಳಿಗಳೆನ್ನುವರು. ಮಂಜಾಳ ಬಳ್ಳಿಯೆಂಬ ಕುಲವು ಯೆಲ್ಲಕ್ಕೂ ಶ್ರೇಷ್ಠವು. ಕಾರವಾಡದ ಹತ್ತರ ಮಂಜಾಳ ಗುಡ್ಡವಿರುತ್ತದೆ; ಅದೇ ಈ ಬಳ್ಳಿಯವರ ಕುಲದೇವತೆಯು. ಮಾನಾಳ ಬಳ್ಳಿಯೆಂಬ ಮೂರನೇ ಕುಲದೊಳಗೆ ಯೇಳು ವೊಳ ಜಾತಿಗಳುಂಟು.

ಹಾಲ್ವಕ್ಕೀ ವೊಕ್ಕಲಿಗರು ಇರುವ ಹಳ್ಳಿಗಳಲ್ಲಿ ಬಹು ತರ ಯಾವತ್ತೂ ಸಮಾಜವು

ಅವರದೇ ಇರುತ್ತದೆ. ಇವರೊಳಗೆ ನೀತಿ, ಕುಲಾಚಾರ, ಸರಳತನ, ಇವುಗಳ ಕಟ್ಟಳೆ ಬಹು ಬಿರಿಸು ಇರುತ್ತವೆ. ಇವರ ಹಳ್ಳಿಗಳು ಕಾಳೀ ನದಿಯಿಂದ ಕಾರವಾಡದ ವರೆಗೆ ಇರುತ್ತವೆ. ಅವುಗಳಲ್ಲಿ ಐದು ವಿಭಾಗಗಳುಂಟು. ಒಂದೊಂದು ವಿಭಾಗಕ್ಕೆ ಶೀಮೆ ಗೌಡ ನೆಂಬ ಮುಖ್ಯಸ್ಥನಿರುತ್ತಾನೆ. ಪ್ರತಿ ವೊಂದು ಹಳ್ಳಿಯಲ್ಲಿ ಊರ ಗೌಡನೆಂಬ ಅಧಿಕಾರಿಯ ಅಂಕಿತದಲ್ಲಿ ಊರವರು ನಡಿಯುವರು. ಊರ ಗೌಡರು ಶೀಮೇ ಗೌಡನ ಕೈ ಕೆಳಗೆ ನಡಿಯುವರು. ಯಾವತ್ತು ಶೀಮೇ ಗೌಡರ ಮೇಲಧಿಕಾರಿಯು ಅರಸು ಗೌಡನೆಂಬವನು ಕುಮಟೆಯ ಹತ್ತರ ಹೆಗಡೆ ಯೆಂಬಲ್ಲಿ ಇರುತ್ತಾನೆ. ಅರಸು ಗೌಡನಿಗೆ ಸಹಾಯಕನೊಬ್ಬ ಪ್ರಧಾನಿ ಗೌಡನು ಹೆಗಡೆಯ ಹತ್ತರ ವಾಲಗಳ್ಳಿಯೆಂಬಲ್ಲಿ ಇರುತ್ತಾನೆ. ಇವರಲ್ಲದೆ ಧರ್ಮ ಸಂಬಂಧದ ಮುಖ್ಯಾಧಿಕಾರಿಯೊಬ್ಬ ಗುರು ಗೌಡನು ಹೆಗಡೆಯ ಹತ್ತರ ತಳಗೋಡವೆಂ ಬಲ್ಲಿ ಇರುತ್ತಾನೆ. ಪ್ರತಿ ಹಳ್ಳಿಯಲ್ಲಿ ಊರ ಗೌಡನ ಕೈ ಕೆಳಗೆ ಕೋಳಕರನೆಂಬ ತಳವಾ ರನಂಥ ಊಳಿಗದವನಿರುತ್ತಾನೆ. ಇವರೆಲ್ಲ ವಂಶಪರಂಪರೆಯ ಅಧಿಕಾರಸ್ಥರು. ಕುಲಾ ಚಾರ, ಸಾಮಾಜಿಕ ಕಟ್ಟಳೆಗಳು, ಮುಂತಾದ ಸಂಗತಿಗಳ ವಿಚಾರ ನಡಿಯ ತಕ್ಕದ್ದಿದ್ದಾ ಗ ಊಥ ಗೌಡನು ಊರವರ ಸಭೆ ಕೂಡಿಸಿ ವಿಚಾರ ಮಾಡುವನು. ಅವನಿಗೆ ೧೬ ರೂಪಾಯಿಯ ವರೆಗೆ ದಂಡ ಮಾಡುವ ಅಧಿಕಾರವಿರುತ್ತದೆ. ಅಷ್ಟಕ್ಕಿಂತ ಹೆಚ್ಚಿನ ಶೀಕ್ಷೆ ಆಗ ತಕ್ಕಂಥ ಪ್ರಕರಣ ಬಂದರೆ ಊರ ಗೌಡನು ಶೀಮೇ ಗೌಡನ ಕಡೆಗೆ ಅದನ್ನು ಕಳಿ ಸುತ್ತಾನೆ. ಇದಲ್ಲದೆ ಊರ ಗೌಡನ ನಿರ್ಣಯದ ಮೇಲೆ ಶೀಮೆ ಗೌಡನ ಕಡೆಗೆ ಅಪೀಲು ನಡಿಯುತ್ತದೆ. ಶೀಮೇ ಗೌಡನಿಗೆ ಬೇಕಾದಷ್ಟು ಹಣ ದಂಡ ಮಾಡುವ ಅಧಿಕಾರವೂ ಕುಲದಿಂದ ಹೊರಗೆ ಇಡುವ ಅಧಿಕಾರವೂ ವುಂಟು. ಸಾಮಾಜಿಕ ವ್ಯಾಜ್ಯಗಳು, ಕುಲ ದಿಂದ ಹೊರಗೆ ಇಟ್ಟವನನ್ನು ಕುಲದೊಳಗೆ ತಕ್ಕೊಳ್ಳುವದು, ಮುಂತಾದ ಗೌರವದ ಕಾರ್ಯಗಳನ್ನು ನೆರವೇರಿಸ ಬೇಕಾದಾಗ ನಾಲ್ಕು ಮೂರು ವರ್ಷಕ್ಕೊಮ್ಮೆ ಅರಸು ಗೌಡನ ಸಭೆಯು ಅವನು ಹೇಳಿದ ಸ್ಥಳದಲ್ಲಿ ಕೂಡುತ್ತದೆ. ಈ ಸಭೆಗಾಗಿ ದೊಡ್ಡ ಮಂಟಪ ವನ್ನು ಹಾಕಿ, ಅರಸು ಗೌಡನನ್ನೂ ಪ್ರಧಾನಿ ಗೌಡನನ್ನೂ ಯೆತ್ತರವಾದ ಗದ್ದಿಗೆಯ ಮೇಲೆ ಕೂಡ್ರಿಸುವರು. ಧರ್ಮ ಸಂಬಂಧದ ವಿಚಾರಣೆ ನಡಿಯ ತಕ್ಕದ್ದಿದ್ದರೆ, ಗುರು ಗೌಡನೂ ಬರುವನು. ಅವನಿಗೆ ಅರಸು ಗೌಡನು ಸಹಿತ ಜಾತಿಯ ಜನರೆಲ್ಲರು ಬಹಳ ಮಾನ ಕೊಡು ವರು. ಈ ಸಭೆಗೆ ಶೀಮೇ ಗೌಡರೂ, ಊರ ಗೌಡರೂ, ಬೇರೆ ಬೇರೆ ಬಳ್ಳಿಗಳ ಹಿರಿ ಮನು ಷ್ಯರೂ ಬರುವರು. ಮೊದಲು ದೈವದವರು, ಆ ಮೇಲೆ ಊರ ಗೌಡರು, ಬಳಿಕ ಶೀಮೆ ಗೌ ಡರು, ಕಟ್ಟಕಡೆಗೆ ಪ್ರಧಾನಿ ಗೌಡ, ಅರಸುಗೌಡ, ಗುರು ಗೌಡ, ಈ ಮೂವರು ಸಭೆಯನ್ನು ಪ್ರವೇಶಿಸಿ, ತಮ್ಮ ತಮ್ಮ ಯೋಗ್ಯತೆಗೆ ತಕ್ಕಂಥ ಸ್ಥಳಗಳಲ್ಲಿ ಕೂಡ್ರುವರು. ಮೇಲಧಿಕಾರಿ ಯು ಬಂದ ಕೂಡಲೆ ಅವನ ಕೈ ಕೆಳಗಿನವರು ಯೆದ್ದು ನಿಂತು ಕೈ ಜೋಡಿಸಲಿಕ್ಕೆ ಬೇಕು. ಯಾವತ್ತು ಜನರು ನೆರಿದ ಬಳಿಕ ಅರಸು ಗೌಡನು ಸಭೆಯ ಉದ್ದೇಶವನ್ನು ತಿಳಿಸಿ, ಗುರು ಗೌಡನ ಸಂಮತಿಯಿಂದ ವಿಚಾರಣೆಯನ್ನು ನಡಿಸುವನು. ಸಭೆಯಲ್ಲಿ ಬೇಕಾದವರು ತಮ್ಮ ಅಭಿಪ್ರಾಯವನ್ನು ತಿಳಿಸ ಬಹುದು. ಆದರೆ ಹೆಮ್ಮೆಯ ನುಡಿ, ಕೀಳು ನುಡಿ, ವರಿ

ಷ್ಟರಿಗೆ ಅಪಮಾನ, ಇಂಥಾ ತಪ್ಪುಗಳನ್ನು ಯಾರಾದರೂ ಮಾಡಿದರೆ, ಅವರಿಗೆ ತತ್ಕಾಲಕ್ಕೆ ಶಿಕ್ಷೆಯಾಗುವದು. ಕಡೆಯಲ್ಲಿ ಬಹು ಮತವಿದ್ದಂತೆ ನಿರ್ಣಯವಾಗುತ್ತದೆ. ಈ ಸಭೇಯು ವೊಮ್ಮೆ ಕೂಡಿತೆಂದರೆ, ೮, ೧೦, ೨೦, ೩೦ ದಿವಸಗಳ ವರೆಗೂ ನಡಿಯುತ್ತದೆ. ಸಭೆಯಲ್ಲಿ ದಂಡದಿಂದ ಕೂಡಿದ ಹಣವು ಸಭೆಯ ವೆಚ್ಚಕ್ಕೆ ಹೋಗುವದು. ಇದಲ್ಲದೆ ವಂತಿಗೆಯಿಂದ ಹಣ ಕೂಡಿಸಿ, ನೆರಿದ ಜನರ ಊಟ ಉಡಿಗೆಗಳ ವ್ಯವಸ್ಥೆ ಮಾಡುವರು. ಈ ಸಭೆಗೆ ಜಾತಿ ಬುದಿವಂತಿಕೆ ಯೆಂಬ ಹೆಸರುಂಟು. ಊರ ಗೌಡರ ಬಳಿಯಲ್ಲಿಯೂ, ಶೀಮೇ ಗೌಡರ ಬಳಿಯಲ್ಲಿಯೂ ಕೂಡಿದ ದಂಡದ ಹಣವನ್ನು ಸಾಮಾಜಿಕ ಕಾರ್ಯಗಳಿಗಾಗಿ ಇಲ್ಲವೆ ಧರ್ಮ ಕಾರ್ಯಗಳಿಗಾಗಿ ವೆಚ್ಚ ಮಾಡುವರು.

ಹಾಲ್ವಕ್ಕೀ ವೊಕ್ಕಲಿಗರಲ್ಲಿ ಹಡಿಯುವ ಕಾಲದ ನಡಾವಳಿಗಳು ಹ್ಯಾಗಂದರೆ— ಹಡಿಯುವ ಹೆಂಗಸಿಗಾಗಿ ಪಡಸಾಲೆಯಲ್ಲಿ ತಾಳೇ ಯೆಲೆಗಳ ಚಪ್ಪರವನ್ನು ಕಟ್ಟುವರು. ಆಕೆ ಅಲ್ಲಿ ಹಡಿದ ಬಳಿಕ ಮೂರನೇ ದಿವಸ ಮನೆ ಯೆಲ್ಲ ಸಾರಿಸಿ, ಬೂದಿ ಹಪ್ಪಳಕಾರ ಕೂಡಿದ ನೀರನ್ನು ಅಗಸನ ಕೈಯಿಂದ ಮನೆ ತುಂಬ ಶಿಡಿಸುವರು. ಮನೆಯ ಜನರು ಸಹ ಶುದ್ಧವಾಗಲಿಕ್ಕೆ ಅವನ ಕೈಯಿಂದ ಆ ನೀರು ಶಿಡಿಸಿ ಕೊಳ್ಳಲಿಕ್ಕೆ ಬೇಕು. ಆದರೂ ಮುಂದೆ ಯೆಂಟು ದಿವಸದ ವರೆಗೆ ಬಾಣತಿಯು ಅಡಿಗೇ ಮನೆಯಲ್ಲಿ ಹೋಗ ಕೂಡದು. ಹನ್ನೆರಡನೇ ದಿವಸ ಹೊತ್ತು ಮುಳುಗಿದ ಬಳಿಕ ಬಾಣತಿಯು ಸಮೀಪದಲ್ಲಿದ್ದ ಬಾವಿಗೆ ಹೋಗಿ ಮೂರು ಕೊಡ ನೀರು ಜಗ್ಗಿ ವೊಂದು ತೆಂಗಿನ ಮರಕ್ಕೆ ಹಾಕಿ, ನಾಲ್ಕನೇ ಕೊಡವನ್ನು ಜಗ್ಗಿ ತಂದು ಅಡಿಗೇ ನೀರಿನ ಹರವಿಯಲ್ಲಿ ಸುರುವುವಳು. ನೀರು ಜಗ್ಗುವ ಪೂರ್ವದಲ್ಲಿ ಬಾವಿಯೊಳಗೆ ಅಕ್ಕೀಕಾಳು, ಯೆರಡು ಅಡಿಕೆ, ಉರಿಯುವ ತೆಂಗಿನ ನಾರು ಇವನ್ನು ವೊಂದರ ಹಿಂದೊಂದು ಚಲ್ಲಿ, ಬಾವಿಗೆ ಆರತೀ ಬೆಳಗುವಳು. ಸಂಜೆಯಾದ ಬಳಿಕ ಮನೆಯ ಹಿರಿ ಮನುಷ್ಯಳು ಕೂಸನ್ನು ತೊಟ್ಟಿಲೊಳಗೆ ಹಾಕಿ ಹೆಸರಿಡುವಳು.

ಹನ್ನೆರಡು ವರ್ಷ ತುಂಬಿದ ಬಳಿಕ ಹುಡುಗರ ಲಗ್ನವಾಗುವದು. ಹೆಣ್ಣು ಮಕ್ಕಳು ನೆರಿದ ಬಳಿಕ ಅವರ ಲಗ್ನವಾಗಲಿಕ್ಕೆ ಅಡ್ಡಿ ಇಲ್ಲ. ಲಗ್ನದ ದಿವಸ ಬೆಳಿಗ್ಗೆ ಮದಿಮಕ್ಕಳಿಗೆ ಅರಿಶಿಣ ಹಚ್ಚುವರು. ಆ ದಿವಸ ಮದಿಮಕ್ಕಳೂ ಅವರ ತಾಯಿ ತಂದೆಗಳೂ ಸಂಜೇತನಕ ಉಪವಾಸ ಮಾಡಿ ಕುಲದವರಿಗೆ ಊಟ ಹಾಕುವರು. ಮೂರು ತಾಸು ರಾತ್ರಿಯಾದ ಬಳಿಕ ಮದಿಮಗನು ಲಗ್ನಕ್ಕೆ ಹೊರಡುವನು. ಅವನ ಸಂಗಡ ಅವನ ಮನೆಯವರೂ ಬಳಗದವರೂ ಸಮಾರಂಭದಿಂದ ದೀವಟಿಗೆಯ ಬೆಳಕಿನಲ್ಲಿ ನಡಿಯುವರು. ಕಳಸಗಿತ್ತಿಯು ಕಳಸ ತಕ್ಕೊಂಡು ಹೊರಡುವಳು. ಮದಿಮಗನ ಬಳಗದವನೊಬ್ಬನು ಬೆತ್ತದ್ದೊಂದು ಪೆಟ್ಟಿಗೆಯಲ್ಲಿ ಮೂರು ಶೀರೆಗಳು, ಕುಂಕುಮ ಕಾಡಿಗೆಗಳ ಕರಡಿಗೆಗಳು, ಹಣಿಗೆ, ಹೂಗಳು, ಮಂಗಳಸೂತ್ರ, ವಸ್ತ್ರಗಳು, ಇಷ್ಟೆಲ್ಲ ಹಾಕಿ ಕೊಂಡು ಅದನ್ನು ತಕ್ಕೊಂಡು ನಡಿಯುವನು. ಮದಿಮಗನು ಸಮೀಪಕ್ಕೆ ಬಂದನೆಂದರೆ, ಹೆಣ್ಣಿನ ತಂದೆಯು ಯೆದುರಿಗೆ ಹೋಗಿ ಅವನ ಕಾಲು ತೊಳಿದು, ತುಳಸಿಗೆ ನಮಸ್ಕಾರ ಮಾಡಿಸಿ ಮನೆಯೊಳಗೆ ಕರೆಕೊಂಡು ಹೋಗುವನು. ಆಗ ಮದಿಮಗನು ಮದಿಮಗಳಿಗೆ ವೊಂದು ಶೀರೆಯ

ಕೊಟ್ಟು ಹೊರಗೆ ಬಂದು ಹಂದರದೊಳಗೆ ನಿಲ್ಲಿಸಿದ ಅತ್ತೀ ಟೊಂಗೆಗಳ ಮಂಟಪದ ಬಳಿಯಲ್ಲಿ ವೊಂದು ಮಣೆಯ ಮೇಲೆ ಕೂಡ್ರುವನು. ಮದಿಮಗಳು ಆ ಹೊಸ ಶೀರೆಯನ್ನುಟ್ಟು ಕೊಂಡು ಬಂದು ಮದಿಮಗನ ಬಳಿಯಲ್ಲಿ ಬೇರೊಂದು ಮಣೆಯ ಮೇಲೆ ಕೂಡ್ರುವಳು. ತರುವಾಯ ಮುತ್ತೈದಿಯರು ಇಬ್ಬರ ಕೈಗೂ ಅರಿಶಿಣ ಹಚ್ಚಿ ತೊಳಿದನಂತರ, ಇಬ್ಬರೂ ಯೆದ್ದು ಅತ್ತೀ ಟೊಂಗೆಗಳ ಮಂಟಪದೊಳಗೆ ಹಾದು ಅದಕ್ಕೆ ಮೂರು ಪ್ರದಕ್ಷಿಣೆಗಳನ್ನು ಹಾಕಿ ಬಳಿಯಲ್ಲಿ ವೊಂದು ಮಂಚದ ಹತ್ತರ ಯೆದುರು ಬದುರಾಗಿ ನಿಲ್ಲುವರು. ಬಳಿಕ ಇಬ್ಬರ ನಡುವೆ ಅಂತಃಪಟ ಹಿಡಿದ ಕೂಡಲೆ ಮದಿಮಗಳ ತಾಯಿ ತಂದೆಗಳು ಆಕೆಯ ಬಲಗೈಯನ್ನು ಮದಿಮಗನ ಬಲಗೈಯಿಂದ ಹಿಡಿಸಿ, ಅವರಿಬ್ಬರ ಕೈಮೇಲೆ ಆಕಳ ಹಾಲು ಯೆರಚುವರು. ತರುವಾಯ ಅಂತಃಪಟ ತೆಗಿದು ಇಬ್ಬರನ್ನೂ ಮಂಚದ ಮೇಲೆ ಕೂಡ್ರಿಸಿದ ಬಳಿಕ ನೆರಿದ ಜನರು ನಿಮಗೆ ಕಲ್ಯಾಣವಾಗಲೆಂದು ನುಡಿದು, ಇಬ್ಬರ ಮೇಲೆ ಅಕ್ಕೀಕಾಳುಗಳನ್ನು ತೂರುವರು. ಅದೇ ಕಾಲಕ್ಕೆ ಮದಿಮಗನು ಹೆಂಡತಿಯ ಕೊರಳಲ್ಲಿ ಮಂಗಳಸೂತ್ರ ಕಟ್ಟಿ ಮತ್ತೊಂದು ಶೀರೆ ಕೊಡುವನು. ಹಣಿಗೆ ಕರಡಿಗೆ, ಆಭರಣಗಳು, ಹೂಗಳು, ಇವನ್ನೆಲ್ಲ ಕೊಡುವ ಸಮಯವಾದರೂ ಇದೇ. ಬಳಿಕ ಮುತ್ತೈದಿಯರು ಆರತೀ ಮಾಡಿದ ಬಳಿಕ ಮದಿಮಗಳ ಸೋದರ ಮಾವನು ಆ ಗಂಡ ಹೆಂಡರ ಶರಗುಗಳಿಗೆ ಗಂಟು ಹಾಕಿ, ಮನೆಯೊಳಗೆ ದೇವರಿಗೆ ನಮಸ್ಕಾರ ಮಾಡಲಿಕ್ಕೆ ಅವರನ್ನು ಕರೆಕೊಂಡು ಹೋಗುವನು. ಕಡೆಯಲ್ಲಿ ಮದಿಮಕ್ಕಳು ಬೇರೆ ಬೇರೆ ತಳಿಗೆಗಳಲ್ಲಿ ಭೋಜನ ಮಾಡುವರು.

ಹಾಲ್ವಕ್ಕೀ ವೊಕ್ಕಲಿಗರಲ್ಲಿ ಹರಿ ದಿನ, ದೀವಳಿಗೆ, ಹೋಳೀ ಹುಣ್ಣಿವೆ, ಇವು ಮೂರು ದೊಡ್ಡ ಹಬ್ಬಗಳು. ಉಗಾದಿಯಾದ ಬಳಿಕ ಯೆಂಟು ದಿವಸದ ವರೆಗೆ ಹರಿ ದಿನದ ಸಮಾರಂಭ ನಡಿಯುತ್ತದೆ. ಇದರ ಆರಂಭದಲ್ಲಿ ಅಡಿಗೇ ಮಾಡುವ ಹಳೇ ಗಡಿಗೆಗಳನ್ನು ಹೊರಗೆ ಚಲ್ಲಿ ಹೊಸವು ತಂದು, ಮನೆ ಯೆಲ್ಲ ಸಾರಿಸಿ ಶುದ್ಧ ಮಾಡುವರು. ಹರಿ ದಿನದ ದಿವಸ ತುಳಸೀಕಟ್ಟೆಗೆ ಸುಣ್ಣ ಕೆಮ್ಮಣ್ಣುಗಳನ್ನು ಹಚ್ಚಿ ತಳಿರು ಕಟ್ಟಿ, ಬಹಳ ಸಾರಿ ತಿರುಪತಿಗೆ ಹೋಗಿ ಬಂದಂಥವನೊಬ್ಬ ದಾಸನ ಕೈಯಿಂದ ತುಳಸೀ ಗಿಡದ ಕೆಳಗೆ ವೆಂಕಟರಮಣನ ಚಂದನದ ಮೂರ್ತಿಯನ್ನಿಟ್ಟು ಪೂಜೆ ಮಾಡಿಸುವರು. ದೀವಳಿಗೆಯ ದಿವಸ ಹೊಸ ಹರಿವೆಯಲ್ಲಿ ನೀರು ತುಂಬಿ, ಅದರ ಮೇಲೊಂದು ಮಗಿ ಇಟ್ಟು, ಅದಕ್ಕೆ ಹೂಗಳನ್ನೇರಿಸಿ ಪೂಜೆ ಮಾಡಿ, ಸುತ್ತು ಮುತ್ತು ದೀಪಗಳನ್ನು ಹಚ್ಚಿದ ಬಳಿಕ, ಆ ಹರಿವೆಯನ್ನು ವೊಲೆಯ ಮೇಲಿಟ್ಟು ನೀರು ಕಾಸಿ, ಯೆರಕೊಳ್ಳುವರು. ಕಡೆಯ ದಿವಸ ಬಲೀಂದ್ರನೆಂಬದೊಂದು ಕೆಸರಿನ ಗೊಂಬೆಯ ಮಾಡಿ ಅದನ್ನು ಹಕ್ಕಿಯೊಳಗಿಟ್ಟು, ಅದರ ಕೊರಳಿಗೆ ವೊಂದು ತೆಂಗಿನ ಕಾಯನ್ನು ವೊಂದು ಶೇರಿನಷ್ಟು ಅಕ್ಕಿ ಸಹಿತವಾಗಿ ಕಟ್ಟುವರು. ಬಳಿಕ ಯೆತ್ತು ಆಕಳುಗಳಿಗೆ ಬಣ್ಣ ಹಚ್ಚಿ, ಅವುಗಳ ಕೊರಳುಗಳಲ್ಲಿ ಹೂವಿನ ಮಾಲೆಗಳನ್ನೂ ಕೊಬ್ಬರೀ ಹೋಳುಗಳ ಸರಗಳನ್ನೂ ಕಟ್ಟುವರು. ಕಡೆಯಲ್ಲಿ ಓಟದೊಳಗೆ ಮೇಲಾದಂಥ ಆಕಳು ಯೆತ್ತುಗಳನ್ನು ಕೂಡಿಸಿ, ದೂರಿಂದ ಓಡ ಬಿಟ್ಟು, ಅವು

ಜನರು ಅವುಗಳ ಬೆನ್ನು ಹತ್ತುವರು. ಹೀಗೆ ಓಡುವ ದನಗಳ ಕೊರಳೊಳಗಿನ ಮಾಲೆಯನ್ನು ಹರಕೊಂಡಂಥ ಬಂಟನು ಊರಲ್ಲಿ ಸುಂದರಿ ಯೆಂದು ಹೆಸರಾದ ಕನ್ನಿಕೆಗೆ ತಕ್ಕ ಗಂಡನೆಂದು ಯೆಣಿಸಲ್ಪಡುವನು. ಹೋಳೀ ಹುಣ್ಣಿವೆಯ ಆಟಗಳೂ ವಿಧಾನಗಳೂ ಬಹು ತರವಾಗಿ ಯೆಲ್ಲ ಕಡೆಯಲ್ಲಿ ನಡಿಯುವ ಪ್ರಕಾರವೇ ಇರುತ್ತವೆ.

ಕಾನಡಾ ಜಿಲ್ಲೆಯಲ್ಲಿ ಯೆಷ್ಟೋ ಕುಲಗಳಲ್ಲಿ ಮೇಲಿನ ತರದ ಆಚಾರಗಳು ನಡಿಯುತ್ತಿರುವ ಕಾರಣ, ಈ ಹಾಲ್ವಕ್ಕೀ ವೊಕ್ಕಲಿಗರೆಂಬ ಉತ್ತಮ ಕುಲದವರ ನಡಾವಳಿಗಳನ್ನು ವಿಸ್ತಾರವಾಗಿ ವಿವರಿಸಿದ್ದೇವೆ.

**ಗಾವ ವೊಕ್ಕಲಿಗರು.**

ಗಾವ ವೊಕ್ಕಲದವರು.—ಇವರ ಮೂಲಸ್ಥಾನವು ಕಾನಡಾ ಜಿಲ್ಲೆಯೇ ಯೆಂದು ತೋರುತ್ತದೆ. ಇವರು ಹೊನ್ನಾವರ ಕುಮಟಾ ತಾಲೂಕುಗಳಲ್ಲಿ ಇರುತ್ತಾರೆ. ಇವರ ಧರ್ಮ ನಡಾವಳಿ, ಉಡಿಗೆ, ಹೋರೆ, ಮುಂತಾದವುಗಳೆಲ್ಲ ಹಾಲ್ವಕ್ಕೀ ವೊಕ್ಕಲಿಗರಂತೆ. ಹೆಂಗಸರ ಕೊರಳಲ್ಲಿ ಕರೆಮಣಿಗಳು ಮಾತ್ರ ಹಾಲ್ವಕ್ಕೀ ವೊಕ್ಕಲಿಗರಷ್ಟಿರುವದಿಲ್ಲ.

**ಕರೆ ವೊಕ್ಕಲಿಗರು.**

ಕರೆ ವೊಕ್ಕಲದವರು.—ಇವರು ಕಾನಡಾ ಜಿಲ್ಲೆಯ ಅಡವಿಯ ನೆರೆಪ್ರದೇಶಗಳಲ್ಲಿ, ವಿಶೇಷವಾಗಿ ಅಂಕೋಲಾ ತಾಲೂಕಿಗೆ ಶೇರಿದ ಅಡವಿಯಲ್ಲಿ, ಇರುತ್ತಾರೆ. ಇವರಾದರೂ ಹಾಲ್ವಕ್ಕೀ ವೊಕ್ಕಲಿಗರನ್ನೇ ಹೋಲುತ್ತಾರೆ; ಕೆಲವು ನಡಾವಳಿಗಳು ಅತ್ತೇ ವೊಕ್ಕಲಿಗರಂತೆ ಇರುತ್ತವೆ. ಇವರು ವೆಂಕಟರಮಣನಲ್ಲದೆ, ಜಟ್ಟಿಗ, ಹುಲಿದೇವ, ಕರಿದೇವ, ಮರೆಮ್ಮ, ಯೆಂಬ ಕಾಡು ದೇವತೆಗಳನ್ನು ಪೂಜಿಸುವರು.

**ಕೊಂಕಣೀ ಮಹಾರಾಷ್ಟ್ರರು.**

ಕೊಂಕಣೀ ಮಹಾರಾಷ್ಟ್ರರು.—ಇವರು ಗೋವೆಯಿಂದ ಬಂದು ಕಾರವಾಡ, ಅಂಕೋಲಾ ತಾಲೂಕುಗಳಲ್ಲಿ ವಾಸಿಸುತ್ತಾರೆ; ತಾವು ಕ್ಷತ್ರಿಯರೆಂದು ಹೇಳುತ್ತಾರೆ. ಆದರೆ ಇವರ ಅಡ್ಡ ಹೆಸರುಗಳು ಸಾವಂತ, ದೇಸಾಯಿ, ಸಾಯಿಳ, ಇತ್ಯಾದಿಗಳುಂಟು. ಇವರ ನಡಾವಳಿಗಳು ಬಹುತರ ಶೇರೋಗಾರರೆಂಬ ಕುಲದವರಂತೆ ಇರುತ್ತವೆ. ಅವರಂತೆ ಇವರಾದರೂ "ನಾಯಕ" ಯೆಂಬ ಉಪಪದವನ್ನು ತಮ್ಮ ಹೆಸರಿನ ಮುಂದೆ ಜೋಡಿಸುವರು. ಆದರೆ ಶೇರೋಗಾರರಿಗೂ ಇವರಿಗೂ ಊಟದ ಬಳಿಕೆಯಾಗುವದಿಲ್ಲ. ಈ ಮಹಾರಾಷ್ಟ್ರರು, ವಿಶೇಷವಾಗಿ ಇವರ ಹೆಂಗಸರು, ಸುರೂಪಿಗಳಿರುತ್ತಾರೆ. ಇವರ ಭಾಷೆ ಕೊಂಕಣೀ. ಕುಟುಂಬಗಳು ಬಹು ದೊಡ್ಡವು, ಮದ್ಯ ಮಾಂಸಗಳಿಗೆ ಅಡ್ಡಿ ಇಲ್ಲ, ಹೆಂಗಸರಿಗೆ ಕುಪ್ಪಸವಿಲ್ಲ. ನಿರಂಕಾರ, ಮಾಮಾಯಿ, ರವಳನಾಥ, ಜಟ್ಟಿಗ, ಖೆತ್ರಿ, ಎಂಬ ದೇವತೆಗಳಿಗೆ ಇವರು ನಡಕೊಳ್ಳುವರು. ಇವರ ಮುಖ್ಯ ಹೋರೆ ವೊಕ್ಕಲತನವು; ಆದರೆ ಕೆಲವರು ನೌಕರಿಯನ್ನೂ ಮಾಡುವರು. ಗಂಡಸರು ಸೋಮಾರಿಗಳು, ಹೆಂಗಸರು ಜಗಳಗಂಟಿಗರು. ಹೆಣ್ಣು ಮಕ್ಕಳ ಲಗ್ನವು ನೆರಿಯುವ ಪೂರ್ವದಲ್ಲಿ ಆಗುವದು; ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ; ಹೆಣಗಳನ್ನು ಸುಡುವರು; ಶ್ರಾದ್ಧ ಪಕ್ಷಗಳನ್ನು ಮಾಡುವರು. ಶೃಂಗೇ

ರಿಯ ಶಂಕರಾಚಾರ್ಯರು ಇವರ ಧರ್ಮಗುರು. ಕರಾಡಸ್ಥ ಬ್ರಾಹ್ಮಣರು ಇವರಲ್ಲಿ ಲಗ್ನ ಮುಹೂರ್ತಗಳನ್ನು ಮಾಡಿಸುವರು. ಕಾರವಾಡದ ಹತ್ತರ ಕೃಷ್ಣಪುರವೆಂಬಲ್ಲಿಯ ವಿಠೋಬನಿಗೆ ಈ ಮಹಾರಾಷ್ಟ್ರರು ಭಕ್ತಿಯಿಂದ ನಡಕೊಳ್ಳುವರು.

**ತೊರ್ಕೆನಾಡೋರು.**

ತೊರ್ಕೆನಾಡೋರು.—ಇವರು ಕಾನಡಾ ಜಿಲ್ಲೆಯ ಅಂಕೋಲಾ, ಕುಮಟಾ, ಹೊನ್ನಾವರ ತಾಲೂಕುಗಳಲ್ಲಿ ವಾಸಿಸುತ್ತಾರೆ. ಇವರ ಮುಖಲಕ್ಷಣ, ಭಾಷೆ, ಉಡಿಗೆ, ಆಹಾರ, ನಡಾವಳಿ, ಮನೆತನ, ಇವೆಲ್ಲ ಹಾಲ್ವಕ್ಕೀ ವೊಕ್ಕಲಿಗರಂತೆ ಇರುತ್ತವೆ. ಆದರೆ ಇವರು ರಾಮಾನುಜ ಮತದವರು. ತಿರುಪತಿಯ ಹತ್ತರ ಗೋವಿಂದರಾಜ ಪಟ್ಟಣದಲ್ಲಿ ಇರುವ ತಾತಾಚಾರ್ಯನೆಂಬವನು ಇವರ ಧರ್ಮಗುರು. ಅವನ ದರ್ಶನಕ್ಕೆ ಹೋದಾಗ ಅವನು ಮುದ್ರೆಯನ್ನು ಕಾಸಿ, ಇವರ ಹಣೆಯ ಮೇಲೆ ವೊತ್ತುತ್ತಾನೆ. ವೊಕ್ಕಲತನವೇ ಇವರ ಕುಲದ ಹೋರೆಯು. ಕೆಲವರು ತಮ್ಮ ಮಕ್ಕಳಿಗೆ ಓದ ಬರಿಯ ಕಲಿಸುವರು.

**ಶೆರೋಗಾರರು.**

ಶೆರೋಗಾರರು ಅಥವಾ ಕೊಂಕಣೀ ವಾಲೇಕಾರರು.—ಇವರು ಕುಮಟಾ, ಹೊನ್ನಾವರ ತಾಲೂಕುಗಳಲ್ಲಿ ಇರುತ್ತಾರೆ. ಇವರ ಆಹಾರ, ಉಡಿಗೆ, ರೂಪ, ಧರ್ಮ, ನಡಾವಳಿ, ಇವೆಲ್ಲ ಕೊಂಕಣೀ ಮಹಾರಾಷ್ಟ್ರರನ್ನು ಹೋಲುತ್ತವೆ. ಆದರೆ ಇವರು ಸರಾಯಿ ಕುಡಿಯುವದಿಲ್ಲ; ಜನಿವಾರ ಹಾಕಿ ಕೊಳ್ಳುವರು; ವಿಧವೆಗಳ ಲಗ್ನ ಮಾಡುವದಿಲ್ಲ. ಇವರು ತಮ್ಮಲ್ಲಿಯ ಲಗ್ನ ಮುಂತಾದ ಕಾರ್ಯಗಳಿಗಾಗಿ ಹೈಗ ಬ್ರಾಹ್ಮಣರನ್ನು ಕರಿಯುವರು. ಶೃಂಗೇರಿಯ ಸ್ವಾಮಿಯೇ ಇವರ ಧರ್ಮ ಗುರು. ಒಕ್ಕಲತನವೇ ಇವರ ಜನ್ಮದ ಹೋರೆಯಾದಾಗ್ಯೂ ಕೆಲವರು ಸಣ್ಣ ಪುಟ್ಟ ವ್ಯಾಪಾರವನ್ನು ಮಾಡುವರು. ಇವರಲ್ಲಿ ಕೆಲವರು ಓದ ಬರಿಯ ಬಲ್ಲರು.

**ಪಡತಿಗಳು.**

ಪಡತಿಗಳು.—ಇವರು ಕಾರವಾಡ ಕುಮಟಾ ತಾಲೂಕುಗಳಲ್ಲಿ ಇರುತ್ತಾರೆ. ಇವರಲ್ಲಿ ಕನ್ನಡಿಗರೂ ಕೊಂಕಣಿಗರೂ ಯೆಂಬೆರಡು ಭೇದಗಳುಂಟು. ಅವರವರೊಳಗೆ ಊಟದ ಬಳಿಕೆಯಾಗುವದಿಲ್ಲ. ಕನ್ನಡಿಗರು ಉಪ್ಪು ಮಾಡುವರು; ಕೊಂಕಣಿಗರು ಕೂಲಿಯಿಂದ ಜೀವಿಸುವರು. ಇವರು ನಿಲಿವಿಕೆಯಲ್ಲಿ ಗಿಡ್ಡರು; ಮದ್ಯ ಮಾಂಸ ತಕ್ಕೊಳ್ಳುವರು; ಬ್ರಾಹ್ಮಣರ ದೇವತೆಗಳನ್ನು ಪೂಜಿಸುವರು; ಲಗ್ನ ಮುಹೂರ್ತಗಳಿಗಾಗಿ ಜೋಶೀ ಜಾತಿಯವರನ್ನು ಕರಿಯುವರು; ವಿಧವೆಗಳ ಲಗ್ನ ಮಾಡುವರು. ಗಂಡಸರ ಮೈ ಮೇಲೆ ಕಂಬಳಿ ಇರುವದು; ಬಟ್ಟೆಗಳು ಬಲು ಹೊಲಸು. ಈ ಕೊಂಕಣರು ಬಹುತರ ಸಾಲದೊಳಗೆ ಮುಳುಗಿರುತ್ತಾರೆ. ಕನ್ನಡಿಗರ ಕೆಲವು ನಡಾವಳಿಗಳು ಹಾಲ್ವಕ್ಕೀ ವೊಕ್ಕಲಿಗರಂತೆ ಇರುತ್ತವೆ.

ಉಪ್ಪುನಾಡೋರು.—ಇವರು ಘಟ್ಟದ ಕೆಳಗೆ ವಾಸಿಸುತ್ತಾರೆ. ಉಪ್ಪುನಾಡೋರೆಂದರೆ ಉಪ್ಪಿನ ನಾಡಿನವರೆಂಬ ಅಭಿಪ್ರಾಯವಿದ್ದಂತೆ ತೋರುತ್ತದೆ. ಇವರ ಭಾಷೆ,

ರೂಪ, ಮನೆವಾರ್ತೆ, ಉಡಿಗೆ, ನಡಾವಳಿ, ಇವೆಲ್ಲ ತೋರ್ಕೆನಾಡೋರುಗಳಂತೆ ಇರುತ್ತವೆ. ಆದರೆ ಅವರಿಗೂ ಇವರಿಗೂ ಊಟದ ಬಳಿಕೆಯಾಗುವದಿಲ್ಲ. ಇವರಾದರೂ ರಾಮಾನುಜ ಮತದವರಾಗಿ, ತಾತಾಚಾರ್ಯನಿಗೆ ಅಂಕಿತರಾಗಿ ನಡಿಯುವರು.

**ಉಪ್ಪುನಾಡೋರು.**

ಸೂದಿರರು, ಅಥವಾ ಶೂದ್ರರು.—ಇವರು ಗೋವೆಯ ಶೀಮೆಯಿಂದ ಬಂದು ಹಲ್ಯಾಳ, ಯಲ್ಲಾಪುರ ತಾಲೂಕುಗಳಲ್ಲಿ ವಾಸಿಸುತ್ತಾರೆ. ಮನೆಯಲ್ಲಿ ಕೊಂಕಣೀ ಭಾಷೆಯನ್ನಾಡುವರು; ಮದ್ಯ ಮಾಂಸಗಳನ್ನು ತಕ್ಕೊಳ್ಳುವರು; ಹೊಲಸು ಬಟ್ಟೆಗಳನ್ನು ಧರಿಸುವರು; ಕೆಲವರು ಲಂಗೋಟಿಯ ಹಾಕುವರು. ಇವರ ಹೆಂಗಸರು ಕುಪ್ಪಸ ತೊಡುವರು, ಕಚ್ಚೀ ಹಾಕುವರು. ಇವರ ಲಗ್ನ ಕಾರ್ಯಗಳನ್ನು ಬ್ರಾಹ್ಮಣರು ಮಾಡಿಸುವರು; ಶೃಂಗೇರಿಯ ಸ್ವಾಮಿಯು ಇವರ ಧರ್ಮ ಗುರು. ಇವರಲ್ಲಿ ಬಹು ಜನರು ವೊಕ್ಕಲತನವನ್ನು, ಕೆಲವರು ನೌಕರಿಯನ್ನು ಮಾಡುವರು.

**ಸೂದಿರರು.**

ಸತಾರಕರರು.—ಗೋವೆಯ ಶೀಮೆಯಲ್ಲಿಯ ಸತಾರಿಯೆಂಬ ಗ್ರಾಮದಿಂದ ಬಂದು ಇವರು ಹಲ್ಯಾಳ ತಾಲೂಕಿನಲ್ಲಿ ವಾಸಿಸುತ್ತಾರೆ. ಇವರ ಭಾಷೆ ಕೊಂಕಣೀ; ಗಂಡಸರ ಉಡಿಗೆ ಲಂಗೋಟ; ಮದ್ಯ ಮಾಂಸಗಳಿಗೆ ಅಡ್ಡಿ ಇಲ್ಲ; ಹೆಣ್ಣುಗಳ ಮದುವೆ ನೆರಿದ ಬಳಿಕ ಆಗುವದು; ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ; ಲಗ್ನಾದಿ ಕಾರ್ಯಗಳನ್ನು ಬ್ರಾಹ್ಮಣರು ಮಾಡಿಸುವರು. ಶೃಂಗೇರಿಯ ಸ್ವಾಮಿಯು ಇವರ ಗುರು. ಒಕ್ಕಲತನ, ಕೂಲಿ, ಇವರ ಹೋರೆಗಳು. ಹೆಣಗಳನ್ನು ಕೆಲವರು ಸುಡುವರು, ಕೆಲವರು ಹುಗಿಯುವರು. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಸತಾರಕರರು.**

ಕಾಮತಿಗಳು, ಅಥವಾ ಕುಂಚಿಗೇ ವೊಕ್ಕಲಿಗರು.—ಇವರು ಮಳೆಗಾಲದಲ್ಲಿ ವೊಂದು ಬಗೆಯ ಕುಂಚಿಗೆಯನ್ನು ಹೊದ್ದು ಕೊಳ್ಳುವ ಕಾರಣ ಇವರಿಗೆ ಈ ಹೆಸರು ಬಂದದೆ. ಇವರು ಬಹು ಕಾಲದ ಹಿಂದೆ ಮೈಸೂರಿನ ಶೀಮೆಯಿಂದ ಕಾನಡಾ ಜಿಲ್ಲೆಗೆ ಬಂದವರು; ಕಾಡು ತರದ ಕನ್ನಡ ಭಾಷೆಯನ್ನಾಡುತ್ತಾರೆ; ಮದ್ಯ ಮಾಂಸ ತಕ್ಕೊಳ್ಳುವರು; ವೆಂಕಟರಮಣನಿಗೆ ನಡಕೊಳ್ಳುವರು; ಇವರ ಗುರು ಗೋವಿಂದ ರಾಜ ಪಟ್ಟಣದ ತಾತಾಚಾರ್ಯನು; ಇವರಲ್ಲಿಯ ಕಾರ್ಯಗಳನ್ನು ಬ್ರಾಹ್ಮಣರು ಮಾಡಿಸುವರು. ಕಾಮತಿಗಳು ಮುಖ್ಯವಾಗಿ ಕಾಯಿಪಲ್ಲೆಗಳ ತೋಟಗಳನ್ನು ಮಾಡಿಸುವರು. ಇವರಲ್ಲಿ ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ, ಹೆಣಗಳನ್ನು ಸುಡುವರು.

**ಕಾಮತಿಗಳು.**

ಹಬ್ಬುಗಳು.—ಇವರು ಹಬಶೀ ಜನರ ವಂಶದವರೆಂದು ಕೆಲವರು ಹೇಳುತ್ತಾರೆ; ಆದರೆ ಪೂರ್ವದಲ್ಲಿ ಕಾನಡಾ ಜಿಲ್ಲೆಯ ಘಟ್ಟದ ಮೇಲಿನ ಭಾಗದಲ್ಲಿ ವಾಸಿಸುತಿದ್ದ ಹಬಸಿಕರೆಂಬ ಜನಾಂಗದವರ ವಂಶದವರೆಂದು ತೋರುತ್ತದೆ. ಇವರು ಆಡುವ ಕನ್ನಡ ಭಾಷೆ

ಯಲ್ಲಿ ಕೊಂಕಣೀ ಶಬ್ದಗಳು ಬಹಳ ಬರುತ್ತವೆ. ಇವರು ತಾವು ಬ್ರಾಹ್ಮಣರೆಂದು ಹೇಳುತ್ತಾರೆ. ವಸಿಷ್ಠ, ಜಮದಗ್ನಿ, ಮುಂತಾದ ಗೋತ್ರಗಳನ್ನು ಹೇಳುವರು; ಜನನ, ಮರಣ, ಮೌಂಜಿ, ಲಗ್ನ, ಮುಂತಾದ ಕಾರ್ಯಗಳನ್ನು ತಮ್ಮ ಸ್ವಂತ ಜಾತಿಯ ಉಪಾಧ್ಯಾಯರ ಕೈಯಿಂದ ಬ್ರಾಹ್ಮಣರಂತೆ ಮಾಡಿಸುವರು; ಮಹಾದೇವನಿಗೆ ನಡಕೊಳ್ಳುವರು; ಮದ್ಯ ಮಾಂಸಗಳನ್ನು ಮುಟ್ಟುವದಿಲ್ಲ; ನೇಗಲ ಹೊಡಿಯುವದೊಂದು ಬಿಟ್ಟು ಯಾವತ್ತು ವೊಕ್ಕಲತನದ ಕೆಲಸಗಳನ್ನು ಮಾಡುವರು; ದಿನಕ್ಕೆ ಮೂರು ಸಾರಿ ಉಣ್ಣುವರು. ಈ ಹಬ್ಬುಗಳಿಗೆ ಅನ್ನ ವಸ್ತ್ರಕ್ಕೆ ಕೊರತೆ ಇಲ್ಲ. ಕೆಲವರು ಕೊಡಕೊಳ್ಳುವ ವ್ಯವಹಾರ ಮಾಡುವರು. ಶೃಂಗೇರಿಯ ಸ್ವಾಮಿಯು ಇವರ ಗುರು. ಇವರಲ್ಲಿ ವಿಧವೆಗಳಿಗೆ ಲಗ್ನವಿಲ್ಲ; ಅವರ ಕ್ಷೌರ ಮಾಡಿಸುವರು. ಹಬ್ಬುಗಳು ಓದ ಬರಿಯ ಬಲ್ಲರು. ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವರು. ಈ ಯಾವತ್ತು ವಿವರಗಳಿಂದ ಕಾನಡಾ ಜಿಲ್ಲೆಯ ಹಬ್ಬುಗಳೆಂಬ ಬ್ರಾಹ್ಮಣರೂ ಈ ಹಬ್ಬುಗಳೆಂಬ ವೊಕ್ಕಲಿಗರೂ ಮೂಲದಲ್ಲಿ ವೊಂದೇ ಬ್ರಾಹ್ಮಣ ಜಾತಿಯವರೆಂದು ತೋರುತ್ತದೆ.

**ಹಬ್ಬುಗಳು.**

ಮಹಾದೇವನ ಜಾತ್ರೆಯಲ್ಲಿ ಹಬ್ಬು ಜನರ ಭಕ್ತಿ ಬಹಳ. ವೈಶಾಖ ಮಾಸದಲ್ಲಿ ಶಿಡೀ ಆಡುವ ಜಾತ್ರೆಯಾಗುತ್ತದೆ. ಶಿಡೀ ಆಡಲಿಕ್ಕೆ ಈಗ ಸರಕಾರದವರ ಅಪ್ಪಣೆ ಇಲ್ಲ; ಪೂರ್ವದಲ್ಲಿ ಇದು ಬಹಳ ನಡಿಯುತ್ತಿತ್ತು. ಈ ಜಾತ್ರೆಯು ಹತ್ತು ದಿವಸ ನಡಿಯುವದು. ಗುಡಿಯೊಳಗೆ ವೊಂದು ಕಟ್ಟೆಯನ್ನು ಹಾಕಿ ಅದರ ಮೇಲೆ ಕಲಶವನ್ನಿಡುವರು. ಆ ಕಲಶದ ಪೂಜಾರಿಯು ಕುಂಬಾರನು. ಅವನು ಕಲಶದೊಳಗೆ ನೀರು ಹಾಕಿ ಅದಕ್ಕೆ ಚಿನ್ನದ ಹೂಗನ್ನೇರಿಸಿ ಹತ್ತೂ ದಿವಸ ಪೂಜೆ ಮಾಡುವನು. ಗಾಯನ ವರ್ತನಗಳು ನಿತ್ಯದಲ್ಲಿ ನಡಿಯುವವು. ಹತ್ತನೇ ದಿವಸ ಊರವರು ಆ ಪೂಜಾರಿಯ ತಲೆಯ ಮೇಲೆ ಕಲಶವನ್ನು ಹೊರಿಸಿ ಕೊಂಡು ಊರ ಹೊರಗಿನ ಬೈಲಿಗೆ ಸಮಾರಂಭದಿಂದ ಹೋಗುವರು. ಅಲ್ಲಿ ಕೆಲವು ಕಲ್ಲಿನ ಕಂಬಗಳನ್ನು ಮೊದಲೇ ನಿಲ್ಲಿಸಿ ಅವುಗಳ ಬಳಿಯಲ್ಲಿ ಹೊಸ ಗಡಿಗೆಗಳ ಅಡಕಿಲು ಯೇರಿಸಿಡುವರು. ಕುಂಬಾರನು ತಲೆಯ ಮೇಲಿನ ಕಲಶವನ್ನು ಆ ಕಂಬಗಳ ಬಳಿಯಲ್ಲಿ ಇಟ್ಟು ಅದರ ಪೂಜೆಯನ್ನು ಮಾಡುವನು. ಊರವರು ಕಲಶ ದೇವತೆಗೆ ಕಾಯಿಗಳನ್ನು ವೊಡಿದು ಕುರಿ ಕೋಳಿಗಳನ್ನು ಕಡಿಸುವರು. ಸಾಯಂಕಾಲದ ವರೆಗೆ ಈ ಪ್ರಕಾರ ಪೂಜೆ, ಬಲಿ, ಮುಂತಾದ ವಿಧಾನಗಳಾದ ಬಳಿಕ ಸಂಜೆಯಲ್ಲಿ ಕಲಶವನ್ನು ತಕ್ಕೊಂಡು ಮರಳಿ ಊರೊಳಗೆ ಬರುವರು. ಶಿಡೀ ಆಡುವದು ನಡಿಯುತ್ತಿದ್ದ ಕಾಲಕ್ಕೆ ವೊಂದು ರಥದೊಳಗೆ ಕಲಶವನ್ನಿಟ್ಟು, ಆ ರಥದ ಮುಂದೆ ಭಕ್ತರು ಶಿಡೀ ಆಡುವರು. ರಥದ ಮುಂಭಾಗದಲ್ಲಿ ವೊಂದು ಕಂಬವನ್ನು ನಿಲ್ಲಿಸಿ ಆ ಕಂಬದ ತಲೆಯ ಮೇಲೆ ವೊಂದು ಅಡ್ಡ ತೊಲೆಯನ್ನು ಕೆಳಗೆ ಮೇಲೆ ಹೊಯಿದಾಡುವಂತೆ ಕೂಡ್ರಿಸುವರು. ತೊಲೆಯ ಯೆರಡೂ ತುದಿಗಳಿಗೆ ಹಗ್ಗಗಳನ್ನು ಹಚ್ಚಿ ಬೇಕಾದ ತುದಿಯನ್ನು ಬೇಕಾದಾಗ ಕೆಳಗೆ ಯೆಳಿದು ಕೊಳ್ಳಲಿಕ್ಕೆ ಬರುವಂತೆ ಮಾಡುವರು. ತೊಲೆಯ ಹೊರವೋರೆಯಲ್ಲಿ ಯೆರಡು ವಂಕಿಗಳಿರುವವು. ಶಿಡೀ ಆಡ ತಕ್ಕ ಭಕ್ತನ ಬೆನ್ನಿನಲ್ಲಿ ರಟ್ಟೀ ಯೆಲವುಗಳ

ಕೆಳಗೆ ಆ ವಂಕಿಗಳನ್ನು ನಡಿಸಿ, ಅವನಿಗೆ ಕೈ ಜೋಡಿಸ ಹೇಳಿ, ಯೆರಡನೇ ತುದಿಯ ಹಗ್ಗವನ್ನು ಕೆಳಗೆ ಯೆಳಿಯುವರು. ಆ ಕೂಡಲೆ ಭಕ್ತನು ವಂಕಿಗಳಲ್ಲಿ ಜೋತಾಡುತ್ತ ಮೇಲಕ್ಕೆ ಹೋಗುವನು. ಈ ಪ್ರಕಾರ ಕೆಲವು ವೇಳೆ ಶಿಡೀ ಆಡಿದ ಬಳಿಕ ಆ ಭಕ್ತನನ್ನು ಇಳಿಸಿ ಮತ್ತೊಬ್ಬನನ್ನು ಯೇರಿಸುವರು.

**ಅತ್ತೇ ವೊಕ್ಕಲಿಗರು.**

ಅತ್ತೇ ವೊಕ್ಕಲಿಗರು.—ಇವರು ಅಂಕೋಲಾ ಯಲ್ಲಾಪುರ ತಾಲೂಕುಗಳ ನಟ್ಟಡವಿಯಲ್ಲಿ ವಾಸಿಸುವರು. ಇವರು "ಅತ್ತೆ" ಯೆಂಬದೊಂದು ಬಗೆಯ ಬೆತ್ತದ ಕಾವಡಿಯಲ್ಲಿ ಭಾರ ಹೊರುತ್ತಿರುವ ಕಾರಣ ಇವರಿಗೆ ಅತ್ತೇ ವೊಕ್ಕಲಿಗರೆಂಬ ಹೆಸರು ಬಂದದೆ. ಇವರು ಕೊಂಕಣೀ ಕನ್ನಡ ಭಾಷೆಗಳನ್ನು ಮಿಶ್ರ ಮಾಡಿ ಆಡುವರು; ಆ ಭಾಷೆಯು ಯಾರಿಗೂ ತಿಳಿಯುವದಿಲ್ಲ. ಈ ಯೆರಡೂ ಭಾಷೆಗಳಲ್ಲಿ ಇಲ್ಲದಂಥ ಹಲಕೆಲವು ಶಬ್ದಗಳು ಇವರ ಭಾಷೆಯಲ್ಲಿ ಬರುತ್ತವೆ. ಉದಾಹರಣಾರ್ಥವಾಗಿ—ತಡಂ=ಕಟ್ಟಿಗೆ, ಹೆರಡು=ಯೇನು, ಕಲ್ಲ=ಈಗ, ಖೆಪ್ರು=ಹಲ್ಲಿ, ಪವೊ=ತುಟಿ, ಪಿವಾಂಡ=ಹೆಗಲು. ಇವರ ಮನೆಗಳೆಂದರೆ ಹುಲ್ಲಿನ ಗುಡುಸಲುಗಳು; ಅವು ವೊಂದಕ್ಕೊಂದು ಬಹಳ ಹೊಂದಿ ಕೊಂಡಿರುತ್ತವೆ. ಕೆಲವೊಂದು ಕುಲದ ಹಿರಿ ಮನುಷ್ಯನ ಮನೆಯ ಅಂಗಳದಲ್ಲಿ ಮಾತ್ರ ತುಳಸೀ ಗಿಡವಿರುವದು. ಇವರ ಗುಡುಸಲುಗಳಿಗೆ ಬೆಂಕಿ ಹತ್ತಿದರೆ ಇವರು ಶ್ರಮಪಟ್ಟು ನುಂದಿಸುವದಿಲ್ಲ. ಕೆಲವರ ಮನೆಗಳು ಮಾತ್ರ ಸುಟ್ಟು, ಉಳಿದವರು ಆನಂದದಿಂದ ತಮ್ಮ ಗುಡುಸಲಿನಲ್ಲಿ ಇರುವದು ಅನ್ಯಾಯವೆಂದು ಇವರು ಯೆಣಿಸುತ್ತಾರೆ. ಬೆಂಕಿ ನುಂದಿದ ಬಳಿಕ ಯೆಲ್ಲರೂ ಕೂಡಿ ಸುಟ್ಟ ಗುಡುಸಲುಗಳನ್ನು ಆಗಲೇ ನಿಲ್ಲಿಸಿ ಕೊಡುವರು. ಅತ್ತೇ ವೊಕ್ಕಲಿಗರ ಉಡಿಗೆ ಆಹಾರಗಳು ಹಾಲ್ವಕ್ಕೀ ವೊಕ್ಕಲಿಗರಂತೆ ಇರುವವು; ಆದರೆ ಸಾಕಿದ ಪಶುಗಳ ಮಾಂಸವನ್ನು ಇವರು ತಿನ್ನುವದಿಲ್ಲ. ಇವರಲ್ಲಿ ಸ್ತ್ರೀ ಪುರುಷರ ಸಂಬಂಧದ ನಿಯಮಗಳು ಬಹು ಶಿಥಿಲವಿರುತ್ತದೆ. ಇವರು ಮೊದಲು ಕುಮ್ರಿ ಕಡಿದು ಪೈರು ಮಾಡುವರು. ಅದನ್ನು ಸರಕಾರದವರು ಕಟ್ಟು ಮಾಡಿದ್ದರಿಂದ ಇವರು ಈಗ ಯೆಲೆದೋಟಗಳಲ್ಲಿಯೂ ಯಾಲಕ್ಕಿಯ ತೋಟಗಳಲ್ಲಿಯೂ ಕೂಲಿಯ ಹೋರೆಯಿಂದ ಹೊಟ್ಟೆ ತುಂಬಿ ಕೊಳ್ಳುತ್ತಾರೆ. ಬೆತ್ತದ ಹೆಣಿಕೇ ಕೆಲಸವನ್ನು ಇವರಲ್ಲಿ ಕೆಲವರು ಮಾಡುವರು. ತುಳಸೀ ಗಿಡದ ಕೆಳಗೆ ವೆಂಕಟರಮಣನ ಪೂಜೆ, ಹರಿ ದಿನದ ಉತ್ಸವ, ಸುಲಿಯದಿದ್ದ ತೆಂಗಿನ ಕಾಯಿಯನ್ನು ಹಿರಿಯರ ಮೂರ್ತಿ ಯೆಂದು ಪೂಜಿಸುವ ನಡಾವಳಿ, ಗೌಡರ ಅಧಿಕಾರ, ಇವೆಲ್ಲ ಹಾಲ್ವಕ್ಕೀ ವೊಕ್ಕಲಿಗರಂತೆ ಇವರಲ್ಲಿಯೂ ನಡಿಯುತ್ತವೆ. ಅತ್ತೇ ವೊಕ್ಕಲಿಗರು ಹುಲಿದೇವನನ್ನು ವಿಶೇಷವಾಗಿ ಪೂಜಿಸುವರು. ಮೈ ನೆರಿದ ಕನ್ನಿಕೆಯನ್ನು ಇವರು ವೊಂದು ತಿಂಗಳಿನ ಮೇಲೆ ನಾಲ್ಕು ದಿವಸಗಳ ವರೆಗೆ ಹೊರಗಿಡುವರು; ಯಾರಾದರೂ ಸತ್ತರೆ ಊರವರೆಲ್ಲ ಸೂತಕ ಹಿಡಿಯುವರು. ಇವರು ಬಹಳ ಬಡವರಿದ್ದದರಿಂದ ಲಗ್ನ ಮುಹೂರ್ತಗಳಿಗಾಗಿ ಹೈಗರ ಕೈಯಿಂದ ಸಾಲ ತಕ್ಕೊಂಡು, ಬಹು ದಿವಸ ಅವರ ಮನೆಯಲ್ಲಿ ಕೂಳಿಗೆ ದುಡಿದು ಜನ್ಮ ಕಳಿಯುವರು.

**ನೊಣಬರು.**

ನೊಣಬರು.—ಬುನಾದಿಯಲ್ಲಿ ಚಿತ್ರದುರ್ಗದ ಶೀಮೆಗೆ ನೋನಂಬವಾಡಿ ಯೆಂಬ ಹೆಸರಿತ್ತು. ಆ ಶೀಮೆಯಿಂದ ಬಂದು ಇವರು ಶಿರಶಿ, ಕುಮಟಾ ತಾಲೂಕುಗಳಲ್ಲಿ ವಾಸಿಸುತ್ತಾರೆಂದು ತೋರುತ್ತದೆ. ಇವರು ಕನ್ನಡಿಗರು, ಲಿಂಗಧಾರಿಗಳು, ಬಣಜಿಗರನ್ನು ಸರಿಗಟ್ಟುವರು. ಇವರಲ್ಲಿ ಕೆಲವರು ತಮ್ಮ ಸ್ವಂತ ಭೂಮಿಯನ್ನು ಮಾಡುವರು, ಉಳಿದವರು ತೆರಿಗೆಗೆ ಭೂಮಿಯನ್ನು ತಕ್ಕೊಂಡು ಮಾಡುವರು. ಇವರಲ್ಲಿ ವಿಧವೆಗಳಿಗೆ ಲಗ್ನವಿಲ್ಲ; ಬಹುತರ ಯೆಲ್ಲರೂ ಓದ ಬರಿಯ ಬಲ್ಲರು, ಮಕ್ಕಳನ್ನು ಶಾಲೆಗೆ ಕಳಿಸುವರು.

**ಶೀಲಂಗಿಗಳು.**

ಶೀಲಂಗಿಗಳು ಅಥವಾ ಶೀಲಗೌಡರು.—ಇವರು ಮೈಸೂರು ಶೀಮೆಯಿಂದ ಬಂದು ಶಿರಶೀ ತಾಲೂಕಿನಲ್ಲಿ ವಾಸಿಸುತ್ತಾರೆ. ಹೊನ್ನಳ್ಳಿಯ ನರಸಿಂಹನು ಇವರ ದೇವರು. ಇವರು ಮಾಂಸ ತಕ್ಕೊಳ್ಳುವರು, ಆದರೆ ಮದ್ಯ ಮುಟ್ಟುವದಿಲ್ಲ; ಲಂಗೋಟಿಯ ಮೇಲೆ ಕಚ್ಚೆ ಹಾಕದೆ ಪಂಚೆ ಸುತ್ತಿಕೊಳ್ಳುವರು. ಹೆಂಗಸರಿಗೆ ಕಚ್ಚೆ ಕುಪ್ಪಸಗಳಿಲ್ಲ; ಆದರೆ ಅವರು ಕಾಡಿಗೆ ಕುಂಕುಮಗಳನ್ನು ಹಚ್ಚಿ ಕೊಳ್ಳುವರು. ಶೀಲ ಗೌಡರು ಹಾಲ್ವಕ್ಕೀ ವೊಕ್ಕಲಿಗರನ್ನು ಸರಿಗಟ್ಟುವರು; ಆದರೆ ಬ್ರಾಹ್ಮಣರು ಇವರನ್ನು ಮುಟ್ಟಿದರೆ ಸ್ನಾನ ಮಾಡುತ್ತಾರೆ. ಇವರು ಹೊಲಿಯರನ್ನು ಮುಟ್ಟಿದರೆ ತಾವೂ ಸ್ನಾನ ಮಾಡುವರು. ಹೈಗ ಬ್ರಾಹ್ಮಣರೇ ಇವರ ಉಪಾಧ್ಯಾಯರು. ಹೆಣ್ಣು ಮಕ್ಕಳ ಲಗ್ನವನ್ನು ನೆರಿದ ಬಳಿಕ ಮಾಡ ಬಹುದು; ವಿಧವೆಗಳಿಗೆ ಲಗ್ನವಿಲ್ಲ. ವೊಕ್ಕಲತನವೇ ಶೀಲಂಗಿಗಳ ಮುಖ್ಯ ಹೋರೆಯು; ಕೆಲವರು ಕೂಲೀ ಮಾಡುವರು. ಇವರು ಶುಕ್ಲ ಪ್ರತಿ ಪದೆಯಲ್ಲಿ ಮಿಷ್ಟಾನ್ನದ ಗ್ರಾಸವನ್ನು ಆಕಳಿಗೆ ಕೊಡುವರು; ಹೆಣಗಳನ್ನು ಸುಡುವರು, ಇಲ್ಲವೆ ಹುಗಿಯುವರು.

**ಗೊಂಗಡೀಕಾರರು.**

ಗೊಂಗಡೀಕಾರರು.—ಇವರಾದರೂ ಮೈಸೂರ ಶೀಮೆಯಿಂದ ಬಂದು ಸಿದ್ದಾಪುರ ಯಲ್ಲಾಪುರ ತಾಲೂಕುಗಳಲ್ಲಿ ವಾಸಿಸುತ್ತಾರೆ. ಇವರ ಭಾಷೆ ಕನ್ನಡ, ಗುರು ಚನ್ನಗಿರಿಯ ಅಯ್ಯನು, ನಡಕೊಳ್ಳುವ ದೇವರು ಹೊನ್ನಮ್ಮ, ವೀರಭದ್ರ. ಆದರೆ ಇವರು ಲಗ್ನ ಮುಂತಾದ ಕಾರ್ಯಗಳನ್ನು ಬ್ರಾಹ್ಮಣರನ್ನು ಕೇಳಿ ಮಾಡುವರು. ಗೊಂಗಡೀಕಾರರು ಮದ್ಯ ಮುಟ್ಟುವದಿಲ್ಲ, ಹೆಣ್ಣು ಮಕ್ಕಳ ಲಗ್ನವನ್ನು ನೆರಿದ ಬಳಿಕ ಮಾಡುವರು, ಹೆಣಗಳನ್ನು ಹುಗಿಯುವರು. ಇವರಲ್ಲಿ ಕೆಲವರು ವೊಕ್ಕಲತನ ಮಾಡುವರು, ಕೆಲವರು ಚಿನಿವಾಲರ ಹೋರೆ ಮಾಡುವರು. ಇವರಲ್ಲಿ ಜಾತಿ ಸಂಬಂಧದ ವಿಚಾರಣೆಗಾಗಿ ಸುಭೇದಾರ, ಕಿಲ್ಲೇದಾರ, ಶಾನಭೋಗ, ಗೌಡ, ಭಂಡಾರಿ, ಬುದ್ಧಿವಂತ, ಕೋಳಕರ, ಯೆಂಬ ಅಧಿಕಾರಿಗಳು ಒಬ್ಬರ ಕೈಕೆಳಗೊಬ್ಬರು ನಡಿಯುವರು. ಕಿಲ್ಲೇದಾರನು ಚನ್ನಗಿರಿಯ ಅಯ್ಯನ ಬಳಿಯಲ್ಲಿ ಇರುವನು. ಸುಭೇದಾರನು ಗೌರವದ ಸಂಗತಿಗಳನ್ನು ಕಿಲ್ಲೇದಾರನ ಮುಖಾಂತರವಾಗಿ ಅಯ್ಯನಿಗೆ ತಿಳಿಸಿ ಅವನ ಅಪ್ಪಣೆಯಂತೆ ನಡ ಕೊಳ್ಳುವನು. ಶಾನಭೋಗನು ಸುಭೇದಾರನ ಕೈ ಕೆಳಗೆ ಬರಿಯುವ

ಕೆಲಸ ಮಾಡುವನು. ಗೌಡನು ಊರ ಹಿರಿಯನು; ಕೋಳಕರನು ಅವನ ಕೈ ಕೆಳಗೆ ತಳವಾರನ ಕೆಲಸ ಮಾಡುವನು. ಗೊಂಗಡೀಕಾರರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ.

**ಕೋಟೆ ವೊಕ್ಕಲಿಗರು.**

ಕೋಟ ವೊಕ್ಕಲಿಗರು.—ಇವರು ಶಿರಸಿ, ಶಿದ್ದಾಪುರ ತಾಲೂಕುಗಳಲ್ಲಿ ಇರುತ್ತಾರೆ. ಅಡಿಕೇ ಗೊಂಚಲುಗಳಿಗೆ ಚೀಲು ಮಾಡಿ ಹಾಕುವ ಹೋರೆಯನ್ನು ಮಾಡುತ್ತಿರುವ ಕಾರಣ ಇವರಿಗೆ ಈ ಹೆಸರು ಬಂದದೆ. ಇವರ ಭಾಷೆ, ಉಡಿಗೆ, ರೂಪ, ಆಹಾರ, ಧರ್ಮ, ನಡಾವಳಿ, ಮುಂತಾದವುಗಳೆಲ್ಲ ಹಾಲ್ವಕ್ಕೀ ವೊಕ್ಕಲಿಗರಂತೆ. ಆದರೆ ಅವರಿಗೂ ಇವರಿಗೂ ಊಟದ ಬಳಿಕೆಯಾಗುವದಿಲ್ಲ.

**ತಿಗಳರು.**

ತಿಗಳರು.—ಇವರು ಶಿರಸಿ, ಸಿದ್ದಾಪುರ ತಾಲೂಕುಗಳಲ್ಲಿ ಇರುತ್ತಾರೆ; ತಮಿಳವನ್ನು ಹೋಲುವಂಥ ಇಬ್ಬಾರವೆಂಬ ಭಾಷೆಯನ್ನಾಡುವರು. ಇವರ ದೇವತೆಯ ಹೆಸರು ಗುರುನಾಥಮ್ಮ; ಈ ದೇವತೆಯ ಗುಡಿ ಕಾರಿಕಲ್ಲಿನಲ್ಲ ಇರುತ್ತದೆ. ಇವರು ಮದ್ಯ ಮಾಂಸ ತಕ್ಕೊಳ್ಳುವರು, ಬ್ರಾಹ್ಮಣರ ಶಿಷ್ಯರಾಗಿ ನಡಿಯುವರು. ಇವರಲ್ಲಿ ಕೆಲವರು ವೊಕ್ಕಲತನ ಮಾಡುವರು, ಕೆಲವರು ಸರಕಾರೀ ನೌಕರಿಯ ಮಾಡುವರು, ಕೆಲವರು ಕೂಲೀ ಮಾಡುವರು. ಇವರಲ್ಲಿ ಹೆಣ್ಣು ಮಕ್ಕಳ ಲಗ್ನವು ನೆರಿದ ಬಳಿಕ ಆಗ ಬಹುದು; ವಿಧವೆಗಳಿಗೆ ಲಗ್ನವಿಲ್ಲ; ಗಂಡು ಮಗನ ಲಗ್ನದ ಪೂರ್ವ ದಿವಸ ಅವನ ಮುಂಜಿಯನ್ನು ಮಾಡುವರು; ಮಕ್ಕಳನ್ನು ಶಾಲೆಗೆ ಕಳಿಸುವರು. ಒಟ್ಟಿಗೆ ಇವರು ಸುಖದಿಂದಿದ್ದಾರೆ.

# ಶಿಲ್ಪಿಗರ ಜಾತಿಗಳು.

| | ಜಾತಿ. | ಧಾರವಾಡ. | | | ಬೆಳಗಾವಿ. | | | ವಿಜಾಪುರ. | | | ಕಾರವಾರ. | | | |
|---|---|---|---|---|---|---|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | |
| ೧ | ಪಂಚಾಳರು ........ | ೯೨೯೦ | ೮೮೮೫ | ೧೮೧೭೫ | ೫೦೯೨ | ೪೮೨೮ | ೯೯೨೦ | ೩೦೯೫ | ೩೦೨೭ | ೬೧೨೨ | ,, | ,, | ,, | |
| ೨ | ಬಡಿಗಿಗಳು........ | ೧೦೫೧ | ೯೬೨ | ೨೦೧೩ | ೨೦೯೭ | ೧೯೯೦ | ೪೦೮೭ | ,, | ,, | ,, | *೪೯೯೯ | *೪೭೭೯ | *೯೭೭೮ | * ಪೈ. ಸುತಾರ ೧೭೨೯ + ೧೪೯೧=೩೨೨೦. |
| ೩ | ಕಮ್ಮಾರರು........ | ೬೧೩ | ೬೦೪ | ೧೨೧೭ | ೧೧೬೬ | ೧೦೨೮ | ೨೧೯೪ | ,, | ,, | ,, | ೪೨೮ | ೪೦೬ | ೮೩೪ | |
| ೪ | ಕುಂಬಾರರು ........ | ೧೩೫೫ | ೧೨೮೬ | ೨೬೪೧ | ೨೦೨೨ | ೧೯೭೬ | ೪೦೦೧ | ೨೭೪೧ | ೨೬೮೧ | ೫೪೨೨ | | | *೨೬೦೦ | * ಕನ್ನಡ ೧೫೦೦ ಕೊಂಕಣೀ ೬೦೦ ಲಿಂಗವಂತ ೫೦೦ |
| ೫ | ಸೊನ್ನಗಾರರು ........ | ೧೩೫೯ | ೧೦೪೬ | ೨೪೦೫ | ೨೦೭೯ | ೧೯೫೨ | ೪೦೩೧ | ,, | ,, | ,, | *೫೧೨೦ | *೫೨೩೮ | *೧೦೩೫೮ | * ಕನ್ನಡ ಅಗಸಾಲಿಗರು ೨೦೦. |
| ೬ | ಉಪ್ಪಾರರು (ಗೌಂಡಿ) ... | ೨೯೮೨ | ೩೦೦೮ | ೫೯೯೦ | ೪೨೭೮ | ೪೨೭೫ | ೮೫೫೩ | ೩೬೪೬ | ೩೮೨೦ | ೭೪೬೬ | | • | ೮೯ | |
| ೭ | ಶಿಂಪಿಗರು ........ | ೩೨೨೯ | ೩೩೫೦ | ೬೫೭೯ | ೧೯೦೮ | ೧೮೬೧ | ೩೭೬೯ | ೨೫೨೬ | ೨೫೧೯ | ೫೦೪೫ | ೩೪೮ | ೨೮೦ | ೬೨೮ | |
| ೮ | ಜೀನಗಾರರು ........ | ೨೦೫ | ೨೦೪ | ೪೦೯ | ೨೭೪ | ೨೬೦ | ೫೩೪ | ೧೫೧ | ೧೫೯ | ೩೧೦ | ೧೬ | ೧೪ | ೩೦ | |
| ೯ | ಮೇದಾರರು ........ | ೫೩೯ | ೫೩೩ | ೧೦೭೨ | ೫೪೪ | ೫೪೮ | ೧೦೯೨ | ೧೩೯ | ೧೪೪ | ೨೮೩ | ೨೯೪ | ೧೯೩ | ೪೮೭ | |
| ೧೦ | ಕಾಸಾರರು........ | ,, | ,, | ,, | ೧೦೯ | ೧೦೩ | ೨೧೨ | ,, | ,, | ,, | | | ೧೫ | |
| ೧೧ | ಕಂಚುಗಾರರು (ಓತಾರಿ) . | ,, | ,, | ,, | ೩೨ | ೪೫ | ೭೭ | ,, | ,, | ,, | ,, | ,, | ,, | |
| ೧೨ | ನೀಲಗಾರರು (ನಾಗಲೀಕರು ಸಹಿತ) .... | ,, | ,, | ,, | ,, | ,, | ,, | ೯೪೪ | ೯೬೩ | ೧೯೦೭ | ,, | ,, | ,, | |
| ೧೩ | ಗುಡಿಗಾರರು ........ | ,, | ,, | ,, | ,, | ,, | ,, | ,, | ,, | ,, | ೧೯೦ | ೧೯೦ | ೩೮೦ | |
| ೧೪ | ಬಳೆಗಾರರು ........ | ,, | ,, | ,, | ,, | ,, | ,, | ,, | ,, | ,, | | | ೧೫ | |
| ೧೫ | ಕಲ್ಲು ಕುಟ್ಟಿಗರು (ಒಡ್ಡರು) | ,, | ,, | ,, | ,, | ,, | ,, | ,, | ,, | ,, | | | ೧೦೦ | |
| ೧೬ | ಬೈಲುಗಂಬಾರರು (ಘಿಸಾಡಿ) | ೦ | ೦ | ೦ | ೩೭ | ೪೦ | ೭೭ | ೧೯ | ೨೧ | ೪೦ | ೦ | ೦ | ೦ | |

ಪಂಚಾಳರು.—ಇವರು ತಮ್ಮ ಜಾತಿಯ ಪೀಠಿಕೆಯನ್ನು ಹೇಳುವದು ಹ್ಯಾಗಂದರೆ—ಕಾಳಮ್ಮನೇ ಆದಿ ಮಾಯೆಯು. ಆಕೆ ವಿಶ್ವಕರ್ಮನನ್ನು ಹುಟ್ಟಿಸಿದಳು. ಅವನಿಗೆ ವಿರಾಟ ಪುರುಷನೆಂತಲೂ ಅನ್ನುವರು. ಈ ವಿರಾಟ ಪುರುಷನ ಐದು ಬಾಯಿಗಳಿಂದ ಸನಕ, ಸನಾತನ, ಅಭುವನ, ಪ್ರಸ್ಥಾನ, ಸುವರ್ಣ, ಯೆಂಬ ಐವರು ಋಷಿಗಳು ಹುಟ್ಟಿದರು. ಇವರು ಕ್ರಮವಾಗಿ ಕಮ್ಮಾರಿಕೆ, ಕಂಚುಗಾರಿಕೆ, ಬಡಿಗಿತನ, ಕಲ್ಲುಕುಟ್ಟಿಗತನ, ಸೊನ್ನಗಾರಿಕೆ, ಈ ಐದು ಹೋರೆಗಳನ್ನು ಕೈಕೊಂಡರು. ಇವೇ ಐದು ಹೆಸರುಗಳು ಈಗಿನ ಪಂಚಾಳರ ಐದು ಗೋತ್ರಗಳೆಂದು ಹೇಳಲ್ಪಡುತ್ತವೆ. ಈ ಐದು ಹೋರೆಗಳ ಪಂಚಾಳರು ಐದು ಬೇರೆ ಬೇರೆ ಜಾತಿಗಳೆಂದು ಯೆಣಿಸಲ್ಪಡುತ್ತಾರೆ. ಅವರವರೊಳಗೆ ಅನ್ನೋದಕ ವ್ಯವಹಾರ ಶರೀರ ಸಂಬಂಧಗಳು ಸ್ವಲ್ಪ ಕಡೆಯಲ್ಲಿ ಮಾತ್ರ ಆಗುತ್ತವೆ. ಕಾನಡಾ ಜಿಲ್ಲೆಯ ಘಟ್ಟದ ಕೆಳಗಿನ ಪಂಚಾಳರ ಹೊರ್ತು ಉಳಿದವರೆಲ್ಲರ ದೇವತೆಗಳು ಕಾಳಮ್ಮ, ಈಶ್ವರ; ಜನ್ಮಭಾಷೆ ಕನ್ನಡ. ಇವರಲ್ಲಿ ಕೆಲವರು ಬ್ರಾಹ್ಮಣರ ಹಾಗೇ ಧೋತ್ರ ಉಡುವರು, ಕೆಲವರು ೫ ಮೊಳದ ಪಂಜೆಗಳನ್ನು ಉಡುವರು. ಎಲ್ಲರಿಗೂ ಜನಿವಾರಗಳಿರುತ್ತವೆ. ಹೆಂಗಸರು ಬ್ರಾಹ್ಮಣರ ಹೆಂಗಸರ ಹಾಗೆ ಶೀರೆ ಉಟ್ಟು ಕುಂಕುಮ ಹಚ್ಚುವರು. ಕನ್ನಡ ಪಂಚಾಳರು ಮದ್ಯ ಮಾಂಸಗಳನ್ನು ಮುಟ್ಟುವದಿಲ್ಲ, ಬ್ರಾಹ್ಮಣರ ನೀರು ತಕ್ಕೊಳ್ಳುವದಿಲ್ಲ, ಬ್ರಾಹ್ಮಣರನ್ನು ಯಾವ ಕಾರ್ಯಕ್ಕೂ ಕರಿಯುವದಿಲ್ಲ. ನಿಜಾಮ ಇಲಾಖೆಯಲ್ಲಿ ಅಂತರ್ವಳ್ಳಿ ಯೆಂಬಲ್ಲಿಯೂ ವಿಜಾಪುರ ಜಿಲ್ಲೆಯಲ್ಲಿ ಯಾತಗಿರಿ ಯೆಂಬಲ್ಲಿಯೂ ಇವರ ಗುರುಗಳಿರುತ್ತಾರೆ; ಅವರು ಗೃಹಸ್ಥಾಶ್ರಮಿಗಳು. ಇವರ ಲಗ್ನ ಮುಹೂರ್ತಾದಿ ಕಾರ್ಯಗಳನ್ನು ಮಾಡಿಸುವ ಉಪಾಧ್ಯಾಯರು ಇವರ ಜಾತಿಯವರೇ ಇರುತ್ತಾರೆ. ಇವರಲ್ಲಿ ಹೆಣ್ಣು ಮಕ್ಕಳ ಲಗ್ನವು ೧೦ ವರ್ಷದ ಪೂರ್ವದಲ್ಲಿ ಆಗಲಿಕ್ಕೆ ಬೇಕು; ವಿಧವೆಗಳಿಗೆ ಲಗ್ನವಿಲ್ಲ; ಅವರು ಬಹುತರ ತಲೆ ಬೋಳಿಸಿ ಕೊಳ್ಳುವರು; ಪಂಚಾಳರು ತಮ್ಮ ಹೆಣಗಳನ್ನು ಸುಡುತ್ತಾರೆ. ಒಟ್ಟಿಗೆ ಪಂಚಾಳರ ಯೆಲ್ಲ ಜಾತಿಗಳು ಸುಖಿಯಾಗಿರುತ್ತವೆಂದು ಹೇಳ ಬಹುದು. ಹುಡುಗರು ಶಾಲೆಗೆ ಹೋಗುತ್ತಾರೆ.

ಕಾನಡಾ ಜಿಲ್ಲೆಯ ಘಟ್ಟದ ಕೆಳಗಿನ ಪಂಚಾಳರು ಗೋವೆಯಿಂದ ಬಂದವರು. ಅವರ ಭಾಷೆ ಕೊಂಕಣೀ, ದೇವತೆಗಳು ಹ್ಮಾಳಸಾ, ಶಾಂತಾದುರ್ಗಾ, ಮಂಗೇಶ. ಆದರೆ ಇವರಲ್ಲಿ ಕೆಲವರು ವೈಷ್ಣವರುಂಟು. ಅವರು ಉಡಪಿಯ ವ್ಯಾಸರಾಯ ಮಠದ ಶಿಷ್ಯರು, ವೈಷ್ಣವ ಬ್ರಾಹ್ಮಣರ ಹಾಗೆ ಮುದ್ರೆಗಳನ್ನು ಹಚ್ಚುವರು. ಇವರ ಉಪಾಧ್ಯಾಯರು ಕರಾಡಸ್ಥರು ಇಲ್ಲವೆ ಹವೀಕ ಬ್ರಾಹ್ಮಣರು. ಘಟ್ಟದ ಕೆಳಗಿನ ಪಂಚಾಳರು ಮೀನ ತಿನ್ನುವರು.

ಪಂಚಾಳ ಜಾತಿಗಳು ಮಾಡುವ ಹೋರೆಗಳು ಯಾವತ್ತು ಜನರಿಗೆ ಬೇಕಾಗುವಂಥವೇ ಇರುವ ಕಾರಣ ಬೇರೆ ಹಲವು ಜಾತಿಗಳ ಜನರು ಅವರ ಹೋರೆಗಳನ್ನು ಮಾಡಿ ಜೀವಿಸುತ್ತಾರೆ. ಕೆಳಗೆ ವಿವರಿಸಿದ ಬಡಿಗಿಗಳು, ಕಮ್ಮಾರರು, ಸೊನ್ನಗಾರರು, ಈ ಜನರು ಬಹುತರ ಅನ್ಯ ಜಾತಿಯವರಿರುತ್ತಾರೆ.

ಬಡಿಗಿಗಳು.—ವಿಜಾಪುರ, ಧಾರವಾಡ ಜಿಲ್ಲೆಗಳಲ್ಲಿ ಬಹುತರ ಯಾವತ್ತು ಬಡಿಗಿಗಳು ಪಂಚಾಳ ಜಾತಿಯವರೇ ಉಂಟು. ಬೆಳಗಾವಿ, ಧಾರವಾಡ ಜಿಲ್ಲೆಗಳ ಪಶ್ಚಿಮ ತಾಲೂಕುಗಳಲ್ಲಿ ಹಲಕೆಲವರು ಗೋಮಂತಕದಿಂದ ಬಂದಂಥ ಮರಾಠೀ ಭಾಷೆಯ ಬಡಿಗಿಗಳಿರುತ್ತಾರೆ. ಅವರ ಧರ್ಮ, ಆಚಾರ, ಉಡಿಗೆ, ಆಹಾರ, ಮುಂತಾದವುಗಳೆಲ್ಲ ಕಾನಡಾ ಜಿಲ್ಲೆಯ ಘಟ್ಟದ ಕೆಳಗಿನ ಪಂಚಾಳರ ಹಾಗೇ ಇರುವ ಕಾರಣ ಇವರಾದರೂ ಆ ಮರಾಠೀ ಪಂಚಾಳರ ಕುಲದವರೇ ಇರ ಬಹುದೆಂದು ತೋರುತ್ತದೆ. ಕಾನಡಾ ಜಿಲ್ಲೆಯ ಘಟ್ಟದ ಮೇಲಿನ ತಾಲೂಕುಗಳಲ್ಲಿ ಪಂಚಾಳರಲ್ಲದಂಥ ಕನ್ನಡ ಬಡಿಗಿಗಳು ಕೆಲವರಿರುತ್ತಾರೆ. ಅವರ ಆಚಾರಾದಿಗಳಲ್ಲಿ ವಿಶೇಷವೇನೆಂದರೆ—ಈ ಬಡಿಗಿಗಳು ಶಿರಸಂಗಿಯ ಕಾಳಮ್ಮನಿಗೆ ನಡಕೊಳ್ಳುತ್ತಾರೆ. ಇವರ ಗುರು ಮೋನಪ್ಪನೆಂಬ ಯತಿಯು ಹುಬ್ಬಳ್ಳಿಯಲ್ಲಿ ಇರುತ್ತಾನೆ. ಇವರ ಹೆಂಗಸರು ಕಚ್ಚೇ ಹಾಕುವದಿಲ್ಲ. ಇವರು ಮೀನ, ಮಾಂಸ, ತಿನ್ನುತ್ತಾರೆ; ಆದರೆ ಶರೆ ಕುಡಿಯುವದಿಲ್ಲ. ವಿಧವೆಗಳ ಲಗ್ನ ಮಾಡುತ್ತಾರೆ. ಉಳಿದ ನಡಾವಳಿ ಮುಂತಾದವುಗಳೆಲ್ಲ ಪಂಚಾಳರಂತೆ.

**ಬಡಿಗಿಗಳು.**

ಕಮ್ಮಾರರು.—ವಿಜಾಪುರ ಜಿಲ್ಲೆಯ ಕಮ್ಮಾರರೆಲ್ಲ ಬಹುತರ ಪಂಚಾಳರೇ.

ಬೆಳಗಾವೀ ಜಿಲ್ಲೆಯವರು ತಾವು ವಿಶ್ವಕರ್ಮನ ವಂಶದವರೆಂದು ಹೇಳುತ್ತಾರೆ. ಅವರು ವಿಶ್ವಕರ್ಮನ ಕಥೆ ಹೇಳುವದು ಹ್ಯಾಗಂದರೆ—ಬ್ರಹ್ಮನು ಮನುವನ್ನು ಹುಟ್ಟಿಸಿದನು; ಅವನ ಮಗ ಪ್ರಜಾಪತಿ; ಅವನ ೮ ಜನ ಹೆಂಡರಲ್ಲಿ ವೊಬ್ಬಳು ವಿಶ್ವಕರ್ಮನನ್ನು ಹಡಿದಳು; ಅವನಿಗೆ ೫ ಮೋರೆಗಳೂ, ೧೦ ಕೈಗಳೂ. ವಿಶ್ವಕರ್ಮನಿಗೆ ೫ ಜನ ಮಕ್ಕಳು. ಅವರಲ್ಲಿ ದೈವಜ್ಞನೆಂಬವನು ಸೊನ್ನಗಾರನಾದನು; ಮನುವೆಂಬವನು ಕಮ್ಮಾರನಾದನು; ಮಯನೆಂಬವನು ಕಂಚುಗಾರನಾದನು; ತ್ವಷ್ಟನೆಂಬವನು ಬಡಿಗಿಯಾದನು; ಶಿಲ್ಪಿ ಯೆಂಬವನು ಕಲ್ಲುಕುಟ್ಟಿಗನಾದನು. ಇವರು ತಮಗೆ ವೇದವನ್ನು ಕಲಿಯುವ ಅಧಿಕಾರವೂ ಷಟ್ಕರ್ಮಗಳ ಅಧಿಕಾರವೂ ಇರುತ್ತದೆಂದು ಹೇಳುತ್ತಾರೆ. ಗಂಡಸರು ಜನಿವಾರವನ್ನು ಲಗ್ನದ ಪೂರ್ವ ದಿವಸ ಹಾಕಿಕೊಳ್ಳುವರು; ಹೆಂಗಸರಿಗೆ ಕಚ್ಚೆ ಕುಂಕುಮಗಳಿವೆ. ಇವರ ಜನ್ಮಭಾಷೆ ಕನ್ನಡ. ಇವರು ಮಾಂಸ ತಿನ್ನುವದಿಲ್ಲ; ಆದರೆ ಕದ್ದು ಮುಚ್ಚಿ ಶರೆ ಕುಡಿಯುತ್ತಾರೆ. ಇವರಿಗೆ ಸ್ವಂತ ಜಾತಿಯ ಉಪಾಧ್ಯಾಯರಿರುತ್ತಾರೆ; ಲಗ್ನಾದಿ ಕಾರ್ಯಗಳಲ್ಲಿ ಬ್ರಾಹ್ಮಣರನ್ನು ಕರಿಯುವದಿಲ್ಲ. ಇವರ ಗುರು ಸನ್ಯಾಸಿಯು, ಅವನನ್ನು ಜಾತಿಯವರೇ ನೇಮಿಸುತ್ತಾರೆ. ಇವರ ದೇವತೆಗಳು ಶಿವ, ಯೆಲ್ಲಮ್ಮ, ಖಂಡೋಬ, ಕಾಳಮ್ಮ. ವಿಧವೆಗಳ ಲಗ್ನವಾಗುತ್ತದೆ, ಹೆಣಗಳನ್ನು ಸುಡುವರು. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಕಮ್ಮಾರರು.**

ಧಾರವಾಡದ ಕಮ್ಮಾರರಾದರೂ ಕನ್ನಡಿಗರೆ. ಶಿರಸಂಗಿಯ ಕಾಳಮ್ಮ ಇವರ ಕುಲದೇವರು. ಇವರು ಮದ್ಯ ಮಾಂಸಗಳನ್ನು ನಿರಾತಂಕವಾಗಿ ತಕ್ಕೊಳ್ಳುವರು. ಹೆಂಗಸರಿಗೆ ಕಚ್ಚೆ ಇಲ್ಲ; ಬ್ರಾಹ್ಮಣರೇ ಇವರ ಉಪಾಧ್ಯಾಯರು. ಇವರಿಗೆ ಸ್ವತಂತ್ರ ಗುರು

ವಿಲ್ಲ; ಶಂಕರಾಚಾರ್ಯರ್ನೇ ಇವರ ಗುರುವೆಂದು ತೋರುತ್ತದೆ. ಲಗ್ನದ ಹೊರ್ತು ಯಾವ ಸಂಸ್ಕಾರವೂ ಇವರೊಳಗೆ ಆಗುವದಿಲ್ಲ. ಹೆಣವನ್ನು ಸುಡುವರು, ವಿಧವೆಗಳ ಲಗ್ನ ಮಾಡುವರು. ಇವರ ಮಕ್ಕಳಲ್ಲಿ ಅಲ್ಪ ಸ್ವಲ್ಪ ಜನರು ಶಾಲೆಗೆ ಹೋಗುತ್ತಾರೆ.

ಕಾನಡಾ ಜಿಲ್ಲೆಯ ಕಮ್ಮಾರರಲ್ಲಿ ಕನ್ನಡಿಗರೂ ಕೊಂಕಣಿಗರೂ ಬೇರೆ ಬೇರೆ. ಇವರಿಗೆ ಆಚಾರಿಗಳೆಂದೆನ್ನುವರು. ಈ ಯೆರಡೂ ಜಾತಿಗಳು ಪಂಚಾಳರವೇ ಯೆಂದು ತೋರುತ್ತದೆ. (ಪಂಚಾಳರ ವರ್ಣನೆ ನೋಡು.)

**ಕುಂಬಾರರು.**

**ಕುಂಬಾರರು.**—ಇವರಲ್ಲಿ ಲಿಂಗವಂತರು, ಲಾಡರು, ಮಹಾರಾಷ್ಟ್ರರು, ತೆಲಗರು, ಪರದೇಶಿಗಳು, ಕನ್ನಡಿಗರು, ಕೊಂಕಣಿಗರು, ಯೆಂದು ಯೇಳು ಬೇರೆ ಬೇರೆ ಜಾತಿಗಳುಂಟು. ಇವರು ಮನೆಯಲ್ಲಿ ತಮ್ಮ ತಮ್ಮ ಭಾಷೆಗಳನ್ನು ಪರರ ಕೂಡ ಕನ್ನಡ ಭಾಷೆಯನ್ನು ಆಡುತ್ತಾರೆ. ವಿಜಾಪುರ ಜಿಲ್ಲೆಯಲ್ಲಿ ಲಿಂಗವಂತರು, ಲಾಡರು, ಮಹಾರಾಷ್ಟ್ರರು, ತೆಲಗರು, ಪರದೇಶಿಗಳು, ಈ ಐದು ಜಾತಿಗಳಿವೆ. ಬೆಳಗಾವೀ ಜಿಲ್ಲೆಯಲ್ಲಿ ಲಿಂಗವಂತರು, ಮಹಾರಾಷ್ಟ್ರರು, ಪರದೇಶಿಗಳು, ಈ ಮೂರು ಜಾತಿಗಳಿವೆ. ಧಾರವಾಡ ಜಿಲ್ಲೆಯಲ್ಲಿ ಲಿಂಗವಂತರು ಮಾತ್ರ ಇರುತ್ತಾರೆ. ಕಾನಡಾ ಜಿಲ್ಲೆಯಲ್ಲಿ ಲಿಂಗವಂತರು, ಕನ್ನಡಿಗರು, ಕೊಂಕಣಿಗರು, ಈ ಮೂರು ಜಾತಿಗಳಿವೆ. ಇವರೆಲ್ಲರು ತಿಗರಿಯ ಮೇಲೆ ಗಡಿಗೆ, ಮುಂತಾದ ಮಣ್ಣಿನ ಪಾತ್ರೆಗಳನ್ನು ಮಾಡುತ್ತಾರೆ. ಗ್ರಾಮ ದೇವತೆ ಮುಂತಾದ ದೇವತೆಗಳ ಮೂರ್ತಿಗಳನ್ನು ಮಾಡ ಬೇಕಾಗಿದ್ದಾಗ ಇವರೇ ಮಾಡ ತಕ್ಕವರು. ಹಳ್ಳಿಗಳ ಬಲೂತಿದಾರರಲ್ಲಿ ವೊಬ್ಬ ಕುಂಬಾರನಿಗೆ ಬಲೂತಿ ಇರುತ್ತದೆ.

ಲಿಂಗವಂತ ಕುಂಬಾರರೆಲ್ಲರು ಪಂಚಮಸಾಲಿಯವರಿರುತ್ತಾರೆ. (ಲಿಂಗವಂತರಲ್ಲಿ ಇವರ ನಡಾವಳಿಗಳನ್ನು ನೋಡು.) ಇವರು ಕತ್ತೆಗಳನ್ನು ಸಾಕುತ್ತಾರೆ. ಬೆಳಗಾವೀ ಜಿಲ್ಲೆಯಲ್ಲಿ ಹೆಣಗಳನ್ನು ಬಂಡಿಯ ಮೇಲೆ ಕೂಡ್ರಿಸಿಕೊಂಡು ವೊಯ್ಯುತ್ತಾರೆ.

ಲಾಡ ಜಾತಿಯವರ ಧರ್ಮ, ನಡಾವಳಿ, ಮುಂತಾದವುಗಳನ್ನು ಆ ಜಾತಿಯ ಸದರಿನ ಕೆಳಗೆ ವಿವರಿಸಿದ್ದೇವೆ.

ಮಹಾರಾಷ್ಟ್ರರು, ಪರದೇಶಿಗಳು, ತೆಲಗರು, ಈ ಮೂವರು ತಮ್ಮ ಜಾತಿಯ ಹೊರ್ತು ಬೇರೆ ಯಾವ ಜಾತಿಯಲ್ಲಿಯೂ ಶರೀರ ಸಂಬಂಧ ಮಾಡುವದಿಲ್ಲ; ಲಿಂಗವಂತ ಕುಂಬಾರರಲ್ಲಿ ಮಾತ್ರ ಅಲ್ಲದೆ ತಮ್ಮ ಜಾತಿಯ ಹೊರ್ತು ಬೇರೆ ಯಾವ ಜಾತಿಯವರಲ್ಲಿಯೂ ಉಣ್ಣುವದಿಲ್ಲ. ಮಹಾರಾಷ್ಟ್ರರು ಸಣ್ಣ ಡೇರೆಗಳನ್ನು ಕತ್ತೆಯ ಮೇಲೆ ಹೇರಿಕೊಂಡು ಊರೂರು ತಿರುಗುತ್ತಾರೆ; ಮದ್ಯ ಮಾಂಸಗಳನ್ನು ತಕ್ಕೊಳ್ಳುತ್ತಾರೆ. ಆದರೆ ಪರದೇಶಿಗಳೂ ತೆಲಗರೂ ಮದ್ಯ ಮಾಂಸಗಳನ್ನು ತಿನ್ನುವದಿಲ್ಲ. ಮೂರೂ ಜಾತಿಗಳ ಗಂಡಸರ ಉಡಿಗೆಗಳು ವೊಕ್ಕಲಿಗರ ಹಾಗಿರುತ್ತವೆ; ಹೆಂಗಸರು ಕಚ್ಚೆ ಹಾಕುವದಿಲ್ಲ, ಕುಂಕುಮ ಹಚ್ಚುವದಿಲ್ಲ; ಅವರು ಮನೆಗೆಲಸವಲ್ಲದೆ, ಕೆಸರು ಹದ ಮಾಡುವದಕ್ಕೋಸ್ಕರ ಅದರೊಳಗೆ ಕೂಡಿಸಲಿಕ್ಕೆ ಕುದುರೇ ಲದ್ದಿಯನ್ನು ಹುಡುಕಿ ತರುತ್ತಾರೆ. ಮೂರೂ

ಜಾತಿಗಳಲ್ಲಿ ವಿಧವೆಗಳ ಲಗ್ನವಾಗುತ್ತದೆ, ಹೆಣ್ಣು ಮಕ್ಕಳ ಲಗ್ನವು ನೆರೆಯುವ ಪೂರ್ವದಲ್ಲಿ ಆಗಲಿಕ್ಕೆ ಬೇಕು. ಕೆಲವರು ಹೆಣಗಳನ್ನು ಸುಡುವರು, ಕೆಲವರು ಹುಗಿಯುವರು. ಇವರು ಶಿವ, ಲಕ್ಷ್ಮಿ, ಹನುಮಂತ, ರವಳನಾಥ, ಜೋತೀಬಾ, ಯೆಲ್ಲಮ್ಮ, ಈ ದೇವತೆಗಳಿಗೆ ನಡಕೊಳ್ಳುವರು; ಬ್ರಾಹ್ಮಣರನ್ನು ಲಗ್ನ ಮುಂತಾದ ಕಾರ್ಯಗಳಿಗೆ ಕರಿಯುವರು.

ಕಾನಡಾ ಜಿಲ್ಲೆಯ ಲಿಂಗವಂತರಲ್ಲದಂಥ ಕನ್ನಡ ಕುಂಬಾರರು ದುರ್ಗೆ, ಹಳದೀಪುರದ ಮಡಕದೇವಿ, ಜಟ್ಟಿಗ, ಈ ದೇವತೆಗಳನ್ನು ಪೂಜಿಸುವರು, ಮಾಂಸ ಮೀನುಗಳನ್ನು ತಿನ್ನುವರು, ಆದರೆ ಮದ್ಯ ಮುಟ್ಟುವದಿಲ್ಲ. ಗಂಡಸರು ಲಂಗೋಟೀ ಹಾಕುವರು, ಹೆಂಗಸರು ಕಚ್ಚೇ ಹಾಕುವದಿಲ್ಲ, ಕುಪ್ಪಸ ತೊಡುವರು. ಈ ಕುಂಬಾರರು ಗುಡಿಗಳಲ್ಲಿ ಹಲಕೆಲವು ಸೇವೆಯನ್ನು ಮಾಡುವರು. ಆ ಸೇವೆ ಮಾಡುವವರಿಗೆ ಗುಂಗರೆಂದೆನ್ನುವರು. ಭಾಂಡವೆಂಬ ಶಿಡಿ ಆಡುವ ಜಾತ್ರೆಯಲ್ಲಿ ಕಲಶದ ಪೂಜೆಯನ್ನೂ, ಅದನ್ನು ಹೊರುವ ಕೆಲಸವನ್ನೂ ಕುಂಬಾರರೇ ಮಾಡ ತಕ್ಕವರು. ಒಂದು ತಾಮ್ರದ ಇಲ್ಲವೆ ಬೆಳ್ಳಿಯ ಗಿಂಡಿಯೊಳಗೆ ನೀರು ತುಂಬಿ, ಬಾಯಿಗೆ ಮಾವಿನ ಯೆಲೆಗಳನ್ನು ಹಾಕಿ, ಮೇಲೆ ತೆಂಗಿನಕಾಯಿ ಇಟ್ಟರೆ ಅದು ಕಲಶವಾಯಿತು. ಆದರೆ ಆ ಗಿಂಡಿಯ ಮೇಲೆ ವೊಂದು ಪ್ರಕಾರದ ಆಕೃತಿಯನ್ನು ಬರಿದ ಹೊರ್ತು ಕಲಶದ ಸ್ವರೂಪವು ಪೂರ್ಣವಾಗುವದಿಲ್ಲ. ಇವರಲ್ಲಿ ಲಗ್ನ ಮುಂತಾದ ಕಾರ್ಯಗಳನ್ನು ಹೈಗರು ಮಾಡಿಸುತ್ತಾರೆ; ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ; ಹೆಣಗಳನ್ನು ಸುಡುವರು, ಇಲ್ಲವೆ ಹುಗಿಯುವರು. ಇವರಿಗೆ ಬಡತನ ಬಹಳ.

ಕೊಂಕಣೀ ಕುಂಬಾರರು ಕಾರವಾಡ ಯಲ್ಲಾಪುರ ತಾಲೂಕುಗಳಲ್ಲಿ ವಿಶೇಷವಾಗಿ ಇರುತ್ತಾರೆ. ಇವರು ಗೋಮಂತಕ ಶೀಮೆಯಿಂದ ಬಂದವರು. ಕನ್ನಡಿಗರಂತೆ ಇವರಾದರೂ ಗುಡಿಗಳಲ್ಲಿ ಸೇವೆಯನ್ನು ಮಾಡುವರು. ಕೆಲವು ಗುಡಿಗಳಲ್ಲಿ ಇವರ ಹೊರ್ತು ಬೇರೆ ಯಾರ ಅಧಿಕಾರವೂ ಇರುವದಿಲ್ಲ. ಇವರ ಉಡಿಗೆ ಆಹಾರಗಳು ಕನ್ನಡಿಗರಂತೆ; ಆದರೆ ಹೆಂಗಸರು ಕಚ್ಚೇ ಹಾಕುವರು. ಇವರು ತಮ್ಮ ಮನೆಗಳಲ್ಲಿ ಪುರಿಸನೆಂಬ ದೇವತೆಯ ಹಿತ್ತಾಳಿಯ ಮೂರ್ತಿಯನ್ನು ಪೂಜಿಸುವರು. ಇವರಲ್ಲಿ ವಿಧವೆಗಳಿಗೆ ಲಗ್ನವಿಲ್ಲ, ಹೆಣಗಳನ್ನು ಸುಡುವರು. ಇವರು ಕನ್ನಡಿಗರಿಗಿಂತ ಹೆಚ್ಚು ಸುಖಿಯಾಗಿದ್ದಾರೆ.

ಕಾನಡಾ ಜಿಲ್ಲೆಯಲ್ಲಿ ಬ್ರಾಹ್ಮಣರ ಪ್ರವೇಶವಾಗುವ ಪೂರ್ವದಲ್ಲಿ ಕುಂಬಾರರೇ ಲಗ್ನ ಉತ್ಸವ, ಮರಣ, ಮುಂತಾದ ಕಾರ್ಯಗಳಲ್ಲಿ ಧರ್ಮದ ಕೃತ್ಯಗಳನ್ನು ಮಾಡುವರೆಂದು ತೋರುತ್ತದೆ. ಈಗ್ಯೂ ಗ್ರಾಮ ದೇವತೆಗಳ ಗುಡಿಗಳಲ್ಲಿ ಕುಂಬಾರರು ಹಲಕೆಲವು ಕೆಲಸಗಳನ್ನು ಮಾಡುತ್ತಿರುತ್ತಾರೆ. ಮರಣ ಕಾಲದಲ್ಲಿ "ಕುಂಬಾರ ಕ್ರಿಯೆ" ಯೆಂಬ ಧರ್ಮ ಕೃತ್ಯವನ್ನು ಮಾಡುವ ನಡಾವಳಿಯು ಕೆಲವು ಜಾತಿಗಳಲ್ಲಿ ಇರುತ್ತದೆ. "ಕುಂಬಾರ ಗೇಣಿ" ಯೆಂಬ ಬಾಬು ಕೆಲವು ಕಡೆಯಲ್ಲಿ ಕುಂಬಾರರಿಗೆ ಈಗ್ಯೂ ನಡಿಯುತ್ತದೆ. ಜಾತ್ರೆ, ಉತ್ಸವ, ಮುಂತಾದ ಕಾರ್ಯಗಳಲ್ಲಿ ಗ್ರಾಮ ದೇವತೆಯ ಮೂರ್ತಿಯನ್ನು ಕುಂಬಾರರೇ ಮಾಡಿ ಕೊಡುವರು. "ವಾಗ್ರೊ" ಯೆಂಬ ದೇವತೆಯ ಮೂರ್ತಿಯು ಹುಲಿಯ ಹಾಗೆ ಇರುತ್ತದೆ.

ಧಾರವಾಡದ ಜಿಲ್ಲೆಯಲ್ಲಿ ಯಾವದಾದರೂ ಹಳ್ಳಿಯಲ್ಲಿ ಪಟಕೀ ಜೇನೆ ಬಂದರೆ, ಆ ಹಳ್ಳಿಯ ಬಲೂತಿದಾರನಾದ ಕುಂಬಾರನು ದುರ್ಗೆಯನ್ನು ಅಧಿಕಾರಿಗಳ ಅಪ್ಪಣೆಯಿಂದ ಮಾಡುತ್ತಾನೆ. ಊರ ದೈವದವರು ಉತ್ಸವದಿಂದ ಅವನ ಮನೆಗೆ ಹೋಗಿ, ಕುಂಬಾರನ ಮೇಲೆ ಆ ಮೂರ್ತಿಯನ್ನು ಹೊರಿಸಿಕೊಂಡು ಊರ ಹೊರಗೆ ವೊಯಿದು ಕೂಡ್ರಿಸುತ್ತಾರೆ. ಅದನ್ನು ಮೊದಲು ಕುಂಬಾರನು ಪೂಜಿಸಿದ ಬಳಿಕ ಊರವರು ಪೂಜಿಸುವರು. ಆ ಮೂರ್ತಿಗೆ ತೋರಿಸಿದ ನೈವೇದ್ಯವನ್ನು ಊರವರು ತಿನ್ನುವರು.

**ಸೊನ್ನಗಾರರು.**

ಸೊನ್ನಗಾರರು.— ನಾಲ್ಕೂ ಜಿಲ್ಲೆಗಳಲ್ಲಿ ಪಂಚಾಳ ಜಾತಿಯವರೇ ಮುಖ್ಯ. ಇವರಲ್ಲಿ ಕೆಲವರು ಕಾಳಮ್ಮನಲ್ಲದೆ ಬನಶಂಕರಿಗೂ ಮಹಾದೇವನಿಗೂ ನಡಕೊಳ್ಳುವರು. ಕೆಲವರು ಓದ ಬರಿಯ ಬಲ್ಲರು. (ಪಂಚಾಳ ಜಾತಿಯ ವರ್ಣನೆ ನೋಡು).

ಬೆಳಗಾವೀ ಜಿಲ್ಲೆಯ ಪಶ್ಚಿಮ ಭಾಗದಲ್ಲಿಯೂ ಕಾನಡಾ ಜಿಲ್ಲೆಯ ಘಟ್ಟದ ಕೆಳಗೂ ಕೊಂಕಣೀ ಜಾತಿಯ ಸೊನ್ನಗಾರರುಂಟು. ಇವರು ತಾವೂ ಪಂಚಾಳರೆಂದು ಹೇಳುತ್ತಾರೆ; ಆದರೆ ಮೀನ ತಿನ್ನುವರು, ಶರೆ ಕುಡಿಯುವರು. ಕೊಂಕಣೀ ಸೊನ್ನಗಾರರು ಸುರೂಪಿಗಳು, ಕೊಂಕಣೀ ಬ್ರಾಹ್ಮಣರಂತೆ ಉಡಿಗೆಗಳನ್ನು ಧರಿಸುವರು. ಸಾಷ್ಟೀಕರರೆಂಬ ಬ್ರಾಹ್ಮಣರಿಗಿಂತ ತಾವು ಶ್ರೇಷ್ಠರೆಂತಲೂ, ಸಾಷ್ಟೀಕರರು ಮೀನ ಬಲೆಗಾರರೆಂತಲೂ ಇವರು ವಾದಿಸುತ್ತಾರೆ. ಈ ಕಾರಣದಿಂದ ಸಾಷ್ಟೀಕರರಿಗೂ ಇವರಿಗೂ ಬಹು ಕಾಲದಿಂದ ವ್ಯಾಜ್ಯವು ನಡಿದದೆ. ಈ ಸಂಬಂಧದ ದಂತಕಥೆ ಹ್ಯಾಗಂದರೆ— ಒಬ್ಬ ಮುದುಕನಿಗೆ ಇಬ್ಬರು ಮಕ್ಕಳಿದ್ದರು. ಅವರು ತಮ್ಮ ತಮ್ಮೊಳಗೆ ಜಗಳಾಡುತ್ತಿದ್ದ ಕಾರಣ ತಂದೆಯು ಅವರನ್ನು ಬೇರೆ ಬೇರೆ ಇಡುವದೊಂದು ಹಂಚಿಕೇ ತೆಗಿದನು. ಅವನು ಯೆರಡು ಪೆಟ್ಟಿಗೆಗಳನ್ನು ತಂದು, ಮಕ್ಕಳಿಗೆ ತಿಳಿಯದ ಹಾಗೆ ವೊಂದು ಪೆಟ್ಟಿಗೆಯೊಳಗೆ ಮನೆಯೊಳಗಿನ ಧಾನ್ಯಗಳನ್ನೆಲ್ಲ, ಮತ್ತೊಂದರೊಳಗೆ ಬೆಳ್ಳಿ ಬಂಗಾರಗಳನ್ನು ಹಾಕಿ ಯೆರಡೂ ಮುಚ್ಚಿ ಮಕ್ಕಳನ್ನು ಕರಿದು, ನೀವಿಬ್ಬರೂ ವೊಂದೊಂದು ಪೆಟ್ಟಿಗೆಯನ್ನು ಆರಿಸಿಕೊಳ್ಳಿರೆಂದು ಹೇಳಿದನು. ಧಾನ್ಯದ ಪೆಟ್ಟಿಗೆಯನ್ನು ತಕ್ಕೊಂಡವನ ವಂಶದವರೇ ಸಾಷ್ಟೀಕರರಾದರು, ಬೆಳ್ಳಿ ಬಂಗಾರಗಳ ಪೆಟ್ಟಿಗೆಯನ್ನು ತಕ್ಕೊಂಡವನ ವಂಶದವರೇ ಸೊನ್ನಗಾರರಾದರು. ಈ ಸೊನ್ನಗಾರರ ಕುಲ ದೇವತೆಗಳು ಮ್ಹಾಳಸಾ, ಶಾಂತಾದುರ್ಗಾ, ಕಳ್ಳಿ, ನಾಗೇಶ, ಯೆಂಬವು ಗೋವೆಯ ಶೀಮೆಯಲ್ಲಿ ಇರುತ್ತವೆ. ಆದರೆ ಇವರು ವೈಷ್ಣವರು; ಉಡಪಿಯ ವ್ಯಾಸರಾಯ ಮಠದ ಸ್ವಾಮಿಯು ಇವರ ಗುರು. ಇವರ ನಡಾವಳಿಗಳು ಹೆಚ್ಚು ಕಡಿಮೆ ಪಂಚಾಳರ ನಡಾವಳಿಗಳನ್ನು ಹೋಲುತ್ತವೆ.

**ಉಪ್ಪಾರರು.**

ಉಪ್ಪಾರರು.— ಇವರು ಪೂರ್ವದಲ್ಲಿ ಉಪ್ಪು ಮಾಡುತ್ತಿದ್ದ ಕಾರಣ ಇವರಿಗೆ ಉಪ್ಪಾರರೆಂಬ ಹೆಸರು ಬಂದದೆ. ಆ ಕೆಲಸವನ್ನು ಈಗ ಸರಕಾರದವರು ಆಕ್ರಮಿಸಿದ್ದ ಕಾರಣ ಉಪ್ಪಾರರು ಮುಖ್ಯವಾಗಿ ಮನೆ ಕಟ್ಟೋಣ, ಕಲ್ಲು ಕಟಯೋಣ, ಈ ಕೆಲಸಗಳನ್ನು ಕೈಕೊಂಡಿದ್ದಾರೆ. ಕೆಲವರು

ಹೊಲ ಮಾಡುವರು. ಬೆಳಗಾವೀ ಜಿಲ್ಲೆಯ ಉಪ್ಪಾರರು ಬಹುತರ ಕಲ್ಲು ಕಟಯುವ ಹೋರೆಯನ್ನೇ ಮಾಡುತ್ತಾರೆ. ಗೋಡೆ ಕಟ್ಟುವ ಹೋರೆಯನ್ನು ಈ ಜಿಲ್ಲೆಯಲ್ಲಿ ವಿಶೇಷವಾಗಿ ಮುಸಲ್ಮಾನರು ಮಾಡುತ್ತಾರೆಂದು ತೋರುತ್ತದೆ.

ಉಪ್ಪಾರರು ಯೆಲ್ಲ ಕಡೆಯಲ್ಲಿ ಕನ್ನಡ ಭಾಷೆಯನ್ನೇ ಆಡುತ್ತಾರೆ. ವಿಜಾಪುರ ಜಿಲ್ಲೆಯಲ್ಲಿ ಕೆಲವರು ತಲೆಯ ಮೇಲೆ ಚಂಡಿಕೆ ಕಾಯುವದಿಲ್ಲ; ಉಳಿದವರೆಲ್ಲ ಚಂಡಿಕೆ ಕಾಯುತ್ತಾರೆ. ಸಾಧಾರಣ ಶೂದ್ರರಂತೆ ಉಪ್ಪಾರರ ಉಡಿಗೆಗಳಿರುತ್ತವೆ. ಹೆಂಗಸರು ಕಚ್ಚೇ ಹಾಕುವದಿಲ್ಲ. ಇವರಲ್ಲಿ ಮಲಿನತನ ಬಹಳ. ಇವರು ಹೆಣ್ಣು ಮಕ್ಕಳ ಲಗ್ನವನ್ನು ಚಿಕ್ಕಂದಿನಲ್ಲಿ ಮಾಡುವರು; ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ. ವಿಜಾಪುರ ಜಿಲ್ಲೆಯ ಉಪ್ಪಾರರು ಜಾದು, ಮಂತ್ರ, ತಂತ್ರಗಳನ್ನು ಬಹಳ ನಂಬುವರು. ಉಪ್ಪಾರರು ಯೆಲ್ಲಮ್ಮ, ಮಾರುತಿ, ತುಳಜಾಭವಾನಿ, ವೆಂಕಟರಮಣ, ಈ ದೇವರಿಗೆ ನಡಕೊಳ್ಳುವರು. ಇವರ ಗುರು ತ್ರಿಕಂ ತಾತಾಚಾರ್ಯನೆಂಬ ಓಷ್ಟವ ಜಾತಿಯ ಸನ್ಯಾಸಿಯು ಹಂಪಿಯಲ್ಲಿ ಇರುತ್ತಾನೆ. ಇವನು ಸಂಚಾರಕ್ಕೆ ಬಂದಾಗ ಶಿಷ್ಯರಿಗೆಲ್ಲ ಮುದ್ರೆಯನ್ನು ಕಾಸಿ ವೊತ್ತುತ್ತಾನೆಂದು ಹೇಳುತ್ತಾರೆ. ಬೇಕಾದವರು ಈ ಗುರುವಿನ ಕೈಯಿಂದ ಜನಿವಾರವನ್ನು ಬೇಡಿಕೊಂಡು ಹಾಕಿಕೊಳ್ಳುತ್ತಾರೆ. ವಿಜಾಪುರ ಜಿಲ್ಲೆಯ ಉಪ್ಪಾರರ ಉಪಾಧ್ಯಾಯರು ಓಷ್ಟವರೇ ಇರುತ್ತಾರೆ. ಆದರೂ ಅವರು ಬ್ರಾಹ್ಮಣರಿಗೆ ಮಾನ ಕೊಡುತ್ತಾರೆ. ಬೆಳಗಾವಿ, ಧಾರವಾಡ ಜಿಲ್ಲೆಗಳ ಉಪ್ಪಾರರ ಉಪಾಧ್ಯಾಯರು ಬ್ರಾಹ್ಮಣರು. ಎಲ್ಲ ಕಡೆಯಲ್ಲಿ ಉಪ್ಪಾರರು ಮದ್ಯ ಮಾಂಸಗಳನ್ನು ನಿರಾತಂಕವಾಗಿ ತಕ್ಕೊಳ್ಳುತ್ತಾರೆ. ಕೆಲವರು ಹೆಣಗಳನ್ನು ಸುಡುವರು; ಉಳಿದವರು ಹುಗಿಯುವರು. ಧಾರವಾಡ ಜಿಲ್ಲೆಯ ಉಪ್ಪಾರರು ತಾವು ಸಾಗರ ಚಕ್ರವರ್ತಿಗಳೆಂದು ಹೇಳುವರು. ಇವರಲ್ಲಿ ತ್ರಿನಾಮಧಾರಿ, ಪಾಕುತ್ರ, ಯೆಂಬೆರಡು ಜಾತಿಗಳಿಗೆ. ಅವರವರೊಳಗೆ ಶರೀರ ಸಂಬಂಧವಾಗುವದಿಲ್ಲ.

ಕಾನಡಾ ಜಿಲ್ಲೆಯ ಉಪ್ಪಾರರಲ್ಲಿಯೂ ಯೆರಡು ಜಾತಿಗಳಿವೆ. ಹಲ್ಯಾಳ ತಾಲೂಕಿನಲ್ಲಿ ವಾಸಿಸುವವರು, ಬೆಳಗಾವಿ ಜಿಲ್ಲೆಯಿಂದ ಬಂದವರು. ಇವರ ಧರ್ಮ, ನಡಾವಳಿ, ಆಹಾರ, ಉಡಿಗೆಗಳೆಲ್ಲ ಮೇಲೆ ವಿವರಿಸಿದಂತೆ. ಉಳಿದ ಕಡೆಯಲ್ಲಿ ವಾಸಿಸುವವರು ಮೈಸೂರು ಶೀಮೆಯಿಂದ ಬಂದವರು. ಇವರು ಊರ ಹೊರಬದಿಯಲ್ಲಿ ವಾಸಿಸುತ್ತಾರೆ. ಇವರ ಉಡಿಗೆ ಲಂಗೋಟ, ಕಂಬಳಿ; ಇವರು ಮಾಂಸ ತಿನ್ನುವರು, ಶರೆ ಕುಡಿಯಲಿಕ್ಕೆ ಬಹಳ ಮೆಚ್ಚುವರು. ಹೆಂಗಸರು ಹಾಲ್ವಕ್ಕೀ ವೊಕ್ಕಲಿಗರಂತೆ ಕೊರಳಲ್ಲಿ ಕರೆಮಣಿಗಳ ಜೂಡೆಗಳನ್ನು ಹಾಕಿ ಕೊಳ್ಳುವರು. ಇವರು ದುರ್ಗೆ, ಹುಲಿದೇವ, ಹನುಮಂತ, ವೆಂಕಟರಮಣ, ಮುಂತಾದ ದೇವತೆಗಳಿಗೆ ನಡಕೊಳ್ಳುವರು; ಲಗ್ನ ಮುಂತಾದ ಕಾರ್ಯಗಳಲ್ಲಿ ಕೆಲವರು ಅಯ್ಯಗಳನ್ನು ಕೆಲವರು ಹೈಗ ಬ್ರಾಹ್ಮಣರನ್ನು ಕರಿಯುವರು. ಇವರಲ್ಲಿ ಹೆಣ್ಣು ಮಕ್ಕಳ ಲಗ್ನವನ್ನು ನೆರಿದ ಬಳಿಕ ಮಾಡ ಬಹುದು; ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ. ಈ ಉಪ್ಪಾರರು ಉಪ್ಪು ಮಾಡುವ ಹೋರೆ ತಪ್ಪಿದ ಬಳಿಕ ಮೇಲಿನ ಉಪ್ಪಾರರಂತೆ ಮನೆ ಕಟ್ಟುವ, ಕಲ್ಲು ಹೊಡಿಯುವ ಹೋರೆಗಳನ್ನೇ ಮಾಡುತ್ತಿದ್ದರು. ಅದರಲ್ಲಿ

ಹೊಟ್ಟೆ ತುಂಬದ ಹಾಗಾದ ಬಳಿಕ ಶಿಂಪು ಸುಟ್ಟು ಸುಣ್ಣ ಮಾಡುವ ಹೋರೆಯನ್ನು ಕೈಕೊಂಡಿದ್ದಾರೆ. ಇವರ ಸುಣ್ಣದ ಆವಿಗೆಗಳು ಊರ ಹೊರಗೆ ಇರುತ್ತವೆ. ಸುಮಾರು ೮ ಫೂಟಿನ ವ್ಯಾಸವುಳ್ಳ ವರ್ತುಳಾಕಾರವಾದ ನೆಲದ ಸುತ್ತು ಮುತ್ತು ಜಿಗುಟಾದ ಕೆಂಪು ಅರ್ಲಿನ ಗೋಡೆಯನ್ನು ೪ ಫೂಟು ಯೆತ್ತರವಾಗಿ ಕಟ್ಟಿ ನಾಲ್ಕು ದಿಕ್ಕುಗಳಲ್ಲಿ ಬುಡದಲ್ಲಿ ಖಿಂಡಿಗಳನ್ನು ಬಿಡುವರು. ಈ ಆವಿಗೆಯಲ್ಲಿ ಮೊದಲು ಕಟ್ಟಿಗೆಗಳನ್ನು ಹರವಿ, ಮೇಲೆ ಶಿಂಪುಗಳನ್ನೂ ಕಟ್ಟಿಗೆಗಳನ್ನೂ ಸರಿಬೆರಿಕೆಯಿಂದ ತುಂಬಿ, ನಾಲ್ಕೂ ಖಿಂಡಿಗಳಲ್ಲಿ ಬೆಂಕಿಯನ್ನು ಹಾಕುವರು. ಅದು ೨, ೩, ದಿವಸ ಉರಿದು ನುಂದಿದ ಬಳಿಕ ಶಿಂಪುಗಳ ಮೇಲೆ ನೀರು ಸಿಡಿಸಲು, ಅವು ಪೊಡಿದು ಸುಣ್ಣವಾಗುವದು. ಈ ಸುಣ್ಣವು ಇಮಾರತಿನ ಕೆಲಸಕ್ಕೂ ತಿನ್ನಲಿಕ್ಕೂ ಬರುತ್ತದೆ.

**ಶಿಂಪಿಗರು.**

ಶಿಂಪಿಗರು.—ಇವರಲ್ಲಿ ಕನ್ನಡಿಗರು, ಮಹಾರಾಷ್ಟ್ರರು, ಯೆಂಬೆರಡು ವರ್ಗಗಳಿವೆ. ಕನ್ನಡಿಗರು ಲಿಂಗವಂತರು. ಅವರಲ್ಲಿ ಬಹು ಜನರು ಈಗ ನೂಲಿಗೆ ಬಣ್ಣ ಕೊಡುವ ಹೋರೆಯನ್ನು ಮಾಡುತ್ತಾರೆ. ಇವರ ಧರ್ಮ, ಉಡಿಗೆ, ಆಹಾರ, ನಡಾವಳಿ, ಇವೆಲ್ಲ ಲಿಂಗವಂತರವೇ.

ಮಹಾರಾಷ್ಟ್ರ ಶಿಂಪಿಗರಿಗೆ ನಾಮದೇವ ಶಿಂಪಿಗರೆನ್ನುವರು. ಇವರ ಕುಲದವನೊಬ್ಬ ನಾಮದೇವನೆಂಬ ಸತ್ಪುರುಷನು ಪಂಢರಪುರದಲ್ಲಿ ಸನ್ ೧೨೭೦ರ ಸುಮಾರಿನಲ್ಲಿ ಇದ್ದನು. ಅವನು ತಮ್ಮವನೆಂಬ ಅಭಿಮಾನದಿಂದ ಈಗಿನ ಮಹಾರಾಷ್ಟ್ರ ಶಿಂಪಿಗರು ಅವನ ಹೆಸರು ಹೇಳುತ್ತಾರೆ. ಇವರಲ್ಲಿ ನಾಮದೇವ, ಏಕತಾಟೆ, ಗೋಪಾಳಕಾಲಿ ಅಥವಾ ರಂಗಾರಿ ಯೆಂಬ ಮೂರು ವಳಭೇದಗಳಿವೆ. ಏಕತಾಟೆ ಯೆಂಬ ಜಾತಿಯು ಬೆಳಗಾವೀ ಜಿಲ್ಲೆಯಲ್ಲಿ ಮಾತ್ರ ಇರುವಂತೆ ತೋರುತ್ತದೆ. ವಿಜಾಪುರದ ನಾಮದೇವ ಶಿಂಪಿಗಳಿಗೂ ರಂಗಾರಿಗಳಿಗೂ ಶರೀರ ಸಂಬಂಧವಾಗುತ್ತದೆ; ಬೆಳಗಾವಿ ಧಾರವಾಡಗಳಲ್ಲಿ ಆಗುವದಿಲ್ಲ. ಕಾನಡಾ ಜಿಲ್ಲೆಯಲ್ಲಿ ಈ ಯೆರಡು ವರ್ಗಗಳು ಬೇರೆ ಬೇರೆ ಯೆಂದು ಯೆಣಿಸಲ್ಪಡುತ್ತವೆ. ಅದರೂ ಊಟದ ಬಳಿಕೆಯಾಗುತ್ತದೆ. ನಾಮದೇವ ಶಿಂಪಿಗಳಿಗೆ ಆತ್ಮ ಋಷಿ, ಪಿಂಪಳ ಋಷಿ, ಶೃಂಗ ಋಷಿ ಯೆಂಬ ಗೋತ್ರಗಳಿವೆ. ಇವರ ಗುರುಗಳಿಬ್ಬರು. ಬೋಧಲೇ ಬಾವಾ ಯೆಂಬವನು ಧಾಮಣಗಾವದಲ್ಲಿ ಇರುತ್ತಾನೆ; ತುಳಜಾಹರಣ ಅಥವಾ ಕಾನಫಾಟೆ ಬಾವಾ ಯೆಂಬವನು ತುಳಜಾಪುರದಲ್ಲಿ ಇರುತ್ತಾನೆ. ಈ ಗುರುಗಳು ಶಿಷ್ಯರಿಗೆ ಉಪದೇಶ ಕೊಡುತ್ತಿರುತ್ತಾರೆ. ಆದರೆ ಈ ಶಿಂಪಿಗರ ಉಪಾಧ್ಯಾಯರು ಬ್ರಾಹ್ಮಣರೇ. ಇವರು ತುಳಜಾ ಭವಾನಿ, ಜೋತೀಬಾ, ಖಂಡೋಬಾ, ಯೆಲ್ಲಮ್ಮ, ಈ ದೇವತೆಗಳಿಗೆ ನಡಕೊಳ್ಳುತ್ತಿದ್ದಾಗ್ಯೂ, ಮುಖ್ಯ ದೇವತೆ ಪಂಢರಪುರದ ವಿಠೋಬನೆಂದೆಣಿಸುತ್ತಾರೆ. ಆಷಾಢ ಕಾರ್ತಿಕ ಮಾಸಗಳಲ್ಲಿ ಬಹು ಜನ ಶಿಂಪಿಗರು ಪಂಢರಪುರಕ್ಕೆ ಹೋಗುವರು. ಪ್ರತಿ ದ್ವಾದಶಿಗೆ ಪಂಢರಪುರಕ್ಕೆ ಹೋಗುವವರೂ ಕೆಲವರುಂಟು. ಅವರಿಗೆ "ವಾರಕರಿ" ಯೆಂದೆನ್ನುತ್ತಾರೆ. ಪಂಢರಪುರಕ್ಕೆ ಹೋಗಿ ಬಂದವನು ಕೊರಳಿಲ್ಲಿ ತುಳಸೀ ಮಾಲೆ ಹಾಕುವನು. ತುಳಸೀ ಮಾಲೆ ಹಾಕಿದವರು ಅನ್ಯಜಾತಿಯ

ವರಿದ್ದಾಗ್ಯೂ ಭೇದವೆಣಿಸದೆ ವೊಬ್ಬರಿಗೊಬ್ಬರು ಕಾಲು ಮುಟ್ಟಿ ನಮಸ್ಕಾರ ಮಾಡುವರು. ನಾಮದೇವ ಶಿಂಪಿಗರು ಮದ್ಯ ಮಾಂಸಗಳನ್ನು ನಿರಾತಂಕವಾಗಿ ತಕ್ಕೊಳ್ಳುತ್ತಾರೆ. ಕೆಲವರಿಗೆ ಗಾಂಜಿ, ಭಂಗಿ, ಅಫೂ, ಇವುಗಳ ಚಟ ಇರುತ್ತದೆ. ಈ ಶಿಂಪಿಗರು ಬ್ರಾಹ್ಮಣರಲ್ಲಿಯೂ, ಲಿಂಗವಂತರು, ರಜಪೂತರು, ಪಟವೇಗಾರರು, ಮುಂತಾದ ಉತ್ತಮ ಕುಲಗಳಲ್ಲಿಯೂ ಊಟ ಮಾಡುತ್ತಾರೆ. ಕೆಲವರು ಬ್ರಾಹ್ಮಣರ ಹಾಗೆ ದೋತ್ರ ಉಡುವರು; ಆದರೆ ಬಹು ಜನರು ೫ ವೊಳದ ಫಡಿಕಿಯನ್ನುಡುವರು. ಈ ಶಿಂಪಿಗರು ಹಣೆಯ ಮೇಲೆ ಸ್ನಾನ ಮಾಡಿದ ಬಳಿಕ ಬಿಳಿ ಗಂಧದ ಬೊಟ್ಟು ಇಡುವರು; ಹೆಂಗಸರು ಕುಂಕುಮ ಹಚ್ಚುವರು, ಆದರೆ ಕಚ್ಚೆ ಹಾಕುವದಿಲ್ಲ. ಶಿಂಪಿಗರು ವಾಡಿಕೆಯಾಗಿ ಅಪ್ರಮಾಣಿಕರಿರುತ್ತಾರೆ. ಗಿರಾಕಿಗಳ ಅರಿವೆಯನ್ನು ಕದಿಯುವ ಹಕ್ಕು ತಮಗಿರುತ್ತದೆಂದು ಇವರಲ್ಲಿ ಬಹು ಜನರು ಯೆಣಿಸುತ್ತಾರೆ. ಲಗ್ನ ಮುಗಿದ ಬಳಿಕ ಮದಿಮಗನು ಅತ್ತೇ ಮನೆಯ ದೇವರ ಮೂರ್ತಿಯನ್ನು ಕದ್ದು ಕೊಂಡು ಬರುತ್ತಾನೆ. ಬಳಿಕ ಮದಿಮಗಳು ಗಂಡಸಿನ ಸೋಗು ಹಾಕಿ ಕೊಂಡು ಗಂಡನ ಮನೆಗೆ ಹೋಗಿ ಅವನಿಗೆ ಹೇಳಿಕೊಂಡು ಅವನನ್ನು ತನ್ನ ಮನೆಗೆ ಕರೆಕೊಂಡು ಹೋಗುತ್ತಾಳೆ. ಈ ಶಿಂಪಿಗರಲ್ಲಿ ಹೆಣ್ಣು ಮಕ್ಕಳ ಲಗ್ನವು ಚಿಕ್ಕಂದಿನಲ್ಲಿ ಆಗಲಿಕ್ಕೆ ಬೇಕು; ವಿಧವೆಯ ಲಗ್ನವನ್ನು ವೊಮ್ಮೆ ಮಾತ್ರ ಮಾಡುವರು. ಇವರು ಹೆಣಗಳನ್ನು ಸುಡುವರು. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

ರಂಗಾರಿಗಳು ಮುಂಡಾಸ, ಶಲ್ಲೆ, ಫಡಿಕಿ, ಮುಂತಾದ ಬಿಳಿ ವಸ್ತ್ರಕ್ಕೆ ಬಣ್ಣ ಕೊಡುವರು. ಕುಸಂಬೀ ಬಣ್ಣವನ್ನು ಕುಸಿಬೇ ಹೂವಿನಿಂದ ಮಾಡುವರು. ಕುಸಿಬೇ ಹೂವಿನ ಪುಡಿ ಮಾಡಿ, ಅದರೊಳಗೆ ಹದಿನಾರು ಶೇರಿಗೆ ವೊಂದು ಶೇರಿನಂತೆ ಬಾಳೀ ಬೂದಿಯನ್ನಾಗಲಿ ಹಪ್ಪಳಕಾರವನ್ನಾಗಲಿ ಬೆರಿಸಿ ಸಾವಕಾಶವಾಗಿ ಸೋಸುವರು. ಇಷ್ಟು ಹೂವಿಗೆ ಸುಮಾರು ೧೦೦ ಲಿಂಬೀ ಕಾಯಿಗಳ ರಸವು ಪಕ್ಕಾ ಬಣ್ಣ ಮಾಡಲಿಕ್ಕೆ ಬೇಕಾಗುತ್ತದೆ. ಬಿಳೇ ಅರಿವೆಗೆ ಕುಸಂಬೀ ಬಣ್ಣ ಕೊಡ ಬೇಕಾದರೆ ವೊದಲು ಅದನ್ನು ಅರಿಶಿಣದ ನೀರೊಳಗೆ ಯೆದ್ದಿ ವೊಣಗಿಸಿ, ಕುಸಂಬೀ ಬಣ್ಣದೊಳಗೆ ಯೆದ್ದುವರು. ದಿಪ್ಪಾದ ಬಣ್ಣವನ್ನು ಕೊಡ್ರಿಸ ಬೇಕಾದರೆ ಯೆರಡು ಮೂರು ಸಾರಿ ಬಣ್ಣದೊಳಗೆ ಯೆದ್ದ ಬೇಕಾಗುತ್ತದೆ. ಬಣ್ಣ ಯೆದ್ದಿದ ವಸ್ತ್ರವನ್ನು ಲಿಂಬೀ ರಸದೊಳಗೆ ನೀರು ಕೂಡಿಸಿ ಅದರೊಳಗೆ ಯೆದ್ದಿದ ಬಳಿಕ ಬಣ್ಣಕ್ಕೆ ಮಿಂಚು ಹುಟ್ಟುತ್ತದೆ. ಊದೀ ಬಣ್ಣ ಕೊಡ ಬೇಕಾಗಿದ್ದಲ್ಲಿ, ಮೊದಲು ತಿಳುವಾಗಿ ನೀಲಿಯ ಬಣ್ಣವನ್ನು ಕೂಡ್ರಿಸಿ, ಅದರ ಮೇಲೆ ಕುಸಂಬಿಯನ್ನು ಯೆದ್ದುವರು. ಗುಲಾಬೀ ಬಣ್ಣ ಕೊಡ ಬೇಕಾದರೆ ಕುಸಂಬಿಯೊಳಗೆ ನೀರು ಕೂಡಿಸಿ ತಿಳುವು ಮಾಡಿ, ಅದರೊಳಗೆ ಲಿಂಬೀ ರಸ ಬೆರಿಸಿ ಬಿಳಿ ಅರಿವೆಯನ್ನೆದ್ದುವರು. ಕೇಶರದ ಬಣ್ಣಕ್ಕೆ ಮೊದಲು ದಟ್ಟಾಗಿ ಅರಿಶಿಣದ ಬಣ್ಣವನ್ನು ಕೂಡ್ರಿಸಿ, ಅದರ ಮೇಲೆ ಕುಸಂಬಿಯನ್ನು ತಿಳುವಾಗಿ ಯೆದ್ದುವರು. ಹಳದೀ ಬಣ್ಣಕ್ಕೆ, ಅರಿಶಿಣದೊಳಗೆ ಹಪ್ಪಳಕಾರ ಕೂಡಿಸಿ ಮಾಡಿದ ಬಣ್ಣದೊಳಗೆ ಬಿಳಿ ಅರಿವೆಯನ್ನು ಕೆಲವು ವೇಳೆ ನೆನಿ ಇಟ್ಟು, ಆ ಮೇಲೆ ಲಿಂಬೀ ಹುಳಿಯ ನೀರೊಳಗೆ ಯೆದ್ದಿ ಹಿಂಡುವರು. ಈ ಪ್ರಕಾರ ಯೆರಡು ಮೂರು ಸಾರಿ ಮಾಡಲಾಗಿ

ಬೇಕಾದಷ್ಟು ದಿಪ್ಪಾದ ಹಳದೀ ಬಣ್ಣ ಕೂಡುತ್ತದೆ. ಹಸರು ಬಣ್ಣಕ್ಕೆ, ಅರಿಶಿಣದ ಬಣ್ಣದೊಳಗೆ ತಕ್ಕ ಪ್ರಮಾಣದಿಂದ ನೀಲಿಯನ್ನು ಬೆರಿಸಿ ಲಿಂಬೀ ಹುಳಿ ಹಿಂಡಿ ಬಿಳಿ ಅರಿವೆಯನ್ನು ಯೆದ್ದುವರು.

ಜೀನಗಾರರು.—ಕಾನಡಾ ಜಿಲ್ಲೆಯ ಜೀನಗಾರರು ಕನ್ನಡ ಭಾಷೆಯನ್ನಾಡುತ್ತಾರೆ, ಉಳಿದ ಮೂರು ಜಿಲ್ಲೆಗಳಲ್ಲಿಯವರು ಮಹಾರಾಷ್ಟ್ರರು. ಇವರಿಗೆ ಚಿತ್ರಗಾರರೆಂತಲೂ ಅನ್ನುವರು. ಆದರೆ ಕಾನಡಾ ಜಿಲ್ಲೆಯಲ್ಲಿ ಜೀನಗಾರರು ಬೇರೆ, ಚಿತ್ರಗಾರರು ಬೇರೆ ಇರುತ್ತಾರೆ. ಅವರಿಗೂ ಅವರಿಗೂ ಊಟದ ಬಳಿಕೆಯಾಗುವದಿಲ್ಲ. ಜೀನಗಾರರ ಮುಖ್ಯ ಹೋರೆಗಳು ಜೀನ ಹೊಲಿಯೋಣ, ಕಿಟ್ಟದ ಗೊಂಬೆಗಳನ್ನು ಮಾಡೋಣ, ಬಣ್ಣ ಕೊಡೋಣ, ಬುಕ್ಕು ಹೊಲಿಯೋಣ, ಅರಿವೆ ಹೊಲಿಯೋಣ, ಬಡಿಗಿತನ, ಇತ್ಯಾದಿ. ಗೋಕಾವಿಯ ಜೀನಗಾರರು ಮಾಡುವ ಬಣ್ಣದ ಹಣ್ಣು ಕಾಯಿಗಳೂ ದೇಶನೂರ ಜೀನಗಾರರು ಮಾಡುವ ಗೊಂಬೆಗಳು ಮುಂತಾದ ಚಿತ್ರಗಳೂ ಬಹಳ ಹೆಸರಾಗಿರುತ್ತವೆ. ಜೀನಗಾರರು ಚರ್ಮ ಹೊಲಿಯುವ ಕೆಲಸ ಮಾಡುತ್ತಿರುವ ಕಾರಣ ಇವರಿಗೆ ಚರ್ಮಕಾರರೆಂತಲೂ ಅನ್ನುವರು. ಇವರ ಕುಲದೇವತೆಯು ಮೈಸೂರು ಶೀಮೆಯಲ್ಲಿ ಇರುವ ನಿಮಿಷಾದೇವಿಯು. ಆದರೆ ಜೀನಗಾರರೆಲ್ಲರು ಮಹಾರಾಷ್ಟ್ರ ಭಾಷೆಯಾಡುತ್ತಿದ್ದು ಮೈಸೂರು ಶೀಮೆಯಲ್ಲಿಯ ದೇವಿಯ ಭಕ್ತರಾಗಿರುವದು ಅಸಂಗತವಾಗಿ ತೋರುತ್ತದೆ. ಇವರಲ್ಲಿ ಕೆಲವರು ಐದು ಮೊಳದ ಘಡಿಕಿಯನ್ನು ಉಡುವರು, ಕೆಲವರು ಬ್ರಾಹ್ಮಣರ ಹಾಗೆ ಧೋತ್ರ ಉಡುವರು. ಎಲ್ಲರು ಜನಿವಾರ ಹಾಕಿ ಕೊಂಡು ಸ್ನಾನ ಮಾಡಿದ ಬಳಿಕ ಹಣೆಗೆ ಗಂಧದ ಬೊಟ್ಟು ಇಲ್ಲವೆ ನಾಮ ಹಚ್ಚಿ ಕೊಳ್ಳುವರು. ಹೆಂಗಸರಿಗೆ ಕಚ್ಚೆ ಕುಂಕುಮಗಳುಂಟು. ಜೀನಗಾರರ ಉಪಾಧ್ಯಾಯರು ಬ್ರಾಹ್ಮಣರೇ; ಗುರು ಶಂಕರಾಚಾರ್ಯನು. ಆದರೆ ಜಾತಿಯ ವ್ಯಾಜ್ಯಗಳನ್ನು ಇವರ ಜಾತಿಯ ಪಂಚರೇ ತೀರಿಸುವರು. ಇವರು ಮದ್ಯ ಮಾಂಸಗಳನ್ನು ತಕ್ಕೊಳ್ಳುವರು; ಧಾರವಾಡ ಜಿಲ್ಲೆಯವರು ತಕ್ಕೊಳ್ಳುವದಿಲ್ಲೆಂದು ಹೇಳುತ್ತಾರೆ. ಇವರಲ್ಲಿ ಹೆಣ್ಣು ಮಕ್ಕಳ ಲಗ್ನವನ್ನು ಚಿಕ್ಕಂದಿನಲ್ಲಿ ಮಾಡುವರು, ವಿಧವೆಗಳಿಗೆ ಲಗ್ನವಿಲ್ಲ, ಹೆಣಗಳನ್ನು ಸುಡುವರು. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ. ಜೀನಗಾರರಲ್ಲಿ ಕೆಲವರು ಓದ ಬರಿಯ ಬಲ್ಲವರಿರುತ್ತಾರೆ.

**ಜೀನಗಾರರು.**

ಮೇದಾರರು ಇಲ್ಲವೆ ಬುರುಡರು.—ಇವರು ದೊಡ್ಡ ಹಳ್ಳಿಗಳಲ್ಲಿಯೂ ಪಟ್ಟಣಗಳಲ್ಲಿಯೂ ವಾಸಿಸುತ್ತಾರೆ. ಕಾನಡಾ ಜಿಲ್ಲೆಯಲ್ಲಿ ಘಟ್ಟದ ಮೇಲೆ ಮಾತ್ರ ಇರುತ್ತಾರೆ. ಇವರ ಜನ್ಮಭಾಷೆ ಕನ್ನಡ. ಇವರು ತಮ್ಮ ಜಾತಿಯ ಪೀಠಿಕೆಯನ್ನು ಹೇಳುವದು ಹ್ಯಾಗಂದರೆ, ಕ್ಯಾತಯ್ಯನೆಂಬ ಲಿಂಗವಂತನು ತಮ್ಮ ಮೂಲ ಪುರುಷನಾದಾಗ್ಯೂ, ಬರಗಾಲದಲ್ಲಿ ಶೂದ್ರರ ಮನೆಯಲ್ಲಿ ಉಂಡು ಜೀವ ಬದುಕಿಸಿದ ಕಾರಣ ತಾವು ಜಾತಿ ಭ್ರಷ್ಟರಾದರು. ಇವರಲ್ಲಿ ಯಾರಾದರೂ ಸತ್ತರೆ ಈಗ್ಯೂ ಅಯ್ಯನ ಚರಣ ತೀರ್ಥವನ್ನು ಹೆಣದ ಬಾಯೊಳಗೆ ಹಾಕುವರು.

**ಮೇದಾರರು.**

ಕಾನಡಾ ಜಿಲ್ಲೆಯಲ್ಲಿ ಅಯ್ಯಗಳೇ ಇವರ ಉಪಾಧ್ಯಾಯತನದ ಕೆಲಸ ಮಾಡುತ್ತಾರೆ. ಬೇರೆ ಕಡೆಯಲ್ಲಿ ಮೇದಾರರು ಬ್ರಾಹ್ಮಣರನ್ನು ಕರಿಯುವರು. ಕಲಬುರ್ಗೆಯ ಹತ್ತಿರ ಗೋಬಾರವೆಂಬಲ್ಲಿ ಇರುವ ಹುಲತಿಗರಾಯನೆಂಬ ದೇವತೆಯು ಮೇದಾರರ ಕುಲದೇವತೆ. ಇವರ ಗುರುವಾದರೂ ಕುರುಬ ಜಾತಿಯವನು ಅದೇ ಊರಲ್ಲಿ ಇರುತ್ತಾನೆ. ಕೆಲವರು ಹುಬ್ಬಳ್ಳಿಯ ಗುರು ಸಿದ್ಧಸ್ವಾಮಿ ಯೆಂಬವನ ಶಿಷ್ಯರಾಗಿರುತ್ತಾರೆ. ಮೇದಾರರು ಶಿವ, ಬಸವ, ಯಲ್ಲಮ್ಮ ಮುಂತಾದ ದೇವತೆಗಳಿಗೂ ನಡಕೊಳ್ಳುವರು, ಮದ್ಯ ಮಾಂಸ ತಕ್ಕೊಳ್ಳುವರು; ಹೆಣ್ಣು ಮಕ್ಕಳು ನೆರಿದ ಬಳಿಕ ಸಹ ಲಗ್ನ ಮಾಡುವರು; ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ; ಹೆಣಗಳನ್ನು ಹುಗಿಯುವರು. ಇವರ ಜಾತಿಯ ಗೌಡ, ಚವಗ, ಯೆಂಬ ಪಂಚರು ಜಾತಿಯ ನ್ಯಾಯ ತೀರಿಸುವರು. ಇವರ ಮಕ್ಕಳು ಶಾಲೆಗೆ ಹೋಗುವದು ಅಪರೂಪ.

**ಕಾಸಾರರು.**

ಕಾಸಾರರು.— ತಾಮ್ರ ಹಿತ್ತಾಳಿಗಳ ಪಾತ್ರೆಗಳನ್ನು ಮಾರುವ ಜೈನರಿಗೆ ಕಾಸಾರರೆಂತಲೂ, ಬೋಗಾರರೆಂತಲೂ, ತಾಂಬಟಗಾರರೆಂತಲೂ ಅನ್ನುವರು. ಇವರು ಬಹುತರ ನಾಲ್ಕೂ ಜಿಲ್ಲೆಗಳಲ್ಲಿ ಇರುತ್ತಾರೆ. ಇವರ ನಡಾವಳಿಗಳೆಲ್ಲ ಜೈನರವೇ.

**ಕುಂಚುಗಾರರು.**

ಕುಂಚುಗಾರರು.— ಇವರು ಪಂಚಾಳ ಜಾತಿಯವರು. ಬೆಳಗಾವೀ ಜಿಲ್ಲೆಯಲ್ಲಿ ಓತಾರಿಯೆಂಬ ಜಾತಿಯವರು ಯೆರಕು ಹೊಯಿದು ಮೂರ್ತಿಗಳನ್ನೂ ಕಂಚಿನ ಕಾಲುಂಗರು ಮುಂತಾದವುಗಳನ್ನೂ ಮಾಡುತ್ತಾರೆ. ಇವರು ಮಹಾರಾಷ್ಟ್ರರು; ಮದ್ಯ ಮಾಂಸಗಳನ್ನು ತಕ್ಕೊಳ್ಳುವರು. ಮರಾಠೀ ಕುಣಬಿಗಳ ಹಾಗೆ ಇವರ ಉಡಿಗೆಗಳಿರುತ್ತವೆ. ಹೆಂಗಸರು ಕಚ್ಚೇ ಹಾಕುವದಿಲ್ಲ. ಹ್ಮಸೋಬಾ, ಕಾಳಮ್ಮ, ಯೆಲ್ಲಮ್ಮ, ಮಾರುತಿ, ಈ ದೇವತೆಗಳಿಗೆ ಇವರು ನಡಕೊಳ್ಳುವರು. ಬ್ರಾಹ್ಮಣರೇ ಇವರ ಉಪಾಧ್ಯಾಯರು, ಗುರು ಶಂಕೇಶ್ವರದ ಸ್ವಾಮಿಯು. ಇವರು ಹೆಣಗಳನ್ನು ಹುಗಿಯುವರು, ವಿಧವೆಗಳ ಲಗ್ನ ಮಾಡುವರು. ಇವರ ಮಕ್ಕಳು ಶಾಲೆಗೆ ಹೋಗುವದು ಅಪರೂಪ.

**ನೀಲಗಾರರು.**

ನೀಲಗಾರರು.— ಇವರು ಲಿಂಗವಂತರಾದ್ದರಿಂದ ಇವರ ಆಹಾರ, ಆಚಾರ, ವ್ಯವಹಾರಗಳೆಲ್ಲ ಲಿಂಗವಂತರವೇ ಇರುತ್ತವೆ. ನೂಲಿಗೆ ನೀಲಿಯ ಬಣ್ಣ ಕೊಡುವದೇ ಇವರ ಮುಖ್ಯ ಹೋರೆಯು. ನೀಲಿಯೊಳಗೆ ಸುಣ್ಣ, ಬಾಳೀ ಬೂದಿ, ಹೊನ್ನವರೇ ಬೀಜ, ಇವನ್ನು ಕೂಡಿಸಿ ಬಣ್ಣ ಮಾಡುತ್ತಾರೆ. ನಾಗಲಿಕರೆಂಬ ಲಿಂಗವಂತರಾದರೂ ನೂಲಿಗೆ ಬಣ್ಣ ಕೊಡುವ ಹೋರೆಯನ್ನೇ ಮಾಡುತ್ತಾರೆ. ಇವರು ಮೊದಲು ಶಿಂಪಿಗರ ಕುಲದವರು. ಈಗ ಲಿಂಗವಂತರಾಗಿದ್ದಾಗ್ಯೂ ದೀಕ್ಷೆ ತಕ್ಕೊಳ್ಳುವದಿಲ್ಲ, ಲಿಂಗವಂತರಂತೆ ತಲೆಯನ್ನು ಪೂರಾ ಬೋಳಿಸಿಕೊಳ್ಳದೆ ಚಂಡಿಕೆಯನ್ನು ಕಾದುಕೊಳ್ಳುತ್ತಾರೆ. ಉಳಿದ ನಡಾವಳಿ ಮುಂತಾದವುಗಳೆಲ್ಲ ಲಿಂಗವಂತರಂತೆ.

ಗುಡಿಗಾರರು.— ಇವರು ಪಂಚಾಳ ಜಾತಿಯವರು. ಕಾನಡಾ ಜಿಲ್ಲೆಯಲ್ಲಿ ಮಾತ್ರ ಇರುತ್ತಾರೆ. ಇವರಲ್ಲಿ ಯೆರಡು ವರ್ಗಗಳಿರುತ್ತವೆಂದು ತೋರುತ್ತದೆ. ಗುಡಿಗಾ

**ಗುಡಿಗಾರರು.**

ರರಿಗೆ ಚಿತಾರರೆಂತಲೂ ಅನ್ನುವರು. ಗಾಡದ ಮೇಲೆ ಕಟ್ಟಿಗೆಯ ಸಾಮಾನುಗಳನ್ನು ಮಾಡುವದೇ ಇವರ ಮುಖ್ಯ ಹೋರೆಯು. ಇದಲ್ಲದೆ ಚಂದನ, ಆನೇ ಹಲ್ಲು, ಕರೆ ಕಟ್ಟಿಗೆಗಳಿಂದ ಮಾಡಿದ ಪೆಟ್ಟಿಗೆ, ಮೇಜು, ಬೀಸಣಿಕೆ, ಮುಂತಾದ ಸಾಮಾನುಗಳ ಮೇಲೆ ಬಹು ಸುಂದರವಾದ ಚಿತ್ರಗಳನ್ನು ಕೊರಿಯುವರು. ಈ ಚಿತ್ರದ ಸಾಮಾನುಗಳನ್ನು ಯುರೋಪಿಯನ್ ಜನರು ಬಹಳ ಹಣ ಕೊಟ್ಟು ಪ್ರೀತಿಯಿಂದ ಕೊಳ್ಳುತ್ತಾರೆ. ಆದ್ದರಿಂದ ಗುಡಿಗಾರರ ಕೌಶಲ್ಯಕ್ಕೆ ತೇಜವಿರುತ್ತದೆ. ಆದರೆ ಇವರು ಬಹಳ ಜಡ್ಡಿನ ಕುಲ, ಶರೆ ಬಡಕರು. ಇಷ್ಟು ಹಣ ದೊರಿದಾಗ್ಯೂ ಇವರ ಬಡತನ ಹಿಂಗುವದಿಲ್ಲ. ಮುಂಗಡ ಹಣ ಕೊಟ್ಟ ಹೊರ್ತು ಇವರು ಬಹುತರ ಚಿತ್ರದ ಸಾಮಾನುಗಳನ್ನು ಮಾಡುವದೇ ಇಲ್ಲ. ಎಲ್ಲ ಜಾತಿಗಳಿಗೆ ಲಗ್ನದಲ್ಲಿ ಬೆಂಡಿನ ಬಾಸಿಂಗಗಳನ್ನು ಗುಡಿಗಾರರೇ ಮಾಡಿ ಕೊಡುತ್ತಾರೆ; ಆದರೆ ಪಾತರದವರಿಗೆ ಮಾತ್ರ ಕೊಡುವದಿಲ್ಲ. ಯಾಕಂದರೆ ಇವರ ಲಗ್ನದಲ್ಲಿ ಪಾತರದವರು ಕುಣಿಯಲಿಕ್ಕೆ ಹೋಗುವದಿಲ್ಲ. ಗುಡಿಗಾರರು ಬಣ್ಣದ ಕೆಲಸವನ್ನು ಸಹ ಮಾಡುವರು. ಅದರಿಂದ ಇವರಿಗೆ ಚಿತಾರರೆಂಬ ಹೆಸರು ಯುಕ್ತವಿರುತ್ತದೆ. ಇವರು ಹೈಗ ಬ್ರಾಹ್ಮಣರ ಕೈಯಿಂದ ಲಗ್ನ, ಮುಂಜಿ, ಮುಂತಾದ ಕಾರ್ಯಗಳನ್ನು ಮಾಡಿಸುವರು. ಇವರಲ್ಲಿ ವಿಧವೆಗಳಿಗೆ ಲಗ್ನವಿಲ್ಲ, ಹೆಣ್ಣು ಮಕ್ಕಳ ಲಗ್ನವು ಹತ್ತು ವರ್ಷದ ಪೂರ್ವದಲ್ಲಿ ಆಗಲಿಕ್ಕೆ ಬೇಕು.

**ಬಳೆಗಾರರು.**

ಬಳೆಗಾರರು.— ಇವರು ಗೋಮಂತಕ ಶೀಮೆಯಿಂದ ಬಂದವರು, ಕಾನಡಾ ಜಿಲ್ಲೆಯಲ್ಲಿ ಮಾತ್ರ ಇರುತ್ತಾರೆ; ಕೊಂಕಣೀ ಭಾಷೆಯನ್ನಾಡುವರು. ಇವರಲ್ಲಿ ಮದ್ಯ ಮಾಂಸಗಳಿಗೆ ನಿಷೇಧವಿಲ್ಲ, ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ, ಹೆಣಗಳನ್ನು ಹುಗಿಯುವರು. ಆದರೂ ಇವರು ಜನಿವಾರ ಹಾಕಿಕೊಂಡು ಶೃಂಗೇರಿಯ ಸ್ವಾಮಿಗೆ ಅಂಕಿತರಾಗಿ ನಡಿಯುತ್ತಾರೆ. ಇವರ ನಡಾವಳಿ, ಉಡಿಗೆ, ಮುಂತಾದವುಗಳು ಕೊಂಕಣೀ ಕಮ್ಮಾರರಂತೆ ಇರುತ್ತವೆ. ಇವರಲ್ಲಿ ಕೆಲವರು ಬಳೆಗಳನ್ನು ಮಾಡುವರು. ಆದರೆ ವೊಳಗಡೆಯಲ್ಲಿ ವಿಲಾಯತಿಯಿಂದಲೂ ಚೀನಾ ದೇಶದಿಂದಲೂ ಮೇಲಾದ ಬಳೆಗಳು ಬಂದು ಕಡಿಮೆ ಬೆಲೆಗೆ ದೊರಿಯುತ್ತಿರುವ ಕಾರಣ ಇವರ ಹೋರೆಯು ಕುಂದುತ್ತ ನಡಿದದೆ.

**ಕಲ್ಲು ಕುಟ್ಟಿಗರು.**

ಕಲ್ಲು ಕುಟ್ಟಿಗರು (ಒಡ್ಡರು).— ವಿಜಾಪುರ, ಬೆಳಗಾವಿ, ಧಾರವಾಡ, ಈ ಮೂರು ಜಿಲ್ಲೆಗಳಲ್ಲಿ ಪಂಚಾಳರು ಕಲ್ಲಿನ ಮೂರ್ತಿ ಮುಂತಾದವುಗಳನ್ನು ಮಾಡುತ್ತಾರೆ. ಅವರ ಹೊರ್ತು ಕಲ್ಲು ಕಟಿಯುವ ಒಡ್ಡರು ಯೆಲ್ಲ ಜಿಲ್ಲೆಗಳಲ್ಲಿ ಇರುತ್ತಾರೆ. ಇವರಿಗೆ ಕಲ್ಲೊಡ್ಡರೆಂದೆನ್ನುವರು. ಇವರು ತೆಲಗು ದೇಶದಿಂದ ಬಂದವರು; ತೆಲಗು, ಕನ್ನಡ ಭಾಷೆಗಳನ್ನಾಡುವರು. ಗಂಡಸರು ಧೋತ್ರ ಉಡುವರು, ಇಲ್ಲವೆ ಲಂಗೋಟ ಹಾಕುವರು. ಹೆಂಗಸರಿಗೆ ಕುಬ್ಬಸವಿಲ್ಲ, ಕಚ್ಚೆ ಇಲ್ಲ. ಒಡ್ಡರು ಮುಖ್ಯವಾಗಿ ಹನುಮಂತನಿಗೆ ನಡಕೊಳ್ಳುವರು; ಆದರೆ ಯಾವ ಕಾರ್ಯಕ್ಕೂ ಬ್ರಾಹ್ಮಣರನ್ನು ಕರಿಯುವದಿಲ್ಲ. ಹೆಣ್ಣು ಮಕ್ಕಳ ಲಗ್ನ ಬೇಕಾದಾಗ ಮಾಡ

ಬಹುದು, ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ, ಹೆಣಗಳನ್ನು ಹುಗಿಯುವರು. ಕೆಲಸ ದೊರಿಯದಿದ್ದಾಗ ಇವರು ಭಿಕ್ಷೆ ಬೇಡುವರು.

ಕಾನಡಾ ಜಿಲ್ಲೆಯ ಕಲ್ಲು ಕುಟ್ಟಿಗರ ನಡಾವಳಿಗಳು ಒಡ್ಡರ ನಡಾವಳಿಗಳನ್ನೇ ಹೋಲುತ್ತಿದ್ದಾಗ್ಯೂ ಅವರು ತಾವು ಪಂಚಾಳರೆಂದು ಹೇಳುತ್ತಾರೆ. ಇವರ ಹೆಂಗಸರು ಕುಬ್ಬಸ ತೊಡುವರು.

**ಬೈಲುಗಂಬಾರರು.**

ಬೈಲುಗಂಬಾರರು (ಘಿಸಾಡಿಗಳು).—ಇವರು ಗುಜರಾಥದಿಂದ ಸುಮಾರು ೧೫೦ ವರ್ಷಗಳ ಹಿಂದೆ ಬಂದರೆಂದು ತೋರುತ್ತದೆ. ಮನೆಯಲ್ಲಿ ಕೆಲವರು ಮಹಾರಾಷ್ಟ್ರ ಮಿಶ್ರ ಗುಜರಾಥೀ ಭಾಷೆಯನ್ನಾಡುವರು, ಕೆಲವರು ಮಹಾರಾಷ್ಟ್ರ ಭಾಷೆಯನ್ನಾಡುವರು. ಇವರ ಅಡ್ಡ ಹೆಸರುಗಳು ಚವಾಣ, ಝುಂಡೆ, ಚಿತ್ರಿ, ಪಡವಲಕರ, ಪವಾರ, ಸಾಳುಂಕೀ, ಸುರ್ವೇಸಿ, ಇತ್ಯಾದಿ. ಇವರು ಮುಖ್ಯವಾಗಿ ತುಳಜಾ ಭವಾನೀ, ಖಂಡೋಬ, ಯೆಲ್ಲಮ್ಮ, ಈ ದೇವತೆಗಳಿಗೆ ನಡಕೊಳ್ಳುವರು. ಇವರಲ್ಲಿ ಬಹು ಜನರಿಗೆ ಜನಿವಾರವಿರುತ್ತದೆ. ಮದ್ಯ ಮಾಂಸಗಳಿಗೆ ಅಡ್ಡಿ ಇಲ್ಲ; ಕೆಲವರಿಗೆ ಗಾಂಜಿ, ಭಂಗಿ, ಅಫೀಮು, ಇವುಗಳ ವ್ಯಸನವಿರುತ್ತದೆ. ಬೈಲುಗಂಬಾರರಲ್ಲಿ ಹಲಕೆಲವರು ಗಡ್ಡ ಕಾಯುವರು, ಲಂಗೋಟ ಹಾಕುವರು, ಹೊಲಸು ಬಟ್ಟೆಗಳನ್ನು ಹೊರುವರು, ಆಗಾಗ್ಗೆ ಜಗಳಕ್ಕೆ ನಿಲ್ಲುವರು. ಅದರಿಂದ ಇವರು ಕೀಳು ಕುಲದ ಮುಸಲ್ಮಾನರ ಹಾಗೆ ಕಾಣುತ್ತಾರೆ. ಇವರು ಕುರುಬರ ಮನೆಯಲ್ಲಿ ಊಟ ಮಾಡುವದಿಲ್ಲ. ಲಗ್ನ ಕಾರ್ಯಗಳನ್ನು ಬ್ರಾಹ್ಮಣರು ಮಾಡಿಸುತ್ತಾರೆ. ಆದರೆ ಹೆಣ್ಣು ಮಕ್ಕಳ ಲಗ್ನವನ್ನು ಬೇಕಾದಾಗ ಮಾಡ ಬಹುದು, ವಿಧವೆಗಳ ಲಗ್ನಕ್ಕೂ ಅಡ್ಡಿ ಇಲ್ಲ. ಲಗ್ನದ ಪೂರ್ವದಲ್ಲಿ ಗೊಂದಲವೆಂಬ ತುಳಜಾ ಭವಾನಿಯ ಕೀರ್ತನವು ಆಗಲಿಕ್ಕೆ ಬೇಕು. ಸಾಯುವ ಮನುಷ್ಯನ ಧೋತ್ರ ಕಳಿದು ಅವನಿಗೆ ಚಡ್ಡಿ ಹಾಕುವರು, ಹೆಣಗಳನ್ನು ಸುಟ್ಟು ಹತ್ತು ದಿವಸ ಸೂತಕ ಹಿಡಿಯುವರು. ಇವರಲ್ಲಿ ಉತ್ತರ ಕಾರ್ಯದಲ್ಲಿ ಕ್ಷೌರವಾಗಲಿಕ್ಕೆ ಬೇಕು, ಪಿಂಡದಾನವಾಗಲಿಕ್ಕೆ ಬೇಕು.

ಈ ವರ್ಣನೆಯಿಂದ, ವಿಶೇಷವಾಗಿ ಅಡ್ಡ ಹೆಸರುಗಳ ಮೇಲಿಂದ ಬೈಲುಗಂಬಾರರು ಉತ್ತಮ ಕುಲದ ಮಹಾರಾಷ್ಟ್ರರೆಂದು ಸಿದ್ಧವಾಗುತ್ತದೆ. ಬಡತನದ ಮೂಲಕವಾಗಿ ಜಾತಿಗೆಟ್ಟು ನೀಚ ಸ್ಥಿತಿಯನ್ನು ಇವರು ಹೊಂದಿದಂತೆ ತೋರುತ್ತದೆ. ಮಹಾರಾಷ್ಟ್ರರಾದಾಗ್ಯೂ ಗುಜರಾಥದಿಂದ ಬಂದ ಕಾರಣ ಇವರು ಗುಜರಾಥೀ ಭಾಷೆಯನ್ನಾಡುತ್ತಿರ ಬಹುದು.

ಬೈಲುಗಂಬಾರರು ಹೋರೆ ಹುಡುಕುತ್ತ ಊರಿಂದೂರಿಗೆ ತಿರುಗುತ್ತಿರುತ್ತಾರೆ. ಹೋದಲ್ಲಿ ಊರ ಹೊರಗೆ ಗುಡಾರ ಹೊಡಕೊಂಡು ಹೋರೆ ದೊರಿಯುವ ವರೆಗೆ ನಿಲ್ಲುವರು. ಕಮ್ಮಾರರು ಮಾಡುವ ಯಾವತ್ತು ಹೋರೆಗಳನ್ನು ಬೈಲುಗಂಬಾರರು ಮಾಡುತ್ತಾರೆ. ಇವರಲ್ಲಿ ಹೈನದ ದನವನ್ನು, ವಿಶೇಷವಾಗಿ ಯೆಮ್ಮೆಯನ್ನು, ಕಟ್ಟುವ ನಡಾವಳಿಯು ವಿಶೇಷವಿರುತ್ತದೆ.

ಭೋಂಡವೆ ಯೆಂಬದಿನ್ನೊಂದು ಜಾತಿಯುಂಟು. ಈ ಜಾತಿಯವರು ಕುಲಗೆಟ್ಟಂಥ ಬೈಲುಗಂಬಾರರಿರುತ್ತಾರೆ. ಇವರು ಕಮ್ಮಾರಿಕೆಯ ಹೋರೆ ಬಿಟ್ಟು, ಮಣ್ಣಿನ ಗೊಂಬೆಯ ಮುಂತಾದ ಆಟದ ಸಾಮಾನುಗಳನ್ನು ಮಾಡಿ ಮಾರಿ ಹೊಟ್ಟೆ ತುಂಬಿ ಕೊಳ್ಳುವರು.

# ಕೈಗಾರಿಕೆಯ ಪೊಡವೆಗಳನ್ನು ಹುಟ್ಟಿಸುವ ಜಾತಿಗಳು.

| | | ಧಾರವಾಡ. | | | ಬೆಳಗಾವಿ. | | | ವಿಜಾಪುರ. | | | ಕಾನಡಾ. | | | |
|---|---|---|---|---|---|---|---|---|---|---|---|---|---|---|
| | | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | |
| ೧ | ಸೈಕಾರರು (ಸಾಳಿ) (೧) ಪಡಸಾಳಿ (೨) ಪದಮುಸಾಳಿ ... | ೯೫೯೭ | ೯೩೫೬ | ೧೮೯೫೩ | ೬೫೪೦ | ೬೨೨೭ | ೧೨೭೬೭ | ೫೬೨೧ | ೫೭೬೮ | ೧೧೩೮೯ | | | ೧೩೬ | |
| ೨ | ಗಾಣಿಗರು ........ | ೧೧೨೯೮ | ೧೧೨೦೧ | ೨೨೪೯೯ | ೨೮೧೦ | ೨೯೦೮ | ೫೭೧೮ | ೧೮೪೫೮ | ೧೮೪೯೪ | ೩೬೯೫೨ | ೧೧೫೫ | ೧೦೧೬ | ೨೧೭೧ | |
| ೩ | ಹಟಕಾರರು (ದೇವಾಂಗರು) ಜಾಡರು .. | ೨೯೦೬ | ೨೮೭೨ | ೫೭೭೯ | ೧೮೦೪ | ೧೭೪೩ | ೩೫೪೭ | ೬೩೯೮ | ೬೩೫೩ | ೧೨೭೫೧ | ,, | ,, | ,, | |
| ೪ | ಪಟವೇಗಾರರು....... | ೨೧೦೩ | ೧೯೫೭ | ೪೦೬೦ | ೨೭೦ | ೨೯೩ | ೫೬೩ | ೫೨೯ | ೫೦೦ | ೧೦೨೯ | ೯೩ | ೭೭ | ೧೭೦ | |
| ೫ | ಕುರುವಿನ ಶೆಟ್ಟಿಗಳು.... | ೧೧೭೫ | ೧೧೭೯ | ೨೩೫೪ | ,, | ,, | ,, | ೧೨೦೬ | ೧೨೪೦ | ೨೪೪೬ | ,, | ,, | ,, | |
| ೬ | ಚಿಕ್ಕ ಕುರುವಿನವರು.... | ,, | ,, | ,, | ,, | ,, | ,, | ೧೧೭ | ೧೧೮ | ೨೩೫ | ,, | ,, | ,, | |
| ೭ | ಹಂಡೇವಜೀರರು...... | ,, | ,, | ,, | ,, | ,, | ,, | ೯೯೦ | ೧೦೧೩ | ೨೦೦೩ | ,, | ,, | ,, | |
| ೮ | ಲೋಣಾರರು (ಮಿಾಟಗಾವಡಿಗಳು) .. | ,, | ,, | ,, | ೨೯೯ | ೩೦೯ | ೬೦೮ | ೩೫೦ | ೩೬೬ | ೭೧೬ | | | ೧೦೮* | * ೮ ಮಾಟಗಾವಡಿಗಳು. |
| ೯ | ಬಣ್ಣಗಾರರು ........ | ,, | ,, | ,, | ,, | ,, | ,, | ,, | ,, | ,, | | | ೧೯೦ | |
| ೧೦ | ಶಿವಾಚಾರಿಗಳು ...... | ,, | ,, | ,, | ,, | ,, | ,, | ೩೬ | ೩೨ | ೬೮ | ,, | ,, | ,, | |
| ೧೧ | ಶಿವಜೋಗಿಗಳು ...... | ೧೨ | ೧೦ | ೨೨ | ,, | ,, | ,, | ,, | ,, | ,, | ,, | ,, | ,, | |

ನೇಕಾರರು (ಸಾಳಿ).—ಇವರು ತಾವು ದೇವಾಂಗನೆಂಬ ಋಷಿಯ ವಂಶದವರೆಂದು ಹೇಳುತ್ತಾರೆ. (ಆದರೆ ಕೆಲವರು ಮಾರ್ಕಂಡೆಯನ ವಂಶದವರೆಂದು ಹೇಳುತ್ತಾರೆ.) ದೇವಾಂಗ ಋಷಿಯ ಯೇಳು ಜನ ಹೆಂಡರ ಹೊಟ್ಟೆಯಿಂದ ಹುಟ್ಟಿದವರಿಗೆಲ್ಲ "ಸಾಳಿ," ಅಂದರೆ ಬಟ್ಟೆ ನೆಯ್ಯುವವರು, ಯೆಂಬ ಹೆಸರು ನಡಿಯುತ್ತದೆ. ಇವರಲ್ಲಿ ನಾಲ್ಕು ಮುಖ್ಯ ಭೇದಗಳಿವೆ. ೧ನೇ ವರ್ಗದಲ್ಲಿ ಪದ್ಮಸಾಳಿ, ಸುಕಸಾಳಿ, ಸಕ್ಕುಲಸಾಳಿ, ಯೆಂಬ ಮೂರು ವೊಳ ಜಾತಿಗಳಿವೆ; ಇವರಿಗೆಲ್ಲ ಪಾಡಿಕೆಯಾಗಿ ಸಾಳಿಯೆಂದೆನ್ನುವರು. ೨ನೇ ವರ್ಗದಲ್ಲಿ ದೇವಸಾಳಿಗಳು, ಇಲ್ಲವೆ ದೇವಾಂಗರು, ಯೆಂಬ ಜಾತಿಯೊಂದೇ ಉಂಟು; ಇವರಿಗೆ ಹಟಕಾರರೆನ್ನುವರು. ೩ನೇ ವರ್ಗದಲ್ಲಿ ಪಡಸಾಳಿಗಳು ಇಲ್ಲವೆ ಪಟ್ಟಸಾಳಿಗಳು, ಸಮುಸಾಳಿಗಳೆಂಬ ಲಿಂಗವಂತರು, ಈ ಯೆರಡು ಜಾತಿಗಳಿವೆ. ಶುದ್ಧಸಾಳಿಗಳೆಂಬವರು ನಾಲ್ಕನೇ ವರ್ಗದವರು; ಇವರ ಜಾತಿಯವರು ಧಾರವಾಡ ಜಿಲ್ಲೆಯಲ್ಲಿ ಮಾತ್ರ ಇರುತ್ತಾರೆ. ಈ ಯಾವತ್ತು ವೊಳ ಜಾತಿಗಳಲ್ಲಿ ಪೂರ್ವದಲ್ಲಿ ಶರೀರ ಸಂಬಂಧವಾಗುತ್ತಿತ್ತು. ಆದರೆ ಈಚೆಗೆ ಕೆಲವರು ಲಿಂಗವಂತರಾದ್ದರಿಂದ ವೊಂದು ಜಾತಿಯವರು ಮತ್ತೊಂದು ಜಾತಿಯವರ ಸಂಗಡ ಅನ್ನ ವ್ಯವಹಾರ ಸಹ ಮಾಡುವದಿಲ್ಲ. ಆದರೆ ಧಾರವಾಡ ಜಿಲ್ಲೆಯಲ್ಲಿ ಹಲಕೆಲವು ಜಾತಿಗಳಲ್ಲಿ ಶರೀರ ಸಂಬಂಧವು ಈಗ್ಯೂ ಆಗುತ್ತದೆ. ಇವರೆಲ್ಲರು ಉತ್ತರದಿಂದ ಬಂದವರು, ಮನೆಯಲ್ಲಿ ಕಾಡು ಮಹಾರಾಷ್ಟ್ರ ಭಾಷೆಯನ್ನಾಡುತ್ತಾರೆ. ಧಾರವಾಡ ಜಿಲ್ಲೆಯಲ್ಲಿ ಕೆಲವರು ಮನೆಯಲ್ಲಿ ಸಹ ಕನ್ನಡ ಭಾಷೆಯನ್ನೇ ಆಡುತ್ತಾರೆ. ಅವರ ಅಡ್ಡ ಹೆಸರುಗಳೆಲ್ಲ ಮಹಾರಾಷ್ಟ್ರ ಶಬ್ದಗಳಿರುತ್ತವೆ. ಲಿಂಗವಂತರಲ್ಲದಂಥ ಸಾಳಿಗಳಲ್ಲಿ ಬಹು ಜನರು ಜನಿವಾರ ಹಾಕುವರು; ನಿತ್ಯ ಸ್ನಾನ ಮಾಡಿ ಹಣೆಗೆ ಗಂಧ ಹಚ್ಚುವರು; ಮನೆಯಲ್ಲಿ ತುಳಸೀ ಗಿಡ ಹಚ್ಚುವರು; ಬ್ರಾಹ್ಮಣರನ್ನು ತಮ್ಮಲ್ಲಿಯ ಕಾರ್ಯಕ್ಕೆ ಕರಿಯುವರು. ಆದರೆ ಮದ್ಯ ಮಾಂಸಗಳಿಗೆ ನಿಷೇಧವಿಲ್ಲ. ಕೆಲವರಿಗೆ ಗಾಂಜಿ ಭಂಗಿಗಳ ಚಟಯು ಬಹಳ ಇರುತ್ತದೆ. ಸುಮಾರು ೧೫೦ ವರ್ಷಗಳ ಪೂರ್ವದಲ್ಲಿ ಇವರು ತಾವು ಶಾಲಿಗ್ರಾಮುವನ್ನು ಪೂಜಿಸುತ್ತಿದ್ದರೆಂತಲೂ, ಮದ್ಯ ಮಾಂಸಗಳ ಸಂಪರ್ಕ ಮಾಡುತ್ತಿದ್ದಿಲ್ಲೆಂತಲೂ ಹೇಳುತ್ತಾರೆ. ಇವರ ಉಡಿಗೆಗಳು ಲಿಂಗವಂತರ ಉಡಿಗೆಗಳನ್ನು ಹೋಲುತ್ತವೆ. ಆರೇರು, ಪಟವೇಗಾರರು, ರಂಗಾರಿಗಳು, ಶಿಂಪಿಗರು, ಇವರ ಮನೆಯಲ್ಲಿ ಸಾಳಿಗಳು ಉಣ್ಣುತ್ತಾರೆ; ಆದರೆ ಇವರ ಮನೆಯಲ್ಲಿ ಆ ಜಾತಿಗಳ ಜನ ಬಹುತರ ಉಣ್ಣುವದಿಲ್ಲ. ಇವರ ಗುರುವಾದ ಬೋಧಲೇ ಬಾವಾ ಯೆಂಬ ಗೃಹಸ್ಥಾಶ್ರಮಿಯು ಧಾಮಣಗಾವ (ವಿಜಾಪುರ ಜಿಲ್ಲೆಯಲ್ಲಿ) ಯೆಂಬಲ್ಲಿ ಇರುತ್ತಾನೆ. ಸಾಳಿಗಳು ಯೆಲ್ಲಮ್ಮ, ವೆಂಕಟರಮಣ, ತುಳಜಾ ಭವಾನಿ, ಖಂಡೋಬ, ಈ ದೇವರಿಗೆ ನಡಕೊಳ್ಳುತ್ತಾರೆ. ಪದ್ಮಸಾಳಿಗಳು ಹೆಣಗಳನ್ನು ಸುಡುತ್ತಾರೆ; ಉಳಿದವರಲ್ಲಿ ಕೆಲವರು ಸುಡುವರು, ಕೆಲವರು ಹುಗಿಯುವರು. ಯಾವತ್ತು ಸಾಳಿಗಳಲ್ಲಿ ಹೆಣ್ಣು ಮಕ್ಕಳ ಲಗ್ನವು ಚಿಕ್ಕಂದಿನಲ್ಲಿ ಆಗಲಿಕ್ಕೆ ಬೇಕು; ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ. ಸಾಳಿಗಳ ಹೆಣ್ಣು ಮಕ್ಕಳೂ ಶಾಳೆಗೆ ಹೋಗುತ್ತಾರೆ.

**ನೇಕಾರರು.**

ಪಡಸಾಳಿಗಳು ರೇಶಿಮೆಯ ವಸ್ತ್ರದ ಕೆಲಸ ಮಾಡುವ ಕಾರಣ ಅವರಿಗೆ ಈ ಹೆಸರು (ಪಟ್ಟಸಾಳಿ) ಬಂದದೆ. ಇವರೆಲ್ಲ ಲಿಂಗವಂತರು. ಲಿಂಗವಂತರಾದ ಸಾಳಿಗಳ ಊಟ, ಉಡಿಗೆ, ನಡಾವಳಿಗಳೆಲ್ಲ ಲಿಂಗವಂತರವೇ ಇರುತ್ತವೆ. ಅವರು ಮದ್ಯ ಮಾಂಸಗಳನ್ನು ಮುಟ್ಟುವದಿಲ್ಲ, ಮಲ್ಲಿಕಾರ್ಜುನನಿಗೆ ನಡಕೊಳ್ಳುವರು, ನಿತ್ಯದಲ್ಲಿ ಸ್ನಾನ ಮಾಡುವರು.

ಸಾಳಿಗಳ ಕೆಲವು ಜಾತಿಗಳಲ್ಲಿ ವಿಧವೆಗೆ ವ್ಯಭಿಚಾರದಿಂದ ಗರ್ಭಧಾರಣವಾದರೆ, ಆಕೆ ಹಡಿದ ಬಳಿಕ ಆ ಕೂಸನ್ನು ಯಾರಿಗಾದರೂ ಕೊಡುವ ವರೆಗೆ ಜಾತಿ ಬಾಹ್ಯಳಾಗುತ್ತಾಳೆ. ಆ ಕೂಸಿನ ತಂದೆಯು ಅದನ್ನು ಮನಸಿಗೆ ಬಂದರೆ ತಕ್ಕೊಳ್ಳುವನು. ಆ ಕೂಸನ್ನು ಅನ್ಯಜಾತಿಯವರಿಗೆ ಕೊಟ್ಟರೂ ಅಡ್ಡಿ ಇಲ್ಲ; ಅದು ತಾಯಿಯನ್ನು ಬಿಟ್ಟ ಹೊರ್ತು ಆಕೆ ಜಾತಿಯೊಳಗೆ ಬರುವದಿಲ್ಲ. ಪೂರ್ವದಲ್ಲಿ ಹೆಣ್ಣು ಕೂಸು ಹುಟ್ಟದರೆ ಪಾತರದವರಿಗೆ ಕೊಡುವರು; ಆದರೆ ಈಗ ಹಾಗೆ ಮಾಡುವದಿಲ್ಲ. ಕೂಸನ್ನು ಪರರಿಗೆ ಕೊಟ್ಟ ಬಳಿಕ ಜಾರಿಣಿಯಾದ ವಿಧವೆಯು ಬ್ರಾಹ್ಮಣನ ಚರಣತೀರ್ಥ ತಕ್ಕೊಂಡು ಜಾತಿಗೆ ಊಟ ಹಾಕಿದ ಬಳಿಕ ಶುದ್ಧಳಾಗುತ್ತಾಳೆ. ಪೂರ್ವದಲ್ಲಿ ವಿಧವೆಗಳ ತಲೆ ಬೋಳಿಸುವರು. ಆದರೆ ಈಗ ಐದು ಪಟ್ಟಗಳನ್ನು ತೆಗಿದು ಬೋಳಿಸಿದ ಸಂಸ್ಕಾರ ಮಾಡಿದ ಹಾಗೆ ಮಾಡುತ್ತಾರೆ.

ಸಾಳಿಗಳಲ್ಲಿ ಸುಂತಾಸಾಳಿ ಯೆಂಬದೊಂದು ಜಾತಿಯುಂಟು. ಇವರು ಪೂರ್ವದಲ್ಲಿ ಮುಸಲ್ಮಾನರಾದವರು ಮತ್ತೆ ಹಿಂದೂ ಆದ್ದರಿಂದ ಇವರಿಗೆ ಈ ಹೆಸರು ಬಂದದೆ. ಇವರಲ್ಲಿ ಈಗ್ಯೂ ಸುಂತಿಯ ಮಾಡುವ ನಡಾವಳಿಯುಂಟು. ಇದಲ್ಲದೆ ಇವರ ಬೇರೆ ಯೆಷ್ಟೋ ನಡಾವಳಿಗಳು ಮುಸಲ್ಮಾನರ ನಡಾವಳಿಗಳನ್ನು ಹೋಲುತ್ತವೆ.

ಕಾನಡಾ ಜಿಲ್ಲೆಯ ಪದ್ಮಸಾಳಿಗಳ ಸ್ಥಿತಿ ರೀತಿಗಳು ಸ್ವಲ್ಪ ಭಿನ್ನವಿರುತ್ತವೆ. ಇವರು ಘಟ್ಟದ ಮೇಲಿನ ತಾಲೂಕುಗಳಲ್ಲಿ, ವಿಶೇಷವಾಗಿ ಸಿರಸೀ ತಾಲೂಕಿನಲ್ಲಿ, ವಾಸಿಸುತ್ತಾರೆ. ಇವರು ತಮ್ಮ ಹೆಸರಿನ ಮುಂದೆ "ಶೆಟ್ಟಿ," ಇಲ್ಲವೆ "ಸಾಳ್ಯ" ಯೆಂಬ ಉಪನಾಮ ಹಚ್ಚಿಕೊಳ್ಳುವರು; ಒಂಕಾರೇಶ್ವರ, ಯಲ್ಲಮ್ಮ, ವೆಂಕಟರಮಣ, ಮುಂತಾದ ದೇವತೆಗಳಿಗೆ ನಡಕೊಳ್ಳುವರು. ಈ ಸಾಳಿಗಳು ಈಗ ಕನ್ನಡ ಭಾಷೆಯನ್ನಾಡುತ್ತಾರೆ. ಆದರೆ ಮುಂಚೆ ತಮಿಳವು ಇವರ ಜನ್ಮಭಾಷೆ ಇತ್ತೆಂತಲೂ, ಸದ್ಯಕ್ಕೆ ಧಾರವಾಡ ಜಿಲ್ಲೆಯಲ್ಲಿ ಇವರ ಕುಲದವರು ತಮಿಳವನ್ನೇ ಆಡುತ್ತಾರೆಂತಲೂ ಹೇಳುತ್ತಾರೆ. ಇವರು ತಾವು ಮಾರ್ಕಂಡೇಯನ ವಂಶದವರೆಂದು ಹೇಳುವರು. ಇವರೊಳಗೆ ಅರಿಶಿನ ಪತ್ತದವರೆಂಬದೊಂದು ಪೋಳಜಾತಿಯುಂಟು. ಅವರಿಗೂ ಇವರಿಗೂ ಅನ್ನ ವ್ಯವಹಾರವಾಗುವದಿಲ್ಲ. ಇವರಲ್ಲಿ ಮದ್ಯ ಮಾಂಸಗಳಿಗೆ ಅಡ್ಡಿ ಇಲ್ಲ, ಲಿಂಗವಂತ ಅಯ್ಯಗಳು ಲಗ್ನ ಮುಂತಾದ ಕಾರ್ಯಗಳನ್ನು ಮಾಡಿಸುವರು. ಸಮಾಜದೊಳಗೆ ಇವರು ಜೇಡರಿಗೆ ಸರಿಯಾಗಿ ವರ್ತಿಸುತ್ತಾರೆ. ಇವರ ಧರ್ಮಗುರುವಾದ ಮಾರ್ಕಂಡೇಯನೆಂಬ ಬ್ರಾಹ್ಮಣನು ರೋಣದಲ್ಲಿ ಇರುತ್ತಾನೆ. ಇವರು ಈಶ್ವರನಿಗೂ ವಿಠೋಬನಿಗೂ ನಡಕೊಳ್ಳುವರು; ಜನಿವಾರ ಹಾಕಿಕೊಂಡು ಲಿಂಗವಂತರಂತೆ ವಿಭೂತಿ ಮುಂತಾದ ಶೈವ ಚಿನ್ಹಗಳನ್ನು ಧರಿಸುವರು,

ಇವರಲ್ಲಿ ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ; ಹೆಣಗಳನ್ನು ಸುಡುವರು. ಕೆಲವರು ಓದ ಬರಿಯ ಬಲ್ಲರು. ಇವರು ಪೂರ್ವದಲ್ಲಿ ಬಟ್ಟೆಗಳನ್ನು ನೆಯ್ಯುತ್ತಿದ್ದರು; ಆದರೆ ಈಗ ಕಾಳಿನ ಅಂಗಡಿಗಳನ್ನು ಹಚ್ಚಿಕೊಂಡು ಸೌಖ್ಯದಿಂದಿದ್ದಾರೆ. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಗಾಣಿಗರು.** ಗಾಣಿಗರು.—ಇವರು ತಮ್ಮ ಉತ್ಪತ್ತಿಯ ಕಥೆ ಹೇಳುವದು ಹ್ಯಾಗಂದರೆ—ಕಣ್ಣಪ್ಪಯ್ಯನೆಂಬವನೊಬ್ಬ ಬಡ ಲಿಂಗವಂತನಿದ್ದನು. ಅವನು ರೇವಣ ಶಿದ್ದೇಶ್ವರನನ್ನು ಬಹು ಭಕ್ತಿಯಿಂದ ಆರಾಧಿಸಿ, ಆ ದೇವರ ಗುಡಿಯಲ್ಲಿ ಅಖಂಡ ನಂದಾದೀಪವಿಟ್ಟಿದ್ದನು. ಆ ದೀಪಕ್ಕೂ ತನ್ನ ಕುಟುಂಬ ಸಂರಕ್ಷಣೆಗೂ ಬೇಕಾಗುವಷ್ಟೇ ಯೆಣ್ಣೆಯನ್ನು ಅವನು ನಿತ್ಯದಲ್ಲಿ ತೆಗಿಯುವನು. ಶಿವನು ಅವನ ಭಕ್ತಿಯನ್ನು ಪರೀಕ್ಷಿಸುವದಕ್ಕಾಗಿ ಅವನ ಗಾಣವನ್ನೂ ಮನೆಯೊಳಗಿನ ಯಾವತ್ತು ವೊಡವೆಗಳನ್ನೂ ಇಲ್ಲದ ಹಾಗೆ ಮಾಡಿದನು. ಆಗ ಕಣ್ಣಪ್ಪಯ್ಯನು ದೇವರ ದೀಪಕ್ಕೆ ಯೆಣ್ಣೆ ಇಲ್ಲದ್ದರಿಂದ ತನ್ನ ತಲೆಯ ಮೇಲೆ ಬಹಳ ಉದ್ದವಾಗಿ ಬೆಳಿಸಿದ ಕೂದಲಿಗೆ ಉರಿ ಹಚ್ಚಿ ಕೊಂಡು ದೇವರ ಮುಂದೆ ನಿಂತನು. ಆಗ ಶಿದ್ದೇಶ್ವರನು ಪ್ರಸನ್ನನಾಗಿ ಅವನಿಗೆ ಮುಕ್ತಿ ಕೊಟ್ಟು, ನಿನ್ನ ವಂಶದವರು ಗಾಣದ ಹೋರೆಯನ್ನೇ ಮಾಡಿ ಸುಖದಿಂದ ಬಾಳಲೆಂದು ವರ ಕೊಟ್ಟನು. ಗಾಣಿಗರಲ್ಲಿ ಸಜ್ಜನ, ಕರೆಕುಲ, ಬಿಳಿಕುಲ, ಕೆಂಪಕುಲ, ವಂಟಿಯೆತ್ತು, ಪಸ್ತಿ, ಪಂಚಮ, ವೈಷ್ಣವ, ಯೆಂಬ ವೊಳಜಾತಿಗಳುಂಟು. ಆದರೆ ಇವುಗಳಲ್ಲಿ ಸಜ್ಜನ, ಕರೆಕುಲ, ವೈಷ್ಣವ, ಇವು ಮೂರೇ ಮುಖ್ಯ ಭೇದಗಳೆಂದು ತೋರುತ್ತದೆ. ವೈಷ್ಣವರ ಹೊರ್ತು ಉಳಿದವರೆಲ್ಲರು ಲಿಂಗವಂತರು; ಅವರವರೊಳಗೆ ಊಟದ ಬಳಿಕೆಯಾಗುತ್ತದೆ. ಶರೀರ ಸಂಬಂಧವಾಗುವದಿಲ್ಲ. ವಂಟ ಯೆತ್ತಿನವರು ಲಿಂಗವಂತರಾದಾಗ್ಯೂ ಜನಿವಾರ ಹಾಕಿ ಕೊಳ್ಳುತ್ತಾರೆ. ವಿಜಾಪುರ ಜಿಲ್ಲೆಯಲ್ಲಿ ಸಜ್ಜನ, ಕರೆಕುಲ, ಇವೆರಡೇ ಜಾತಿಗಳುಂಟು. ಎಲ್ಲ ಕಡೆಯಲ್ಲಿ ಕರೆಕುಲದವರೇ ಬಹಳ. ಇವರ ಹೆಂಗಸರು ಕುಂಕುಮ ಹಚ್ಚುವರು. ಸಜ್ಜನರಲ್ಲಿ ವಿಧವೆಗಳಿಗೆ ಲಗ್ನವಿಲ್ಲ, ಬ್ರಾಹ್ಮಣರು ಲಗ್ನ ಮಾಡಿಸುವರು, ಜಾತಿಯ ವಿವಾದಗಳನ್ನು ಒಬ್ಬ ಬ್ರಾಹ್ಮಣನ ಕೈ ಕೆಳಗೆ ಜಾತಿಯವರು ಕೂಡಿ ನಿರ್ಣಯ ಮಾಡುವರು. ಉಳಿದವರು ಬ್ರಾಹ್ಮಣರಿಗೆ ಮಾನ ಕೊಡುವದಿಲ್ಲ, ವಿಧವೆಗಳ ಲಗ್ನ ಮಾಡುವರು. ಗಾಣಿಗರು ಮಲ್ಲಿಕಾರ್ಜುನ, ಉಳವಿಯ ಬಸಪ್ಪ, ಮುಂತಾದ ಲಿಂಗಾಂಗಿಗಳ ದೇವರಿಗೆ ನಡಕೊಳ್ಳುವದಲ್ಲದೆ ತುಳಜಾ ಭವಾನಿ, ಹನುಮಂತ, ಮುಂತಾದ ದೇವರಿಗೂ ನಡಕೊಳ್ಳುವರು. ವಿಜಾಪುರ ಜಿಲ್ಲೆಯಲ್ಲಿ ಕೊಲ್ಹಾರದ ದೇಸಾಯಿಯು ಗಾಣಿಗರ ಜಾತಿಯ ವ್ಯಾಜ್ಯಗಳನ್ನು ತೀರಿಸುತ್ತಾನೆ. ಗಾಣಿಗರ ಉಳಿದ ನಡಾವಳಿಗಳು, ಊಟ, ಉಡಿಗೆ, ಮುಂತಾದವುಗಳು ಲಿಂಗವಂತರವೇ ಇರುತ್ತವೆ. ಗಾಣಿಗರು ವಿಜಾಪುರ ಧಾರವಾಡ ಜಿಲ್ಲೆಗಳಲ್ಲಿ ಮುಖ್ಯವಾಗಿ ಕುಸಿಬೀ ಯೆಣ್ಣೆ ತೆಗಿಯುವರು; ಬೆಳಗಾವೀ ಜಿಲ್ಲೆಯಲ್ಲಿ ನೆಲಗಡ್ಲೆಯ (ಭುಯಮುಗ) ಯೆಣ್ಣೆ ತೆಗಿಯುವರು; ಕಾನಡಾ ಜಿಲ್ಲೆಯಲ್ಲಿ ಉಂಡ್ಲ ಬೀಜದ ಖೈ ಯೆಣ್ಣೆ ತೆಗಿಯುವರು, ಆದರೆ ಕುಸಿಬಿ, ಅಗಸಿ, ಯೆಳ್ಳು, ಇವುಗಳನ್ನು

ಕೂಡಿಸಿದರೆ ಯೆಣ್ಣೆ ಹುಲಸಾಗಿ ಬೇಗ ಹೊರಡುತ್ತದೆಂದು ಹೇಳುತ್ತಾರೆ. ಗಾಣಿಗರಲ್ಲಿ ಬಹು ಜನರು ವೊಕ್ಕಲತನದಿಂದ ಜೀವಿಸುವರು. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ; ಒಟ್ಟಿಗೆ ಇವರು ಸುಖಿಯಾಗಿ ಇದ್ದಾರೆ.

ವೈಷ್ಣವ ಗಾಣಿಗರು ಜನಿವಾರ ಹಾಕುವರು; ಕಾರ್ಯಗಳಿಗೆ ಬ್ರಾಹ್ಮಣರನ್ನೇ ಕರಿಯುವರು; ವೆಂಕಟರಮಣನಿಗೆ ನಡಕೊಳ್ಳುವರು; ಹೆಣಗಳನ್ನ ಸುಡುವರು; ವಿಧವೆಗಳ ಲಗ್ನ ಮಾಡುವದಿಲ್ಲ.

ಕಾನಡಾ ಜಿಲ್ಲೆಯಲ್ಲಿ ಘಟ್ಟದ ಮೇಲಿನ ಗಾಣಿಗರು ಲಿಂಗವಂತರಿದ್ದಾರೆ. ಅವರ ಸ್ಥಿತಿ ಗತಿಗಳೆಲ್ಲ ಲಿಂಗವಂತರಂತೆ ಇರುತ್ತವೆ.

ಘಟ್ಟದ ಕೆಳಗಿನವರು ವೆಂಕಟರಮಣನಿಗೆ ನಡಕೊಳ್ಳುವರು. ಇವರಲ್ಲಿ ಮಕ್ಕಳ ಸಂತಾನದವರೆಂತಲೂ, ಅಳಿಯ ಸಂತಾನದವರೆಂತಲೂ ಯೆರಡು ಭೇದಗಳಿವೆ. ಎರಡನೇ ವರ್ಗದವರು ವೊದಲಿನವರ ಮನೆಯಲ್ಲಿ ಉಣ್ಣುವರು. ಆದರೆ ಅವರವರೊಳಗೆ ಲಗ್ನ ಸಂಬಂಧವಾಗುವದಿಲ್ಲ. ಈ ಎರಡೂ ವರ್ಗದವರು ಕನ್ನಡ ಭಾಷೆಯನ್ನಾಡುವರು, ಮಾಂಸ ತಿನ್ನುವರು, ಮದ್ಯ ಮುಟ್ಟುವದಿಲ್ಲ, ಜನಿವಾರ ಹಾಕುವರು, ಹೈಗ ಬ್ರಾಹ್ಮಣರ ಅನ್ನವನ್ನು ಮಾತ್ರ ತಕ್ಕೊಳ್ಳುವರು. ಇವರು ತಾವು ವೈಶ್ಯರೆಂದು ಹೇಳುತ್ತಾರೆ; ಮನೆಯಲ್ಲಿ ಚಂದನದ ವೆಂಕಟರಮಣನನ್ನು ಪೂಜಿಸುವರು. ಇವರ ಮನೆಯಲ್ಲಿ ಲಗ್ನ, ಮುಂಜಿ, ಜನ್ಮ, ಮರಣ, ಮುಂತಾದ ಕಾರ್ಯಗಳನ್ನು ಹೈಗ ಬ್ರಾಹ್ಮಣರು ಮಾಡಿಸುವರು. ಇವರು ಗಾಣದಿಂದ ಯೆಣ್ಣೆ ತೆಗಿಯುವದಲ್ಲದೆ ತಾಡವಾಲೆಯ ಛತ್ತರಿಗೆಗಳನ್ನು ಮಾಡಿ ಮಾರುವರು. ಕಟ್ಟಿಗೇ ವೊರಳಿನಲ್ಲಿ ವೊಂದೇ ಯೆತ್ತಿನ ಸಹಾಯದಿಂದ ಇಲ್ಲವೆ ಕೈಯಿಂದ ಗಾಣ ತಿರುಗಿಸಿ, ಇವರು ಉಂಡ್ಲ ಬೀಜದ ಯೆಣ್ಣೆಯನ್ನು ತೆಗಿಯುವರು. ಇವರ ಹೋರೆಯು ಚನ್ನಾಗಿ ನಡಿಯುತ್ತದೆ. ಉಂಡ್ಲ ಬೀಜದ ಹೊರ್ತು ಖೊಬ್ಬರೀ ಯೆಣ್ಣೆಯನ್ನು ಸಹ ಈ ಜಿಲ್ಲೆಯ ಗಾಣಿಗರು ಬಹಳವಾಗಿ ತೆಗಿದು ಮಾರಾಟಕ್ಕೆ ಕಳಿಸುವರು.

ಗಾಣಿಗರ ಗಾಣದ ಖಣಿ ಇದ್ದಲ್ಲಿ ದೆವ್ವ ಇರುತ್ತದೆಂದು ಬಹು ಜನರ ಸಂಭಿಗೆಯುಂಟು. ಅನ್ಯಜಾತಿಯರು ಈ ಕಾರಣದಿಂದ ಗಾಣಿಗರ ಮನೆಯನ್ನು ಖರೇದಿಗೆ ತಕ್ಕೊಳ್ಳಲಿಕ್ಕೆ ಸಂಕೋಚ ಪಡುತ್ತಾರೆ.

ಹಟಕಾರರು (ದೇವಾಂಗರು).— ಕೃಷ್ಣೆಯ ದಕ್ಷಿಣದಲ್ಲಿ ಇವರ ವಸ್ತಿ ಹೆಚ್ಚು ಇರುತ್ತದೆ; ಕಾನಡಾ ಜಿಲ್ಲೆಯಲ್ಲಿ ಇಲ್ಲ. ಬಾಗಲಕೋಟೆ, ಗುಳೇದ ಗುಡ್ಡಗಳಲ್ಲಿಯ

**ಹಟಕಾರರು.**

ಹಟಕಾರರು ನೆಯ್ಯುವ ಬಟ್ಟೆಗಳು ಹೆಸರಾಗಿವೆ. ಇವರು ತಮ್ಮ ಉತ್ಪತ್ತಿಯನ್ನು ಬೇರೆ ಬೇರೆ ಕಡೆಯಲ್ಲಿ ಬೇರೆ ಬೇರೆಯಾಗಿ ಹೇಳುತ್ತಾರೆ. ಹಿಂದೆ ನೇಕಾರರ ಅಥವಾ ಸಾಳೀ ಜನರ ಮೂಲದ ಕಥೆಯಲ್ಲಿ ದೇವಾಂಗ ಋಷಿಯ ವೊಬ್ಬ ಹೆಂಡತಿಯ ಮಕ್ಕಳಿಗೆ ಹಟಕಾರರೆಂಬ ಹೆಸರು ಬಂತೆಂದು ಹೇಳಿದ್ದೇವೆ. ಅದರಂತೆ ಸಾಳಿ, ಹಟಕಾರರು, ಜಾಡರು, ಇವರು ಮೂವರು ಆರಂಭದಲ್ಲಿ ವೊಂದೇ ಜಾತಿಯವರಿದ್ದರೆಂದು ಕೆಳಗಿನ ವರ್ಣನೆಯಿಂದ ಅನುಮಾನವಾಗುವದು. ಹಟಕಾರರ ಬಳಿ

ಯಲ್ಲಿ ದೇವಾಂಗ ಪುರಾಣವೆಂಬದೊಂದು ಗ್ರಂಥವಿರುತ್ತದೆ. ಅದರಲ್ಲಿ ಹೇಳಿದ ಇವರ ಉಗಮದ ಕಥೆ ಹ್ಯಾಗಂದರೆ—ಬುನಾದಿಯಲ್ಲಿ ಮನುಷ್ಯರಿಗೂ ದೇವತೆಗಳಿಗೂ ಬಟ್ಟೆ ಇದ್ದಿಲ್ಲ. ಅವರು ಶಿವನ ಬಳಿಗೆ ಹೋಗಿ ಯೇನಾದರೂ ಆವರಣವನ್ನು ಕೊಡೆಂದು ಬೇಡಿಕೊಂಡರು. ಶಿವನಿಗೆ ಬುದ್ಧಿ ಹರಿಯದ್ದರಿಂದ ಮೂರ್ಛೆ ಬರಲಾಗಿ, ಆ ಮೂರ್ಛೆ ಯಲ್ಲಿ ಕನಸಿನಂತೆ, ತನ್ನ ಮೈಯಿಂದ ವೊಬ್ಬ ಉಗ್ರ ಸ್ವರೂಪಿಯಾದ ಮನುಷ್ಯನು ಹೊರ ಟಂತೆ ಕಂಡನು. ಆ ಮನುಷ್ಯನು ವಸ್ತ್ರವನ್ನುಟ್ಟು ಕೊಂಡು, ಜನಿವಾರ, ವಿಭೂತಿ, ರುದ್ರಾಕ್ಷಮಾಲೆಗಳನ್ನು ಧರಿಸಿದ್ದನು. ಶಿವನು ಯೆಚ್ಚತ್ತ ಬಳಿಕ ಕನಸಿನಲ್ಲಿ ಕಂಡ ಮನು ಷ್ಯನೇ ತನ್ನ ಯೆದುರಿಗೆ ನಿಂತದ್ದನ್ನು ನೋಡಿದನು; ಅವನು ತನ್ನ ಮೈಯಿಂದ ಹೊರಟ ವನಾದ ಕಾರಣ ಅವನಿಗೆ ದೇವಾಂಗನೆಂಬ ಹೆಸರಿಟ್ಟು, ಬಟ್ಟೆಗಳನ್ನು ನೈದು ದೇವತೆಗಳಿ ಗೂ ಮನುಷ್ಯರಿಗೂ ಕೊಡೆಂದು ಹೇಳಿದನು. ದೇವಾಂಗನ ವಸ್ತ್ರಗಳಿಂದ ಕಶ್ಯಪನು ಸಂತುಷ್ಟನಾಗಿ ದೇವದತ್ತಿ ಯೆಂಬ ತನ್ನ ತಂಗಿಯನ್ನು ಅವನಿಗೆ ಲಗ್ನ ಮಾಡಿ ಕೊಟ್ಟನು. ಇದಲ್ಲದೆ ದೇವಾಂಗನು ಲಗ್ನದಲ್ಲಿ ಹೋಮ ಮಾಡುವಾಗ ಅಗ್ನಿ ಕುಂಡದಿಂದ ಅಗ್ನಿದತ್ತಿ ಯೆಂಬ ಕನ್ನಿಕೆ ಹೊರಟು, ಅವನನ್ನೇ ಲಗ್ನ ಮಾಡಿ ಕೊಂಡಳು. ಈ ಇಬ್ಬರು ಹೆಂಡಂ ದಿರ ಸಂತತಿಗಳೇ ನಾನಾ ಪ್ರಕಾರದ ನೇಕಾರರ ಜಾತಿಗಳಾದವು. ಇನ್ನೊಂದು ಕಥೆ ಹ್ಯಾಗಂದರೆ—ಹಟಕಾರರು ಮೊದಲು ಲಿಂಗವಂತರಿದ್ದರು. ದೇವಾಂಗನೆಂಬ ಋಷಿಯು ಅವರಲ್ಲಿ ಕೆಲವರಿಗೆ ಉಪದೇಶ ಮಾಡಿ ತನ್ನ ಶಿಷ್ಯರನ್ನು ಮಾಡಿ ಕೊಂಡನು. ಅವರು ಹಟದಿಂದ ದೇವಾಂಗನ ಉಪದೇಶವನ್ನು ಕೈಕೊಂಡದ್ದರಿಂದ ಹಟಕಾರರೆಂಬ ಹೆಸ ರು ಅವರ ಸಂತತಿಯವರಿಗೆ ಬಂತು. ಆದರೆ ಹಟಕಾರರೆಂಬ ಅಡ್ಡ ಹೆಸರಿನ ಕುರುಬರು ಕೆಲವರುಂಟು.

ಹಟಕಾರರ ಜನ್ಮಭಾಷೆ ಕನ್ನಡ; ತೋರಿಕೆಯಲ್ಲಿ ಸುರೂಪಿಗಳಾದ ಲಿಂಗವಂತರಂತೆ ತೋರುವರು. ಇವರಲ್ಲಿ ಕುಲಾಚಾರಿಗಳೆಂತಲೂ, ಶಿವಾಚಾರಿಗಳೆಂತಲೂ ಯೆರಡು ಮುಖ್ಯ ವರ್ಗಗಳಿವೆ. ಕುಲಾಚಾರಿಗಳ ಆಚರಣೆಗಳೆಲ್ಲ ಬ್ರಾಹ್ಮಣರ ಆಚರಣೆಗಳನ್ನು ಹೋಲುತ್ತವೆ; ಶಿವಾಚಾರಿಗಳು ಲಿಂಗವಂತರುಂಟು. ಇದರಿಂದ ಬ್ರಾಹ್ಮಣರ ಆಚರಣೆಯೇ ಇವರ ಕುಲದ ಮೂಲದ ಆಚರಣೆಯೆಂದು ಸ್ಪಷ್ಟವಾಗುತ್ತದೆ. ಕುಲಾಚಾರಿಗಳು ತಮ್ಮಲ್ಲಿ ೧೬ ಸಂಸ್ಕಾರ ಗಳು ನಡಿಯುತ್ತವೆಂದು ಹೇಳುತ್ತಾರೆ. ಆದರೆ ಲಗ್ನ, ಮುಂಜಿ, ಮುಂತಾದ ನಾಲ್ಕಾರು ಸಂಸ್ಕಾರಗಳು ಮಾತ್ರ ನಡಿಯುತ್ತವೆ. ಮುಂಜಿಯು ಲಗ್ನದ ಕಾಲಕ್ಕೆ ಮೊದಲು ಆಗು ತ್ತದೆ. ಕುಲಾಚಾರಿಗಳಿಗೆ ಜನಿವಾರ, ನಿತ್ಯ ಸ್ನಾನ, ಹಣೆಯ ಮೇಲೆ ಗಂಧ, ಪರಿಷೇಚನ, ಚಿತ್ರಾಹುತಿ, ಜನ್ಮ ಮರಣಗಳ ಸೂತಕ, ಇವೆಲ್ಲ ಬ್ರಾಹ್ಮಣರಂತೆ ಇರುತ್ತವೆ. ಇವರ ಹೆಂಗಸರು ಕುಂಕುಮ ಹಚ್ಚುವರು, ಮಂಗಳಸೂತ್ರ ಕಟ್ಟಿ ಕೊಳ್ಳುವರು; ಕೆಲವರು ಕಚ್ಚೆ ಹಾಕುವರು, ಕಡೆಗಾದಾಗ ಮೂರು ದಿವಸ ಹೊರಗೆ ಕೂಡ್ರುವರು. ಕುಲಾಚಾರಿ ಗಳು ಹೆಣಗಳನ್ನು ಸುಡುವರು. ಇವರ ಉಪಾಧ್ಯಾಯನು ದೇವಾಂಗಯ್ಯನೆಂಬವನು ಇವರ ಜಾತಿಯವನೇ ಇರುತ್ತಾನೆ. ಅವನು ಬ್ರಾಹ್ಮಣರ ಅನುಮತಿಯಿಂದ ಲಗ್ನ, ಮುಂಜಿ,

ಮುಂತಾದ ಕಾರ್ಯಗಳನ್ನು ನಡಿಸುವನು. ಇವರ ಮುಖ್ಯ ಗುರು ಮುಸಂಗಯ್ಯನೆಂಬ ವನು ಹಂಪಿಯಲ್ಲಿ ಇರುತ್ತಾನೆ. ಶಿವಾಚಾರಿಗಳ ಆಚರಣೆಗಳೆಲ್ಲ ಲಿಂಗವಂತರಂತೆ ಇರುತ್ತವೆ. ಇವರಿಗೂ ಕುಲಾಚಾರಿಗಳಿಗೂ ಊಟದ ಬಳಿಕೆಯಾಗುವದಿಲ್ಲ. ಆದರೂ ಶಿವಾಚಾರಿಗಳ ಹೆಣ್ಣು ಕುಲಾಚಾರಿಗಳು ತಕ್ಕೊಳ್ಳುತ್ತಾರೆ. ಆದರೆ ಲಗ್ನದ ಪೂರ್ವದಲ್ಲಿ ಆ ಹೆಣ್ಣನ್ನು ಶುದ್ಧ ಮಾಡಿ ಕೊಳ್ಳುವರು. ಅದರ ಕ್ರಮ ಹ್ಯಾಗಂದರೆ—ಹುಡಿಗೆಯ ಮೈಗೆ ಮಣ್ಣು ಬೂದಿಯನ್ನು ಹಚ್ಚಿ, ಆಕೆಯ ತಲೆಯ ಮೇಲೆ ನಾದಿಗನ ಕತ್ತಿಯಂತೆ ದರ್ಭದ ಕಡ್ಡಿಯನ್ನು ಆಡಿಸಿ, ಯೆಣ್ಣೆ ಹಚ್ಚಿ ಯೆರಿಯುವರು; ಬಳಿಕ ಹೋಮ ಮಾಡಿ, ಮನೆಯ ದೇವರ ತೀರ್ಥವನ್ನು ಆಕೆಗೆ ಕೊಟ್ಟ ಬಳಿಕ ಆಕೆ ಶುದ್ಧಳಾಗುತ್ತಾಳೆ. ಶಿವಾಚಾರಿಯ ಮಗಳನ್ನು ಕುಲಾಚಾರಿಯು ತಕ್ಕೊಂಡಾಗ ಸಹ ಅವರಿಗೂ ಅವರಿಗೂ ಅನ್ನ ವ್ಯವಹಾರ ವಾಗುವದಿಲ್ಲ. ಆದರೆ ಕುಲಾಚಾರಿಗಳ ವೊಲವು ಲಿಂಗವಂತ ಧರ್ಮದ ಕಡೆಗೆ ಬೆಳಿಯುತ್ತ ನಡಿದದೆಂದು ತೋರುತ್ತದೆ. ಜನಿವಾರ, ಲಿಂಗ ಇವೆರಡೂ ಧರಿಸಿದಂಥ ಕುಲಾಚಾರಿಗಳೆಷ್ಟೋ ಜನರುಂಟು; ತಂದೆಯ ಕೊರಳಲ್ಲಿ ಜನಿವಾರ, ಮಗನ ಕೊರಳಲ್ಲಿ ಲಿಂಗ, ಹೀಗೂ ಕೆಲವು ಮಾದಿರಿಗಳನ್ನು ಕಾಣ ಬಹುದು. ಲಿಂಗವಂತರಾದವರು ನಿಷ್ಠೆಯಿಂದ ಲಿಂಗವಂತರ ಆಚರಣೆಗಳನ್ನೇ ಅನುಸರಿಸುತ್ತಾರೆ. ಕುಲಾಚಾರಿಗಳಿಗೂ ಶಿವಾಚಾರಿಗಳಿಗೂ ಸಾಮಾನ್ಯವಾಗಿರುವಂಥ ಸಂಗತಿಗಳು ಯಾವವೆಂದರೆ, ಯೆರಡೂ ವರ್ಗದವರು ಬಾದಾವಿಯ ಬನಶಂಕರಿಗೆ ಹೆಚ್ಚು ಭಕ್ತಿಯಿಂದ ನಡಕೊಳ್ಳುತ್ತಾರೆ; ವೀರಭದ್ರನಿಗೂ ಮಲ್ಲಿಕಾರ್ಜುನನಿಗೂ ನಡಕೊಳ್ಳುವರು. ಮದ್ಯ ಮಾಂಸಗಳನ್ನು ಮುಟ್ಟುವದಿಲ್ಲ; ಗಾಂಜಿ, ಅಫು, ಇವುಗಳ ವ್ಯಸನವು ಕೆಲವರಿಗಿರುತ್ತದೆ; ಅನ್ಯಜಾತಿಯವರಲ್ಲಿ ಉಣ್ಣುವದಿಲ್ಲ, ತಮ್ಮ ಅನ್ನವನ್ನು ಅನ್ಯಜಾತಿಯವರಿಗೆ ತೋರಗೊಡುವದಿಲ್ಲ; ಹೆಣ್ಣು ಮಕ್ಕಳ ಲಗ್ನವು ನೆರಿಯುವ ಪೂರ್ವದಲ್ಲಿ ಆಗಲಿಕ್ಕೆ ಬೇಕು; ವಿಧವೆಗಳ ಲಗ್ನವು ನಿರಾತಂಕವಾಗಿ ಆಗುತ್ತದೆ. ಹಟಕಾರರು ಪ್ರೌಢಳಾದ ವಿಧವೆಯ ತಂದೆಗೆ ಕುಮಾರಿಯ ತಂದೆಗಿಂತ ಹೆಚ್ಚು ತೆರಿಗೆಯನ್ನು ಕೊಡುವರು. ಯಾಕಂದರೆ ಲಗ್ನವಾದ ಕೂಡಲೆ ವಿಧವೆಯಿಂದ ನೈಯುವ ಕೆಲಸಕ್ಕೆ ಸಹಾಯವಾಗುತ್ತದೆ. ಯೆಲ್ಲಮ್ಮನ ಮಗನಾದ ಪರಶುರಾಮನು ದೇವಾಂಗ ಋಷಿಯ ಮಕ್ಕಳಲ್ಲಿ ಕೆಲವರನ್ನು ಕೊಂದನಂತೆ; ಆದ್ದರಿಂದ ಹಟಕಾರರು ಯೆಲ್ಲಮ್ಮನಿಗೆ ನಡಕೊಳ್ಳುವದಿಲ್ಲ. ಹಟಕಾರರ ಲಗ್ನದ ವಿಧಾನಗಳೆಲ್ಲ ಸಾಳೀ ಜಾತಿಯವರಂತೆ ಆಗುತ್ತವೆ; ಇವರು ಭಿಕ್ಷೆ ಬೇಡುವದು ಮಾನ ಗೇಡಿತನವೆಂದೆಣಿಸುತ್ತಾರೆ. ಇವರು ಬಹಳ ಹಣ ಹಾಳು ಮಾಡುತ್ತಾರೆ. ಆದರೂ ಇವರಲ್ಲಿ ಕೆಲವರು ಚಿನಿವಾರಿಕೇ ವ್ಯಾಪಾರ ಮಾಡುತ್ತಾರೆ. ಇವರ ಗಂಡು ಹೆಣ್ಣು ಮಕ್ಕಳು ಶಾಲೆಗೆ ಹೋಗುತ್ತಾರೆ. ಆದರೆ ಬಹಳ ದಿವಸ ಕಲಿಯುವದಿಲ್ಲ. ಓದು, ಬರಹ, ಲೆಕ್ಕ, ಇಷ್ಟು ಮಕ್ಕಳ ಅಭ್ಯಾಸವಾಯಿತೆಂದರೆ ಅವರನ್ನು ಮನೆಯಲ್ಲಿ ಇಟ್ಟು ಕೊಂಡು ತಮ್ಮ ವಿದ್ಯವನ್ನು ಕಲಿಸುವರು.

ಜಾಡರು.—ಇವರೂ ಕನ್ನಡಿಗರೇ; ತೋರಿಕೆಯಲ್ಲಿ ಇವರಿಗೂ ಹಟಕಾರರಿಗೂ ಭೇದ ಕಾಣುವದಿಲ್ಲ. ಇವರಲ್ಲಿ ೧೮ ವೊಳಜಾತಿಗಳುಂಟೆಂದು ಹೇಳುತ್ತಾರೆ. ಆದರೆ

ಅವುಗಳಲ್ಲಿ ಶಿವಶಾಮಶಟ್ಟಿ, ಸೋಮಸಾಳಿ, ಪಟ್ಟಸಾಳಿ, ಕುರುವಿನಶಟ್ಟಿ, ಈ ನಾಲ್ಕು ಜಾತಿಗಳು ಮುಖ್ಯವೆಂದು ಹೇಳುತ್ತಾರೆ. ಈ ಹೆಸರುಗಳಿಂದ ಸಾಳಿಗಳೂ, ಜಾಡರೂ ಬುನಾದಿಯಲ್ಲಿ ವೊಂದೇ ಜಾತಿಯವರೆಂದು ವ್ಯಕ್ತವಾಗುತ್ತದೆ. ಸಾಳಿಗಳ ವರ್ಣನೆಯಲ್ಲಿ ಹೇಳಿದ ವೊಳಜಾತಿಗಳ ಹೆಸರುಗಳೇ ಇವರ ೧೮ ಜಾತಿಗಳೊಳಗೆ ಬರಬಹುದು. ಆದರೆ ಜಾಡರೊಳಗೆ ಕರೆಜಾಡರೆಂತಲೂ ಬಿಳಿಜಾಡರೆಂತಲೂ ಯೆರಡು ಮುಖ್ಯ ವರ್ಗಗಳಿರುತ್ತವೆಂದು ಹೇಳುತ್ತಾರೆ. ಇವರಲ್ಲಿಯೂ ಸಾಳಿ ಹಟಕಾರರಂತೆ ಕೆಲವರು ಬ್ರಾಹ್ಮಣರ ಅನುಯಾಯಿಗಳೂ ಕೆಲವರು ಲಿಂಗವಂತರೂ ಉಂಟು. ಆದರೆ ಬ್ರಾಹ್ಮಣಾನುಯಾಯಿಗಳು, ಅಂದರೆ ಕುಲಾಚಾರಿ ಟಕಾರರಂಥವರು, ಹೆಚ್ಚಾಗಿ ಶೂದ್ರರಂತೆ ವರ್ತಿಸುತ್ತಾರೆ; ನೇಮದಿಂದ ಸ್ನಾನ ಮಾಡುವದಿಲ್ಲ, ಜನಿವಾರದ ನಿರ್ಬಂಧವಿಲ್ಲ, ಮದ್ಯ ಮಾಂಸಗಳನ್ನು ತಕ್ಕೊಳ್ಳುವರು. ಒಂದು ಜಾತಿಯ ಜಾಡರು ಮತ್ತೊಂದು ಜಾತಿಯವರ ಕೂಡ ಊಟದ ಬಳಿಕೆ ಮಾಡುವದಿಲ್ಲ. ಆದರೆ ನೀಳಕಟ ಬಾಳ್ಕಿ ಯೆಂಬ ಜಾತಿಯವರು ಕುರುವಿನ ಶಟ್ಟಿಯವರಿಗೆ ಹೆಣ್ಣು ಮಕ್ಕಳನ್ನು ಕೊಡುವರು. ಈ ನೀಳಕಟ ಬಾಳ್ಕಿ ಯೆಂಬ ಕುಲದವರು ಲಿಂಗವನ್ನು ಭಸ್ಮ ಸಹಿತವಾಗಿ ಬಲಗಾಲಿಗೆ ಸರ್ಪಣಿಯಂತೆ ಕಟ್ಟಿ ಕೊಳ್ಳುವರು. ಜಾಡರ ಮುಖ್ಯ ಕುಲದೇವರಾದರೂ ಬನಶಂಕರಿಯೇ. ಬೇನೆ ಬಂದಾಗ ಬನಶಂಕರಿಗೆ ಬೇಡಿಕೊಳ್ಳುವದರಿಂದ ಬೇನೆ ನೆಟ್ಟಗಾದರೆ, ಆ ಬೇನೆ ಬಿದ್ದ ಮನುಷ್ಯನನ್ನು ಬನಶಂಕರಿಯ ದರ್ಶನಕ್ಕೆ ಕರೆಕೊಂಡು ಹೋಗುವರು. ಅಲ್ಲಿ ಬಾಳೇ ದಿಂಡಿನ ತೊಟ್ಲು ಮಾಡಿ, ಅದಕ್ಕೆ ಬಾಳೇ ದಿಂಡಿನ ಹಗ್ಗವನ್ನೆ ಹಚ್ಚಿ, ತೊಟ್ಲನೊಳಗೆ ಆ ಮನುಷ್ಯನನ್ನು ಕೂಡ್ರಿಸಿ, ಬನಶಂಕರಿಯ ಹೊಂಡದೊಳಗೆ ತೇಲ ಬಿಡುವರು. ಒಂದು ದಂಡೆಯಲ್ಲಿ ಅದನ್ನು ಬಿಟ್ಟು, ಯೆದುರಿನ ದಂಡೆಗೆ ಅದು ಹತ್ತುವಂತೆ ಕೆಲವರು ಬಾಳೀ ದಿಂಡಿನ ಹಗ್ಗ ಹಿಡಿದು ಯೆಳಿಯುವರು. ಆದರೆ ಆ ತೊಟ್ಲಿನ ಸಂಗಡ ವೊಬ್ಬಿಬ್ಬರು ಅಂಬಿಗರು, ಯೇನಾದರೂ ಅಪಘಾತವಾದರೆ ತೊಟ್ಲನೊಳಗಿನ ಮನುಷ್ಯನು ಮುಳುಗಬಾರದೆಂದು, ಈಸ ಬೀಳುತ್ತಾರೆ. ದೇವರ ಭಕ್ತಿಗಿಂತ ಜೀವದಾಶೆಯ ಕಸುವು ಹೆಚ್ಚಿರುವದು ಸ್ವಾಭಾವಿಕವೇ. ಜಾಡರ ಗಂಡು ಹೆಣ್ಣು ಮಕ್ಕಳು ಶಾಲೆಗೆ ಹೋಗುತ್ತಾರೆ.

**ಜಾಡರು.**

ಸಾಳಿ, ಹಟಕಾರರು, ಜಾಡರು, ಈ ಮೂರು ಜಾತಿಗಳು ಆರಂಭದಲ್ಲಿ ವೊಂದೇ ಯೆಂಬ ಅಭಿಪ್ರಾಯವನ್ನು ಮೇಲೆ ತಿಳಿಸಿದ್ದೇವೆ. ಇವರೆಲ್ಲರು ಉತ್ತರದಿಂದ ಬಂದವರೆಂಬದಕ್ಕೂ, ಈಚೆಗೆ ಇವರಲ್ಲಿ ಕೆಲವರು ಲಿಂಗವಂತರಾದರೆಂಬದಕ್ಕೂ ಸಂದೇಹವಿಲ್ಲ. ಎಲ್ಲಕ್ಕೂ ಮೊದಲು ಬಂದವರು ಜಾಡರೆಂಬ ಹೆಸರು ಧರಿಸಿದರೆಂದು ತೋರುತ್ತದೆ. ಜಾಡರಿಗೆ ಮಹಾರಾಷ್ಟ್ರ ಭಾಷೆ ಬರುತ್ತಿರುವದಿಲ್ಲ; ತುಳಜಾ ಭವಾನಿಯನ್ನು ಇವರು ಅರಿಯರು. ಇವರ ತರುವಾಯ ಬಂದವರೇ ಹಟಕಾರರಾದರೆಂದೆನ್ನ ಬಹುದು. ಹಟಕಾರರಿಗೆ ಮಹಾರಾಷ್ಟ್ರವು ಅಲ್ಪ ಸ್ವಲ್ಪ ಬರುತ್ತಿರುತ್ತದೆ; ಮಹಾರಾಷ್ಟ್ರ ದೇಶದ ಕುರುಹುಗಳು ಇವರಲ್ಲಿ ಮಂದವಾಗಿ ಕಾಣುತ್ತವೆ. ಎಲ್ಲಕ್ಕೂ ಕಡೆಗೆ ಬಂದವರೇ ಸಾಳಿಗಳೆಂಬದಕ್ಕೆ

ಸಂಶಯವಿಲ್ಲ; ಇವರ ಭಾಷೆ, ಉಡಿಗೆ, ಧರ್ಮ, ನಡಾವಳಿ ಇವೆಲ್ಲ ಈಗ್ಯೂ ಮಹಾರಾಷ್ಟ್ರರವೇ ಇರುತ್ತವೆ.

**ಪಟವೇಗಾರರು.**

ಪಟವೇಗಾರರು.— ಈ ಹೆಸರು ಪಟ್ವೇಗಾರರು, ಅಂದರೆ ರೇಶಿಮೆ ಮಾಡುವವರು, ಯೆಂಬದರ ಅಪಭ್ರಂಶವಿರುತ್ತದೆಂದು ತೋರುತ್ತದೆ. ಪಟವೇಗಾರರು ತಾವು ಗುಜರಾಥದಿಂದ ಬಂದ ಕ್ಷತ್ರಿಯರೆಂದು ಹೇಳುತ್ತಾರೆ. ಇವರಿಗೆ ಕೆಲವು ಕಡೆಯಲ್ಲಿ, ವಿಶೇಷವಾಗಿ ಧಾರವಾಡ ಜಿಲ್ಲೆಯಲ್ಲಿ, ಛತ್ರಿಯರೆಂದೆನ್ನುವರು. ಇವರ ಭಾಷೆಯಲ್ಲಿ ಗುಜರಾಥೀ, ಹಿಂದುಸ್ತಾನಿ, ಮರಾಠೀ, ಈ ಮೂರು ಭಾಷೆಗಳು ಮಿಶ್ರವಾಗುತ್ತವೆ. ಗುಜರಾಥದ ಜ್ಯೋತಿಷಿಗಳು ಇವರ ಜಾತಕಗಳನ್ನು ಬರಿಯಲಿಕ್ಕೆ ಆಗಾಗ್ಗೆ ಬರುತ್ತಿರುತ್ತಾರೆ. ಲಗ್ನ, ಮುಂಜಿ, ಮುಂತಾದ ಕಾರ್ಯಗಳನ್ನು ಮಾಡಿಸಲಿಕ್ಕೆ ಇವರ ಉಪಾಧ್ಯಾಯರು ಗುಜರಾಥದಿಂದ ಬರುತ್ತಿರುತ್ತಾರೆ. ಆದರೆ ಧಾರವಾಡ ಜಿಲ್ಲೆಯಲ್ಲಿ ಪಟವೇಗಾರರು ಯೆಲ್ಲ ಕಾರ್ಯಗಳಿಗೆ ಇಲ್ಲಿಯ ಬ್ರಾಹ್ಮಣರನ್ನೇ ಕರಿಯುತ್ತಾರೆ. ಪಟವೇಗಾರರ ಹೆಸರುಗಳು ಗುಜರಾಥೀ ಹೆಸರುಗಳ ಹಾಗೆ ಇರುತ್ತವೆ. ಬ್ರಾಹ್ಮಣರಂತೆ ಇವರಲ್ಲಿ ೧೬ ಸಂಸ್ಕಾರಗಳಾಗುತ್ತವೆಂದು ಹೇಳುತ್ತಾರೆ. ಮುಂಜಿಯು ಹತ್ತು ವರ್ಷದೊಳಗೇ ಆಗಲಿಕ್ಕೆ ಬೇಕು. ಲಗ್ನದಲ್ಲಿ ಅಂತಃಪಟ, ವಾಗ್ದಾನ, ಲಾಜಾಹೋಮ, ಮುಂತಾದ ವಿಧಾನಗಳು ಬ್ರಾಹ್ಮಣರಂತೆ ಆಗುತ್ತವೆ. ಇವರ ಗೋತ್ರಗಳು ಭಾರದ್ವಾಜ, ಜಮದಗ್ನಿ, ಕಶ್ಯಪ, ಕಾತ್ಯಾಯನ, ವಾಲ್ಮೀಕಿ, ವಸಿಷ್ಠ, ವಿಶ್ವಾಮಿತ್ರ, ಇತ್ಯಾದಿ ಇರುತ್ತವೆ. ಪಟವೇಗಾರರು ಮುಖ್ಯವಾಗಿ ತುಳಜಾ ಭವಾನಿಗೆ ನಡಕೊಳ್ಳುತ್ತಾರೆ; ಈ ದೇವಿಯು ಪರಶು ರಾಮನ ಕೈಯಿಂದ ತಮ್ಮ ಪೂರ್ವಜರನ್ನು ಬದುಕಿಸಿಕೊಂಡಳೆಂದು ಹೇಳುತ್ತಾರೆ. ವಿಠೋಬನಿಗೂ ಬಹು ಜನರು ನಡಕೊಳ್ಳುತ್ತಾರೆ. ಧಾರವಾಡ ಜಿಲ್ಲೆಯಲ್ಲಿ ಹಲಕೆಲವರು ಯೆಲ್ಲಮ್ಮನಿಗೂ ನಡಕೊಳ್ಳುತ್ತಾರೆಂದು ತೋರುತ್ತದೆ. ಶಂಕರಾಚಾರ್ಯನೇ ಇವರ ಮುಖ್ಯ ಗುರು. ಪ್ರತಿ ಯೊಬ್ಬನಿಗೆ ಜನಿವಾರ, ಮನೆಯಲ್ಲಿ ತುಳಶೀ ಗಿಡ, ಇರಲಿಕ್ಕೆ ಬೇಕು. ಪಟವೇಗಾರರು ಮದ್ಯ ಮಾಂಸಗಳನ್ನು ತಕ್ಕೊಳ್ಳುವರು; ತೋರಿಕೆಯಲ್ಲಿ ರಂಗಾರಿಗಳಂತೆ ಕಾಣುವರು. ಇವರ ನಡಾವಳಿಗಳೂ ರಂಗಾರಿಗಳಂತೆ ಇರುತ್ತವೆ. ರೇಶಿಮೆಗೆ ಬಣ್ಣ ಕೊಡುವದೇ ಇವರ ಪರಂಪರಾಗತವಾದ ಹೋರೆಯು; ಕೆಲವರು ನೈಯುವ ಕೆಲಸವನ್ನು ಸಹ ಮಾಡುವರು. ಹೆಣ್ಣು ಮಕ್ಕಳ ಲಗ್ನವು ಚಿಕ್ಕಂದಿನಲ್ಲಿ ಆಗಲಿಕ್ಕೆ ಬೇಕು; ವಿಧವೆಗಳ ಲಗ್ನವು ವೊಮ್ಮೆ ಮಾತ್ರ ಆಗುವದು. ಇವರು ಹೆಣಗಳನ್ನು ಸುಡುವರು; ಅಗ್ನಿ ಸಂಸ್ಕಾರ, ಪಿಂಡ ದಾನ, ಸೂತಕ, ಶ್ರಾದ್ಧ, ಇವೆಲ್ಲ ಬ್ರಾಹ್ಮಣರಂತೆ ಆಗುತ್ತವೆ. ಪಟವೇಗಾರರ ಹೆಂಗಸರಿಗೆ ಕುಂಕುಮ ಕಚ್ಚೆಗಳಿರುತ್ತವೆ. ಈ ಹೆಂಗಸರಲ್ಲಿ ಕೆಲವರು ಮಾಘ ಪೂರ್ಣಿಮೆಯಲ್ಲಿ ಕುಲದೇವತೆಯ ಗರ್ಭ ಗುಡಿಯೊಳಗೆ ಹೋಗಿ, ಬತ್ತಲೆಯಾಗಿ ಬೇವಿನ ಹುಟ್ಟಗೇ ಉಟ್ಟುಕೊಂಡು, ದೇವಿಗೆ ಪ್ರದಕ್ಷಿಣಾ ನಮಸ್ಕಾರಗಳನ್ನೂ ಆರ್ತಿಯನ್ನೂ ಮಾಡಿ ಬರುತ್ತಾರೆಂದು ಹೇಳುತ್ತಾರೆ. ಬೆಳಗಾವೀ ಜಿಲ್ಲೆಯಲ್ಲಿ ಮುಸಲ್ಮಾನರಾದ ಪಟವೇಗಾರರಿರುತ್ತಾರೆ. ಅವರು ಮೂಲದಲ್ಲಿ ಪಟವೇಗಾರರೇ

ಇದ್ದು, ಔರಂಗಜೇಬನ ಕಾಲಕ್ಕೆ ಅವರನ್ನು ಮುಸಲ್ಮಾನರನ್ನು ಮಾಡಿದರೆಂದು ಹೇಳುತ್ತಾರೆ. ಪಟವೇಗಾರರ ಮಕ್ಕಳು ಶಾಲೆಗೆ ಹೋಗುತ್ತಾರೆ. ಒಟ್ಟಿಗೆ ಈ ಜಾತಿಯವರು ಸುಖದಿಂದಿದ್ದಾರೆ.

**ಕುರುವಿನ ಶಟ್ಟಿಗಳು.**

ಕುರುವಿನ ಶಟ್ಟಿಗಳು.—ಇವರಿಗೆ ಹಿರೇ ಕುರುವಿನವರೆಂತಲೂ ಅನ್ನುವರು. ಇವರ ಜನ್ಮಭಾಷೆ ಕನ್ನಡ, ಮೈಬಣ್ಣ ಕಪ್ಪು. ಇವರೂ ಚಿಕ್ಕ ಕುರುವಿನವರೂ ಮೊದಲು ವೊಂದೇ ಜಾತಿಯವರು. ಆದರೆ ಇವರು ಪೂರಾ ಲಿಂಗವಂತರಾಗಿದ್ದಾರೆ; ಅವರು ಇನ್ನೂ ಲಿಂಗವಂತರಾಗುವ ಮಾರ್ಗದಲ್ಲಿ ಇದ್ದಾರೆ. ಕುರುವಿನ ಶಟ್ಟಿಗಳು ಲಿಂಗವಂತರಾದಾಗ್ಯೂ, ಚಂಡಿಕೆ ಕಾಯುವರು. ಉಳಿದ ಆಚಾರ, ಆಹಾರ, ಮುಂತಾದವುಗಳೆಲ್ಲ ಲಿಂಗವಂತರವೇ. ಧಾರವಾಡ ಜಿಲ್ಲೆಯ ಕುರುವಿನ ಶಟ್ಟಿಗಳು ಬ್ರಾಹ್ಮಣರನ್ನು ಲಗ್ನ ಕಾರ್ಯಕ್ಕೆ ಕರಿಯುತ್ತಾರೆಂತಲೂ ಮದ್ಯ ಮಾಂಸಗಳನ್ನು ತಕ್ಕೊಳ್ಳುತ್ತಾರೆಂತಲೂ ಮೂಲಗ್ರಂಥದಲ್ಲಿ ಬರಿದದೆ. ಕುರುವಿನ ಶಟ್ಟಿಗಳಲ್ಲಿ ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ; ಆದರೆ ಗಂಡ ಸತ್ತಾಗ ಹೊಸ ಶೀರೆ ಉಟ್ಟುಕೊಂಡು ಗಂಡನ ಹೆಣಕ್ಕೆ ಆರ್ತಿ ಮಾಡಿದ ಹೆಂಗಸು ಯೆರಡನೇ ಲಗ್ನ ಮಾಡಿಕೊಳ್ಳ ಕೂಡದೆಂದು ಕಟ್ಟಳೆಯುಂಟು. ಕುರುವಿನ ಶಟ್ಟಿಗಳು ಮೊದಲು ವ್ಯಾಪಾರ ಮಾಡುತ್ತಿದ್ದರು; ಈಗ ನೈಯುವ ಹೋರೆಯನ್ನೇ ಹೆಚ್ಚಾಗಿ ಮಾಡುತ್ತಾರೆ. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಚಿಕ್ಕ ಕುರುವಿನವರು.**

ಚಿಕ್ಕ ಕುರುವಿನವರು.—ಇವರೂ ಕುರುವಿನ ಶಟ್ಟಿಗಳೂ ವೊಂದೇ ಜಾತಿಯವರೆಂದು ಮೇಲೆ ಹೇಳಿದ್ದೇವೆ. ಇವರು ಮೊದಲು ತಾವು ಬಿಳೆಜಾಡರೆಂದು ಹೇಳುತ್ತಾರೆ. ಆದರೆ ಇವರು ಕುರುವಿನ ಶಟ್ಟಿಗಳ ಗುರುವಾದ ನೀಲಕಂಠಪ್ಪನೆಂಬ ಲಿಂಗವಂತನಿಗೆ ನಡಕೊಂಡು ಬಸವಣ್ಣನ ಪೂಜೆ ಮಾಡುತ್ತಿದ್ದಾಗ್ಯೂ, ಲಿಂಗಧಾರಣ ಮಾಡುವದಿಲ್ಲ; ಮದ್ಯ ಮಾಂಸಗಳನ್ನು ತಕ್ಕೊಳ್ಳುವರು; ಚಂಡಿಕೆ ಕಾಯುವರು; ಬ್ರಾಹ್ಮಣರನ್ನು ಲಗ್ನ ಕಾರ್ಯಕ್ಕೆ ಕರಿಯುವರು. ಆದರೆ ಹೆಣವನ್ನು ಹುಗಿಯುವಾಗ ಇವರಿಗೆ ಜಂಗಮ ಬೇಕಾಗುತ್ತಾನೆ. ಹೆಣ್ಣು ಮಕ್ಕಳ ಲಗ್ನ, ವಿಧವೆಗಳ ಲಗ್ನ, ಇವುಗಳ ನಡಾವಳಿಗಳು ಕುರುವಿನ ಶಟ್ಟಿಗಳಂತೆ. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಹಂಡೇವಜೀರರು.**

ಹಂಡೇವಜೀರರು.—ಇವರು ಹಂಡೆ ಕುರುಬರೆಂಬ ಜಾತಿಯವರು; ಆದರೆ ಲಿಂಗವಂತ ಧರ್ಮವನ್ನು ಸ್ವೀಕರಿಸಿ ಭಕ್ತಿಯಿಂದ ಆ ಧರ್ಮವನ್ನು ಪಾಲಿಸುತ್ತಾರೆ; ಮದ್ಯ ಮಾಂಸ ತಕ್ಕೊಳ್ಳುವದಿಲ್ಲ, ಕುರಿಗಳ ಹಿಂಡು ಸಾಕುವದಿಲ್ಲ. ಇವರು ಕಂಬಳೀ ನೆಯ್ಯುವದೊಂದೇ ಹೋರೆಯನ್ನು ಮುಖ್ಯವಾಗಿ ಮಾಡುವರು. ಇವರ ಕಪ್ಪು ಮೈಬಣ್ಣ, ಕೀಳು ಕನ್ನಡ ಮಾತು, ಜಡ್ಡಿನ ಸ್ವಭಾವ, ಹೊಲಸುತನ, ಇವೆಲ್ಲ ಕುರುಬರ ಹಾಗೇ ಇದ್ದಾಗ್ಯೂ ನಡಾವಳಿಗಳೆಲ್ಲ ಲಿಂಗವಂತರವು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

ಲೋಣಾರರು.—ಇವರ ಜನ್ಮಭಾಷೆ ಕನ್ನಡ; ತೋರಿಕೆಯಲ್ಲಿ ಕುಣಬಿಗಳ ಹಾಗೆ ಕಾಣುತ್ತಾರೆ; ನಡಾವಳಿಗಳಾದರೂ ಅವರಂತೆ. ಇವರಲ್ಲಿ ಮಿಾಠ ಲೋಣಾರೀ, ಚುನೆ ಲೋಣಾರಿ, ಯೆಂಬೆರಡು ಭೇದಗಳುಂಟು. ಅವರು ಪರಸ್ಪರ ಊಟದ ಬಳಿಕೆ ಮಾಡುವರು; ಆದರೆ ಶರೀರಸಂಬಂಧ ಮಾಡುವದಿಲ್ಲ. ಮಿಾಠ ಲೋಣಾರಿಗಳು ಸೋರುಪ್ಪು ಮಾಡಿ ಮಾರುವರು; ಚುನೆ ಲೋಣಾರಿಗಳು ಸುಣ್ಣ ಸುಟ್ಟು ಮಾರುವರು, ಇದ್ದಲಿ ಮಾಡಿ ಮಾರುವರು, ಕಟ್ಟಿಗೇ ಮಾರುವರು. ಕೆಲವರು ವೊಕ್ಕಲತನವನ್ನೂ ಮಾಡುವರು. ಇವರ ಹೆಂಗಸರು ಕಚ್ಚೆ ಹಾಕುವದಿಲ್ಲ, ಆದರೆ ಕೆಲವರು ಕುಂಕುಮ ಹಚ್ಚುವರು. ಇವರಲ್ಲಿ ಮದ್ಯ ಮಾಂಸಗಳಿಗೆ ಅಡ್ಡಿ ಇಲ್ಲ; ಕೆಲವರು ಗಾಂಜೀ ಸೇದುವರು. ಖಂಡೋಬಾ, ಯೆಲ್ಲಮ್ಮ, ಇವೇ ಇವರ ಮುಖ್ಯ ದೇವತೆಗಳು. ಇವರಲ್ಲಿಯ ಲಗ್ನ ಮುಂತಾದ ಕಾರ್ಯಗಳನ್ನು ಬ್ರಾಹ್ಮಣರು ಮಾಡಿಸುವರು. ಹೆಣ್ಣು ಮಕ್ಕಳ ಲಗ್ನವು ನೆರಿದ ಬಳಿಕ ಆಗ ಬಹುದು; ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ. ಇವರು ಹೆಣಗಳನ್ನು ಹುಗಿಯುವರು; ಮಕ್ಕಳನ್ನು ಶಾಲೆಗೆ ಕಳಿಸುವದಿಲ್ಲ.

**ಲೋಣಾರರು.**

ಕಾನಡಾ ಜಿಲ್ಲೆಯ ಮಿಾಠ ಲೋಣಾರಿಗಳಿಗೆ ಮಿಾಠ ಗಾವಡಿಗಳೆಂದೆನ್ನುವರು. ಅವರು ಗೋವೆ, ವೆಂಗುರ್ಲೆ, ಮುಂತಾದ ಕಡೆಯಿಂದ ಬಂದವರಾದ ಕಾರಣ ಮಹಾರಾಷ್ಟ್ರ ಭಾಷೆಯನ್ನಾಡುವರು. ಉಪ್ಪು ಮಾಡುವದು ತಪ್ಪಿದಂದಿನಿಂದ ಕೆಲವರು ಗೋಡೆ ಕಟ್ಟಿ ಹೊಟ್ಟೆ ತುಂಬಿ ಕೊಳ್ಳುತ್ತಾರೆ, ಕೆಲವರು ಕೂಲೀ ಮಾಡುತ್ತಾರೆ. ಇವರ ನಡಾವಳಿ, ಆಹಾರ, ಮುಂತಾದವುಗಳು ಮೇಲಿನವರಂತೆ.

ಬಣ್ಣಗಾರರು.—ಇವರು ಕಾನಡಾ ಜಿಲ್ಲೆಯಲ್ಲಿ ಮುಖ್ಯವಾಗಿ ಇರುತ್ತಾರೆ. ಇವರು ಲಿಂಗವಂತರಿರುವ ಕಾರಣ ಇವರ ಭಾಷೆ, ಆಹಾರ, ಧರ್ಮ, ಉಡಿಗೆ, ನಡಾವಳಿ, ಮುಂತಾದವುಗಳೆಲ್ಲ ಲಿಂಗವಂತರವೇ ಇರುತ್ತವೆ. ಇವರ ಪರಂಪರಾಗತವಾದ ಹೋರೆಯು ನೂಲಿಗೆ ಬಣ್ಣ ಹಾಕುವದು. ಆದರೆ ಅದನ್ನು ಬಿಟ್ಟು ಈಗ ಬಣ್ಣಗಾರರು ಬಟ್ಟೆ, ಕಾಳು, ಕಾಯಿಪಲ್ಲೆ, ಇವುಗಳ ಅಂಗಡೀ ಹಚ್ಚಿ ಹೊಟ್ಟೆ ತುಂಬಿ ಕೊಳ್ಳುವರು. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಬಣ್ಣಗಾರರು.**

ಶಿವಾಚಾರಿಗಳು.—ಇವರು ಬಾದಾಮಿಯಲ್ಲಿ ಮಾತ್ರ ಇರುತ್ತಾರೆ. ಇವರು ಹಟಗಾರರಲ್ಲಿ ಮೊದಲು ಲಿಂಗವಂತರಾದವರು. ಇವರ ಊಟ, ಉಡಿಗೆ, ಧರ್ಮಗಳು ಲಿಂಗವಂತರವೇ. ನಡಾವಳಿಗಳು ಕೆಲವು ಹಟಕಾರರ ನಡಾವಳಿಯಂತೆ. ಇವರೂ ನೆಯ್ಯುವ ಹೋರೆಯನ್ನೇ ಮಾಡುತ್ತಾರೆ. (ಹಟಕಾರರ ವರ್ಣನೆ ನೋಡು).

**ಶಿವಾಚಾರಿಗಳು.**

ಶಿವಜೋಗಿಗಳು.—ಇವರು ಹಾನಗಲ್ಲು, ಹುಬ್ಬಳ್ಳಿ, ಈ ಯೆರಡು ಕಡೆಯಲ್ಲಿ ಮಾತ್ರ ಇರುತ್ತಾರೆ. ಮಗ್ಗದ ಹಣಿಗೆಗಳನ್ನು ಮಾಡುವದೇ ಇವರ ಮುಖ್ಯ ಹೋರೆಯು.

ಇವರು ಭೈರಿ, ವಿಠೋಬ, ಹನುಮಂತ, ಮುಂತಾದ ದೇವರಿಗೆ ನಡಕೊಳ್ಳುವರು; ಗುರು ಗೋರಕನಾಥನೆಂಬವನು ಕಾಶಿಯಲ್ಲಿ ಇರುತ್ತಾನೆ. ಇವರು ತೋರಿಕೆಯಲ್ಲಿ ವೊಕ್ಕಲಿಗರಂತೆ ಕಾಣುತ್ತಾರೆ; ಕನ್ನಡವೇ ಇವರ ಜನ್ಮಭಾಷೆ. ಮದ್ಯ ಮಾಂಸಗಳಿಗೆ ಅಡ್ಡಿ ಇಲ್ಲ, ಬ್ರಾಹ್ಮಣರು ಇವರಲ್ಲಿಯ ಕಾರ್ಯಗಳನ್ನು ಮಾಡಿಸುವರು. ಬಾಲ ವಿವಾಹಕ್ಕೂ ವಿಧವೆಗಳ ಲಗ್ನಕ್ಕೂ ಅಡ್ಡಿ ಇಲ್ಲ. ಇವರಲ್ಲಿ ಹೆಣಗಳನ್ನು ಹುಗಿಯುವರು.

**ಶಿವಜೋಗಿಗಳು.**

## ಪಶುಗಳನ್ನು ಸಾಕಿ ಜೀವಿಸುವ ಜಾತಿಗಳು.

| | ಧಾರವಾಡ. | | | ಬೆಳಗಾವಿ. | | | ವಿಜಾಪುರ. | | | ಕಾನಡಾ | | |
|---|---|---|---|---|---|---|---|---|---|---|---|---|
| | ಗಂಡಸು | ಹೆಂಗಸು | ಒಟ್ಟು | ಗಂಡಸು | ಹೆಂಗಸು | ಒಟ್ಟು | ಗಂಡಸು | ಹೆಂಗಸು | ಒಟ್ಟು | ಗಂಡಸು | ಹೆಂಗಸು | ಒಟ್ಟು |
| ೧ ಕುರುಬರು . . | ೪೩೯೩೮ | ೪೩೮೩೦ | ೮೭೭೬೭ | ೨೯೫೯೮ | ೩೦೧೨೯ | ೫೯೭೨೭ | ೪೭೦೫೧ | ೪೭೭೩೫ | ೯೪೭೮೬ | ೭೦೦ | ೫೦೦ | ೧೨೦೦ |
| ೨ ಗೌಳಿಗರು . . . | ೨೬೫ | ೨೪೧ | ೫೦೬ | ೨೮೯ | ೨೫೮ | ೫೪೭ | ೧೯೨ | ೧೫೯ | ೩೫೧ | ೫೮೭ | ೪೩೮ | ೧೦೨೫ |
| ೩ ಗೊಲ್ಲರು . . . | ೧೮೭೯ | ೧೯೨೧ | ೩೮೦೦ | ೧೭೩ | ೧೫೧ | ೩೨೪ | ೬೮೭ | ೬೮೯ | ೧೩೭೬ | ೨೦೭ | ೧೪೦ | ೩೪೭ |
| ೪ ಧಣಗರರು . . | ,, | ,, | ,, | ,, | ,, | ,, | ,, | ,, | ,, | ೧೦೧೫ | ೬೯೯ | ೧೭೧೪ |

ಕುರುಬರು.—ನಾಲ್ಕೂ ಜಿಲ್ಲೆಗಳಲ್ಲಿ ಇವರಷ್ಟು ವಸ್ತಿಯು ಬೇರೆ ಯಾವ ಜಾತಿಯವರದೂ ಇಲ್ಲ. ಇವರು ಈ ಶೀಮೆಯ ಮೂಲ ನಿವಾಸಿಗಳೆಂದೆಣಿಸಲ್ಪಡುತ್ತಾರೆ. ಹಳ್ಳಿಗಳ ಗೌಡಕಿಯ ಅಧಿಕಾರವು ಕುರುಬರಿಗಿದ್ದಷ್ಟು ಬೇರೆ ಯಾವ ಜಾತಿಯವರಿಗೂ ಇರುವದಿಲ್ಲ. ಇವರ ಜನ್ಮಭಾಷೆ ಕನ್ನಡವೇ. ಕುರುಬರಲ್ಲಿ ಜಂಡೇ ಕುರುಬರು, ಹಂಡೇ ಕುರುಬರು, ಹತ್ತೀ ಕಂಕಣದವರು, ಉಣ್ಣೀ ಕಂಕಣದವರು, ವಡೇರು, ಯೆಂಬ ಐದು ವೊಳಜಾತಿಗಳಿವೆ. ಮೊದಲಿನ ನಾಲ್ಕು ಕುಲಗಳ ಜನರು ತಮ್ಮ ತಮ್ಮೊಳಗೆ ಊಟದ ಬಳಿಕೆ ಮಾಡುವರು, ಆದರೆ ಶರೀರ ಸಂಬಂಧ ಮಾಡುವದಿಲ್ಲ. ಹತ್ತೀ ಕಂಕಣದವರಲ್ಲಿ ಪುನಃ ಖಿಲಾರಿ, ಸನಗಾರಿ, ಹಟಕಾರ, ಯೆಂಬ ಮೂರು ವೊಳಜಾತಿಗಳಿವೆ; ಆದರೆ ಇವುಗಳಲ್ಲಿ ಪರಸ್ಪರ ಶರೀರ ಸಂಬಂಧವು ಸಹ ಆಗುತ್ತದೆ. ಕುರುಬರ ಮೈಬಣ್ಣ ಕಪ್ಪು; ಸೋಮಾರಿತನ, ಜಡ್ಡಿನ ತಿಳುವಳಿಕೆ, ಇವೆರಡು ಇವರ ಭೇದಕ ಲಕ್ಷಣಗಳು; ಮೈ ಮೇಲಿನ ಬಟ್ಟೆಗಳೂ ಮನೆಗಳೂ ಹೊಲಸು; ಆದರೆ ಇವರು ನಿರುಪದ್ರವಿಗಳೂ, ಪ್ರಮಾಣಿಕರೂ, ಮಿತವ್ಯಯಿಗಳೂ, ಕೃತಜ್ಞರೂ, ಪರರಿಗೆ ಸತ್ಕಾರ ಮಾಡುವವರೂ ಇರುತ್ತಾರೆ. ಗಂಡಸರೂ ಹೆಂಗಸರೂ ಸ್ವಾಭಾವಿಕವಾಗಿ ವೊಳಿತಾಗಿ ಕಸುವುಳ್ಳವರು ಇರುತ್ತಾರೆ; ದಿನಕ್ಕೆ ನಾಲ್ಕು ಐದು ಸಾರಿ ಉಣ್ಣುವರು. ಈ ಜಾತಿಯು ಪ್ರಾಯಸ್ಥರಿಗೆ ಕುಸ್ತೀ ಹಿಡಿಯುವ ಚಟ ಬಹಳ ಇರುತ್ತದೆ. ಕಪ್ಪು ಮೈಬಣ್ಣ, ತುಂಬಿದ ಮೈ, ಚಡ್ಡೀ ಚಣ್ಣ, ಮೈಗೂ ಮೋರೆಗೂ ಹಳದೀ ಬಣ್ಣ,

**ಕುರುಬರು.**

ತಲೆಯ ಮೇಲೆ ದುಡ್ಡಿನಷ್ಟೇ ಕಿರಿಗೂದಲಿನ ಚಂಡಿಕೆ, ಇವೇ ಜಟ್ಟಿಯಾದ ಕುರುಬನ ಕುರುಹುಗಳು. ಕುರುಬರ ಗಂಡಸರು ಚಣ್ಣ ಹಾಕಿಕೊಂಡು, ರುಮಾಲವನ್ನು ಅಗಲಾಗಿ ಸುತ್ತಿಕೊಂಡು, ಹೆಗಲ ಮೇಲೆ ಕಂಬಳೀ ಚಲ್ಲಿಕೊಂಡು ಅಡ್ಡಾಡುವರು; ಕೆಲವರು ಧೋತ್ರ ಉಡುವರು, ಕೆಲವರು ಲಂಗೋಟಿ ಹಾಕುವರು. ಹೆಂಗಸರು ಕಚ್ಚೆ ಹಾಕದೆ ಶೀರೆ ಉಟ್ಟು ಕೊಳ್ಳುವರು, ಕುಂಕುಮವನ್ನರಿಯರು. ಕುರುಬರು ಮದ್ಯ ಮಾಂಸಗಳನ್ನು ನಿರಾತಂಕವಾಗಿ ತಕ್ಕೊಳ್ಳುವರು; ಆದರೆ ಯೆತ್ತು, ಆಕಳು, ಹಂದಿ ಇವುಗಳ ಮಾಂಸ ತಿನ್ನುವದಿಲ್ಲ; ಸಿಂದಿಯನ್ನು ಮಿತದಿಂದ ಕುಡಿಯುವರು. ಕುರಿಗಳ ಹಿಂಡುಗಳನ್ನು ಸಾಕುವದು ಇವರ ಕುಲ ಪರಂಪರಾಗತವಾದ ನಡಾವಳಿಯು; ಬಹು ಜನರು ಕಂಬಳಿಗಳನ್ನು ನೆಯ್ಯುವರು, ಕೆಲವರು ಪೊಕ್ಕಲತನ ಮಾಡುವರು. ಇವರು ನೆಯ್ಯುವ ಕಂಬಳಿಗಳು ವೊಂದುವರೆ ರೂಪಾಯಿಯಿಂದ ವೊಂಬತ್ತು, ಹತ್ತು ರೂಪಾಯಿಯ ವರೆಗೆ ಬೆಲೆಗಾಣುವವು; ಕುರಿ, ಕುರಿಮರಿಗಳ ಮಾರಾಟದಿಂದ ಇವರಿಗೆ ಹಣ ದೊರಿಯುತ್ತದೆ. ಇವರ ಹೆಂಗಸರು ಉಣ್ಣಿಗೆ ಹುರಿ ಹಾಕಿ ಗಂಡಸರಿಗೆ ಸಹಾಯ ಮಾಡುವದಲ್ಲದೆ, ಹಾಲು, ಬೆಣ್ಣೆಗಳನ್ನು ಮಾರಿ ಹಣಗಳಿಸುವರು. ಆದರೂ ಕುರುಬರಲ್ಲಿ ದೈವುಳ್ಳವರು ಬಹು ಕಡಿಮೆ. ಯಾಕಂದರೆ ತಿಳುವಳಿಕೆ ಕಡಿಮೆ, ಸೋಮಾರಿತನದ ಮೂಲಕ ಬಹಳ ಹೋರೆಯಾಗುವದಿಲ್ಲ. ಆದಾಗ್ಯೂ ಕೂಳ ಕಾಣದಷ್ಟು ಬಡತನವು ಇವರಲ್ಲಿ ಯಾರಿಗೂ ಇರುವದಿಲ್ಲ; ಇವರಲ್ಲಿ ಭಿಕ್ಷೆ ಬೇಡುವವರನ್ನು ಕಾಣುವದು ಅಪರೂಪ. ಇವರ ದೇವರು ಬೀರಪ್ಪ, ಮಾಯಣ್ಣ, ಕರಿಸಿದ್ದ, ಸೆಟ್ಟೆಪ್ಪ, ಯೆಲ್ಲಮ್ಮ, ಇತ್ಯಾದಿಗಳುಂಟು. ಆದರೆ ಬೀರಪ್ಪನೇ ಯೆಲ್ಲರಿಗಿಂತ ಶ್ರೇಷ್ಠ. ಬೀರಪ್ಪನ ಗುಡಿಯಲ್ಲಿ ಲಿಂಗದಂಥಾದೊಂದು ಕಲ್ಲು ಇರುವದು; ಅದಕ್ಕೆ ಬೆಳ್ಳಿಯ ಮೊಖ ಹಾಕುವರು. ಈಶ್ವರನ ಗುಡಿಗಳಲ್ಲಿಯೂ ಲಿಂಗಕ್ಕೆ ಮೊಖ ಹಾಕುವ ನಡಾವಳಿಯು ಯೆಷ್ಟೋ ಕಡೆಯಲ್ಲಿ ಇರುತ್ತದೆ. ಆದ್ದರಿಂದ ಚನ್ನಾಗಿ ಕಟ್ಟಿಸಿದಂಥ ಬೀರಪ್ಪನ ಗುಡಿಯಲ್ಲಿ ಅರಿಯದ ಮನುಷ್ಯನು ಹೋದರೆ, ಅವನಿಗೆ ಅದು ಈಶ್ವರನ ಗುಡಿ ಯೆಂಬ ಭ್ರಾಂತಿ ಬರುತ್ತದೆ. ಬೀರಪ್ಪನ ಆರಾಧನೆಗೆ ಡೊಳ್ಳು, ತಾಳ, ಗಂಟೆ, ಕೊಳಲು, ಇಷ್ಟು ವಾದ್ಯಗಳು ಕುರುಬರಿಗೆ ಬೇಕಾಗುತ್ತವೆ. ಇದಲ್ಲದೆ ಕಂಬಳೀ ಛತ್ತರಿಗೆಯೊಂದಿರುತ್ತದೆ. ಅದರ ಮೇಲೆ ಮನುಷ್ಯರು, ಪಶು, ಪಕ್ಷಿಗಳ ಆಕೃತಿಗಳನ್ನು ಕತ್ತರಿಸಿ ಹೊಲಿದಿರುತ್ತಾರೆ. ಯಾವತ್ತು ಸಮಾರಂಭದ ಕಾರ್ಯಗಳಲ್ಲಿ ಆ ಛತ್ತರಿಗೆ ಡೊಳ್ಳು, ತಾಳ, ಕೊಳಲು, ಗಂಟೆಗಳು ಇರಲಿಕ್ಕೆ ಬೇಕು. ಕುರುಬರಲ್ಲಿ ಜನ್ಮ, ಮರಣ, ಲಗ್ನ ಮುಂತಾದ ಕಾರ್ಯಗಳನ್ನು ಇವರ ಗುರುಗಳಾದ ವಡೇರೇ ಮಾಡಿಸುತ್ತಾರೆ. ಈ ಕಾರ್ಯಗಳೆಲ್ಲ ವಾಡಿಕೆಯಾಗಿ ಲಿಂಗವಂತರಲ್ಲಿಯ ಕಾರ್ಯಗಳಂತೆ ಆಗುತ್ತವೆ. ಕುರುಬರು ಜಂಗಮರಿಗೂ ಬ್ರಾಹ್ಮಣರಿಗೂ ಮಾನ ಕೊಡುತ್ತಾರೆ. ಹಡಿದ ಹೆಂಗಸು ಇಪ್ಪತ್ತು ದಿವಸದೊಳಗೆ ಬಾವಿಯ ಪೂಜೆಯನ್ನು ಮಾಡಲಿಕ್ಕೆ ಬೇಕು. ಈ ನಡಾವಳಿಯು ಕಾನಡಾ ಜಿಲ್ಲೆಯಲ್ಲಿ ಬೇರೆ ಯೆಷ್ಟೋ ಮೂಲ ನಿವಾಸಿಗಳ ಜಾತಿಗಳಲ್ಲಿ ಇರುತ್ತದೆ. ಲಗ್ನದಲ್ಲಿ ಹತ್ತೀ ಕಂಕಣದವರು ಮದಿಮಕ್ಕಳಿಗೆ ಹತ್ತಿಯ ಕಂಕಣವನ್ನು ಕಟ್ಟುವರು,

ಉಣ್ಣೀ ಕಂಕಣದವರು ಉಣ್ಣೆಯ ಕಂಕಣ ಕಟ್ಟುವರು. ಒಂದು ನೀರಿನ ಪಾತ್ರೆಯ ಬಾಯಿಗೆ ೫ ವಿಳ್ಳೀವೆಲೆಗಳನ್ನು ಹಾಕಿ, ಅದರ ಮೇಲೆ ಕೆಲವು ಜೋಳದ ತೆನೆಗಳನ್ನಾಗಲಿ, ತೆಂಗಿನ ಕಾಯಿಯನ್ನಾಗಲಿ ಇಟ್ಟು ಕಲಶವನ್ನು ಮಾಡುವರು. ಅದನ್ನು ಪೊಂಪು ಗಂಗಾಳದೊಳಗೆ ಇಟ್ಟು, ಅದರ ಬಳಿಯಲ್ಲಿ ನೀಲಾಂಜನದೊಳಗೆ ದೀಪ ಹಚ್ಚಿ ಇಡುವರು. ಲಗ್ನದ ಕಾಲಕ್ಕೆ ಕಂಬಳೀ ಹಾಸಿ, ಅದರ ಮೇಲೆ ಮದಿಮಕ್ಕಳನ್ನು ಕೂಡ್ರಿಸಿ ಮುಂಪೆ ಕಲಶವನ್ನಿಡುವರು. ಇಷ್ಟಾದ ಬಳಿಕ ಹತ್ತೀ ಕಂಕಣದವರಲ್ಲಿ ಬ್ರಾಹ್ಮಣನು ಪೊಬ್ಬ ವಡೇರವನ ಕೈಯಿಂದ ಮದಿಮಕ್ಕಳ ಕೊರಳಲ್ಲಿ ಗುಳದಾಯ ಕಟ್ಟಿಸಿ, ಮಂಗಳಾಷ್ಟವನ್ನು ಅಂದು ಅಕ್ಷತಿಯ ಹಾಕುವನು, ಆ ಮೇಲೆ ಯೆಲ್ಲರೂ ಮದಿಮಕ್ಕಳ ಮೇಲೆ ಅಕ್ಕೀಕಾಳು ಚಲ್ಲುವರು. ಉಣ್ಣೀ ಕಂಕಣದವರ ಲಗ್ನಕ್ಕೆ ಬ್ರಾಹ್ಮಣನು ಬೇಕಾಗುವದಿಲ್ಲ, ವಡೇರೇ ಯಾವತ್ತು ವಿಧಾನಗಳನ್ನು ಮಾಡಿಸುವರು. ಹೆಣಗಳನ್ನು ಹುಗಿಯುವ ವಿಧಾನಗಳೆಲ್ಲ ಲಿಂಗವಂತರಂತೆ ಆಗುವವು. ಹತ್ತನೇ ದಿವಸ ಬೇರೆ ಕೆಲವು ವಿಧಿಗಳನ್ನು ಮಾಡುವರು. ಕೆಲವರು ಸತ್ತವನ ವರ್ಷ ಶ್ರಾದ್ಧವನ್ನು ಮಾಡುವರು. ಸತ್ತ ಮನುಷ್ಯನು, ಗಂಡಸಾಗಲಿ, ಹೆಂಗಸಾಗಲಿ, ಇಪ್ಪತ್ತು ವರ್ಷ ಮೀರಿದವನಿದ್ದರೆ, ಅವನದೊಂದು ಬೆಳ್ಳಿಯ ತಾಳಿಯನ್ನು ಮಾಡಿ ಮನೆಯ ದೇವರೊಳಗೆ ಆ ತಾಳಿಯನ್ನು ಇಟ್ಟು ಪೂಜಿಸುವರು. ಬಡವರು ತಾಳಿಗೆ ಬದಲಾಗಿ ಅಡಿಕೆಯನಿಟ್ಟು ಪೂಜಿಸುವರು. ಕುರುಬರಲ್ಲಿ ನೆರಿದ ಬಳಿಕ ಹೆಣ್ಣು ಮಕ್ಕಳ ಲಗ್ನ ಮಾಡಲಿಕ್ಕೂ ವಿಧವೆಗಳ ಲಗ್ನಕ್ಕೂ ಅಡ್ಡಿ ಇಲ್ಲ; ಹಾದರಕ್ಕೂ ಬಹಳ ದೋಷವಿಲ್ಲ. ವಿಧವೆಗಳೂ ಗಂಡನನ್ನು ಬಿಟ್ಟವರೂ ಪರ ಪುರುಷರ ಬಳಿಯಲ್ಲಿ ಹೆಂಡರಂತೆ ನಿಂತು ಸಂಸಾರ ಮಾಡಿದಾಗ್ಯೂ ಅವರು ಜಾತಿ ಭ್ರಷ್ಟರಾಗುವದಿಲ್ಲ. ಆದರೆ ಪರ ಪುರುಷರು ಸ್ವಂತ ಕುಲದವರಾಗಲಿ, ಉತ್ತಮ ಕುಲದವರಾಗಲಿ, ಇರಲಿಕ್ಕೆ ಬೇಕು; ನೀಚ ಕುಲದವರ ಸಹವಾಸ ಮಾಡುವ ಹೆಂಗಸು ಜಾತಿಯನ್ನು ಕಳಕೊಳ್ಳುತ್ತಾಳೆ.

ಕಾನಡಾ ಜಿಲ್ಲೆಯ ಘಟ್ಟದ ಕೆಳಗಿನ ಕುರುಬರು ಕುರಿಗಳನ್ನು ಸಾಕುವದಿಲ್ಲ.

ಬುನಾದಿಯಲ್ಲಿ ಕುರುಬರು ದಕ್ಷಿಣ ದೇಶದಲ್ಲಿ ಸಣ್ಣ ದೊಡ್ಡ ರಾಜ್ಯಗಳನ್ನು ಆಳಿದರೆಂದು ಇತಿ ಹಾಸದ ಶೋಧಕರು ಗೊತ್ತು ಹಚ್ಚಿದ್ದಾರೆ. ತೆಲಗು ಶೀಮೆಯಲ್ಲಿ ಬೌದ್ಧ ಧರ್ಮದ ಬೆಳುವಣಿಗೆಯ ಕಾಲಕ್ಕೆ ಕುರುಬರ ಸಂಸ್ಥಾನಗಳಿದ್ದವೆಂತಲೂ, ಆ ಸಂಸ್ಥಾನಿಕರು ಬೌದ್ಧ ಧರ್ಮವನ್ನು ಸ್ವೀಕರಿಸಿದ್ದರೆಂತಲೂ ವೊಬ್ಬ ಗ್ರಂಥಕರ್ತನು ಬರಿದಿದ್ದಾನೆ. ಬುನಾದಿಯಲ್ಲಿ ಆನೇಗುಂದಿಯಲ್ಲಿಯೂ ಬನವಾಸಿಯಲ್ಲಿಯೂ ಸಾಮ್ರಾಜ್ಯ ಪದವಿಯನ್ನು ಭೋಗಿಸಿದ ಕದಂಬರೆಂಬ ಅರಸರು ಕುರುಬರೇ ಇದ್ದರೆಂದು ಹೇಳುತ್ತಾರೆ. ಈ ಕದಂಬ ವಂಶದವರಿಂದ ಮಹಾರಾಷ್ಟ್ರರೊಳಗೆ "ಕದಮ" ಯೆಂಬದೊಂದು ಮನೆತನ ವುಂಟಾಗಿದೆ. ಗೋಮಂತಕ ಶೀಮೆಯಲ್ಲಿ ಸಾಧಾರಣ ಶೂದ್ರರಿಗೆ "ಕುರುಂಬಿ" ಯೆಂದೆನ್ನುವರು. ಆದ್ದರಿಂದ ಮಹಾರಾಷ್ಟ್ರ ದೇಶದ "ಕುಳುಂಬಿ" ಯೆಂಬ ವೊಕ್ಕಲಿಗರು ಕುರುಬರ ವಂಶದವರೇ ಇರ ಬಹುದೆಂದು ತೋರುತ್ತದೆ. ಕುರುಬರಿಗೆ ಬುನಾದಿಯಲ್ಲಿ ಕುರುಂಬರೆಂದೆನ್ನುವರು; ತಮಿಳ, ಮಲಿಯಾಳ ಭಾಷೆಗಳಲ್ಲಿ ಇದೇ ಉಚ್ಚಾರವು ಈಗ್ಯೂ ನಡಿಯುತ್ತದೆ.

ಕುರುಬರು ಸದ್ಯಕ್ಕೆ ಲಿಂಗವಂತರಾಗುವ ಮಾರ್ಗದಲ್ಲಿ ಇದ್ದಾರೆಂದೆನ್ನ ಬಹುದು. ಇವರ ಗುರುಗಳು ಲಿಂಗವಂತರಾಗಿದ್ದಾರೆ; ಕೂಸು ಹುಟ್ಟಿದ ಬಳಿಕ ಹತ್ತು ದಿವಸದೊಳಗೆ ಅದಕ್ಕೆ ಲಿಂಗಧಾರಣದ ಸಂಸ್ಕಾರವನ್ನು ಬಹು ಜನರು ಮಾಡುತ್ತಾರೆ; ಮರಣದ ಸಂಸ್ಕಾರಕ್ಕೆ ಜಂಗಮನು ಬೇಕಾಗುತ್ತಾನೆ; ಬಸವಣ್ಣನ ಪೂಜೆಯನ್ನು ಸಹ ಕೆಲವರು ಮಾಡುತ್ತಾರೆ. ಆದ್ದರಿಂದ ಲಿಂಗವಂತ ಮತದ ಪ್ರಸಾರವು ಇವರಲ್ಲಿ ಬೆಳಿಯುತ್ತ ನಡಿದದೆಂದೆನ್ನಲಿಕ್ಕೆ ಅಡ್ಡಿ ಇಲ್ಲ.

**ವಡೇರು.**— ಈ ಹೆಸರಿನ ಕುರುಬರ ಗುರುಗಳು ಭಿಕ್ಷೆಯಿಂದ ಜೀವಿಸುತ್ತಾರೆ. ಇವರು ಕೊರಳಲ್ಲಿ ಲಿಂಗ ಕಟ್ಟಿಕೊಂಡು ಕುರುಬರ ಮನೆಗಳಲ್ಲಿ ಉಣ್ಣುತ್ತ ಅಡ್ಡಾಡುವರು.

**ವಡೇರು.**

ಕುರುಬರ ಹೆಣ್ಣು ಇವರು ತಕ್ಕೊಳ್ಳುತ್ತಾರೆ; ಆದರೆ ತಮ್ಮ ಹೆಣ್ಣು ಕುರುಬರಿಗೆ ಕೊಡುವದಿಲ್ಲ. ಇವರು ಯಾವ ಹೋರೆಯನ್ನೂ ಮಾಡುವದಿಲ್ಲ; ಇವರ ಸಂಖ್ಯೆವು ಸ್ವಲ್ಪವಿರುತ್ತದೆ.

**ಗೌಳಿಗರು.**— ರಜಪೂತರು, ಮುಸಲ್ಮಾನರು, ಕುರುಬರು ಮುಂತಾದವರು ಹಾಲು, ಬೆಣ್ಣೆ, ಮಾರಿ ಗೌಳಿಗರೆನ್ನಿಸಿ ಕೊಳ್ಳುತ್ತಾರೆ. ಆದರೆ ನಿಜವಾದ ಗೌಳಿಗರು ಬೇರೆ ಇರುತ್ತಾರೆ.

**ಗೌಳಿಗರು.**

ಅವರು ಮರಾಠೀ ಭಾಷೆಯನ್ನಾಡುವರು. ಈ ಗೌಳಿಗರಲ್ಲಿ ನಂದಗೌಳಿ, ಮರಾಠೀ ಅಥವಾ ಖಿಲಾರೀ ಗೌಳಿ, ಯೆಂದು ಯೆರಡು ಭೇದಗಳಿವೆ. ಅವರವರಿಗೆ ಊಟದ ಬಳಿಕೆಯಾಗುವದಿಲ್ಲ. ನಂದ ಗೌಳಿಗರು ಲಿಂಗವಂತರು; ಹೆಚ್ಚಾಗಿ ಲಿಂಗವಂತರ ಆಚರಣವನ್ನೇ ಮಾಡುತ್ತಾರೆ. ಇವರು ಮದ್ಯ ಮಾಂಸ ಮುಟ್ಟುವದಿಲ್ಲ; ಚಂದ್ರಶೇಖರಪ್ಪನೆಂಬ ಲಿಂಗವಂತ ಗುರುವಿನ ಶಿಷ್ಯರಾಗಿ ನಡಿಯುವರು. ಹೆಣಗಳನ್ನು ಹುಗಿಯುವರು. ಆದರೆ ಇವರು ಬ್ರಾಹ್ಮಣರಿಗೆ ಮಾನಕೊಡುತ್ತಾರೆ; ಖಂಡೋಬಾ, ತುಳಜಾ ಭವಾನಿ, ಕೃಷ್ಣ, ಈ ದೇವತೆಗಳಿಗೆ ನಡಕೊಳ್ಳುವರು. ಕೃಷ್ಣನಲ್ಲಿ ಇವರ ಭಕ್ತಿ ಹೆಚ್ಚು; ಕೃಷ್ಣನ ಜನ್ಮ ದಿವಸವು (ಗೋಕುಲಾಷ್ಟಮಿ) ಇವರಿಗೆ ದೊಡ್ಡ ಹಬ್ಬವು. ಇವರ ಹೆಂಗಸರು ಕಚ್ಚೆ ಹಾಕುವರು; ಕಡೆಗಾದಾಗ ೩ ದಿವಸ ಹೊರಗೆ ಕೂಡ್ರುವರು. ಮರಾಠೀ ಅಥವಾ ಖಿಲಾರೀ ಗೌಳಿಗರು ತೋರಿಕೆಯಲ್ಲಿ ಕುಣಬಿಗಳಂತೆ ಕಾಣುವರು. ಇವರ ಉಡಿಗೆ, ಆಹಾರ, ನಡಾವಳಿ, ಮುಂತಾದವುಗಳೆಲ್ಲ ಕುಣಬಿಗಳಂತೆಯೇ ಇರುತ್ತವೆ. ಇವರಲ್ಲಿ ಹೆಣಗಳನ್ನು ಸುಡುವರು. ಇವರಾದರೂ ಕೃಷ್ಣನಿಗೆ ಬಹಳ ಮಾನ ಕೊಡುವರು. ಯೆರಡೂ ಜಾತಿಗಳಲ್ಲಿ ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ; ಹೆಣ್ಣು ಮಕ್ಕಳ ಲಗ್ನವು ಹತ್ತು ವರ್ಷದೊಳಗೆ ಆಗುವದು. ಹಾಲು, ಮೊಸರು, ಬೆಣ್ಣೆ, ಮಜ್ಜಿಗೆ, ಇವುಗಳನ್ನು ಮಾರುವದೇ ಗೌಳಿಗರ ಮುಖ್ಯ ಹೋರೆಯು. ಬೇರೆ ಯಾವ ಹೋರೆಯನ್ನೂ ಇವರು ಮಾಡುವಂತೆ ತೋರುವದಿಲ್ಲ. ನಂದ ಗೌಳಿಗರು ಮದಿಮಕ್ಕಳನ್ನು ಅಕ್ಕಿ, ಜೋಳ, ತುಂಬಿದ ಬುಟ್ಟಿಯ ಮೇಲೆ ನಿಲ್ಲಿಸಿ, ಅಂತಃಪಟ ಹಿಡಿದು, ಅಕ್ಕೀಕಾಳು ಹಾಕುವರು; ಮೆರುವಣಿಗೆಯಲ್ಲಿ ಅವರನ್ನು ಯೆತ್ತಿನ ಮೇಲೆ ಕೂಡ್ರಿಸುವರು.

**ಗೊಲ್ಲರು.**—ಇವರ ವರ್ಣನೆಯು ನಾಲ್ಕೂ ಜಿಲ್ಲೆಗಳಲ್ಲಿ ಬೇರೆ ಬೇರೆ ಪ್ರಕಾರದ್ದಿರುತ್ತದೆ; ಒಂದಕ್ಕೊಂದು ಹೊಂದುವ ಹಾಗೆ ಕಾಣುವದಿಲ್ಲ. ಆದ್ದರಿಂದ ಬೇರೆ ಬೇರೆ ವರ್ಣನೆಗಳ ಸಾರಾಂಶವನ್ನು ಕೆಳಗೆ ಕೊಡುತ್ತೇವೆ.

**ಗೊಲ್ಲರು.**

ವಿಜಾಪುರ ಜಿಲ್ಲೆಯ ಗೊಲ್ಲರಲ್ಲಿ ಹಣಮ ಗೊಲ್ಲರು, ಕೃಷ್ಣ ಗೊಲ್ಲರು, ಪಾಕನಾಕ ಗೊಲ್ಲರು, ಶಾಸ್ತ್ರ ಗೊಲ್ಲರು, ಅಡವೀ ಗೊಲ್ಲರು, ಯೆಂಬ ೫ ವೊಳ ಜಾತಿಗಳನ್ನು ಯೆಣಿಸುವರು. ಆದರೆ ಶಾಸ್ತ್ರ ಗೊಲ್ಲರು ಈ ಜಿಲ್ಲೆಯಲ್ಲಿ ಇಲ್ಲ; ಪಾಕನಾಕ ಗೊಲ್ಲರದೊಂದೇ ಮನೆಯು ಬಾದಾವಿಯಲ್ಲಿ ಇರುತ್ತದೆ. ಇವರು ಪರಸ್ಪರ ಊಟದ ಬಳಿಕೆ ಮಾಡುವದಿಲ್ಲ. ಕೃಷ್ಣ ಗೊಲ್ಲರೂ ಹಣಮ ಗೊಲ್ಲರೂ ನಿಜಾಮನ ಇಲಾಖೆಯಿಂದ ಬಂದವರು; ಇವರಿಗೆ ಹಲಕೆಲವು ಕಡೆಯಲ್ಲಿ ಇನಾಮು ಭೂಮಿಗಳಿರುತ್ತವೆ. ಕೃಷ್ಣ ಗೊಲ್ಲರು ಕೃಷ್ಣನ ಭಕ್ತರು, ಹಣಮ ಗೊಲ್ಲರು ಹಣಮಂತನ ಪೂಜಾರಿಗಳು. ಯೆರಡೂ ಜಾತಿಗಳ ಜನರು ಕನ್ನಡ ಭಾಷೆಯನ್ನಾಡುತ್ತಾರೆ. ಇವರ ಗುರು "ಉಸ್ತುಮೊರ," ಓಪ್ಪುಮರ ಕುಲದವನೆಂದು ತೋರುತ್ತದೆ. ಇವರು ತಮ್ಮಲ್ಲಿಯ ಕಾರ್ಯಗಳಿಗೆ ಬ್ರಾಹ್ಮಣರನ್ನು ಕರಿಯುತ್ತಾರೆ. ಹೆಣಗಳನ್ನು ಸುಡುತ್ತಾರೆ, ಇಲ್ಲವೆ ಹುಗಿಯುತ್ತಾರೆ. ಪಾಕನಾಕ ಗೊಲ್ಲರೂ ಕನ್ನಡ ಭಾಷೆಯವರೇ; ಕೃಷ್ಣನಿಗೂ ಹನುಮಂತನಿಗೂ ನಡಕೊಳ್ಳುತ್ತಾರೆ. ಇವರು ಆದವಾನೀ ಶೀಮೆಯಿಂದ ಬಂದವರೆಂದು ಹೇಳುತ್ತಾರೆ.

ಅಡವೀ ಗೊಲ್ಲರಿಗೆ ತೆಲಗು ಗೊಲ್ಲರೆಂತಲೂ ಅನ್ನುವರು. ಇವರು ಮನೆಯಲ್ಲಿ ತೆಲಗು ಭಾಷೆಯನ್ನಾಡುವರು. ಅವರ ಅಡ್ಡ ಹೆಸರುಗಳು ಜಾಧವ, ಮೋರೆ, ಪವಾರ, ಸಿಂದೆ, ಯಾದವ, ಇತ್ಯಾದಿಗಳುಂಟು. ಇದರಿಂದಲೂ ಇವರಲ್ಲಿಯ ಗಂಡು ಹೆಣ್ಣುಗಳ ಹೆಸರುಗಳಿಂದಲೂ ಇವರು ಉತ್ತಮ ಕುಲದ ಮಹಾರಾಷ್ಟ್ರರೆಂದು ತಿಳಿಯುತ್ತದೆ. ಇವರ ಮುಖಲಕ್ಷಣ, ಆಹಾರ, ನಡಾವಳಿ, ಇವೆಲ್ಲ ಹೆಚ್ಚು ಕಡಿಮೆ ಮಹಾರಾಷ್ಟ್ರರಂತೆ ಇರುತ್ತವೆ. ಹೆಂಗಸರ ಉಡಿಗೆಗಳೂ ಮಹಾರಾಷ್ಟ್ರ ಹೆಂಗಸರಂತೆ ಇರುತ್ತವೆ. ಈ ಗೊಲ್ಲರು ವೆಂಕಟರಮಣ, ತುಳಜಾ ಭವಾನಿ, ಹನುಮಂತ, ಯೆಲ್ಲಮ್ಮ, ಈ ದೇವತೆಗಳಿಗೆ ನಡಕೊಳ್ಳುವರು. ಆದರೆ ಇವರಿಗೆ ಗುರು ಇಲ್ಲ. ಬ್ರಾಹ್ಮಣರು ಇವರಲ್ಲಿಯ ಕಾರ್ಯಗಳನ್ನು ಮಾಡಿಸುವರು. ಇವರಲ್ಲಿ ಮದ್ಯ ಮಾಂಸಗಳಿಗೆ ಅಡ್ಡಿ ಇಲ್ಲ; ಕೆಲವರಿಗೆ ಅಫೂ, ಗಾಂಜೆ, ಭಂಗಿ, ಇವುಗಳ ಚಟ ಇರುತ್ತದೆ. ಇವರು ಬ್ರಾಹ್ಮಣರು, ಲಿಂಗವಂತರು, ರಜಪೂತರು, ಆರೇರು ಇವರ ಮನೆಯಲ್ಲಿ ಉಣ್ಣುತ್ತಾರೆ. ಅಡವೀ ಗೊಲ್ಲರ ಗುಡುಸಲುಗಳು ಊರ ಹೊರಗೆ ಇರುತ್ತವೆ. ಇವರಲ್ಲಿ ಹೊಲ ಮನೇ ಮಾಡುವವರು ಬಹು ಕಡಿಮೆ. ವನಸ್ಪತಿಗಳನ್ನು ಮಾರುವದೂ ರೋಗಗಳನ್ನು ಪರೀಕ್ಷಿಸಿ ಔಷಧ ಕೊಡುವದೂ ಇವರ ಮುಖ್ಯ ಹೋರೆಯು. ಆದ್ದರಿಂದ ಇವರಿಗೆ "ವೈದೂ," ಅಂದರೆ ವೈದ್ಯರೆಂಬ ಹೆಸರು ಬಂದದೆ. ಇವರ ಹೆಂಗಸರು ಸಿಂದಿಯ ಚಾಪೆಗಳನ್ನು ಹೆಣೆದು ಮಾರುತ್ತಾರೆ. ಈ ಗೊಲ್ಲರಲ್ಲಿ ಕೆಲವರು ಮೈಯೊಳಗಿನ ನಾರು ತೆಗಿಯುವದರಲ್ಲಿಯೂ, ತುಮ್ಮಡೀ ಹಚ್ಚಿ ರಕ್ತ ತೆಗಿಯುವದರಲ್ಲಿಯೂ ಕುಶಲರಿರುತ್ತಾರೆ. ಇವರಿಗೆ ವನಸ್ಪತಿಗಳು ವೊಳಿತಾಗಿ ಗೊತ್ತಿರುತ್ತವೆ;

ಅವುಗಳನ್ನು ಮುಖ್ಯವಾಗಿ ಕಲ್ಯಾಣ ಕಲಬುರ್ಗಿಯ ಶೀಮೆಯಿಂದ ಹುಡುಕಿ ತರುತ್ತಿರುತ್ತಾರೆ. ಆದ್ದರಿಂದ ಈ ತೆಲಗು ಗೊಲ್ಲರು ಉತ್ತಮ ಕುಲದ ಮಹಾರಾಷ್ಟ್ರರಾದಾಗ್ಯೂ ನಿಜಾಮಿಾ ರಾಜ್ಯದ ತೆಲಗು ಶೀಮೆಯಿಂದ ಬಂದವರೆಂದು ತೋರುತ್ತದೆ.

ಬೆಳಗಾವೀ ಜಿಲ್ಲೆಯ ಗೊಲ್ಲರು ತೆಲಗು ಭಾಷೆಯನ್ನು ಆಡುತ್ತಾರೆ. ಮೇಲಿನ ಅಡವೀ ಗೊಲ್ಲರ ವರ್ಣನೆಯೆಲ್ಲ ಇವರಿಗೂ ಹತ್ತುತ್ತದೆ. (ಆದರೆ ಇವರ ಅಡ್ಡ ಹೆಸರುಗಳನ್ನು ಮೂಲಗ್ರಂಥದಲ್ಲಿ ಹೇಳಿಲ್ಲ). ಇವರು ಲಗ್ನ ಕಾರ್ಯಕ್ಕೆ ಬ್ರಾಹ್ಮಣರನ್ನು ಕರಿಯುತ್ತಿದ್ದಾಗ್ಯೂ, ಮರಣ ಸಂಸ್ಕಾರಕ್ಕೆ ಜಂಗಮನನ್ನು ಕರಿಯುವರು; ಹೆಣಗಳನ್ನು ಹುಗಿಯುವರು; ೧೪ ದಿವಸ ಸೂತಕ ಹಿಡಿದು ಕಡೆಯಲ್ಲಿ ಜಂಗಮನನ್ನು ಕರಿಯುವರು; ಅವನು ಗಂಟೆ ಬಾರಿಸಿ ಶಂಖ ಊದಿ ಹೋದನೆಂದರೆ ಸೂತಕದಿಂದ ಶುದ್ಧಿಯಾಯಿತು!

ಧಾರವಾಡ ಜಿಲ್ಲೆಯವರಾದರೂ ಮನೆಯಲ್ಲಿ ತೆಲಗೇ ಆಡುತ್ತಾರೆ. ಆದರೆ ಇವರಿಗೆ ಅಡ್ಡ ಹೆಸರುಗಳಿಲ್ಲ. ಇವರಲ್ಲಿ ಅಂಬಿರ ವಂಡ್ಲು, ಬಿಂದು ವಂಡ್ಲು, ಚಸ್ರು ವಂಡ್ಲು, ಗಲ್ಲ ವಂಡ್ಲು, ಗೊಬ್ಬರ ವಂಡ್ಲು, ಯೆಂಬ ೫ ವೊಳಜಾತಿಗಳಿವೆ; ಈ ಜಾತಿಗಳಲ್ಲಿ ಪರಸ್ಪರ ಶರೀರ ಸಂಬಂಧವಾಗುತ್ತದೆ. ಇವರು ಊರೂರು ತಿರುಗುತ್ತಾರೆ. ಹೋದಲ್ಲಿ ಊರ ಹೊರಗೆ ಗುಡುಸಲು ಮಾಡಿಕೊಂಡು ನಿಲ್ಲುವರು. ಲಂಗೋಟಿಯೇ ಇವರ ಉಡಿಗೆ; ಹೆಂಗಸರು ಕೊರವರ ಹಾಗೆ ಹೊಲಸು ತಲೆ ಬಿಟ್ಟು ಕೊಂಡು ತಿರುಗುವರು. ಗಂಡಸರು ನಾಗರ ಹಾವು ತಕ್ಕೊಂಡು ಮನೆ ಮನೆಗೆ ಭಿಕ್ಷೆ ಬೇಡುತ್ತ ತಿರುಗುವರು; ಹೆಂಗಸರು ಸಿಂದಿಯ ಚಾಪೀ ಹೆಣಿಯುತ್ತ ಭಿಕ್ಷೆ ಬೇಡುವರು. ಇವರು ಯೆಲ್ಲಮ್ಮ, ಹನುಮಂತ, ಈ ದೇವರಿಗೆ ನಡಕೊಳ್ಳುವರು. ಆದರೆ ಇವರಿಗೆ ಗುರುವಿಲ್ಲ; ತಮ್ಮ ಲಗ್ನ ಕಾರ್ಯವನ್ನು ತಾವೇ ಮಾಡಿಕೊಳ್ಳುವರು; ಬ್ರಾಹ್ಮಣರನ್ನೂ ಲಿಂಗವಂತರನ್ನೂ ಕರಿಯುವದಿಲ್ಲ. ಹೆಣಗಳನ್ನು ಹುಗಿಯುವರು; ಜಂಗಮನು ಬಂದು ಚರಣ ತೀರ್ಥ, ಭಸ್ಮ ಕೊಟ್ಟ ಬಳಿಕ ಸೂತಕದವರು ಶುದ್ಧರಾಗುವರು. ಹೆಣ್ಣು ಮಕ್ಕಳ ಲಗ್ನವನ್ನು ನೆರಿದ ಬಳಿಕೇ ಮಾಡುವರು. ವಿಧವೆಗಳ ಲಗ್ನಕ್ಕೂ ಮದ್ಯ ಮಾಂಸಗಳಿಗೂ ಅಡ್ಡಿ ಇಲ್ಲ. ಲಗ್ನವಾದ ಬಳಿಕ ಹೆಂಗಸು ತೌರ ಮನೆಗೆ ಬಹುತರ ಹೋಗುವದಿಲ್ಲ; ಒಂದು ವೇಳೆ ಹೋದರೆ, ಗಂಡನೇ ಆಕೆಯ ಸಂಗಡ ಹೋಗಲಿಕ್ಕೆ ಬೇಕು. ಹೀಗೆ ಇಬ್ಬರೂ ಮೂರು ದಿವಸ ಮಾತ್ರ ಆ ತೌರ ಮನೆಯಲ್ಲಿ ಇರುವರು. ಲಗ್ನವಾದ ದಿವಸವೇ ಗಂಡ ಹೆಂಡರು ಕೂಡುವರು. ಮಾವನು ಅಳಿಯನಿಗೆ ಕಾಯಿಯನ್ನು ಕೊಡುವ ನಡಾವಳಿಯುಂಟು. ಹೆಂಗಸು ಹಾದರ ಮಾಡಿದರೆ, ವೊಂದು ಫೂಟು ಆಳವಾದ ತಗ್ಗು ತೆಗಿದು ಅದರ ಅಂಚಿನ ಮೇಲೆ ಮುಳ್ಳು ಹರವುವರು. ಆ ತಗ್ಗಿನೊಳಗೆ ಹಾದರ ಮಾಡಿದವಳನ್ನು ನಿಲ್ಲಿಸಿ, ಮುಳ್ಳಿನ ಮೇಲೆ ಕೂಡ್ರಿಸಿ, ಆಕೆಯ ಮೊಣಕಾಲ ಮೇಲೆ ಬೀಸುವ ಕಲ್ಲು ಇಡುವರು. ಈ ಪ್ರಾಯಶ್ಚಿತ್ತದಿಂದ ಹಾದರಗಿತ್ತಿಯು ಶುದ್ಧಳಾಗುತ್ತಾಳೆ. ಆದರೆ ಈ ಕುಲದಲ್ಲಿ ಹಾದರಾಗುವದೇ ಬಹು ಕಡಿಮೆ.

ಕಾನಡಾ ಜಿಲ್ಲೆಯ ಗೊಲ್ಲರಲ್ಲಿ ನಿಜ ಗೊಲ್ಲರು, ಕೆಂಪು ಗೊಲ್ಲರು, ಊರ ಗೊಲ್ಲರು, ಕಾಡು ಗೊಲ್ಲರು, ಹಾಲು ಗೊಲ್ಲರು, ಹಾವು ಗೊಲ್ಲರು, ಯೆಂಬ ಆರು ವೊಳಜಾತಿಗಳಿವೆ.

ಇವರು ಪರಸ್ಪರ ಊಟದ ಬಳಿಕೆ ಮಾಡುವದಿಲ್ಲ; ಮನೆಯಲ್ಲಿ ಕನ್ನಡ ಭಾಷೆಯನ್ನಾಡುವರು, ಮದ್ಯ ಮಾಂಸ ತಕ್ಕೊಳ್ಳುವರು. ಮೊದಲಿನ ಮೂರು ಜಾತಿಗಳ ಜನರು ಮನೆ ಮಾಡಿ ಕೊಂಡು ಇರುವರು, ಕೆಲವರು ಹಾಲು ಮಾರುವರು, ಸ್ವಲ್ಪ ಜನರು ಒಕ್ಕಲತನ ಮಾಡುವರು. ಕಡೆಯ ಮೂರು ಜಾತಿಯವರು ಊರೂರು ತಿರುಗುವರು. ಇವರು ಮೈಸೂರು ಶೀಮೆಯಿಂದ ಬಂದವರೆಂದು ಹೇಳುತ್ತಾರೆ; ಕೃಷ್ಣ, ಕಾಳಭೈರವ, ಅಂಬಿಕೆ, ಈ ದೇವತೆಗಳಿಗೆ ನಡಕೊಳ್ಳುವರು; ರಾಮಾನುಜ ಬ್ರಾಹ್ಮಣರನ್ನು ಲಗ್ನ ಕಾರ್ಯ ಮಾಡಿಸಲಿಕ್ಕೆ ಕರಿಯುವರು; ಆದರೆ ಇವರ ಗುರು ಲಿಂಗವಂತನು. ಹೆಣ್ಣು ಮಕ್ಕಳ ಲಗ್ನವನ್ನು ನೆರಿದ ಬಳಿಕ ಮಾಡುವರು. ವಿಧವೆಗಳ ಲಗ್ನಕ್ಕೂ ಮದ್ಯ ಮಾಂಸಗಳಿಗೂ ಅಡ್ಡಿ ಇಲ್ಲ. ಇವರು ಹೆಣಗಳನ್ನು ಹುಗಿದು, ಮರಣದ ಸಂಸ್ಕಾರವನ್ನು ಲಿಂಗವಂತರಂತೆ ಜಂಗಮನ ಸಹಾಯದಿಂದ ಮಾಡುವರು. ಇವರಲ್ಲಿ ಹೆಂಗಸು ಹಾದರ ಮಾಡಿ ಪಶ್ಚಾತ್ತಾಪ ತೋರಿಸಿದರೆ, ಆಕೆಗೆ ಹಿರೆ ಮನುಷ್ಯರು ಸಿಟ್ಟು ಮಾಡಿ ಕುಲದೊಳಗೆ ತಕ್ಕೊಳ್ಳುವರು.

ಈ ಯಾವತ್ತು ಜಾತಿಗಳ ಗೊಲ್ಲರು ಕಸುವಿನ ಮೈಕಟ್ಟಿನವರಾದಾಗ್ಯೂ ತೀರ ಬಡವರು; ಇವರ ಹೋರೆಗಳಿಂದ ಇವರ ಹೊಟ್ಟೆ ತುಂಬುವದಿಲ್ಲ. ಇವರ ಮಕ್ಕಳೂ ಶಾಲೆಗೆ ಹೋಗುವದಿಲ್ಲ.

**ಧನಗರರು.**

ಧನಗರರು.— ಇವರು ಕಾನಡಾ ಜಿಲ್ಲೆಯಲ್ಲಿ ಯಲ್ಲಾಪುರ ತಾಲೂಕಿನ ಅಡವಿಯಲ್ಲಿ ಇರುತ್ತಾರೆ. ಇವರ ಜನ್ಮಭಾಷೆ ಮಹಾರಾಷ್ಟ್ರವಾದಾಗ್ಯೂ, ಇವರು ಕೊಂಕಣಿಗರಲ್ಲ, ಮಹಾರಾಷ್ಟ್ರ ದೇಶದವರು. ಇವರ ಮೈಬಣ್ಣ ಕಪ್ಪು, ಆಳು ಗಿಡ್ಡ; ಲಂಗೋಟಿ, ರುಮಾಲ, ಕಂಬಳಿ, ಇಷ್ಟೇ ಇವರ ಉಡಿಗೆಗಳು. ಹೆಂಗಸರು ಕುಬ್ಬಸ ಹಾಕುವರು, ಕಚ್ಚೆ ಹಾಕುವದಿಲ್ಲ; ಹೊಲಸು ಬಹಳ. ಈ ಧನಗರರು ಯೆಮ್ಮೆ ಆಕಳುಗಳನ್ನು ಸಾಕಿ ತುಪ್ಪ ಮಾಡಿ ಮಾರುವರು. ತುಪ್ಪವು ಕೂಡಿ ಬದ್ದ ಹಾಗೆ ನೆಲದೊಳಗೆ ತಗ್ಗು ತೆಗಿದು ಅದರೊಳಗೆ ಗಿರಾಕಿ ಬರುವ ವರೆಗೆ ಸಂಗ್ರಹ ಮಾಡಿ ಇಡುವರು. ಇವರ ಯೆಮ್ಮೆ, ಆಕಳು, ಕೋಣ, ಯೆತ್ತುಗಳು ದೊಡ್ಡವು, ಕಸುವುಳ್ಳವು; ಅವುಗಳಿಗೆ ಬೆಲೆ ಬಹಳ ಬೀಳುತ್ತವೆ. ಧನಗರರು ಮಳೆಗಾಲ ಹೋದ ಬಳಿಕ ಅಡವಿಯಲ್ಲಿ ಹುಲ್ಲು ಇರುವ ವರೆಗೆ ದನಗಳನ್ನು ತಕ್ಕೊಂಡು ಊರೂರು ತಿರುಗುತ್ತ, ಹಾಲು, ಮೊಸರು, ತುಪ್ಪ ಗೊಬ್ಬರಗಳನ್ನು ಮಾರುವರು. ಇವರು ಮದ್ಯ ಮಾಂಸ ತಕ್ಕೊಳ್ಳುವರು, ವಿಧವೆಗಳ ಲಗ್ನ ಮಾಡುವರು, ಯಾವ ಕಾರ್ಯಕ್ಕೂ ಬ್ರಾಹ್ಮಣರನ್ನಾಗಲಿ ಜಂಗಮರನ್ನಾಗಲಿ ಕರಿಯುವದಿಲ್ಲ, ಹೆಣ್ಣು ಮಕ್ಕಳ ಲಗ್ನವನ್ನು ಹನ್ನೆರಡು ವರ್ಷದೊಳಗೆ ಮಾಡುವರು. ಇವರು ಹೆಣ್ಣು ದೇವತೆಗಳಿಗೆ ನಡಕೊಳ್ಳುವದು ಹೆಚ್ಚು. ಲಗ್ನದ ವಿಧಾನಗಳು ಮರಾಠೀ ಜನರಂತೆ ಆಗುತ್ತವೆ; ಹೆಣಗಳನ್ನು ಹುಗಿಯುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

## ಸಿಂದೀ ತೆಗಿಯುವ ಜಾತಿಗಳು.

| ಜಾತಿ. | ಧಾರವಾಡ. | | | ಬೆಳಗಾವಿ. | | | ವಿಜಾಪುರ. | | | ಕಾನಡಾ. | | |
|---|---|---|---|---|---|---|---|---|---|---|---|---|
| | ಗಂಡಸು | ಹೆಂಗಸು | ಒಟ್ಟು | ಗಂಡಸು | ಹೆಂಗಸು | ಒಟ್ಟು | ಗಂಡಸು | ಹೆಂಗಸು | ಒಟ್ಟು | ಗಂಡಸು | ಹೆಂಗಸು | ಒಟ್ಟು |
| ೧ ಇಳಗೇರು..... | ೬೦೫ | ೬೪೫ | ೧೨೫೦ | ೫೬೮ | ೬೪೦ | ೧೨೦೮ | ೩೩೬ | ೩೦೯ | ೬೪೫ | ,, | ,, | ,, |
| ೨ ಹಳೆಪೈಕರು.... | ೬೪ | ೫೮ | ೧೨೨ | ,, | ,, | ,, | ,, | ,, | ,, | ೨೨೩೮೮ | ೨೦೫೫೧ | ೪೨೯೩೯ |
| ೩ ಭಂಡಾರಿಗಳು... | ,, | ,, | ,, | ೬೯೪ | ೬೦೦ | ೧೨೯೪ | ,, | ,, | ,, | ೪೯೮೫ | ೪೭೯೬ | ೯೭೮೧ |
| ೪ ಕೊಮಾರ ಪೈಕರು. | ,, | ,, | ,, | ,, | ,, | ,, | ,, | ,, | ,, | ೪೪೯೭ | ೪೨೪೬ | ೮೭೪೩ |
| ೫ ಚೌಧರಿಗಳು ... | .. | .. | .. | .. | .. | .. | .. | .. | .. | ೭೩ | ೮೩ | ೧೫೬ |
| ೬ ಕಲಾಲರು .... | ,, | ,, | ,, | ೨೫ | ೨೩ | ೪೮ | ೩೦ | ೧೭ | ೪೭ | ೧೬ | ೧೧ | ೨೭ |

**ಇಳಗೇರು.**

ಇಳಗೇರು.—ಇವರು ಸುಮಾರು ನೂರು ವರ್ಷದ ಹಿಂದೆ ಬಳ್ಳಾರೀ ಸೀಮೆಯಿಂದ ಬಂದರೆಂದು ಹೇಳುತ್ತಾರೆ. ಇವರ ಜನ್ಮಭಾಷೆ ಕನ್ನಡ; ತೋರಿಕೆಯಲ್ಲಿ ಕಬ್ಬಲಿಗೇರ ಹಾಗೆ ಕಾಣುತ್ತಾರೆ. ಇವರ ನಡಾವಳಿಗಳಾದರೂ ಕಬ್ಬಲಿಗೇರ ನಡಾವಳಿಗಳಿಗೆ ಹೊಂದುತ್ತವೆ. ಕೆಲವರು ಕಿವಿಯೊಳಗೆ ಆರೇರ ಹಾಗೆ ದೊಡ್ಡ ಬಾವಲೀ ಹಾಕಿ ಕೊಳ್ಳುತ್ತಾರೆ. ಇವರಿಗೆ ಗರಡೀ ಸಾಧಕದ ಪ್ರೀತಿ ಬಹಳ. ಮಾಂಸಕ್ಕೆ ನಿಷೇಧವಿಲ್ಲ; ಮದ್ಯವನ್ನು ಹಲಕೆಲವರು ಕದ್ದು ಮುಚ್ಚಿ ಕುಡಿಯುವರು. ಆದರೆ ಸಿಂದಿಯನ್ನು ಯಾರೂ ಕುಡಿಯುವದಿಲ್ಲ. ಸಿಂದೀ ಮರವು ತಮ್ಮ ತಂಗಿಯೆಂದು ಇವರು ಹೇಳುತ್ತಾರೆ. ಲಗ್ನ ಮುಂತಾದ ಶುಭ ಕಾರ್ಯಗಳಿಗೆ ಬ್ರಾಹ್ಮಣರನ್ನು ಕರಿಯುವರು. ಲಗ್ನದಲ್ಲಿ ಮದಿಮಕ್ಕಳನ್ನು ಅಕ್ಕೀ ತುಂಬಿದ ಬುಟ್ಟಿಗಳಲ್ಲಿ ನಿಲ್ಲಿಸಿ ಅಂತಃಪಟ ಹಿಡಿದು ಅಕ್ಕೀಕಾಳು ಹಾಕುವರು. ಆದರೆ ಲಿಂಗವಂತ ಮತಕ್ಕೆ ಈ ಜಾತಿಯ ವೊಲವು ಹೆಚ್ಚು ಇರುತ್ತದೆ. ಗುರು ಲಿಂಗವಂತನೇ. ಜನ್ಮಕಾಲಕ್ಕೆ ಜಂಗಮನು ಬರಲಿಕ್ಕೆ ಬೇಕು; ಇತರ ಕಾರ್ಯಗಳಲ್ಲಿಯೂ ಜಂಗಮರನ್ನು ಕರಿಯುವರು. ಹತ್ತೆಂಟು ವರ್ಷದ ಹಿಂದೆ ಇವರಲ್ಲಿ ಹೆಣಗಳನ್ನು ಸುಡುತ್ತಿದ್ದರು; ಆದರೆ ಈಗ ಹುಗಿಯುತ್ತಾರೆ. ಹುಗಿಯುವಾಗ ಜಂಗಮನಿರಲಿಕ್ಕೆ ಬೇಕು. ಇಳಗೇರು ಬಹುತರ ಪ್ರತಿನಿತ್ಯ ಸ್ನಾನ ಮಾಡಿ ಹಣೆಗೆ ಗಂಧದ ಬೊಟ್ಟು ಹಚ್ಚುವರು. ತುಳಜಾ ಭವಾನಿ, ಯೆಲ್ಲಮ್ಮ, ವಿಠೋಬ, ಹಿಪ್ಪರಿಗೆಯ ರತ್ನರಾಯ, ಮುಂತಾದ ದೇವತೆಗಳಿಗೆ ಇವರು ನಡಕೊಳ್ಳುವರು, ಸಿಂದಿ ಅಥವಾ ಈಚಲ ಮರದ ರಸ ತೆಗಿದು ಮಾರುವದೇ ಇಳಗೇರ ಮುಖ್ಯ ಹೋರೆಯು. ಬೆಳಿಗ್ಗೆ ಮರದ ಟೊಂಗಿಯ ಕೆಳಗೆ ತ್ರಿಕೋಣಾಕೃತಿಯ ಕಚ್ಚು ಹಾಕಿ, ಅದರ ಕೆಳಗೆ ಮಗಿಯನ್ನು ಕಟ್ಟಿ, ಕಚ್ಚಿನೊಳಗಿಂದ ಹೊರಡುವ ರಸವು ಮಗಿಯೊಳಗೆ ಬೀಳುವಂತೆ ಯೆಲೆಯನ್ನು ಹಚ್ಚಿಡುವರು; ಮರು ದಿವಸ ಬೆಳಿಗ್ಗೆ ಆ ಮಗಿಯೊಳಗಿನ ರಸ ತೆಗೆದು

ಕೊಂಡು ಮಾರಾಟಕ್ಕೆ ವೊಯ್ಯುವರು. ಚಳಿಗಾಲದಲ್ಲಿ ರಸ ಬಹಳ ಹೊರಡುತ್ತದೆ; ಆದರೆ ಬೇಸಿಗೆಯಲ್ಲಿ ಮಾರಾಟ ಬಹಳ ಆಗುತ್ತದೆ. ಇಳಗೇರಲ್ಲಿ ಕೆಲವರು ವೊಕ್ಕಲತನ ವನ್ನೂ ಮಾಡುವರು. ಧಾರವಾಡ ಜಿಲ್ಲೆಯಲ್ಲಿ ಮಾತ್ರ ಇಳಗೇರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಹಳೆ ಪೈಕರು.**

ಹಳೆ ಪೈಕರು.—ಇವರು ಕಾನಡಾ ಜಿಲ್ಲೆಯಲ್ಲಿಯೂ ಧಾರವಾಡ ಜಿಲ್ಲೆಯ ದಕ್ಷಿಣ ಭಾಗದಲ್ಲಿಯೂ ಮಾತ್ರ ಇರುತ್ತಾರೆ. ಕಾನಡಾ ಜಿಲ್ಲೆಯವರು ತಾಡೀ ತೆಗೆಯುವ ಕೆಲಸ ವನ್ನೇ ಮಾಡುತ್ತಾರೆ. ಧಾರವಾಡ ಜಿಲ್ಲೆಯವರು ವೊಕ್ಕಲತನ ದಿಂದ ಜೀವಿಸುತ್ತಾರೆ. ಕಾನಡಾ ಜಿಲ್ಲೆಯ ಘಟ್ಟದ ಮೇಲಿನ ಹಳೆ ಪೈಕರು ಘಟ್ಟದ ಕೆಳಗಿನವರ ಕೂಡ ಊಟದ ಬಳಿಕೆಯನ್ನು ಸಹ ಮಾಡುವದಿಲ್ಲ. ಘಟ್ಟದ ಕೆಳಗಿನ ಹಳೆ ಪೈಕರಿಗೆ ದಿವಾರು ಯೆಂತಲೂ ಅನ್ನುವರು. ಕಾನಡಾ ಜಿಲ್ಲೆಯ ವರು ಸನ್ ೧೮೭೦ನೇ ವರ್ಷದ ವರೆಗೆ ಸೇಗೋ ಯೆಂಬ ಕಾಷ್ಠ ಪಿಷ್ಟವನ್ನು ತೆಗಿದು ಉಪಜೀವನ ಮಾಡುತ್ತಿದ್ದರು. ಆದರೆ ವೊಳಗಡೆಯಲ್ಲಿ ಆ ಕೆಲಸವನ್ನು ಸರಕಾರದವರು ಆಕ್ರಮಿಸಿದ್ದಾರೆ.

ಹಳೆ ಪೈಕರೆಂದರೆ ಹಳೆ ಶಿಪಾಯಿಗಳೆಂಬ ಅರ್ಥವಿರುತ್ತದೆಂದು ಕೆಲವರು ಹೇಳು ತ್ತಾರೆ. ಇವರ ಜನ್ಮಭಾಷೆ ಕನ್ನಡ. ಗಂಡಸರು ಬಹು ಜನರು ಲಂಗೋಟ ಹಾಕು ವರು; ಕೆಲವರು ಧೋತ್ರ ಉಡುವರು. ಹೆಂಗಸರು ಕುಬ್ಬಸ ಹಾಕುವದಿಲ್ಲ, ಕೊರಳೊ ಳಗೆ ಹಾಲ್ವಕ್ಕೀ ವೊಕ್ಕಲಿಗರ ಹೆಂಗಸ್ಸರಂತೆ ಕರೆಮಣಿಯ ಸರಗಳ ಜೂಡೆಗಳನ್ನು ಹಾಕಿ ಕೊಳ್ಳುವರು. ಆ ಸರಗಳು ಯೇಳೆಂಟು ಶೇರಿನ ತೂಕವಾಗಿರ ಬಹುದು. ಹಳೆ ಪೈಕರು ವೆಂಕಟರಮಣನಿಗೆ ಮುಖ್ಯವಾಗಿ ನಡಕೊಳ್ಳುತ್ತಾರೆ. ಗಿರಿಯ ಯಾತ್ರೆ ಮಾಡಿ ಬಂದವರು ಮನೆಯಲ್ಲಿ ತುಳಸೀ ಗಿಡದ ಕೆಳಗೆ ಚಂದನದ ವೆಂಕಟರಮಣನನ್ನು ಕೂದ್ರಿಸಿ ಇಡು ವರು. ಇವರ ಗುರು ಲೋಕಾಚಾರ್ಯನೆಂಬ ಬ್ರಾಹ್ಮಣನು ಸಾಗರದಲ್ಲಿ ಇರುತ್ತಾನೆ. ಇವರು ಮಾಂಸ ತಿನ್ನುವರು; ಆದರೆ ಮದ್ಯ ಕುಡಿಯ ಬಾರದೆಂದು ಜಾತಿ ನಿರ್ಬಂಧವಿ ರುತ್ತದೆ. ಕೆಲವರು ಹೆಣಗಳನ್ನು ಸುಡುವರು, ಕೆಲವರು ಹುಗಿಯುವರು. ಇವರ ಆಹಾ ರ, ಉಡಿಗೆ, ನಡಾವಳಿ, ಧರ್ಮ ಕಾರ್ಯಗಳು, ಮುಂತಾದವುಗಳೆಲ್ಲ ಹಾಲ್ವಕ್ಕೀ ವೊಕ್ಕ ಲಿಗರಂತೆ ಇರುತ್ತವೆ. ಇವರ ಮಕ್ಕಳು ಶಾಲೆಗೆ ಹೋಗುವದು ಅಪರೂಪ.

**ಭಂಡಾರಿಗಳು.**

ಭಂಡಾರಿಗಳು.—ಇವರು ಕಾನಡಾ ಜಿಲ್ಲೆಯಲ್ಲಿ ಘಟ್ಟದ ಕೆಳಗೂ ಬೆಳಗಾವೀ ಜಿಲ್ಲೆಯ ಪಶ್ಚಿಮ ಭಾಗದಲ್ಲಿಯೂ ಮುಖ್ಯವಾಗಿ ವಾಸಿಸುತ್ತಾರೆ. ಕಾನಡಾ ಜಿಲ್ಲೆಯಲ್ಲಿ ಗೋಮಂತಕದಿಂದ ಬಂದವರು, ಬೆಳಗಾವೀ ಜಿಲ್ಲೆಯಲ್ಲಿ ಸು ಮಾರು ೬೦ ವರ್ಷದ ಹಿಂದೆ ರತ್ನಾಗಿರಿಯಿಂದ ಬಂದರು. ಇವ ರು ಈಚಲ ಮರ, ತೆಂಗಿನ ಮರಗಳಿಂದ ತಾಡೀ ತೆಗಿದು ಮಾರಾಟ ಮಾಡುವದಲ್ಲದೆ, ವೊಕ್ಕಲತನ, ಕೂಲಿ, ತೆಂಗಿನ ಕಾಯಿಯ ಮೇಲಿನ ಸೋಪಿಯನ್ನು ತೆಗಿಯುವದು, ಮುಂತಾದ ಬೇರೆ ಹೋರೆಗಳನ್ನು ಮಾಡುವರು. ಇವರ ಹೆಂಗಸರು ಕಾತೀ ಹಗ್ಗ ಮಾಡಿ

ಮಾರುವದಲ್ಲದೆ, ಸಮುದ್ರ ದಂಡೆಯಲ್ಲಿ ಬಾಯಿ ತೆರಿಯದೆ ಇದ್ದಂಥ ಕೀಟಕಗಳುಳ್ಳ ಶಿಂಪುಗಳನ್ನು ಆರಿಸಿ ತಂದು ಕುದಿಸಿ ಅರ್ಕ ತೆಗಿದು ಅದನ್ನೂ ಒಣಗಿಸಿದ ಕೀಟಕಗಳನ್ನೂ ಮಾರುವರು.

ಭಂಡಾರಿಗಳು ಸುರೂಪಿಗಳು, ವಿಶೇಷವಾಗಿ ಲಂಗೋಟಿಯನ್ನು ಹಾಕುವರು; ಬೆಳಗಾವೀ ಜಿಲ್ಲೆಯವರು ಧೋತ್ರ ಉಡುವರು. ಹೆಂಗಸರು ಕಚ್ಚೆ ಹಾಕುವರು; ಕಾನಡಾ ಜಿಲ್ಲೆಯವರು ಕುಬ್ಬಸ ತೊಡುವದಿಲ್ಲ. ಭಂಡಾರಿಗಳ ಜನ್ಮಭಾಷೆ ಕೊಂಕಣೀ, ಇಲ್ಲವೆ ಮರಾಠಿ. ಗೋಮಂತಕದ ಬಾರ್ದೇಶವೆಂಬ ಭಾಗದಲ್ಲಿಯ ರವಳನಾಥನು ಇವರ ಕುಲ ದೇವತೆ; ವಿಠೋಬಾ, ಮಹಾಮಾಯಿ, ಮುಂತಾದ ದೇವತೆಗಳಿಗೂ ಇವರು ನಡಕೊಳ್ಳುವರು. ಇವರ ಮನೆಯಲ್ಲಿ ವಾಡಿಕೆಯಾಗಿ ತುಳಸೀ ಗಿಡವಿರುವದು. ಬ್ರಾಹ್ಮಣರೇ ಇವರ ಉಪಾಧ್ಯಾಯರು. ಇವರು ಮದ್ಯ ಮಾಂಸಗಳನ್ನು ನಿರಾತಂಕವಾಗಿ ತಕ್ಕೊಳ್ಳುವರು; ಹೆಣ್ಣು ಮಕ್ಕಳ ಲಗ್ನವನ್ನು ೧೨ ವರ್ಷ ತುಂಬುವದರೊಳಗೆ ಮಾಡುವರು; ವಿಧವೆಗಳ ಲಗ್ನ ಮಾಡುವದಿಲ್ಲ; ಹೆಣಗಳನ್ನು ಸುಟ್ಟು ೧೦ ದಿವಸ ಸೂತಕ ಹಿಡಿಯುವರು. ಇವರ ಹೆಂಗಸರು ಬ್ರಾಹ್ಮಣರು ಮುಂತಾದ ಉತ್ತಮ ಕುಲದವರಲ್ಲಿ ಹಾದರ ಮಾಡಿದರೆ ಅವರಿಗೆ ಬಹುತರ ಶಿಕ್ಷೆಯಾಗುವದಿಲ್ಲ. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಕೊಮಾರ ಪೈಕರು.**

ಕೊಮಾರ ಪೈಕರು.—ಇವರು ಕಾನಡಾ ಜಿಲ್ಲೆಯಲ್ಲಿ ವಿಶೇಷವಾಗಿ ಘಟ್ಟದ ಕೆಳಗೆ ವಾಸಿಸುತ್ತಾರೆ. ಇವರು ಬಹು ಕಾಲದ ಹಿಂದೆ ಕಲಬುರ್ಗೆಯ ಶೀಮೆಯಿಂದ ಬಂದರೆಂದು ಹೇಳುತ್ತಾರೆ. ಇವರ ಕುಲದವರು ಆ ಶೀಮೆಯಲ್ಲಿ ಲಿಂಗವಂತರಿರುತ್ತಾರಂತೆ. ಆದರೆ ಇವರು ಲಿಂಗವನ್ನು ಧರಿಸುವದಿಲ್ಲ. ಕೊಮಾರ ಪೈಕರೆಂದರೆ ಕಲಾದಗಿಯ ಕೊಮಾರ ಸ್ವಾಮಿಯ ಶಿಷ್ಯರೆಂಬ ಅರ್ಥವಿರುತ್ತದೆಂದು ಹೇಳುತ್ತಾರೆ; ಆದರೆ ಇದು ನಿಜವೆಂದು ತೋರುವದಿಲ್ಲ. ಸ್ವಾದೆಯ ಅರಸರ ದಂಡಿನಲ್ಲಿ ಕೊಮಾರ ಪೈಕರು ಶಿಪಾಯಿಗಳಾಗಿ ಚಾಕರಿ ಮಾಡುತ್ತಿದ್ದರು. ಹೈದರ ಅಲ್ಲಿಯು ಸನ್ ೧೭೬೩ರಲ್ಲಿ ಕಾನಡಾ ಜಿಲ್ಲೆಯನ್ನು ಆಕ್ರಮಿಸಿದ ಬಳಿಕ ಕೊಮಾರ ಪೈಕರು ಪುಂಡರಾಗಿ ದರೋಡೆಗಳನ್ನು ಹಾಕುವರು. ಆ ಕಾಲಕ್ಕೆ ಹೆಸರಿಗೆ ಬಂದವರಲ್ಲಿ ಹೆಂಜಾನಾಯಿಕನೆಂಬವನು ಕೆಲವು ಶೀಮೆಯನ್ನು ಆಕ್ರಮಿಸಿ, ಬ್ರಾಹ್ಮಣರನ್ನು ಬಲಾತ್ಕಾರದಿಂದ ತನ್ನ ಜಾತಿಯೊಳಗೆ ಶೇರಿಸಿದನಂತೆ. ಇಂಗ್ಲಿಷ ಸರಕಾರದ ಅಮಲು ಬಂದ ಬಳಿಕ ಇವರಲ್ಲಿ ಕೆಲವರು ದಂಡಿನೊಳಗೆ ಶೇರಿದರು; ಆದರೆ ಬಹು ಜನರು ಈಗ ಒಕ್ಕಲತನ ಮಾಡುತ್ತಾರೆ, ಕೆಲವರು ಕಟ್ಟಿಗೆ ಕೊರೆಯುವರು, ಕೆಲವರು ತಾಡೀ ತೆಗಿಯುವರು. ಇವರಿಗೆ ನಾಟಕ ಮಾಡುವ ಪ್ರೀತಿ ಬಹಳ; ಈ ಹೋರೆಯಿಂದಲೂ ಇವರಿಗೆ ಹಣ ದೊರಿಯುತ್ತದೆ.

ಕೊಮಾರ ಪೈಕರ ಜನ್ಮಭಾಷೆ ಕೊಂಕಣೀ ಮಿಶ್ರ ಕನ್ನಡ. ಇವರು ತಮ್ಮ ಹೆಸರಿನ ಮುಂದೆ ನಾಯಕ, ಇಲ್ಲವೆ ಮೆಹೆತ್ರಿ ಯೆಂಬ ಉಪಪದವನ್ನು ಧರಿಸುವರು. ಗಂಡ

ಸರು ಯೆತ್ತರಾಗಿ ಕಸುವುಳ್ಳವರಿರುವ ಕಾರಣ ದಂಡಿನ ಕೆಲಸಕ್ಕೆ ತಕ್ಕವರಿರುತ್ತಾರೆ. ಇವರ ಉಡಿಗೆ ಲಂಗೋಟಿ, ರುಮಾಲ, ಕಂಬಳಿ. ಹೆಂಗಸರು ಕಚ್ಚೆ ಹಾಕಿ ಕೊಂಡು ಕುಂಕುಮ ಹಚ್ಚುವರು, ಆದರೆ ಕುಬ್ಬಸ ತೊಡುವದಿಲ್ಲ. ಇವರಲ್ಲಿ ಮಾಂಸಾಹಾರಕ್ಕೆ ಅಡ್ಡಿ ಇಲ್ಲ; ಆದರೆ ಮದ್ಯ ಮುಟ್ಟ ಕೂಡದು. ಕೊಮಾರ ಪೈಕರು ಈಗ ಲಿಂಗವನ್ನು ಕಟ್ಟದಿದ್ದಾಗ್ಯೂ, ಅವರ ಮೊದಲಿನ ಲಿಂಗವಂತ ಧರ್ಮದ ಕುರುಹುಗಳು ಈಗ್ಯೂ ಕಾಣುತ್ತವೆ. ಇವರು ಬಸವನ ಪೂಜೆ ಮಾಡುವರು, ಜಂಗಮರು ಪೂಜ್ಯರೆಂದೆಣಿಸುವರು. ಆದರೆ ಇವರ ಉಪಾಧ್ಯಾಯರು ಜೋಶೀ ಕುಲದವರು. ಬಸವ, ವೆಂಕಟರಮಣ, ಕಾಳಭೈರವ, ಇವೇ ಇವರ ಮುಖ್ಯ ದೈವತಗಳು. ಸತ್ತ ಹಿರಿಯರ ಹೆಸರಿನಿಂದ ಸುಲಿಯದ ತೆಂಗಿನ ಕಾಯಿಯನ್ನು ಮನೆಯಲ್ಲಿ ಇಟ್ಟು ಪೂಜೆ ಮಾಡುವರು. ಆದಕ್ಕೆ ಮ್ಹಾಳ ಪುರುಸನೆಂಬ ಹೆಸರು. ಒಂದು ಬಳದವರು ತಮ್ಮ ತಮ್ಮ ಮ್ಹಾಳ ಪುರುಸಗಳನ್ನು ಹಿರಿತನದ ಮನೆಯಲ್ಲಿ ಇಟ್ಟು, ಆ ಮನೆಗೆ ಮ್ಹಾಳ ಘರ ಯೆಂಬ ಹೆಸರು ಕೊಡುವರು. ಕೊಮಾರ ಪೈಕರು ಇತರ ದೇವತೆಗಳಿಗಿಂತ ಈ ತೆಂಗಿನ ಕಾಯಿಗೆ ಬಹಳ ಭಕ್ತಿಯಿಂದ ನಡಕೊಳ್ಳುತ್ತಾರೆ. ಮ್ಹಾಳ ಪುರುಸರ ಹೆಸರಿನಿಂದ ಇವರು ಹೋಳೀ ಹುಣ್ಣಿವೆಯಲ್ಲಿ ಬಹಳ ಉತ್ಸವ ಮಾಡುವರು. ಹ್ಯಾಗಂದರೆ— ಹುಣ್ಣಿವೇ ದಿವಸ ಸಂಜೆಯಲ್ಲಿ ಊರೊಳಗಿನ ಈ ಜಾತಿಯ ಗಂಡಸರೂ ಹುಡುಗರೂ ಕೈಯೊಳಗೆ ಯೆರಡೆರಡು ಕಟ್ಟಿಗೇ ಗುಣಿಗಳನ್ನು ತಕ್ಕೊಂಡು ಬಸವಣ್ಣನ ಗುಡಿಗೆ ಹೋಗಿ, ಗುಣಿಗಳನ್ನು ದೇವರ ಮುಂದೆ ಇಟ್ಟು ನಮಸ್ಕಾರ ಮಾಡುವರು. ಬಳಿಕ ಪೂಜಾರಿಯು ಪ್ರತಿಯೊಬ್ಬನ ಕೈಯಿಂದ ವೊಂದು ದುಡ್ಡು, ವೊಂದು ಕಾಯಿ, ಶೇರು ಅಕ್ಕಿ, ಇಷ್ಟು ತಕ್ಕೊಂಡು, ಗುಣಿಗಳಿಗೆ ಕಾಲಿನಿಂದ ಸ್ಪರ್ಶ ಮಾಡಿ, ಅವುಗಳನ್ನು ಆ ಜನರಿಗೆ ಯೆರಡೆರಡು ಕೊಡುವನು. ತರುವಾಯ ಯೆಲ್ಲರೂ ಕೋಲನಾಡುತ್ತ ಬಸವಣ್ಣನ ಹಾಡುಗಳನ್ನು ವೊಂದು ತಾಸು ಹಾಡಿ, ಬುದ್ಧಿವಂತನೆಂಬ ಜಾತಿಯ ಮುಖ್ಯಾಧಿಕಾರಿಯ ಮನೆಗೆ ಹೋಗಿ ತುಳಸೀ ಗಿಡದ ಬಳಿಯಲ್ಲಿ ಗುಣಿಗಳನ್ನಿಟ್ಟು ತಮ್ಮ ತಮ್ಮ ಮನೆಗೆ ಹೋಗುವರು. ಮರು ದಿವಸ ಬೆಳಿಗ್ಗೆ ಅವರೆಲ್ಲರು ಕೆಂಪು ಬಣ್ಣದ ಇಜಾರ, ಬಿಳೇ ನಿಲುವಂಗಿ, ಕೆಂಪು ರುಮಾಲ, ಹಾಕಿ ಕೊಂಡು, ತಲೆಯಲ್ಲಿ ಚೆಂಡು ಹೂಗಳ ತುರಾಯಿಗಳನ್ನಿಟ್ಟು ಕೊಂಡು, ಹೆಗಲು, ಬೆನ್ನು, ಯೆದೆಗಳ ಮೇಲೆ ಹೊರಳಾಡುವ ಹಾಗೆ ನಾನಾ ಪ್ರಕಾರದ ಹೂವಿನ ಮಾಲೆಗಳನ್ನು ಆ ತುರಾಯಿಗಳಿಂದ ಕೆಳಗೆ ಇಳಿ ಬಿಟ್ಟು ಕೊಂಡು ಆನಂದದ ಮುದ್ರೆಯಿಂದ ಬುದ್ಧಿವಂತನ ಮನೆಗೆ ಹೋಗುವರು. ಅಲ್ಲಿ ಗುಣಿಗಳನ್ನೂ ಘುಮಟಗಳೆಂಬ ವಾದ್ಯವನ್ನೂ ಬಾರಿಸುತ್ತ ಕೆಲವು ವೇಳೆ ಹಾಡುತ್ತ ಕುಣಿದು, ಅಲ್ಲಿಂದ ಜಾತಿಯವರ ಮನೆ ಮನೆಗೆ ಹೋಗಿ ಅದೇ ಪ್ರಕಾರ ಹಾಡಿ ಕುಣಿಯುವರು. ಈ ಪ್ರಕಾರ ೫ ದಿವಸ ಆಡಿದ ಬಳಿಕ ಆರನೇ ದಿವಸ ಊರ ಮುಂದೆ ಹೋಳಿಯನ್ನು ಸುಟ್ಟು, ಅದರೊಳಗೆ ತಮ್ಮ ತಲೆಯೊಳಗಿನ ತುರಾಯಿಗಳನ್ನು ಚಲ್ಲುವರು. ಬಳಿಕ ಬೇರೆ ಬೇರೆ ಬಳಗದವರು ತಮ್ಮ ತಮ್ಮ ಹಿರಿ ಮನುಷ್ಯನ ಮನೆಗೆ ಹೋಗಿ ತುಳಸೀ ಗಿಡದ ಕೆಳಗೆ ವೆಂಕಟರಮಣನ ಕಟ್ಟಿಗೇ ಗೊಂಬೆಯನ್ನಿಟ್ಟು ಪೂಜೆ ಮಾಡುವರು. ಇದೇ ಪ್ರಕಾರ ಕೊಮಾರ ಪೈಕರು

ಹೋಳೀ ಹುಣ್ಣಿವೆಯ ಪೂರ್ವದಲ್ಲಿ ಕಾಳಭೈರವನ ಉತ್ಸವ ಮಾಡುವರು. ಇವರು ಪ್ರತಿ ವರ್ಷ ಭಾದ್ರಪದ ವದ್ಯದಲ್ಲಿ ತಮ್ಮ ತಮ್ಮ ಬಳಗದ ಹಿರಿ ಮನುಷ್ಯನ ಮನೆಗೆ ಅಕ್ಕಿ, ತೆಂಗಿನ ಕಾಯಿ, ಬೆಲ್ಲ, ತಕ್ಕೊಂಡು ಹೋಗಿ ಅಡಿಗೇ ಮಾಡಿ ಮೃತಳ ಪುರುಸರಿಗೆ ನೈವೇದ್ಯ ತೋರಿಸಿ, ಕುಲದವನೊಬ್ಬ ಮನುಷ್ಯನಿಗೆ ಪಿತರನಂತೆ ಊಟಕ್ಕೆ ಹಾಕಿ ಉಳಿದ ಅನ್ನವನ್ನು ಆಯಾ ಮನೆತನದವರು ಉಣ್ಣುವರು. ಆ ಅನ್ನಕ್ಕೆ ಚರುವೆಂದೆನ್ನುವರು; ಚರುವನ್ನು ಪರರಿಗೆ ಹಾಕುವದಿಲ್ಲ. ಪೂರ್ವದಲ್ಲಿ ಯಾರಾದರು ಹೆಂಗಸರು ಸತೀ ಹೋಗಿದ್ದರೆ, ಆಕೆಗೆ ಮೃತಸತಿ ಯೆಂದು ಹೆಸರಿಟ್ಟು, ಆಕೆಯ ಮಹಾಲಯವನ್ನು ಬೇರೆ ಮಾಡುವರು. ಇವರಲ್ಲಿ ಗಂಡಾಂತರದಿಂದ ಮರಣ ಹೊಂದಿದವರು ಪಿಶಾಚವಾಗುತ್ತಾರಂತೆ. ಈ ಪಿಶಾಚಗಳಲ್ಲಿ ಯೆರಡು ವರ್ಗಗಳು. ಖೆತ್ರಿ ಯೆಂಬ ಉತ್ತಮ ವರ್ಗದ ಪಿಶಾಚಗಳು ಮುಖ್ಯವಾಗಿ ಯುದ್ಧದಲ್ಲಿ ಮಡಿದಂಥ ಪೂರ್ವಜರವು. ಇವುಗಳಿಗೆ ದಸರೆಯ ದಿವಸ ಕುರಿ ಕೋಳಿಗಳ ಬಲಿ ಕೊಟ್ಟು ಭಕ್ತಿಯಿಂದ ಆಗಾಗ್ಗೆ ಇವುಗಳನ್ನು ಆರಾಧಿಸಿದರೆ ಇವು ಮನೆಯವರಿಗೆ ಸುಖ ಕೊಡುತ್ತವೆ; ನೆರೆಹೊರೆಯವರನ್ನು ಮಾತ್ರ ಪೀಡಿಸುವವು. ಎರಡನೇ ನೀಚ ವರ್ಗದ ಪಿಶಾಚಗಳಿಗೆ ಭೂತಗಳೆಂದೆನ್ನುವರು. ಇವುಗಳನ್ನು ಹಿಡಿದು ಶರೆಯೊಳಗೆ ಇಡಲಿಕ್ಕೆ ಬೇಕು. ಹಾಗೆ ಮಾಡದಿದ್ದರೆ ಭೂತಗಳು ಮನೆಯವರನ್ನು ಬಹಳ ಪೀಡಿಸುವವು. ಭೂತಗಳನ್ನು ಶರೆ ಹಿಡಿಯುವ ಮಾಂತ್ರಿಕರಿಗೆ ಗುಂಗರೆಂದೆನ್ನುವರು. ಮನೆಯೊಳಗೆ ಯೇನಾದರೂ ರೋಗ ಬಾಧೆಯಾದರೆ ಮೊದಲು ಗುಂಗನನ್ನು ಕರಿಸಿ ಯಂತ್ರ ತಂತ್ರದ ಉಪಾಯ ಮಾಡುವರು; ಗುಂಗನು ರೋಗಿಗೆ ಔಷಧ ಕೊಡಿಸೆಂದು ಹೇಳಿದರೆ ಮಾತ್ರ ಔಷಧ ಕೊಡಿಸುವರು. ಈ ಕಾರಣದಿಂದ ಕೊಮಾರಪೈಕರಲ್ಲಿ ಬೇನೆ ಬಿದ್ದವರು ವ್ಯಾಳ್ಯಕ್ಕೆ ಔಷಧೋಪಚಾರವಾಗದ್ದರಿಂದ ಬಹುತರ ಸಾಯುತ್ತಾರೆ. ಕೊಮಾರ ಪೈಕರಲ್ಲಿ ಲಗ್ನ ಮುಂತಾದ ಶುಭಾಶುಭ ಕಾರ್ಯಗಳನ್ನು ಜೋಶೀ ಕುಲದ ಬ್ರಾಹ್ಮಣರು ಮಾಡಿಸುವರು. ಹದಿದು ಮೂವತ್ತು ದಿವಸದೊಳಗೆ ಬಾಣತಿಯು ಜಲದೇವತೆಯ, ಅಂದರೆ ಬಾವಿಯ, ಪೂಜೆಯನ್ನು ಮಾಡಲಿಕ್ಕೆ ಬೇಕು. ಹೆಣ್ಣು ಮಕ್ಕಳ ಲಗ್ನವು ಹನ್ನೆರಡು ವರ್ಷದೊಳಗೆ ಆಗಲಿಕ್ಕೆ ಬೇಕು; ವಿಧವೆಗಳು ಲಗ್ನ ಮಾಡಿಕೊಳ್ಳಬಹುದು. ಗಂಡಸಾಗಲಿ ಹೆಂಗಸಾಗಲಿ ಮೂರನೇ ಸಾರಿ ಯಾರನ್ನು ಲಗ್ನ ಮಾಡಿಕೊಳ್ಳುವರೋ ಅವರು ಬೇಗ ಸಾಯ ತಕ್ಕವರು. ಆದ್ದರಿಂದ ಗಂಡಸು ಮೂರನೇ ಲಗ್ನವನ್ನು ಬಾಳೀ ಗಿಡದ ಕೂಡ ಮಾಡಿಕೊಂಡು ಲಗ್ನವಾದ ಕೂಡಲೆ ಅದನ್ನು ಕಡಿದು ಚಲ್ಲುವನು; ಹೆಂಗಸು ಮೂರನೇ ಲಗ್ನವನ್ನು ಗಂಢು ಕೋಳಿಯ ಕೂಡ ಮಾಡಿಕೊಂಡು ಕೂಡಲೆ ಚೂರಿಯಿಂದ ಅದರ ಕುತ್ತಿಗೆ ಕೊಯ್ದು ಚಲ್ಲುವಳು. ಅರವತ್ತು ಯೆಪ್ಪತ್ತು ವರ್ಷಗಳ ಪೂರ್ವದಲ್ಲಿ ಕೊಮಾರ ಪೈಕರು ಹೆಣಗಳನ್ನು ಲಿಂಗವಂತರ ವಿಧಾನದಿಂದ ಹುಗಿಯುತ್ತಿದ್ದರು; ಆದರೆ ಈಗ ಸುಡುತ್ತಾರೆ. ಹತ್ತು ದಿವಸ ಸೂತಕವಾದ ಬಳಿಕ ಹನ್ನೊಂದನೇ ದಿವಸ ಉಪಾಧ್ಯಾಯನ ಮನೆಯ ತೀರ್ಥ ತಂದು ಕುಡಿದು ಶುದ್ಧವಾಗುವರು. ಕೊಮಾರ ಪೈಕರ ವಸ್ತಿ ಇದ್ದ ಊರಲ್ಲಿ ಬುದ್ಧಿವಂತನೆಂಬ ಜಾತಿಯ ಪಂಚನಿರುವನು;

ಅವನ ಕೈಕೆಳಗೆ ಪದ್ದಾರನೆಂಬ ಗಣಾಚಾರಿಯ ಕೆಲಸ ಮಾಡುವ ಮನುಷ್ಯನಿರುವನು. ಕೆಲವು ಹಳ್ಳಿಗಳಿಗೆ ಕೂಡಿ ಕಳಸನೆಂಬ ಮುಖ್ಯ ಪಂಚನಿರುತ್ತಾನೆ. ಜಾತಿ ಸಂಬಂಧದ ವ್ಯಾಜ್ಯಗಳನ್ನು ಈ ಪಂಚರು ನಿರ್ಣಯಿಸುವರು. ಇವರಲ್ಲಿ ಮತಭೇದವಾದರೆ, ಶೃಂಗೇರಿಯ ಸ್ವಾಮಿಯು ನಿರ್ಣಯವನ್ನು ತರಿಸಿ ಕೊಂಡು ಅದರಂತೆ ವರ್ತಿಸುವರು. ಕೊಮಾರ ಪೈಕರಲ್ಲಿ ಕೆಲವರಿಗೆ ಓದು ಬರಹ ಬರುತ್ತಿರುತ್ತದೆ; ಇವರು ಮಕ್ಕಳನ್ನು ಶಾಲೆಗೆ, ಕಳಿಸುತ್ತಾರೆ.

ಒಟ್ಟಿಗೆ ಕೊಮಾರ ಪೈಕರು ಬೆಳುವಣಿಗೆಯ ಸ್ಥಿತಿಯಲ್ಲಿದ್ದಾರೆ. ಇವರು ಈಗ ಮುಖ್ಯವಾಗಿ ವೊಕ್ಕಲತನವನ್ನಾಗಲಿ ತಾಡೀ ತೆಗಿಯುವ ಹೋರೆಯನ್ನಾಗಲಿ ಮಾಡುತ್ತಿದ್ದಾಗ್ಯೂ ಇವರ ಸ್ವರೂಪ, ನಡಾವಳಿ, ಹಬ್ಬದ ಉಡಿಗೆ, ಮುಂತಾದವುಗಳಿಂದ ಬುನಾದಿಯಲ್ಲಿ ಇವರು ಶಿಪಾಯಿತನದ ಹೋರೆಯನ್ನು ಮಾಡುತ್ತಿದ್ದರೆಂದು ತಿಳಿಯುತ್ತದೆ. "ಪೈಕ" (ದಂಡಾಳು) ಯೆಂಬ ಶಬ್ದವಾದರೂ ಇದೇ ಅಭಿಪ್ರಾಯವನ್ನು ತಿಳಿಸುತ್ತದೆ. ಬಸವೇಶ್ವರನು ಉಳವಿಗೆ ಓಡಿ ಬಂದದ್ದಕ್ಕೂ ಕೊಮಾರ ಪೈಕರು ಕಾನಡಾ ಜಿಲ್ಲೆಗೆ ಬಂದದ್ದಕ್ಕೂ ಯೇನಾದರೂ ವೊಂದು ಬಗೆಯ ಸಂಬಂಧವಿರ ಬಹುದೆಂದು ತೋರುತ್ತದೆ.

**ಚೌದರಿಗಳು.**

ಚೌದರಿಗಳು.— ಇವರು ಕಾನಡಾ ಜಿಲ್ಲೆಯ ಘಟ್ಟದ ಮೇಲಿನ ಭಾಗದಲ್ಲಿ ಮಾತ್ರ ಇರುತ್ತಾರೆ. ತೋರಿಕೆಯಲ್ಲಿ ಭಂಡಾರಿಗಳಂತೆ ಕಾಣುತ್ತಾರೆ; ಇವರ ಮನೆಗಳು ಆಹಾರ, ನಡಾವಳಿ, ಮುಂತಾದವುಗಳೆಲ್ಲ ಆರೇ ಮರಾಠೆ ಯೆಂಬ ಜಾತಿಯವರಂತೆ ಇರುತ್ತವೆ. ಇವರು ಕೊಂಕಣೀ ಭಾಷೆಯನ್ನಾಡುತ್ತಾರೆ; ಕುಂಬಳ ಪೈಕ, ಶಿರೋಡಬಾಯಿ, ಭವಾನಿ, ಮಾವಲಿ, ಸೋಮವಾಸಿ ಕೋನಾಶಿ, ಕೊನಸರಿ, ಮ್ಹಾಳಸಾಯಿ, ಪಾವನಾಯಿ, ಇಷ್ಟು ದೇವತೆಗಳಿಗೆ ನಡಕೊಳ್ಳುತ್ತಾರೆ. ಇವರ ಹೆಂಗಸರಿಗೆ ಕಚ್ಚೆ, ಕುಂಕುಮಗಳುಂಟು. ಇವರನ್ನು ವಾಡಿಕೆಯಾಗಿ ಭಂಡಾರಿಗಳಲ್ಲಿ ಯೆಣಿಸುತ್ತಾರೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

ಕಲಾಲರು.— ಇವರ ಜನ್ಮಭಾಷೆ ಹಿಂದುಸ್ತಾನೀ; ಆದರೆ ಕೆಲವರು ಮನೆಯಲ್ಲಿ ಸಹ ಕನ್ನಡ ಭಾಷೆಯನ್ನೇ ಆಡುತ್ತಾರೆ; ಕೆಲವರು ಜನಿವಾರ ಹಾಕಿ ಕೊಳ್ಳುವರು.

**ಕಲಾಲರು.**

ಕಲಾಲರು ತೋರಿಕೆಯಲ್ಲಿ ಕುಣಬಿಗಳ ಹಾಗೆ ಕಾಣುತ್ತಾರೆ. ಇವರ ಉಡಿಗೆ, ಅಹಾರ, ಧರ್ಮ, ನಡಾವಳಿ, ಲಗ್ನ ಮರಣಗಳ ಸಂಸ್ಕಾರಗಳು, ಇವೆಲ್ಲ ಕುಣಬಿಗಳಂತೆ. ಆದರೆ ಇವರ ಹೆಂಗಸರು ಕುಂಕುಮ ಹಚ್ಚುವರು; ವಿಧವೆಗಳ ಲಗ್ನವಾಗುವದಿಲ್ಲ. ಕಲಾಲರು ಹೆಣ್ಣು ದೇವತೆಗಳಿಗೆ ವಿಶೇಷವಾಗಿ ನಡಕೊಳ್ಳುವರು; ಕೌದಿಯನ್ನು ಮುಟ್ಟಿದರೆ ಸ್ನಾನ ಮಾಡುವರು. ಇವರ ಹೆಂಗಸರು ಉಣ್ಣೆಯನ್ನು ಮಾತ್ರ ನೂಲುವರು, ಹತ್ತೀ ನೂಲುವದಿಲ್ಲ. ಶರೆಯನ್ನು ಮಾಡಿ ಮಾರುವದೇ ಕಲಾಲರ ಮುಖ್ಯ ಹೋರೆ. ಆದರೆ ಸರಕಾರದವರು ಶರೆ ಮಾಡುವ ಕೆಲಸವನ್ನು ತಮ್ಮ ಕೈಯಲ್ಲಿ ತಕ್ಕೊಂಡದ್ದರಿಂದ ಇವರ ಉಪಜೀವನವು ಶರೆ ಮಾಡುವ ಹೋರೆಯಲ್ಲಿ ನೆಟ್ಟಗೆ ಸಾಗುವದಿಲ್ಲ. ಆದ್ದರಿಂದ ಕೆಲವರು ವೊಕ್ಕಲತನದಲ್ಲಿ ಶೇರಿದ್ದಾರೆ. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

## ಮೀನ ಬಲೆಗಾರರ ಜಾತಿಗಳು.

| | ಜಾತಿಗಳು. | ಧಾರವಾಡ. | | | ಬೆಳಗಾವಿ. | | | ವಿಜಾಪುರ. | | | ಕಾನಡಾ. | | |
|---|---|---|---|---|---|---|---|---|---|---|---|---|---|
| | | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. |
| ೧ | ಅಂಬಿಗರು | ೨೫೫೫ | ೨೭೧೮ | ೫೨೭೩ | .. | .. | .. | .. | .. | .. | ೧೪೬೩ | ೧೪೦೭ | ೨೮೭೦ |
| ೨ | ಗಭಿತರು | .. | .. | .. | ೭ | ೫ | ೧೨ | .. | .. | .. | ೧೩೭೨ | ೧೧೫೪ | ೨೫೨೬ |
| ೩ | ಹರಕಂತರು | .. | .. | .. | .. | .. | .. | .. | .. | .. | ೧೯೯೧ | ೨೧೭೦ | ೪೧೬೧ |
| ೪ | ಖಾಂದೇ ಕಾರ್ವಿ | .. | .. | .. | .. | .. | .. | .. | .. | .. | ೪೦೬ | ೪೨೨ | ೮೨೮ |
| ೫ | ಕೊಂಕಣೀ ಕಾರ್ವಿ | .. | .. | .. | .. | .. | .. | .. | .. | .. | ೨೯೭೩ | ೨೭೭೪ | ೫೭೪೭ |
| ೬ | ಕೋಳಿಗಳು | .. | .. | .. | .. | .. | .. | .. | .. | .. | ೩೪ | ೧ | ೩೫ |
| ೭ | ಮೋಗೇರು | .. | .. | .. | .. | .. | .. | .. | .. | .. | ೧೯೧೯ | ೧೪೯೭ | ೩೪೧೬ |
| ೮ | ಪಾಗಿಗಳು | .. | .. | .. | .. | .. | .. | .. | .. | .. | ೧೩೦ | ೧೨೦ | ೨೫೦ |
| ೯ | ಕಬ್ಬಲಿಗೇರು | ೫೨೦ | ೫೪೦ | ೧೦೬೦ | ೮೦೩೫ | ೮೧೨೬ | ೧೬೧೬೧ | ೭೪೭೧ | ೭೫೬೨ | ೧೫೦೩೩ | ,, | ,, | ,, |
| ೧೦ | ಕಬ್ಬೇರು | .. | .. | .. | .. | .. | .. | .. | .. | .. | ೫೯೭ | ೬೨೭ | ೧೨೨೪ |
| ೧೧ | ಭೋಯಿಗಳು | (ವಾಹಕರಲ್ಲಿ ನೋಡು.) | | | | | | | | | | | |

ಅಂಬಿಗರು.—ಇವರು ಧಾರವಾಡ, ಕಾನಡಾ, ಈ ಯೆರಡು ಜಿಲ್ಲೆಗಳಲ್ಲಿ ಇರುತ್ತಾರೆ. ಯೆರಡೂ ಜಿಲ್ಲೆಗಳಲ್ಲಿ ಇವರು ಕನ್ನಡ ಭಾಷೆಯನ್ನೇ ಆಡುತ್ತಾರೆ. ಕಾನಡಾ ಜಿಲ್ಲೆಯವರು ಲಂಗೋಟೀ ಹಾಕುವರು; ಅವರ ಹೆಂಗಸರು ಕುಬ್ಬಸ ತೊಡುವದಿಲ್ಲ, ಕಡೆಗಾದಾಗ ನಾಲ್ಕು ದಿವಸ ಹೊರಗೆ ಕೂಡ್ರುವರು. ಜಟಕಾ, ಅಮ್ಮ, ಬೊಬ್ರ, ಯೆಂಬ ದೇವತೆಗಳಿಗೆ ಈ ಅಂಬಿಗರು ನಡಕೊಳ್ಳುವರು. ಆದರೆ ಇವರ ಧರ್ಮಗುರು ಶೃಂಗೇರಿಯ ಸ್ವಾಮಿ; ಬ್ರಾಹ್ಮಣರು ಇವರ ಉಪಾಧ್ಯಾಯರು. ಮದ್ಯ ಮಾಂಸಗಳಿಗೂ ವಿಧವೆಗಳ ಲಗ್ನಕ್ಕೂ ಅಡ್ಡಿ ಇಲ್ಲ. ಹೆಣ್ಣು ಮಕ್ಕಳ ಲಗ್ನವು ಹನ್ನೆರಡು ವರ್ಷದ ಪೂರ್ವದಲ್ಲಿ ಆಗುವದು. ಹೆಣಗಳನ್ನು ಕೆಲವರು ಸುಡುವರು, ಕೆಲವರು ಹುಗಿಯುವರು. ಕಾನಡಾ ಜಿಲ್ಲೆಯ ಅಂಬಿಗರ ಮುಖ್ಯ ಹೋರೆ ಮೀನ ಹಿಡಿಯುವದು, ಸಮುದ್ರದಲ್ಲಿ ಡೋಣಿಗಳನ್ನೂ ಹೊಳೆಗಳಲ್ಲಿ ನಾವೆಗಳನ್ನೂ ನಡಿಸುವದು. ಕೆಲವರು ವೊಕ್ಕಲತನ, ಕೂಲಿ, ಮುಂತಾದ ಹೋರೆಗಳನ್ನು ಮಾಡುತ್ತಾರೆ. ಬಹು ಸಣ್ಣ ಡೋಣಿಗಳ ಅಡ್ಡ ಮಗ್ಗಲಿಗೆ "ಉಲಾಂಡಿ" ಯೆಂಬ ತೋಲು ಹಿಡಿಯುವ ಕೊರಡು ಕಟ್ಟಿಕೊಂಡು ಇವರು ಸಮುದ್ರದೊಳಗೆ ಮೀನ ಹಿಡಿಯುವದಕ್ಕಾಗಿ ಹೋಗುವರು. ಈ ಅಂಬಿಗರು ಜನ್ಮ ಮರಣಗಳ ಸೂತಕವನ್ನು ಹತ್ತು ದಿವಸ ಹಿಡಿದು, ಉಪಾಧ್ಯಾಯನ ಮನೆಯ ತೀರ್ಥ ತಕ್ಕೊಂಡು ಶುದ್ಧವಾಗುವರು. ಇವರಲ್ಲಿ ಬಹಳ ಕೆಟ್ಟ ಮುಹೂರ್ತದಲ್ಲಿ ಮಕ್ಕಳು ಹುಟ್ಟಿದರೆ, ಆ ಕೂಸುಗಳನ್ನು ಮನೆಯಲ್ಲಿ ಇಟ್ಟು ಕೊಳ್ಳದೆ ಪರರಿಗೆ ಸಾಕ ಕೊಡುವರು; ಹೆಣ್ಣು ಮಕ್ಕಳನ್ನು ಪಾತರದವರಿಗೆ ಕೊಡುವ ನಡಾವಳಿಯು ಮೊದಲು ಬಹಳ ಇತ್ತು; ಆದರೆ ಈಗ ಕಾಯದೆಯ ಭಯದಿಂದ ಕಡಿಮೆಯಾಗುತ್ತ ನಡಿದದೆ. ಲಗ್ನದಲ್ಲಿ ಮದಿಮಗನು ಲಗ್ನಕ್ಕೆ ಹೋಗುವಾಗ ಅವನ ಮೇಲೆ ತಾಡವಾಲೆಯ ಛತ್ತಾರಿಗೆಯನ್ನು ಹಿಡಿಯಲಿಕ್ಕೆ ಬೇಕು. ಉಪಾಧ್ಯಾಯನು ಅಂತಃಪಟ ಹಿಡಿದು ಮಂಗಳಾಷ್ಟಕವೆಂದ ಬಳಿಕ ಅಂತಃಪಟ ತೆಗಿದು ವಧೂವರರು ಪರಸ್ಪರ ಕೊರಳಿಗೆ ಹೂವಿನ ಮಾಲೆಯನ್ನು ಹಾಕುವರು; ಆ ಮೇಲೆ ಅವರ ಕೈಗಳನ್ನು ಮದಿಮಗಳ ತಾಯಿಯು ಕೂಡಿಸಿ ಹಿಡಿದ ನಂತರ ತಂದೆಯು ಆ ಕೈಗಳ ಮೇಲೆ ನೀರು ಬಿಟ್ಟ ಬಳಿಕ ಲಗ್ನದ ಅಕ್ಷತೆಗಳನ್ನು ಅವರಿಬ್ಬರ ತಲೆಯ ಮೇಲೆ ಯೆಲ್ಲರೂ ಚಲ್ಲುವರು. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

ಧಾರವಾಡ ಜಿಲ್ಲೆಯ ಅಂಬಿಗರು ಧೋತ್ರ ಉಡುವರು. ಇವರ ಹೆಂಗಸರು ಕುಬ್ಬಸ ತೊಡುವರು; ಕಡೆಗಾದಾಗ ಹೊರಗೆ ಕೂಡ್ರುವದಿಲ್ಲ. ಇವರಿಗೆ ಗುರುವಿಲ್ಲ; ಲಿಂಗವಂತರೇ ಇವರ ಉಪಾಧ್ಯಾಯರು. ಹೆಣಗಳನ್ನು ಲಿಂಗವಂತರಂತೆ ಜಂಗಮನಿಂದ ಸಂಸ್ಕಾರ ಮಾಡಿಸಿ ಹುಗಿಯುವರು. ಇವರ ಹೆಂಗಸರು ಗಣೇಶ ಚತುರ್ಥಿಯಲ್ಲಿ ಜೋಕುಮಾರನೆಂಬ ಅಭದ್ರವಾದ ಗೊಂಬೆಯನ್ನು ಬುಟ್ಟಿಯೊಳಗೆ ಇಟ್ಟು ತಲೆಯ ಮೇಲೆ ಹೊತ್ತುಕೊಂಡು ಮನೆ ಮನೆಗೆ ಭಿಕ್ಷೆ ಬೇಡುತ್ತ ತಿರುಗುವರು. ಈ ಜಿಲ್ಲೆಯ ಅಂಬಿಗರ ಮುಖ್ಯ ಹೋರೆ ವೊಕ್ಕಲತನ, ಇಲ್ಲವೆ ಕೂಲಿ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

ಗಬಿತರು.—ಇವರು ಕಾನಡಾ ಜಿಲ್ಲೆಯಲ್ಲಿ ಘಟ್ಟದ ಕೆಳಗೂ ಬೆಳಗಾವೀ ಜಿಲ್ಲೆಯ ಸಂಪಗಾವಿಯ ತಾಲೂಕಿನಲ್ಲಿಯೂ ಇರುವರು. ಇವರು ರತ್ನಾಗಿರೀ ಜಿಲ್ಲೆಯಿಂದ ಬಂದವರು, ಮನೆಯಲ್ಲಿ ಮರಾಠೀ ಭಾಷೆಯನ್ನಾಡುವರು. ಇವರ ಆಹಾರ, ಉಡಿಗೆ, ನಡಾವಳಿ, ಹೋರೆ, ಮುಂತಾದವುಗಳು ಕಾನಡಾ ಜಿಲ್ಲೆಯ ಅಂಬಿಗರಂತೆ ಇರುತ್ತವೆ. ಆದರೆ ಅವರಿಗೂ ಇವರಿಗೂ ಶರೀರ ಸಂಬಂಧವಾಗುವದಿಲ್ಲ. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಗಬಿತರು.**

ಹರಕಂತರು.—ಇವರು ಕಾನಡಾ ಜಿಲ್ಲೆಯಲ್ಲಿ ಘಟ್ಟದ ಕೆಳಗೆ ಮಾತ್ರ ಇರುತ್ತಾರೆ. ಆದರೆ ಇವರ ಜನ್ಮಭಾಷೆ ಕನ್ನಡ. ಇವರ ಉಡಿಗೆ, ಆಹಾರ, ಧರ್ಮ, ಆಚಾರ ಹೋರೆ, ಇವೆಲ್ಲ ಬಹುತರ ಅಂಬಿಗರಂತೆ ಇರುತ್ತವೆ. ಆದರೆ ಅವರಿಗೂ ಇವರಿಗೂ ಊಟದ ಬಳಿಕೆ ಸಹ ಆಗುವದಿಲ್ಲ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಹರಕಂತರು.**

ಖಾಂದೇ ಕಾರ್ವಿಗಳು.—ಕಾನಡಾ ಜಿಲ್ಲೆಯ ಹೊನ್ನಾವರ ತಾಲೂಕಿನಲ್ಲಿ ಮಾತ್ರ ವಾಸಿಸುತ್ತಾರೆ. ಖಾಂದೆ ಕಾರ್ವಿ ಅಂದರೆ ಹೆಗಲ ಮೇಲೆ ಶಸ್ತ್ರವಿಟ್ಟು ಕೊಂಡು ಸಮುದ್ರದಲ್ಲಿ ಸಂಚರಿಸುವ ನಾವಾಡಿಗರೆಂಬ ಅರ್ಥವಿರುತ್ತದೆಂದು ಹೇಳುತ್ತಾರೆ. ಇವರು ಗೋಮಂತಕ ಶೀಮೆಯಿಂದ ಬಂದವರಾದ್ದರಿಂದ ಇವರ ಕುಲ ದೇವತೆಗಳೆಲ್ಲ ಅದೇ ಶೀಮೆಯಲ್ಲಿ ಇರುತ್ತವೆ; ಜನ್ಮಭಾಷೆ ಕೊಂಕಣೀ. ಇವರ ಉಡಿಗೆ, ಆಹಾರ, ಆಚಾರ, ಧರ್ಮ, ನಡಾವಳಿ ಇವೆಲ್ಲ ಶಿರೋಗಾರರಂತೆ ಇರುತ್ತವೆ. ಖಾಂದೇ ಕಾರ್ವಿಗಳು ಮೀನ ಹಿಡಿಯುವದಿಲ್ಲ. ಸಮುದ್ರದಲ್ಲಿ ಮಾಲು ವೊಯ್ಯುವದೂ, ಸಣ್ಣ ದೊಡ್ಡ ಫತ್ತೆಮಾರಿಗಳನ್ನು ಕಟ್ಟುವದೂ, ಇವೇ ಇವರ ಮುಖ್ಯ ಹೋರೆ. ಹೆಂಗಸರು ಕಾತಿಯ ಹಗ್ಗ ಮಾಡುತ್ತಾರೆ. ತೆಂಗಿನ ಸೊಟ್ಟೆಯನ್ನು ಮೊದಲು ವೊಂದು ವರ್ಷ ಕೆಸರಿನೊಳಗೆ ಹುಗಿದಿಟ್ಟು, ಆ ಮೇಲೆ ಅದನ್ನು ತೆಗಿದು ಕೊಡತಿಗಳಿಂದ ವೊಳಿತಾಗಿ ಜಜ್ಜಿ ತೊಳಿದು ಯೆಸಳುಗಳನ್ನು ಬೇರೆ ಬೇರೆ ಮಾಡಿದರೆಂದರೆ ಅದೇ ಕಾತಿಯಾಗುತ್ತದೆ. ಅದರ ಹುರಿಯನ್ನು ಮೊದಲು ಹೊಸಿದು ಅದರಿಂದ ಸಣ್ಣ ದೊಡ್ಡ ಹಗ್ಗಗಳನ್ನು ಹೊಸಿಯುವರು. ಸುಮಾರು ಇಪ್ಪತ್ತು ಮಣದ ಭಾರ ಹೊರುವಂಥ ಡೋಣಿಯನ್ನು ವೊಬ್ಬ ಖಾಂದೇ ಕಾರ್ವಿಯು ವೊಂದು ತಿಂಗಳಲ್ಲಿ ಕಟ್ಟುತ್ತಾನೆ; ನಾಲ್ಕು ಟನ್ನಿನ ಭಾರ ಹೊರುವಂಥಾದನ್ನು ನಾಲ್ವರು ಆರು ತಿಂಗಳಲ್ಲಿ ಕಟ್ಟುತ್ತಾರೆ; ಹತ್ತು ಟನ್ನಿನ ಭಾರ ಹೊರುವ ಫತ್ತೇಮಾರಿಯನ್ನು ಐದು ಜನರು ವೊಂದು ವರ್ಷದಲ್ಲಿ ಕಟ್ಟುತ್ತಾರೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಖಾಂದೇ ಕಾರ್ವಿಗಳು.**

ಕೊಂಕಣ ಕಾರ್ವಿಗಳು.—ಇವರಾದರೂ ಕಾನಡಾ ಜಿಲ್ಲೆಯಲ್ಲಿ ಘಟ್ಟದ ಕೆಳಗೆ ಮಾತ್ರ ಇರುತ್ತಾರೆ. ಇವರ ಜನ್ಮಭಾಷೆ ಕೊಂಕಣೀ; ಅಂಕೋಲಾ ತಾಲೂಕಿನಲ್ಲಿ ಇವರ ಕುಲದೇವತೆ ಶಾಂತ್ರದೇವಿ ಅಥವಾ ಬಾಣೇಶ್ವರಿಯುಂಟು. ಇವರ ಊಟ ಉಡಿಗೆಗಳೂ, ಸ್ಥಿತಿ ರೀತಿಗಳೂ ಅಂಬಿಗ

**ಕೊಂಕಣ ಕಾರ್ವಿಗಳು.**

ರಂತೆ ಇರುತ್ತವೆ. ಇವರಾದರೂ ಮೀನ ಹಿಡಿಯುವದು, ಹಡಗ ನಡಿಸುವದು, ಮ್ಯಾನೆ ಮಂಚಲಗಳನ್ನು ಹೊರುವದು, ಮುಂತಾದ ಹೋರೆಗಳನ್ನೇ ಮಾಡುತ್ತಾರೆ. ಇವರಿಗೆ ತಾಡೀ ಕುಡಿಯುವ ಚಟ ಬಹಳ ಇರುತ್ತದೆ. ಅದರಿಂದ ಇವರ ಬಡತನವು ಹಿಂಗುವದಿಲ್ಲ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಕೋಳಿಗಳು.**

ಕೋಳಿಗಳು.—ಇವರು ಕಾನಡಾ ಜಿಲ್ಲೆಯಲ್ಲಿ ಸ್ವಲ್ಪ ಜನರು ಉತ್ತರ ಕೊಂಕಣದಿಂದ ಬಂದು ವಾಸಿಸುತ್ತಾರೆ. ಫತ್ತೆಮಾರಿಗಳಲ್ಲಿ ಮಾಲು ಮಾರಾಟಕ್ಕಾಗಿ ದಕ್ಷಿಣದಿಂದ ಉತ್ತರಕ್ಕೂ ಉತ್ತರದಿಂದ ದಕ್ಷಿಣಕ್ಕೂ ವೊಯ್ಯುವದೇ ಇವರ ಮುಖ್ಯ ಹೋರೆಯು. ಕಬ್ಬಲಿಗೇರಿಗೆ ಮರಾಠೀ ಭಾಷೆಯಲ್ಲಿ "ಕೋಳೀ" ಯೆಂದೆನ್ನುವರು.

**ಮೋಗೇರು.**

ಮೋಗೇರು.—ಇವರು ಹೊನ್ನಾವರ ತಾಲೂಕಿನಲ್ಲಿಯೂ ಕುಮಟೆಯಲ್ಲಿಯೂ ಇರುತ್ತಾರೆ. ಹೊನ್ನಾವರ ತಾಲೂಕಿನ ಮೋಗೇರಿಗೂ ಅಂಬಿಗರಿಗೂ ಬಹುತರ ಭೇದವೇನು ಇಲ್ಲ; ಎರಡೂ ಜಾತಿಗಳ ಸ್ವರೂಪ, ಉಡಿಗೆ, ಆಹಾರ, ಧರ್ಮ, ಹೋರೆ, ಇವೆಲ್ಲ ಹೊಂದುತ್ತವೆ. ಕುಮಟೆಯ ಮೋಗೇರು ಬ್ರಾಹ್ಮಣರ ಹಾಗೆ ಧೋತ್ರ ಉಟ್ಟುಕೊಂಡು, ಜನಿವಾರ ಹಾಕಿ ಕೊಂಡು, ವ್ಯಾಪಾರ ಉದ್ಯೋಗದಲ್ಲಿ ತಕ್ಕಮಟ್ಟಿಗೆ ಹಣ ಸಂಪಾದಿಸಿ ಕೊಂಡು, ಸಾಷ್ಟೀಕರ ಯೆಂಬ ಬ್ರಾಹ್ಮಣರನ್ನು ಸರಿಗಟ್ಟುತ್ತಾರೆ. ಇವರು ತಮ್ಮ ಜಾತಿ ದಲಾಲರೆಂಬುವದೊಂದು ಬೇರೆ ಇರುತ್ತದೆಂದು ಹೇಳುತ್ತಾರೆ; ಓದ ಬರಿಯ ಬಲ್ಲರು, ಮದ್ಯ ಮಾಂಸಗಳನ್ನು ಬಿಟ್ಟಿದ್ದಾರೆ. ಆದರೆ ಇವರು ಹೊನ್ನಾವರದ ಮೋಗೇರ ಕೂಡ ಊಟದ ಬಳಿಕೆಯನ್ನೂ ಶರೀರ ಸಂಬಂಧವನ್ನೂ ಮಾಡುವರು. ಹೊನ್ನಾವರದ ತಾಲೂಕಿನವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಪಾಗಿಗಳು.**

ಪಾಗಿಗಳು.—"ಪಾಗ"ವೆಂದರೆ ಕೊಂಕಣೀ ಭಾಷೆಯಲ್ಲಿ ಮೀನ ಹಿಡಿಯೋಣವೆಂಬ ಅರ್ಥವಿರುತ್ತದೆ. ಅದರಿಂದ "ಪಾಗಿ" ಅಂದರೆ ಮೀನು ಹಿಡಿಯುವವ ಯೆಂದು ಅರ್ಥವಾಗುತ್ತದೆ. ಪಾಗಿಗಳು ಗೋಮಂತಕ ಶೀಮೆಯಿಂದ ಬಂದು ಕಾರವಾಡ ತಾಲೂಕಿನಲ್ಲಿ ವಾಸಿಸುತ್ತಾರೆ. ಇವರ ಕುಲದೇವತೆಗಳು ಮಲ್ಲಿಕಾರ್ಜುನ, ಗುರುಪರದೇಶಿ, ಮುಂತಾದವುಗಳು ಅದೇ ಶೀಮೆಯಲ್ಲಿ ಇರುತ್ತವೆ. "ಪಾಗಿ" ಈ ಶಬ್ದವನ್ನು ಗಂಡಸರು ತಮ್ಮ ಹೆಸರಿನ ಮುಂದೆ ಹಚ್ಚಿ ಕೊಳ್ಳುತ್ತಾರೆ, ಫಕೀರ ಪಾಗಿ, ವಿಠೋಬ ಪಾಗಿ, ಇತ್ಯಾದಿ. ಇವರು ಗೋಮಂತಕದಲ್ಲಿ ಇರುವ ಕಾರ್ವೀ ಜನರ ಕುಲದವರೆಂದು ಹೇಳುತ್ತಾರೆ. ಇವರ ಊಟ, ಉಡಿಗೆ, ಸ್ಥಿತಿ, ರೀತಿ, ಧರ್ಮ, ಮುಂತಾದವುಗಳೆಲ್ಲ ಹರಕಂತರಂತೆ ಇರುತ್ತವೆ. ಕಾರವಾಡ ತಾಲೂಕಿನಲ್ಲಿ ಹರಿಯುವ ಕಾಳೀ ನದಿಯಲ್ಲಿ ನಾವೆಗಳನ್ನು ನಡಿಸುವದೇ ಇವರ ಮುಖ್ಯ ಹೋರೆಯು; ಮೀನು ಹಿಡಿಯುವವರು ಬಹು ಕಡಿಮೆ; ಕೆಲವರು ವೊಕ್ಕಲತನವನ್ನು, ಕೆಲವರು ಕೂಲಿಯನ್ನು ಮಾಡುತ್ತಾರೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

ಕಬ್ಬೇರು.—ಇವರು ಕಾನಡಾ ಜಿಲ್ಲೆಯ ಯೆಲ್ಲ ತಾಲೂಕುಗಳಲ್ಲಿ ವಾಸಿಸುತ್ತಾರೆ. ಇವರೂ, ವಿಜಾಪುರ ಜಿಲ್ಲೆಯ ಕಬ್ಬೇರೂ (ವೊಕ್ಕಲತನದ ಜಾತಿಗಳಲ್ಲಿ ನೋಡು.)

**ಕಬ್ಬೇರು.**

ವೊಂದೇ ಜಾತಿಯವರು, ಅಂದರೆ ಕಬ್ಬಲಿಗೇರು, ಇರುತ್ತಾರೆಂದು ತೋರುತ್ತದೆ; ಯೆರಡೂ ಕಡೆಯಲ್ಲಿಯ ಕಬ್ಬೇರ ಮುಖ ಲಕ್ಷಣ, ನಿಲಿವಿಕೆ, ಸಾಧಾರಣ ಸ್ವರೂಪ, ಇವೆಲ್ಲ ವೊಂದೇ ಇರುತ್ತವೆ. ಆದರೆ ಇಷ್ಟರ ಹೊರ್ತು ಬೇರೆ ಸಾಮ್ಯವೇನು ಬಹುತರ ಇದ್ದಂತೆ ತೋರುವದಿಲ್ಲ. ಈ ಕಬ್ಬೇರ ಕುಲ ದೇವತೆಗಳು ಬನವಾಸಿಯ ಗುತ್ತೆಮ್ಮ, ಶಿರಸಿಯ ಮರಿದೇವಿ, ಬಸವ, ಯೆಲ್ಲಮ್ಮ; ಇವರಲ್ಲಿ ಗೌಡ, ಮಶಾಲ, ಕೋಳಿ, ಪಾತರ ಚಂದ್ರಿ, ಯೆಂಬ ನಾಲ್ಕು ವೊಳಜಾತಿಗಳಿರುತ್ತವೆ. ಅವರವರೊಳಗೆ ಶರೀರ ಸಂಬಂಧವಾಗುವದಿಲ್ಲ. ಇವರ ಜನ್ಮಭಾಷೆ ಕನ್ನಡ; ಮದ್ಯ ಮಾಂಸಗಳಿಗೆ ಅಡ್ಡಿ ಇಲ್ಲ. ಆದರೆ ಗಂಡಸರೂ ಹೆಂಗಸರೂ ಹಣೆಗೆ ಈಬತ್ತಿ ಹಚ್ಚುವರು. ಗಂಡಸರು ಧೋತ್ರ ಉಡುತ್ತಾರೆ; ಪಾತರ ಚಂದ್ರಿ ಯೆಂಬವರ ಹೆಂಗಸರು ಮಾತ್ರ ಕಚ್ಚೆ ಹಾಕುತ್ತಾರೆ. ಇವರು ಬ್ರಾಹ್ಮಣರಿಗೆ ಮಾನ ಕೊಡುತ್ತಾರೆ; ಆದರೆ ಜಂಗಮರು ಇವರ ಉಪಾಧ್ಯಾಯರು, ಚಿತ್ರದುರ್ಗದ ಸ್ವಾಮಿ ಗುರು. ಇವರಲ್ಲಿ ಲಗ್ನವಾಗಿ ಸತ್ತವರ ಹೆಣಗಳನ್ನು ಸುಡುವರು, ಆಗದೆ ಸತ್ತವರನ್ನು ಹುಗಿಯುವರು. ಈ ಕಬ್ಬೇರ ಉಳಿದ ನಡಾವಳಿಗಳು ಬಣಜಿಗರ ನಡಾವಳಿಗಳಿಗೆ ಹೊಂದುತ್ತವೆ. ಇವರು ಮೂಲದಲ್ಲಿ ಮೀನ ಬಲೆಗಾರರಾದಾಗ್ಯೂ ಆ ಹೋರೆಯನ್ನು ಮಾಡುವದಿಲ್ಲ; ಆ ಹೋರೆ ಮಾಡುವವರ ಕೂಡ ಊಟದ ಬಳಿಕೆಯನ್ನು ಸಹ ಮಾಡುವದಿಲ್ಲ; ಲಿಂಗವಂತರಲ್ಲಿ ಇಲ್ಲವೆ ಬ್ರಾಹ್ಮಣರಲ್ಲಿ ಮಾತ್ರ ಉಣ್ಣುವರು. ಇವರಲ್ಲಿ ಬಹು ಜನರು ಚಿಕ್ಕ ತಕ್ಕಡಿ ಅಂಗಡಿಯನ್ನು ಹಚ್ಚುವರು, ಕೆಲವರು ಹೊಲದಲ್ಲಿ ಕೂಲೀ ಮಾಡುವರು. ಪಾತರ ಚಂದ್ರಿ ಯೆಂಬ ವೊಳಜಾತಿಯವರ ಹೆಂಗಸರು ಪಾತರದವರು. ಅವರ ಹಾಡೋಣ, ಕುಣಿಯೋಣ, ಮುಂತಾದ ನಡಾವಳಿಗಳು ಬೇರೆ ಪಾತರದವರಂತೆ ಇರುತ್ತವೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

ಕಬ್ಬಲಿಗೇರು.—ಕುರುಬರಂತೆ ಇವರಾದರೂ ದಕ್ಷಿಣ ಮಹಾರಾಷ್ಟ್ರದ, ಅಥವಾ ಇಡೀ ದಕ್ಷಿಣ ದೇಶದ, ಮೂಲ ನಿವಾಸಿಗಳಿರುತ್ತಾರೆ. ಕುರುಬರಿಗೆ ಮಹಾರಾಷ್ಟ್ರದಲ್ಲಿ

**ಕಬ್ಬಲಿಗೇರು.**

ಧನಗರರೆಂಬುವಂತೆ ಕಬ್ಬಲಿಗೇರಿಗೆ ಕೋಳೀ ಯೆಂದೆನ್ನುತ್ತಾರೆ. ಈ ಕೋಳೀ ಯೆಂಬ ಹೆಸರು ಕಬ್ಬಲಿಗೇರಿಗೆ ವಿಜಾಪುರ ಬೆಳಗಾವೀ ಜಿಲ್ಲೆಗಳಲ್ಲಿ ಹಲಕೆಲವು ಕಡೆಯಲ್ಲಿ ನಡಿಯುತ್ತದೆ. ಕುರುಬರಿಗೂ ಕಬ್ಬಲಿಗೇರಿಗೂ ಊಟದ ಬಳಿಕೆಯಾಗುತ್ತದೆ. ಕುರುಬರ ಕುಲದೇವತೆ ಬೀರಪ್ಪ, ಕಬ್ಬಲಿಗೇರ ಕುಲದೇವತೆ ಯೆಲ್ಲಮ್ಮ. ಆದರೆ ಕುರುಬರಲ್ಲಿ ಲಿಂಗವಂತ ಮತವು ಬೆಳೆಯುತ್ತ ನಡಿದಂತೆ ಕಬ್ಬಲಿಗೇರಲ್ಲಿಯೂ ಬೆಳಿಯುತ್ತ ನಡಿದದೆ. ಕುರುಬರಂತೆ ಕಬ್ಬಲಿಗೇರಿಗಾದರೂ ಗರಡೀ ಸಾಧಕ, ಕುಸ್ತಿ, ಇವುಗಳಲ್ಲಿ ಪ್ರೀತಿ ಬಹಳ. "ಹಂಡೆ" ಯೆಂಬ ಅಡ್ಡ ಹೆಸರು ಕುರುಬರಲ್ಲಿ ಇದ್ದಂತೆ ಕಬ್ಬಲಿಗೇರಲ್ಲಿಯೂ ಇರುತ್ತದೆ. ಕಬ್ಬಲಿಗೇರ ಜಾತಿಯು ಈಗ

ತೀರ ಭಿನ್ನವೆಂದೆಣಿಸಲ್ಪಡುವ ಹಲವು ಪ್ರಸಿದ್ಧ ಜಾತಿಗಳ ತಾಯಿ ಯೆಂದು ಹೇಳ ಬಹುದು. ಅಂಬಿಗರು (ಗಂಗಿ ಮಕ್ಕಳು), ಭೋಯಿಗಳು, ಸುಣ್ಣಗಾರರು, ಉಪ್ಪಾರರು, ಜಾಲಗಾರರು, ತಳವಾರರು, ಬಾರಕೇರು, ಬುಡಬುಡಕಿಗಳು, ಮುಂತಾದವರು ಬೇರೆ ಬೇರೆ ಹೋರೆಗಳನ್ನು ಕೈಕೊಂಡಂಥ ಕಬ್ಬಲಿಗೇರೇ ಇರುತ್ತಾರೆ. ಒಕ್ಕಲಿಗರಲ್ಲಿ ಹಂಡೆಯವರೆಂಬ ಲಿಂಗವಂತರೂ ಕಬ್ಬೇರೆಂಬವರೂ ಕಬ್ಬಲಿಗೇರೇ. ಈ ಯಾವತ್ತು ಜಾತಿಗಳ ವರ್ಣನೆಯನ್ನು ವೊತ್ತಟ್ಟಿಗೆ ಕೊಡುವದು ಅಸಂಭಾವ್ಯವಾದ್ದರಿಂದ ಆಯಾ ಜಾತಿಯ ವರ್ಣನೆಯನ್ನು ಆಯಾ ಹೋರೆಯ ಕೆಳಗೆ ಬೇರೆ ಬೇರೆಯಾಗಿ ಕೊಟ್ಟಿದ್ದೇವೆ. ಆದರೂ ಯಾವತ್ತು ಜಾತಿಗಳಿಗೆ ಸಾಮಾನ್ಯವಾಗಿ ಹತ್ತುವಂಥ ಸಂಗತಿಗಳು ಯಾವವೆಂದರೆ—ಜನ್ಮಭಾಷೆ ಕನ್ನಡ. ಗಂಡಸರ ಉಡಿಗೆ ಧೋತ್ರ, ರುಮಾಲ; ಹೆಂಗಸರು ಕಚ್ಚೆ ಹಾಕುವದಿಲ್ಲ, ಕುಂಕುಮ ಹಚ್ಚುವದಿಲ್ಲ; ಯೆಲ್ಲ ಜಾತಿಯ ಕಬ್ಬಲಿಗೇರು ಯೆಲ್ಲಮ್ಮನಿಗೆ ನಡಕೊಳ್ಳುವರು; ಹೆಣ್ಣು ಮಕ್ಕಳ ಲಗ್ನವನ್ನು ಹನ್ನೆರಡು ವರ್ಷದ ಪೂರ್ವದಲ್ಲಿ ಮಾಡುವರು, ವಿಧವೆಗಳಿಗೆ ಯೆರಡನೇ ಲಗ್ನ ಮಾಡುವರು. ಲಿಂಗವಂತರಲ್ಲದವರು ಮದ್ಯ ಮಾಂಸಗಳನ್ನು ತಕ್ಕೊಳ್ಳುವರು, ಬ್ರಾಹ್ಮಣರನ್ನು ಶುಭಾಶುಭ ಕಾರ್ಯಗಳಿಗೆ ಕರಿಯುವರು; ಹೆಣಗಳನ್ನು ಬಹುತರ ಸುಡುವರು, ಜನ್ಮ ಮರಣಗಳ ಸೂತಕವನ್ನು ಹಿಡಿಯುವರು. ಅಂಬಿಗರು, ಭೋಯಿಗಳು, ಜಾಲಗಾರರು, ನದೀ ತೀರದಲ್ಲಿ ಮುಖ್ಯವಾಗಿ ವಾಸಿಸ್ಸುತ್ತಾರೆ. ಯಾವ ಜಾತಿಯವರೂ ಬಹುತರ ಮಕ್ಕಳನ್ನು ಶಾಲೆಗೆ ಕಳಿಸುವದಿಲ್ಲ. ಬುಡಬುಡಕಿಗಳಂತೆ ಭಿಕ್ಷೆ ಬೇಡುವ ಕಬ್ಬಲಿಗೇರ ಜಾತಿಗಳು ಕೆಲವುಂಟು. ಧಾರವಾಡ ಜಿಲ್ಲೆಯಲ್ಲಿ ಭಿಕ್ಷೆ ಬೇಡುವ ಕಬ್ಬಲಿಗೇರು ಬಳ್ಳಾರೀ ಶೀಮೆಯಿಂದ ಬಂದಂತೆ ಕಾಣುತ್ತದೆ. ಅವರು ಮನೆಯಲ್ಲಿ ತೆಲಗು ಭಾಷೆಯನ್ನಾಡುವರು.

ಆದರೆ ಉತ್ತಮ ಸ್ಥಿತಿಯಲ್ಲಿ ಇರುವಂಥ ಉಪ್ಪಾರರು, ಸುಣ್ಣಗಾರರು, ಮುಂತಾದವರು ತಾವು ಕಬ್ಬಲಿಗೇರೆಂದು ವೊಪ್ಪಿಕೊಳ್ಳುವದಿಲ್ಲ, ಕಬ್ಬಲಿಗೇರ ಕೂಡ ಊಟದ ಬಳಿಕೆಯನ್ನು ಸಹ ಮಾಡುವದಿಲ್ಲ.

## ಊಳಿಗದ ಜಾತಿಗಳೂ ವಾಹಕರ ಜಾತಿಗಳೂ.

| | ಧಾರವಾಡ. | | | ಬೆಳಗಾವಿ. | | | ವಿಜಾಪುರ. | | | ಕಾನಡಾ. | | |
|---|---|---|---|---|---|---|---|---|---|---|---|---|
| | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. |
| ಊಳಿಗದವರು. | | | | | | | | | | | | |
| ೧ ಭೋಯಿಗಳು ........... | ೫೬೯ | ೬೧೮ | ೧೧೮೭ | ೬೨೫ | ೬೪೨ | ೧೨೬೭ | ೨೮೫ | ೨೯೭ | ೫೮೨ | ೭೨೯ | ೪೨೭ | ೧೧೫೬ |
| ೨ ಅಗಸರು ............. | ೩೪೬೮ | ೩೪೦೧ | ೬೮೬೯ | ೧೫೬೧ | ೧೪೯೨ | ೩೦೫೩ | ೧೬೦೮ | ೧೬೦೭ | ೩೨೧೫ | | | ೬೦೦೦ |
| ೩ ನಾದಿಗರು ............ | ೩೫೨೪ | ೩೩೫೬ | ೬೮೮೦ | ೨೭೧೩ | ೨೩೬೬ | ೫೦೭೯ | ೩೫೮೦ | ೩೩೪೬ | ೬೯೨೬ | | | ೧೬೦೦ |
| ೪ ಅಡಬಟಕಿಗಳು .......... | ” | ” | ” | ” | ” | ” | ” | ” | ” | ೯೦೦ | ೧೦೦೦ | ೧೯೦೦ |
| ೫ ದೇವಳಿಗಳು ........... | ” | ” | ” | ” | ” | ” | ” | ” | ” | ೧೫೮೦ | ೧೬೨೦ | ೩೨೦೦ |
| ೬ ಪಡಿಯಾರರು .......... | ” | ” | ” | ” | ” | ” | ” | ” | ” | ೧೧೨ | ೧೧೬ | ೨೨೮ |
| ೭ ಬಂದಿಗಳು ............ | ” | ” | ” | ” | ” | ” | ” | ” | ” | ೨೦೦೦ | ೨೫೦೦ | ೪೫೦೦ |
| ವಾಹಕರು. | | | | | | | | | | | | |
| ೧ ಕೊರಚರು ............ | ” | ” | ” | ೧೨೯ | ೧೬೪ | ೨೯೩ | ” | ” | ” | ೧೦೮ | ೫೪ | ೧೬೨ |
| ೨ ಕೊರಮರು ............ | ” | ” | ” | ” | ” | ” | ” | ” | ” | ೧೪ | ೭ | ೨೧ |

**ಭೋಯಿಗಳು.**

ಭೋಯಿಗಳು.—ಇವರಲ್ಲಿ ಮರಾಠೀ ಭೋಯಿ, ಕಾರ ಭೋಯಿ, ಮಸಂಡೆ ಭೋಯಿ, ಪರತಗೀ ಭೋಯಿ, ಇತ್ಯಾದಿ ವೊಳಜಾತಿಗಳುಂಟು. ಮರಾಠೀ ಭೋಯಿಗಳು ಮಾತ್ರ ಮರಾಠೀ ಭಾಷೆಯನ್ನಾಡುವರು; ಉಳಿದವರೆಲ್ಲ ಕನ್ನಡಿಗರು; ಮೇಲೆ ಕಬ್ಬಲಿಗೇರ ವರ್ಣನೆಯಲ್ಲಿ ಹೇಳಿದಂತೆ ಬೋಯಿಗಳು ಮಹಾರಾಷ್ಟ್ರರಾಗಲಿ, ಕನ್ನಡಿಗರಾಗಲಿ, ಮೂಲದಲ್ಲಿ ಕಬ್ಬಲಿಗೇರು. ಇವರ ವೊಳ ಜಾತಿಗಳಲ್ಲಿ ಪರಸ್ಪರ ಊಟದ ಬಳಿಕೆಯಾಗುತ್ತದೆ; ಆದರೆ ಅಂಬಿಗರು ಮುಂತಾದ ಬೇರೆ ಕಬ್ಬಲಿಗೇರ ಜಾತಿಗಳ ಸಂಗಡ ಆಗುವದಿಲ್ಲ. ಧಾರವಾಡ ಜಿಲ್ಲೆಯಲ್ಲಿ ಬೆಸ್ತ ಭೋಯಿಗಳೆಂಬವರು ಲಿಂಗವಂತರಿರುತ್ತಾರೆ. ಅವರು ಲಿಂಗವಂತರ ಕೂಡ ಮಾತ್ರ ಊಟದ ಬಳಿಕೆ ಮಾಡುವರು. ಲಿಂಗವಂತ ಭೋಯಿಗಳ ಧರ್ಮ, ಆಹಾರ, ಶುಭಾಶುಭ ಕಾರ್ಯಗಳು, ಇವೆಲ್ಲ ಲಿಂಗವಂತರಂತೆ ನಡಿಯುತ್ತವೆ. ಉಳಿದ ಯಾವತ್ತು ಜಾತಿಗಳ ಭೋಯಿಗಳ ಊಟ, ಉಡಿಗೆ, ಧರ್ಮ, ನಡಾವಳಿ, ಮುಂತಾದವುಗಳೆಲ್ಲ ಕಬ್ಬಲಿಗೇರಂತೆ ಇಲ್ಲವೆ ಅಂಬಿಗರಂತೆ ಇರುತ್ತವೆ. ಮರಾಠೀ ಭೋಯಿಗಳು ಮುಖ್ಯವಾಗಿ ಮೇಣೆ ಪಲ್ಲಕ್ಕಿಗಳನ್ನು ಹೊರುತ್ತಾರೆ; ಕಾರ ಭೋಯಿಗಳು ಈ ಹೊರುವ ಹೋರೆ ಮಾಡುವದಲ್ಲದೆ ಮೀನ ಹಿಡಿಯುವರು. ಮಸಂಡೆ ಭೋಯಿಗಳು ಮುಖ್ಯವಾಗಿ ಮೀನ ಹಿಡಿಯುವರು. ಪರತಗೀ ಭೋಯಿಗಳು ಸುಣ್ಣ ಸುಡುವರು.

**ಅಗಸರು.**

ಅಗಸರು.—ಲಿಂಗವಂತ ಕನ್ನಡಿಗರು, ಲಿಂಗವಂತರಲ್ಲದಂಥ ಕನ್ನಡಿಗರು, ಮಹಾರಾಷ್ಟ್ರರು, ರಜಪೂತರು, ತೆಲಗರು, ಕೊಂಕಣಿಗರು, ಮುಸಲ್ಮಾನರು, ಇಷ್ಟು ಜಾತಿಗಳ ಜನರು ಬಿಳಿ ವಸ್ತ್ರ ಗಂಜೀ ಮಾಡುವ ಹೋರೆಯನ್ನು ಮಾಡುತ್ತಾರೆ. ಲಿಂಗವಂತರೂ ಮುಸಲ್ಮಾನರೂ ಹೊರ್ತಾಗಿ ಉಳಿದವರು ವಾಡಿಕೆಯಾಗಿ ಬ್ರಾಹ್ಮಣರ ಶಿಷ್ಯರಾಗಿ ನಡಿಯುತ್ತಾರೆ. ಇವರಲ್ಲಿ ರಜಪೂತರ ಹೊರ್ತಾಗಿ ಉಳಿದವರು ಮದ್ಯ ಮಾಂಸ ತಕ್ಕೊಳ್ಳುವರು. ಯೆಲ್ಲರು ಹೆಣ್ಣು ಮಕ್ಕಳ ಲಗ್ನವನ್ನು ಹನ್ನೆರಡು ವರ್ಷದೊಳಗೆ ಮಾಡುವರು, ವಿಧವೆಗಳ ಲಗ್ನ ಮಾಡುವರು. ರಜಪೂತರು ಗಂಡು ಮಕ್ಕಳ ಮುಂಜಿಯನ್ನು ೧೦ನೇ ವರ್ಷ ಮಾಡುವರು. ಹೆಣಗಳನ್ನು ಸುಡಲಿಕ್ಕೆ ಅನುಕೂಲವಿದ್ದವರು ಸುಡುವರು; ಉಳಿದವರೆಲ್ಲ ಹುಗಿಯುವರು. ಕನ್ನಡಿಗರು ಲಿಂಗವಂತರಲ್ಲದಿದ್ದರೂ ಹುಗಿಯುವ ಸಂಸ್ಕಾರಕ್ಕೆ ಜಂಗಮರನ್ನೇ ಕರಿಯುವರು. ಯಾವತ್ತು ಜಾತಿಗಳ ಅಗಸರು ವಾಡಿಕೆಯಾಗಿ ನಿತ್ಯ ಸ್ನಾನ ಮಾಡುವರು, ವೊಗಿಯಲಿಕ್ಕೆ ಬಂದ ಬಟ್ಟೆಗಳನ್ನು ನಿರಾತಂಕವಾಗಿ ಉಡುವರು. ಬಹುತರ ಯಾವತ್ತು ಹಿಂದೂ ಜಾತಿಗಳಲ್ಲಿ ಲಗ್ನ, ರಜೋದರ್ಶನ, ಮರಣ, ಮುಂತಾದ ಕಾರ್ಯಗಳಲ್ಲಿ ಅಗಸರ ಸಹಾಯ ಬೇಕಾಗುವದರಿಂದ ಅವರಿಗೆ ಈ ಕಾರ್ಯಗಳಲ್ಲಿ ಹಲ ಕೆಲವು ಹಕ್ಕುಗಳಿರುತ್ತವೆ. ಹಳ್ಳಿಗಳ ಬಲೂತಿದಾರರಲ್ಲಿ ಅಗಸರ ಬಾಬುಗಳು ಪೂರ್ವದಲ್ಲಿ ಇದ್ದವು. ಕಾನಡಾ ಜಿಲ್ಲೆಯ ಕೊಂಕಣೀ ಅಗಸರಲ್ಲಿ ಕೆಲವರು ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ; ಉಳಿದವರು ಯಾರೂ ಬಹುತರ ಕಳಿಸುವದಿಲ್ಲ.

**ನಾದಿಗರು.**

ನಾದಿಗರು.—ಅಗಸರಂತೆ ನಾದಿಗರ ಹೋರೆಯನ್ನಾದರೂ ಹಲವು ಜಾತಿಗಳ ಜನರು ಮಾಡುತ್ತಾರೆ. ಆ ಜಾತಿಗಳು ಲಿಂಗವಂತ ಕನ್ನಡಿಗರು, ಲಿಂಗವಂತರಲ್ಲದಂಥ ಕನ್ನಡಿಗರು, ರಜಪೂತರು, ಪರದೇಶಿಗಳು, ಸಜ್ಜನರು ಅಥವಾ ತೆಲಗರು, ಕೊಂಕಣಿಗರು, ಮುಸಲ್ಮಾನರು. ಇವರು ತಮ್ಮ ತಮ್ಮ ದೇಶ, ಧರ್ಮ, ಜಾತಿ, ಇವುಗಳನ್ನು ಅನುಸರಿಸಿ ವರ್ತಿಸುತ್ತಾರೆ. ಇವರಲ್ಲಿ ಲಿಂಗವಂತರ ಸಂಖ್ಯೆವೇ ಯೆಲ್ಲಕ್ಕೂ ಹೆಚ್ಚು ಇರುತ್ತದೆ. ಆದರೆ ಕಾನಡಾ ಜಿಲ್ಲೆಯಲ್ಲಿ ಕನ್ನಡ ನಾದಿಗರಿದ್ದಾಗ್ಯೂ ಅವರು ಲಿಂಗವಂತರಲ್ಲ. ಲಿಂಗವಂತರು ಬಸವೇಶ್ವರನ ಕ್ಷೌರಕನಾದ ಹಡಪದ ಮುಪ್ಪಣ್ಣನೆಂಬವನ ವಂಶದವರು ತಾವೆಂದು ಹೇಳುತ್ತಾರೆ. ಕಾನಡಾ ಜಿಲ್ಲೆಯ ಕೊಂಕಣೀ ನಾದಿಗರ ಹೆಂಗಸರು ಆ ಜಿಲ್ಲೆಯ ಬೇರೆ ಕೊಂಕಣೀ ಹೆಂಗಸರಂತೆ ಕುಬ್ಬಸ ತೊಡುವದಿಲ್ಲ.

ನಾದಿಗರು ಪೂರ್ವದಲ್ಲಿ ಹಳ್ಳಿಗಳ ಬಲೂತಿದಾರರಲ್ಲಿ ಯೆಣಿಸಲ್ಪಡುತ್ತಿದ್ದ ಕಾರಣ ಹಳ್ಳಿಗಳಲ್ಲಿ ಕೆಲ ಕೆಲವರಿಗೆ ಇನಾಮು ಭೂಮಿಗಳಿರುತ್ತವೆ.

ನಾದಿಗರು ಕ್ಷೌರ ಮಾಡುವದಲ್ಲದೆ, ತುಮ್ಮಡೀ ಹಚ್ಚಿ ರಕ್ತ ತೆಗಿಯುವದು, ನಾರು ತೆಗಿಯುವದು, ಕೈ ಕಾಲುಗಳ ಸಂದು ತಪ್ಪಿದರೆ ಅವನ್ನು ಕೂಡ್ರಿಸುವದು, ಶೂಲಿ, ಬಾವು, ಹುಣ್ಣು, ಇವುಗಳಿಗೆ ಔಷಧ ಮಾಡುವದು, ಮುಂತಾದ ಹೋರೆಗಳನ್ನು ಮಾಡುತ್ತಾರೆ. ಮೇಲೆ ಹೇಳಿದ ಜಾತಿಗಳಲ್ಲಿ ಯಾರೂ ಬುರುಡರು, ಹೊಲಿಯರು, ಸಮ್ಮಗಾರರು, ಮುಂತಾದ ನೀಚ ಜಾತಿಗಳ ಕ್ಷೌರ ಮಾಡುವದಿಲ್ಲ. ಮುಸಲ್ಮಾನರು, ಖ್ರಿಸ್ತೀ ಜನರು, ಯೂರೋಪಿಯನ್ನರು, ಪಾರ್ಶಿಗಳು, ಇಂಥಾ ಪರದೇಶದ ಜಾತಿಗಳ ಕ್ಷೌರವನ್ನು ಸಹ ಕೆಲ ಕೆಲವರು ಮಾಡುವದಿಲ್ಲ. ಲಿಂಗವಂತರು ಯಾವತ್ತು ಉತ್ತಮ ಜಾತಿಗಳ ಕ್ಷೌರ ಮಾಡಲಿಕ್ಕೆ ಮಾತ್ರ ಹೋಗುತ್ತಾರೆ. ತೆಲಗರು ಬಹುತರ ಯುರೋಪಿಯನ್ನ ಜನರ ಕ್ಷೌರ ಮಾಡುತ್ತಾರೆ. ಸಜ್ಜನರೆಂಬ ತೆಲಗು ನಾದಿಗರು ಸನ್ ೧೮೭೭ನೇ ವರ್ಷದ ಬರಗಾಲದಲ್ಲಿ ನಿಜಾಮನ ರಾಜ್ಯದಿಂದ ವಿಜಾಪುರ ಜಿಲ್ಲೆಯಲ್ಲಿ ಬಂದು ನಿಂತಿದ್ದಾರೆ. ಇವರು ಕ್ಷೌರದ ಹೋರೆಯನ್ನು ಬಹುತರ ಮಾಡುವದಿಲ್ಲ, ಕೂಲಿಗೆ ಹೋಗುವರು. ನಾದಿಗರಲ್ಲಿ ಬಹುತರ ಯಾರೂ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವದಿಲ್ಲ.

**ಅಡಬಟಿಕಿಗಳು.**

ಅಡಬಟಿಕಿಗಳು.—ಕಾನಡಾ ಜಿಲ್ಲೆಯಲ್ಲಿ ಮಾತ್ರ ಇವರ ವಸ್ತಿಯುಂಟು. ಇವರು ಜಾತಿಯನ್ನು ಕಳಕೊಂಡವರ ವಂಶದವರೆಂದು ಹೇಳುತ್ತಾರೆ. ಈಗ್ಯೂ ಜಾತಿ ಭ್ರಷ್ಟರಾದ ಬ್ರಾಹ್ಮಣರು, ವೊಕ್ಕಲಿಗರು, ಮೊದಲಾದವರು ಇವರೊಳಗೆ ಕೂಡುತ್ತಾರೆ. ಇವರಲ್ಲಿ ಕೆಲವರ ಮೈಬಣ್ಣ ಕಪ್ಪು ಕೆಲವರದು ಕೆಂಪು, ಕೆಲವರು ಗಿಡ್ಡರು, ಕೆಲವರು ಉದ್ದ, ಹೀಗೆ ಸ್ವರೂಪದಲ್ಲಿ ಬಹಳ ವೈಲಕ್ಷಣ್ಯವಿರುತ್ತದೆ. ಇದರಂತೆ ಕೆಲವರು ಕೊಂಕಣೀ ಭಾಷೆಯನ್ನಾಡುವರು, ಕೆಲವರು ಕನ್ನಡ ಆಡುವರು. ಎಲ್ಲರೂ ಮದ್ಯ ಮಾಂಸ ತಕ್ಕೊಳ್ಳುವರು, ಬ್ರಾಹ್ಮಣರನ್ನು ಕಾರ್ಯಗಳಿಗೆ ಕರಿಯುವರು, ವಿಧವೆಗಳ ಲಗ್ನ ಮಾಡುವರು, ಹೆಣಗಳನ್ನು ಸುಡುವರು. ಒಟ್ಟಿಗೆ

ಇವರ ಸ್ಥಿತಿ ರೀತಿಗಳೆಲ್ಲ ಕುಣಬೀ ಜನರಂತೆ ಇರುತ್ತವೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ದೇವಳಿಗಳು.**

ದೇವಳಿಗಳು. — ಇವರೂ ಕಾನಡಾ ಜಿಲ್ಲೆಯವರೇ. ಹಾದರದ ಕಾರಣದಿಂದ ಜಾತಿಯನ್ನು ಕಳಕೊಂಡು ಗುಡಿಗಳ ಪರಿಚಾರಕರೊಳಗೆ ಶೇರಿದ ಹೆಂಗಸರ ಸಂತತಿಯುವರು ಇವರೆಂದು ತೋರುತ್ತದೆ. ಇವರು ಕೊಂಕಣೀ ಭಾಷೆಯನ್ನಾಡುವರು; ಇವರ ನಡೆ ನುಡಿ, ಸ್ಥಿತಿ ರೀತಿಗಳೆಲ್ಲ ವಾಡಿಕೆಯಾಗಿ ಭಂಡಾರಿಗಳಂತೆ ಇರುತ್ತವೆ. ಇವರ ಹೆಣ್ಣು ಮಕ್ಕಳು ಚಲುವೆಯರಿದ್ದರೆ ಸೂಳೆಗಳಾಗುವರು, ವಿಧವೆಯು ಸೂಳೆಯಾಗ ಬಹುದು, ಇಲ್ಲವೆ ಲಗ್ನ ಮಾಡಿಕೊಳ್ಳ ಬಹುದು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಪಡಿಯಾರರು.**

ಪಡಿಯಾರರು. — ಇವರು ಕಾನಡಾ ಜಿಲ್ಲೆಯಲ್ಲಿ ಘಟ್ಟದ ಮೇಲೆ ಇರುತ್ತಾರೆ. ಪಡಿಯಾರವೆಂಬ ಹೆಸರು ಪಡಿಯಾಳ್ ಯೆಂಬ ತಮಿಳ ಶಬ್ದದಿಂದ ಹುಟ್ಟಿರುತ್ತದೆಂದು ಹೇಳುತ್ತಾರೆ; ಪಡಿಯಾಳೆಂದರೆ ಕೂಲಿಯ ಮನುಷ್ಯ. ಇವರ ಆಚಾರ, ಧರ್ಮ, ಸ್ಥಿತಿ ರೀತಿ ಮುಂತಾದವುಗಳೆಲ್ಲ ದೇವಳಿಗಳಂತೆ. ಅವರಂತೆ ಇವರ ಹೆಂಗಸರಾದರೂ ಸೂಳೆಯರಾಗುವರು. ಹೈಗನಾಡಿನಲ್ಲಿ ಈ ಜಾತಿಯ ಗಂಡಸರು ಬ್ರಾಹ್ಮಣರು ಮುಂತಾದ ಉತ್ತಮ ಕುಲದವರ ಮನೆಯಲ್ಲಿ ಚಾಕರಿಗೆ ನಿಲ್ಲುವರು, ಇಲ್ಲವೆ ವೊಕ್ಕಲತನ ಮಾಡುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಬಂದಿಗಳು.**

ಬಂದಿಗಳು. — ಇವರು ಕಾನಡಾ ಜಿಲ್ಲೆಯಲ್ಲಿ ಘಟ್ಟದ ಕೆಳಗೆ ಇರುತ್ತಾರೆ. ಫೋರ್ತುಗೀಸರ ಬಲಾತ್ಕಾರಕ್ಕೆ ಹೆದರಿ ಗೋಮಾಂತಕ ಶೀಮೆಯನ್ನು ಬಿಟ್ಟು ಬಂದಂಥ ಬ್ರಾಹ್ಮಣರ ಶರೆಯಾಳುಗಳ (ಗುಲಾಮರ) ವಂಶದವರು ಇವರೆಂದು ತೋರುತ್ತದೆ; ಕೊಂಕಣಿಯೇ ಇವರ ಭಾಷೆ. ಇವರ ಸ್ಥಿತಿ ರೀತಿ, ಧರ್ಮ, ಮುಂತಾದವುಗಳೆಲ್ಲ ಅಡಬಟಕಿಗಳಂತೆ. ಆದರೆ ಇವರು ಬಹಳ ಬಡವರು; ಉತ್ತಮ ಕುಲದವರ ಮನೆಯಲ್ಲಿ ಚಾಕರಿಗೆ ನಿಲ್ಲುವರು. ಇವರ ಹೆಂಗಸರಾದರೂ ಸೂಳೆತನ ಮಾಡುತ್ತಾರೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಕೊರಚರು.**

ಕೊರಚರು. — ಇವರು ಬೆಳಗಾವಿ, ಕಾನಡಾ ಜಿಲ್ಲೆಗಳಲ್ಲಿ ಇರುತ್ತಾರೆ; ಜನ್ಮಭಾಷೆ ಕನ್ನಡ, ತಮಿಳ. ಇವರಲ್ಲಿ ಬೀಡ ಕೊರಚರು, ಡಬಳೇ ಕೊರಚರು, ಊರ ಕೊರಚರು, ಕುಂಚೀ ಕೊರಚರು, ಯೆಂದು ನಾಲ್ಕು ವೊಳಜಾತಿಗಳಿರುತ್ತವೆ; ಮೊದಲಿನವರು ಯೆಲ್ಲಕ್ಕೂ ಉತ್ತಮರೆನಿಸುತ್ತಾರೆ, ಡಬಳೇ ಕೊರಚರ ಹೆಣ್ಣು ತಕ್ಕೊಳ್ಳುತ್ತಾರೆ. ಉಳಿದವರೊಳಗೆ ಪರಸ್ಪರ ಊಟದ ಬಳಿಕೆ ಸಹ ಆಗುವದಿಲ್ಲ. ಕೊರಚರು ಕಪ್ಪು ಮೈಬಣ್ಣದವರು, ಉಗ್ರ ಸ್ವರೂಪಿಗಳು. ಇವರ ಉಡಿಗೆಗಳು ಚಣ್ಣ, ನಡಕಟ್ಟು, ರುಮಾಲ, ಕಂಬಳಿ. ಹೆಂಗಸರಿಗೆ ಕುಬ್ಬಸವಿಲ್ಲ, ಕರೆಮಣಿಗಳ ಸರಗಳು ಬಹಳ. ಕೊರಚರಿಗೆ ಶರೆ, ಗಾಂಜಿಗಳ ಚಟ ಬಹಳ; ಇವರಿಗೆ ಮನೆ ಇಲ್ಲ, ಊರೂರಿಗೆ ತಿರುಗುತ್ತ ಗುಡುಸಲುಗಳಲ್ಲಿ ಇವರು ವಾಸಿಸುತ್ತಾರೆ.

ಮದ್ಯ ಮಾಂಸಗಳಿಗೆ ಅಡ್ಡಿ ಇಲ್ಲ; ಬ್ರಾಹ್ಮಣರೇ ಇವರಲ್ಲಿಯ ಕಾರ್ಯಗಳನ್ನು ಮಾಡಿಸುವರು. ಇವರ ಕುಲದೇವತೆ ಮರಿಯಮ್ಮ; ಹನುಮಂತನಲ್ಲಿಯೂ ಇವರ ಭಕ್ತಿ ಬಹಳ. ವಿಧವೆಗಳು ಯೇಳು ಸಾರಿ ಲಗ್ನ ಮಾಡಿಕೊಳ್ಳ ಬಹುದು. ವೊಟ್ಟೆತ್ತುಗಳ ಮೇಲೆ ಸರಕುಗಳನ್ನು ಊರಿಂದೂರಿಗೆ ವೊಯಿದು ಮಾರಾಟ ಮಾಡುವದೇ ಇವರ ಮುಖ್ಯ ಹೋರೆ; ಕೆಲವರು ಛಕಡೀ ಹೊಡಿಯುವರು, ಕೂಲಿಗೆ ಹೋಗುವರು, ಬೇಟೆಗೆ ಹೋಗುವರು. ಇವರ ಹೆಂಗಸರು ಹಚ್ಚೀ ಬೊಟ್ಟು ಚುಚ್ಚುವ ಹೋರೆ ಮಾಡಿ ಹೊಟ್ಟೆಗೆ ದೊರಕಿಸುವರು. ಆದರೂ ಕೊರಚರ ಬಡತನ ಹಿಂಗುವದಿಲ್ಲ. ಇವರಲ್ಲಿ ಲಗ್ನದ ನಡಾವಳಿ ಹ್ಯಾಗಂದರೆ,— ಲಗ್ನದ ಪೂರ್ವ ದಿವಸ ಸಂಜೆಯಲ್ಲಿ ಮದಿಮಗಳು ಮದಿಮಗನ ಮನೆಗೆ ಹೋಗುವಳು. ಮರು ದಿವಸ ಬೆಳಿಗ್ಗೆ ಕಂಬಳೀ ಹಾಸಿ, ಅದರ ಮೇಲೆ ರಂಗೋಲಿಯ ಯೆರಡು ವರ್ತುಳಗಳಲ್ಲಿ ಸೂರ್ಯ ಚಂದ್ರರ ಆಕೃತಿಗಳನ್ನು ಹಾಕಿ, ಅವುಗಳ ಮೇಲೆ ಅಕ್ಕಿಯನ್ನು ಹರವಿ, ಐದು ಆಣೆ ರೊಕ್ಕ ಕಂಬಳಿಯ ಮುಂದೆ ಇಡುವರು. ಮದಿಮಗನು ತಾಯಿ ತಂದೆಗಳಿಗೆ ನಮಸ್ಕಾರ ಮಾಡಿದ ಬಳಿಕ ಐದು ಜನ ಮುತ್ತೈದಿಯರು ಮದಿಮಕ್ಕಳಿಗೆ ಅರಿಶಿಣ ಹಚ್ಚಿ ಅವರನ್ನು ಮೂರು ಸಾರಿ ಯೆರೆಯುವರು. ಸಂಜೆಯಲ್ಲಿ ತರೇದ ಮರದ್ದೊಂದು ಟೊಂಗಿಯನ್ನು ಕಡಿದು, ಅದಕ್ಕೆ ಹಗ್ಗ ಕಟ್ಟಿ ವೊಂದು ಬಾವಿಯೊಳಗೆ ಮುಳುಗಿಸಿಡುವರು. ನಡುರಾತ್ರಿಯಲ್ಲಿ ಐದು ಜನ ಮುತ್ತೈದಿಯರು ಆ ಬಾವಿಯೊಳಗಿಂದ ವೊಂದೊಂದು ತಂಬಿಗೆ ನೀರು ಸೇದಿ ತೆಗಿದ ಬಳಿಕ ತರೆದ ಟೊಂಗಿಯನ್ನು ತೆಗಿದು ಮದಿಮಗನ ಮನೆಯ ಬಾಗಿಲ ಮುಂದೆ ಗಿಡ ನಿಲ್ಲಿಸಿದಂತೆ ನೆಲದೊಳಗೆ ಹುಗಿದಿಡುವರು. ಅದರ ಬಳಿಯಲ್ಲಿ ಯೆರಡು ಜೋಳದ ಗುಂಪೆಗಳು, ಯೆರಡು ನೀರಿನ ಪಾತ್ರೆಗಳು, ದೊಡ್ಡದೊಂದು ಯೆಣ್ಣೆ ತುಂಬಿದ ಪಾತ್ರೆ, ಯೇಳೆಂಟು ಶೇರು ಹತ್ತೀ ಕಾಳು, ಇಷ್ಟೆಲ್ಲ ಇಟ್ಟು, ಟೊಂಗೆ ಸಹಿತ ಇವೆಲ್ಲ ಸುಡುವಂತೆ ಹತ್ತೀ ಕಾಳಿಗೆ ಉರಿ ಹಚ್ಚುವರು. ಜ್ವಾಲೆಯು ಪೂರಾ ಹಬ್ಬುಗೊಂಡ ಬಳಿಕ ಮದಿಮಕ್ಕಳನ್ನು ಮೇಲೆ ಹೇಳಿದ ವರ್ತುಳಗಳ ಮೇಲೆ ಕೂಡ್ರಿಸಿ, ಅವರ ಹಣೆಗೆ ಅಕ್ಕೀಕಾಳು ಹಚ್ಚಿ, ತಲೆಯ ಮೇಲೆ ಅಕ್ಕೀಕಾಳು ಚಲ್ಲುವರು. ಹೀಗೆ ಲಗ್ನವಾದ ಕೂಡಲೆ ನೆರೆದ ಜನರಿಗೆ ಮದಿಮಗನ ತಂದೆಯು ಶರೆ ಕುಡಿಸಲಿಕ್ಕೆ ಬೇಕು. ಕೊರಚರು ಹೆಣಗಳನ್ನು ಹುಗಿದು ಮೂರು ದಿವಸ ಸೂತಕ ಹಿಡಿಯುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಕೊರಮರು.**

ಕೊರಮರು.— ಇವರು ಸಿರಸಿ, ಸಿದ್ದಾಪೂರ ತಾಲೂಕುಗಳಲ್ಲಿ ಮಾತ್ರ ಮನೆ ಮಾಡಿಕೊಂಡು ಇರುತ್ತಾರೆ. ಇವರ ಜನ್ಮಭಾಷೆ ತೆಲಗು. ಗಿಡ್ಡ ಪಂಜೆ, ಕರೆ ಕಂಬಳಿ, ಕರೆ ರುಮಾಲ, ಇವರ ಉಡಿಗೆಗಳು; ಹೆಗಲ ಮೇಲೆ ತಂಬಾಕದ ಚೀಲು ಇರಲಿಕ್ಕೆ ಬೇಕು. ಹೆಂಗಸರ ಉಡಿಗೆಗಳೂ ಕರೆ ಮಣಿಗಳೂ ಸಹ ಕೊರಚರಂತೆ. ಇವರ ಧರ್ಮ, ಆಹಾರ, ನಡಾವಳಿ, ಮುಂತಾದವುಗಳೆಲ್ಲ ಕೊರಚರಂತೆ. ಆದರೆ ಅವರಿಗೂ ಇವರಿಗೂ ಊಟದ ಬಳಿಕೆಯಾಗುವದಿಲ್ಲ; ಅವರಿಗಿಂತ ಇವರು ಹೆಚ್ಚು ಕ್ಷೇಮದಿಂದಿದ್ದಾರೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

# ನೃತ್ಯಗಾಯನ ವಾದ್ಯಗಳಿಂದ ಜೀವಿಸುವ ಜಾತಿಗಳು.

| | ಧಾರವಾಡ. | | | ಬೆಳಗಾವಿ. | | | ವಿಜಾಪುರ. | | | ಕಾನಡಾ. | | | |
|---|---|---|---|---|---|---|---|---|---|---|---|---|---|
| | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | |
| ೧ ಕಲಾವಂತರು ....... | | | ೩೦೦ | | | ೫೦ | ೫೭ | ೯೪ | ೧೫೧ | ೩೨೦ | ೪೫೦ | *೭೭೦ | * ದೇವಳೀ ಸಹಿತ. |
| ೨ ಸಾಯಬಿಗಳು ....... | ,, | ,, | ,, | ,, | ,, | ,, | ,, | ,, | ,, | ೧೨ | ೧೪ | ೨೬ | |
| ೩ ದೇವಳಿಗಳು ....... | ,, | ,, | ,, | ೫೩ | ೫೨ | ೧೦೫ | ,, | ,, | ,, | ,, | ,, | ,, | |
| ೪ ಬಸವಿಗಳು......... | | | ೨೦೦೦ | ,, | ,, | ,, | ,, | ,, | ,, | ,, | ,, | ,, | |
| ೫ ಸೂಳೆಗಳು......... | | | ೧೦೦೦ | ,, | ,, | ,, | ,, | ,, | ,, | ,, | ,, | ,, | |
| ೧ ಘಡಶಿಗಳು......... | ,, | ,, | ,, | ೧೧ | ೧೬ | ೨೭ | ,, | ,, | ,, | | | ೫೦ | |
| ೨ ಸಪ್ಪಳಿಗರು......... | ,, | ,, | ,, | ,, | ,, | ,, | ,, | ,, | ,, | ೨೧೭೯ | ೧೪೩೧ | ೩೬೧೦ | |
| ೩ ಹಳ್ಳೇರು ......... | ,, | ,, | ,, | ,, | ,, | ,, | ,, | ,, | ,, | ೮೬೬ | ೮೬೬ | ೧೭೩೨ | |
| ೪ ಸನಾದೀ ಕೊರವರು .... | ಇವರ ವರ್ಣನೆಯನ್ನು ಭಿಕ್ಷುಕರೊಳಗೆ ನೋಡು. | | | | | | | | | | | | |

**ಕಲಾವಂತರು.**

ಕಲಾವಂತರು.—ವಂಶ ಪರಂಪರೆಯಾಗಿ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಸಮಾಜದೊಳಗೆ ಕುಣಿಯುವ ಹೋರೆಯನ್ನು ಮಾಡುವವರಿಗೆ ಕಲಾವಂತರೆನ್ನುವರು. ಲಿಂಗವಂತರಾದ ಕನ್ನಡಿಗರು, ಮಹಾರಾಷ್ಟ್ರರು, ಕೊಂಕಣಿಗರು, ತೆಲಗರು, ಮುಸಲ್ಮಾನರು, ಈ ಹೋರೆಯನ್ನು ಮಾಡುವರು. ಇವರು ವಂಶ ಪರಂಪರೆಯ ಕಲಾವಂತರು. ಇವರಲ್ಲದೆ ದೇವಳೀ, ಭಂಡಾರೀ, ಅಡಬಟಕೀ, ಪಡಿಯಾರ್, ಮುಂತಾದ ಜಾತಿಗಳ ಹೆಂಗಸರು ಕುಣಿಯುವ ಹಾಡುವ ಹೋರೆ ಮಾಡುವರು. ಅವರನ್ನು ವಂಶ ಪರಂಪರೆಯ ಕಲಾವಂತರು ತಿರಸ್ಕರಿಸುತ್ತಾರೆ. ಈ ನಾನಾ ಜಾತಿಗಳ ಕಲಾವಂತರ ಮನೆತನದ ಸ್ಥಿತಿ ರೀತಿಗಳು ಅವರವರ ದೇಶ ಧರ್ಮಗಳಂತೆ ಇರುತ್ತವೆ. ಲಿಂಗವಂತರ ಹೊರ್ತು ಯಾವತ್ತು ಜಾತಿಗಳ ಕಲಾವಂತರು ಮದ್ಯ ಮಾಂಸಗಳನ್ನು ತಕ್ಕೊಳ್ಳುತ್ತಾರೆ. ಗಂಡಸರ ಉಡಿಗೆಗಳು ಅವರವರ ಜಾತಿ ರಿವಾಜಿನಂತೆ ಇರುತ್ತವೆ. ಹೆಂಗಸರು ವಾಡಿಕೆಯಾಗಿ ನಿತ್ಯ ಸ್ನಾನ ಮಾಡಿ ಬೆಲೆಯುಳ್ಳ ಶೀರೆ ಕುಬ್ಬಸಗಳನ್ನು ಧರಿಸುವರು. ಅವರ ಮೈ ಮೇಲೆ ಚಿನ್ನದ ಅಲಂಕಾರಗಳು ಹಲಕೆಲವು ಬಹುತರ ಇರುತ್ತವೆ. ಮನೆಯಲ್ಲಿ ಕೆಲವರು ಪಾತರದವರು* ಕಚ್ಚೇ ಹಾಕುವದಿಲ್ಲ, ಲಿಂಗವಂತರು ಹಣೆಗೆ ವಿಭೂತಿ ಹಚ್ಚುವರು. ಆದರೆ ನಾಚಿಗೆ ಹೋಗುವಾಗ ಬ್ರಾಹ್ಮಣರ ಹೆಂಗಸರ ಹಾಗೆ ಕಚ್ಚೇ ಹಾಕಿ ಕೊಂಡು, ಕುಂಕುಮ ಹಚ್ಚಿ ಕೊಂಡು ತಲೆಯಲ್ಲಿಯೂ ಮೈ ಮೇಲೆಯೂ ಅಲಂಕಾರಗಳನ್ನಿಟ್ಟು ಕೊಂಡು ಹೋಗುವರು. ಮುಸಲ್ಮಾನ ಪಾತರದವರು ಸಹ ಕುಂಕುಮ ಹಚ್ಚುವರು. ಪಾತರದಾಕೆ ಆಗ ತಕ್ಕ ಹುಡಿಗೆಗೆ ಯೇಳು ವರ್ಷ ತುಂಬಿದ ಬಳಿಕ ಗೆಜ್ಜೆ ಕಟ್ಟುವ ಸಂಸ್ಕಾರ ಮಾಡುವರು. ಕಂಬಳಿಯ ಮೇಲೆ ತಂಬೂರಿ, ಮದ್ದಲಿ, ಸಾರಂಗ, ತಾಳ, ಇವುಗಳನ್ನಿಟ್ಟು ಹುಡಿಗೆಗೆ ಹೊಸ ಶೀರೆ ಉಡಿಸಿ, ಆಕೆಯ ಕೈಯಿಂದ ಈ ವಾದ್ಯಗಳ ಪೂಜೆ ಮಾಡಿಸಿ, ಆಕೆಯ ಕಾಲಿಗೆ ಗೆಜ್ಜೆಗಳನ್ನು ಕಟ್ಟುವರು. ಅಂದಿನಿಂದ ಆ ಹುಡಿಗೆಗೆ ಹಾಡು ಕಲಿಸ ಹತ್ತುವರು. ಹುಡಿಗೆ ಮೈನೆರಿದ ಬಳಿಕ ಶೆಸ ಯೆಂಬ ಲಗ್ನದ ಸಂಸ್ಕಾರ ಮಾಡುತ್ತಾರೆ. ಈ ಲಗ್ನದಲ್ಲಿ ಬೇರೊಬ್ಬ ಹುಡಿಗೆ ಗಂಡಸಿನ ಸೋಗು ಹಾಕಿ ಕೊಂಡು, ಕೈಯಲ್ಲಿ ಕಠಾರಿಯನ್ನು ಹಿಡುಕೊಂಡು ಮದಿಮಗನಾಗುತ್ತಾಳೆ. ಆ ಹುಡಿಗೆಗೂ ಲಗ್ನವಾಗ ತಕ್ಕ ಹುಡಿಗೆಗೂ ಜಾತಿಯ ಪದ್ಧತಿಯಂತೆ ಲಗ್ನವಾಗುತ್ತದೆ. ಕೆಲವರು ಬರೀ ಕಠಾರಿಯ ಕೂಡ, ಇಲ್ಲವೆ ಮದ್ದಲಿಯ ಕೂಡ ಉಪವರಳಾದ ಹುಡಿಗೆಯ ಲಗ್ನ ಮಾಡುತ್ತಾರೆ. ಜಾರಕರ್ಮವು ಪಾತರದವರ ಮುಖ್ಯ ಹೋರೆ ಇರುತ್ತದೆ. ಮೈನೆರಿದ ಬಳಿಕ ದುಡ್ಡು ಕೊಡುವ ಸಾಮರ್ಥ್ಯವುಳ್ಳಂಥವನೊಬ್ಬ ಪ್ರಾಯಸ್ಥನ ಕೈಯಿಂದ ಯೋಗ್ಯತೆಯ ಪ್ರಕಾರ ಹಣ ತಕ್ಕೊಂಡು ಅವನಿಗೆ ಆ ಹುಡಿಗೆಯ ಫಲಶೋಭನ ಮಾಡಿ ಕೊಡುವರು. ಈ ಸಂಸ್ಕಾರಕ್ಕೆ ಹೆಣ್ಣು ಮಾಡುವ ಸಂಸ್ಕಾರವೆನ್ನುತ್ತಾರೆ. ಹೆಣ್ಣು ಮಾಡಿದವನೇ ಗಂಡನೆಂದೆಣಿಸಲ್ಪಡುತ್ತಾನೆ. ಆದರೆ ಫಲಶೋಭನವಾದ ಬಳಿಕ ತಿಂಗಳು ಯೆರಡು ತಿಂಗಳು ಮಾತ್ರ ಹೆಣ್ಣಾದ ಹುಡಿಗೆಯ ಮೇಲೆ ಅವನ ಹಕ್ಕು ಇರುತ್ತದೆ. ಮುಂದೆ ಬೇಕಾದವರನ್ನು ಆಕೆ ಕರೆಕೊಳ್ಳ

* ಈ ಹೆಸರು ಪಾದರ ಅಂದರೆ ಪಾದರ ಈ ಶಬ್ದದಿಂದ ಹುಟ್ಟಿರ ಬಹುದೆಂದು ತೋರುತ್ತದೆ.

ಬಹುದು. ಲಿಂಗವಂತರು ಮುಸಲ್ಮಾನರನ್ನೂ ಕ್ರಿಸ್ತೀ ಜನರನ್ನೂ ಕರೆಕೊಳ್ಳುವದಿಲ್ಲ. ತೆಲಗರು ಮುಸಲ್ಮಾನರನ್ನು ಕರೆಕೊಳ್ಳುತ್ತಾರೆ, ಕ್ರಿಸ್ತೀ ಜನರನ್ನು ಕರೆಕೊಳ್ಳುವದಿಲ್ಲ. ಕೊಂಕಣಿಗರು ಕ್ರಿಸ್ತೀ ಜನರನ್ನು ಕರೆಕೊಳ್ಳುತ್ತಾರೆ, ಮುಸಲ್ಮಾನರನ್ನು ಕರೆಕೊಳ್ಳುವದಿಲ್ಲ. ಮುಸಲ್ಮಾನರು ಬೇಕಾದ ಜಾತಿಯವರನ್ನು ಕರೆಕೊಳ್ಳುತ್ತಾರೆ. ಪಾತರದವರ ಗಂಡು ಮಕ್ಕಳು ಸಾರಂಗ, ಮೃದಂಗಗಳನ್ನು ಬಾರಿಸಲಿಕ್ಕೆ ಕಲಿತು ಸಾಜಿಂದಿಗಳಾಗುತ್ತಾರೆ. ಕೆಲವರು ಗಾಯನವನ್ನು ಪೊಳಿತಾಗಿ ಕಲಿತು, ಹೆಣ್ಣು ಹುಡುಗರಿಗೆ ಗಾಯನ ಕಲಿಸುತ್ತಾರೆ. ಗಾಣಿಗರು, ಅಗಸರು, ನಾದಿಗರು, ಜೀನಗಾರರು, ಮುಂತಾದ ನೀಚ ಜಾತಿಗಳ ಮನೆಗೆ ಪಾತರದವರು ಕುಣಿಯಲಿಕ್ಕೆ ಹೋಗುವದಿಲ್ಲ; ಕಸಬಿಣಿಗಳಿದ್ದಲ್ಲಿ ಕುಣಿಯುವದಿಲ್ಲ. ಕಲಾವಂತ ಗಂಡಸರ ಹೆಂಡಂದಿರು ಮನೆಗೆಲಸ ಮಾಡುತ್ತಾರೆ. ಅವರ ಗಂಡ ಸತ್ತರೆ, ಅವರಿಗೆ ಬಹುತರ ಯೆರಡನೇ ಲಗ್ನವಿಲ್ಲ. ಪಾತರದವರು ಬೆಳಿಗ್ಗೂ ಸಂಜೆಗೂ ಹಾಡುವ ತಾಲೀಮು ಮಾಡುವರು; ಉಳಿದ ವೇಳೆಯನ್ನೆಲ್ಲ ಪರಟೆ, ಆಟ, ನಿದ್ರೆ, ತಂಬಾಕ ತಿನ್ನುವದು, ಇವುಗಳಲ್ಲಿ ಕಳಿಯುವರು. ಪಾತರದವರಿಗೆ ಬಹು ಜನರ ಸಹವಾಸದಿಂದ ಉಪದಂಶದ ರೋಗವು ಬಹುತರ ಹತ್ತುತ್ತದೆ. ಅದರಿಂದ ಅವರು ಬೇಗ ಮುಪ್ಪಾಗಿ ಮರಣ ಹೊಂದುವರು. ಇವರಲ್ಲಿ ತಾಯಿಯ ಆಸ್ತಿಗೆ ಮಗಳು ಬಾಧ್ಯಳಾಗುತ್ತಾಳೆ, ಮಗನು ಆಗುವದಿಲ್ಲ. ಪೂರ್ವದಲ್ಲಿ ಪಾತರದವರು ವೊಕ್ಕಲಿಗರು, ಮುಂತಾದ ಉತ್ತಮ ಕುಲದ ಹೆಣ್ಣು ಮಕ್ಕಳನ್ನು ಕ್ರಯಕ್ಕೆ ತಕ್ಕೊಂಡು ಅವರಿಗೆ ತಮ್ಮ ವಿದ್ಯವನ್ನು ಕಲಿಸುವರು. ಆದರೆ ಅದಕ್ಕೆ ಈಗ ಕಾಯದೆಯಿಂದ ಪ್ರತಿಬಂಧವಾದ ಕಾರಣ ಸ್ವಂತ ಮನೆಯ ಹೆಣ್ಣು ಮಕ್ಕಳಿಲ್ಲದಂಥ ಪಾತರದವರ ಮನೆತನಗಳು ಮುಗ್ಗುತ್ತವೆ. ಪಾತರದವರಿಗೆ ಅಲ್ಪ ಸ್ವಲ್ಪ ಓದು ಬರಹ ಬರುತ್ತಿರುತ್ತದೆ. ಇವರ ಹೆಣ್ಣು ಮಕ್ಕಳೂ ಗಂಡು ಮಕ್ಕಳೂ ಶಾಲೆಗೆ ಬಹುತರ ಹೋಗುತ್ತಾರೆ.

**ಸಾಯಬಿಗಳು.**

ಸಾಯಬಿಗಳು.—ಇವರು ಕಲಬುರ್ಗೆಯ ಶೀಮೆಯಿಂದ ಬಂದು ಬನವಾಸಿಯಲ್ಲಿ ಇರುತ್ತಾರೆ. ಇವರ ಜನ್ಮಭಾಷೆ ಕನ್ನಡ, ಧರ್ಮ ಲಿಂಗವಂತ ಮತ. ಆದರೆ ಇವರು ಉತ್ತಮ ಕುಲದವರನ್ನು ತಮ್ಮೊಳಗೆ ಕರೆ ಕೊಳ್ಳುತ್ತಾರೆ. ಇವರೂ ವಂಶ ಪರಂಪರೆಯ ಪಾತರದವರೇ. ಇವರ ಆಚರಣೆಗಳೆಲ್ಲ ವಾಡಿಕೆಯಾಗಿ ಮೇಲೆ ವಿವರಿಸಿದಂತೆ ಇರುತ್ತವೆ.

**ದೇವಳಿಗಳು.**

ದೇವಳಿಗಳು.—ಇವರು ಬೆಳಗಾವಿ, ಕಾನಡಾ ಜಿಲ್ಲೆಗಳಲ್ಲಿ ಇರುತ್ತಾರೆ. ಗೊರವರು ಮುಂತಾದವರು ದೇವರಿಗೆ ಅರ್ಪಿಸಿದ ಮಕ್ಕಳು ದೇವಳಿಗಳಾಗುತ್ತಾರೆ; ಆದ್ದರಿಂದ ಇವರು ವಸ್ತುತಃ ಗುಡಿಗಳ ಪರಿಚಾರಕರು. ದೇವಳೀ ಹೆಂಗಸರು ಪಾತರದವರಂತೆ ಕುಣಿಯುವ ಹಾಡುವ ಹೋರೆಯನ್ನು ಮಾಡುತ್ತಾರೆ. ಆದರೆ ಜಾರ ಕರ್ಮವೇ ಅವರ ಮುಖ್ಯ ಉಪಜೀವನದ ಹೋರೆಯು. ಇವರು ಮರಾಠೀ ಭಾಷೆಯನ್ನಾಡುತ್ತಾರೆ. ಇವರ ಆಚಾರ, ಆಹಾರ, ಧರ್ಮ ಮುಂತಾ

ದವುಗಳೆಲ್ಲ ಕುಣಬೀ ಜಾತಿಯವರಂತೆ. ಇವರನ್ನು ವಂಶ ಪರಂಪರೆಯ ಪಾತರದವರು ತಿರಸ್ಕರಿಸುತ್ತಾರೆಂದು ಮೇಲೆ ಹೇಳಿದ್ದೇವೆ.

**ಬಸವಿಗಳು.**

ಬಸವಿಗಳು.—ಇವರು ಲಿಂಗವಂತರು; ಧಾರವಾಡ ಜಿಲ್ಲೆಯಲ್ಲಿ ಇವರ ವಸ್ತಿ ಹೆಚ್ಚು ಇರುತ್ತದೆ. ಲಿಂಗವಂತರಲ್ಲಿಯ ಲಗ್ನ ಮುಂತಾದ ಸಮಾರಂಭಗಳಲ್ಲಿ ಹೆಂಗಸರ ಊಳಿಗ ಮಾಡುವದೇ ಇವರ ಮುಖ್ಯ ಹೋರೆಯು. ಆದರೆ ಇವರಿಗೆ ಲಗ್ನವಿಲ್ಲ. ಆದ್ದರಿಂದ ಜಾರಕರ್ಮವೇ ಇವರ ಉಪಜೀವನದ ಹೋರೆ ಇರುತ್ತದೆ. ಇವರಿಗೆ ಹಾಡಲಿಕ್ಕೂ ಕುಣಿಯಲಿಕ್ಕೂ ಬರುತ್ತಿರುವದಿಲ್ಲ. ಪೆಟಿಯ ದೈವದವರು ಕೂಡಿದಲ್ಲಿ ಊರ ಬಸವಿ ಇರಲಿಕ್ಕೆ ಬೇಕು.

**ಸೂಳೆಗಳು.**

ಸೂಳೆಗಳು ಅಥವಾ ಕಸಬಿಣಿಗಳು.—ಇವರಾದರೂ ಪಾತರದವರಂತೆ ಕನ್ನಡಿಗರು, ಮಹಾರಾಷ್ಟ್ರರು, ಮುಸಲ್ಮಾನರು, ಮುಂತಾದ ಜಾತಿಗಳಿಗೆ ಶೇರಿದವರು ಇರುತ್ತಾರೆ. ಇವರ ಭಾಷೆ, ಧರ್ಮ, ಆಚಾರ, ಆಹಾರ, ಮುಂತಾದವುಗಳು ಅವರವರ ದೇಶ, ಜಾತಿಗಳಂತೆ ಇರುತ್ತವೆ. ಕಸಬಿಣಿಗಳಲ್ಲಿ ಕೆಲವರು, ವಿಶೇಷವಾಗಿ ಮಹಾರಾಷ್ಟ್ರರೂ, ಮುಸಲ್ಮಾನರೂ, ಲಾವಣಿ, ಖ್ಯಾಲ, ಠುಮರಿ, ಮುಂತಾದ ಹಾಡುಗಳನ್ನು ಕಲಿತಿರುತ್ತಾರೆ. ಅವರು ಸಮಾಜದಲ್ಲಿ ಕೂತು ಹಾಡಲಿಕ್ಕೆ ಅಡ್ಡಿ ಇಲ್ಲ. ಆ ಹಾಡುವ ಸಮಾರಂಭಕ್ಕೆ ಬೈಠಕ ಯೆಂದೆನ್ನುತ್ತಾರೆ. ಅಪರೂಪವಾಗಿ ಕೆಲವರು ಕುಣಿಯಲಿಕ್ಕೂ ಕಲಿತಿರುತ್ತಾರೆ. ಆದರೆ ಅವರಿಗೆ ಸಮಾಜದಲ್ಲಿ ನಿಂತು ಕುಣಿಯಲಿಕ್ಕೆ ಪಾತರದವರ ಅಡ್ಡಿ ಇರುತ್ತದೆ. ವಂಶ ಪರಂಪರೆಯ ಕಸಬಿಣಿಗಳು ಪಾತರದವರಂತೆ ಲಗ್ನದ ಸಂಸ್ಕಾರ ಮಾಡುತ್ತಾರೆ. ಕನ್ನಡ ಸೂಳೇರು ಪರಶುರಾಮನ ಮೂರ್ತಿಯ ಕೂಡ ಲಗ್ನ ಮಾಡಿಕೊಳ್ಳುತ್ತಾರೆ. ಜಾರಕರ್ಮವೇ ಕಸಬಿಣಿಗಳ ಮುಖ್ಯ ಜೀವನೋಪಾಯವು. ಬಹು ಜನರಿಗೆ ಹಾಡಲಿಕ್ಕೆ ಬರುತ್ತಿರುವದಿಲ್ಲ. ವಾಡಿಕೆಯಾಗಿ ಗಂಡನನ್ನು ಬಿಟ್ಟಂಥ ಇಲ್ಲವೆ ವಿಧವೆಗಳಾದಂಥ ಅನ್ಯ ಜಾತಿಗಳ ತರುಣ ಸ್ತ್ರೀಯರು ಸೂಳೆಗಳಾಗುತ್ತಾರೆ. ಶರೀರ ವಿಕ್ರಯವೇ ಅವರ ಉಪಜೀವನದ ಹೋರೆಯು. ಉತ್ತಮ ಜಾತಿಯ ಸೂಳೆಗಳು ನೀಚ ಜಾತಿಯವರನ್ನು ಕರೆಕೊಳ್ಳುವದಿಲ್ಲ. ಸೂಳೆಗಳು ಬೆಲೆಯುಳ್ಳ ಶೀರೆಗಳನ್ನು ಬ್ರಾಹ್ಮಣರಂತೆ ಇಲ್ಲವೆ ಲಿಂಗವಂತರಂತೆ ಉಟ್ಟು ಕೊಂಡು ಅಲಂಕಾರಗಳನ್ನು ಹಾಕಿ ಕೊಂಡು ಸ್ವಚ್ಛವಾಗಿಯೂ ಸುರೂಪಿಗಳಾಗಿಯೂ ಕಾಣಿಸಲಿಕ್ಕೆ ಯತ್ನಿಸುತ್ತಿರುತ್ತಾರೆ.

**ಘುಡಶಿಗಳು.**

ಘುಡಶಿಗಳು.—ಇವರು ಬೆಳಗಾವಿ, ಕಾನಡಾ ಜಿಲ್ಲೆಗಳಲ್ಲಿ ಇರುತ್ತಾರೆ. ಆದರೆ ಬೆಳಗಾವೀ ಜಿಲ್ಲೆಯವರು ಭೋಸಲೆ, ಗಾಯಕವಾಡ, ಘೋರ್ಪಡೆ, ಸಾಳುಂಕೀ, ಮುಂತಾದ ಅಡ್ಡ ಹೆಸರಿನ ಮಹಾರಾಷ್ಟ್ರರು; ಕಾನಡಾ ಜಿಲ್ಲೆಯವರು ಗೋಮಂತಕದಿಂದ ಬಂದಂಥ ಅಡ್ಡ ಹೆಸರುಗಳಿಲ್ಲದ ಕೊಂಕಣಿಗರು. ಕೊಂಕಣೀ ಘುಡಶಿಗಳ ಹೆಂಗಸರು ಕಚ್ಚೆ ಹಾಕಿ ಕೊಂಡು ಕುಂಕುಮ ಹಚ್ಚುವರು, ಕುಬ್ಬುಸ ತೊಡುವದಿಲ್ಲ. ಎರಡೂ ಕಡೆಯ ಘುಡಶಿಗಳ ಉಳಿದ ಆಚಾರ, ಆಹಾರ,

ಧರ್ಮ ಮುಂತಾದವುಗಳು ಕುಣಬಿಗಳಂತೆ ಇರುತ್ತವೆ. ಬಜಂತ್ರಿಯ ಊದುವದೇ ಇವರ ಮುಖ್ಯ ಹೋರೆ. ಬೆಳಗಾವೀ ಜಿಲ್ಲೆಯ ಘಡಶಿಗಳು ಮೇಲಾದ ಬಜಂತ್ರಿಗಾರರೆನ್ನಿಸುತ್ತಾರೆ. ಲಗ್ನದ ಮಾಸಗಳಲ್ಲಿ ಘಡಶಿಗಳಿಗೆ ವೊಳಿತಾಗಿ ಕೆಲಸ ವಿರುತ್ತದೆ. ಕೆಲಸ ವಿಲ್ಲದಾಗ ಇವರು ಬೇರೆ ಯೇನು ಉದ್ಯೋಗ ಮಾಡದೆ ಸೋಮಾರಿತನದಲ್ಲಿ ಕಾಲ ಕಳೆಯುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಸಪ್ಪಳಿಗರು.**

ಸಪ್ಪಳಿಗರು.— ಇವರು ಕಾನಡಾ ಜಿಲ್ಲೆಯಲ್ಲಿ ಮಾತ್ರ ಇರುತ್ತಾರೆ. ಇವರಿಗೆ ದೇವಡಿಗರೆಂತಲೂ ಅನ್ನುವರು. ಇವರು ತಮ್ಮ ಹೆಸರಿನ ಮುಂದೆ "ಪಡಿಯಾಳ್" ಯೆಂಬ ಉಪನಾಮವನ್ನು ಹಚ್ಚಿ ಕೊಳ್ಳುವರು. ಆದ್ದರಿಂದ ಇವರು ಮೂಲದಲ್ಲಿ ಗುಡಿಗಳ ಪರಿಚಾರಕರೆಂದು ತೋರುತ್ತದೆ. ಇವರ ಜನ್ಮಭಾಷೆ ಕನ್ನಡ. ಇವರಲ್ಲಿ ಮಕ್ಕಳ ಸಂತಾನದವರೆಂತಲೂ, ಅಳಿಯ ಸಂತಾನದವರೆಂತಲೂ ಯೆರಡು ವೊಳ ಜಾತಿಗಳುಂಟು. ಆವರವರಿಗೆ ಶರೀರ ಸಂಬಂಧವಾಗುವದಿಲ್ಲ. ಅಳಿಯ ಸಂತಾನದವರು ಬಹು ಸ್ವಲ್ಪ ಜನೆರುಂಟು. ಸಪ್ಪಳಿಗರು ಮದ್ಯ ಮಾಂಸ ತಕ್ಕೊಳ್ಳುತ್ತಾರೆ, ಬ್ರಾಹ್ಮಣರ ಶಿಷ್ಯರಾಗಿ ನಡಿಯುವರು; ವಿಧವೆಗಳ ಲಗ್ನ ಮಾಡುವರು; ಹೆಣಗಳನ್ನು ಕೆಲವರು ಸುಡುವರು, ಕೆಲವರು ಹುಗಿಯುವರು. ಇವರ ಹೆಂಗಸರಿಗೆ ಶರಗು, ಕುಬ್ಬಸ ಯೆರಡೂ ಇಲ್ಲ, ಕುಲದೇವತೆಗಳು ವಾಡಿಕೆಯಾಗಿ ಹೆಣ್ಣು ದೇವತೆಗಳಿರುತ್ತವೆ. ಇವರ ಮುಖ್ಯ ಹೋರೆಯು ಬಜಂತ್ರೀ ಊದುವದೇ. ಆದರೆ ಕೆಲವರು ವೊಕ್ಕಲತನ ಮಾಡಿ ಕೊಂಡು ಸುಖದಿಂದಿದ್ದಾರೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಹಳ್ಳೇರು.**

ಹಳ್ಳೇರು.— ಇವರು ಕಾನಡಾ ಜಿಲ್ಲೆಯ ಕಾರವಾಡ, ಅಂಕೋಲಾ ತಾಲೂಕುಗಳಲ್ಲಿ ಇರುತ್ತಾರೆ; ತಿರುಪತಿಯಿಂದ ಬಂದವರೆಂದು ಹೇಳುತ್ತಾರೆ. ಇವರ ಜನ್ಮಭಾಷೆ ಕನ್ನಡ, ಗಂಡಸರ ಉಡಿಗೆ ಲಂಗೋಟ, ಹೆಂಗಸರಿಗೆ ಕುಬ್ಬಸ ವಿಲ್ಲ; ಮದ್ಯ ಮಾಂಸಗಳಿಗೂ ವಿಧವೆಗಳ ಲಗ್ನಕ್ಕೂ ಅಡ್ಡಿ ಇಲ್ಲ. ಇವರ ಮುಖ್ಯ ಕುಲದೇವತೆ ಸದಾಶಿವಗಡದ ಹತ್ತರ ಚಿತಾಕೋಲೆಂಬಲ್ಲಿಯ ಮಹಾಮಾಯಿ; ಆದರೆ ಇವರು ವೆಂಕಟರಮಣ, ಮಹಾದೇವ ಮುಂತಾದ ದೇವತೆಗಳನ್ನೂ ಪೂಜಿಸುತ್ತಾರೆ. ಇವರ ಉಪಾಧ್ಯಾಯರು ವೈಗರು ಇಲ್ಲವೆ ಜೋಶೀ ಬ್ರಾಹ್ಮಣರು, ಗುರು ಶೃಂಗೇರಿಯ ಸ್ವಾಮಿ. ಇವರು ಜನ್ಮ ಮರಣದ ಸೂತಕ ಹಿಡಿಯುತ್ತಾರೆ. ಹೆಂಗಸರು ಕಡೆಗಾದಾಗ ನಾಲ್ಕು ದಿವಸ ಮನೆಯಲ್ಲಿ ಮುಟ್ಟುವದಿಲ್ಲ. ಕೆಲವರು ಹೆಣಗಳನ್ನು ಹುಗಿಯುತ್ತಾರೆ, ಕೆಲವರು ಸುಡುತ್ತಾರೆ. ಇವರ ಮುಖ್ಯ ಹೋರೆ ಬಜಂತ್ರಿ, ಕಹಳೆ, ಕೊಂಬುಗಳನ್ನು ಊದುವದು, ನಾಟಕ ಮಾಡುವದು, ವೊಕ್ಕಲತನ, ಇತ್ಯಾದಿ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

## ಕೂಲಿಕಾರರೂ ಕಿರುಕಳ ಜಾತಿಗಳೂ.

| | | ಧಾರವಾಡ. | | | ಬೆಳಗಾವಿ. | | | ವಿಜಾಪುರ. | | | ಕಾನಡಾ. | | |
|---|---|---|---|---|---|---|---|---|---|---|---|---|---|
| | | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. |
| ೧ | ಬೇಡರು .......... | ೨೬೩೪೪ | ೨೭೯೧೦ | ೫೪೨೫೪ | ೧೮೬೪೯ | ೧೮೬೨೮ | ೩೭೨೭೭ | ೧೦೪೯೦ | ೧೦೭೭೨ | ೨೧೨೬೨ | ೫೨೧ | ೪೪೬ | ೯೬೭ |
| ೨ | ಬೇಲದಾರರು........ | ,, | ,, | ,, | ೮೪೨ | ೮೫೦ | ೧೬೯೨ | ,, | ,, | ,, | ,, | ,, | ,, |
| ೩ | ದೇಶಾವಳರು........ | ,, | ,, | ,, | ೨೭೦ | ೨೩೦ | ೫೦೦ | ,, | ,, | ,, | ,, | ,, | ,, |
| ೪ | ಡೊಂಬರು .......... | ೧೧೪ | ೧೬೨ | ೨೭೬ | ೮೩೦ | ೯೦೦ | ೧೭೩೦ | ೮೧ | ೧೦೯ | ೧೯೦ | ,, | ,, | ,, |
| ೫ | ಕೈಕಾಡಿಗಳು........ | ,, | ,, | ,, | ೬೩ | ೫೨ | ೧೧೫ | ೨೯೮ | ೩೦೩ | ೬೦೧ | ,, | ,, | ,, |
| ೬ | ಕೊರವರು .......... | ೨೬೬೭ | ೨೬೮೩ | ೫೩೫೦ | ೧೭೭೫ | ೧೯೩೫ | ೩೭೧೦ | ೨೪೩೮ | ೨೪೭೮ | ೪೯೧೬ | ೪೩೯ | ೩೭೯ | ೮೧೮ |
| ೭ | ರಾಮೊಶಿಗಳು ........ | ,, | ,, | ,, | ೯೨ | ೭೫ | ೧೬೭ | ,, | ,, | ,, | ,, | ,, | ,, |
| ೮ | ವಡ್ಡರು........... | ೮೪೮೬ | ೮೩೭೪ | ೧೬೮೬೦ | ೯೦ | ೧೦೭ | ೧೯೭ | ೫೯೯೩ | ೫೮೩೭ | ೧೧೮೩೦ | ೧೬೪೨ | ೧೪೬೭ | ೩೧೦೯ |
| ೯ | ಕಸಾಯಿಗಳು ........ | ,, | ,, | ,, | ,, | ,, | ,, | ,, | ,, | ,, | | | ೫೦ |
| ೧೦ | ಕಾತಕರಿಗಳು ........ | ,, | ,, | ,, | ,, | ,, | ,, | ,, | ,, | ,, | ೭೫ | ೬೫ | ೧೪೦ |
| ೧೧ | ಶಿಕಲಗಾರರು........ | ೬೨ | ೫೬ | ೧೧೮ | ,, | ,, | ,, | ,, | ,, | ,, | ,, | ,, | ,, |

ಬೇಡರು. — ಕುರುಬರು ಕಬ್ಬಲಿಗೇರಂತೆ ಇವರಾದರೂ ದಕ್ಷಿಣ ಹಿಂದುಸ್ಥಾನದ ಮೂಲ ನಿವಾಸಿಗಳಿರುತ್ತಾರೆ. ಕುರುಬರಿಗೂ ಬೇಡರಿಗೂ ಸಾಮ್ಯವೇನೆಂದರೆ, ಕಪ್ಪು ಮೈಬಣ್ಣ, ಕಸುವುಳ್ಳ ಮೈಕಟ್ಟು, ಗರಡೀ ಸಾಧಕ, ಕುಸ್ತಿಗಳ ಪ್ರೀತಿ, ಪೀಡಿಸುವಂಥ ದೇವತೆಗಳ ಮುಖ್ಯ ಆರಾಧನೆ, ಇತ್ಯಾದಿ. ಆದರೆ ಕುರುಬರು ಶಾಂತರು, ಬೇಡರು ಉಗ್ರಸ್ವಭಾವದವರು; ಕುರುಬರಿಗೆ ಮಾಂಸಾಹಾರದಲ್ಲಿ ವಿಶೇಷ ಪ್ರೀತಿ ಇಲ್ಲ, ಬೇಡರು ಬೆಕ್ಕು, ಮುಂಗ, ಇಲಿ, ಇಂಥಾ ಪ್ರಾಣಿಗಳನ್ನು ಸಹ ತಿನ್ನುವರು. ಮಹಾರಾಷ್ಟ್ರ ಶೀಮೆಯಲ್ಲಿ ಬೇಡರಿಗೆ ರಾಮೋಶಿ ಯೆಂದೆನ್ನುವರು. ಖಾನ ದೇಶದ ಉತ್ತರದಲ್ಲಿ ಬೇಡರಿಗೆ ಭಿಲ್ಲರೆನ್ನುವರು. ವಿಜಯನಗರದ ಸ್ಥಾಪನೆಯಾಗುವ ಪೂರ್ವದಲ್ಲಿ ತೆಲಗು ಶೀಮೆಯಲ್ಲಿ ಬೇಡರ ಸಂಸ್ಥಾನಗಳಿದ್ದವು. ಹೆಸರಾದ ಸುರಪುರದ ನಾಯಕನು ಬೇಡನೇ ಇದ್ದನು. ಮೈಸೂರು ಶೀಮೆಯ ಪಾಳೆಗಾರರೆಲ್ಲರು ಬಹುತರ ಬೇಡರೇ ಇದ್ದಾರೆ. ಬನವಾಸಿಯ ಕದಂಬ ಅರಸರು ಬೇಡರಿರ ಬಹುದೆಂದು ಬುಕ್ಯಾನನ್ನನೆಂಬ ಶೋಧಕನು ಊಹಿಸುತ್ತಾನೆ. ಪೇಶವಾಯಿಯ ಕಡೆಯಲ್ಲಿ ಬೆಳಗಾವಿಯ ಹತ್ತರ ಚಿಕ್ಕದಿನ್ನೆ ಯೆಂಬಲ್ಲಿ ಬೇಡರಮೊಂದು ಸಣ್ಣ ಸಂಸ್ಥಾನವಿತ್ತು. ಹೆಸರಾದ ಸಂಗೊಳ್ಳಿಯ್ಯ ರಾಯಣ್ಣನು ಬೇಡನಿದ್ದನು.

ನಾಲ್ಕೂ ಜಿಲ್ಲೆಗಳಲ್ಲಿ ಬೇಡರ ವಸ್ತಿಯು ವೊಳಿತಾಗಿ ಇರುತ್ತದೆ; ಆದರೂ ಕುರುಬರಷ್ಟು ಇಲ್ಲ. ಇವರಲ್ಲಿ ಮರಗೀ ಬೇಡರು, ದಾಸ ಬೇಡರು, ನಾಯಕ ಮಕ್ಕಳು, ಯೆಂಬ ವೊಳ ಜಾತಿಗಳಿರುತ್ತವೆ. ಇವರೊಳಗೆ ಊಟದ ಬಳಿಕೆಯಾಗುವದಿಲ್ಲ. ಆದರೆ ಸಾಧಾರಣವಾಗಿ ಬೇಡರು ಮುಸಲ್ಮಾನರಲ್ಲಿ ಸಹ ಉಣ್ಣುವರು. ಬೇಡರ ಕುಲದೇವತೆ ದುರಗಮ್ಮ, ಅಥವಾ ಮರಿಯಮ್ಮ; ಆದರೆ ಇವರು ಯೆಲ್ಲಮ್ಮ, ವೆಂಕಟರಮಣ, ಹನುಮಂತ, ಈ ದೇವತೆಗಳಿಗೂ ಭಕ್ತಿಯಿಂದ ನಡಕೊಳ್ಳುತ್ತಾರೆ. ಮರಗಿ ಬೇಡರು ದುರಗಮ್ಮನ ಪೂರ್ಣ ಭಕ್ತರು; ಅವರು ದುರಗಿ ಮರಗಿಯ ಸಂದುಕವನ್ನು ತಲೆಯ ಮೇಲೆ ಹೊತ್ತುಕೊಂಡು ಮನೆ ಮನೆ ಭಿಕ್ಷೆ ಬೇಡುತ್ತ ತಿರುಗುತ್ತಾರೆ. ದಾಸ ಬೇಡರು ವೆಂಕಟರಮಣನ ಇಲ್ಲವೆ ಹನುಮಂತನ ದಾಸರಾಗಿ, ನಾಮು ಹಚ್ಚಿಕೊಂಡು ತಂಬೂರಿ ತೆಕ್ಕೊಂಡು ಹಾಡುತ್ತ ಭಿಕ್ಷೆ ಬೇಡುತ್ತಾರೆ. ಬೇಡರು ಬಹುತರ ತಮ್ಮ ಲಗ್ನ ಕಾರ್ಯಗಳನ್ನು ತಾವೇ ಮಾಡಿ ಕೊಳ್ಳುತ್ತಾರೆ, ಕೆಲವರು ಬ್ರಾಹ್ಮಣರನ್ನು ಕರಿಯುತ್ತಾರೆ. ಆದರೆ ಬ್ರಾಹ್ಮಣರು ಬೇಡರನ್ನು ಅತಿ ನೀಚ ಕುಲಗಳಲ್ಲಿ ಯೆಣಿಸುತ್ತಾರೆ. ಸಿಂದೀ ಕುಡಿಯುವದರಲ್ಲಿಯೂ ಸಿಕ್ಕಂಥ ಮಾಂಸ ತಿನ್ನುವದರಲ್ಲಿಯೂ ಬೇಡರು ಹೆಸರಾಗಿದ್ದಾರೆ. ಲಗ್ನದಲ್ಲಿ ಮದಿಮಕ್ಕಳು ಹನುಮಂತನ ಗುಡಿಗೆ ಹೋಗಿ ಬಂದ ಬಳಿಕ ಮದಿಮಗನನ್ನು ಕಲ್ಲಿನ ಮೇಲೆ, ಮದಿಮಗಳನ್ನು ಜೋಳದ ಬುಟ್ಟಿಯಲ್ಲಿ ನಿಲ್ಲಿಸಿ ಅಂತಃಪಟ ಹಿಡಿದು ಅಕ್ಕೀಕಾಳು ಹಾಕುವರು. ಲಗ್ನವಾದ ಬಳಿಕ ನಾಗ ಬಲಿ ಅಂದರೆ ಹಾವಿನ ಪೂಜೆಯನ್ನು ಮಾಡುವರು. ಇವರಲ್ಲಿ ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ. ಆದರೆ ವಿಧವೆಯ ಮಗನು ವಿಧವೆಯ ಮಗಳನ್ನೇ ಮಾಡಿಕೊಳ್ಳಲಿಕ್ಕೆ ಬೇಕು. ವಿಧವೆಯ ಮಕ್ಕಳು ಮುತ್ತೈದೆಗಳ ಮಕ್ಕಳ ಲಗ್ನ

ಕಾರ್ಯದಲ್ಲಿ ಕೆಲಸಕ್ಕೆ ಬಾರರು. ಬೇಡರಲ್ಲಿ ಬಹು ಜನರು ಹೆಣಗಳನ್ನು ಸುಡುತ್ತಾರೆ, ಉಳಿದವರು ಹುಗಿಯುತ್ತಾರೆ. ಇವರಲ್ಲಿ ಕಾಕಪಿಂಡ, ಶ್ರಾದ್ಧ ಮಾಡುವ ನಡಾವಳಿಯುಂಟು. ಬೇಡರ ವಸ್ತಿ ಇದ್ದಲ್ಲಿ ಕಟ್ಟೀಮನಿ ಯೆಂಬದೊಂದು ಹಿರಿ ಮನೆತನವಿರುತ್ತದೆ. ಕಟ್ಟೀಮನಿಯ ಹಿರಿಯನು ಜಾತಿ ಸಂಬಂಧದ ವ್ಯಾಜ್ಯಗಳನ್ನು ನಿರ್ವಹಿಸುವನು. ಪೂರ್ವದಲ್ಲಿ ಹೆಂಗಸು ಹಾದರ ಮಾಡಿದರೆ ಆಕೆಯ ತಲೆ ಬೋಳಿಸುವರು; ಆದರೆ ಈಗ ಐದು ಕೂದಲುಗಳನ್ನು ಕತ್ತಿಯಿಂದ ಕೊಯ್ದು ತೆಗಿಯುವರು. ಬೇಡರ ಮಕ್ಕಳು ಶಾಲೆಗೆ ಹೋಗುವದು ಬಹು ಕಡಿಮೆ.

ಬೇಡರು ಈಗ ವೊಕ್ಕಲತನ, ಬೇಟೆ, ಕೂಲಿ, ಮುಂತಾದ ಹೋರೆಗಳನ್ನು ಮಾಡುತ್ತಾರೆ; ಕೂಲಿಕಾರರೇ ಬಹಳ. ದಸರೆ, ಯುಗಾದಿ ಮುಂತಾದ ಹಬ್ಬಗಳ ಮರು ದಿವಸ ಬೇಡರು ಬೇಟೆಗೆ ಹೊರಟು ಮೊಲ, ನರಿ, ಚಿಗರೆ, ಮುಂತಾದ ಮಿಕಗಳನ್ನು ಹೊಡಿದು ತರುವರು. ಬೇಟೆಯ ನಾಯಿಗಳನ್ನು ಇವರು ಮನೆಯಲ್ಲಿ ಸಾಕುತ್ತಾರೆ. ಇಂಗ್ಲಿಷ ಸರಕಾರದ ಅಮಲು ಬರುವ ಪೂರ್ವದಲ್ಲಿ ಬೇಡರು ದಾರಿಕಾರರನ್ನು ಸುಲಿಯುವರು, ದರೋಡೆ ಹಾಕುವರು, ದನಗಳನ್ನು ಕದಿಯುವರು. ಈಗ್ಯೂ ಬೇಡರು ಕಳ್ಳರೆಂದು ಹೆಸರಾಗಿದ್ದಾರೆ. ಪಾಚ್ಛಾಪುರ, ಹಲಗಲಿ, ಸುತಗಟ್ಟಿ, ಗೊರವನ ಕೊಳ್ಳ, ಮುಂತಾದ ಹಳ್ಳಿಗಳ ಬೇಡರು ಹೆಸರಾಗಿದ್ದಾರೆ. ದೊಡ್ಡ ಗ್ರಾಮಗಳಲ್ಲಿ ಕುರುಬಗೇರಿ ಬೇರೆ ಇರುವಂತೆ ಬೇಡಗೇರಿಯೂ ಬೇರೆ ಇರುತ್ತದೆ. ಹಳ್ಳಿಗಳ ತಳವಾರರೂ ಸೇತ ಸನದಿಗಳೂ ಬಹು ಜನರು ಬೇಡರಿರುತ್ತಾರೆ. ಅವರಿಗೆ ವಂಶ ಪರಂಪರೆಯ ಇನಾಮ ಭೂಮಿಗಳು ನಡಿಯುತ್ತವೆ.

**ಬೇಲದಾರರು.**

ಬೇಲದಾರರು.—ಇವರು ಬೆಳಗಾವೀ ಜಿಲ್ಲೆಯಲ್ಲಿ ಖಣಿಯೊಳಗಿನ ಇಮಾರತಿಯ ಕಲ್ಲು ಅಗಿದು ತೆಗಿಯುವ ಹೋರೆ ಮಾಡುತ್ತಾರೆ. ಇವರು ಮೂಲದಲ್ಲಿ ಗುಜರಾಥ ದೇಶದವರಾದಾಗ್ಯೂ ಸುಮಾರು ಅರವತ್ತು ವರ್ಷದ ಹಿಂದೆ ಸಾತಾರೆಯ ಶೀಮೆಯಿಂದ ದಕ್ಷಿಣಕ್ಕೆ ಬಂದ ಕಾರಣ ಮನೆಯಲ್ಲಿ ಗುಜರಾಥೀ ಭಾಷೆಯನ್ನೂ ಹೊರಗೆ ಮರಾಠೀ ಭಾಷೆಯನ್ನೂ ಆಡುತ್ತಾರೆ. ಇವರ ಉಡಿಗೆ, ಆಹಾರ, ಆಚಾರ, ಧರ್ಮ, ನಡಾವಳಿ, ಮುಂತಾದವುಗಳೆಲ್ಲ ಕುಣಬಿಗಳಂತೆ ಇರುತ್ತವೆ. ಇವರ ಹೆಂಗಸರು ಕುಣಬಿಗಳ ಹೆಂಗಸರಂತೆ ಶೀರೆ ಉಟ್ಟು ಕೊಂಡಾಗ್ಯೂ ಕುಂಕುಮ ಹಚ್ಚುತ್ತಾರೆ. ಇವರಲ್ಲಿ ಕೆಲವರು ಹೆಣಗಳನ್ನು ಸುಡುತ್ತಾರೆ, ಕೆಲವರು ಹುಗಿಯುತ್ತಾರೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ದೇಶಾವಳರು.**

ದೇಶಾವಳರು.—ಇವರು ಸುಮಾರು ಅರವತ್ತು ವರ್ಷದ ಹಿಂದೆ ಬೆಂಗಳೂರು ಶೀಮೆಯಿಂದ ಬಂದು ಬೆಳಗಾವೀ ಜಿಲ್ಲೆಯಲ್ಲಿ ವಾಸಿಸುತ್ತಾರೆ. ಇವರ ಜನ್ಮಭಾಷೆ ತೆಲಗು. ಗಂಡಸರು ಲಂಗೋಟೀ ಹಾಕುವರು, ಹೆಂಗಸರು ಕಚ್ಚೆ ಹಾಕಿ, ತುರುಬು ಬಲಗಡೆ ಇಳಿಬಿಟ್ಟು ಕಟ್ಟುವರು. ಇವರ ಧರ್ಮದಲ್ಲಿ ಮಾಂಸಕ್ಕೆ ನಿಷೇಧವಿದ್ದಾಗ್ಯೂ ಇವರು ನಿರಾತಂಕವಾಗಿ ಮಾಂಸಾಹಾರ ತಕ್ಕೊಳ್ಳುವರು.

ಇವರಿಗೆ ಶರೆ ಕುಡಿಯುವ ಚಟ ಬಹಳ; ಕೆಲವರು ಗಾಂಜಿ, ಭಂಗಿ, ಅಫೂ, ಮಾಜೂಮ, ಮುಂತಾದ ಮಾದಕ ಪದಾರ್ಥಗಳನ್ನು ಸೇವಿಸುವರು. ದೇಶಾವಳರ ಮುಖ್ಯ ಕುಲದೇವತೆ ವೆಂಕಟರಮಣ; ಆದರೆ ಇವರು ಮಹಾದೇವನನ್ನೂ ಭಕ್ತಿಯಿಂದ ಪೂಜಿಸುವರು. ಇವರ ಮುಖ್ಯ ಉಪಾಧ್ಯಾಯರು ಬ್ರಾಹ್ಮಣರು; ಆದರೆ ಇವರು ನಾಯಡುಗಳ ಉಪಾಧ್ಯಾಯರಿರುತ್ತಾರೆ. ಆದ್ದರಿಂದ ಇವರ ನಡಾವಳಿಗಳು ವಾಡಿಕೆಯಾಗಿ ನಾಯಡುಗಳಂತೆ ಇರುತ್ತವೆ. ದೇಶಾವಳರು ಲೋಫ ಯೆಂಬ ಕಣದ ಉಂಡೆಗಳನ್ನೂ ನಾನಾ ಪ್ರಕಾರದ ಬಿಸ್ಕೂಟಗಳನ್ನೂ ಮಾಡಿ ಮಾರುವ ಹೋರೆಯನ್ನು ಮಾಡುತ್ತಾರೆ. ಆದರೆ ಅದರಿಂದ ಇವರ ಹೊಟ್ಟೆ ವೊಳಿತಾಗಿ ತುಂಬುವದಿಲ್ಲ. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಡೊಂಬರು.** — ಇವರಲ್ಲಿ ಗುಜರಾಥೀ, ಮರಾಠೀ, ಮುಸಲ್ಮಾನ, ಹೊಲಿಯ, ಯೆಂಬ ನಾಲ್ಕು ವೊಳ ಜಾತಿಗಳಿರುತ್ತವೆ. ಇವರ ಭಾಷೆ, ಧರ್ಮ, ಆಹಾರ, ನಡಾವಳಿ, ಮುಂತಾದವುಗಳು ಅವರವರ ದೇಶ, ಜಾತಿಗಳಂತೆ ಇರುತ್ತವೆ. ಆದರೆ ಕೀಳು ಸ್ಥಿತಿಯ ಡೊಂಬರು ಕತ್ತೆ, ಮಂಗ, ಹಾವು, ವೋತೀಕಾಟ, ಇವುಗಳನ್ನು ಸಹ ತಿನ್ನುತ್ತಾರೆಂದು ಹೇಳುತ್ತಾರೆ. ಮರಾಠೀ ಡೊಂಬರಿಗೆ ಗೋಪಾಳಗಣೀ ಡೊಂಬರೆಂತಲೂ ಅನ್ನುವರು. ಗುಜರಾಥೀ ಡೊಂಬರು ಮುಖ್ಯವಾಗಿ ಹಗ್ಗದ ಮೇಲೆ ನಡಿಯುವ ಮುಂತಾದ ಕಸರತ್ತುಗಳನ್ನು ಮಾಡುತ್ತಾರೆ. ಮರಾಠೀ ಡೊಂಬರು ನೆಲದ ಮೇಲೆಯೂ, ಹಗ್ಗದ ಮೇಲೆಯೂ, ಗೋಪಾಳಗಣಿಯ ಮೇಲೆಯೂ, ಕಸರತ್ತು ಮಾಡುತ್ತಾರೆ, ಮುಸಲ್ಮಾನರು ಮುಖ್ಯವಾಗಿ ನೆಲದ ಮೇಲೆ ಕಸರತ್ತು ಮಾಡುವರು. ಹೊಲೆ ಡೊಂಬರು ಕಸರತ್ತುಗಳನ್ನು ಅರಿಯರು; ಕೋಡಿನ ಹಣಿಗೆಗಳನ್ನು ಮಾಡಿ ಮಾರುವರು; ಡಪ್ಪು ತುಣತುಣಿಗಳನ್ನು ತಕ್ಕೊಂಡು ಮನೆ ಮನೆಗೆ ಹಾಡುತ್ತ ಕುಣಿಯುತ್ತ ಭಿಕ್ಷೆ ಬೇಡುವರು; ಕೈಗೆ ಶಿಕ್ಕ ವೊಡವೆಗಳನ್ನು ಕದಿಯುವರು. ಗುಜರಾಥೀ ಮರಾಠೀ ಡೊಂಬರ ಹೆಂಗಸರು ಹಾದರದಿಂದಲೂ ದುಡ್ಡು ದೊರಕಿಸುವರು. ಸುರೂಪಿಗಳಾದ ತರುಣ ಸ್ತ್ರೀಯರು ಆಟದಲ್ಲಿ ನಾನಾ ಪ್ರಕಾರದ ಕಸರತ್ತುಗಳನ್ನು ಮಾಡಿ, ನೋಡುವವರ ಮನಸು ಯೆಳಿದು ಕೊಳ್ಳುವದರಿಂದ ಅವರ ಸೂಳೆತನದ ಹೋರೆಗೆ ಸ್ವಲ್ಪ ಬೆಲೆ ಬರುತ್ತದೆ. ಅಂಥಾ ಹೆಂಗಸರಿಗೆ ಸೋನಬೇಡಿ ಯೆಂದೆನ್ನುವರು. ಡೊಂಬರು ವೊಂದೇ ಕಡೆಯಲ್ಲಿ ಮನೆ ಮಾಡಿ ಕೊಂಡು ನಿಲ್ಲುವದಿಲ್ಲ. ಊರ ಹೊರಗೆ ಚಾಪಿಯ ಗುಡುಸಲುಗಳಲ್ಲಿ ವಾಸಿಸುತ್ತಾರೆ. ಊರಿಂದೂರಿಗೆ ಹೋಗುವಾಗ ಚಾಪಿ ಮುಂತಾದ ಸಾಮಾನುಗಳನ್ನು ಕತ್ತೆಗಳ ಮೇಲೆ ಹೇರಿ ಕೊಂಡು ಹೋಗುವರು. ಮರಾಠೀ ಡೊಂಬರ ಅಡ್ಡ ಹೆಸರುಗಳು ಜಾಧವ, ಕಾಳೆ, ಚಾಂಬಳೇ, ಮುಂತಾದವುಗಳಿರುವ ಕಾರಣ ಇವರು ತಾವು ಉತ್ತಮ ಕುಲದ ಮಹಾರಾಷ್ಟ್ರರೆಂದು ಹೇಳುತ್ತಾರೆ. ಆದರೆ ಉತ್ತಮ ಕುಲದವರು ಯಾರೂ ಇವರ ಕೂಡ ಊಟದ ಬಳಿಕೆ ಮಾಡುವದಿಲ್ಲ. ಡೊಂಬರು ವೊಟ್ಟಿಗೆ ನೀಚ ಸ್ಥಿತಿಯಲ್ಲಿ ಇದ್ದಾರೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಕೈಕಾಡಿಗಳು.** — ಇವರು ಬೆಳಗಾವಿ ವಿಜಾಪುರ ಜಿಲ್ಲೆಗಳಲ್ಲಿ ಇರುತ್ತಾರೆ; ಹನ್ನೆ

ಭಾಷೆ ಕನ್ನಡ. ಉತ್ತಮ ಕುಲದವರು ಇವರನ್ನು ಮುಟ್ಟಿಸಿ ಕೊಳ್ಳುವದಿಲ್ಲ; ಇವರ ಅನ್ನವನ್ನು ಹೊಲಿಯರು ಮಾತ್ರ ತಕ್ಕೊಳ್ಳುತ್ತಾರೆ. ಮದ್ಯ ಮಾಂಸಗಳಿಗೂ ವಿಧವೆಗಳ ಲಗ್ನಕ್ಕೂ ಅಡ್ಡಿ ಇಲ್ಲ. ಇವರ ಮುಖ್ಯ ದೇವತೆ ಯೆಲ್ಲಮ್ಮ. ಇವರು ಬ್ರಾಹ್ಮಣರನ್ನು ಕೇಳಿ ಲಗ್ನ, ನಾಮಕರಣ ಮುಂತಾದ ಕಾರ್ಯಗಳನ್ನು ಮಾಡುತ್ತಾರೆ; ಆದರೆ ಬ್ರಾಹ್ಮಣರು ಇವರ ಮನೆಗೆ ಹೋಗುವದಿಲ್ಲ. ಲಗ್ನವಾದ ಬಳಿಕ ಹೆಂಡತಿಯು ಮೂರು ಹಡಿಯುವ ವರೆಗೆ ಗಂಡನು ಆಕೆಯ ಮನೆಯಲ್ಲಿ ಇರಲಿಕ್ಕೆ ಬೇಕು; ಇರದಿದ್ದರೆ ಆಕೆಯ ತಾಯಿ ತಂದೆಗಳ ಹೊಟ್ಟೆಗೆ ಕೊಡಲಿಕ್ಕೆ ಬೇಕು. ಕೈಕಾಡಿಗಳು ಈಚಲದ ಬುಟ್ಟಿ, ಗಳಿಗೆಗಳನ್ನು ಮಾಡಿ ಮಾರುತ್ತಾರೆ, ಕೂಲಿಗೆ ಹೋಗುತ್ತಾರೆ. ಸ್ವಲ್ಪ ಜನರು ವೊಕ್ಕಲತನ ಮಾಡುತ್ತಾರೆ. ಆದರೆ ಇವರು ಕಳ್ಳರೊಳಗೆ ಯೆಣಿಸಲ್ಪಡುತ್ತಾರೆ; ದರೋಡೆಯಾದಲ್ಲಿ ಅವರೊಳಗೆ ಕೈಕಾಡಿಗಳು ಬಹುತರ ಇರುತ್ತಾರೆ. ಆದರೂ ಇವರಿಗೆ ಬಡತನ ಬಹಳ. ಗಂಡಸರ ಮೈ ತುಂಬ ಬಟ್ಟೆಗಳಿರುವದಿಲ್ಲ. ನಡುವಿಗೆ ಸಣ್ಣದೊಂದು ಹೊಲಸು ಪಂಜಿ, ತಲೆಗೆ ಯೆರಡು ಮೂರು ಮೊಳದ ಅರಿವೆ, ಹೆಗಲ ಮೇಲೆ ಅಂಥಾದೇ ವೊಂದು ಅರಿವೆ, ಇಷ್ಟೇ ಇವರ ಉಡಿಗೆಗಳು. ಹೆಂಗಸರಿಗೆ ಕುಬ್ಬಸ ದೊರಿಯುವದು ದುರ್ಲಭ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಕೈಕಾಡಿಗಳು.**

ಕೊರವರು.—ಇವರು ನಾಲ್ಕೂ ಜಿಲ್ಲೆಗಳಲ್ಲಿ ಇರುತ್ತಾರೆ. ಇವರ ಜನ್ಮಭಾಷೆ ಅರವು, ಅಂದರೆ ತಮಿಳ. ಇವರಲ್ಲಿ ಗಂಟೀ ಚೋರರು, ಕೈಕಾಡೀ ಕೊರವರು, ಕುಂಚೀ ಕೊರವರು, ಪಾತರದ ಕೊರವರು, ಸನಾದೀ ಕೊರವರು, ಮೋದೀ ಕೊರವರು, ಯೆಂಬ ಆರು ವೊಳ ಜಾತಿಗಳುಂಟು. ಗಂಟೀ ಚೋರರು ಬಹು ಜನ ನೆರೆದಲ್ಲಿಯೂ ಮನೆಗಳಲ್ಲಿಯೂ ಕಳವು ಮಾಡುವರು. ಇವರು ಮಕ್ಕಳಿಗೆ ಕಳವಿನ ವಿದ್ಯವನ್ನು ಚಿಕ್ಕಂದಿನಿಂದ ಕಲಿಸುತ್ತಾರೆ, ಬಡಿದು ಬಡಿದು ಅವರ ಮೈ ಮರಗಟ್ಟುವಂತೆ ಮಾಡುತ್ತಾರೆ. ಕೈಕಾಡೀ ಕೊರವರು ಮುಖ್ಯವಾಗಿ ಹತ್ತೀ ಕಟ್ಟಿಗೆಗಳಿಂದಲೂ ಈಚಲ ಯೆಲೆಗಳಿಂದಲೂ ಬುಟ್ಟಿ, ಗಳಿಗೆಗಳನ್ನು ಮಾಡಿ ಮಾರುವರು, ಕೂಲಿಗೆ ಹೋಗುವರು, ಭಿಕ್ಷೆ ಬೇಡುವರು. ಪಾತರದ ಕೊರವಿಗಳ ಹೆಂಗಸರು ಪಾತರದವರಂತೆ ಗಾಯನ, ನೃತ್ಯ, ಸೂಳೆತನ ಮಾಡುವರು. ಮೋದೀ ಕೊರವರು ಮಾಂತ್ರಿಕರು. ಇವರ ಹೆಂಗಸರು ತಲೆಯ ಮೇಲೆ ಬುಟ್ಟಿಯನ್ನಿಟ್ಟು ಕೊಂಡು ಮನೆ ಮನೆಗೆ ಪ್ರಶ್ನ ಹೇಳುತ್ತ ತಿರುಗುತ್ತಾರೆ. ಆ ಹೆಂಗಸರಿಗೆ ಕೊರವಂಜಿಗಳೆಂದೆನ್ನುವರು. ಕುಂಚೀ ಕೊರವರು ನೇಕಾರರಿಗೆ ಬೇಕಾಗುವ ಕುಂಚಿಗಳನ್ನು ಕಟ್ಟಿ ಮಾರುವರು; ಇವರ ಹೆಂಗಸರು ಹುಲ್ಲಿನ ಕಸಬರಿಗೆಗಳನ್ನು ಕಟ್ಟಿ ಮಾರುವರು. ಇವರಿಗೆ ಅಡವೀ ಕೊರವರೆಂತಲೂ ಅನ್ನುವರು. ಒಟ್ಟಿಗೆ ಸನಾದೀ ಕೊರವರ ಹೊರ್ತು ಉಳಿದ ಜಾತಿಗಳೆಲ್ಲ ನೀಚ ಸ್ಥಿತಿಯಲ್ಲಿ ಇರುತ್ತವೆ; ಭಿಕ್ಷೆ, ಕಳವು, ಇವೆರಡೇ ಇವರ ಮುಖ್ಯ ಉಪಜೀವನಗಳು; ಇವರು ಗುಡುಸಲಿನ ಚಾಪಿಗಳನ್ನು ಕಟ್ಟಿ ಕೊಂಡು ಊರೂರು ತಿರುಗುವರು. ಮದ್ಯ ಮಾಂಸಗಳಿಗೂ ವಿಧವೆಗಳ ಲಗ್ನಕ್ಕೂ ಅಡ್ಡಿ ಇಲ್ಲ; ಹಾದರಕ್ಕೆ ಬಹಳ ದೋಷವಿಲ್ಲ;

**ಕೊರವರು.**

ಹೆಣಗಳನ್ನು ಹುಗಿಯುವರು. ಬ್ರಾಹ್ಮಣರೂ ಲಿಂಗವಂತರೂ ಇವರ ಮನೆಗೆ ಹೋಗುವದಿಲ್ಲ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ. ಇವರ ಕುಲದೇವತೆ ಯೆಲ್ಲಮ್ಮ.

**ಸನಾದೀ ಕೊರವರು.**

ಸನಾದೀ ಕೊರವರು.— ಯೆಲ್ಲಕ್ಕೂ ಶ್ರೇಷ್ಠರು. ಇವರು ವೊಂದೇ ಸ್ಥಳದಲ್ಲಿ ಮನೆ ಮಾಡಿ ಕೊಂಡು ಇರುವರು. ಗಂಡಸರಿಗೂ ಹೆಂಗಸರಿಗೂ ಮೈತುಂಬ ಬಟ್ಟೆಗಳಿರುತ್ತವೆ. ಇವರ ವಸ್ತ್ರಗಳೂ ಮನೆಗಳೂ ತಕ್ಕಮಟ್ಟಿಗೆ ಸ್ವಚ್ಛ ಇರುತ್ತವೆ. ಇವರ ಕುಲದೇವತೆ ಯೆಲ್ಲಮ್ಮನಾದಾಗ್ಯೂ ಇವರು ಹನುಮಂತ ದೇವರಿಗೆ ವಿಶೇಷವಾಗಿ ನಡಕೊಳ್ಳುವರು, ಮನೆಯಲ್ಲಿ ಹನುಮಂತನ ಮೂರ್ತಿಯನ್ನು ಪೂಜಿಸುವರು. ಹನುಮಂತನ ಭಕ್ತರು ಮಾಂಸ ತಿನ್ನುವದಿಲ್ಲ. ಉತ್ತಮ ಕುಲದವರು ಇವರನ್ನು ಮುಟ್ಟಿಸಿ ಕೊಳ್ಳುವದಕ್ಕೆ ಹೇಸುವದಿಲ್ಲ. ಒಟ್ಟಿಗೆ ನಾದಿಗರು, ಜೀನಗಾರರು, ಬೇಡರು, ಮುಂತಾದವರಿಗಿಂತ ಇವರ ಸ್ಥಿತಿಯು ಮೇಲಾದದ್ದಿರುತ್ತದೆಂದು ಹೇಳ ಬಹುದು. ಇವರ ಹೆಂಗಸರು ವೊಕ್ಕಲಿಗರಂತೆ ಕಚ್ಚೆ ಹಾಕದೆ ಶೀರೆ ಉಟ್ಟುಕೊಂಡು ಬಹುತರ ಕುಂಕುಮ ಹಚ್ಚಿ ಕೊಳ್ಳುತ್ತಾರೆ. ಉತ್ತಮ ಜಾತಿಗಳಲ್ಲಿ ಲಗ್ನ ಮುಹೂರ್ತ ಮುಂತಾದ ಶುಭ ಕಾರ್ಯಗಳಲ್ಲಿ ಬಜಂತ್ರೀ ಊದುವದೇ ಸನಾದೀ ಕೊರವರ ಮುಖ್ಯ ಹೋರೆಯು. ಆದರೆ ಇವರು ಕಟ್ಟಿಗೇ ತಂದು ಮಾರುವರು, ಕಸಬರಿಗೆಗಳನ್ನೂ ಕಸಬರಿಗೆಯ ಹುಲ್ಲನ್ನೂ ಮಾರುವರು. ಹುಲ್ಲಿನ ನೆಲುವು, ಹತ್ತೀ ಕಟ್ಟಿಗೆಯ ಗಳಿಗೆ ಬುಟ್ಟಿಗಳು, ಮುಂತಾದವುಗಳನ್ನು ಮಾಡಿ ಮಾರುವರು. ಇವರು ನಿರುದ್ಯೋಗಿಗಳಲ್ಲ, ಒಟ್ಟಿಗೆ ಸುಖದಿಂದ ಇದ್ದಾರೆ, ಮಕ್ಕಳನ್ನು ಆಸ್ಥೆಯಿಂದ ಶಾಲೆಗೆ ಕಳಿಸುತ್ತಾರೆ.

**ರಾಮೋಶಿಗಳು.**

ರಾಮೋಶಿಗಳು.— ಇವರು ಮಹಾರಾಷ್ಟ್ರ ದೇಶದಿಂದ ಬಂದ ಬೇಡರು, ಬೆಳಗಾವೀ ಜಿಲ್ಲೆಯಲ್ಲಿ ಇರುತ್ತಾರೆ. ಆದರೆ ಮನೆಯಲ್ಲಿ ಬಹುತರ ಕನ್ನಡ ಭಾಷೆಯನ್ನೇ ಆಡುವರು. ಬೇಡರಿಗೂ ರಾಮೋಶಿಗಳಿಗೂ ಊಟದ ಬಳಿಕೆಯಾಗುತ್ತದೆ; ಆದರೆ ಶರೀರ ಸಂಬಂಧವಾಗುವದಿಲ್ಲ. ಇವರ ಉಡಿಗೆ, ಆಹಾರ, ಆಚಾರ, ಧರ್ಮ, ಹೋರೆ, ಮುಂತಾದವುಗಳೆಲ್ಲ ಬೇಡರಂತೆ ಇರುತ್ತವೆ.

**ವಡ್ಡರು.**

ವಡ್ಡರು.— ಇವರು ತೆಲಗು ದೇಶದಿಂದ, ವಿಶೇಷವಾಗಿ ಒಡ್ರ ದೇಶದಿಂದ ಬಂದವರು; ಯೆಲ್ಲ ಕಡೆಯಲ್ಲಿ ಇರುತ್ತಾರೆ; ಮನೆಯಲ್ಲಿ ತೆಲಗು ಭಾಷೆಯನ್ನಾಡುವರು. ಇವರಲ್ಲಿ ಭೋಜ ವಡ್ಡರು, ಕಲ್ಲುಕುಟ್ಟಿಗರು, ಬಂಡಿ ವಡ್ಡರು, ಮಣ್ಣೊಡ್ಡರು, ಯೆಂಬ ನಾಲ್ಕು ವೊಳಭೇದಗಳಿವೆ. ಭೋಜ ವಡ್ಡರು ಉಳಿದ ಮೂರು ಜಾತಿಗಳ ಸಂಗಡ ಊಟದ ಬಳಿಕ ಮಾಡುವದಿಲ್ಲ; ಉಳಿದ ಮೂರು ಜಾತಿಗಳಲ್ಲಿ ಪರಸ್ಪರ ಶರೀರಸಂಬಂಧ ಸಹ ಆಗುತ್ತದೆ. ಭೋಜ ವಡ್ಡರು ಇದ್ದಲಿ, ಸುಣ್ಣ, ಮಾಡಿ ಮಾರುವರು. ಕಲ್ಲುಕುಟ್ಟಿಗರು ಕಲ್ಲು ಹೊಡಿಯುವರು; ಬಂಡಿ ವಡ್ಡರು ಕಣಿಯೊಳಗಿನ ಕಲ್ಲು ತೆಗಿದು ಮಾರುವರು; ಮಣ್ಣೊಡ್ಡರು ಕೆರೆ, ಬಾವಿ, ಕಾವಲಿ, ಮುಂತಾದವುಗಳನ್ನು ಅಗಿಯುವರು. ಗಂಡಸರು ವಾಡಿಕೆಯಾಗಿ ಸಡಿಲಾದ ಚಣ್ಣವನ್ನು

ಮೊಣಕಾಲ ಮೇಲೆ ಹಾಕುವರು; ಹೆಂಗಸರು ಕುಬ್ಬಸ ತೊಡುವದಿಲ್ಲ. ವಡ್ಡರ ಹೆಂಗಸರು ಗಂಡಸರಷ್ಟೇ ದುಡಿಯುವ ಕಾರಣ ಅನುಕೂಲವಿದ್ದವರು ಯೆಂಟು ಜನರ ವರೆಗೆ ಹೆಂಡ ರನ್ನು ಮಾಡಿ ಕೊಳ್ಳುತ್ತಾರೆ. ವಡ್ಡರ ಲಗ್ನಕ್ಕೆ ಮಂಗಳ ಸೂತ್ರ, ಬಳಿ, ಹೂ, ಕುಬ್ಬಸ, ಬಾಸಿಂಗ, ಇವು ಬೇಕಾಗುವದಿಲ್ಲ. ಲಗ್ನವಾದ ಬಳಿಕ ಮದಿಮಕ್ಕಳು ಗುಡಿಯಿಂದ ಮನೆಗೆ ಬರುವಾಗ ಐದು ಮನೆಗಳಿಗೆ ಹೋಗಿ ಹಿರಿಯರಿಗೆ ನಮಸ್ಕಾರ ಮಾಡಲಿಕ್ಕೆ ಬೇಕು. ವಡ್ಡರು ಮದ್ಯ ಮಾಂಸಗಳನ್ನು ತಕ್ಕೊಳ್ಳುವದಲ್ಲದೆ ಹಾವು, ಇಲಿ, ಹೆಗ್ಗಣ, ಮುಂತಾದ ಕೀಳು ಜಂತುಗಳನ್ನು ಸಹ ತಿನ್ನುವರು. ಇವರಿಗೆ ಶರೆ ಕುಡಿಯುವ ಚಟ ಬಹಳ ಇರುವ ಕಾರಣ ಇವರ ಬಡತನ ಹಿಂಗುವದಿಲ್ಲ. ವೆಂಕಟರಮಣ, ಹನುಮಂತ, ಯೆಲ್ಲಮ್ಮ, ಇವರ ಮುಖ್ಯ ದೇವತೆಗಳು; ಆದರೆ ವೆಂಕಟರಮಣನನ್ನು ಹೆಚ್ಚು ಭಕ್ತಿ ಯಿಂದ ಪೂಜಿಸುವರು. ಇವರ ಗುರು ಶ್ರೀ ವೈಷ್ಣವನು, ಶ್ರೀರಂಗದಲ್ಲಿ ಇರುತ್ತಾನೆ. ಆದರೆ ಇವರಲ್ಲಿಯ ಲಗ್ನ ಮುಂತಾದ ಕಾರ್ಯಗಳಿಗಾಗಿ ಇವರ ಮನೆಗೆ ಬ್ರಾಹ್ಮಣರು ಹೋಗುವದಿಲ್ಲ. ಮುಹೂರ್ತ ಮುಂತಾದವುಗಳನ್ನು ಇವರಿಗೆ ಬ್ರಾಹ್ಮಣರೇ ಹೇಳುತ್ತಾ ರೆ. ವಡ್ಡರು ಸತ್ತವರ ಶ್ರಾದ್ಧದಂಥ ವಿಧಿಯನ್ನು ಪ್ರತಿ ವರ್ಷ ಮಾಡುತ್ತಾರೆ; ಮೂರು ವರ್ಷ ನಾಲ್ಕು ವರ್ಷಕ್ಕೊಮ್ಮೆ ವೆಂಕಟರಮಣನ ಉತ್ಸವವನ್ನು ಬಹು ಸಮಾರಂಭದಿಂದ ಮಾಡುತ್ತಾರೆ. ಇವರು ಹೆಣ್ಣು ಮಕ್ಕಳ ಲಗ್ನವನ್ನು ಚಿಕ್ಕಂದಿನಲ್ಲಿ ಮಾಡುವರು; ವಿಧವೆ ಗಳ ಲಗ್ನಕ್ಕೆ ಅಡ್ಡಿ ಇಲ್ಲ; ಹೆಣಗಳನ್ನು ಬಹು ಜನರು ಹುಗಿಯುವರು. ಇವರ ಮಕ್ಕ ಳು ಶಾಲೆಗೆ ಹೋಗುವದಿಲ್ಲ.

**ಕಸಾಯಿಗಳು.**

ಕಸಾಯಿಗಳು.—ಇವರು ನಿಜಾಮಿ ರಾಜ್ಯದಿಂದ ಬಂದು ಕಾನಡಾ ಜಿಲ್ಲೆಯ ಶಿರಸೀ ತಾಲೂಕಿನಲ್ಲಿ ವಾಸಿಸುತ್ತಾರೆ; ಆದರೆ ಮನೆಯಲ್ಲಿ ಹಿಂದುಸ್ತಾನೀ ಮಿಶ್ರವಾದ ಮರಾಠೀ ಭಾಷೆಯನ್ನಾಡುವರು. ಇವರು ಸೂರ್ಯನಿಂದ ತಮ್ಮ ಉತ್ಪತ್ತಿ ಯೆಂತಲೂ ಕಶ್ಯಪ, ಕೌಂಡಣ್ಯ, ತಮ್ಮ ಗೋತ್ರಗ ಳೆಂತಲೂ ಹೇಳುತ್ತಾರೆ. ಇವರ ಉಡಿಗೆಗಳು ಚಂದವಾಗಿಯೂ ಸ್ವಚ್ಛವಾಗಿಯೂ ಇರು ವವು; ಹೆಂಗಸರು ಕಚ್ಚೆ ಹಾಕುವದಿಲ್ಲ, ಕುಬ್ಬಸ ತೊಡುವರು. ಕಸಾಯಿಗಳು ಮದ್ಯ ಮಾಂಸಗಳನ್ನು ನಿರಾತಂಕವಾಗಿ ತಕ್ಕೊಳ್ಳುವರು. ಇವರ ಕುಲದೇವತೆ ಕಲಬುರ್ಗೆಯ ಯೆಲ್ಲಮ್ಮ; ಉಪಾಧ್ಯಾಯರು, ಹೈಗ ಬ್ರಾಹ್ಮಣರು. ಕುರಿಗಳನ್ನು ಕೊಯ್ದು ಮಾಂಸ ಮಾ ರುವದೇ ಇವರ ಮುಖ್ಯ ಹೋರೆಯು; ಕೆಲವರು ಶರೆ ಮಾರುವ ಗುತ್ತಿಗೆಯನ್ನು ಮಾಡಿ ಕೊಳ್ಳುವರು. ಇವರಲ್ಲಿ ಹೆಣ್ಣು ಮಕ್ಕಳ ಲಗ್ನ ಹದಿನಾರು ವರ್ಷದ ವರೆಗೆ ಆಗುತ್ತದೆ, ವಿಧವೆಗಳಿಗೆ ಲಗ್ನವಿಲ್ಲ, ಜನ್ಮ ಮರಣಗಳ ಸೂತಕ ಹಿಡಿಯುವರು. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

ಕಾತಕರಿಗಳು.—ಇವರು ಕೊಂಕಣದಿಂದ ಬಂದು ಕಾನಡಾ ಜಿಲ್ಲೆಯ ಯಲ್ಲಾ ಪುರ ತಾಲೂಕಿನಲ್ಲಿ ವಾಸಿಸುತ್ತಾರೆ; ಜನ್ಮಭಾಷೆ ಮರಾಠಿ, ಕುಲದೇವತೆ ಮಾಲಿ ಗೋ ಮಂತಕ ಶೀಮೆಯಲ್ಲಿ ಉಂಟು. ಆದರೆ ಇವರು ವಿಠೋಬನಿಗೂ ಗೋಕರ್ಣದ ಬಹಾ

**ಕಾತಕರಿಗಳು.**

ಬಳೀಶ್ವರನಿಗೂ ಭಕ್ತಿಯಿಂದ ನಡಕೊಳ್ಳುವರು. ಇವರ ಉಪಾಧ್ಯಾಯರು ಹೈಗ ಬ್ರಾಹ್ಮಣರು. ಇವರಲ್ಲಿ ಮದ್ಯ ಮಾಂಸಗಳಿಗೂ ವಿಧವೆಗಳ ಲಗ್ನಕ್ಕೂ ಅಡ್ಡಿ ಇಲ್ಲ; ಜನ್ಮ ಮರಣಗಳ ಸೂತಕ ಹತ್ತು ದಿವಸ ಇರುತ್ತದೆ. ಇವರಲ್ಲಿ ಕೆಲವರು ವೊಕ್ಕಲತನ ಮಾಡುವರು, ಕೆಲವರು ಕೂಲೀ ಮಾಡುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಶಿಕಲಗಾರರು.**

ಶಿಕಲಗಾರರು.— ಇವರು ಧಾರವಾಡ ಬೆಳಗಾವೀ ಜಿಲ್ಲೆಗಳಲ್ಲಿ ಇರುತ್ತಾರೆ; ಮನೆಯಲ್ಲಿ ಹಿಂದುಸ್ತಾನೀ ಭಾಷೆಯನ್ನಾಡುವರು. ಗಂಡಸರು ಹೆಚ್ಚಾಗಿ ಲಂಗೋಟಿಯನ್ನು ಹಾಕುವರು, ಹೆಂಗಸರು ಕಚ್ಚೆ ಹಾಕುವದಿಲ್ಲ. ಇವರು ಮೂಲದಲ್ಲಿ ಘಿಸಾಡೀ ಜಾತಿಯವರಿದ್ದು ಔರಂಗಜೇಬನ ಕಾಲಕ್ಕೆ ಇವರನ್ನು ಬಲಾತ್ಕಾರದಿಂದ ಮುಸಲ್ಮಾನರನ್ನು ಮಾಡಿದರೆಂದು ಹೇಳುತ್ತಾರೆ. ಆದರೆ ಈಗ ಇವರ ಆಚಾರಗಳನ್ನು ನೋಡಿದರೆ ಇವರನ್ನು ಹಿಂದೂ ಜನರೊಳಗೂ ಮುಸಲ್ಮಾನರೊಳಗೂ ಯೆಣಿಸ ಬಹುದು. ಮುಸಲ್ಮಾನರಂತೆ ಇವರಲ್ಲಿ ಸುಂತಿಯ ಸಂಸ್ಕಾರವಾಗುತ್ತದೆ, ಲಗ್ನಗಳನ್ನು ಕಾಜಿಯ ಬುಕ್ಕಿನಲ್ಲಿ ಬರಿಸುತ್ತಾರೆ, ಆಕಳಿನ ಮಾಂಸವನ್ನು ಸಹ ತಿನ್ನಲಿಕ್ಕೆ ಅಡ್ಡಿ ಇಲ್ಲ. ಆದರೆ ಇವರು ಕಾಜಿಗೆ ಯೆಷ್ಟು ಮಾತ್ರವೂ ಮಾನ ಕೊಡುವದಿಲ್ಲ, ಲಗ್ನ ಮರಣಗಳ ಸಂಸ್ಕಾರಕ್ಕೆ ಮುಸಲ್ಮಾನರನ್ನೂ ಹಿಂದೂ ಜನರನ್ನೂ ಕರಿಯುವದಿಲ್ಲ. ಇವರಲ್ಲಿಯ ಹೆಸರುಗಳು ಕೆಲವು ಹಿಂದೂ ಕೆಲವು ಮುಸಲ್ಮಾನೀ ಇರುತ್ತವೆ; ಹಿಂದೂ ದೇವತೆಗಳ ಮೂರ್ತಿಗಳನ್ನು ಇವರು ಮನೆಯಲ್ಲಿ ಪೂಜಿಸುವರು. ಇವರಲ್ಲಿ ಸತ್ತ ಮನುಷ್ಯನ ಹೆಂಡತಿಯು ಅವನ ಅಣ್ಣನ ಇಲ್ಲವೆ ತಮ್ಮನ ಹೆಂಡತಿಯಾಗುತ್ತಾಳೆ. ಹೆಣಗಳನ್ನು ಹುಗಿಯುವರು. ಶಿಕಲಗಾರರು ತೀರ ನೀಚ ಸ್ಥಿತಿಯಲ್ಲಿರುತ್ತಾರೆ. ಇವರು ಪೂರ್ವದಲ್ಲಿ ಕತ್ತಿಗಳ ಶಿಕಲೀ ಮಾಡುವರು. ಆದರೆ ಈಗ ಚೂರಿ, ನಾದಿಗರ ಕತ್ತಿ, ಕುಡಗೋಲು, ಮುಂತಾದವುಗಳನ್ನು ಸಾಣೀ ಹಿಡಿಯುವರು; ಕೆಲವರು ಕಮ್ಮಾರರ ಹೋರೆ ಮಾಡುವರು. ಆದರೆ ವಾಡಿಕೆಯಾಗಿ ಊರೂರು ತಿರುಗಿ ಭಿಕ್ಷೆ ಬೇಡುವವರೇ ಬಹಳ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

## ತಿರುಕರ ಜಾತಿಗಳು.

| | | ಧಾರವಾಡ. | | | ಬೆಳಗಾವಿ. | | | ವಿಜಾಪುರ. | | | ಕಾನಡಾ. | | |
|---|---|---|---|---|---|---|---|---|---|---|---|---|---|
| | | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. |
| ೧ | ದಾಸರು ............ | ೨೫ | ೨೦ | ೪೫ | ೨೭೪ | ೩೦೦ | ೫೭೪ | ೩೫೩ | ೩೮೦ | ೭೩೩ | ೧೩೦ | ೧೦೧ | ೨೩೧ |
| ೨ | ದಂಡಿಗ ದಾಸರು ....... | ,, | ,, | ,, | ೩ | ೫ | ೮ | ೧೬೭ | ೧೭೧ | ೩೩೮ | ,, | ,, | ,, |
| ೩ | ಅಡವೀ ಚಿಂಚೇರು....... | | | ೧೦೦ | ,, | ,, | ,, | ೫೦ | ೬೨ | ೧೧೨ | ,, | ,, | ,, |
| ೪ | ಭಾಟರು .......... | ೬ | ೭ | ೧೩ | ೪೩ | ೨೭ | ೭೦ | ೧೯ | ೧೩ | ೧೧೨ | ,, | ,, | ,, |
| ೫ | ಬುಡ ಬುಡಕಿಗಳು ...... | ೪೭ | ೫೪ | ೧೦೧ | ೨೫ | ೪ | ೨೯ | ೯೧ | ೧೦೨ | ೧೯೩ | ೩೯ | ೨೯ | ೬೮ |
| ೬ | ಗೊಂದಲಿಗರು ........ | ೭೭ | ೭೫ | ೧೫೨ | ೧೬೩ | ೨೦೭ | ೩೭೦ | ೨೬೧ | ೨೭೬ | ೫೩೭ | ೬೧ | ೨೮ | ೮೯ |
| ೭ | ಹೊಲೆ ದಾಸರು ....... | ,, | ,, | ,, | ,, | ,, | ,, | ೨೦೫ | ೨೦೦ | ೪೦೫ | ,, | ,, | ,, |
| ೮ | ಜೋಗೇರು .......... | ೨೬೯ | ೨೫೪ | ೫೨೩ | ,, | ,, | ,, | ೬೦ | ೬೦ | ೧೨೦ | ೪೩೭ | ೪೨೨ | ೮೫೮ |
| ೯ | ಗೋಸಾವಿಗಳು ........ | ೫೭ | ೫೨ | ೧೦೯ | ೫೧೭ | ೪೯೨ | ೧೦೦೭ | ೨೦೭ | ೧೮೭ | ೩೯೪ | ೧೨೧ | ೯೪ | ೨೧೫ |
| ೧೦ | ಬಾಗಡಿಗಳು ......... | ,, | ,, | ,, | ೬ | ೬ | ೧೨ | ,, | ,, | ,, | ,, | ,, | ,, |
| ೧೧ | ಕಾನಫಾಟೆಗಳು ....... | ,, | ,, | ,, | ೩೬ | ೩೩ | ೬೯ | ,, | ,, | ,, | ೧೧ | ೧೫ | ೨೬ |
| ೧೨ | ಕಾಬಾಲಿಗಾರರು ....... | ೫೨೦ | ೫೪೦ | ೧೦೬೦ | ೪೧ | ೫೨ | ೯೩ | ,, | ,, | ,, | ,, | ,, | ,, |
| ೧೩ | ಪಿಚಾಟಿಗಳು ........ | ,, | ,, | ,, | ೪೮ | ೫೭ | ೧೦೫ | ,, | ,, | ,, | ,, | ,, | ,, |
| ೧೪ | ವಾಸುದೇವರು ........ | ,, | ,, | ,, | ೪ | ೬ | ೧೦ | ,, | ,, | ,, | ,, | ,, | ,, |
| ೧೫ | ಬೈರಾಗಿಗಳು ......... | ೨೩ | ೧೨ | ೩೫ | ,, | ,, | ,, | ,, | ,, | ,, | ,, | ,, | ,, |
| ೧೬ | ಹೆಳವರು .......... | ೧೩೨ | ೧೪೯ | ೨೮೧ | ,, | ,, | ,, | ೩೦೯ | ೩೧೦ | ೬೧೯ | ,, | ,, | ,, |
| ೧೭ | ಸತಾನಿಗಳು ......... | ೧ | ೨ | ೩ | ,, | ,, | ,, | ,, | ,, | ,, | ,, | ,, | ,, |
| ೧೮ | ವಗ್ಗಯ್ಯಗಳು ......... | | | ೭೦೦ | ,, | ,, | ,, | ,, | ,, | ,, | ,, | ,, | ,, |

**ದಾಸರು.**

ದಾಸರು.—ಇವರು ನಾಲ್ಕೂ ಜಿಲ್ಲೆಗಳಲ್ಲಿ ಇರುತ್ತಾರೆ. ಇವರು ಮೂಲದಲ್ಲಿ ಮುಖ್ಯವಾಗಿ ಕಬ್ಬಲಿಗೇರ ಕುಲದವರು. ಇವರಲ್ಲಿ ತಿರುಮಲ ದಾಸರೆಂತಲೂ ಗಂಡು ದಾಸರೆಂತಲೂ ಯೆರಡು ವೊಳ ಭೇದಗಳಿವೆ. ತಿರುಮಲ ದಾಸರು ಕನ್ನಡಿಗರು, ಗಂಡು ದಾಸರು ತೆಲಗರು. ಇವರ ಆಹಾರ ಆಚಾರ ಜನ್ಮ, ಮರಣ, ಲಗ್ನ ಇವುಗಳ ಸಂಸ್ಕಾರಗಳು, ಇವೆಲ್ಲ ಕಬ್ಬಲಿಗೇರಂತೆ. ಇವರಲ್ಲಿ ಗಂಡು ಮಕ್ಕಳ ತಲೆಯನ್ನು ಮೊದಲಿಗೆ ಬೋಳಿಸುವಾಗ ಆ ಕೂಸನ್ನು ಹನುಮಂತ ದೇವರ ಗುಡಿಯಲ್ಲಿ ಪೂಜಾರಿಯ ತೊಡಿಯ ಮೇಲೆ ಕೂಡ್ರಿಸಿ ಅವನ ಕೈಯಿಂದ ಯೆರಡು ಕೂದಲುಗಳನ್ನು ಕತ್ತರಿಸಿ ತೆಗಿಸುವರು; ಆ ಮೇಲೆ ತಂದೆಯಾಗಲಿ ಸೋದರ ಮಾವನಾಗಲಿ ಆ ಕೂಸಿನ ತಲೆಯನ್ನು ಕತ್ತರಿಸುವನು. ಹತ್ತನೇ ಹನ್ನೊಂದನೇ ವರ್ಷದಲ್ಲಿ ಹುಡುಗರಿಗೆ ಮುಂಜಿಯಂಥಾದೊಂದು ಸಂಸ್ಕಾರ ಮಾಡುವರು. ಅಲ್ಲಿಯ ವರೆಗೆ ಬಳಗದವರೇ ಅವರ ತಲೆಯನ್ನು ಕತ್ತರಿಸುತ್ತಿರುತ್ತಾರೆ. ಮುಂಜಿಯಾದ ಬಳಿಕ ನಾದಿಗನ ಕೈಯಿಂದ ತಲೆ ಬೋಳಿಸುವರು. ತಿರುಮಲ ದಾಸರು ರಾತ್ರಿಯಲ್ಲಿ ನಾಟಕದ ಹಾಗೆ ಆಟ ಮಾಡುವರು. ಇವರ ಹೆಂಗಸರು ಸಾತರದವರ ಹಾಗೆ ನರ್ತನ ಗಾಯನ ಕಲಿತು, ಬೆಲೆಯುಳ್ಳ ವಸ್ತ್ರಗಳನ್ನೂ ಅಲಂಕಾರಗಳನ್ನೂ ಧರಿಸಿ ಜಾರಕರ್ಮ ಮಾಡುವರು. ಇವರ ಗಂಡಸರ ಉಡಿಗೆಗಳು ತಕ್ಕಮಟ್ಟಿಗೆ ನಿರ್ಮಲವಿರುತ್ತವೆ. ಗಂಡು ದಾಸರಾದರೂ ರಾತ್ರಿಯಲ್ಲಿ ಆಟ ಮಾಡುವರು; ಆದರೆ ಅದರಲ್ಲಿ ಗಂಡು ಹುಡುಗರಿಗೆ ಹೆಣ್ಣು ಸೋಗು ಹಾಕುವರು; ಹೆಂಗಸರು ಆಟದಲ್ಲಿ ಬರುವದಿಲ್ಲ. ಆದರೆ ಈ ತೆಲಗು ದಾಸರಲ್ಲಿ ಬಹು ಜನರು ಮೂರು ನಾಮ ಹಚ್ಚಿ ಕೊಂಡು ಕರದೀಪ, ಶಂಖ, ಜಾಗಟೆ, ಇವುಗಳನ್ನು ತಕ್ಕೊಂಡು ವೆಂಕಟರಮಣನ ಹೆಸರು ನುಡಿದು ಮನೆ ಮನೆಗೆ ಭಿಕ್ಷೆ ಬೇಡುತ್ತ ತಿರುಗುವರು. ದಾಸರ ಮುಖ್ಯ ಕುಲದೇವತೆಗಳು ವೆಂಕಟರಮಣ, ಹುನುಮಂತ. ಕದರ ಮಂಡಗಿಯಲ್ಲಿಯೂ ಹಂಸನೂರಲ್ಲಿಯೂ ಇರುವ ಹನುಮಂತ ದೇವರಿಗೆ ಇವರು ಬಹಳ ಭಕ್ತಿಯಿಂದ ನಡಕೊಳ್ಳುವರು. ಇವರು ಸತ್ತ ಮನುಷ್ಯನ ಭುಜಗಳಿಗೆ ಶಂಖ ಚಕ್ರಗಳನ್ನು ಕಟ್ಟಿ ಸ್ಮಶಾನದಲ್ಲಿ ತಾಳಿಯ ಮೇಲೆ ಹೆಣವನ್ನು ಹಾಕುವಾಗ ಅವುಗಳನ್ನು ಬಿಚ್ಚಿ ಕೊಳ್ಳುವರು; ಹತ್ತು ದಿವಸ ಸೂತಕ ಹಿಡಿದು ಐದನೇ ಆರನೇ ದಿವಸ ಆ ಶಂಖ ಚಕ್ರಗಳ ಪೂಜೆ ಮಾಡುವರು. ದಾಸರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ದಂಡಿಗ ದಾಸರು.**

ದಂಡಿಗ ದಾಸರು.—ಇವರು ವಿಶೇಷವಾಗಿ ವಿಜಾಪುರ ಜಿಲ್ಲೆಯಲ್ಲಿ ಇರುತ್ತಾರೆ. ಇವರಾದರೂ ಮೂಲದಲ್ಲಿ ಕಬ್ಬಲಿಗೇರ ಕುಲದವರೇ; ಅವರಂತೆ ಇವರ ಉಪಾಧ್ಯಾಯರಾದರೂ ಒಪ್ಪುಮರೇ. ದಾಸರು ವೆಂಕಟರಮಣನಿಗೂ ಹನುಮಂತ ದೇವರಿಗೂ ನಡಕೊಳ್ಳುವಂತೆ ಇವರಾದರೂ ಅವೇ ದೇವತೆಗಳಿಗೆ ನಡಕೊಳ್ಳುತ್ತಾರೆ. ಇವರಲ್ಲಿ ಕೆಲವರು ಊರ ಹನುಮಂತ ದೇವರ ಪೂಜಾರಿಗಳಿರುತ್ತಾರೆ. ದಾಸರ ಆಹಾರ ಆಚಾರ ಮೊಂತಾದವುಗಳು ಕಬ್ಬಲಿಗೇರವುಗಳಿಗೆ ಹೊಂದುವಂತೆ ಇವರವಾದರೂ ಹೊಂದುತ್ತವೆ. ದಾಸರಂತೆ ಇವರ ಮುಖ್ಯ ಹೋರೆ

ಯಾದರೂ ಭಿಕ್ಷೆ ಬೇಡುವದೇ. ಆದರೆ ದಾಸರಿಗೂ ಇವರಿಗೂ ಶರೀರಸಂಬಂಧವಾಗುವದಿಲ್ಲ. ದಂಡಿಗ ದಾಸರಿಗೆ ಯೆಲ್ಲ ಮಕ್ಕಳು ಹೆಣ್ಣೇ ಹುಟ್ಟಿದರೆ, ಅವರಲ್ಲಿ ವೊಬ್ಬಳ ಲಗ್ನ ಮಾಡದೆ ಬಸವಿಯನ್ನು ಮಾಡುತ್ತಾರೆ. ಆಕೆ ಜಾರಕರ್ಮದಿಂದ ಜೀವಿಸುವಳು. ದಂಡಿಗ ದಾಸರು ಹೆಗಲಿಗೆ ಗೋಪಾಳ ಬುಟ್ಟಿಯನ್ನು ತೂಗ ಹಾಕಿ ಕೊಂಡು ಭಿಕ್ಷೆ ಬೇಡುತ್ತಾರೆ. ಬಾಗಿಲಿನಲ್ಲಿ "ವೆಂಕಟರಮಣ ಗೋವಿಂದಾ" ಯೆಂದು ಕೂಗಿ ದೇವರ ಪದಗಳನ್ನು ಹಾಡುತ್ತ ನಿಲ್ಲುವರು. ಇವರಲ್ಲಿ ಕೆಲವರು ವೊಕ್ಕಲತನ ಮಾಡುವರು, ಕೆಲವರು ಕೂಲಿಗೆ ಹೋಗುವರು, ಕೆಲವರು ಉರುಟೆ ಬಟ್ಟೆಗಳನ್ನು ನೆಯ್ಯುವರು. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಅಡವೀ ಚಿಂಚೇರು.**

ಅಡವೀ ಚಿಂಚೇರು.— ಇವರು ಗುಜರಾಥದಿಂದ ಬಂದವರೆಂದು ಹೇಳುತ್ತಾರೆ. ಅಟವೀ ಸಂಚಾರಕರೆಂಬ ಶಬ್ದದಿಂದ ಅಡವೀ ಚಿಂಚೇರೆಂಬ ಹೆಸರು ಹುಟ್ಟಿರುತ್ತದೆಂದು ಹೇಳುತ್ತಾರೆ. ಇವರಲ್ಲಿ ಕೆಲವರು ಧನಗರರಂದರೆ ಕುರುಬರು, ಕೆಲವರು ಕೋಳೀ ಅಂದರೆ ಕಬ್ಬಲಿಗೇರು, ಕೆಲವರು ರಜಪೂತರು ಇರುತ್ತಾರೆ; ಅವರವರೊಳಗೆ ಊಟದ ಬಳಿಕೆಯಾಗುವದಿಲ್ಲ. ಇವರ ಮೈ ಮೇಲಿನ ಬಟ್ಟೆಗಳು ಹಳದೀ ಬಣ್ಣದವು ಹರಕ ಹೊಲಸು ಇರುತ್ತವೆ. ಗಂಡಸರ ಮೈ ಮೇಲೆ ಲಂಗೋಟ, ಹೆಗಲ ಮೇಲೆ ವೊಂದು ರಗಟ, ತಲೆಗೊಂದು ರಗಟ, ಇಷ್ಟೇ ಬಟ್ಟೆಗಳು. ಹೆಂಗಸರು ಹೊಲಸು ಹರಕ ಹಳದೀ ನಿಲುವಂಗಿಗಳನ್ನು ಹಾಕಿ ಕೊಳ್ಳುವರು. ತಲೆಗೆ ಯೆಣ್ಣೆ ನೀರುಗಳ ಸಂಪರ್ಕವಾಗುವದು ದುರ್ಲಭ; ಮೈ ಮೇಲೆ ಹೊಲಸು ಮೆತ್ತಿರುವದು. ಅಡವೀ ಚಿಂಚೇರು ಮನೆಯಲ್ಲಿ ಗುಜರಾಥೀ ಭಾಷೆಯನ್ನಾಡುವರು. ಇವರಿಗೆ ಗುಡುಸಲುಗಳು ಸಹ ಬಹುತರ ಇರುವದಿಲ್ಲ. ಹೋದಲ್ಲಿ ಮರಗಳ ಕೆಳಗೆ ಇಲ್ಲವೆ ಗುಡ್ಡಗಳ ಆಸರಕ್ಕೆ ಸ್ವಲ್ಪ ದಿವಸ ನಿಂತು ಮುಂದಕ್ಕೆ ಸಾಗುವರು. ಇವರು ಮದ್ಯ ಮಾಂಸಗಳನ್ನು ನಿರಾತಂಕವಾಗಿ ತಕ್ಕೊಳ್ಳುವರು; ಆಕಳು ಯೆತ್ತುಗಳನ್ನು ಕದ್ದು ಅವುಗಳ ಮಾಂಸವನ್ನು ಸಹ ತಿನ್ನುತ್ತಾರೆಂದು ಸಂಶಯವಿರುತ್ತದೆ. ಇವರ ಕುಲದೇವತೆಗಳು ತುಳಜಾಭವಾನಿ, ಯೆಲ್ಲಮ್ಮ, ವೆಂಕಟರಮಣ. ಇವರಿಗೆ ಗುರುಗಳೂ ಉಪಾಧ್ಯಾಯರೂ ಇಲ್ಲ. ಲಗ್ನದಲ್ಲಿ ಮದಿಮಕ್ಕಳ ತಲೆಗೆ ನೂಲು ಅರಳೀ ಯೆಲೆಗಳ ದಂಡೆಗಳನ್ನು ಹಾಕಿ, ಹೊಸ ಬಟ್ಟೆಗಳನ್ನು ಉಡಿಸಿ, ಇಬ್ಬರ ಶರಗುಗಳನ್ನು ಕೂಡಿಸಿ ಯೇಳು ಗಂಟುಗಳನ್ನು ಹಾಕಿ, ಅವರ ತಲೆಯ ಮೇಲೆ ಕೆಂಪು ಅಕ್ಕೀಕಾಳು ಚಲ್ಲುವರು. ಲಗ್ನದ ವಿಧಾನವೆಲ್ಲ ಇಷ್ಟೇ. ಕೂಸು ಹುಟ್ಟಿದ ಬಳಿಕ ಐದನೇ ದಿವಸ ಅದರ ತಲೆಯ ಕೂದಲು ಕತ್ತರಿಸಿ, ಮುಂದೆ ಹಲ್ಲು ಬರುವ ವರೆಗೆ ತಲೆ ಬೆಳೆದ ಹಾಗೆ ಕತ್ತರಿಸುತ್ತ ಹೋಗುವರು. ಹಲ್ಲು ಬಂದ ಬಳಿಕ ಕೂದಲು ಬೆಳಿಸುವರು; ಗಂಡಸರ ಕೂದಲು ಸಹ ತೆಗಿಯುವದಿಲ್ಲ. ಪೂರ್ವದಲ್ಲಿ ಅಡವೀ ಚಿಂಚೇರು ತಮ್ಮ ಹೆಂಗಸರ ಕೈಯಿಂದ ರವಿ ಯೆದ್ದಿಸುವರು. ದೀವಳಿಗೆಯ ನಂತರ ಕೆಲವೊಂದು ಪ್ರಸಿದ್ಧ ದೇವಸ್ಥಾನದ ಊರಿಗೆ ಹೋಗಿ, ಜಾತಿಯವರಿಗೆ ಊಟ ಹಾಕಿ ಯೆಣ್ಣೆಯನ್ನು ಕುದಿಯುವ ಹಾಗೆ ಕಾಸುವರು. ಗಂಡುಳ್ಳ ಹೆಂಗಸರ ಪಾತಿವ್ರತ್ಯದ

ಪರೀಕ್ಷೆಗಾಗಿ ಅವರ ಕೈ ಬೊಟ್ಟನ್ನು ಆ ಯೆಣ್ಣೆಯೊಳಗೆ ಯೆದ್ದಿಸುವರು. ಕೈ ಸುಡದಿದ್ದರೆ, ಅದು ಪಾತಿವ್ರತ್ಯದ ಲಕ್ಷಣವೆಂದೆಣಿಸುವರು. ಅಡವೀ ಚಿಂಚೇರಲ್ಲಿ ಅನುಕೂಲವಿದ್ದವರು ಮಾತ್ರ ಹೆಣಗಳನ್ನು ಸುಡುವರು; ಉಳಿದವರು ಹುಗಿಯುವರು. ಇವರು ವಾಡಿಕೆಯಾಗಿ ಭಿಕ್ಷೆ ಬೇಡುತ್ತಿರುತ್ತಾರೆ; ಚಿಗರೆಗಳಿಗೆ ಬಲಿ ಹಾಕಿ ಅವುಗಳನ್ನು ಹಿಡಿಯುವರು. ಈ ಕಾರಣದಿಂದ ಇವರಿಗೆ ಚಿಗರೇ ಬಲೆಗಾರರೆಂತಲೂ ಅನ್ನುವರು. ಇವರು ವೊಮ್ಮೊಮ್ಮೆ ಹೊನಗೆಗಳನ್ನು ಸಹ ತಮ್ಮ ಬಲಿಯಲ್ಲಿ ಜೀವದಿಂದ ಹಿಡಿದು ತಂದು ಮಾರಿಕೊಳ್ಳುವರು. ಆದರೆ ಕಳವು ಅಡವೀ ಚಿಂಚೇರ ಮುಖ್ಯ ಹೋರೆ ಯೆಂದು ಹೇಳ ಬಹುದು. ಇವರು ಅಡವಿಯಲ್ಲಿ ಕೈಗೆ ಶಿಕ್ಕ ದನಗಳನ್ನೂ ಪೈರುಗಳನ್ನೂ ಕದಿಯುವರು; ಸುಗ್ಗಿಯಲ್ಲಿ ಹೊಲ ಹೊಲ ತಿರುಗಿ ಬಲಾತ್ಕಾರದಿಂದ ಫಸಿಕೀ ಕಾಳು ಯೆತ್ತುವರು. ಯಾರಾದರೂ ಇವರಿಗೆ ಕಾಳು ಕೊಡದಿದ್ದರೆ ಇವರು ರಾತ್ರಿಯಲ್ಲಿ ಅವರ ಕಣಕ್ಕೆ ಬೆಂಕಿ ಹಚ್ಚುವರು. ಇವರಲ್ಲಿ ಹೆಣ್ಣು ಮಕ್ಕಳ ಲಗ್ನವು ಬೇಕಾದಾಗ ಆಗ ಬಹುದು; ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ. ಹೆಣವನ್ನು ಸುಡಲಿಕ್ಕೆ ಇಲ್ಲವೆ ಹುಗಿಯಲಿಕ್ಕೆ ವೊಯ್ಯುವಾಗ ವಿಮಾನ, ಸದಿಗೆ, ಮುಂತಾದವುಗಳೇನು ಬೇಕಾಗುವದಿಲ್ಲ; ವೊಬ್ಬ ಹೆಣದ ತಲೆಯನ್ನು, ವೊಬ್ಬ ನಡುವನ್ನು, ವೊಬ್ಬ ಕಾಲುಗಳನ್ನು ಹಿಡಿದು ಯೆತ್ತಿ ಕೊಂಡು ಹೋಗುವರು. ಮೂರನೇ ದಿವಸ ತುಪ್ಪ ಬೆಲ್ಲ ಕಲಿಸಿ ಗೋರಿಯ ಮೇಲೆ ಇಟ್ಟು ಬಂದರೆ ತೀರಿತು; ಮರಣದ ವಿಧಿ ಬೇರೆ ಯೇನೂ ಇಲ್ಲ. ಇವರಿಗೆ ಶಾಲೆಯ ಸುದ್ದಿ ಸಹ ಗೊತ್ತಿಲ್ಲೆಂದು ಹೇಳ ಬಹುದು.

**ಭಾಟರು.** — ಇವರು ಮಹಾರಾಷ್ಟ್ರರು; ಕೆಲವರು ತೆಲಗರೂ ಇರುತ್ತಾರೆಂದು ಹೇಳುತ್ತಾರೆ. ಇವರಲ್ಲಿ ಬ್ರಾಹ್ಮಣ ಭಾಟರೆಂತಲೂ ಜೋಶೀ ಭಾಟರೆಂತಲೂ ಯೆರಡು ವೊಳ

**ಭಾಟರು.**

ಜಾತಿಗಳಿವೆ; ಅವರವರೊಳಗೆ ಊಟದ ಬಳಿಕೆಯಾಗುವದಿಲ್ಲ. ಭಾಟರ ಆಚರಣೆಯು ವಾಡಿಕೆಯಾಗಿ ಕುಣಬಿಗಳಂತೆ ಇರುತ್ತದೆ. ಬ್ರಾಹ್ಮಣ ಭಾಟರು ಸಹ ಮದ್ಯ ಮಾಂಸಗಳನ್ನು ತಕ್ಕೊಳ್ಳುತ್ತಾರೆ. ಇವರಿಗೆ ಮನೆ ಇಲ್ಲ; ಗುಡಿ, ಧರ್ಮ ಶಾಲೆಗಳಲ್ಲಿ ಕೆಲವು ದಿವಸ ನಿಂತು ಮತ್ತೊಂದು ಊರಿಗೆ ಹೋಗುತ್ತಾರೆ. ಗಂಡಸರು ಇಜಾರು, ಉದ್ದಂಗಿ, ಶಲ್ಲೆ ಮುಂಡಾಸಗಳನ್ನು ಮೈ ಮೇಲೆ ಹಾಕಿಕೊಂಡು, ಕೈಯಲ್ಲಿ ಬರ್ಚಿಯನ್ನು ಹಿಡುಕೊಂಡು ಭಿಕ್ಷೆ ಬೇಡುವರು. ಬಾಗಿಲಲ್ಲಿ ನಿಂತು, ಹಿಂದುಸ್ತಾನಿಯಲ್ಲಿ ಮನೆಯೊಡೆಯನನ್ನು ಹೊಗಳುವಂಥ ಗದ್ಯರೂಪ ಕವನಗಳನ್ನು ಆವೇಶ ಮುದ್ರೆಯಿಂದ ಅನ್ನುವರು. ಜೋಶೀ ಭಾಟರು ಭವಿಷ್ಯ ಹೇಳುವರು. ಹೆಂಗಸರ ಉಡಿಗೆಗಳು ಕುಣಬಿಗಳಂತೆ ಇರುತ್ತವೆ. ಇವರ ದೇವತೆಗಳು ಸಿದ್ದೋಬಾ, ಮಾಯಾರಾಣಿ, ವಿಠೋಬಾ, ಯೆಲ್ಲಮ್ಮ, ಇತ್ಯಾದಿ. ಆದರೆ ಇವರು ಧರ್ಮದಲ್ಲಿ ಬಹಳ ಭಕ್ತಿಯುಳ್ಳವರೆಂದು ತೋರುವದಿಲ್ಲ. ಇವರಲ್ಲಿಯ ಕಾರ್ಯಗಳಿಗೆ ಬ್ರಾಹ್ಮಣರು ಹೋಗುವರು. ಲಗ್ನದಲ್ಲಿ ಊಟ ಹಾಕುವದಕ್ಕೆ ಬದಲಾಗಿ ಉಲಪೀ ಕೊಡುವರು. ಹೆಣಗಳನ್ನು ಕೆಲವರು ವಿಮಾನದಲ್ಲಿ ವೊಯ್ದು ಹುಗಿಯುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ

**ಬುಡಬುಡಕಿಗಳು.**

ಬುಡಬುಡಕಿಗಳು.— ಇವರಿಗೆ ಡೌರಿಗಳೆಂತಲೂ ಪಿಂಗಳಿ ಯೆಂತಲೂ ಅನ್ನುವರು. ಇವರು ಭಿಕ್ಷೆ ಬೇಡುವಾಗ ಬಾರಿಸುವ ವಾದ್ಯದ ಹೆಸರು ಬುಡಬುಡಕಿ, ಅಥವಾ ಕಿಡಿಬಿಡಿಕಿ; ಅದರ ಹೆಸರೇ ಇವರಿಗೆ ಬಂದದೆ. ಇವರ ಜನ್ಮ ಭಾಷೆ ಮರಾಠೀ. ಗೊಂದಲಿಗರಿಗೂ ಇವರಿಗೂ ಶರೀರ ಸಂಬಂಧವಾಗುತ್ತದೆ. ಇವರ ಅಡ್ಡ ಹೆಸರುಗಳು ಗಾಯಕವಾಡ, ಪವಾರ, ಸಿಂದೆ, ಮುಂತಾದವುಗಳಿರುವ ಕಾರಣ ಇವರು ಮೂಲದಲ್ಲಿ ಉತ್ತಮ ಕುಲದ ಮಹಾರಾಷ್ಟ್ರರೆಂತಲೂ ತೋರುತ್ತದೆ. ಆದರೆ ಅವರಿಗೂ ಇವರಿಗೂ ಅನ್ನ ವ್ಯವಹಾರವಾಗುವದಿಲ್ಲ. ಇವರ ಆಹಾರ, ಆಚಾರ, ನಡಾವಳಿ ಮುಂತಾದವುಗಳು ಕುಣಬಿಗಳಂತೆ ಇರುತ್ತವೆ. ಬುಡಬುಡಕಿಗಳು ಭಿಕ್ಷೆ ಬೇಡಲಿಕ್ಕೆ ಹೊರಡುವಾಗ ತಲೆಗೆ ಕೆಂಪು ಮುಂಡಾಸ ಹಾಕುವರು, ಇಲ್ಲವೆ ಬಿಳಿ ಮುಂಡಾಸ ಹಾಕಿ ಅದರ ಮೇಲೆ ಕೆಂಪು ಅರಿವೆಯನ್ನು ಸುತ್ತುವರು; ಇಜಾರ, ಉದ್ದಂಗಿ, ಹೆಗಲ ಮೇಲೆ ಕೆಂಪು ಬಿಳಿ ವಸ್ತ್ರಗಳು, ಇಷ್ಟು ಉಡಿಗೆಗಳ ಹೊರ್ತು ಇವರು ಭಿಕ್ಷೆಗೆ ಹೊರಡುವದಿಲ್ಲ. ಇದಲ್ಲದೆ ಹೆಗಲ ಮೇಲೆ ಜೋಳಿಗೆ, ಯೆಡಗೈಯಲ್ಲಿ ಬಡಿಗೆ, ಬಲಗೈಯಲ್ಲಿ ಕಿಡಿಬಿಡಿಕಿ, ಇರಲಿಕ್ಕೆ ಬೇಕು. ಇವರ ಹೆಂಗಸರ ಉಡಿಗೆಗಳು ಕುಣಬಿಗಳಂತೆ ಇರುತ್ತವೆ. ಬುಡಬುಡಕಿಗಳು ಬಾಗಿಲಲ್ಲಿ ನಿಂತು ಹಾಡುವ ಸ್ವರದಿಂದ ಮನೆಯವರ ಮುಂದಿನ ಸುಖ ದುಖ್ಖಗಳನ್ನು ನುಡಿಯುತ್ತಿರುತ್ತಾರೆ. ಇವರ ಜೋಳಿಗೆಯಲ್ಲಿ ಚಿತ್ರಗಳುಳ್ಳದ್ದೊಂದು ಪ್ರಶ್ನದ ಪುಸ್ತಕವಿರುತ್ತದೆ. ಅದರಲ್ಲಿ ಕಡ್ಡಿಯ ಹಾಕಿ ಪ್ರಶ್ನ ಹೇಳುವರು. ಬುಡಬುಡಕಿಗಳಿಗೆ ಹಾಲು ಹಕ್ಕಿಯ ನುಡಿ ತಿಳಿಯುತ್ತಿರುತ್ತದೆಂದು ಜನರ ಗ್ರಹಿಕೆಯುಂಟು. ಆದರೆ ಇವರು ಆ ಹಕ್ಕಿಯ ನುಡಿಯ ಅರ್ಥವನ್ನು ಅದು ಕೂತ ಸ್ಥಳದ ಅನುರೋಧದಿಂದ ವಿಂಗಡಿಸುತ್ತಾರೆ. ಹ್ಯಾಗಂದರೆ, ಬೆಳಿಗ್ಗೆ ಹೊತ್ತು ಹೊರಡುವ ಪೂರ್ವದಲ್ಲಿ ಹಾಲು ಹಕ್ಕಿ ಇರುವಲ್ಲಿಗೆ ಹೋಗುತ್ತಾರೆ. ಅದು ವೊಂದೇ ಮಾತಾಡುತ್ತಿದ್ದರೆ ಅಪಶಕುನವೆಂತಲೂ, ಯೆರಡು ಹಕ್ಕಿಗಳು ಪ್ರಶ್ನೋತ್ತರಗಳಂತೆ ಮಾತಾಡುತ್ತಿದ್ದರೆ ಸುಚಿನ್ಹವೆಂತಲೂ ಗ್ರಹಿಸುವರು. ಆ ಹಕ್ಕಿಯು ಮಾತಾಡುವಾಗ ಜಾಲಿ, ಬೇವು, ಹುಣಚಿ, ಮಾವು, ಅರಳಿ, ಗೋವಿನ ಮರ, ಇವುಗಳ ಮೇಲೆ ಕೂತಿದ್ದರೆ, ಅದರ ನುಡಿಯು ಕ್ರಮವಾಗಿ ಚರ್ಮಕಾರರು, ವರ್ತಕರು, ಬೇಟೆಗಾರರು, ತೋಟಿಗರು, ಬ್ರಾಹ್ಮಣರು, ಮಾಲಗಾರರು, ಈ ಜಾತಿಗಳಿಗೆ ಸಂಬಂಧಿಸುತ್ತದೆ. ಊರ ಗೋಡೆಯ ಮೇಲೆ ಕೂತು ಹಾಲು ಹಕ್ಕಿಯು ಮಾತಾಡುತ್ತಿದ್ದರೆ, ಅದು ಕಾವಲುಗಾರರ ವಿಷಯವಾಗಿ ಮಾತಾಡುತ್ತದೆಂಬ ಅರ್ಥವು. ಹೀಗೆ ಹಾಲು ಹಕ್ಕಿಯ ನುಡಿಗಳನ್ನು ಕೇಳಿ ಕೊಂಡು ಬಂದು ಬುಡಬುಡಕಿಗಳು ಪೋಷಾಗು ಹಾಕಿ ಕೊಂಡು ಭಿಕ್ಷೆಗೆ ಹೊರಡುವರು.

**ಗೊಂದಲಿಗರು.**

ಗೊಂದಲಿಗರು.— ಇವರೂ ಮಹಾರಾಷ್ಟ್ರರೇ. ಇವರು ತುಳಜಾ ಭವಾನಿಯ ಭಕ್ತರು. ಇವರು ಹಣೆಗೆ ಭಂಡಾರ ಹಚ್ಚಿಕೊಂಡು ಕೊರಳಲ್ಲಿ ಕವಡಿಯ ಸರಗಳನ್ನು ಹಾಕಿ ಕೊಂಡು, ಇಬ್ಬರು ಮೂವರು ಕೂಡಿ, ಸಂಬಾಳ, ಚೌಡಕಿಗಳನ್ನು ಬಾರಿಸುತ್ತ ಭವಾನಿಯ ಹಾಡುಗಳನ್ನು ಹಾಡುತ್ತ

ಭಿಕ್ಷೆ ಬೇಡುವರು. ಬ್ರಾಹ್ಮಣರು ಮುಂತಾದ ಉತ್ತಮ ಜಾತಿಗಳಲ್ಲಿ ಲಗ್ನ, ಮುಂಜಿಗಳಲ್ಲಿ ಗೊಂದಲವೆಂಬ ಕಾರ್ಯವನ್ನು ತುಳಜಾ ಭವಾನಿಯ ಹೆಸರಿನಿಂದ ಮಾಡುತ್ತಾರೆ. ಆ ಕಾರ್ಯಕ್ಕೆ ಅವರು ಗೊಂದಲಿಗರನ್ನು ಕರಿಯುವರು. ಇವರು ರಾತ್ರಿಯಲ್ಲಿ ವೊಂದು ತಂಬಿಗೆಯನ್ನು ತುಂಬಿಟ್ಟು, ಅದೇ ಭವಾನಿ ಯೆಂದು ಹೇಳಿ, ಯಜಮಾನನ ಕೈಯಿಂದ ಅದರ ಪೂಜೆಯನ್ನು ಮಾಡಿಸಿ, ಬೆಳತನಕ ಸಂಬಾಳ, ಚೌಡಕಿ, ದೀವಟಿಗೆಗಳೊಂದಿಗೆ ಹಾಡುತ್ತ ಕುಣಿಯುವರು, ದೀವಟಿಗೆಯನ್ನು ಮೈಗೆ ಸುಡದ ಹಾಗೆ ಯೆಚ್ಚರದಿಂದ ಹಚ್ಚಿಕೊಳ್ಳುವರು. ಗೊಂದಲಿಗರ ಆಹಾರ, ಆಚಾರ, ಸಂಸ್ಕಾರ, ಮುಂತಾದವುಗಳೆಲ್ಲ ಕುಣಬಿಗಳಂತೆ ಇರುತ್ತವೆ.

**ಹೊಲೆದಾಸರು.**

ಹೊಲೆದಾಸರು. — ಇವರು ಹೊಲೆ ಜೋಗತಿಗಳ ಹೊಟ್ಟೆಯುವರು. ಆ ಜೋಗತಿಗಳು ಯೆಲ್ಲಮ್ಮನ ಜೋಗತಿಗಳಂತೆ ಬುಟ್ಟಿಗೆ ಶೀರೆ ಸುತ್ತಿ, ಅದರೊಳಗೆ ಮರಗಮ್ಮನ ಮೊಖವನ್ನಿಟ್ಟುಕೊಂಡು ಭಿಕ್ಷೆ ಬೇಡುತ್ತಾರೆ. ಅವರಿಗೆ ಲಗ್ನವಿಲ್ಲ; ಜಾರಕರ್ಮದಿಂದ ಅವರು ಜೀವಿಸುವರು. ಹೊಲೆದಾಸರು ವೆಂಕಟರಮಣನ ಇಲ್ಲವೆ ಹನುಮಂತನ ದಾಸರೆಂದು ಹೇಳಿ ಭಿಕ್ಷೆಯಿಂದ ಜೀವಿಸುವರು. ಇವರ ಉಡಿಗೆ, ಆಹಾರ, ಆಚಾರ, ನಡಾವಳಿ ಮುಂತಾದವುಗಳೆಲ್ಲ ಹೊಲಿಯರಂತೆ. ಇವರನ್ನು ಉತ್ತಮ ಕುಲದವರು ಮುಟ್ಟಿಸಿ ಕೊಳ್ಳುವದಿಲ್ಲ. ಇವರು ಬಾದಾಮೀ ತಾಲೂಕಿನಲ್ಲಿ ಇರುತ್ತಾರೆ.

**ಜೋಗೇರು.**

ಜೋಗೇರು ಅಥವಾ ಬಾಳಸಂತೋಷರು. — ಇವರು ಮನೆಯಲ್ಲಿ ಮರಾಠೀ ಭಾಷೆಯನ್ನಾಡುತ್ತಾರೆ. ಇವರೊಳಗೆ ಹತ್ತು ವೊಳಜಾತಿಗಳಿರುತ್ತವೆ. ಅವು ಹ್ಯಾಗಂದರೆ — ೧ ಬಾಬನಿ, ೨ ಭಂಡಾರಿ, ೩ ಚುನಾಡಿ, ೪ ಹಿಂಗಮರಿ, ೫ ಕರಕದರಿ, ೬ ಮದರಕರ, ೭ ಪರಬಲಕರ, ೮ ಮದರಕರ, ೯ ಸಾಲಿ, ೧೦ ಪತಕರ. ಇವರ ಜಾತಿ ಸಂಬಂಧದ ವ್ಯವಹಾರಗಳಲ್ಲಿ ಮದಕರ ಜಾತಿಯವನೊಬ್ಬ ಪಾಟೀಲನಿರುತ್ತಾನೆ; ಬಾಬನೀ ಕುಲದವನು ಕುಲಕರಣಿ, ಸಾಲೀ ಕುಲದವ ದೇಸಾಯಿ, ಭಂಡಾರೀ ಕುಲದವ ತಳವಾರ. ಲಗ್ನವಾದಲ್ಲಿ ಹತ್ತೂ ಜಾತಿಗಳ ಜನರು ಬರಲಿಕ್ಕೆ ಬೇಕು. ಗೋರಕನಾಥನೆಂಬ ಸತ್ಪುರುಷನ ಹನ್ನೆರಡು ಜನ ಶಿಷ್ಯರು ಸ್ಥಾಪಿಸಿದ ಹನ್ನೆರಡು ಪಂಥಗಳಲ್ಲಿ ವೊಂದೊಂದು ಜಾತಿಯವರು ವೊಂದೊಂದು ಪಂಥದವರಿರುತ್ತಾರೆ. ಆ ಹನ್ನೆರಡು ಪಂಥಗಳು ಯಾವವೆಂದರೆ, ೧ ಆಯಿ, ೨ ಬರಾಖ, ೩ ಧನ, ೪ ಗಂಗನಾಥ, ೫ ಗೋಪೀಚಂದ, ೬ ಕಾಮುಲ್ಲಾ, ೭ ಕಂಥರ, ೮ ಕಪಿಲ, ೯ ಸಾತೇಶಿ, ೧೦ ಪಾಗಲ, ೧೧ ಪಾವ, ೧೨ ಶ್ರೀ ಸತನಾಥ ಬ್ರಹ್ಮ. ಈ ಹನ್ನೆರಡು ವೊಳಜಾತಿಗಳಲ್ಲಿ ಪರಸ್ಪರ ಶರೀರ ಸಂಬಂಧವಾಗುತ್ತದೆ.*

* ಆದರೆ ಕಾನಡಾ ಜಿಲ್ಲೆಯಲ್ಲಿ ಬೇರೆ ೧೨ ವೊಳ ಜಾತಿಗಳು ವಿವರಿಸಲ್ಪಟ್ಟವೆ — ೧ ಕೇರ ಜೋಗಿ, ೨ ಗೋಸಾಯೀ ಜೋಗಿ, ೩ ಕಿಂದ್ರೀ ಜೋಗಿ, ೪ ದಾವರ್ಜೀ ಜೋಗಿ, ೫ ಬಳಗಾರ ಜೋಗಿ, ೬ ಮೆಂಬರ ಜೋಗಿ, ೭ ಆರೇ ಜೋಗಿ, ೮ ಮರಾಠಿ ಜೋಗಿ, ೯ ಕುರುಬ ಜೋಗಿ, ೧೦ ಬೆರಡ ಜೋಗಿ, ೧೧ ಜೋರ್ಟಿ ಜೋಗಿ, ೧೨ ಡೊಂಬರ ಜೋಗಿ. ಇವರೊಳಗೆ ಊಟದ ಬಳಿಕೆ ಸಹ ಆಗುವದಿಲ್ಲ.

ಜೋಗಿ ಯೆಂಬ ಹೆಸರು ಯೋಗಿ ಯೆಂಬ ಶಬ್ದದಿಂದ ಬಂದಿರುತ್ತದೆ. ಈ ಜೋಗಿಗಳ ಮೂಲ ಪುರುಷನ ಮಚ್ಛೇಂದರನಾಥನೆಂಬ ಯೋಗಿಯು ತುಳಜಾಪುರದಲ್ಲಿ ಇದ್ದನೆಂದು ಹೇಳುತ್ತಾರೆ. ಜೋಗಿಗಳು ಜನಿವಾರ ಹಾಕುವರು, ಕೆಲವರು ಗಡ್ಡ ಬೆಳಿಸುವರು. ಇವರು ಭಿಕ್ಷೆಗೆ ಹೊರಡುವಾಗ ಹಳದೀ ಮುಂಡಾಸ, ಉದ್ದಂಗಿ, ಕೊರಳಲ್ಲಿ ಮಣಿಗಳ ಮಾಲೆ, ಕಿವಿಗಳಲ್ಲಿ ಬೆಳ್ಳಿಯ ಮುದ್ರೆಗಳೆಂಬ ಮುರುವುಗಳು, ವೊಂದು ಕೈಯಲ್ಲಿ ತ್ರಿಶೂಲ, ಯೆರಡನೇದರಲ್ಲಿ ಕುಂಬಳ ಸೊಟ್ಟೆಯ ಭಿಕ್ಷಾ ಪಾತ್ರೆ, ಹೆಗಲ ಮೇಲೆ ಜೋಳಿಗಿ, ಚಿಗರೇ ಕೊಂಬು, ಇಷ್ಟು ಸಾಹಿತ್ಯಗಳೊಂದಿಗೆ ಹೊರಡುವರು. ಇವರಿಗೆ ಭಿಕ್ಷೆ ಹಾಕಿ ಸಂತೋಷ ಪಡಿಸಿದರೆ, ಇವರು "ಬಾಳ ಸಂತೋಷ" ಯೆಂಬ ಶಬ್ದ ನುಡಿದು, ಚಿಗರೆಯ ಕೊಂಬು ಊದಿ ಹೋಗುವರು. ಜೋಗಿಗಳು ಮದ್ಯ ಮಾಂಸ ತಕ್ಕೊಳ್ಳುತ್ತಾರೆ; ಕೆಲವರು ಗಾಂಜೀ ಸೇದುವರು, ಅಫೀಮು ತಿನ್ನುವರು. ಇವರ ಕುಲದೇವತೆ ರತ್ನಾಗಿರೀ ಜಿಲ್ಲೆಯಲ್ಲಿ ಜೋತೀಬಾ ಯೆಂಬ ದೇವಸ್ಥಾನವು. ಇವರು ಲಗ್ನ ಕಾರ್ಯಕ್ಕೆ ಮಾತ್ರ ಬ್ರಾಹ್ಮಣರನ್ನು ಕರಿಯುವರು; ಬೇರೆ ಯಾವತ್ತು ಕಾರ್ಯಗಳನ್ನು ಕಾಸ ಘಾಟೆ ಜೋಗೀ ಯೆಂಬವರು ಮಾಡಿಸುವರು. ಹೆಣ್ಣು ಮಕ್ಕಳ ಲಗ್ನವನ್ನು ಬೇಕಾದಾಗ ಮಾಡ ಬಹುದು; ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ. ಲಗ್ನದಲ್ಲಿ ಮದಿಮಕ್ಕಳನ್ನು ಜೋಳದ ಬುಟ್ಟಿಯಲ್ಲಿ ನಿಲ್ಲಿಸಿ ಅಂತಃಪಟ ಹಿಡಿದು ಅಕ್ಕೀಕಾಳು ಹಾಕುವರು. ಇವರಲ್ಲಿ ಬಹು ಜನರು ವೊಂದೇ ಕಡೆಯಲ್ಲಿ ಮನೆ ಮಾಡಿ ಕೊಂಡು ವಾಸಿಸುವರು. ಆದರೆ ಪರಸ್ಥಳಕ್ಕೆ ಭಿಕ್ಷೆಗೆ ಹೋದಾಗ ಇವರು ಸ್ಮಶಾನದಲ್ಲಿ ಕೂತು ಮಂತ್ರ ತಂತ್ರಗಳನ್ನು ಮಾಡುವರು. ಅದರಿಂದ ಇವರಿಗೆ ಸುಡುಗಾಡು ಸಿದ್ಧರೆಂತಲೂ ಹೆಸರು ಬಂದದೆ. ಇವರು ಹೆಣಗಳನ್ನು ಗೋರಿಯೊಳಗೆ ಕೂಡ್ರಿಸಿ ಮಣ್ಣು ಮುಚ್ಚುವರು. ಜೋಗಿಗಳು ಭಿಕ್ಷೆ ಬೇಡುವದಲ್ಲದೆ ಕಲಗಡಿಗೆ, ಕಲಪರಟ, ಸಾಣೀ ಕಲ್ಲುಗಳನ್ನು ಮಾರುವರು. ಇವರ ಹೆಂಗಸರು ಸೂಜಿ, ಕರೆಮಣಿ, ಹಣಿಗೆ, ಕುಂಕುಮಗಳನ್ನು ಮಾರುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಗೋಸಾವಿಗಳು.**

ಗೋಸಾವಿಗಳು.— ಇವರ ಜನ್ಮಭಾಷೆ ಹಿಂದುಸ್ತಾನೀ. ಇವರೊಳಗೆ ಗಿರೀ, ಪುರೀ, ಭಾರತೀ, ವನ, ಅರಣ್ಯ, ಸರಸ್ವತಿ, ತೀರ್ಥ, ಆಶ್ರಮ, ಸಾಗರ, ಪರ್ವತ, ಯೆಂಬ ಹತ್ತು ಭೇದಗಳಿರುತ್ತವೆ. ಗೋಸಾವಿಗಳು ಶಿವನ ಭಕ್ತರು, ಬೈರಾಗಿಗಳ ವಿರೋಧಿಗಳು. ಮದ್ಯ ಮಾಂಸ ಮುಟ್ಟುವದಿಲ್ಲ. ತಂಬಾಕ, ಗಾಂಜೆ, ಅಫೂ, ಇವುಗಳ ವ್ಯಸನ ಬಹಳ. ಬ್ರಾಹ್ಮಣರಿಗೆ ಮಾನ ಕೊಡುವರು, ಹೆಣಗಳನ್ನು ಹುಗಿಯುವರು. ಗೋಸಾವಿಗಳಲ್ಲಿ ಕೆಲವರು ಲಗ್ನ ಮಾಡಿ ಕೊಂಡು ಗೃಹಸ್ಥಾಶ್ರಮಿಗಳಾಗಿ, ಮನೆ ಮಾಡಿ ಕೊಂಡು ವೊಕ್ಕಲತನ ಮುಂತಾದ ಹೋರೆಗಳನ್ನು ಮಾಡುವರು. ಇವರ ಹೆಂಗಸರು ಶಾಟಗಳನ್ನುಡುವರು.

ಆದರೆ ಗೋಸಾವಿಗಳಲ್ಲಿ ವಿರಕ್ತರೇ ಬಹಳ. ಅವರು ಜಟೆಯನ್ನೂ ಉಗುರುಗಳನ್ನೂ ಬೆಳಿಸುವರು; ಮೈ ತುಂಬ ಭಸ್ಮ ಹಚ್ಚಿ ಕೊಳ್ಳುವರು; ಲಂಗೋಟ ಶಾಟಗಳನ್ನು ಧರಿಸುವರು; ಭಿಕ್ಷೆಯಿಂದ ಜೀವಿಸುವರು. ಈ ಗೋಸಾವಿಗಳಿಗೆ ಗಾಂಜಿಯ ವ್ಯಸನ

ನಿರುತ್ತದೆ; ಕೆಲವರು ಅಫೀಮು ತಿನ್ನುವರು. ನಿಜವಾಗಿ ವೈರಾಗ್ಯದಿಂದ ವರ್ತಿಸುವ ಗೋಸಾವಿಗಳು ಬಹು ಸ್ವಲ್ಪ ಜನರು. ಅವರು ಪಂಚಾಗ್ನಿ, ಊರ್ಧ್ವಬಾಹು, ಏಕಪಾದ, ಮುಂತಾದ, ತಪಶ್ಚರ್ಯಗಳನ್ನು ಮಾಡುವರು. ಪಂಚಾಗ್ನಿ ಯೆಂದರೆ ತಲೆಯ ಮೇಲೆ ಸೂರ್ಯ, ನಾಲ್ಕು ದಿಕ್ಕುಗಳಲ್ಲಿ ಅಗ್ನಿಜ್ವಾಲೆ, ಈ ಪ್ರಕಾರ ಐದು ತಾಪಗಳನ್ನು ಸಹನ ಮಾಡಿ ಕೊಂಡು ದೇವರ ಧ್ಯಾನ ಮಾಡುವದು. ಈ ಗೋಸಾವಿಗಳು ಕಾಶಿ, ರಾಮೇ ಶ್ವರಗಳ ಯಾತ್ರೆಯನ್ನು ಯಾವಾಗಲು ಮಾಡುತ್ತಿರುವರು. ಇವರಿಗೆ ಜಾತಿ ನಿರ್ಬಂಧ ವಿಲ್ಲ; ಬೇಕಾದವರಲ್ಲಿ ಅನ್ನ ತಕ್ಕೊಳ್ಳುವರು. ಇವರು ಬೇಕಾದ ಜಾತಿಯವರಿಗೆ ಉಪ ದೇಶ ಮಾಡಿ ಅವರನ್ನು ತಮ್ಮ ಶಿಷ್ಯರನ್ನು ಮಾಡಿ ಕೊಳ್ಳುವರು. ಹೊಸ ಶಿಷ್ಯರಿಗೆ ಇವರು ಬೋಧಿಸುವ ಕಟ್ಟಳೆಗಳೇನೆಂದರೆ— ಬ್ರಹ್ಮಚರ್ಯದಿಂದಿರು, ಭಿಕ್ಷೆಯಿಂದ ಜೀವಿ ಸು, ಸಾಧಿಸಿದಷ್ಟು ಅನ್ನ ದಾನ ಮಾಡು, ತೀರ್ಥ ಕ್ಷೇತ್ರ ಯಾತ್ರೆಗಳನ್ನು ಮಾಡುತ್ತಿರು, ಇತ್ಯಾದಿ.

**ಬಾಗಡಿಗಳು.**

ಬಾಗಡಿಗಳು.— ಇವರು ಕೊಲ್ಲಾಪುರದ ಶೀಮೆಯಿಂದ ಬೆಳಗಾವಿಗೆ ಬರುತ್ತಿರು ತ್ತಾರೆ; ಜನ್ಮಭಾಷೆ ಮರಾಠಿ. ತೋರಿಕೆಯಲ್ಲಿ ಕೋಳೀ (ಕಬ್ಬಲಿಗೇರ) ಜಾತಿಯವರ ಹಾಗೆ ಕಾಣುತ್ತಾರೆ. ಇವರ ಕುಲದೇವತೆ ಮ್ಹಸೋಬಾ, ಬ್ರಾಹ್ಮಣರನ್ನು ಇವರು ತಮ್ಮಲ್ಲಿಯ ಕಾರ್ಯಗಳಿಗೆ ಕರಿಯು ವರು, ವಿಧವೆಗಳ ಲಗ್ನ ಮಾಡುವರು, ಮದ್ಯ ಮಾಂಸ ತಕ್ಕೊಳ್ಳುವರು, ಹೆಣಗಳನ್ನು ಹುಗಿಯುವರು. ಗಂಡಸರ ಉಡಿಗೆ ಲಂಗೋಟ, ಹೆಂಗಸರು ಕುಬ್ಬಸ ಹಾಕುವದಿಲ್ಲ, ಕುಂಕುಮ ಹಚ್ಚುವರು. ಭಿಕ್ಷೆಯೇ ಇವರ ಜೀವನವು.

**ಕಾನಫಾಟಿಗಳು.**

ಕಾನಫಾಟೆಗಳು.— ಇವರು ತೋರಿಕೆಯಲ್ಲಿ ಕುಣಬಿಗಳ ಹಾಗೆ ಕಾಣುವರು; ಜನ್ಮಭಾಷೆ ಮರಾಠಿ. ಇವರಲ್ಲಿ ಕೆಲವರು ಲಗ್ನ ಮಾಡಿ ಕೊಂಡು ಮನೆ ಮಾಡಿ ಕೊಂಡು, ವೊಕ್ಕಲತನ ಮುಂತಾದ ಹೋರೆಗಳನ್ನು ಮಾಡುವರು; ಉಳಿ ದವರು ಭಿಕ್ಷೆ ಬೇಡುತ್ತ ತಿರುಗುವರು. ಇವರ ಸ್ಥಿತಿ ರೀತಿಗಳು ವಾಡಿಕೆಯಾಗಿ ಜೋಗಿಗಳಂತೆ ಇರುತ್ತವೆ.

**ಕಾಬಾಲಿಗಾರರು.**

ಕಾಬಾಲಿಗಾರರು.— ಇವರು ಭಿಕ್ಷೆ ಬೇಡುವ ಕಬ್ಬಲಿಗೇರೆಂದು ತೋರುತ್ತದೆ. ಇವರ ಸ್ಥಿತಿ ರೀತಿಗಳೆಲ್ಲ ಕಬ್ಬಲಿಗೇರಂತೆ ಇರುತ್ತವೆ; ಆದರೆ ಮನೆಯಲ್ಲಿ ತೆಲಗು ಮಾತಾ ಡುವರು, ಗಂಡಸರು ಬಹುತರ ಲಂಗೋಟಿಯ ಹಾಕುವರು. ಇವರು ಭಿಕ್ಷೆಗೆ ಹೊರಡುವಾಗ ಬಲಗೈಯಲ್ಲಿ ಕಬ್ಬಿಣದ ಉಸು ಲು ಬಳೆಯನ್ನೂ ಯೆಡ ರಟ್ಟೆರಲ್ಲಿ ಕಬ್ಬಿಣದ್ದೇ ವೊಂದು ಬಳೆಯನ್ನೂ ಹಾಕಿ ಕೊಂಡು, ಮೈಗೆ ಮನುಷ್ಯರ ಕೂದಲಿನ ಹಗ್ಗ ಸುತ್ತಿ ಕೊಂಡು, ಕಣ್ಣುಗಳಿಗೂ ಹಣೆಗೂ ಕ್ಯಾವಿ ಯ ಹಚ್ಚಿ ಕೊಂಡು ಹೆಗಲಿಗೆ ಜೋಳಿಗೇ ಹಾಕಿ ಕೊಂಡು ಹೊರಡುವರು. ಯಾರಾದ ರೂ ಭಿಕ್ಷೆ ಹಾಕದಿದ್ದರೆ, ಚೂರಿಯಿಂದ ತಮ್ಮ ಮೈಯ ರಕ್ತವನ್ನು ತೆಗಿದು ಜೀವ ಕೊಡು ವಂತೆ ಮಾಡಿ ಹೆದರಿಸುವರು. ಇವರು ಬ್ರಾಹ್ಮಣರಿಗೆ ಮಾನ ಕೊಡುವದಿಲ್ಲ; ತಮ್ಮ

ಲ್ಲಿಯ ಕಾರ್ಯಗಳನ್ನು ತಾವೇ ಮಾಡಿಕೊಳ್ಳುವರು. ಇವರ ಗುರು ಹಂಪಿಯಲ್ಲಿ ಇರುತ್ತಾನೆ. ಯಾವತ್ತು ಲಗ್ನಗಳು ಆ ಗುರುವಿನ ಸಮಕ್ಷ ಆಗುವವು. ಹೆಣಗಳನ್ನು ಹುಗಿಯುವರು. ಇವರು ಧಾರವಾಡ ಜಿಲ್ಲೆಯಲ್ಲಿ ಇರುತ್ತಾರೆ.

**ಪಿಚಾಟಗಳು.**

ಪಿಚಾಟಗಳು.— ಇವರು ಬೆಳಗಾವೀ ಜಿಲ್ಲೆಯಲ್ಲಿ ಇರುತ್ತಾರೆ. ಇವರ ಜನ್ಮಭಾಷೆ ಮರಾಠಿ; ಸ್ಥಿತಿ ರೀತಿಗಳೆಲ್ಲ ವಾಡಿಕೆಯಾಗಿ ಕುಣಬಿಗಳಂತೆ ಇರುತ್ತವೆ. ಗಂಡಸರೂ ಹೆಂಗಸರೂ ಭಿಕ್ಷೆ ಬೇಡುತ್ತ ತಿರುಗುವರು.

**ವಾಸುದೇವರು.**

ವಾಸುದೇವರು.— ಇವರ ಜನ್ಮಭಾಷೆ ಮರಾಠಿ; ಊಟ, ಉಡಿಗೆ, ನಡಾವಳಿ, ಮುಂತಾದವುಗಳು ಆರೇರಂತೆ ಇರುತ್ತವೆ. ಹೆಂಗಸರು ಕುಂಕುಮ ಹಚ್ಚುವರು. ಇವರಲ್ಲಿ ಸ್ವಲ್ಪ ಜನರು ಲಗ್ನ ಮಾಡಿಕೊಳ್ಳುವರು. ಉಳಿದವರು ಭಿಕ್ಷೆ ಬೇಡುತ್ತ ಊರೂರು ತಿರುಗುವರು. ಇವರ ಭಿಕ್ಷೆಯ ಪೋಷಾಗು ಹ್ಯಾಗಂದರೆ— ತಲೆಗೆ ನವಿಲ ಗರಿಯ ಟೊಪ್ಪಿಗೆ, ಯೆಡಗೈಯಲ್ಲಿ ಚಿಪಳಿ, ಬಲಗೈಯಲ್ಲಿ ತಾಳ, ಕಾಲಿಗೆ ಗೆಜ್ಜೆ, ಹೆಗಲ ಮೇಲೆ ಊದುವ ವಾದ್ಯ. ಇವರು ವಿಷ್ಣು ಭಕ್ತರು.

**ಬೈರಾಗಿಗಳು.**

ಬೈರಾಗಿಗಳು.— ಇವರು ಯೆಲ್ಲಿಯೂ ನೆಲೆ ಮಾಡಿ ಕೊಂಡು ನಿಲ್ಲುನದಿಲ್ಲ; ವಾಡಿಕೆಯಾಗಿ ಹಿಂದುಸ್ತಾನೀ ಭಾಷೆಯನ್ನಾಡುತ್ತಿರುತ್ತಾರೆ. ಜಟೆಯನ್ನು ಬೆಳಿಸುವವರೇ ಬಹಳ; ಮೂರು ನಾಮಗಳನ್ನು ಹಚ್ಚುವರು; ತೀರ್ಥ ಯಾತ್ರೆಯನ್ನು ಮಾಡುತ್ತಾ ತಿರುಗುವರು.

**ಹೆಳವರು.**

ಹೆಳವರು.— ಇವರು ಕನ್ನಡಿಗರು; ಪೂರ್ವದಲ್ಲಿ ನಿಜಲಿಂಗವಂತರಾಗಿದ್ದರೆಂದು ಹೇಳುತ್ತಾರೆ. ಈಗ್ಯೂ ಲಿಂಗವಂತರಂತೆ ತಲೆ ಬೋಳಿಸಿ ಕೊಳ್ಳುತ್ತಾರೆ; ವಿಭೂತಿ ಹಚ್ಚುವರು. ಆದರೆ ಮದ್ಯ ಮಾಂಸಗಳನ್ನು ತಕ್ಕೊಳ್ಳುವರು; ಯಾವ ಕಾರ್ಯಕ್ಕೂ ಜಂಗಮರನ್ನು ಕರಿಯುವದಿಲ್ಲ. ಇವರು ಬ್ರಾಹ್ಮಣರಿಗೆ ಮಾನ ಕೊಡುತ್ತಿದ್ದಾಗ್ಯೂ ಅವರನ್ನು ಸಹ ತಮ್ಮಲ್ಲಿಯ ಕಾರ್ಯಗಳಿಗೆ ಕರಿಯುವದಿಲ್ಲ. ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ, ಹೆಣಗಳನ್ನು ಹುಗಿಯುವರು. ಇವರ ಮೂಲ ಪುರುಷನು ನಿಜವಾಗಿ ಹೆಳವನಿದ್ದು ಯೆತ್ತಿನ ಮೇಲೆ ಕೂತು ಭಿಕ್ಷೆ ಬೇಡುತ್ತಿದ್ದನಂತೆ. ಅವನನ್ನು ಬಸವೇಶ್ವರನು ತನ್ನ ಶಿಷ್ಯರೊಳಗೆ ಶೇರಿಸಿ ಕೊಂಡು ಮುಂದಕ್ಕೆ ತಂದನೆಂದು ಹೇಳುತ್ತಾರೆ. ಈಗಿನ ಹೆಳವರಿಗೆ ಕಾಲು ಇದ್ದಾಗ್ಯೂ ಇವರು ಯೆತ್ತಿನ ಮೇಲೆ ಕೂತು ಮೈಯಲ್ಲ ಮುಚ್ಚಿ ಕೊಂಡು ಗಂಟೆ ಬಾರಿಸುತ್ತ ಬಾಗಿಲಲ್ಲಿ ನಿಂತು ಮನೆಯವರ ವಂಶಾವಳಿಯನ್ನು ಹೇಳಿ ಭಿಕ್ಷೆ ಬೇಡುವರು. ಊರೊಳಗೆ ಯೆತ್ತಿನ ಮೇಲೆ ಕೂತು ತಿರುಗಲಿಕ್ಕೆ ಇವರಿಗೆ ಯಾರು ಅಡ್ಡಿ ಮಾಡುವದಿಲ್ಲ. ಹೆಳವರಲ್ಲಿ ಕೆಲವರು ವೊಕ್ಕಲತನ ಮಾಡುತ್ತಾರೆ; ಭಿಕ್ಷೆ ಬೇಡುವವರು ಸಹ ಸುಗ್ಗಿಯಲ್ಲಿ ಕೂಲಿಗೆ ಹೋಗುತ್ತಾರೆ.

**ಸಾತಾನಿಗಳು.**

ಸಾತಾನಿಗಳು.— ಇವರಿಗೆ ಚಾಟಾಳಿಗಳೆಂತಲೂ, ಕದ್ರಿಗಳೆಂತಲೂ, ಸಮಗಿಗಳೆಂತಲೂ, ಸುರಗಿಗಳೆಂತಲೂ ಅನ್ನುವರು. ಇವರು ಚೈತನ್ಯ* ಪಂಥಿಗಳು; ಹಳದೀ ಬಣ್ಣದ ಮೂರು ನಾಮಗಳನ್ನು ಹಚ್ಚುವರು; ಯಾವ ಜಾತಿಯವರ ಮನೆಯಲ್ಲಿಯೂ ಉಣ್ಣುವದಿಲ್ಲ. ಸಾತಾನಿಗಳು ಹೊಲಿಯರ ಗುರುಗಳು. ಇವರು ಮಾರ್ಗದಲ್ಲಿ ಭೇಟಿಯಾದರೆ ಉತ್ತಮ ಕುಲದವರು ಅಪಶಕುನವೆಂದೆಣಿಸುತ್ತಾರೆ.

**ವಗ್ಗಯ್ಯಗಳು.**

ವಗ್ಗಯ್ಯಗಳು.— ರಾಣೇಬಿನ್ನೂರ ತಾಲೂಕಿನಲ್ಲಿ ಗುಡ್ಡ ಗುಡ್ಡಾಪುರವೆಂಬಲ್ಲಿ ಮೈಲಾರ ಲಿಂಗನ ಗುಡಿಯುಂಟು. ಆ ದೇವತೆಯ ಭಕ್ತರು ವಗ್ಗಯ್ಯಗಳೆಂಬ ಹೆಸರು ಧರಿಸುವರು. ಬ್ರಾಹ್ಮಣರಿಂದ ಹೊಲಿಯರ ವರೆಗೆ ಬೇಕಾದ ಜಾತಿಯವರು ವಗ್ಗಯ್ಯಗಳಾಗ ಬಹುದು. ಅವರ ಆಚರಣೆಗಳು ಅವರವರ ಜಾತಿ ರಿವಾಜಿನ ಪ್ರಕಾರ ಇರುವವು. ವಗ್ಗಯ್ಯನಾಗ ತಕ್ಕವನು ದೇವರ ಗುಡಿಗೆ ಹೋಗಿ ಪೂಜಾರಿಯ ಕೈಯಿಂದ ಭಂಡಾರ ತಕ್ಕೊಂಡು ದೇವರಿಗೆ ನಮಸ್ಕಾರ ಮಾಡಿ ಅದನ್ನು ಮೈಗೆ ಹಚ್ಚಿ ಕೊಂಡು, ವಗ್ಗಯ್ಯಗಳಂತೆ ಉಡಿಗೆ ಮುಂತಾದವುಗಳನ್ನು ಧರಿಸುವನು. ಅವು ಹ್ಯಾಗಂದರೆ, ಲಂಗೋಟ, ಹೆಗಲ ಮೇಲೆ ಕಂಬಳಿ, ತಲೆಗೆ ರುಮಾಲ, ಕೊರಳಲ್ಲಿ ಕವಡಿಯ ಸರ, ನಡುವಿಗೆ ಹುಲಿದೊಗಲಿನ ಮೇಲೆ ಗಂಟೆಗಳು, ಹೆಗಲಿಗೆ ಭಂಡಾರದ ಚೀಲು ಚಿಗರೇ ಚರ್ಮದ್ದು, ಕೈಯಲ್ಲಿ ಕಟ್ಟಿಗೆಯ ಭಿಕ್ಷಾ ಪಾತ್ರೆ. ಮೈಲಾರ ಲಿಂಗನ ದರ್ಶನಕ್ಕೆ ಹೋಗುವ ಯಾತ್ರಿಕರ ಮೇಲೆ ವಗ್ಗಯ್ಯಗಳು ನಾಯಿಗಳಂತೆ ಬೊಗಳಿ ಅವರ ಕೈಯಿಂದ ಭಿಕ್ಷೆ ತಕ್ಕೊಳ್ಳುವರು. ದಸರೆಯ ದಿವಸ ಮೈಲಾರ ಲಿಂಗನ (ಮಲ್ಲಾರಿಯ) ಉತ್ಸವವಾಗುತ್ತದೆ; ಆಗ ಬಹು ಜನ ಯಾತ್ರಿಕರು ಕೂಡುತ್ತಾರೆ. ಆ ಉತ್ಸವದಲ್ಲಿ ವಗ್ಗಯ್ಯಗಳು ಕೈಯಲ್ಲಿ ಲಡ್ಡು ತಕ್ಕೊಂಡು ಕುದುರೆಯ ಹಾಗೆ ಹೀಯಾಳಿಸುತ್ತ ಕುಣಿಯುತ್ತ ಲಡ್ಡುಗಳನ್ನು ಮೈಗೆ ಬಡಿದು ಕೊಳ್ಳುವರು; ನೆತ್ತರ ಹಾದರೆ ಮಲ್ಲಾರಿಯ ಹೆಸರಿನಿಂದ ಭಂಡಾರ ಹಚ್ಚುವರು. ಕೆಲ ವಗ್ಗಯ್ಯಗಳು ಗಡುತರಾದ ಸರ್ಪಣಿಯನ್ನು ಕಂಬಕ್ಕೆ ಗಟ್ಟಿಯಾಗಿ ಕೂಡ್ರಿಸಿ, ಅದನ್ನು ಕೊರಳಿಗೆ ಸುತ್ತಿಕೊಂಡು ಜೆಂಚಾಡಿಸಿ ಹರಿಯುವರು. ಗುಡ್ಡ ಗುಡ್ಡಾಪುರದಲ್ಲಿ ಕೆಲವರು ಹೊಲಿಯ ಜಾತಿಯ ವಗ್ಗಯ್ಯಗಳುಂಟು. ಅವರು ಬೊಟ್ಟು ಗಡುತರ ಕಬ್ಬಿಣದ ಸಲಾಕಿಯ ತುದಿಯನ್ನು ಹದ ಮಾಡಿ, ಉತ್ಸವದಲ್ಲಿ, ಆ ತುದಿಯನ್ನು ತಮ್ಮ ಹಿಮ್ಮಡಿಯ ಹಿಂದಿನ ನರದೊಳಗೆ ಚುಚ್ಚಿ ಸಲಾಕಿಯನ್ನು ಆ ತೂತಿನೊಳಗಿಂದ ಯೆಳಿದು ತೆಗಿಯುವರು; ಆ ಮೇಲೆ ಅದೇ ತೂತಿನೊಳಗೆ ಕಟ್ಟಿಗೆಯ ಗೂಟವನ್ನು ಹಾಸಿ ತೆಗಿದು, ತೂತಿಗೆ ಭಂಡಾರ ಹಾಕಿ ಅರಿವೆ ಸುತ್ತುವರು. ಈ ಬಗೆಯ ಕ್ರೂರ ಕರ್ಮಗಳನ್ನು ವಗ್ಗಯ್ಯಗಳು ಬಹಳವಾಗಿ ಮಾಡುವರು.

---

* ಚೈತನ್ಯನು ಬಂಗಾಲದಲ್ಲಿ ೧೬ನೇ ಶತಕದ ಆರಂಭದಲ್ಲಿ ಇದ್ದನು; ವೈಷ್ಣವ ಮತವನ್ನು ಜನರಿಗೆ ಬೋಧಿಸಿದನು. ಇವನ ಪಂಥದವರು ಬಂಗಾಲದಲ್ಲಿ ಬಹು ಜನರಿದ್ದಾರೆ.

## ನೀಚ ಜಾತಿಗಳು.

| | | ಧಾರವಾಡ. | | | ಬೆಳಗಾವಿ. | | | ವಿಜಾಪುರ. | | | ಕಾನಡಾ. | | |
|---|---|---|---|---|---|---|---|---|---|---|---|---|---|
| | | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. | ಗಂಡು. | ಹೆಣ್ಣು. | ಒಟ್ಟು. |
| ೧ | ಹೊಲಿಯರು.......... | ೫೫೬೧ | ೬೧೩೮ | ೧೧೯೯೯ | ೨೦೧೩೨ | ೨೧೬೦೮ | ೪೧೭೪೦ | ೯೨೭೩ | ೧೦೨೯೪ | ೧೯೫೬೭ | ೩೮೦ | ೩೧೬ | ೬೯೬ |
| ೨ | ಮಾದಿಗರು.......... | ೧೩೪೮೦ | ೧೪೧೩೨ | ೨೭೬೧೨ | ೮೦೫೯ | ೮೭೯೦ | ೧೬೮೪೯ | ೧೧೭೧೬ | ೧೩೧೫೦ | ೨೪೮೬೬ | ೪೨ | ೩೯ | ೮೧ |
| ೩ | ಢೋರರು.......... | ೧೧೪ | ೧೬೨ | ೨೭೬ | ೮೭೯ | ೮೩೮ | ೧೭೧೭ | ೪೮೬ | ೪೬೬ | ೯೫೨ | | | ೧೫೦ |
| ೪ | ಸಮ್ಮಗಾರರು.......... | ೧೩೯೨ | ೧೩೭೬ | ೨೭೬೮ | ೩೨೯೧ | ೩೧೬೩ | ೬೪೫೪ | ೧೮೭೮ | ೧೭೮೬ | ೩೬೬೪ | ೭೮೫ | ೬೮೮ | ೧೪೭೩ |
| ೫ | ಭಂಗಿಗಳು.......... | ೪೩ | ೪೧ | ೮೪ | ೬೪ | ೪೫ | ೧೦೯ | ,, | ,, | ,, | ೨೭ | ೯ | ೩೬ |
| ೬ | ಚಲವಾದಿಗಳು.......... | ,, | ,, | ,, | ೪೯ | ೫೮ | ೧೦೭ | ,, | ,, | ,, | ೯೭೮ | ೮೮೬ | ೧೮೬೪ |
| ೭ | ಕೊಟಿಗಾರರು.......... | ೫೮೯ | ೫೭೩ | ೧೧೬೨ | ,, | ,, | ,, | ,, | ,, | ,, | ೧೨೯ | ೭೯ | ೨೦೮ |
| ೮ | ಮಸಲರು.......... | ೧೫ | ೮ | ೨೩ | ,, | ,, | ,, | ,, | ,, | ,, | ,, | ,, | ,, |
| ೯ | ಆಗೇರು.......... | ,, | ,, | ,, | ,, | ,, | ,, | ,, | ,, | ,, | ೧೦೭೮ | ೧೦೪೦ | ೨೧೧೮ |
| ೧೦ | ಜಾಕದರು.......... | ,, | ,, | ,, | ,, | ,, | ,, | ,, | ,, | ,, | ೧೨೯ | ೧೩೩ | ೨೬೨ |
| ೧೧ | ಬುಟ್ಟಲರು.......... | ,, | ,, | ,, | ,, | ,, | ,, | ,, | ,, | ,, | ೭೬ | ೧೫ | ೯೧ |
| ೧೨ | ಹಸಳರು.......... | ,, | ,, | ,, | ,, | ,, | ,, | ,, | ,, | ,, | ೧೪೧೪ | ೧೨೧೫ | ೨೬೨೯ |
| ೧೩ | ಕೊರಗಾರರು.......... | ,, | ,, | ,, | ,, | ,, | ,, | ,, | ,, | ,, | ೧೧೬ | ೧೨೩ | ೨೩೯ |
| ೧೪ | ಕಂಗಾರಿಗಳು.......... | ,, | ,, | ,, | ,, | ,, | ,, | ,, | ,, | ,, | ೧೨೫ | ೧೨೦ | ೨೪೫ |
| ೧೫ | ಮುಕ್ರಿಗಳು.......... | ,, | ,, | ,, | ,, | ,, | ,, | ,, | ,, | ,, | ೨೫೦೩ | ೨೪೮೧ | ೪೯೮೪ |
| ೧೬ | ಹುಲಸಾರರು.......... | ,, | ,, | ,, | ,, | ,, | ,, | ,, | ,, | ,, | ೪೭೩೨ | ೩೯೮೧ | ೮೭೧೩ |

**ಹೊಲಿಯರು.**

ಹೊಲಿಯರು. — ಇವರಲ್ಲಿ ಕನ್ನಡಿಗರು, ತೆಲಗರು, ಮಹಾರಾಷ್ಟ್ರರು, ಯೆಂಬ ಮೂರು ವೊಳಭೇದಗಳಿರುತ್ತವೆ. ಕನ್ನಡಿಗರಿಗೂ ತೆಲಗರಿಗೂ ಶರೀರ ಸಂಬಂಧವಾಗುತ್ತದೆ. ಮರಾಠೀ ಹೊಲಿಯರಿಗೆ ಹುಲಸಾರರೆಂತಲೂ ಅನ್ನುತ್ತಾರೆ. ಹೊಲಿಯರು ಕಸುವಿನ ಮೈಕಟ್ಟಿನವರಾಗಿಯೂ ಕಪ್ಪು ಮೈಬಣ್ಣದವರಾಗಿಯೂ ಇರುತ್ತಾರೆ. ಇವರ ಉಡಿಗೆಗಳು ವಾಡಿಕೆಯಾಗಿ ವೊಕ್ಕಲಿಗರಂತೆ ಇರುತ್ತವೆ; ಕೆಲವರು ಲಂಗೋಟೀ ಹಾಕುವರು. ಹೊಲಿಯರು ಸತ್ತ ದನದ ಮಾಂಸವನ್ನು ಸಹ ತಿನ್ನುವರು; ಶರೆಯನ್ನು ಬಹಳ ಪ್ರೀತಿಯಿಂದ ಕುಡಿಯುವರು. ಉತ್ತಮ ಕುಲದವರು ಹೊಲಿಯರನ್ನು ಮುಟ್ಟಿಸಿಕೊಳ್ಳುವದಿಲ್ಲ; ಆದರೆ ಊರಿಗೆ ಹೊಲಿಯನಿರದಿದ್ದರೆ ಸಾಗುವದಿಲ್ಲ. ಇವರು ಊರು ಕಾಯುವರು, ಹೊಲಗಳ ಮೇರೆಗಳನ್ನು ಗೊತ್ತು ಮಾಡುವರು, ಸರಕಾರೀ ಹಣವನ್ನು ವೊಯ್ಯುವರು, ಪರಸ್ಥರಿಗೆ ದಾರೀ ತೋರಿಸುವರು, ಸತ್ತ ದನಗಳನ್ನು ವೊಯ್ಯುವರು, ಸರಕಾರೀ ಚಾವಡಿಗಳನ್ನು ಉಡುಗುವರು, ಸಮಾರಂಭಗಳಲ್ಲಿ ಹಲಿಗೆಗಳನ್ನು ಬಾರಿಸುವರು, ಕೊಂಬು ಕಹಳೆಗಳನ್ನು ಊದುವರು. ರೈತರಿಗೆ ಕೆರವು, ಮಿಣಿ, ಬಾರು, ಮುಂತಾದ ತೊಗಲಿನ ಸಾಮಾನುಗಳನ್ನು ಮಾಡಿ ಕೊಡುವರು. ಇಷ್ಟು ಕೆಲಸಗಳನ್ನು ಹೊಲಿಯರು ಹಳ್ಳಿಗಳಲ್ಲಿ ಮಾಡುವದಲ್ಲದೆ ಅವರಲ್ಲಿ ಕೆಲವರು ವೊಕ್ಕಲತನ ಮಾಡುವರು, ಕೆಲವರು ಉರುಟು ಬಟ್ಟೆಗಳನ್ನು ನೆಯ್ಯುವರು, ಕೆಲವರು ಕೂಲಿಗೆ ಹೋಗುವರು. ಸರಕಾರೀ ದಂಡಿನಲ್ಲಿಯೂ ಪೋಲೀಸ ಖಾತೆಯಲ್ಲಿಯೂ ಬಹು ಜನ ಹೊಲಿಯರು ಶಿಪಾಯಿಗಳಾಗಿದ್ದಾರೆ. ಆದರೂ ಇವರ ಬಡತನ ಹಿಂಗುವದಿಲ್ಲ; ಇವರಲ್ಲಿ ಧೈವುಳ್ಳವರನ್ನು ಕಾಣುವದು ಬಹು ದುರ್ಲಭವು. ಶರೆಗೂ ಲಗ್ನ ಕಾರ್ಯಕ್ಕೂ ಇವರು ಸಂಪಾದಿಸಿದ ಹಣವೆಲ್ಲ ಹಾಳಾಗಿ ಹೋಗುತ್ತವೆ. ಮಾದಿಗರು, ಸಮ್ಮಗಾರರು, ಢೋರರು, ಇವರಲ್ಲಿ ಹೊಲಿಯರು ಉಣ್ಣುವದಿಲ್ಲ. ಇವರ ಕುಲದೇವತೆಗಳು ದುರಗಮ್ಮ, ಮರಗಮ್ಮ, ಯೆಲ್ಲಮ್ಮ; ಇವರ ಗುರು ಕೊಲ್ಲಾಪುರದಲ್ಲಿ ಇರುತ್ತಾನೆ. ಯೆಲ್ಲಮ್ಮನ ಹರಿಕೆಯನ್ನು ಹೊತ್ತವರಾದ ಹೊಲಿಯರ ಹೆಂಗಸರು ಬೇವಿನ ಹುಟ್ಟಿಗೆಯನ್ನು ಉಟ್ಟು ಕೊಂಡು ಮನೆಯಿಂದ ಯೆಲ್ಲಮ್ಮನ ಗುಡ್ಡಕ್ಕೆ ಹೋಗುವರು; ಅವರು ಬತ್ತಲೆಯಾಗಿ ಬೇವಿನ ಯೆಲೆಗಳಿಂದ ಮೈಯನ್ನು ಮುಚ್ಚಿ ಕೊಳ್ಳುವರು. ಹುಟ್ಟಿಗೆಯ ನಡಾವಳಿಯು ಉತ್ತಮ ಜಾತಿಗಳಲ್ಲಿಯೂ ಇರುತ್ತದೆ. ಹೊಲಿಯರು ಬಹುತರ ನಿತ್ಯ ಸ್ನಾನ ಮಾಡುವರು, ಲಗ್ನ ಮುಂತಾದ ಶುಭ ಕಾರ್ಯಗಳಿಗಾಗಿ ಬ್ರಾಹ್ಮಣರ ಕೈಯಿಂದ ಮುಹೂರ್ತಗಳನ್ನು ತೆಗಿಸಿ ಕೊಳ್ಳುವರು. ಆದರೆ ಬ್ರಾಹ್ಮಣರು ಅವರ ಮನೆಗೆ ಹೋಗುವದಿಲ್ಲ. ಲಗ್ನದಲ್ಲಿ ಅಕ್ಕೀಕಾಳು ಬೀಳುವಾಗ ಮದಿಮಗಳು ಕಲ್ಲಿನ ಮೇಲೆ ನಿಲ್ಲುವಳು; ಮದಿಮಗನನ್ನು ಜೋಳದ ಬುಟ್ಟಿಯಲ್ಲಿ ಬಾರಿನ ತುಂಡುಗಳನ್ನೂ ವೊಂದು ಬಾರಕೋಲನ್ನೂ ಚಲ್ಲಿ ಅದರೊಳಗೆ ನಿಲ್ಲಿಸುವರು. ಮೆರುವಣಿಗೆಯಲ್ಲಿ ಯೆತ್ತಿನ ಮೇಲೆ ಮದಿಮಕ್ಕಳನ್ನು ಕೂಡ್ರಿಸಿ ಕೊಂಡು ಹನುಮಂತ ದೇವರಿಗೆ ಹೋಗುವರು. ಹೊಲಿಯರು ಹೆಣಗಳನ್ನು ಹುಗಿಯುತ್ತಾರೆ; ಗೋರಿಯಲ್ಲಿ ಅಡ್ಡ ಬದಿಗೆ ವೊಂದು ಗೂಡಿನ ಹಾಗೆ ವೊಳ್ಳು ಮಾಡಿ ಅದ

ರೊಳಗೆ ಹೆಣಗಳನ್ನು ಕೂಡ್ರಿಸಿ, ಮೊದಲು ಅದನ್ನು ಹಸೆಯ ತೊಪ್ಪಲದಿಂದ ಮುಚ್ಚಿ ಮೇಲೆ ಮಣ್ಣು ಮುಚ್ಚುವರು. ಮೂರನೇ ದಿವಸ ಮೊಸರು ಅನ್ನದ ಕಾಕಪಿಂಡವನ್ನು ಮಾಡಿ ಕಾಗೆಗಳಿಗೆ ಕೊಡುವರು, ಹತ್ತು ದಿವಸ ಸೂತಕ ಹಿಡಿಯುವರು. ಹೊಲಿಯರಲ್ಲಿ ಹೆಣ್ಣು ಮಕ್ಕಳ ಲಗ್ನವು ೧೦ ವರ್ಷದೊಳಗೆ ಆಗುತ್ತದೆ; ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ. ಹೊಲಿಯರ ಹೆಂಗಸು ಹಾದರ ಮಾಡಿದರೆ, ಆಕೆಯ ತಲೆ ಬೋಳಿಸಿ, ನಾಲಿಗೆಯನ್ನು ಕಾದ ಕಬ್ಬಿಣದಿಂದ ಸುಟ್ಟಂತೆ ಸಂಸ್ಕಾರ ಮಾಡುವರು. ಇವರಲ್ಲಿ ಯಾರಿಗಾದರೂ ಯೆಲ್ಲ ಹೆಣ್ಣು ಮಕ್ಕಳೇ ಆದರೆ, ಆ ಮಕ್ಕಳಲ್ಲಿ ವೊಬ್ಬಳನ್ನು ಲಗ್ನ ಮಾಡದೆ ಸೂಳೆತನಕ್ಕೆ ಬಿಡುವರು. ಆಕೆಯೇ ತಂದೆಯ ಆಸ್ತಿಗೆ ಬಾಧ್ಯಳಾಗುತ್ತಾಳೆ. ಹೊಲಿಯರ ಮಕ್ಕಳು ಬಹುತರ ಶಾಲೆಗೆ ಹೋಗುವದಿಲ್ಲ. ಆದರೆ ಹಲಕೆಲವು ಕಡೆಯಲ್ಲಿ ಹೊಲಿಯರಿಗಾಗಿ ಬೇರೆ ಶಾಲೆಗಳನ್ನು ಸರಕಾರದವರು ಇಟ್ಟಿದ್ದಾರೆ. ಅವುಗಳಲ್ಲಿ ಹೊಲಿಯರ ಹೆಣ್ಣು ಮಕ್ಕಳು ಸಹ ಕಲಿಯುವರು.

ಉತ್ತಮ ಕುಲದವರು ತಮ್ಮ ಹೆಣಗಳನ್ನು ಸುಡುವಾಗೂ ಹುಗಿಯುವಾಗೂ ಹೊಲಿಯರಿಗೆ ಭೂಮಿಯ ತೆರಿಗೆ ಕೊಡುತ್ತಾರೆ; ಭೂಮಿಯ ಮೇರೆಗಳ ವ್ಯಾಜ್ಯದಲ್ಲಿ ಹೊಲಿಯರ ಸಾಕ್ಷಿಗೆ ಬಹಳ ಬೆಲೆ ಇರುತ್ತದೆ; ಹೊಲಗಳಲ್ಲಿ ರಾಶಿಯಾಗುವಾಗ ರೈತರು ಹೊಲಿಯರನ್ನು ಸಂತೋಷ ಪಡಿಸಲಿಕ್ಕೆ ಬೇಕು; ಗ್ರಾಮ ದೇವತೆಯ ಉತ್ಸವದಲ್ಲಿ ಹೊಲಿಯನೇ ಮುಖ್ಯ ಮನುಷ್ಯನಾಗಿರುತ್ತಾನೆ, ಅವನೇ ಕೋಣನನ್ನು ಕಡಿದು ದೇವತೆಗೆ ಅರ್ಪಿಸಿ, ಅದರ ತಲೆಯನ್ನು ಬುಟ್ಟಿಯೊಳಗಿಟ್ಟುಕೊಂಡು ಊರ ಮೇರೆ ಗುಂಟ ಪ್ರದಕ್ಷಿಣೇ ಮಾಡಿ ಬರುತ್ತಾನೆ; ಊರುತನದ ಕೆಲಸವು ಹೊಲಿಯನಿಲ್ಲದೆ ಸಾಗುವದಿಲ್ಲ. ಈ ಯಾವತ್ತೂ ಕಾರಣಗಳಿಂದ ಆರಂಭದಲ್ಲಿ ಈ ಶೀಮೆಯಲ್ಲಿ ಭೂಮಿಯ ವೊಡೆಯರು ಹೊಲಿಯರೇ ಇದ್ದರೆಂಪು ಕೆಲವರು ಊಹಿಸುತ್ತಾರೆ. ಬುನಾದಿಯಲ್ಲಿ ಹೊಲಿಯರು ದಂಡಾಳುತನದ ಹೋರೆಯನ್ನು ಮಾಡುತ್ತಿದ್ದರೆಂತಲೂ ಕೆಲವರ ಮತವದೆ. "ಹೊಲ್" ಅಥವಾ "ಪೊಲ್" ಯೆಂಬ ದ್ರವಿಡ ಶಬ್ದದ ಅರ್ಥವು ಹೊಲಸು, ಮೈಲು, ಯೆಂದು ಆಗುತ್ತದೆ. ಆದರೆ ಈ ಶಬ್ದವು ಬುನಾದಿಯಲ್ಲಿ ಭೂಮಿವಾಚಕವಿತ್ತೆಂದು ಕೆಲವರು ವಾದಿಸುವರು.

**ಮಾದಿಗರು.**

ಮಾದಿಗರು.— ಇವರೊಳಗೆ ದಾಖ್ಯ, ಮೋಚಿ, ಪೆಡ, ಸನಾದಿ, ಯೆಂಬ ನಾಲ್ಕು ಕುಲಗಳಿರುತ್ತವೆ; ಅವರವರೊಳಗೆ ಊಟದ ಬಳಿಕೆಯಾಗುತ್ತದೆ, ಶರೀರ ಸಂಬಂಧವಾಗುವದಿಲ್ಲ. ದಾಖ್ಯ ಮಾದಿಗರು ವೊಪ್ಪೆತ್ತಿನ ಲಂಬಾಡಿಗಳ ಸಂಗಡ ತಿರುಗುವರು; ಅವರಿಗೆ ಜೋಡುಗಳನ್ನು ಮಾಡಿ ಕೊಡುವರು. ಅವರ ಯೆತ್ತುಗಳ ಮುಂದೆ ಹಲಿಗೆಗಳನ್ನು ಬಾರಿಸುವರು. ಮೋಚೀ ಮಾದಿಗರು ಕೆರವು, ಮಿಣಿ, ಮುಂತಾದ ಚರ್ಮದ ಸಾಮಾನುಗಳನ್ನು ಮಾಡಿ ಮಾರುವರು. ಪೆಡ ಮಾದಿಗರು ಊರು ಕಾಯುವರು, ಪರಸ್ಥರ ಚಾಕರಿಯನ್ನು ಮಾಡುವರು, ಚಾವಡೀ ಉಡುಗುವರು. ಸನಾದೀ ಮಾದಿಗರು ತಮ್ಮ ಜಾತಿಯಲ್ಲಿ ಲಗ್ನ ಮುಂತಾದ ಕಾರ್ಯಗಳಲ್ಲಿ ಸನಾದಿಯನ್ನು ಊದುವರು. ಮಾದಿಗರು ಪೂರ್ವದಲ್ಲಿ ಸತ್ತ ದನಗಳನ್ನು

ವೊಯ್ದು, ಅವುಗಳ ಚರ್ಮ ಸುಲಿದು ಮಾಂಸ ತಿನ್ನುತ್ತಿದ್ದರು. ಆದರೆ ಈಗ ಈ ಕೆಲಸವನ್ನು ಮಾದಿಗರು ಮಾಡುವದಿಲ್ಲ. ಇಂಗ್ಲಿಷ ಸರಕಾರದ ಪೂರ್ವದಲ್ಲಿ ಮಾದಿಗರು ದಾರಿಕಾರರನ್ನು ಸುಲಿಯುವರು. ಇವರು ಭಂಗೀ ಜಾತಿಯವರಲ್ಲಿ ಮಾತ್ರ ಉಣ್ಣುವದಿಲ್ಲ, ಮಿಕ್ಕಾದ ಯಾವತ್ತು ಜಾತಿಗಳ ಅನ್ನ ತಕ್ಕೊಳ್ಳುವರು. ಇವರ ಉಡಿಗೆ, ಆಹಾರ, ಆಚಾರ, ಧರ್ಮ ಮುಂತಾದವುಗಳೆಲ್ಲ ಹೊಲಿಯರಂತೆ ಇರುತ್ತವೆ.

ಮಾದಿಗರೊಳಗೆ ಅಸಾದರೆಂಬದೊಂದು ವೊಳಭೇದವಿರುತ್ತದೆ. ದ್ಯಾಮವ್ವನ ಜಾತ್ರೆಯಲ್ಲಿ ಅಸಾದರ ಹೆಂಗಸರೂ ಗಂಡಸರೂ ದ್ಯಾಮವ್ವನಿಗೆ ಬಾಯಿಗೆ ಬಂದ ಹಾಗೆ ಬೈಯುತ್ತ ಕುಣಿಯುವರು. ಒಬ್ಬ ಹೊಲಿಯನು ತನ್ನ ಜಾತಿಯನ್ನು ಮುಚ್ಚಿ ಕೊಂಡು ದ್ಯಾಮವ್ವನನ್ನು ಲಗ್ನ ಮಾಡಿಕೊಂಡಿದ್ದನಂತೆ. ದ್ಯಾಮವ್ವನಿಗೆ ಅವನು ಹೊಲಿಯನೆಂದು ತಿಳಿದ ಕೂಡಲೆ ಆಕೆ ಅವನನ್ನು ಕೊಂದು ಹಾಕಿದ್ದರಿಂದ ಆಕೆಯ ಜಾತ್ರೆಯಲ್ಲಿ ಮಾದಿಗರು ಆಕೆಗೆ ಬೈಯುತ್ತಾರೆಂದು ಹೇಳುತ್ತಾರೆ.

**ಢೋರರು.**—ಇವರಲ್ಲಿ ಕನ್ನಡಿಗರು, ಮಹಾರಾಷ್ಟ್ರರು, ಹಿಂದುಸ್ತಾನೀ, ಯೆಂಬ ದೇಶ ಭೇದದ ವೊಳಜಾತಿಗಳಿರುತ್ತವೆ; ಅವರವರೊಳಗೆ ಊಟದ ಬಳಿಕೆಯಾಗುವದಿಲ್ಲ.

**ಢೋರರು.**

ಇವರು ಸತ್ತ ದನಗಳನ್ನು ತಿನ್ನುವದಿಲ್ಲ; ಆದರೆ ಮದ್ಯ ಮಾಂಸಗಳನ್ನು ನಿರಾತಂಕವಾಗಿ ತಕ್ಕೊಳ್ಳುವರು. ಹಿಂದುಸ್ತಾನೀ ಢೋರರು ಹಂದಿಯ ಮಾಂಸ ತಕ್ಕೊಳ್ಳುವದಿಲ್ಲ. ಇವರು ಮೊದಲು ಮುಸಲ್ಮಾನರಿದ್ದರೆಂದು ಹೇಳುತ್ತಾರೆ. ಢೋರರು ಯೆಲ್ಲಮ್ಮ, ಹನುಮಂತ ಮುಂತಾದ ದೇವತೆಗಳಿಗೆ ನಡಕೊಳ್ಳುತ್ತಿದ್ದಾಗ್ಯೂ ಲಿಂಗವಂತ ಮಠಪತಿಯು ಯೆಂಟು ದಿವಸಕ್ಕೊಮ್ಮೆ ಇವರ ಮನೆಗೆ ಹೋಗಿ ಇವರ ಹಣೆಗೆ ವಿಭೂತಿ ಹಚ್ಚಿ ಬರುತ್ತಾನೆ. ಲಗ್ನದಲ್ಲಿ ಮಠಪತಿಯೇ ಮದಿಮಗಳಿಗೆ ಮಂಗಳಸೂತ್ರ ಕಟ್ಟುವನು. ಹೆಣವನ್ನು ಹೂಣಿಯುವ ಪೂರ್ವದಲ್ಲಿ ಮಠಪತಿಯು ತನ್ನ ಕಾಲು ಹೆಣದ ತಲೆಯ ಮೇಲೆ ಇಡಲಿಕ್ಕೆ ಬೇಕು. ಆದರೆ ಢೋರರು ಬ್ರಾಹ್ಮಣರಿಗೂ ಮಾನ ಕೊಡುತ್ತಾರೆ; ಲಗ್ನ ಮುಂತಾದ ಕಾರ್ಯಗಳಿಗಾಗಿ ಮುಹೂರ್ತಗಳನ್ನು ಬ್ರಾಹ್ಮಣರ ಕೈಯಿಂದ ತೆಗಿಸಿ ಕೊಳ್ಳುವರು. ಚರ್ಮಕ್ಕೆ ಕರೆ ಹಾಸುವದೇ ಢೋರರ ಮುಖ್ಯ ಹೋರೆಯು. ಒಂದು ರಂಜಣಿಗೆಯಲ್ಲಿ ನೀರು ಹಾಕಿ, ಅದರೊಳಗೆ ಹೊನ್ನವರೆಯ ತೋಟೆಯನ್ನು ವೊಂದೆರಡು ದಿವಸ ಹಾಕಿ ಇಡುವರು. ಬಳಿಕ ಆ ತೋಟೆಯನ್ನು ತೆಗಿದು, ರಂಜಣಗೆಯೊಳಗೆ ಚರ್ಮಗಳನ್ನು ಮುಳುಗಿಸಿಡುವರು. ಆ ಚರ್ಮಗಳು ನಸುಗೆಂಪು ವರ್ಣದವಾದ ಬಳಿಕ ಅವನ್ನು ತೊಳಿದು ಬಣ್ಣ ಕೊಡುವರು. ಢೋರರ ಮನೆಯ ಹಿತ್ತಲಲ್ಲಿ ಆ ರಂಜಣಿಗೆ ಇರುತ್ತದೆ. ಇದಲ್ಲದೆ ಢೋರರು ಹರಗೋಲು, ಮಟ್ಟಿ, ಪಕಾಲಿ, ತೊಗಲಿನ ಬುದ್ದಲಿ, ಕುದುರೆಯ ತೋಬರಿ, ಲಗಾಮು, ಜೀನು, ಮುಂತಾದ ತೊಗಲಿನ ಸಾಮಾನುಗಳನ್ನು ಮಾಡುವರು; ಚರ್ಮವನ್ನು ಹೊಲಿಯರ ಬಳಿಯಲ್ಲಿ ಕೊಳ್ಳುವರು. ಢೋರರ ಹೆಂಗಸರು ಚರ್ಮದ ಕೆಲಸಗಳಲ್ಲಿ ಗಂಡಸರಿಗೆ ನೆರವಾಗುವದಿಲ್ಲ. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಸಮ್ಮಗಾರರು.**

ಸಮ್ಮಗಾರರು. — ಚರ್ಮಕಾರರೆಂಬ ಸಂಸ್ಕೃತ ಶಬ್ದದಿಂದ ಈ ಹೆಸರು ಹುಟ್ಟಿರುತ್ತದೆ. ಸಮ್ಮಗಾರರಲ್ಲಿ ಕನ್ನಡಿಗರು, ಮಹಾರಾಷ್ಟ್ರರು, ಕೊಂಕಣಿಗರು, ಯೆಂಬ ಮೂರು ವರ್ಗಗಳಿವೆ. ಕನ್ನಡಿಗರು ಲಿಂಗವಂತರು. ಮಹಾರಾಷ್ಟ್ರರಿಗೂ ಕೊಂಕಣಿಗರಿಗೂ, ಶರೀರ ಸಂಬಂಧವಾಗುತ್ತದೆ. ಸಮ್ಮಗಾರರು ರೂಪದಿಂದ ವೊಕ್ಕಲಿಗರಿಗಿಂತ ಚಲುವರು. ಪದ್ಮಿನಿ ಯೆಂಬ ಉತ್ತಮ ಪ್ರತಿಯ ಸ್ತ್ರೀಯು ಸಮ್ಮಗಾರರಲ್ಲಿ ಹುಟ್ಟುತ್ತಾಳೆಂದು ಜನರ ನಂಬಿಗೆಯುಂಟು. ಅದರಂತೆ ಸಮ್ಮಗಾರರ ಹೆಂಗಸರೂ ಹುಡುಗರೂ ಸುರೂಪಿಗಳಾಗಿರುವರು. ಲಿಂಗವಂತ ಸಮ್ಮಗಾರರು ಲಿಂಗ ಕಟ್ಟಿ ಕೊಂಡು ಲಿಂಗವಂತರಂತೆ ಯಾವತ್ತು ಆಚರಣೆಗಳನ್ನು ಮಾಡುವರು; ಮದ್ಯ ಮಾಂಸಗಳನ್ನು ತಕ್ಕೊಳ್ಳುವದಿಲ್ಲ. ಮಹಾರಾಷ್ಟ್ರರೂ ಕೊಂಕಣಿಗರೂ ಮದ್ಯ ಮಾಂಸಗಳನ್ನು ನಿರಾತಂಕವಾಗಿ ತಕ್ಕೊಳ್ಳುವರು. ಲಿಂಗವಂತರು ಹರಳೆಯ್ಯನೆಂಬ ಬಸವೇಶ್ವರನ ಮೊದಲನೇ ಶಿಷ್ಯನಾದ ಸಮ್ಮಗಾರನ ವಂಶದವರೆಂದು ಹೇಳುತ್ತಾರೆ; ಇವರು ಜಳಕ ಮಾಡಿದ ಮೇಲೆ ಚರ್ಮದ ಕೆಲಸ ಮಾಡುವದಿಲ್ಲ. ಹಳೆ ಮೊಚ್ಚೆಗಳನ್ನು ಹೊಲಿಯುವದಿಲ್ಲ. ಕುರಿ ಚರ್ಮವನ್ನು ಮಿದು ಮಾಡಿ ಕೊಂಡು ಅದಕ್ಕೆ ಬಣ್ಣ ಕೊಟ್ಟು ಅದರ ಜೋಡುಗಳನ್ನು ಹೊಲಿಯುವದೇ ಸಮ್ಮಗಾರರ ಮುಖ್ಯ ಹೋರೆಯು. ಲಿಂಗವಂತರ ಹೊರ್ತು ಉಳಿದವರು ಹಳೆ ಜೋಡುಗಳನ್ನು ಹೊಲಿದು ಗಟ್ಟಿ ಮಾಡಿ ಕೊಡುವರು. ಸಮ್ಮಗಾರರು ಜೀನಗಾರರ ಹಳೆ ಜೋಡುಗಳನ್ನು ಮುಟ್ಟುವದಿಲ್ಲ, ಅವರ ಅನ್ನವನ್ನೂ ತಕ್ಕೊಳ್ಳುವದಿಲ್ಲ; ಜೀನಗಾರರಿಗಿಂತ ತಾವು ಶ್ರೇಷ್ಠರೆಂದು ಹೇಳುತ್ತಾರೆ. ಸಮ್ಮಗಾರರ ಮನೆಯಲ್ಲಿ ಬಹುತರ ತುಳಸೀ ಗಿಡವಿರುತ್ತದೆ. ಇವರಲ್ಲಿ ವಿಧವೆಗಳ ಲಗ್ನವಾಗುವದಿಲ್ಲ. ಮಹಾರಾಷ್ಟ್ರರೂ ಕೊಂಕಣಿಗರೂ ಹೆಣಗಳನ್ನು ಸುಡುವರು, ಇಲ್ಲವೆ ಹುಗಿಯುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಭಂಗಿಗಳು.**

ಭಂಗಿಗಳು ಅಥವಾ ಹಲಾಲಖೋರರು. — ಇವರು ಉತ್ತರ ಹಿಂದುಸ್ತಾನದಿಂದ ಬಂದವರು, ಹಿಂದುಸ್ತಾನೀ ಭಾಷೆಯನ್ನಾಡುತ್ತಾರೆ. ಇವರಲ್ಲಿ ಕೆಲವರು ನೀಚ ಕುಲದ ಹಿಂದೂ ಜನರು, ಕೆಲವರು ನೀಚ ಕುಲದ ಮುಸಲ್ಮಾನರು ಇರುತ್ತಾರೆ. ಅವರು ತಮ್ಮ ತಮ್ಮ ಧರ್ಮದ ಪ್ರಕಾರ ಮನೆಯಲ್ಲಿ ವರ್ತಿಸುವರು. ಎರಡೂ ಜಾತಿಗಳ ಭಂಗಿಗಳು ವಿಧವೆಗಳ ಲಗ್ನ ಮಾಡುವರು, ಹೆಣಗಳನ್ನು ಹುಗಿಯುವರು, ಮಕ್ಕಳನ್ನು ಶಾಲೆಗೆ ಕಳಿಸುವದಿಲ್ಲ. ಭಂಗಿಗಳು ಪಾಯಖಾನೆಗಳಲ್ಲಿಯ ಮಲವನ್ನು ತೆಗಿದು ಸ್ವಚ್ಛ ಮಾಡುವರು, ಗಟಾರುಗಳನ್ನೂ ಓಣಿಗಳನ್ನೂ ಉಡುಗುವರು. ಮೂವತ್ತೈದು ವರ್ಷದ ಪೂರ್ವದಲ್ಲಿ ಈ ಶೀಮೆಯಲ್ಲಿ ಭಂಗಿಗಳು ಬಹುತರ ಇದ್ದಿಲ್ಲ. ಇತ್ತ ಕಡೆಯಲ್ಲಿ ಮ್ಯುನಸಿಪಾಲಿಟಿಗಳಲ್ಲಿ ಇವರಿಗೆ ಕೆಲಸ ದೊರಿಯ ಹತ್ತಿದ್ದರಿಂದ ಇವರು ಉತ್ತರದಿಂದ ಬರ ಹತ್ತಿದ್ದಾರೆ.

ಚಲವಾದಿಗಳು. — ಇವರು ಲಿಂಗವಂತ ಧರ್ಮವನ್ನು ಸ್ವೀಕರಿಸಿದ ಹೊಲಿಯರು. ಆದರೆ ಇವರು ಚರ್ಮವನ್ನು ಮುಟ್ಟುವದಿಲ್ಲ, ಹೊಲಿಯರೊಳಗೆ ಯೆಷ್ಟು

ಮಾತ್ರವೂ ಕೂಡುವದಿಲ್ಲ. ಇವರ ಉಡಿಗೆಗಳೂ ಯಾವತ್ತು ಆಚರಣಗಳೂ ಲಿಂಗವಂತ

**ಚಲವಾದಿಗಳು.**

ರಂತೆ ಇರುತ್ತವೆ; ಇವರು ಮದ್ಯ ಮಾಂಸಗಳನ್ನು ಮುಟ್ಟುವದಿಲ್ಲ. ಚಲವಾದಿಗಳು ಬಹುತರ ಯಾವ ಹೋರೆಯನ್ನೂ ಮಾಡುವದಿಲ್ಲ; ಲಿಂಗವಂತರಲ್ಲಿ ಭಿಕ್ಷೆ ಬೇಡಿ ಜೀವಿಸುವರು. ಇವರ ಹೆಂಗಸರಲ್ಲಿ ಕೆಲವರು ಲಗ್ನ ಮಾಡಿ ಕೊಳ್ಳದೆ ಸೂಳೆತನ ಮಾಡುವರು. ಲಿಂಗವಂತರ ಲಗ್ನಗಳಲ್ಲಿಯೂ ಬೇರೆ ಕಾರ್ಯಗಳಲ್ಲಿಯೂ ಅವರು ಸಮಾರಂಭದಿಂದ ಹೊರಟಾಗ ವೊಬ್ಬ ಚಲವಾದಿಯು ಅವರ ಮುಂದೆ ನಡಿಯುತ್ತಿರಲಿಕ್ಕೆ ಬೇಕು. ಅವನ ಹೆಗಲ ಮೇಲೆ ದೊಡ್ಡದೊಂದು ಹಿತ್ತಾಳಿಯ ಸವಿಟು, ಕೈಯಲ್ಲಿ ದೊಡ್ಡದೊಂದು ಗಂಟೆ ಇರುವದು, ಅವನು ಆಗಾಗ್ಗೆ ಲಿಂಗವಂತರನ್ನು ಹೊಗಳಿ ಗಂಟೆಯ ಬಾರಿಸುತ್ತಾನೆ. ಪೂರ್ವದಲ್ಲಿ ಚಲವಾದಿಯು ಸಂತೆಯ ದಿವಸ ಮಾರಾಟಕ್ಕೆ ಬಂದ ಕಾಳುಗಳಲ್ಲಿ ತನ್ನ ಸವಿಟು ಮುಳುಗಿಸಿ ಅದರ ತುಂಬ ಕಾಳು ಹಕ್ಕಿನಿಂದ ತಕ್ಕೊಳ್ಳುವನು. ಆದರೆ ಅವನ ಹಕ್ಕು ಈಗ ಅಷ್ಟು ನಡಿಯುವದಿಲ್ಲ.

**ಕೊಟಿಗಾರರು.**

ಕೊಟಿಗಾರರು ಅಥವಾ ಮೆತ್ರಿಗಳು.—ಇವರು ತೀರ ನೀಚ ಸ್ಥಿತಿಯಲ್ಲಿ ಇದ್ದಾರೆ. ಸಮ್ಮಗಾರರು ಇವರನ್ನು ಮುಟ್ಟುವದಿಲ್ಲ. ಆದರೆ ಇವರ ಕುಲದವರು ದಕ್ಷಿಣ ಕಾನಡಾ ಜಿಲ್ಲೆಯಲ್ಲಿ ಉತ್ತಮ ಕುಲಗಳಲ್ಲಿ ಯೆಣಿಸಲ್ಪಡುತ್ತಾರೆ. ಇವರು ಅಡವಿಯಲ್ಲಿ ಸತ್ತು ಬಿದ್ದ ಪಶು, ದನಗಳನ್ನು ಹುಡುಕಿ ತಂದು ಅವುಗಳ ಮಾಂಸ ತಿನ್ನುವರು, ಚರ್ಮವನ್ನು ಮಾರಿ ಕೊಳ್ಳುವರು. ಕೊಟಿಗಾರರು ಸಿಂದಿಯ ಬುಟ್ಟಿಗಳನ್ನು ಹೆಣಿದು ಮಾರುವರು, ಉರಿಯುವ ಕಟ್ಟಿಗೇ ತಂದು ಮಾರುವರು, ಭಿಕ್ಷೆ ಬೇಡುವರು, ದೀವಟಿಗೆ ಹಿಡಿಯುವರು, ಓಣಿಗಳನ್ನು ಉಡುಗುವರು. ಕೊಟಿಗಾರರು ಜಗಳಗಂಟತನದಲ್ಲಿ ಹೆಸರಾಗಿದ್ದಾರೆ.

**ಮುಸಲರು.**

ಮುಸಲರು.—ಇವರು ಮದ್ರಾಸ ಇಲಾಖೆಯಿಂದ ಬಂದು ಧಾರವಾಡ ಜಿಲ್ಲೆಯಲ್ಲಿ ಇರುತ್ತಾರೆ; ತಾವು ಮಾದಿಗರ ವಂಶದವರೆಂದು ಹೇಳಿ, ಮಾದಿಗರ ಮನೆಯಲ್ಲಿಯೇ ಕೆಲವು ದಿವಸ ನಿಂತು ಮತ್ತೊಂದು ಊರಿಗೆ ಹೋಗುವರು. ಭಿಕ್ಷೆ ಬೇಡುವದೇ ಇವರ ಮುಖ್ಯ ಹೋರೆ; ಆದರೆ ಕೆಲವರು ಡೊಂಬರ ಹಾಗೆ ಹಗ್ಗದ ಮೇಲೆ ನಡಿಯುವರು.

**ಆಗೇರು.**

ಆಗೇರು.—ಇವರು ಕಾನಡಾ ಜಿಲ್ಲೆಯಲ್ಲಿ ಇರುತ್ತಾರೆ. ಆಗರವೆಂದರೆ ಉಪ್ಪಿನ ಕಣ; ಇದರಿಂದ ಆಗೇರೆಂದರೆ ಉಪ್ಪು ಮಾಡುವವರು. ಆದ್ದರಿಂದ ಆಗೇರು ಉಪ್ಪಾರರೊಳಗಿನವರೆಂದು ಹೇಳ ಬಹುದು. ಉಪ್ಪು ಮಾಡುವದಲ್ಲದೆ ಆಗೇರು ತಾಡವಾಲೆಯ ಛತ್ತರಿಗೆಗಳನ್ನು ಮಾಡಿ ಮಾರುವರು. ಆಗೇರು ಹೊಲಿಯ ಮಾದಿಗರಂತೆ ನೀಚ ಕುಲದವರಲ್ಲ; ಇವರನ್ನು ಉತ್ತಮ ಕುಲದವರು ಮುಟ್ಟಿಸಿಕೊಳ್ಳುವರು. ಇವರು ಗೋ ಮಾಂಸ ಹೊರ್ತಾಗಿ ಯಾವತ್ತು ಬಗೆಯ ಮಾಂಸ ತಿನ್ನುವರು, ಶರೆ ಕುಡಿಯುವರು. ಇವರ ಹೆಂಗಸರಿಗೆ ಕಚ್ಚೆ ಕುಬ್ಬಸಗಳಿಲ್ಲ; ಲಗ್ನದಲ್ಲಿ ಮದಿಮಗನ ರುಮಾಲದಲ್ಲಿ ಬಾಸಿಂಗಕ್ಕೆ ಬದಲಾಗಿ ಅಡಿಕೆಯ ಹೂವಿನ

ತುರಾಯಿ ಇಡುವರು. ಇವರ ಧರ್ಮ, ನಡಾವಳಿ, ಮುಂತಾದವುಗಳು ಮುಕ್ರೀ ಕುಲದವರಂತೆ ಇರುತ್ತವೆ.

ಬಾಕವರು.— ಇವರು ಕಾನಡಾ ಜಿಲ್ಲೆಯವರೇ. ಬಾಕೆಂದರೆ ಕಾಳಿನ ಕೂಲಿ; ಇವರು ರೊಕ್ಕದ ಕೂಲಿಯನ್ನು ತಕ್ಕೊಳ್ಳದೆ, ಕಾಳಿನ ಕೂಲಿಯನ್ನು ತಕ್ಕೊಳ್ಳುತ್ತಿದ್ದದರಿಂದ ಇವರಿಗೆ ಈ ಹೆಸರು ಬಂದದೆಂದು ಹೇಳುತ್ತಾರೆ. ದಕ್ಷಿಣ ಕಾನಡಾ ಜಿಲ್ಲೆಯೊಳಗಿನ ಬಂಟವಾಳೆಂಬ ಗ್ರಾಮದಿಂದ ಇವರು ಬಂದ ಕಾರಣ ಬಂಟರೆಂತಲೂ ಇವರಿಗೆ ಹೆಸರುಂಟು. ಇವರ ಕುಲದವರು ದಕ್ಷಿಣ ಕಾನಡಾ ಜಿಲ್ಲೆಯಲ್ಲಿ ಉತ್ತಮ ಸ್ಥಿತಿಯಲ್ಲಿ ಇದ್ದಾರೆ. ಅವರು ಇವರನ್ನು ಕುಲದ ಹೊರಗೆ ಇಟ್ಟದ್ದರಿಂದ ಅವರಿಗೂ ಇವರಿಗೂ ಊಟದ ಬಳಿಕೆಯಾಗುವದಿಲ್ಲ. ಆದರೂ ಬಾಕವರು ಒಕ್ಕಲಿಗರೊಳಗೆ ಯೆಣಿಸಲ್ಪಡುತ್ತಾರೆ. ಇವರ ಉಡಿಗೆ, ಆಹಾರ, ಧರ್ಮ, ನಡಾವಳಿ, ಮುಂತಾದವುಗಳೆಲ್ಲ ಹಾಲ್ವಕ್ಕೀ ಒಕ್ಕಲಿಗರಂತೆ ಇರುತ್ತವೆ. ಇವರು ಒಕ್ಕಲತನ ಮಾಡಿ ಕೊಂಡು ಮೇಲೆ ವಿವರಿಸಿದ ನೀಚ ಕುಲಗಳಿಗಿಂತ ಸುಖದಿಂದಿದ್ದಾರೆ. ಆದರೆ ವ್ಯವಹಾರದಲ್ಲಿ ಕೊಟೆಗಾರರೂ, ಮುಕ್ರಿಗಳೂ, ಬಾಕವರೂ ಒಂದೇ ಯೋಗ್ಯತೆಯವರೆಂದು ಯೆಣಿಸಲ್ಪಡುತ್ತಾರೆ.

ಬಾಕವರು.

ಬುಟ್ಟಲರು, ಅಂದರೆ ಬುಟ್ಟಿಗಳನ್ನು ಮಾಡುವವರು.— ಇವರೂ ಕಾನಡಾ ಜಿಲ್ಲೆಯವರೇ. ಕೊಟೆಗಾರರಂತೆ ಇವರಾದರೂ ನೀಚರೆಂದು ಯೆಣಿಸಲ್ಪಡುತ್ತಾರೆ. ಇವರ ಆಚಾರ, ಆಹಾರ, ಧರ್ಮ, ಮುಂತಾದವುಗಳೆಲ್ಲ ಮುಕ್ರಿಗಳಂತೆ ಇರುತ್ತವೆ. ಕೂಲಿಯೇ ಇವರ ಹೊಟ್ಟೆಯ ಹೋರೆಯು. ಇವರಲ್ಲಿ ಬಹು ಜನರು ಸಾಲದೊಳಗೆ ಪರೆಯಾಳಿನಂತೆ ದುಡಿಯುತ್ತಿರುತ್ತಾರೆ. ಕೆಲವರು ಬುಟ್ಟಿಗಳನ್ನು ಮಾಡಿ ಮಾರುವರು.

ಬುಟ್ಟಲರು.

ಹಸಳರು.— ಇವರೂ ಕಾನಡಾ ಜಿಲ್ಲೆಯವರೇ. ಹಸುಳೆ ಅಂದರೆ ಮಗು, ಇದರಿಂದ ಇವರ ಹೆಸರು ಬಂದಂತೆ ತೋರುತ್ತದೆ. ಹಸಳರೆಂದರೆ ಆಳು ಮಕ್ಕಳೆಂಬ ಅರ್ಥವಿರುತ್ತದೆ. ಅದರಂತೆ ಹಸಳರು ಕೂಲಿಯಿಂದಲೂ ಊಳಿಗದಿಂದಲೂ ಜೀವಿಸುವರು. ಇವರ ಸ್ಥಿತಿ ರೀತಿಗಳೆಲ್ಲ ಮುಕ್ರಿ, ಮುಂತಾದ ನೀಚ ಕುಲಗಳಂತೆ ಇರುತ್ತವೆ. ಹಸಳರು ಶಿವಮೊಗ್ಗೆಯ ಶೀಮೆಯಿಂದ ಬಂದವರು; ಆ ಶೀಮೆಯಲ್ಲಿ ಇವರ ಜಾತಿಯವರು ಬಹು ಜನರುಂಟು. ಹಸಳರು ನಿಲಿವಿಕೆಯಲ್ಲಿ ಗಿಡ್ಡರು, ಮೈಬಣ್ಣ ಕಪ್ಪು, ದಪ್ಪ ತುಟಿ, ಡೊಣ್ಣೆ ಮೂಗು, ಕಿರಿಗೂದಲು; ಒಟ್ಟಿಗೆ ಇವರ ಸ್ವರೂಪವು ಸಿದ್ದೀ ಜನರ ಸ್ವರೂಪವನ್ನು ಹೋಲುತ್ತದೆ.

ಹಸಳರು.

ಕೊರಗಾರರು.— ಇವರಾದರೂ ಕಾನಡಾ ಜಿಲ್ಲೆಯವರೇ. ಇವರು ಹಿಂದೆ ಹೇಳಿದ ಕೊರವರು, ಕೊರಮರು, ಕೊರಚರು, ಯೆಂಬ ಕುಲಗಳೊಳಗಿನವರೇ ಇರುತ್ತಾರೆ. ಅವರ ಹೆಂಗಸರಂತೆ ಇವರ ಹೆಂಗಸರಾದರೂ ಕುಬ್ಬಸ ತೊಡದೆ ಕರೆಮಣಿಗಳ ಸರಗಳಿಂದ ಯೆದೆಯನ್ನು ಮುಚ್ಚಿಕೊಳ್ಳುವರು.

ಕೊರಗಾರರು.

ಆದರೆ ಕೊರಗಾರರು ಹೊಲಿಯರಂತೆ ಸತ್ತ ದನಗಳ ಮಾಂಸ ತಿಂದು ಚರ್ಮ ಮಾರುವರು. ಇವರ ಸ್ಥಿತಿ ರೀತಿಗಳು ಕೆಲವಂಶದಲ್ಲಿ ಕೊರವರಂತೆ, ಕೆಲವಂಶದಲ್ಲಿ ಹೊಲಿಯರಂತೆ ಇರುತ್ತವೆ.

**ಕಂಗಾರಿಗಳು.**

ಕಂಗಾರಿಗಳು.— ಇವರೂ ಕಾನಡಾ ಜಿಲ್ಲೆಯವರೇ. ಇವರು ಪೂರ್ವದ ವಿಜಯನಗರದಿಂದ ಬಂದವರೆಂದು ಹೇಳುತ್ತಾರೆ. ಇವರು ಹೊಲಿಯರೊಳಗಿನವರೇ; ಆಚರಣೆಗಳೆಲ್ಲ ಹೊಲಿಯರಂತೆ ಇರುತ್ತವೆ. ಅವರಂತೆ ಇವರಾದರೂ ಸತ್ತ ದನಗಳ ಮಾಂಸ ತಿಂದು ಚರ್ಮ ಮಾರುವರು. ಆದರೆ ಹೊಲಿಯರಷ್ಟು ಇವರು ಪ್ರಯೋಜಕರಾಗಿರುವದಿಲ್ಲ. ಧರ್ಮದ ಸಂಬಂಧದಲ್ಲಿ ಕಂಗಾರಿಗಳು ಕೆಲವಂಶದಲ್ಲಿ ಚಲವಾದಿಗಳನ್ನು ಹೋಲುವರು; ಆದರೆ ಹಾಲ್ವಕ್ಕೀ ವೊಕ್ಕಲಿಗರಂತೆ ಸುಲಿಯದಿದ್ದ ತೆಂಗಿನ ಕಾಯಿಯನ್ನು ಸತ್ತ ಹಿರಿಯರ ಹೆಸರಿನಿಂದ ಮನೆಯಲ್ಲಿ ಇಟ್ಟು ಪೂಜಿಸುವರು. ಕಂಗಾರಿಗಳು ಕೂಲಿಗೆ ಹೋಗುವರು; ಸತ್ತ ದನಗಳ ಕೋಡುಗಳನ್ನು ಕೂಡಿಸಿ ಮಾರುವರು.

**ಮುಕ್ರಿಗಳು.**

ಮುಕ್ರಿಗಳು.— ಇವರು ಕಾನಡಾ ಜಿಲ್ಲೆಯಲ್ಲಿ ಘಟ್ಟದ ಕೆಳಗೆ ಇರುತ್ತಾರೆ. ಇವರ ಜನ್ಮಭಾಷೆ ಕನ್ನಡ. ಇವರ ನಿಲುವಿಕೆ ಗಿಡ್ಡ, ಮೈಕಟ್ಟು ಪುಷ್ಟ, ಮೈಬಣ್ಣ ಕಪ್ಪು, ಗದ್ದ ಮುಂದಕ್ಕೆ ಹಾದದ್ದು, ಹಣೆ ಹಿಂದೆ ಶಟದದ್ದು. ಘಟ್ಟದ ಕೆಳಗಿನ ತಾಲೂಕುಗಳಲ್ಲಿ ಹಾಲ್ವಕ್ಕೀ ವೊಕ್ಕಲಿಗರಂತೆ ಇವರ ಹಳ್ಳಿಗಳು ಬೇರೆ ಇರುತ್ತವೆ; ಅವುಗಳಲ್ಲಿ ಮುಕ್ರಿಗಳು ಗುಡುಸಲಿನಂಥ ಮನೆಗಳಲ್ಲಿ ಇರುತ್ತಾರೆ. ಲಂಗೋಟಿ, ಕಂಬಳಿ ಇವರ ಮುಖ್ಯ ಉಡಿಗೆಗಳು. ಹೆಂಗಸರು ಕುಬ್ಬಸ ತೊಡುವದಿಲ್ಲ; ಕರೆಮಣಿಗಳ ಸರಗಳನ್ನು ಹಾಕಿ ಕೊಳ್ಳುವರು. ಮುಕ್ರಿಗಳಲ್ಲಿ ಕೆಲವರು ಕೂಲೀ ಮಾಡುವರು; ಕೆಲವರು ಚಿಂಪಿನ ಸುಣ್ಣ ಸುಟ್ಟು ಮಾರುವರು. ಆದರೆ ಬಹು ಜನರು ಹೈಗರ ಸಾಲ ತಕ್ಕೊಂಡು ಅವರ ಶರೆ ಆಳಾಗಿ ಅವರ ಅಡಿಕೆಯ ತೋಟಗಳಲ್ಲಿ ದುಡಿಯುವರು; ಸುಗ್ಗಿಯ ದಿವಸಗಳಲ್ಲಿ ಮಾತ್ರ ಅವರಿಗೆ ಬಿಡುಗಡೆ ಇರುತ್ತದೆ. ಮುಕ್ರಿಗಳು ವೊಡ್ಡರಂತೆ ನೆಲ ಅಗಿಯುವ ಕೆಲಸವನ್ನೂ ಮಾಡುವರು. ಇವರು ಮದ್ಯ ಮಾಂಸಗಳನ್ನು ತಕ್ಕೊಳ್ಳುವರು; ಆದರೆ ಗೋ ಮಾಂಸ, ಹಂದಿಯ ಮಾಂಸ ತಕ್ಕೊಳ್ಳುವದಿಲ್ಲ. ವ್ಯವಹಾರದಲ್ಲಿ ಇವರು ಕೊಟೆಗಾರರು, ಆಗೇರು, ಮುಂತಾದ ನೀಚ ಕುಲಗಳಂತೆ ಯೆಣಿಸಲ್ಪಡುವರು. ಇವರ ದೇವತೆಗಳು ವೀರಭದ್ರ, ವೆಂಕಟರಮಣ, ಸುಲಿಯದಿದ್ದ ತೆಂಗಿನ ಕಾಯಿ (ಹಿರಿಯರ ದೇವತೆ), ಹನುಮಂತ. ಮುಕ್ರಿಗಳು ಪ್ರತಿ ದಿವಸ ಸ್ನಾನ ಮಾಡಿ ಕಟ್ಟಿಗೆಯ ವೀರಭದ್ರನ ಇಲ್ಲವೆ ವೆಂಕಟರಮಣನ ಪೂಜೆ ಮಾಡಿ, ಆ ಮೂರ್ತಿಯ ಪಾದದ ಮೇಲೆ ತುಳಸೀ ದಳವಿಟ್ಟು, ಅದನ್ನು ನೀರೊಳಗೆ ಯೆದ್ದಿ, ಅದರಿಂದ ಬೀಳುವ ಹನಿಯನ್ನು ಬಾಯೊಳಗೆ ತಕ್ಕೊಂಡು ಊಟ ಮಾಡುವರು. ಇವರು ಬ್ರಾಹ್ಮಣರಿಗೆ ಮಾನ ಕೊಡುವರು, ಹೆಣ್ಣು ಮಕ್ಕಳ ಲಗ್ನವನ್ನು ವಾಡಿಕೆಯಾಗಿ ಹತ್ತು ವರ್ಷದ ಪೂರ್ವದಲ್ಲಿಯೇ ಮಾಡುವರು. ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ. ಲಗ್ನದ

ದಿವಸ ಗಂಡಸರೂ ಹೆಂಗಸರೂ ಸಿಂದಿಯ ಕುಡಿದು ಕೊಳಲು ಡೊಳ್ಳುಗಳೊಂದಿಗೆ ಕುಣಿದ ಬಳಿಕ ಮದಿಮಕ್ಕಳ ಮೇಲೆ ಅಕ್ಕೀಕಾಳು ಹಾಕುವರು. ಲಗ್ನ ಮುಂತಾದ ಸಮಾರಂಭಗಳಲ್ಲಿ ಇವರಿಗೆ ಸಿಂದೀ ಕುಡಿಯುವ ಚಟ ಬಹಳ ಇರುತ್ತದೆ. ಆದರಿಂದ ಇವರಿಗೆ ಸಾಲವಾಗುವದು. ಲಗ್ನದ ದಿವಸ ಮದಿಮಕ್ಕಳು ರಾತ್ರಿಯಲ್ಲಿ ಒಂದೇ ಹಾಸಿಗೆಯಲ್ಲಿ ಮಲಗುವರು. ಕೂಸು ಹುಟ್ಟಿದ ಕೂಡಲೆ ಅದನ್ನು ಬಿಸಿ ನೀರಿನಿಂದ ತೊಳಿದು ಅದಕ್ಕೆ ಜೀರಿಗೆಯ ಕಷಾಯದಲ್ಲಿ ಬೆಲ್ಲ ಹಾಕಿ ಕುಡಿಸುವರು. ಇವರು ಹೆಣಗಳನ್ನು ಹುಗಿಯುವರು. ಮೂರನೇ ದಿವಸ ಸೇರಿಯುವವರನ್ನು ಕರೆಕೊಂಡು ಗೋರಿಗೆ ಹೋಗಿ, ಅದರ ಮುಂದೆ ಹುಣಚೀ ರಾಡಿಯಲ್ಲಿ ಕಲಿಸಿದ ಅನ್ನವನ್ನೂ, ಮೂರು ಅಕ್ಕೀ ರೊಟ್ಟಿಗಳನ್ನೂ ಇಟ್ಟು, ಅವನ್ನು ಕಾಗೆ ಮುಟ್ಟಿದ ಬಳಿಕ ಮನೆಗೆ ಹೋಗಿ ಸ್ನಾನ ಮಾಡಿ ಉಣ್ಣುವರು. ಹನ್ನೊಂದನೇ ದಿವಸ ಊರಿಗೆ ಊಟ ಹಾಕುವರು. ಬಳಗದವರ ಊಟಕ್ಕೆ ಹೋಗುವಾಗ ಹಲಕೆಲವು ತಿನ್ನುವ ಪದಾರ್ಥಗಳನ್ನು ತಕ್ಕೊಂಡು ಹೋಗುವರು. ಆ ಪದಾರ್ಥಗಳನ್ನೂ ಮನೆಯ ಅಡಿಗೆಯ ಪದಾರ್ಥಗಳನ್ನೂ ಕೂಡಿಸಿ ಬಾಳೆಯ ಎಲೆಯ ಮೇಲೆ ಹಾಕಿ ಆಕಳಿಗೆ ತಿನ್ನಿಸುವರು. ಊಟವಾದ ಬಳಿಕ ಯೆಲ್ಲರೂ ಸಿಂದಿಯ ಕುಡಿಯಲಿಕ್ಕೆ ಬೇಕು. ಮುಂದೆ ವರ್ಷವಾಗುವ ವರೆಗೆ ಪ್ರತಿ ತಿಂಗಳಿನ ಶುದ್ಧ ಪ್ರತಿಪದೆಯಲ್ಲಿ ಆಕಳಿಗೆ ಅನ್ನ ಹಾಕುವರು. ಜಾತಿ ಸಂಬಂಧದ ನ್ಯಾಯ್ಯಗಳ ವಿಚಾರಣೆಗಾಗಿ ಹಾಲ್ಯಕ್ಕೀ ವೊಕ್ಕಲಿಗರಂತೆ ಮುಕ್ರಿಗಳಲ್ಲಿಯೂ ದೊಡ್ಡ ಸಣ್ಣ ಅಧಿಕಾರಿಗಳಿರುವರು. ಊರಿನ ಅಧಿಕಾರಿಗೆ ಬುದ್ಧಿವಂತನೆಂತಲೂ, ಗ್ರಾಮ ಮಂಡಲಗಳ ಅಧಿಕಾರಿಗಳಿಗೆ ಬಾರ್ಕನೆಂತಲೂ ಅನ್ನುವರು. ಬುದ್ಧಿವಂತರ ಕೈ ಕೆಳಗೂ ಬಾರ್ಕರ ಕೈ ಕೆಳಗೂ ತಳವಾರರಿರುವರು. ಜಾತಿ ಸಂಬಂಧದ ಸಭೆಗಳು, ಅವುಗಳ ವೆಚ್ಚದ ವಂತಿಗೆ, ಸಭೆಯಲ್ಲಿ ನಡಿಯುವ ನಿರ್ಣಯುಗಳ ಕ್ರಮ, ಮುಂತಾದವುಗಳು ಬಹುತರ ಹಾಲ್ಯಕ್ಕೀ ವೊಕ್ಕಲಿಗರಂತೆ ನಡಿಯುತ್ತವೆ. ಆದರೆ ಬಡತನದ ರೋಗವು ಈ ಜಾತಿಯವರನ್ನು ಬೇಗ ಬಿಡುವಂತೆ ತೋರುವದಿಲ್ಲ.

**ಹುಲಸಾರರು.**

ಹುಲಸಾರರು. — ಮಹಾರಾಷ್ಟ್ರ ಭಾಷೆಯನ್ನಾಡುವ ಹೊಲಿಯರಿಗೆ ಕಾನಡಾ ಜಿಲ್ಲೆಯಲ್ಲಿ ಹುಲಸಾರರೆಂದು, ಇಲ್ಲವೆ ಹುಲಸ್ವಾರರೆಂದು ಅನ್ನುವರು. ಇವರ ಆಚರಣೆಗಳೆಲ್ಲ ವಾಡಿಕೆಯಾಗಿ ಹೊಲಿಯರಂತೆ ಇರುತ್ತವೆ. ಇವರು ಹೊಲಿಯರಂತೆ ಊರುತನದ ಕೆಲಸಗಳನ್ನು ಮಾಡುವದಲ್ಲದೆ ಬಿದರಿನ ಬುಟ್ಟಿಗಳನ್ನು ಹೆಣೆದು ಮಾರುವರು.

## ಮುಸಲ್ಮಾನರು.

ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಮುಸಲ್ಮಾನರ ಸಂಖ್ಯೆಗಳ ವಿವರ ಹ್ಯಾಗಂದರೆ—

| | | | |
|---|---|---|---|
| ವಿಜಾಪುರ— | ೬೭೦೬೬, | ಅಥವಾ ವೊಟ್ಟು ಜನಸಂಖ್ಯೆದಲ್ಲಿ ಶೇಕಡಾ | ೧೦·೫೦ |
| ಬೆಳಗಾವಿ— | ೬೬೨೦೦, | ,, ,, ,, ,, | ೭·೬೬ |
| ಧಾರವಾಡ— | ೧೦೦೭೦೦, | ,, ,, ,, ,, | ೧೧·೩೯ |
| ಕಾನಡಾ— | ೨೪೧೭೧, | ,, ,, ,, ,, | ೫·೭೩ |
| | ೨೫೮೦೩೭, | ಅಥವಾ ವೊಟ್ಟು ಜನಸಂಖ್ಯೆದಲ್ಲಿ | ೮·೮೨ |

ಈ ಶೀಮೆಯ ಮುಸಲ್ಮಾನರಲ್ಲಿ ಪರರಾಷ್ಟ್ರಗಳಿಂದ ಬಂದಂಥ ಮುಸಲ್ಮಾನರ ಶುದ್ಧ ಸಂತತಿಯವರು ಯಾರೂ ಇಲ್ಲ. ಕೆಲವು ಪ್ರಮುಖ ಜಾತಿಗಳಲ್ಲಿ ಆ ಪರದೇಶದವರ ರಕ್ತ ಸಂಬಂಧವು ಅಲ್ಪ ಸ್ವಲ್ಪವಿರಬಹುದು. ಬಹುತರ ಯಾವತ್ತು ಸಮುದಾಯವು ಮುಸಲ್ಮಾನ ಧರ್ಮವನ್ನು ಸ್ವೀಕರಿಸಿದಂಥ ಹಿಂದೂ ಜನರ ವಂಶದವರದೇ ಇರುತ್ತದೆ. ಮುಸಲ್ಮಾನರ ಅಮಲು ದಕ್ಷಿಣದಲ್ಲಿ ಕೂಡ್ರುವ ಪೂರ್ವದಲ್ಲಿ, ಅಂದರೆ ಸನ್ ೧೩೦೫ನೇ ವರ್ಷದ ಸುಮಾರಿನಲ್ಲಿ ಪೀರ ಮಹಾವೀರ ಖಂದಾಯತ ಯೆಂಬ ಅರಬ ಕುಲದ ಧರ್ಮೋಪದೇಶಕನು ತನ್ನ ಉಪದೇಶದ ಬಲದಿಂದ ಕೆಲವನ್ನು ಮುಸಲ್ಮಾನರನ್ನು ಮಾಡಿದನು. ಅವನ ತರುವಾಯ ವಿಜಾಪುರದ ಬಾದಶಾಹಿಯನ್ನು ಸ್ಥಾಪಿಸಿದ ಯೂಸಪ್ ಆದಿಲ್ ಶಹನು ೧೬ನೇ ಶತಕದ ಕಡೆಯಲ್ಲಿ ಧರ್ಮೋಪದೇಶಕರ ಕೈಯಿಂದ ಉಪದೇಶ ಮಾಡಿಸಿ ದೇಶೀ ಮುಸಲ್ಮಾನರ ಸಂಖ್ಯೆವನ್ನು ತಕ್ಕಮಟ್ಟಿಗೆ ಬೆಳಿಸಿದನು. ಔರಂಗಜೇಬನು ೧೭ನೇ ಶತಕದ ಕಡೆಯಲ್ಲಿ ದಕ್ಷಿಣಕ್ಕೆ ಬಂದಾಗ ಬಹು ಜನರನ್ನು ಬಲಾತ್ಕಾರದಿಂದ ಮುಸಲ್ಮಾನರನ್ನು ಮಾಡಿದನು. ಮುಂದೆ ೧೮ನೇ ಶತಕದ ಕಡೆಯಲ್ಲಿ ಮೈಸೂರಿನ ಹೈದರ ಅಲ್ಲಿಯೂ, ಅವನ ಮಗ ಟೀಪುಸುಲ್ತಾನನೂ ಔರಂಗಜೇಬನಂತೆಯೇ ಬಲಾತ್ಕಾರದಿಂದ ಬಹು ಜನರನ್ನು ಮುಸಲ್ಮಾನರನ್ನು ಮಾಡಿದರು. ಆದರೆ ಕಾನಡಾ ಜಿಲ್ಲೆಯ ನವಾಯರು ಮಾತ್ರ ಹೀಗೆ ಧರ್ಮಾಂತರ ಮಾಡಿದ ಹಿಂದೂ ಜನರ ವಂಶದವರಲ್ಲ. ಅವರ ಪೂರ್ವಜರು ಪರದೇಶದಿಂದ ಪ್ರಾಚೀನ ಕಾಲದಲ್ಲಿ ಬಂದರೆಂದು ಅವರ ವರ್ಣನೆಯಿಂದ ತಿಳಿಯುವದು.

ಮುಸಲ್ಮಾನರ ಧರ್ಮದಲ್ಲಿ ಸುನೀ, ಶಿಯಾ, ಯೆಂಬೆರಡು ಮುಖ್ಯ ಪಂಥಗಳಿರುತ್ತವೆ. ಸುನೀ ಪಂಥದವರು, ಮಹಮ್ಮದ ಪೈಗಂಬರನ ತರುವಾಯ ಅಬೂಬಾಕರ

**ಮತಗಳು.**

ಸಿದಿಕ್, ಉಮಾರ, ಉಸ್ಮಾರ, ಅಲ್ಲೀ, ಯೆಂಬ ನಾಲ್ವರು ಇಮಾಮಗಳು (ಮುಖ್ಯಸ್ಥರು) ಕ್ರಮವಾಗಿ ಆದರೆಂದು ನಂಬುತ್ತಾರೆ. ಶಿಯಾ ಮತದವರು ಹೇಳುವದೇನಂದರೆ, ಅಲ್ಲೀಯು ಮಹಮ್ಮದ ಪೈಗಂಬರನ ಮಗ

ಳಾದ ಫಾತಿಮಾನ ಮಗನಿದ್ದದರಿಂದ ಆ ಪೈಗಂಬರನ ತರುವಾಯ ಅಲ್ಲೀಯೇ ಅವನ ಪೀಠಕ್ಕೆ ಬಾಧ್ಯಸ್ಥನಿರಲಿಕ್ಕೆ ಅವನನ್ನು ದೂಡಿ ಮೊದಲಿನ ಮೂವರು ಆ ಪೀಠವನ್ನು ಬಲಾತ್ಕಾರದಿಂದ ಆಕ್ರಮಿಸಿದರಾದ ಕಾರಣ ಆ ಮೂವರು ಇಮಾಮುಗಳಲ್ಲೆಂದು ವಾದಿಸುತ್ತಾರೆ; ಇವರು ಅಲ್ಲೀಯೇ ಮೊದಲನೇ ಇಮಾಮನೆಂತಲೂ, ಅವನ ತರುವಾಯ ಬೇರೆ ಹನ್ನೊಂದು ಜನ ಇಮಾಮುಗಳಾದರೆಂತಲೂ ನಂಬುತ್ತಾರೆ. ಗೈರಮಹಾಡಿ ಯೆಂಬ ದಿನ್ನೊಂದು ಪಂಥವಿರುತ್ತದೆ; ಈ ಪಂಥದವರು ಮುಂದೆ ಬರತಕ್ಕ ಇಮಾಮನು ಬಂದು ಹೋದನೆಂದು ನಂಬುತ್ತಾರೆ. ನಾಲ್ಕನೇ ವಹಬೀ ಯೆಂಬ ಪಂಥದವರು ಬುನಾದಿಯ ಸತ್ಪುರುಷರ ಪೂಜೆಯನ್ನು ಮಾಡಲಿಕ್ಕೆ ವೊಡಂಬಡುವದಿಲ್ಲ, ಧರ್ಮ ಬೋಧಕರಾದ ವಿದ್ವಾಂಸರಿಗೆ ಮಾನ ಕೊಡುವ ಪ್ರಯೋಜನವಿಲ್ಲೆಂದು ಹೇಳುತ್ತಾರೆ. ಈ ಶೀಮೆಯಲ್ಲಿ ಸುನೀ ಪಂಥದವರೇ ಬಹುತರ ಯಾವತ್ತು ಜನರಿದ್ದಾರೆ. ಬೋಹರೀ ಜನರೂ, ಖೋಜಾ ಜನರೂ ಶಿಯಾ ಪಂಥದವರು. ವಹಬೀ ಪಂಥದ ಮುಸಲ್ಮಾನರು ಉತ್ತರ ಹಿಂದುಸ್ಥಾನದಲ್ಲಿ ಇದ್ದಾರೆ. ಆದರೆ ಕಡಿಮೇ ಪ್ರತಿಯ ಮುಸಲ್ಮಾನ ಜಾತಿಗಳಿಗೆ ಈ ಪಂಥಗಳು ಸಹ ಗೊತ್ತಿಲ್ಲವೆಂದು ಹೇಳ ಬಹುದು. ಅವರು ಹೆಸರಿಗೆ ಮಾತ್ರ ಮುಸಲ್ಮಾನರೆನಿಸುವರು. ಬೇರೆ ಮುಸಲ್ಮಾನರೊಳಗೆ ಕೂಡುವದಿಲ್ಲ. ಮುಸಲ್ಮಾನರ ಧರ್ಮ ತತ್ವಗಳು ಅವರಿಗೆ ಗೊತ್ತಿರುವದಿಲ್ಲ; ಹಿಂದೂ ದೇವತೆಗಳನ್ನು ಪೂಜಿಸುವರು; ಹಿಂದೂ ಹಬ್ಬಗಳನ್ನು ಮಾಡುವರು. ಹಿಂದೂ ನಡಾವಳಿಗಳಂತೆ ನಡಿಯುವರು.

ಈ ಶೀಮೆಯ ಮುಸಲ್ಮಾನರಲ್ಲಿ ಸಾಕಲ್ಯ ಜಾತಿಗಳೆಂತಲೂ, ಸ್ವತಂತ್ರ ಜಾತಿಗಳೆಂತಲೂ ಯೆರಡು ಮುಖ್ಯ ವರ್ಗಗಳನ್ನು ಮಾಡ ಬಹುದು. ಮೊದಲನೇ ವರ್ಗದಲ್ಲಿ

**ಒಳಜಾತಿಗಳು.**

ಸೈಯ್ಯದ, ಶೇಖ, ಮೊಗಲ, ಪಠಾಣ, ಯೆಂಬ ನಾಲ್ಕು ಪರದೇಶಗಳ ಹೆಸರಿನ ಸಾಧಾರಣ ಜಾತಿಗಳೂ, ಸೌದಾಗಾರರು, ಅತ್ತಾರರು, ಮಣಿಯಾರರು, ಕಾಗದಿಗಳು, ಕಲಾಯಿಗಾರರು, ನಾಲಬಂದರು, ಬೆಡಾರರು, ಹಕೀಮರು, ಮಹಾವತರು, ಸಾರವಾನರು, ಯೆಂಬ ಹತ್ತು ವಿಶೇಷ ಜಾತಿಗಳೂ ಬರುತ್ತವೆ. ಈ ಜಾತಿಗಳಲ್ಲಿ ಪರಸ್ಪರ ಶರೀರ ಸಂಬಂಧವಾಗುತ್ತದೆ; ಇವರ ಸ್ವರೂಪ, ಉಡಿಗೆ, ನಡಾವಳಿ, ಇವುಗಳಲ್ಲಿ ಬಹಳ ಅಭ್ಯಂತರವಿರುವದಿಲ್ಲ. ಸ್ವತಂತ್ರ ಜಾತಿಗಳು ಮೂವತ್ತಕ್ಕಿಂತ ಹೆಚ್ಚಿರುತ್ತವೆ. ಅವರಲ್ಲಿ ವೊಂದು ಜಾತಿಯವರು ಬೇರೆ ಯಾವ ಜಾತಿಯವರ ಸಂಗಡಲೂ ಶರೀರ ಸಂಬಂಧ ಮಾಡುವದಿಲ್ಲ. ಅವರವರ ನಡಾವಳಿಗಳು ಬೇರೆ ಬೇರೆ ಇರುತ್ತವೆ. ಈ ಜಾತಿಗಳನ್ನು ಕೆಳಗೆ ವಿವರಿಸಿದ್ದೇವೆ.

ಮೇಲೆ ನಮೂದಿಸಿದ ಜಾತಿಗಳಲ್ಲಿ ಮೇಮನ್ ಜಾತಿಯವರು ಕಚ್ಛೀ ಭಾಷೆಯನ್ನಾಡುವರು, ಬೋರೀ ಜಾತಿಯವರು ಗುಜರಾಥೀ ಭಾಷೆಯನ್ನಾಡುವರು; ಮಿಕ್ಕ ಯಾ

**ಭಾಷೆ.**

ವತ್ತು ಜಾತಿಗಳ ಜನರು ಹಿಂದುಸ್ತಾನೀ ಭಾಷೆಯನ್ನಾಡುತ್ತಾರೆ. ಆದರೆ ಕಡಿಮೇ ಜಾತಿಗಳ ಮಾತಿನಲ್ಲಿ ಮರಾಠೀ, ಕನ್ನಡ ಶಬ್ದ

ಗಳು ಬಹಳ ಶೇರುತ್ತವೆ. ಹಳ್ಳಿಗಳಲ್ಲಿಯ ಮುಸಲ್ಮಾನರು ಅಚ್ಚಕನ್ನಡಿಗರೇ ಇರುತ್ತಾರೆಂದು ಹೇಳ ಬಹುದು.

ಹಳ್ಳಿಯ ಮುಸಲ್ಮಾನರು ಯೆತ್ತರಾಗಿಯೂ, ಧಷ್ಟಪುಷ್ಟರಾಗಿಯೂ ಇರುತ್ತಾರೆ. ಆದರೆ ದೊಡ್ಡ ದೊಡ್ಡ ಗ್ರಾಮಗಳಲ್ಲಿ ಸುಖದಿಂದ ಬೆಳಿದವರ ಮೈಬಣ್ಣ ಕೆಂಪು, ಕಣ್ಣು ದೊಡ್ಡವು, ಮುಖಲಕ್ಷಣ ಮೇಲಾದದ್ದು ಇರುವ ಕಾರಣ ಅವರಲ್ಲಿ ಪರದೇಶೀಯರ ರಕ್ತಸಂಬಂಧವು ಅಲ್ಪ ಸ್ವಲ್ಪವಾದರೂ ಇರ ಬಹುದೆಂದು ತೋರುತ್ತದೆ.

**ಆಹಾರ.**

ಯಾವತ್ತು ಜಾತಿಗಳ ಮುಸಲ್ಮಾನರು ನಿಕೃಷ್ಟ ಯೆರಡು ಸಾರಿ, ಬೆಳಿಗ್ಗೆ ಹತ್ತು ಘಂಟಿಗೆ ಪೊಮ್ಮೆ, ರಾತ್ರಿ ಯೆಂಟು ಘಂಟೆಗೆ ಪೊಮ್ಮೆ, ಊಟ ಮಾಡುತ್ತಾರೆ. ದೈವುಳ್ಳವರೂ ಪೊಕ್ಕಲತನದವರೂ ಮೂರು ಸಾರಿ ಉಣ್ಣುವರು. ಬಡವರು ಉಳ್ಳೀಗಡ್ಡಿ, ಮೆಣಸಿನ ಕಾಯಿ, ಜೆಳ್ಳೊಳ್ಳಿಗಳನ್ನು ಬಹಳ ತಿನ್ನುವರು. ಶ್ರೀಮಂತರು ಮೇಜವಾನಿಗಳಲ್ಲಿ ಬಿರಾಣಿ, ಜರ್ದಾ, ಯೆಂಬ ಪಕ್ವಾನ್ನಗಳನ್ನು ಮಾಡಿಸುವರು. ಬಿರಾಣಿ ಯೆಂಪರೆ ಅಕ್ಕಿಯೊಳಗೆ ಕುರಿಯ ಮಾಂಸ, ತುಪ್ಪ, ಯಾಲಕ್ಕಿ, ಲವಂಗ, ಮುಂತಾದ ಮಸಾಲೆಗಳು, ಕೇಶರ, ಇವಸ್ನೆಲ್ಲ ಹಾಕಿ, ಮಹಾರಾಷ್ಟ್ರರ ವಾಂಗೀಭಾತದಂತೆ ಮಾಡಿದ ಅನ್ನವು; ಜರ್ದಾ ಅಂದರೆ ಸಾಖರಭಾತವು. ಮಧ್ಯಮ ಪ್ರತಿಯವರು ಮೇಜವಾನಿಗಳಲ್ಲಿ ಅಕ್ಕಿಯೊಳಗೆ ತುಪ್ಪ, ಬೇಳೆ, ಹಾಕಿ ಹುಗ್ಗಿಯ ಮಾಡುವರು; ಅದಕ್ಕೆ ಪುಲಾಪೆಂದೆನ್ನುವರು. ಮೋಮಿಣರೂ ಬೋರಿಗಳೂ ಗೋಮಾಂಸವನ್ನು ತಕ್ಕೊಳ್ಳುವರು; ಇವರ ಹೊರ್ತು ಮಿಕ್ಕಾದವರು ಶ್ರೀಮಂತರಿದ್ದರೂ ಗೋಮಾಂಸಕ್ಕಿಂತ ಕುರಿಯ ಮಾಂಸವನ್ನೇ ಹೆಚ್ಚಾಗಿ ತಕ್ಕೊಳ್ಳುವರು. ಕಟಕರೂ ಬೇರೆ ಕಡಿಮೇ ಜಾತಿಗಳ ಜನರೂ ಯಾವ ಕಾರಣದಿಂದಲೂ ಗೋಮಾಂಸವನ್ನು ಕೈಯಿಂದ ಮುಟ್ಟುವದಿಲ್ಲ. ಕೋಳಿ, ಕೋಳಿಯ ತತ್ತಿ, ಮೀನು, ಇವುಗಳನ್ನು ಯೆಲ್ಲರೂ ನಿರಾತಂಕವಾಗಿ ತಕ್ಕೊಳ್ಳುವರು. ಧಾನ್ಯಾಹಾರವನ್ನು ಹಿಂದೂ ಜನರಂತೆಯೇ ಮುಸಲ್ಮಾನರಾದರೂ ಆಯಾ ಪ್ರದೇಶದ ರೂಢಿಯಂತೆ ತಮ್ಮ ಸ್ಥಿತಿಗೆ ಅನುಸಾರವಾಗಿ ತಕ್ಕೊಳ್ಳುವರು. ಶರೆಯನ್ನು ತಕ್ಕೊಳ್ಳಲಿಕ್ಕೆ ಧರ್ಮದ ಆತಂಕವಿದ್ದಾಗ್ಯೂ, ಯೆಲ್ಲ ಪ್ರಕಾರದ ಶರೆಯನ್ನು ಮುಸಲ್ಮಾನರು ತಕ್ಕೊಳ್ಳುವರು. ಹಳ್ಳಿಗಳಲ್ಲಿ ಸಿಂದಿಯ ಕುಡಿಯುವವರೇ ವಿಶೇಷ. ಕೆಲಕೆಲವು ಕಡೆಯಲ್ಲಿ ಮುಸಲ್ಮಾನರೇ ಸಿಂದಿಯನ್ನು ಮಾರುವರು. ಆದರೆ ಮದ್ಯದ ಸಂಪರ್ಕ ಮಾಡದಂಥ ಮುಸಲ್ಮಾನರನ್ನು ಕ್ವಚಿತ್ತಾಗಿ ಕಾಣ ಬಹುದು. ಗಾಂಜಿ, ಭಂಗಿ, ಮಾಜೂಮ, ಮದತ, ಇವುಗಳನ್ನು ಕಡಿಮೇ ಪ್ರತಿಯವರು, ವಿಶೇಷವಾಗಿ, ಫಕೀರರು, ಬಹಳವಾಗಿ ತಕ್ಕೊಳ್ಳುವರು; ತಂಬಾಕವನ್ನು ಬಹುತರ ಯೆಲ್ಲರೂ ಸೇದುವರು; ನೌಕರೂ ಫಕೀರರೂ ಅಫೀಮು ತಿನ್ನುವರು.

ಶೇಖ, ಸೈಯದ, ಮೊಗಲ, ಪಠಾಣ, ಈ ನಾಲ್ಕು ಜಾತಿಗಳ ಜನರು ತಲೆಗೆ ಮುಂಡಾಸ ಹಾಕುವರು, ಇಲ್ಲವೆ ಪಟಕಾ ಸುತ್ತುವರು; ಸೈಯದರು ಪಾಡಿಕೆಯಾಗಿ ಹಸರು ಮುಂಡಾಸ ಹಾಕುವರು.

**ಉಡಿಗೆ ಅಲಂಕಾರ.**

ಈ ಜಾತಿಗಳಲ್ಲಿ ಬಹು ಜನರು ಇಜಾರುಗಳನ್ನೂ ಉದ್ದಂಗಿಗಳನ್ನೂ ಹಾಕುವರು. ಮಿಕ್ಕ ಯಾವತ್ತು ಜಾತಿಗಳ ಜನರು ಧೋತರ ಉಟ್ಟು ರುಮಾಲ ಗಿಡ್ಡಂಗಿಗಳನ್ನು ಹಾಕಿ ಕೊಳ್ಳುವರು;

ಕೆಲವರು ತಲೆಗೆ ಸಣ್ಣ ಟೊಪ್ಪಿಗೆಗಳನ್ನು ಹಾಕುವರು. ಯಾವತ್ತು ಮುಸಲ್ಮಾನರು ತಲೆಯನ್ನು ಪೂರಾ ಬೋಳಿಸಿ ಕೊಂಡು ಬಹುತರ ಗಡ್ಡ ಬಿಡುವರು. ಬಹುತರ ಯಾವತ್ತು ಹೆಂಗಸರು ಶೀರೆಯನ್ನು ಕಚ್ಚೆ ಹಾಕದೆ ಉಟ್ಟು ಕುಬ್ಬಸ ತೊಡುವರು. ಉತ್ತಮ ಕುಲದ ಹೆಂಗಸರು ಪರರ ದೃಷ್ಟಿಗೆ ಬೀಳುವದಿಲ್ಲ. ಅವರು ಬಹುತರ ಮನೆ ಬಿಟ್ಟು ಹೋಗುವದಿಲ್ಲ; ಹೋಗುವದೇ ಅವಶ್ಯವಾದರೆ ಬಿಳಿ ಹಚ್ಚಡದ ಬುರಿಕೆ (ಗೋಶಾ) ಹಾಕಿ ಕೊಂಡು ಗದ್ದಲವಿಲ್ಲದಂಥ ಓಣಿಗಳಲ್ಲಿ ಹಾದು ಹೋಗುವರು. ಯೆಲ್ಲ ಹೆಂಗಸರ ಕೈಯಲ್ಲಿ ಬಳೆಗಳಿರುವವು; ಆದರೆ ಹಣೆಯ ಮೇಲೆ ಹಚ್ಚೀ ಬೊಟ್ಟು, ಕುಂಕುಮ, ಯೇನು ಇರುವದಿಲ್ಲ. ಕಡಿಮೇ ಪ್ರತಿಯ ಹೆಂಗಸರು ಲಗ್ನವಾದ ಬಳಿಕ ಹಲ್ಲಿಗೆ ಹಲ್ಲು ಪುಡಿ ಹಚ್ಚುವರು, ಕೊರಳಲ್ಲಿ ಕರೆಮಣಿಗಳ ಸರವನ್ನು ಕಟ್ಟುವರು, ಬೆಳ್ಳಿಯ ಸರಿಗೆ ಮುಂತಾದ ಆಭರಣಗಳನ್ನು ಹಾಕಿ ಕೊಳ್ಳುವರು. ಶ್ರೀಮಂತರ ಆಭರಣಗಳು ವಾಡಿಕೆಯಾಗಿ ಹಿಂದೂ ಹೆಂಗಸರ ಆಭರಣಗಳಂತೆಯೇ ಇರುತ್ತವೆ; ಆದರೆ ಅವರು ತಲೆಯಲ್ಲಿ ಅಲಂಕಾರ ಹಾಕುವದಿಲ್ಲ.

**ಮನೆಗಳು.**

ಮುಸಲ್ಮಾನರ ಮನೆಗಳ ಕಟ್ಟಡದಲ್ಲಿ ಹಿಂದೂ ಮನೆಗಳಿಂದ ವಿಂಗಡಿಸುವಂಥ ಪ್ರಕಾರವೇನು ಬಹುತರ ಇರುವದಿಲ್ಲ. ಗೋಶಾವುಳ್ಳ ಹೆಂಗಸರಿರುವ ಮನೆಗಳಲ್ಲಿ ಅವರ ಕೋಣೆಗಳು ಪರರ ದೃಷ್ಟಿಗೆ ಬೀಳದ ಹಾಗೆ ವೊಳಗೆ ಇರುತ್ತವೆ. ಹೊರ ಗೋಡೆಗಳನ್ನು ಬರೀ ಸುಣ್ಣದಿಂದ ಸಾರಿಸುವರು, ಇಲ್ಲವೆ ಅವಕ್ಕೆ ಸುಣ್ಣದ ಶಿಡಕುಗಳನ್ನು ಕೊಡುವರು. ಹೆಬ್ಬಾಗಿಲಿಗೆ ಪರದೆಯನ್ನು ಕಟ್ಟುವ ನಡಾವಳಿಯು ಬಹು ಜನರಲ್ಲಿ ಇರುತ್ತವೆ.

**ಹೋರೆಗಳು.**

ಬಹು ಜನರು ದೊಡ್ಡ ದೊಡ್ಡ ಇನಾಮುದಾರರಿರುತ್ತಾರೆ; ಕೆಲವರಿಗೆ ಜಹಾಗೀರುಗಳಿರುತ್ತವೆ. ಅವರು ಯೇನು ಹೋರೆಯನ್ನು ಮಾಡುವದಿಲ್ಲೆಂದು ಹೇಳ ಬಹುದು. ಹಳ್ಳಿಗಳಲ್ಲಿಯ ಮುಸಲ್ಮಾನರಿಗೆ ಅಲ್ಪ ಸ್ವಲ್ಪ ಭೂಮಿ ಇರುತ್ತದೆ; ಅವರು ವಾಡಿಕೆಯಾಗಿ ವೊಕ್ಕಲತನ ಮಾಡುವರು. ಮಿಕ್ಕಾದವರು ಅತ್ಯುತ್ತಮದಿಂದ ಅತಿ ನೀಚದ ವರೆಗೆ ಯಾವತ್ತು ಹೋರೆಗಳನ್ನು ಮಾಡುವರು. ಸಾಲ ಕೊಡುವದು, ಶರೆ ಮಾರುವದು, ಈ ಯೆರಡು ಹೋರೆಗಳನ್ನು ಯಾರು ಮಾಡಕೂಡದೆಂದು ಇವರ ಧರ್ಮದಲ್ಲಿ ಹೇಳಿದ್ದಾಗ್ಯೂ ಈ ಹೋರೆಗಳನ್ನು ಸಹ ಬಹು ಜನರು ಮಾಡುವರು. ಮೇಲೆ ಹೇಳಿದ ನಾಲ್ಕು ಪ್ರಮುಖ ಜಾತಿಗಳಲ್ಲಿ ಬಹು ಜನರು ನೌಕರಿಯ ಹೋರೆಯನ್ನೇ ಮಾಡುವರು.

**ಸ್ಥಿತಿ ರೀತಿಗಳು.**

ಆಲಸ್ಯವು ಯೆಲ್ಲ ಮುಸಲ್ಮಾನರ ಮುಖ್ಯ ಗುಣವೆಂದು ಹೇಳ ಬಹುದು. ಕಡಿಮೇ ಪ್ರತಿಯವರು ಜಗಳಗಂಟರೂ ತುಂಡರೂ ಅಪ್ರಮಾಣಿಕರೂ ಇರುತ್ತಾರೆ. ಇವರ ಮನೆಗಳಲ್ಲಿಯೂ ಮೈಮೇಲಿನ ಬಟ್ಟೆಗಳಲ್ಲಿಯೂ ಕಾಣುವ ಹೊಲಸು ಇವರ ಸೋಮಾರಿತನವನ್ನು ತೋರಿಸುತ್ತಿರುತ್ತದೆ. ಬಹು ಜನರಿಗೆ ಶರೆ ಕುಡಿಯುವ ಚಟ ಬಹಳ ಇರುತ್ತದೆ. ವತನದಾರರೂ ವ್ಯಾಪಾರಸ್ಥರೂ ಹೊರ್ತಾಗಿ ಮಿಕ್ಕಾದವರೆಲ್ಲರು ಆಲಸ್ಯ, ಶರೆ, ಈ ಯೆರಡು ಕಾರಣಗಳಿಂದ ಬಡತನದ ಸ್ಥಿತಿಯಲ್ಲಿ ಇದ್ದಾರೆ.

**ನಡಾವಳಿಗಳು.**

ಯಾವತ್ತು ಮುಸಲ್ಮಾನರು ಯೆಂಟನೇ ವರ್ಷದ ನಂತರ ಗಂಡು ಮಕ್ಕಳ ಸುಂತಿಯನ್ನು ಮಾಡುವರು. ಕೂಸು ಹುಟ್ಟಿದ ಬಳಿಕ ಹದಿನಾಲ್ಕು ದಿವಸದೊಳಗೆ ಅಕೀಕವೆಂಬ ವಿಧಿಯನ್ನೂ, ನಾಲ್ಕು ವರ್ಷ ನಾಲ್ಕು ತಿಂಗಳು ನಾಲ್ಕು ದಿವಸ ಆದ ದಿವಸ ಬಿಸ್ಮಿಲ್ಲಾ ಯೆಂಬ ಧರ್ಮ ಸ್ವೀಕಾರದ ವಿಧಿಯನ್ನೂ ಬಹು ಜನರು ಮಾಡುವರು. ಆದರೆ ಬಡ ಜನರು ಶಕ್ತಿ ಇಲ್ಲದ ಮೂಲಕ ಈ ವಿಧಿಗಳನ್ನು ಮಾಡುವದಿಲ್ಲ. ಹಡಿದ ಆರನೇ ದಿವಸ ಛಟ್ಟೀ ಪೂಜೆಯನ್ನು ಯೆಲ್ಲ ಜಾತಿಗಳಲ್ಲಿಯೂ ಮಾಡುವರು; ಇದರಂತೆ ಹಡಿದ ನಾಲ್ವತ್ತನೇ ದಿವಸವಾಗಲಿ, ವೊಂದು ವರ್ಷದ ನಂತರವಾಗಲಿ ಗಂಡು ಮಗುವಿನ ತಲೆ ಬೋಳಿಸುವ ವಿಧಿಯಾದರೂ ಯೆಲ್ಲರಲ್ಲಿ ನಡಿಯುತ್ತದೆ. ಲಗ್ನದಲ್ಲಿ ಯಾವತ್ತು ಜಾತಿಗಳಲ್ಲಿ ಮಕ್ಕಳಿಗೆ ಅರಿಶಿಣ ಹಚ್ಚುವ ನಡಾವಳಿಯುಂಟು. ಲಗ್ನವಾದ ಬಳಿಕ ಮೊದಲನೇ ಮೊಹರಮಿನಲ್ಲಿ ಬರುವ ಶುದ್ಧ ಪ್ರತಿ ಪದೆಯಲ್ಲಿ ಗಂಡ ಹೆಂಡರು ವೊತ್ತಟ್ಟಿಗೆ ಇರ ಕೂಡದು; ಹೆಂಡತಿಯು ತೌರ ಮನೆಗೆ ಹೋಗುವಳು. ಬೇನೆಯ ಮನುಷ್ಯನು ಮರಣೋನ್ಮುಖನಾದನೆಂದರೆ ಅವನ ಬಾಯಲ್ಲಿ ಸಕ್ಕರೆ ಕೂಡಿಸಿದ ನೀರು ಹಾಕಿ, ಕಾಲುಗಳನ್ನು ಚಾಚಿ ಅಂಗುಷ್ಠಗಳನ್ನು ಚರಿಯಿಂದ ಬಿಗಿಯುವರು. ಹಾಗೇ ಕಾಲು ಚಾಚಿದ ಹೆಣವನ್ನು ವೊಂದು ಹಲಿಗೆಯ ಮೇಲೆ ಹಾಕಿ ಮೋರೆ ಸಹ ಮುಚ್ಚಿ, ಹೂವಿನ ಮಾಲೆಗಳನ್ನು ಹಾಕಿ ನೆರೆಹೊರೆಯವರೊಡನೆ ಸ್ಮಶಾನಕ್ಕೆ ಹೋಗುವರು. ಅಲ್ಲಿ ಹೆಣದಂತೆ ಉದ್ದಕ್ಕೆ ತೋಡಿದ ಗೋರಿಯಲ್ಲಿ ಹೆಣದ ಮೋರೆ ಮಕ್ಕಾ ಪಟ್ಟಣದ ಕಡೆಗೆ ಆಗುವಂತೆ ಅದನ್ನು ಮಗ್ಗಲಾಗಿ ಮಲಗಿಸಿ, ಕಾಲಿನ ಚರಿಯನ್ನು ಬಿಚ್ಚಿ ಮೇಲಕ್ಕೆ ಬಂದ ಬಳಿಕ, ಬಳಗದವರು, ಆಪ್ತರು, ಸ್ನೇಹಿತರು, ಮುಂತಾದವರು ಕ್ರಮವಾಗಿ ಹಿಡಿ ಹಿಡಿ ಮಣ್ಣು ಹೆಣದ ಮೇಲೆ ಚಲ್ಲಿ ಕಡೆಯಲ್ಲಿ ಗೋರಿಯನ್ನು ಮುಚ್ಚುವರು. ಹುಗಿಯುವಾಗ ಕಾಜೀ ಅಥವಾ ಮುಲ್ಲಾ ಗೋರಿಯ ಬಳಿಯಲ್ಲಿ ನಿಂತು ಕುರಾಣವನ್ನು ಓದಲಿಕ್ಕೆ ಬೇಕು. ಮೂರನೇ ದಿವಸ ರಿಯಾರ್ಝುತ್ ಯೆಂಬ ವಿಧಾನವನ್ನು ಮಾಡಿ ಹತ್ತನೇ ದಿವಸ ಜಾತಿಯವರಿಗೆ ಊಟ ಹಾಕುವರು.

**ಧರ್ಮಾಚರಣೆ, ಧರ್ಮಾಧಿಕಾರಿಗಳು.**

ನಾಲ್ಕು ಪ್ರಮುಖ ಜಾತಿಗಳಲ್ಲಿಯೂ ಹಲಕೆಲವು ವ್ಯಾಪಾರಸ್ಥರಲ್ಲಿಯೂ ಮಕ್ಕಳಿಗೆ ಕುರಾಣವನ್ನು ಓದಲಿಕ್ಕೆ ಕಲಿಸುವ ನಡಾವಳಿಯುಂಟು. ಆದರೆ ವೊಟ್ಟು ಮುಸಲ್ಮಾನರಲ್ಲಿ ಕುರಾಣ ಓದ ಬಲ್ಲವರು ಶೇಕಡಾ ಇಪ್ಪತ್ತು ಜನರು ಹೋರಡುವರೋ ಇಲ್ಲವೋ, ಸಂಶಯವುಂಟು. ಲಗ್ನಗಳೂ ಮರಣದ ವಿಧಾನಗಳೂ ಕಾಜಿಯ ಹೊರ್ತು ಸಾಗುವದಿಲ್ಲ. ಮಶೀದಿಯಲ್ಲಿ ಪ್ರಾರ್ಥನೆಗೆ ಬಿಡಿ ದಿನಗಳಲ್ಲಿ ಯಾರು ಹೋಗದಿದ್ದಾಗ್ಯೂ, ರಮ್‌ಜಾನದಲ್ಲಿಯೂ ಬಾಕರ ಈದ ಯೆಂಬ ಹಬ್ಬದಲ್ಲಿಯೂ ಯೆಲ್ಲರೂ ತಪ್ಪದೆ ಹೋಗುವರು. ಈ ದಿವಸಗಳಲ್ಲಿ ಯೆಲ್ಲರೂ ಕಾಜಿಗೆ ದಕ್ಷಿಣೆಯನ್ನು ಕೊಡುವರು. ಕಾಜೀಯು ಮುಖ್ಯ ಧರ್ಮಾಧಿಕಾರಿ ಯೆನಿಸುವನು. ಮುಸಲ್ಮಾನರ ಆಳಿಕೆಯಲ್ಲಿ ದಿವಾಣೀ ಫೌಜದಾರೀ ನ್ಯಾಯದ ವಿಚಾರಣೆಯನ್ನು ಕಾಜೀ ಜನರೇ ಮಾಡುತ್ತಿದ್ದರು. ಅವರಿಗೆ ಧರ್ಮಶಾಸ್ತ್ರ ಹೇಳಿ

ಸಹಾಯ ಮಾಡುವ ವಿದ್ವಾಂಸರಿಗೆ ಮೌಲವಿಗಳೆನ್ನುವರು. ಆದರೆ ಈಗ ಲಗ್ನಗಳನ್ನು ವಹಿಯಲ್ಲಿ ಬರೆದಿಡುವದಕ್ಕಿಂತ ಹೆಚ್ಚಿನ ಅಧಿಕಾರವು ಕಾಜಿಯ ಕೈಯಲ್ಲಿ ಯೇನೂ ಇರುವದಿಲ್ಲೆಂದು ಹೇಳ ಬಹುದು. ಪ್ರಾರ್ಥನೆಯ ಕಾಲಕ್ಕೆ ಧರ್ಮೋಪದೇಶ ಮಾಡುವ ಹಕ್ಕು ಕಾಜೀದೇ ಇರುತ್ತದೆ. ಕಾಜೆಯ ಅಧಿಕಾರವು ವಂಶ ಪರಂಪರೆಯಾಗಿ ನಡಿಯುತ್ತದೆ; ಬಹು ಜನರಿಗೆ ಇನಾಮುಗಳು ನಡಿಯುತ್ತವೆ. ಕಾಜಿಯ ಕೈಕೆಳಗೆ ಮುಲ್ಲಾಯೆಂಬ ಉಪಾಧ್ಯಾಯರಿರುವರು. ಇವರನ್ನು ಕಾಜಿಯು ಬಡ ಜನರೊಳಗಿಂದ ಆರಿಸಿ ನೇಮಿಸುವನು. ಮುಸಲ್ಮಾನರಿರುವ ಹಳ್ಳಿಯಲ್ಲಿ ವೊಬ್ಬ ಮುಲ್ಲಾ ಇರುತ್ತಾನೆ. ಅವನು ಲಗ್ನ ಮುಂತಾದ ವಿಧಾನಗಳಲ್ಲಿ ಕಾಜೀ ಮಾಡ ತಕ್ಕ ಕೆಲಸಗಳನ್ನೆಲ್ಲ ಮಾಡುವನು. ಇದಲ್ಲದೆ ಕುರಿ ಕೋಳಿಗಳನ್ನು ಕೊಯ್ಯುವಾಗ ಮೊದಲು ಮುಲ್ಲಾನೇ ಚೂರಿಯನ್ನು ಹಾಕಲಿಕ್ಕೆ ಬೇಕು. ಹಿಂದೂ ಜನರಿಗಾಗಿ ಈ ಪಶುಗಳನ್ನು ಕೊಯ್ಯುವಾಗ ಸಹ ಮುಲ್ಲಾನ ಚೂರಿಯಿಂದ ಹಲಾಲ್* ಆಗಲಿಕ್ಕೆ ಬೇಕು. ಮುಲ್ಲಾನು ಮೂರು ಸಾರಿ ಚೂರಿಯ ಹಾಕಿ ಕುತ್ತಿಗೆಯನ್ನು ಕೊಯ್ಯಲಿಕ್ಕೆ ಬೇಕು. ಈ ಕೆಲಸಕ್ಕಾಗಿ ಮುಲ್ಲಾನಿಗೆ ವೊಂದು ಆಣೆ ಅಥವಾ ಯೆರಡು ಆಣೆ ದಕ್ಷಿಣೆ ದೊರಿಯುತ್ತದೆ; ಕೊಯಿದ ಪಶುವಿನ ಕೆಲವು ಭಾಗವನ್ನೂ ಅವನಿಗೆ ಕೊಡುವರು. ಕೆಲವು ವಿಧಿಗಳಲ್ಲಿ ಜನರಿಗೆ ಧರ್ಮೋಪದೇಶ ಮಾಡುವ ಹಕ್ಕು ಕಾಜಿಯ ಹೊರ್ತು ಬೇರೊಬ್ಬ ಮನುಷ್ಯನಿಗಿರುತ್ತದೆ. ಅವನಿಗೆ ಖತೀಬನೆನ್ನುವರು. ಎಷ್ಟೋ ಕಡೆಯಲ್ಲಿ ಖತೀಬರಿಗೆ ದೊಡ್ಡ ಇನಾಮುಗಳಿರುತ್ತವೆ. ಆದರೆ ಅವರು ಧರ್ಮೋಪದೇಶದ ಕೆಲಸವನ್ನು ಈಗ ಮಾಡುವದಿಲ್ಲ. ಪೂರ್ವ ಕಾಲದಲ್ಲಿ ಸತ್ಪುರುಷರೆಂದು ಹೆಸರಾದವರ ವಂಶದವರಿಗೆ ಪೀರಜಾದೆ ಯೆಂದೆನ್ನುವರು. ಇವರು ಬಹುತರ ಸೈಯದರಿರುವರು. ಪೀರಜಾದೆಗಳಿಗೆ ಮಶೀದೆಗಳಲ್ಲಿ ಹಲ ಕೆಲವು ಮಾನಪಾನಗಳೂ ಅಧಿಕಾರಗಳೂ ಇರುತ್ತವೆಂದು ತೋರುತ್ತದೆ. ಖತೀಬರಂತೆ ಪೀರಜಾದೆಗಳಿಗೂ ಜಹಾಗೀರುಗಳೂ ಇನಾಮುಗಳೂ ಈಗ್ಯೂ ನಡಿಯುತ್ತವೆ. ಆದರೆ ಇವರಲ್ಲಿ ಬಹು ಜನರು ಸೋಮಾರಿಗಳಾಗಿ ಆಟ ನೋಟಗಳಲ್ಲಿಯೂ ಮದ್ಯ ಪ್ರಾಶನದಲ್ಲಿಯೂ ಕಾಲಕ್ಷೇಪ ಮಾಡುವರು. ಸತ್ಪುರುಷರ ಗೋರಿಗಳಲ್ಲಿಯ ಪರಿಚಾರಕರಿಗೆ ಮುಜಾವರರೆನ್ನುವರು. ಅವರನ್ನು ಪೀರಜಾದೆಗಳು ನೇಮಿಸುವರು. ಇವರಿಗೆ ಬಹುತರ ಇನಾಮುಗಳಿರುವದಿಲ್ಲ. ಆ ಗೋರಿಗಳಿಗೆ ಭಕ್ತರು ಅರ್ಪಿಸಿದ ಪಶು, ಫಲ, ಕಾಳು, ದುಡ್ಡು, ಇವುಗಳಿಂದ ಅವರ ಉಪಜೀವನವಾಗುತ್ತದೆ. ಮಶೀದಿಗಳಲ್ಲಿ ಬಾಂಘಿ ಅಥವಾ ಮುವಾಝಮ್ ಯೆಂಬ ಪರಿಚಾರಕರಿರುವರು. ಮಶೀದೇಯ ಯೆತ್ತರವಾದ ಪ್ರದೇಶದಲ್ಲಿ ನಿಂತು ದಿನಕ್ಕೆ ಐದು ಸಾರಿ ಜನರನ್ನು ಪ್ರಾರ್ಥನೆಗೆ ಕರಿಯುವದೇ ಅವರ ಮುಖ್ಯ ಕರ್ತ

* ಕೊಯ್ಯ ತಕ್ಕ ಪಶು ಇಲ್ಲವೆ ಪಕ್ಷಿಯು ಹಲಾಲ್ ಆಗ ಬೇಕಾದರೆ, ಮುಲ್ಲಾನು ಅದಕ್ಕೆ ನೀರು ಕುಡಿಸಿ, ಅದರ ಕೊರಳಿನ ಕೂದಲನ್ನಾಗಲಿ ಗರಿಗಳನ್ನಾಗಲಿ ಸ್ವಲ್ಪ ಕೈಯಿಂದ ಕಿತ್ತಿ ತೆಗಿದು, ಹದನಾದ ಚೂರಿಯನ್ನು ಮೂರು ಸಾರಿ ಹಾಕ ಬೇಕು. ಮೊದಲನೇ ಸಾರಿ ಹಾಕುವಾಗ "ಸತ್ಯದಿಂದ ನಾನು ಕೊಯ್ಯುತ್ತೇನೆ" ಯೆಂಬ ಅರ್ಥದ ಅರಬೀ ಭಾಷೆಯ ವಾಕ್ಯವನ್ನು ನುಡಿಯ ಬೇಕು; ಎರಡನೇ ಸಾರಿ ಹಾಕುವಾಗ "ಅಲ್ಲಾ ದೊಡ್ಡವನಿರುತ್ತಾನೆ" ಯೆಂಬ ವಾಕ್ಯವನ್ನೂ, ಮೂರನೇ ಸಾರಿ ಹಾಕುವಾಗ, "ಅಲ್ಲಾನ ಹೊರ್ತು ಬೇರೆ ದೇವರು ಇಲ್ಲ" ಯೆಂಬ ವಾಕ್ಯವನ್ನೂ ನುಡಿಯ ಬೇಕು.

ವ್ಯವು. ಮುಜಾವರರೂ ಬಾಂಘಿಗಳೂ ತಮ್ಮ ಕೆಲಸವನ್ನು ಬಿಟ್ಟು ಹೋಗಲಿಕ್ಕೆ ಅಡ್ಡಿ ಇಲ್ಲ. ಭಿಕ್ಷೆಯಿಂದ ಉಪಜೀವನ ಮಾಡುವವರಿಗೆ ಫಕೀರರೆನ್ನುವರು. "ಫ" ಅಂದರೆ ಫಾಕಾ ಅಥವಾ ಉಪವಾಸ; "ಕಿ" ಅಂದರೆ ಕಿನಾಯತ ಅಥವಾ ತೃಪ್ತಿ; "ರ" ಅಂದರೆ ರಿಯಾಝುತ ಅಥವಾ ಕೆಲಸ. ಒಟ್ಟಿಗೆ ಫಕೀರರು ಯಾವಾಗಲೂ ತೃಪ್ತರಾಗಿರ ಬೇಕು, ಕೆಲಸ ಮಾಡಿ ಹೊಟ್ಟೆಗೆ ದೊರಕಿಸ ಬೇಕು, ಕೆಲಸವೂ ಆಹಾರವೂ ದೊರಿಯದಿದ್ದರೆ ಉಪವಾಸ ಮಾಡ ಬೇಕು. ಫಕೀರರಲ್ಲಿ "ಬಶರಾ" ಅಂದರೆ ಧರ್ಮಶಾಸ್ತ್ರದಂತೆ ನಡಿಯುವವರೆಂತಲೂ, "ಬೇಶರಾ" ಅಂದರೆ ಧರ್ಮಶಾಸ್ತ್ರವನ್ನು ಬಿಟ್ಟು ನಡಿಯುವವರೆಂತಲೂ ಯೆರಡು ವರ್ಗಗಳಿವೆ. ಮೊದಲನೇ ವರ್ಗದವರು ಮದುವೆಯಾಗಿ ಪೊತ್ತಟ್ಟಿಗೆ ಮನೆ ಮಾಡಿ ಕೊಂಡು ಸಂಸಾರ ಮಾಡುವ ಕಾರಣ ಅವರಿಗೆ ಮುಕಿಮ್ ಶಾಹಿ ಅಂದರೆ ಸ್ಥಾಯಿಕರೆಂದೆನ್ನುವರು. ಎರಡನೇ ವರ್ಗದವರು ಲಗ್ನ ಮಾಡಿ ಕೊಳ್ಳದೆ ಭಿಕ್ಷೆ ಬೇಡುತ್ತ ದೇಶ ಸಂಚಾರ ಮಾಡುವ ಕಾರಣ ಅವರಿಗೆ ವರವೇಶಿಗಳೆಂದರೆ ಸಂಚಾರಕರೆಂದೆನ್ನುವರು. ಈ ಯೆರಡೂ ವರ್ಗಗಳ ಫಕೀರರು ನಾಲ್ವರು ಇಮಾಮುಗಳಿಗೂ, ಅಲ್ಲಿಯ ವಂಶದ ಖಾನವಾಡಾ ಯೆಂಬ ಹದಿನಾಲ್ಕು ಕುಟುಂಬಗಳಿಗೂ ಮಾನ ಕೊಡುತ್ತಾರೆ.

## ಸಾಕಲ್ಯ ಜಾತಿಗಳು

**ಸೈಯದರು ಅಥವಾ ಪೀರಜಾದೆಗಳು.**

ಸೈಯದರು.—ಇವರಿಗೆ ಪೀರಜಾದೆಗಳೆಂತಲೂ ಮಶೇಕರೆಂತಲೂ ಅನ್ನುವರು. ವಿಜಾಪುರದ ಆದಿಲ್ ಶಾಹಿಯಲ್ಲಿ ಬಹು ಜನರಿಗೆ ಉಪದೇಶ ಮಾಡಿ ಮುಸಲ್ಮಾನ ಧರ್ಮದ ದೀಕ್ಷೆಯನ್ನು ಕೊಟ್ಟಂಥ ಸತ್ಪುರುಷರೆಂಬ ಧರ್ಮ ಪ್ರಸಾರಕರೇ ತಮ್ಮ ಮೂಲ ಪುರುಷರೆಂದು ಇವರು ಹೇಳುತ್ತಾರೆ. ಆ ಧರ್ಮ ಪ್ರಸಾರಕರು ಅರಬಸ್ತಾನದಿಂದ ಬಂದಂಥ ಫಾತಿಮಾ, ಅಲ್ಲೀ ಈ ದಂಪತಿಗಳ ವಂಶದವರೆಂದು ಹೇಳುತ್ತಾರೆ. ಈ ವಂಶದವರಿಗೇ ಸೈಯದರೆನ್ನುವರು. ಫಾತಿಮಾ, ಅಲ್ಲೀ, ಇವರ ಮಕ್ಕಳು ಇಬ್ಬರು ಹಸೆನ, ಹುಸೇನ, ಯೆಂಬವರಿದ್ದರು. ಹಸೆನನ ವಂಶದವರಿಗೆ ಹಸನೀ ಯೆಂತಲೂ, ಹುಸೇನನ ವಂಶದವರಿಗೆ ಹುಸೇನೀ ಯೆಂತಲೂ ಹೆಸರುಗಳಿವೆ. ಇವರೊಳಗೆ ಮತ್ತೂ ಹಲವು ಪೊಳಭೇದಗಳಾಗಿವೆ. ಸೈಯದವರು ತಮ್ಮ ಹೆಸರಿನ ಹಿಂದೆ "ಸೈಯದ" (ಪವಿತ್ರ) ಅಥವಾ "ಮೀರ" (ಮುಖ್ಯ) ಯೆಂಬ ಬಿರುದು ಹಚ್ಚಿ ಕೊಂಡು, ಮುಂದೆ "ಶಹಾ" (ಅರಸು) ಯೆಂಬ ಉಪಪದವನ್ನು ಹಚ್ಚಿ ಕೊಳ್ಳುವರು. ಅಂದರೆ ಕಾಶೀಮ ಯೆಂಬ ಹೆಸರಿನ ಮನುಷ್ಯನು ತನಗೆ "ಸೈಯದ ಕಾಶೀಮ ಶಹಾ" ಅಥವಾ "ಮೀರ ಕಾಶೀಮ ಶಹಾ" ಅಂದು ಕೊಳ್ಳುವನು. ಹೆಂಗಸರ ಹೆಸರಿನ ಮುಂದೆ ಬಿಬೀ ಯೆಂಬ ಉಪಪದವಿರುತ್ತದೆ. ಸೈಯದರೊಳಗೆ ದೇಶೀ ಜನರ ಸಂತತಿಯು ಬಹಳವಾಗಿ ಮಿಶ್ರವಾಗಿದ್ದಾಗ್ಯೂ ಇವರ ನಿಲಿವಿಕೆ ವಾಡಿಕೆಯಾಗಿ, ಯೆತ್ತರ, ಮೈಕಟ್ಟು ಕಸುವುಳ್ಳದ್ದು, ಮೈಬಣ್ಣ ವಾಡಿಕೆಯಾಗಿ ಕೆಂಪು ಇರುವದು. ಸೈಯದರು ತಲೆಯನ್ನು ಪೂರಾ ಬೋಳಿಸಿ

ಕೊಂಡು ಪೂರಾ ಗಡ್ಡವನ್ನು ಕಾಯುವರು. ಇವರ ಉಡಿಗೆಗಳು ಹಸುರು ಇಲ್ಲವೆ ಬಿಳಿ ಮುಂಡಾಸ ಅಥವಾ ರುಮಾಲ, ಇಜಾರು ಇಲ್ಲವೆ ಧೋತರ, ಉದ್ದಂಗಿ. ಹೆಂಗಸರು ಮಧ್ಯಮ ನಿಲಿವಿಕೆಯವರಾಗಿ, ದೊಡ್ಡ ಕಣ್ಣು, ಕುಡಿಹುಬ್ಬು, ನೆಟ್ಟನ್ನ ಮೂಗು, ಕೆಂಪು ಮೈಬಣ್ಣ, ದುಂಡುಮೈ, ಇವುಗಳಿಂದ ಸುಂದರಿಯರಾಗಿರುವರು. ಇವರು ಆರ್ಯರ ಹೆಂಗಸರಂತೆ ಕಚ್ಚೆ ಹಾಕದೆ ಶೀರೆ ಉಟ್ಟುಕೊಂಡು ಕುಬ್ಬಸ ತೊಡುವರು. ಇವರ ಹಣೆಯ ಮೇಲೆ ಕುಂಕುಮ ಹಚ್ಚೀ ಬೊಟ್ಟುಗಳೂ ಕೊರಳಲ್ಲಿ ಕರೆಮಣಿಗಳೂ ಇರುವದಿಲ್ಲ; ಆದರೆ ಕೈಯಲ್ಲಿ ಬಳೆಗಳು ಬಹುತರ ಇರುತ್ತವೆ. ಈ ಹೆಂಗಸರಿಗೆ ಗೋಷಾ ಅಂದರೆ ಬುರಿಕಿ ಇರುತ್ತದೆ. ಇವರು ಪರರ ದೃಷ್ಟಿಗೆ ಬೀಳುವದಿಲ್ಲ; ಮನೆಗೆಲಸದ ಹೊರ್ತು ಬೇರೆ ಕೆಲಸವೇನು ಮಾಡುವದಿಲ್ಲ. ಗಂಡಸರೂ ಹೆಂಗಸರೂ ನಿರ್ಮಲವಾಗಿರುವರು; ದೈವುಳ್ಳವರ ಮನೆಗಳೂ ನಿರ್ಮಲವಾಗಿರುವವು. ಸೈಯದರಲ್ಲಿ ಕೆಲವರಿಗೆ ಜಹಾಗೀರುಗಳೂ ಇನಾಮುಗಳೂ ಇರುತ್ತವೆ, ಕೆಲವರು ವ್ಯಾಪಾರ ಮಾಡುವರು, ಮಕ್ತೆಗಳನ್ನು ತಕ್ಕೊಳ್ಳುವರು. ಬಡವರಿದ್ದವರು ದಂಡಿನಲ್ಲಿ ಶಿಪಾಯಿಗಳಾಗುವರು, ಪೋಲೀಸ ಶಿಪಾಯಿಗಳಾಗುವರು, ಇಲ್ಲವೆ ಟಪಾಲಿನ ಕೆಲಸ ಮಾಡುವರು, ನೀಚ ಹೋರೆಗಳನ್ನು ಸೈಯದರು ಯಾರೂ ಮಾಡುವದಿಲ್ಲೆಂದು ಹೇಳ ಬಹುದು. ಇವರು ವಾಡಿಕೆಯಾಗಿ ಉದ್ಯೋಗಿಗಳಾದಾಗ್ಯೂ ಸುಖೋಪಭೋಗಕ್ಕೂ ದಂದುಗಾರಿಕೆಗೂ ಇವರ ಮನಸಿನ ವೊಲವು ಹೆಚ್ಚಿರುತ್ತದೆ. ಸೈಯದರು ವಾಡಿಕೆಯಾಗಿ ತಮ್ಮ ತಮ್ಮೊಳಗೆ ಶರೀರ ಸಂಬಂಧ ಮಾಡಿಕೊಳ್ಳುವರು; ಆದರೂ ಅವಶ್ಯವಿದ್ದಲ್ಲಿ ಶೇಖರ ಕೂಡ ಶರೀರ ಸಂಬಂಧ ಮಾಡುವರು. ಇವರಲ್ಲಿಯ ಲಗ್ನ ಮರಣಗಳ ವಿಧಾನಗಳನ್ನು ಕಾಜಿಗಳೇ ಮಾಡಿಸ ತಕ್ಕವರು. ಹಿಂದೆ ಹೇಳಿದ ಸಾಮಾನ್ಯ ಆಚರಣೆಗಳೆಲ್ಲ ಇವರಲ್ಲಿ ನಡಿಯುತ್ತವೆ. ಸೈಯದರು ಸ್ವಧರ್ಮಾಭಿಮಾನಿಗಳಾದಾಗ್ಯೂ, ಈಗಿನ ಪ್ರಾಯಸ್ಥರು ಧರ್ಮಾಚರಣೆಗೆ ಬಹಳ ಲಕ್ಷ್ಯ ಕೊಡುವಂತೆ ತೋರುವದಿಲ್ಲ. ಇವರು ತಮ್ಮ ಮಕ್ಕಳಿಗೆ ಅರಬೀ, ಪರ್ಶಿಯನ್ ಭಾಷೆಗಳನ್ನು ಪ್ರೀತಿಯಿಂದ ಕಲಿಸುತ್ತಾರೆ; ಒಳಗಡೆಯಲ್ಲಿ ಇವರ ಮಕ್ಕಳು ಸರಕಾರೀ ಶಾಲೆಗೂ ಹೋಗುತ್ತಾರೆ; ಇಂಗ್ಲಿಷದ ಅಭ್ಯಾಸವನ್ನು ಬಹು ಸ್ವಲ್ಪ ಜನರು ಮಾಡುತ್ತಾರೆ.

ಶೇಖರು ಅಂದರೆ ಹಿರಿಯರು.—ಇವರೊಳಗೆ ಎರಡು ಮುಖ್ಯ ವರ್ಗಗಳಿವೆ. ಮುಹಮ್ಮದ ಪೈಗಂಬರನ ಮಾವನಾದ ಅಬೂಬಕರ ಸಿದಿಕನೆಂಬವನ ವಂಶದವರಿಗೆ ಸಿದಿಕರೆಂತಲೂ, ಆ ಪೈಗಂಬರನ ಅಳಿಯನಾದ ಉಮೆರಲ್ ಫರುಕನೆಂಬವನ ವಂಶದವರಿಗೆ ಫರುಕಿಗಳೆಂತಲೂ ಅನ್ನುವರು.

**ಶೇಖರು.**

ಆದರೆ ಧರ್ಮಾಂತರ ಮಾಡಿದ ಹಿಂದೂ ಜನರ ವಂಶದವರು ಸಹ ಇವರೊಳಗೆ ಬಹು ಜನರು ಕೂಡಿದ್ದಾರೆ. ಇವರು ತಮ್ಮ ಹೆಸರಿನ ಹಿಂದೆ "ಶೇಖ" ಯೆಂಬ ಬಿರುದು ಹಚ್ಚಿಕೊಳ್ಳುವರು. ಇವರ ಸ್ವರೂಪ, ಉಡಿಗೆ, ಸ್ಥಿತಿ, ಮುಂತಾದವುಗಳೆಲ್ಲ ಸೈಯದರಂತೆ ಇರುತ್ತವೆ. ಇವರು ಸೈಯದ, ಮೊಲಗ, ಪಠಾಣ, ಈ ಮೂವರ ಕೂಡ ಶರೀರ ಸಂಬಂಧ ಮಾಡುವರು. ಇವರ ಹೆಂಗಸರಿಗೆ ಗೋಷಾ ಇದ್ದಾಗ್ಯೂ, ಅವರು ಮನೆಯಲ್ಲಿ ಕೂತು

ರೇಶಿಮೆ ಮುಂತಾದವುಗಳ ಸಂಪಾದನೆಯ ಉದ್ಯೋಗವನ್ನು ಕೆಲ ಕೆಲವು ಕಡೆಯಲ್ಲಿ ಮಾಡುವರು. ಇವರು ಸೈಯದರಷ್ಟು ನಿರ್ಬಂಧದಿಂದ ಮಕ್ಕಳಿಗೆ ಅರಬೀ, ಪರ್ಶಿಯನ್ ಭಾಷೆಗಳನ್ನು ಕಲಿಸುವದಿಲ್ಲ; ಉಡುದೂ ಭಾಷೆಯನ್ನು ಮಾತ್ರ ಕಲಿಸುವರು. ಒಳಗಡೆಯಲ್ಲಿ ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಮೊಗಲರು.**

ಮೊಗಲರು.—ಇವರು ೧೭ನೇ ಶತಕದಲ್ಲಿ ದಕ್ಷಿಣಕ್ಕೆ ಬಂದ ಮೊಗಲರು ತಮ್ಮ ಮೂಲ ಪುರುಷರೆಂದು ಹೇಳುತ್ತಾರೆ. ಗಂಡಸರು "ಮಿರ್ಜಾ" ಯೆಂಬ ಪದವಿಯನ್ನೂ ಹೆಂಗಸರು ಬಿಬೀ ಯೆಂಬ ಉಪಪದವನ್ನೂ ಧರಿಸುವರು. ಇವರ ಸ್ವರೂಪ, ಉಡಿಗೆ, ಸ್ಥಿತಿಗಳೆಲ್ಲ ಸೈಯದರಂತೆ. ಆದರೆ ಇವರಿಗೆ ಬಡತನ ಹೆಚ್ಚು. ಇವರಲ್ಲಿ ಜಹಾಗೀರದಾರರು ಇಲ್ಲ, ವತನದಾರರೂ ಬಹು ಕಡಿಮೆ. ಬಡವರಾದ ಸೈಯದರ ಹೋರೆಗಳನ್ನೆ ಇವರು ಮಾಡುವರು. ಇವರು ಮಕ್ಕಳಿಗೆ ಉಡದೂ ಭಾಷೆಯನ್ನು ಕಲಿಸುವರು, ಅವರನ್ನು ಶಾಲೆಗೂ ಕಳಿಸುವರು. ಆದರೆ ಇಂಗ್ಲಿಷವನ್ನು ಯಾರೂ ಕಲಿಯುವದಿಲ್ಲ.

**ಪಠಾಣರು.**

ಪಠಾಣರು, ಅಂದರೆ ಕಲಿಗಳು.—ಇವರು ದಕ್ಷಿಣಕ್ಕೆ ಬಂದಂಥ ಅಫಗಾಣರ ವಂಶದವರು ತಾವೆಂದು ಹೇಳುತ್ತಾರೆ. ಇವರ ಮೈಬಣ್ಣ ಸ್ವಲ್ಪ ಕಪ್ಪು; ಬಿಗತಾದ ಇಜಾರ ಹಾಕುವರು, ಇಲ್ಲವೆ ಧೋತರ ಉಡುವರು. ಇವರ ಉಡಿಗೆಗಳು ವಾಡಿಕೆಯಾಗಿ ಮಹರಾಷ್ಟ್ರರ ಉಡಿಗೆಗಳನ್ನು ಹೋಲುತ್ತವೆ. ಹೆಂಗಸರ ಸ್ವರೂಪ, ಉಡಿಗೆ, ಗೋಷಾ, ಇವೆಲ್ಲ ಬಹುತರ ಸೈಯದರ ಹೆಂಗಸರಂತೆ. ಸಾಧಾರಣ ಸ್ಥಿತಿ ರೀತಿಗಳಲ್ಲಿ ಸೈಯದರಿಗೂ ಪಠಾಣರಿಗೂ ಬಹಳ ಹೆಚ್ಚು ಕಡಿಮೆ ಇಲ್ಲ. ಆದರೆ ಬಡತನವು ಮೊಗಲರಂತೆ. ಪಠಾಣರು ಸೈಯದರ ಹೊರ್ತು ಮಿಕ್ಕ ಯಾವತ್ತು ಸಾಕಲ್ಯ ಜಾತಿಗಳ ಕೂಡ ಶರೀರ ಸಂಬಂಧ ಮಾಡುವರು. ಹಳ್ಳಿಗಳಲ್ಲಿಯ ಪಠಾಣರು ಗೋಮಾಂಸ ತಿನ್ನುವದಿಲ್ಲ. ಇವರೂ ಮಕ್ಕಳಿಗೆ ಉಡದೂ ಭಾಷೆಯನ್ನು ಕಲಿಸುವರು, ಅವರನ್ನು ಶಾಲೆಗೂ ಕಳಿಸುವರು.

**ಕಾಬೂಲೀ ಪಠಾಣರು.**

ಕಾಬೂಲೀ ಪಠಾಣರು.—ಇವರು ಪೊಳಗಡೆಯಲ್ಲಿ ಕಾಬೂಲಿನಿಂದ ಬಂದು ವಿಜಾಪುರ ಜಿಲ್ಲೆಯಲ್ಲಿ ಸ್ವಲ್ಪ ಜನರು ವಾಸಿಸುತ್ತಾರೆ. ಇವರ ನಿಲಿವಿಕೆ ಯೆತ್ತರ, ಮೈಕಟ್ಟು ಕಸುವುಳ್ಳದ್ದು, ಮೈಬಣ್ಣ ಕೆಂಪು, ಕಣ್ಣು ಬೆಕ್ಕಿನಂಥವು. ಇವರು ತಲೆಯ ಮೇಲೆ ಕಿರಿಗೂದಲೂ ಉದ್ದನ್ನ ಗಡ್ಡವನ್ನೂ ಕಾಯುವರು. ಇವರ ಮೈ ಮೇಲಿನ ಉಡಿಗೆಗಳು, ತಲೆಗೆ ಸಣ್ಣ ಟೊಪ್ಪಿಗೆ ಇಲ್ಲವೆ ಪಟಕಾ, ಬಹು ಸಡಿಲಾದ ಇಜಾರು, ಅಂಥಾದೇ ಉದ್ದಂಗಿ; ಇವೆಲ್ಲ ಬಹುತರ ಹೊಲಸು ಇರುತ್ತವೆ. ಇವರು ಮುಖ್ಯವಾಗಿ ಅರಿವೆಯ ವ್ಯಾಪಾರ ಮಾಡುವರು. ಇಲ್ಲವೆ ಬಡ್ಡಿಯ ವ್ಯವಹಾರ ಮಾಡುವರು. ಸಾಕಲ್ಯ ಜಾತಿಗಳಲ್ಲಿ ಬೇಕಾದವರ ಕೂಡ ಇವರು ಶರೀರ ಸಂಬಂಧ ಮಾಡುವರು.

ಅತ್ತಾರರು.—ಇವರು ಇದೇ ಜಾತಿಯ ಹಿಂದೂ ಜನರಾಗಿ ಔರಂಗಜೇಬನ ಕಾಲದಲ್ಲಿ ಮುಸಲ್ಮಾನರಾದವರ ವಂಶದವರು. ಇವರ ಸ್ವರೂಪವೂ ಉಡಿಗೆಗಳೂ ವಾಡಿಕೆಯಾಗಿ ವೊಕ್ಕಲಿಗರಂತೆ ಇರುತ್ತವೆ; ಆದರೆ ತಲೆಯನ್ನು ಪೂರಾ ಬೋಳಿಸಿ ಕೊಂಡು ಗಡ್ಡ ಕಾಯುವರು. ಹೆಂಗಸರಿಗೆ ಬುರಿಕೆಯುಂಟು. ಅತ್ತಾರರು ಸುಗಂಧದ ಯೆಣ್ಣೆ ಮುಂತಾದ ಸರಕುಗಳನ್ನು ಮಾಡಿ ಮಾರುವರು. ವಿಜಾಪುರದ ಸುಗಂಧ ದ್ರವ್ಯಗಳು ತಕ್ಕಮಟ್ಟಿಗೆ ಹೆಸರಾಗಿರುತ್ತವೆ. ಆದರೆ ಈ ಹೋರೆಯಲ್ಲಿ ಇವರಿಗೆ ವೊಳಿತಾಗಿ ಉಪಜೀವನವಾಗದ್ದರಿಂದ ಬಡತನವು ಬೆನ್ನು ಹತ್ತಿರುತ್ತದೆ. ಕೆಲವರು ಊರೂರು ತಿರುಗಿ ತಮ್ಮ ಮಾಲಿನ ಮಾರಾಟ ಮಾಡುವರು; ಕೆಲವರು ದೇಶಾಂತರಕ್ಕೂ ಹೋಗುವರು. ಅತ್ತಾರರು ಸಾಕಲ್ಯ ಜಾತಿಗಳಲ್ಲಿ ಬೇಕಾದವರ ಕೂಡ ಶರೀರ ಸಂಬಂಧ ಮಾಡುವರು. ಇವರು ತಮ್ಮ ಮಕ್ಕಳಿಗೆ ಸರಕಾರೀ ಶಾಲೆಗಳಲ್ಲಿ ಉಡದೂ, ಮರಾಠಿ, ಕನ್ನಡ ಭಾಷೆಗಳನ್ನು ಕಲಿಸುವರು. ಅತ್ತಾರರು ಹಳ್ಳಿಗಳಲ್ಲಿ ಹಿಂದೂ ದೇವತೆಗಳನ್ನು ಪೂಜಿಸುವರು.

**ಅತ್ತಾರರು.**

ಮಣಿಯಾರರು ಅಥವಾ ಮಣಿಗಾರರು.—ಇವರು ದೊಡ್ಡ ಗ್ರಾಮಗಳಲ್ಲಿ ಇರುತ್ತಾರೆ. ಗಂಡಸರ ಹೆಂಗಸರ ಸ್ವರೂಪ ಉಡಿಗೆಗಳು ವಾಡಿಕೆಯಾಗಿ ಹಿಂದೂ ಜನರಂತೆ. ಇವರು ಕಬ್ಬಿಣದ ಸಾಮಾನು, ನೂಲಿನ ಹಗ್ಗ, ಬಣ್ಣದ ಸಾಮಾನು, ಕನ್ನಡಿ, ನಾನಾ ಪ್ರಕಾರದ ಮಣಿಗಳು, ಮುಂತಾದವುಗಳ ಮಾರಾಟ ಮಾಡುವರು. ಒಟ್ಟಿಗೆ ಇವರು ಸುಖದಿಂದ ಇರುತ್ತಾರೆ. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಮಣಿಯಾರರು.**

ಕಾಗದಿಗಳು, ಅಂದರೆ ಕಾಗದ ಮಾಡುವವರು.—ಇವರು ವಿಜಾಪುರ, ಬಾಗಲಕೋಟೆ, ಗೋಕಾವಿ, ಮುಂತಾದ ಕಡೆಯಲ್ಲಿ ಇರುತ್ತಾರೆ. ಇವರ ಹೋರೆಯು ಈಗ ವೊಳಿತಾಗಿ ನಡಿಯುವದಿಲ್ಲಾದ್ದರಿಂದ ಇವರು ಬಡತನದ ಸ್ಥಿತಿಯಲ್ಲಿದ್ದಾರೆ. ಕೆಲವರು ಹೋರೆ ಹುಡುಕುತ್ತ ನಿಜಾಮನ ರಾಜ್ಯಕ್ಕೆ ಹೋಗುತ್ತಾರೆ. ಗೋಕಾವಿ ಬಾಗಲಕೋಟೆಗಳಲ್ಲಿ ಹುಟ್ಟುವ ಕಾಗದಗಳನ್ನು ಮುಖ್ಯವಾಗಿ ಅಂಗಡಿಕಾರರು ತಮ್ಮ ವಹಿಗಳಿಗಾಗಿ ತಕ್ಕೊಳ್ಳುವರು; ಸರಕಾರೀ ಕಚೇರಿಗಳಲ್ಲಿ ಲಖೋಟೆಗಳನ್ನು ಈ ಕಾಗದದಿಂದ ಮಾಡುವರು.

**ಕಾಗದಿಗಳು.**

ಕಲಾಯಿಗಾರರು.—ಇವರು ದೊಡ್ಡ ಗ್ರಾಮಗಳಲ್ಲಿ ಇರುತ್ತಾರೆ. ತಾಮ್ರ ಹಿತ್ತಾಳಿಗಳ ಪಾತ್ರೆಗಳಿಗೆ ಕಲಾಯಿ ಮಾಡುವದೇ ಇವರ ವಂಶ ಪರಂಪರೆಯ ಹೋರೆಯು. ಮುಸಲ್ಮಾನರು ನೀರು ಕುಡಿಯುವ ತಂಬಿಗೆಗಳಿಗೆ ಸಹ ಕಲಾಯಿ ಮಾಡುವ ಕಾರಣ ಮುಸಲ್ಮಾನರ ವಸ್ತಿಯು ಇದ್ದಲ್ಲಿ ಬಹುತರ ಕಲಾಯಿಗಾರರು ಇರುತ್ತಾರೆ. ಇವರ ಹೋರೆಯು ನೆಟ್ಟಗೆ ಸಾಗುತ್ತಿದ್ದಾಗ್ಯೂ, ಶರೆ, ಗಾಂಜಿ, ಭಂಗಿ, ಮುಂತಾದ ದುರ್ವ್ಯಸನಗಳು ಬಡತನವನ್ನು ಇವರ ಮನೆಗೆ ಬೇಗ ಕರೆಕೊಂಡು ಬರುತ್ತವೆ. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಕಲಾಯಿಗಾರರು.**

**ನಾಲಬಂದರು.**

ನಾಲಬಂದರು.—ದೊಡ್ಡ ಗ್ರಾಮಗಳಲ್ಲಿ ಅಲ್ಪ ಸ್ವಲ್ಪ ಜನರಿರುವರು. ಕುದುರೆಗಳಿಗೂ ಯೆತ್ತುಗಳಿಗೂ ನಾಲು ಕಟ್ಟುವದೇ ಇವರ ಕುಲದ ಹೋರೆ. ಈ ಹೋರೆಯು ಬಹಳ ದೊರಿಯುವದಿಲ್ಲಾದ್ದರಿಂದ ಇವರ ಉಪಜೀವನವು ವೊಳಿತಾಗಿ ಆಗುವದಿಲ್ಲ. ಕೆಲವರು ಪೋಲೀಸರೊಳಗೂ, ಟಪಾಲ ಖಾತೆಯಲ್ಲಿಯೂ, ಬೇರೆ ಕಡೆಯಲ್ಲಿಯೂ ಚಾಕರಿಗೆ ನಿಲ್ಲುವರು. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಬೈಡರು.**

ಬೈಡರು ಅಥವಾ ಬೇಡರು.—ಇವರು ಮೈಸೂರು ಶೀಮೆಯಿಂದ ಸ್ವಲ್ಪ ಜನರು ಈ ಶೀಮೆಗೆ ಬಂದು ಚಾಕರಿಯಿಂದ ಜೀವಿಸುತ್ತಾರೆ. ಇವರು ಮೂಲದಲ್ಲಿ ಬೇಡರು; ಹೈದರ ಅಲ್ಲಿಯು ಇವರಿಗೆ ಮುಸಲ್ಮಾನ ಧರ್ಮದ ದೀಕ್ಷೆ ಕೊಟ್ಟು ತನ್ನ ವಿಶ್ವಾಸದ ದಂಡಿನವರನ್ನು ಮಾಡಿ ಕೊಂಡಿದ್ದನು. ಆದರೆ ಇವರು ತಾವು ಕಾಬೂಲಿ ಶಿಪಾಯಿಗಳ ವಂಶದವರೆಂದು ಹೇಳುತ್ತಾರೆ. ಇವರು ಆಜಾನು ಬಾಹುಗಳಾಗಿ ಬಹು ಜನರು ರಣಗೂದಲು ಬಿಡುವರು.

**ಹಕೀಮರು.**

ಹಕೀಮರು, ಅಂದರೆ ವೈದ್ಯರು.—ಇವರಿಗೆ ಪೈಲವಾನರೆಂತಲೂ ಅನ್ನುವರು. ಗಂಡಸರು ಊರೂರು ತಿರುಗಿ ವೈದ್ಯತನವನ್ನು ಮಾಡುವರು; ಆದರೆ ಇವರ ಔಷಧಗಳಿಂದ ಗುಣವಾಗುವದು ಬಹು ಕಡಿಮೆ. ಹೆಂಗಸರಿಗೆ ಬುರಿಕೆ ಇಲ್ಲ. ಅವರು ಸೂಲಗಿತ್ತಿತನದ ಹೋರೆ ಮಾಡುವರು. ಕೆಲವರು ಹಕೀಮರು ನೌಕರಿಯಿಂದ ಜೀವಿಸುವರು. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಮಹಾವತರು.**

ಮಹಾವತರು, ಅಂದರೆ ಆನೆಗಳ ಊಳಿಗದವರು.—ಇವರು ಮುಸಲ್ಮಾನರಾದ ರಜಪೂತರೆಂದು ಹೇಳುತ್ತಾರೆ. ಈಗ ಇವರಿಗೆ ಆನೆಗಳನ್ನು ನಡಿಸುವ ಹೋರೆ ಬಹುತರ ದೊರಿಯುವದಿಲ್ಲಾದ ಕಾರಣ ಇವರು ನೌಕರಿಯಿಂದ ಜೀವಿಸುತ್ತಾರೆ. ಆದರೆ ಇವರ ಸಂಖ್ಯೆಯು ಸ್ವಲ್ಪವಿರುತ್ತದೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಸಾರಬಾನರು.**

ಸಾರಬಾನರು, ಅಂದರೆ ವೊಂಟಗಳ ಊಳಿಗದವರು.—ಇವರಾದರೂ ರಜಪೂತರ ವಂಶದವರೇ ಯೆಂಬು ತೋರುತ್ತದೆ. ಇವರ ಸ್ಥಿತಿಯಾದರೂ ಮಹಾವತರಂತೆಯೇ ಬಡತನದಿರುವದು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

## ಸ್ವತಂತ್ರ ಜಾತಿಗಳು.

ಬೊಹೊರಿಗಳು.—ಯಾವತ್ತು ಮುಸಲ್ಮಾನರಲ್ಲಿ ಇವರು ಮಾತ್ರ ಶಿಯಾ ಮತದವರುಂಟು. ಉಳಿದವರೆಲ್ಲ ಸುನೀ ಮತದವರೆಂದು ಹಿಂದೆ ಹೇಳಿದ್ದೇವೆ. ಇವರಲ್ಲಿ ಕೆಲವರು ಅರಬ, ಇರಾಣೀ ಜನ ವಂಶದವರು, ಕೆಲವರು ಕುಲಗೆಟ್ಟ ಹಿಂದೂ ಜನರ

ವಂಶದವರು ಇರುತ್ತಾರೆ. ಇವರು ದಾವುದನೆಂಬ ಮುಲ್ಲಾನಿಗೆ ಸಹಾಯ ಮಾಡಿದ್ದರಿಂದ ಇವರಿಗೆ ದಾವುದಿಗಳೆಂತಲೂ ಅನ್ನುವರು.

**ಬೊಹೊರಿಗಳು.**

ಬೊಹೊರಿಗಳು ಮನೆಯಲ್ಲಿ ಬೇರೆ ಮುಸಲ್ಮಾನರಂತೆ ಹಿಂದುಸ್ತಾನಿಯನ್ನು ಆಡದೆ ಗುಜರಾಥೀ ಭಾಷೆಯನ್ನು ಆಡುವರು. ಬೊಹೊರಿಗಳು ಕೆಂಪು ಮೈಬಣ್ಣದವರು, ಸುರೂಪಿಗಳು, ಆದರೆ ಅಶಕ್ತರು. ಗಂಡಸರು ತಲೆಯನ್ನು ಪೂರಾ ಬೋಳಿಸಿ ಕೊಂಡು ಗಡ್ಡ ಕಾಯುವರು. ಇವರ ಉಡಿಗೆಗಳು ಬಿಳಿ ಮುಂಡಾಸ ಇಲ್ಲವೆ ವೊಂದು ವಿಶೇಷ ತರದ ಟೊಪ್ಪಿಗೆ, ಸಡಿಲಾದ ಇಜಾರು, ಉದ್ದಂಗಿ. ಈ ಉಡಿಗೆಗಳೆಲ್ಲ ವಾಡಿಕೆಯಾಗಿ ನಿರ್ಮಲವಿರುತ್ತವೆ. ಇವರ ಹೆಂಗಸರು ಸುಕುಮಾರಿಯರು, ಹಸನುಳ್ಳವರು, ನಾಚಿಕೆಯುಳ್ಳವರು; ಅಂಗೈ ಅಂಗಾಲುಗಳಿಗೆ ಮದರಂಗಿಯ ಬಣ್ಣ ಹಚ್ಚಿ ಕೊಳ್ಳುವರು. ಈ ಹೆಂಗಸರು ಪಾರ್ಶೀ ಹೆಂಗಸರಂತೆ ಯೇಳೆಂಟು ವೊಳ ಉದ್ದವಾದ ರೇಶಿಮೆಯ ವಸ್ತ್ರವನ್ನಾಗಲಿ ಚೀಟಾಗಲಿ ಉಟ್ಟುಕೊಂಡು, ತಲೆಗೆ ಬಿಳಿ ಆರಿವೆಯ ಕಟ್ಟಿ ಕೊಂಡು ಗುಜರಾಥೀ ಹೆಂಗಸರಂತೆ ಹಿಂಬರಿಕೆಯ ಕುಬ್ಬಸ ತೊಡುವರು, ಅವರಂತೆ ಶರಗು ಬಲಕ್ಕೆ ಹೊತ್ತು ಕೊಳ್ಳುವರು. ಆದರೆ ಕರಿ ರೇಶಿಮೆಯ ಇಲ್ಲವೆ ಚೀಟಿನ ಬುರಕೆಯ ಹೊರ್ತು ಇವರು ಮನೆ ಬಿಟ್ಟು ಹೊರ ಬೀಳುವದಿಲ್ಲ. ಈ ಹೆಂಗಸರು ಮನೆಗೆಲಸದ ಹೊರ್ತು ಬೇರೆ ಯೇನು ಹೋರೆ ಮಾಡುವದಿಲ್ಲ. ಬೊಹೊರಿಗಳು ವಸ್ತ್ರ, ಪಾತ್ರೆ, ಮುಂತಾದವುಗಳ ಅಂಗಡಿಗಳನ್ನಿಟ್ಟು ಪ್ರಮಾಣಿಕತನದಿಂದ ವ್ಯವಹಾರ ಮಾಡುವರು; ಆದ್ದರಿಂದ ದೈವುಳ್ಳವರಾಗಿ ಸುಖದಿಂದ ಬಾಳ್ವೆ ಮಾಡುತ್ತಾರೆ. ಬೊಹೊರಿಗಳು ಬೇರೆ ಮುಸಲ್ಮಾನರ ಕೂಡ ಊಟದ ಬಳಿಕೆ ಮಾಡುತ್ತಿದ್ದಾಗ್ಯೂ ಶರೀರ ಸಂಬಂಧ ಮಾಡುವದಿಲ್ಲ. ಇವರು ಕಾಜೀಗೆ ಮಾನ ಕೊಡುವದಿಲ್ಲ; ಸೂರತದಲ್ಲಿ ಇರುವ ಮುಲ್ಲಾನು ಇವರ ಮುಖ್ಯ ಗುರು. ಯಾರಾದರೂ ಸತ್ತರೆ ಈ ಮುಲ್ಲಾನು ವೊಂದು ಪತ್ರ ಬರಿದು ಹೆಣದ ಕೈಯಲ್ಲಿ ಕಟ್ಟುವನು. ಅದರಲ್ಲಿ ಈ ಮನುಷ್ಯನಿಗೆ ದಯ ಮಾಡೆಂದು ದೇವರಿಗೆ ಪ್ರಾರ್ಥನೆ ಇರುತ್ತದೆ.* ಈ ಪತ್ರದ ಛಾಪೀ ಪ್ರತಿಗಳು ಸೂರತದಿಂದ ಬರುತ್ತವೆ. ಬೊಹೊರಿಗಳು ಬೇರೆ ಮುಸಲ್ಮಾನರಂತೆ ಮಶೀದೆಗಳಲ್ಲಿ ಪ್ರಾರ್ಥನೆಗೆ ಹೋಗುವದಿಲ್ಲ; ಇವರ ಪ್ರಾರ್ಥನಾಲಯವು ಜಮಾತಖಾನಾ ಯೆಂಬದೊಂದು ಬೇರೆ ಇರುತ್ತದೆ. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ; ಆದರೆ ಇಂಗ್ಲಿಷ ಕಲಿಯುವದಿಲ್ಲ.

---

* ಆ ಪ್ರಾರ್ಥನೆ ಹ್ಯಾಗಂದರೆ—"ಸೈತಾನನನ್ನು ತಪ್ಪಿಸುವದಕ್ಕಾಗಿ ನಾನು ಪರಾತ್ಪರನಾದ ದೇವರ ಆಶ್ರಯವನ್ನು ಹುಡುಕುತ್ತೇನೆ. ದೇವರು ಆ ಸೈತಾನನನ್ನು ಕಲ್ಲುಗಳಿಂದ ಜರ್ಜರ ಮಾಡಿದ್ದಾನೆ. ದೇವರೇ, ನಿನ್ನ ಸತ್ಯ ಸಂಕಲ್ಪದಿಂದ ಮರಣ ಹೊಂದಿದವನಾದ ಈ ನಿನ್ನ ದಾಸನು ಬಡವನಾಗಿ ನಿನ್ನ ದಯೆಯನ್ನು ಅಪೇಕ್ಷಿಸುತ್ತಾನೆ. ಇವನ ಪಾತಕಗಳನ್ನು ಕ್ಷಮಿಸಿ, ಇವನಿಗೆ ದಯ ತೋರಿಸಿ, ಇವನ ಆತ್ಮವನ್ನು ಪೈಗಂಬರರ ಸಂಗಡಲೂ, ಸತ್ಯವಾದಿಗಳ ಸಂಗಡಲೂ, ಧರ್ಮಾಭಿಮಾನಿಗಳ ಸಂಗಡಲೂ ಸತ್ಪುರುಷರ ಸಂಗಡಲೂ ಉದ್ಧರಿಸು. ಯಾಕಂದರೆ ಅವರ ಬಳಿಯಲ್ಲಿ ಇರುವದರಲ್ಲಿ ಹಿತವಿರುತ್ತದೆ. ಪರಮೇಶ್ವರನೇ, ಭೂಮಿಯಲ್ಲಿ ಉಳಿದ ಇವನ ಶರೀರಕ್ಕೆ ದಯ ತೋರಿಸು; ಮತ್ತೂ ಇವನಿಗೆ ಯಾತನೆ ಯಾಗದಂತೆಯೂ ಇವನಿರುವ ಸ್ಥಳವು ಸುಖಕರವಾಗುವಂತೆಯೂ ಇವನಲ್ಲಿ ಪ್ರೀತಿಯನ್ನಿಡು, ಇತ್ಯಾದಿ." ಇದರಲ್ಲಿ ಪೈಗಂಬರ, ಅಲ್ಲೀ, ಅವನ ಸಂತತಿಯವರಾದ ೧೨ ಜನ ಇಮಾಮರು, ಮುಂತಾದ ಸತ್ಪುರುಷರ ಹೆಸರುಗಳಿರುತ್ತವೆ. ಆ ಇಮಾಮರ ಹೆಸರುಗಳು ಹ್ಯಾಗಂದರೆ—೧ ಹಸೆನ, ೨ ಹುಸೇನ, ೩ ಅಲ್ಲೀ, ೪ ಮಹಮ್ಮದ, ೫ ಜಾಫರ, ೬ ಇಸ್ಮಾಯಿಲ್, ೭ ಮಹಮ್ಮದ, ೮ ಅಬಮಲ್ಲಾ ಅಲ್ಮಸ್ತೂರ, ೯ ಅಹಮ್ಮದ ಅಲ್ಮಸ್ತೂರ, ೧೦ ಹುಸೇನ ಅಲ್ಮಸ್ತೂರ, ೧೧ ಮಗಡಿ. (ಮೊದಲನೇ ಅಲ್ಲಿಯೇ ೧೨ನೇ ಇಮಾಮನೆಂದು ತೋರುತ್ತದೆ.)

ಗೈರ ಮಹಡಿಗಳು, ಅಂದರೆ ಮುಂದೆ ಬರತಕ್ಕ ಮಹಡಿ ಯೆಂಬ ಇಮಾಮನು ಬಂದು ಹೋದನೆಂದು ನಂಬುವವರು.—ಕಾಶಿಯ ಹತ್ತರ ಜವಾನ ಪುರವೆಂಬಲ್ಲಿ ಸನ್ ೧೪೪೩ರಲ್ಲಿ ಮಹಮ್ಮದ ಮಹಡಿ ಯೆಂಬ ಮನುಷ್ಯನು ಹುಟ್ಟಿದನು. ಇವನು ನಾಲ್ವತ್ತು ವರ್ಷದ ವಯಸ್ಸಿನ ಸುಮಾರಿನಲ್ಲಿ ವಲೀ ಅಂದರೆ ಸತ್ಪುರುಷನಾಗಿ ವರ್ತಿಸ ಹತ್ತಿದನು. ಈ ಮಹಡಿಗೆ ಈ ದೇಶದಲ್ಲಿಯೂ ಮಕ್ಕಾದಲ್ಲಿಯೂ ಬಹು ಜನರು ಶಿಷ್ಯರಾದರು. ಇವನು ಸನ್ ೧೪೯೯ರಲ್ಲಿ ಗುಜರಾಥದೊಳಗಿನ ಪಟ್ಟಣವೆಂಬ ಪಟ್ಟಣದಲ್ಲಿ ತಾನೇ ಮಹಡಿ ಯೆಂಬ ಇಮಾಮನೆಂದು ಜಾಹೀರು ಮಾಡಿದನು. ಇವನು ಕೆಲವು ಅಲೌಕಿಕ ಕೃತ್ಯಗಳನ್ನು ಮಾಡಿದನೆಂದು ಹೇಳುತ್ತಾರೆ; ಸತ್ತವರನ್ನು ಬದುಕಿಸಿದನಂತೆ; ಕಣ್ಣಿಲ್ಲದವರಿಗೆ ಕಣ್ಣುಗಳನ್ನೂ ಮೂಕರಿಗೆ ವಾಣಿಯನ್ನೂ ಕೊಟ್ಟನಂತೆ. ಇವನು ಸೈಯದ ಖೊಂಡ ಮೀರ, ಸೈಯದ ಮಹಮ್ಮದ, ಯೆಂಬ ಇಬ್ಬರು ಶಿಷ್ಯರೊಡನೆ ಮುಸಲ್ಮಾನರ ರಾಷ್ಟ್ರಗಳಲ್ಲಿ ಬಹಳವಾಗಿ ಸಂಚರಿಸಿ, ಕಡೆಯಲ್ಲಿ ಸನ್ ೧೫೦೫ರಲ್ಲಿ ಖುರಾಸಾನ ಪ್ರಾಂತದೊಳಗಿನ ಫರ್‍ರಾ ಯೆಂಬ ಪಟ್ಟಣದಲ್ಲಿ ಜ್ವರದಿಂದ ಮರಣ ಹೊಂದಿದನು. ಇವನ ಮೊಮ್ಮಗನಾದ ಮಹಮ್ಮದನನ್ನು ಅಗ್ರಾ ಶೀಮೆಯ ಜನರು ಬಹಳ ಪೀಡಿಸಿದ್ದರಿಂದ ಅವನು ಸನ್ ೧೫೫೦ರಲ್ಲಿ ಅಹಮ್ಮದ ನಗರದಲ್ಲಿ ಬುರಹಾಣ ನಿಜಾಮಶಹನೆಂಬ ಬಾದಶಹನ ಆಶ್ರಯಕ್ಕೆ ಬಂದು ನಿಂತನು. ಆ ಬಾದಶಹನು ತನ್ನ ಮಗಳನ್ನು ಮಹಮ್ಮದ ವಹಡೀಯ ಮಗನಿಗೆ ಕೊಟ್ಟು, ಅವನ ಹೊಸ ಪಂಥವನ್ನು ಬೆಳಿಸಲಿಕ್ಕೆ ಆಶ್ರಯ ಕೊಟ್ಟನು. ಬುರಹಾಣಶಹನ ಆಶ್ರಯದಿಂದ ದಕ್ಷಿಣದಲ್ಲಿ ಗೈರ ಮಹಡೀ ಮತದವರ ಸಂಖ್ಯೆಯು ದಿನ ದಿನಕ್ಕೆ ಬೆಳೆಯುತ್ತ ಸಾಗಿತು. ಆದರೆ ೧೭ನೇ ಶತಕದ ಕಡೆಯಲ್ಲಿ ಔರಂಗಜೇಬನು ಈ ಮತವನ್ನು ಮುರಿದನು. ಆದರೂ ಈ ಮತದವರು ಈಗ್ಯೂ ಇರುತ್ತಾರೆ. ಅವರು ತಮ್ಮ ಮತದ ಆಚರಣೆಯನ್ನು ತಕೀಯಾ, ಅಂದರೆ ಏಕಾಂತದಲ್ಲಿ ನಡಿಸಿ ಬಹಿರಂಗದಲ್ಲಿ ಸಾಧಾರಣ ಮುಸಲ್ಮಾನರಂತೆ ವರ್ತಿಸುವರು. ಆದಾಗ್ಯೂ ಗೈರ ಮಹಡಿಗಳು ಬೇರೆ ಮುಸಲ್ಮಾನರಲ್ಲಿ ಶರೀರ ಸಂಬಂಧ ಮಾಡುವದಿಲ್ಲ, ಲಗ್ನದ ಹೊರ್ತು ಬೇರೆ ಯಾವ ಕಾರ್ಯಕ್ಕೂ ಕಾಜಿಯನ್ನು ಕರಿಯುವದಿಲ್ಲ. ಗೈರ ಮಹಡಿಗಳ ಸಂಖ್ಯೆಯು ಈ ಶೀಮೆಯಲ್ಲಿ ಸ್ವಲ್ಪ ಉಂಟು; ಅವರು ಮುಖ್ಯವಾಗಿ ನೌಕರಿಯಿಂದ ಜೀವಿಸುವರು. ಇವರು ಮಕ್ಕಳಿಗೆ ಉರ್ದೂ ಭಾಷೆಯನ್ನು ಕಲಿಸುತ್ತಾರೆ.

**ಗೈರ ಮಹಡಿಗಳು.**

ನವಾಯತರು, ಅಂದರೆ ಹೊಸದಾಗಿ ಬಂದವರು.—ಇವರು ಕಾನಡಾ ಜಿಲ್ಲೆಯ ಹೊನ್ನಾವರ ತಾಲೂಕಿನಲ್ಲಿ ಇರುತ್ತಾರೆ. ಕ್ರಿಸ್ತೀ ಶಕದ ೭ನೇ ಶತಕದಲ್ಲಿ ಇರಾಕ ಪ್ರಾಂತದ ಸುಭೇದಾರನಾಗಿದ್ದ ಹಜ್ಜಾಜ ಇಬನ್ ಯೂಸಫ ಯೆಂಬ ಕ್ರೂರ ಮನುಷ್ಯನ ಬಾಧೆಗಳನ್ನು ತಪ್ಪಿಸುವದಕ್ಕೋಸ್ಕರವಾಗಿ, ಇರಾಣೀ ಆಖಾತದ ದಂಡೆಯಲ್ಲಿ ಇರುವ ಕೂಫಾ ಯೆಂಬ ಗ್ರಾಮದಿಂದ ಹಿಂದುಸ್ತಾನಕ್ಕೆ ತಮ್ಮ ಪೂರ್ವಜರು ಓಡಿ ಬಂದರೆಂದು ಇವರು ಹೇಳುತ್ತಾರೆ. ಇವರ ತರುವಾಯ ಬಹು ಜನ ವ್ಯಾಪಾರಸ್ಥರು ಅರಬಸ್ತಾನದಿಂದಲೂ ಇರಾಣದಿಂದಲೂ ಬಂದು ಪಶ್ಚಿಮ ಸಮುದ್ರ

**ನವಾಯತರು.**

ತೀರದಲ್ಲಿ ನಿಂತರು. ಆದರೆ ಈಗ ಮೈಸೂರು ಶೀಮೆಯಲ್ಲಿಯೂ ನವಾಯತರು ಇರುತ್ತಾರೆ. ಪರದೇಶಗಳಿಂದ ಬಂದ ಇವರ ಪೂರ್ವಜರು ಈ ದೇಶದ ಹೆಂಗಸರನ್ನು ಲಗ್ನ ಮಾಡಿ ಕೊಂಡು ಈ ದೇಶದವರೊಳಗೆ ಕೂಡಿದರೆಂದು ಮಸೂದಿ ಯೆಂಬ ಪ್ರವಾಸಿಯು ಬರಿದು ಇಟ್ಟಿದ್ದಾನೆ. ಇವನು ಅರಬಸ್ತಾನದಿಂದ ೧೦ನೇ ಶತಕದಲ್ಲಿ ಚೌಲ (ಮುಂಬಯಿಯ ಹತ್ತರ) ಯೆಂಬ ಬಂದರಕ್ಕೆ ಬಂದಿದ್ದನು. ಆದರೆ ಮೈಸೂರು ಶೀಮೆಯ ನವಾಯತರು ಈ ದೇಶದ ಹೆಂಗಸರನ್ನು ಲಗ್ನ ಮಾಡಿ ಕೊಂಡರೆಂಬದನ್ನು ವೊಪ್ಪಿ ಕೊಳ್ಳುವದಿಲ್ಲ; ತಾವು ಅಸಲ ಅರಬರ ಇಲ್ಲವೆ ಇರಾಣೀ ಜನರ ವಂಶದವರೆಂದು ಹೇಳುತ್ತಾರೆ. ಕಾನಡಾ ಜಿಲ್ಲೆಯ ನವಾಯತರು ಮನೆಯಲ್ಲಿ ಕೊಂಕಣೀ ಭಾಷೆಯನ್ನಾಡುವರು. ಇವರ ನಿಲಿವಿಕೆ ಮಧ್ಯಮ, ಮೈಬಣ್ಣ ಕೆಂಪು, ಮೈಕಟ್ಟು ಸ್ವಲ್ಪ ದಡಸಾದದ್ದು. ಇವರು ಕಿರಿಗಡ್ಡವನ್ನು ಕಾಯುವರು; ತಲೆಗೆ ಜರ ಹಚ್ಚಿದ ಸಣ್ಣ ಟೊಪ್ಪಿಗೆ ಹಾಕಿ, ಅದಕ್ಕೆ ಕೆಂಪು ದಸ್ತ ರುಮಾಲ ಸುತ್ತುವರು; ನಸುಗೆಂಪು ಬಣ್ಣದ ಲುಂಗಿಯನ್ನು ಉಡುವರು; ರೇಶಿಮೆಯ ಇಲ್ಲವೆ ನೂಲಿನ ಜಾಕೆಟು ಹಾಕಿ ಕೊಂಡು ಅಂಥಾದೇ ಶಾಲು ಹೆಗಲ ಮೇಲೆ ಚಲ್ಲಿ ಕೊಳ್ಳುವರು. ಹೆಂಗಸರು ಕೊಂಕಣೀ ಜನರಂತೆ ಶೀರೆ ಕುಬ್ಬಸಗಳನ್ನು ಧರಿಸುವರು; ಹೊರಗೆ ಹೋಗುವಾಗ ಕಟ್ಟಿಗೆಯ ಕಡಾವಿಗೆಗಳನ್ನು ಮೆಟ್ಟಿ ಬುರಿಕೆ ಹಾಕಿ ಕೊಳ್ಳುವರು. ನವಾಯತರು ಸುಸ್ವಭಾವದವರೂ ಶ್ರಮಕ್ಕೆ ಮೆಚ್ಚಿದವರೂ ಆದಾಗ್ಯೂ ಅಪ್ರಮಾಣಿಕರುಂಟು. ಇವರಲ್ಲಿ ಕೆಲವರಿಗೆ ಇನಾಮುಗಳಿವೆ, ಕೆಲವರು ಅರಿವೆಯ ವ್ಯಾಪಾರ ಮಾಡುತ್ತಾರೆ, ಕೆಲವರು ಬಡ್ಡಿಯ ವ್ಯವಹಾರ ಮಾಡುತ್ತಾರೆ. ಒಟ್ಟಿಗೆ ಇವರು ದೈವುಳ್ಳವರೆನಿಸಿ ಕೊಂಡು ಕಾನಡಾ ಜಿಲ್ಲೆಯ ಮುಸಲ್ಮಾನರಲ್ಲಿ ಶ್ರೇಷ್ಠತ್ವವನ್ನು ಪಡಿದಿದ್ದಾರೆ.

**ಸೌದಾಗರರು.**

ಸೌದಾಗರರು. — ಇವರು ವಿಜಾಪುರ, ಧಾರವಾಡ ಜಿಲ್ಲೆಗಳಲ್ಲಿ ಇರುತ್ತಾರೆ; ಮೈಸೂರ ಶೀಮೆಯ ನವಾಯತರ ವಂಶದವರು. ಮನೆಯಲ್ಲಿ ಹಿಂದುಸ್ತಾನಿಯನ್ನಾಡುವರು. ಗಂಡಸರೂ ಹೆಂಗಸರೂ ಮೇಲೆ ವಿವರಿಸಿದಂತೆ ಸುರೂಪಿಗಳು. ಆದರೆ ಗಂಡಸರು ಬೇರೆ ಮುಸಲ್ಮಾನರಂತೆ ಇಜಾರು ಹಾಕುವರು, ಇಲ್ಲವೆ ಧೋತ್ರ ಉಡುವರು; ಹೆಂಗಸರು ಮಾತ್ರ ಲುಂಗಿಗಳನ್ನು ಉಟ್ಟು, ಕುಬ್ಬಸ ತೊಟ್ಟು, ಬೇರೆ ವಸ್ತ್ರವನ್ನು ಶರಗಿನಂತೆ ಹೊದ್ದು ಕೊಳ್ಳುವರು; ಬುರಿಕೆಯ ಹೊರ್ತು ಹೊರಗೆ ಬರುವದಿಲ್ಲ. ಸೌದಾಗರರು ಅರಿವೆಯ ವ್ಯಾಪಾರ ಮಾಡುತ್ತಾರೆ; ಕೆಲವರು ವೊಕ್ಕಲತನ ಮಾಡುವರು. ಇವರು ತಾವು ಶೇಕರೆಂದು ಹೇಳುತ್ತಾರೆ; ಮಕ್ಕಳಿಗೆ ಕುರಾಣ ಓದಲಿಕ್ಕೆ ಕಲಿಸುವರು, ಅವರನ್ನು ಶಾಲೆಗೂ ಕಳಿಸುವರು.

**ಮೆಹಮನ್ನರು.**

ಮೆಹಮನ್ನರು. — ಇವರು ಕಚ್ಛ ಪ್ರಾಂತದಿಂದ ಬಂದು ಬೆಳಗಾವೀ ಜಿಲ್ಲೆಯಲ್ಲಿ ಸ್ವಲ್ಪ ಜನರು ವಾಸಿಸುತ್ತಾರೆ; ಮನೆಯಲ್ಲಿ ಕಚ್ಛೀ ಭಾಷೆಯನ್ನಾಡುವರು. ಗಂಡಸರು ಸುರೂಪಿಗಳು, ನಸುಗೆಂಪು ಬಣ್ಣದವರು; ಸಡಿಲಾದ ಇಜಾರು ತೊಟ್ಟು ತಲೆಗೆ ಬಣ್ಣದ ಪಟಕಾ ಸುತ್ತುವರು. ಹೆಂಗಸರು ಸರೂಪಿಗಳಾದಾಗ್ಯೂ ದಪ್ಪಾದ ಮೈಕಟ್ಟಿನವರು. ಇವರಾದರೂ ಇಜಾರು ತೊಟ್ಟು

ಮೊಣಕಾಲಿನ ವರೆಗೆ ಅಂಗಿಯನ್ನು ಹಾಕಿ ಕೊಳ್ಳುವರು, ಪರರ ದೃಷ್ಟಿಗೆ ಬೀಳುವದಿಲ್ಲ. ಮೆಹಮನ್ನರು ಮೂಲದಲ್ಲಿ ನೇಕಾರರಾದಾಗ್ಯೂ, ನೆಯ್ಯುವ ಹೋರೆ ಮಾಡದೆ ದಂಡಿನಲ್ಲಿ ಮಕ್ತೆಗಳನ್ನು ತಕ್ಕೊಳ್ಳುವರು, ಅರಿವೆಯ ಅಂಗಡಿ ಹಾಕುವರು; ಕೆಲವರು ಮಣಿಗಾರ ರಂಥ ಅಂಗಡಿಗಳನ್ನು ಹಚ್ಚುವರು. ಇವರು ಹೊಟ್ಟೆಗೆ ಸುಖದಿಂದಿದ್ದಾರೆ, ಮಕ್ಕಳನ್ನು ಶಾಲೆಗೆ ಕಳಿಸುತ್ತಾರೆ.

**ಮೋಮಿನರು.**

ಮೋಮಿನರು, ಅಂದರೆ ಜಾಡರು. — ಇವರು ೧೬ನೇ ಶತಕದಲ್ಲಿ ಮುಸಲ್ಮಾನರಾದ ಹಿಂದೂ ಜಾಡರ ವಂಶದವರು. ಇವರು ತಮ್ಮ ಪೂರ್ವಜರಿಗೆ ಮುಸಲ್ಮಾನ ಧರ್ಮದ ಉಪದೇಶವನ್ನು ಕೊಟ್ಟವರಾದ ಖಾಜಾ ಸೈಯದ ಹುಸೇನ ಗ್ಯಾಸುದೆರಾಜ, ಹಶಮ್‌ಪೀರ ಗುಜರಾತೀ, ಯೆಂಬ ಇಬ್ಬರು ಪೀರರಿಗೆ ಬಹಳ ಮಾನ ಕೊಡುತ್ತಾರೆ. ಇವರ ಮುಖ್ಯ ಹೋರೆ ಬಟ್ಟೆಗಳನ್ನು ನೆಯ್ಯುವದು; ಆದರೆ ಕೆಲವರು ನೌಕರಿಯಿಂದ ಜೀವಿಸುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ. ಇವರ ಹೆಂಗಸರಿಗೆ ಬುರಿಕೆ ಇಲ್ಲ.

**ಪಟಾಯಿಗಾರರು.**

ಪಟಾಯಿಗಾರರು. — ಇವರು ಔರಂಗಜೇಬನ ಕಾಲದಲ್ಲಿ ಮುಸಲ್ಮಾನರಾದ ಹಿಂದೂ ಪಟಾಯಿಗಾರರ ವಂಶದವರು. ಇವರ ಹೆಂಗಸರಿಗೆ ಬುರಿಕೆ ಇಲ್ಲ. ಇವರ ಮುಖ್ಯ ಹೋರೆ ಪುತ್ತಳಿಯ ಸರ, ಗೆಜ್ಜೀ ಟಿಕ್ಕಿ ಮುಂತಾದ ಆಭರಣಗಳನ್ನು ರೇಶಿಮೆಯಿಂದ ಹೆಣಿಯುವರು; ರೇಶಿಮೇ ದಾರಗಳನ್ನು ಮಾಡುವದು. ಕೆಲವರು ನೌಕರಿಯನ್ನೂ ಮಾಡುವದು, ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಗೌಕಸಾಬರು.**

ಗೌಕಸಾಬರು. — ಇವರು ಹೈದರ ಅಲ್ಲಿಯ ಚಾಕರರಾದ ಹಬಸೀ ಜನರು ತಮ್ಮ ಪೂರ್ವಜರೆಂದು ಹೇಳುತ್ತಾರೆ; ಸನ್ ೧೮೦೩ರ ಸುಮಾರಿನಲ್ಲಿ ಈ ಶೀಮೆಗೆ ಬಂದರು. ಇವರು ಆಕಳುಗಳನ್ನೂ ಯೆಮ್ಮೆಗಳನ್ನೂ ಕೊಯ್ದು ಮಾಂಸ ಮಾರುವರು. ಎಮ್ಮೆಯ ಮಾಂಸವನ್ನು ಹೊಲಿಯರೂ ಹಲಾಲಖೋರರೂ ತಕ್ಕೊಳ್ಳುವರು. ಸರಕಾರೀ ದಂಡು ಇರುವ ಸ್ಥಳದಲ್ಲಿ ಇವರು ವಾಡಿಕೆಯಾಗಿ ಇರುತ್ತಾರೆ. ಇವರ ಬಟ್ಟೆಗಳು ಹೊಲಸು ಬಹಳ; ಹೆಂಗಸರಿಗೆ ಬುರಿಕೆ ಇಲ್ಲ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಕಾಕರರು.**

ಕಾಕರರು. — ಇವರು ಅಫಗಣಿಸ್ತಾನದಿಂದ ಬಂದಂಥ ಕಪ್ಪು ಜನರು. ಇವರಲ್ಲಿ ಕೆಲವರು ನೌಕರೀ ಮಾಡುವರು, ಇಲ್ಲವೆ ಕೂಲಿಗೆ ಹೋಗುವರು; ಹೆಂಗಸರು ಕಟ್ಟಿಗೆ ಹುಲ್ಲುಗಳನ್ನು ಮಾರುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

ಲಬ್ಬೇರು. — ಇವರು ನವಾಯತರಂತೆ ೭ನೇ ಶತಕದಲ್ಲಿ ಹಜ್ಜಾಜ ಯೂಸಫ ಯೆಂಬವನ ಬಾಧೆಗಳನ್ನು ತಪ್ಪಿಸಿ ಅರಬಸ್ತಾನದಿಂದ ಓಡಿ ಬಂದವರ ವಂಶದವರು. ಇವರ ಸ್ವರೂಪ, ಉಡಿಗೆ, ನಡಾವಳಿಗಳು ನವಾಯತರಂತೆಯೇ ಇರುತ್ತವೆ. ಆದರೆ

ಇವರು ಮನೆಯಲ್ಲಿ ತಮಿಳ ಭಾಷೆಯನ್ನಾಡುವರು. ಇವರು ಈ ಶೀಮೆಯಲ್ಲಿ ಬಹುತರ ಸ್ಥಿರವಾಗಿ ವಾಸಿಸುವದಿಲ್ಲ. ಕಾಲಿಕತ್ತದ ನೆರೆಯ ಪ್ರದೇಶದಿಂದ ಈ ಶೀಮೆಗೆ ಬಂದು ಚರ್ಮಗಳನ್ನು ಕೊಂಡುಕೊಂಡು ಹೋಗುವರು. ಈ ವ್ಯಾಪಾರದಲ್ಲಿ ಇವರಿಗೆ ಪೊಳಿತಾಗಿ ಆದಾಯವಾಗುವ ಕಾರಣ ಇವರಿಗೆ ಬಡತನವಿಲ್ಲ. ಪೋರ್ತುಗೀಸರು ಬರುವ ಪೂರ್ವದಲ್ಲಿ ಸಮುದ್ರ ಮಾರ್ಗದಿಂದ ಪರದೇಶಗಳ ದೊಡ್ಡ ದೊಡ್ಡ ವ್ಯಾಪಾರಗಳನ್ನು ಇವರು ಮಾಡುವರು. ಇವರು ಮಕ್ಕಳಿಗೆ ಕುರಾಣ ಓದಲಿಕ್ಕೆ ಕಲಿಸುತ್ತಾರೆ.

**ಲಬ್ಬೇರು.**

ಮುಕೇರಿಗಳು.—ಇವರು ಟೀಪೂನು ಬಲಾತ್ಕಾರದಿಂದ ಮುಸಲ್ಮಾನರನ್ನು ಮಾಡಿದಂಥ ಲಮಾಣಿಗಳ ವಂಶದವರೆಂದು ಹೇಳುತ್ತಾರೆ. ಇವರು ಸನ್ ೧೮೦೩ರ ಸುಮಾರಿನಲ್ಲಿ ಮೈಸೂರಿಂದ ಈ ಶೀಮೆಗೆ ಬಂದರು. ಇವರ ಹೆಂಗಸರಿಗೆ ಬುರಿಕೆಯುಂಟು; ಅವರು ಚಿಕ್ಕ ಪ್ರಾಯದಲ್ಲಿ ಪರಿಕರ ಉಡುವರು, ಪ್ರೌಢರಾದ ಬಳಿಕ ಬೇರೆ ಮುಸಲ್ಮಾನ ಹೆಂಗಸರಂತೆ ಶೀರೆ ಕುಬ್ಬಸಗಳನ್ನು ಧರಿಸುವರು. ಈ ಹೆಂಗಸರು ನೀತಿವಂತರಲ್ಲೆಂದು ಹೇಳುತ್ತಾರೆ. ಮುಕೇರಿಗಳು ಕಾಳಿನ ವ್ಯಾಪಾರ ಮಾಡಿ ಕೊಂಡು ಸುಖದಿಂದಿದ್ದಾರೆ. ಇವರ ಬಟ್ಟೆಗಳೂ ಮನೆಗಳೂ ಸ್ವಚ್ಛವಿರುತ್ತವೆ; ಆದರೆ ಇವರು ಪ್ರಮಾಣಿಕರಲ್ಲ. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ. ಇವರು ಮುಸಲ್ಮಾನ ಧರ್ಮದಂತೆ ನಡಿಯುತ್ತಿದ್ದಾಗ್ಯೂ ಯೆಲ್ಲಮ್ಮನಿಗೆ ನಡಕೊಳ್ಳುತ್ತಾರೆ.

**ಮುಕೇರಿಗಳು.**

ಛಪ್ಪರಬಂದರು.—ಇವರು ಗುಜರಾಥದಿಂದ ಬಂದು ವಿಜಾಪುರ ಜಿಲ್ಲೆಯಲ್ಲಿ ಇರುತ್ತಾರೆ. ಇವರ ಹಿಂದುಸ್ತಾನೀ ಭಾಷೆಯಲ್ಲಿ ಗುಜರಾಥೀ ಶಬ್ದಗಳು ಬರುತ್ತವೆ. ಇವರಲ್ಲಿ ಬಾರಾಗಂಡಾವಾಲಾ, ಛೆಗಂಡಾವಾಲಾ, ಯೆಂಬೆರಡು ವರ್ಗಗಳುಂಟು. ಆದರೆ ಅವರವರೊಳಗೆ ಶರೀರ ಸಂಬಂಧವಾಗುತ್ತದೆ. ಛೆಗಂಡಾವಾಲಾ ವರ್ಗದ ಹೆಂಗಸರು ಗುಜರಾಥೀ ತರದ ಕುಬ್ಬಸಗಳನ್ನು ತೊಡುವರು. ಯಾವ ಹೆಂಗಸರಿಗೂ ಬುರಿಕೆ ಇಲ್ಲ. ಛಪ್ಪರಬಂದರಿಗೆ ಪೂರ್ವದಲ್ಲಿ ಠಗ್ಗರೆನ್ನುವರು; ಮೋಸ, ಕಳವು, ದರೋಡೆ, ಇವೇ ಆಗಿನ ಹೋರೆಗಳು. ಆದರೆ ಈಗ ಇವರು ವೊಕ್ಕಲತನ, ಕೂಲಿ, ಮುಂತಾದ ಹೋರೆಗಳನ್ನು ಮಾಡುತ್ತಾರೆ. ಹೆಂಗಸರು ಕೌದಿಗಳನ್ನು ಹೊಲಿಯುವರು, ಸಿಂದಿಯ ಚಾಪೆಗಳನ್ನು ಹೆಣೆಯುವರು. ಛಪ್ಪರಬಂದರು ಹಿಂದೂ ದೇವತೆಗಳಿಗೆ ನಡಕೊಳ್ಳುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಛಪ್ಪರಬಂದರು.**

ಜಾಟರು.—ಇವರು ಪಂಜಾಬ, ಸಿಂಧು ಪ್ರಾಂತಗಳಿಂದ ಅದಿಲ್‌ಶಾಹಿಯ ಕಾಲಕ್ಕೆ ಬಂದು ವಿಜಾಪುರ ಜಿಲ್ಲೆಯಲ್ಲಿ ವಾಸಿಸುತ್ತಾರೆ. ಪೂರ್ವ ಕಾಲದಲ್ಲಿ ಸುಲಿಗೆಯಿಂದ ಇವರು ಜೀವಿಸುವರು; ಆದರೆ ಈಗ ವೊಕ್ಕಲತನ, ಚಾಕರಿ, ಮುಂತಾದ ಹೋರೆಗಳನ್ನು ಮಾಡುತ್ತಾರೆ. ಇವರು ಸ್ವಚ್ಛತ್ವವುಳ್ಳವರಾಗಿ ಶ್ರಮ ಮಾಡಿ ಸುಖದಿಂದ ಬಾಳುತ್ತಾರೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಜಾಟರು.**

**ಬಾಗವಾನರು.**

ಬಾಗವಾನರು.—ಇವರು ಮಾಳೀ, ಕುಣಬೀ, ಯೆಂಬ ಹಿಂದೂ ಜಾತಿಗಳ ವಂಶದವರೆಂದು ಹೇಳುತ್ತಾರೆ. ಗಂಡಸರೂ ಹೆಂಗಸರೂ ಪಲ್ಲೆ, ಕಾಯಿ, ಹಣ್ಣುಗಳನ್ನು ಮಾರಿ ತಕ್ಕಮಟ್ಟಿಗೆ ಸುಖದಿಂದ ಇದ್ದಾರೆ. ಇವರ ಮಕ್ಕಳು ಬಹುತರ ಶಾಲೆಗೆ ಹೋಗುವದಿಲ್ಲ.

**ಬಕರ ಕಸಾಬರು.**

ಬಕರ ಕಸಾಬರು, ಅಥವಾ ಲಾಡ ಸುಲ್ತಾನಿಗಳು.—ಇವರು ಲಾಡರೆಂಬ ಹಿಂದೂ ಕಟಿಕರ ವಂಶದವರು, ಟೀಪೂನಿಂದ ಮುಸಲ್ಮಾನ ಧರ್ಮಕ್ಕೆ ಶೇರಿಸಲ್ಪಟ್ಟರು. ಇವರೊಳಗೆ ಕೌಂಡಾ, ಕಾಮಲಾ, ಯೆಂಬೆರಡು ವೊಳಭೇದಗಳಿವೆ. ಅವರವರೊಳಗೆ ಶರೀರ ಸಂಬಂಧವಾಗುವದಿಲ್ಲ. ಕಾಮಲಾ ವರ್ಗದವರು ನಿಜಾಮನ ರಾಜ್ಯದಲ್ಲಿ ಇರುತ್ತಾರೆ; ಅವರು ಹಸೆ ಮಾಂಸವನ್ನೂ ಬೆಯಿಸಿದ ಮಾಂಸವನ್ನೂ ಮಾರುವರು. ಕೌಂಡಾ ಜಾತಿಯವರು ಹಸೆ ಮಾಂಸವನ್ನು ಮಾತ್ರ ಮಾರುತ್ತಾರೆ. ಇವರ ಹಿಂದುಸ್ತಾನೀ ಭಾಷೆಯಲ್ಲಿ ಕನ್ನಡ ಶಬ್ದಗಳು ಬಹಳ ಮಿಶ್ರವಾಗುತ್ತವೆ; ಹಳ್ಳಿಗಳಲ್ಲಿ ಕನ್ನಡವೇ ಇವರ ಜನ್ಮಭಾಷೆಯುಂಟು. ಇವರು ಮಕ್ಕಳ ಸುಂತಾ ಮಾಡಿ, ಲಗ್ನಕ್ಕೂ ಮರಣದ ಸಂಸ್ಕಾರಕ್ಕೂ ಕಾಜೀಯನ್ನು ಕರಿಯುತ್ತಿದ್ದಾಗ್ಯೂ ಬೇರೆ ಮುಸಲ್ಮಾನರೊಳಗೆ ಕೂಡುವದಿಲ್ಲ; ಹಿಂದೂ ದೇವತೆಗಳಿಗೆ ನಡಕೊಳ್ಳುವರು, ಹಿಂದೂ ಹಬ್ಬಗಳನ್ನು ಮಾಡುವರು; ಗೋಮಾಂಸವನ್ನು ತಿನ್ನುವದಿಲ್ಲ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಭುಡ ಭುಂಜಿಗಳು.**

ಭುಡ ಭುಂಜಿಗಳು.—ಇವರು ಭೋಯಿ ಜಾತಿಯವರ (ಅಂದರೆ ಕಬ್ಬಲಿಗೇರ) ವಂಶದವರು, ವಿಜಾಪುರ ಜಿಲ್ಲೆಯಲ್ಲಿ ಇರುತ್ತಾರೆ. ಇವರು ಹುರಿಗಡ್ಲೆ, ಪುಠಾಣಿಗಳನ್ನು ಮಾಡಿ ಮಾರುವರು; ಕೆಲವರು ಪೋಲೀಸರೊಳಗೆ ಶೇರುವರು. ಇವರಾದರೂ ಹಿಂದೂ ದೇವತೆಗಳಿಗೆ ನಡಕೊಂಡು ಹಿಂದೂ ಹಬ್ಬಗಳನ್ನು ಮಾಡುತ್ತಾರೆ. ಇವರ ಹಿಂದುಸ್ತಾನಿಯಲ್ಲಿ ಕನ್ನಡ ಶಬ್ದಗಳು ಬಹಳ ಶೇರುತ್ತವೆ.

**ಗೌಂಡಿಗಳು.**

ಗೌಂಡಿಗಳು.—ಇವರು ಹಿಂದೂ ಮೋಪಗಾರರ (ಉಪ್ಪಾರರ) ವಂಶದವರೆಂದು ಹೇಳುತ್ತಾರೆ. ಮನೆಗಳನ್ನು ಕಟ್ಟುವದೇ ಇವರ ಮುಖ್ಯ ಹೋರೆಯು. ಈ ಶೀಮೆಗೆ ಹೊಗಿಬಂಡಿ ಬಂದಾಗಿನಿಂದ ಇವರ ಸ್ಥಿತಿಯು ಸುಧಾರಿಸುತ್ತ ನಡಿದದೆ. ಇವರ ಧರ್ಮಾಚರಣೆಯು ಮೇಲಿನವರಂತೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಝಾರೇಕರಿಗಳು.**

ಝಾರೇಕರಿಗಳು ಅಥವಾ ಧೂಳಭೋಯಿಗಳು.—ಇವರು ಹಿಂದೂ ಜಾಲಗಾರರ ಅಥವಾ ಸೊನ್ನಗಾರರ ವಂಶದವರೆಂದು ಹೇಳುತ್ತಾರೆ. ಬಹು ಜನರು ಮನೆಯಲ್ಲಿ ಕನ್ನಡ ಭಾಷೆಯನ್ನೇ ಆಡುವರು. ಇವರ ಧರ್ಮಾಚರಣೆಯು ಬಕರ ಕಸಾಬರಂತೆ. ಇವರು ಸೊನ್ನಗಾರರ ಅಂಗಡಿಯ ಧೂಳ, ಬೂದಿಗಳನ್ನು ತಕ್ಕೊಂಡು ಬೆಳ್ಳಿ ಭಂಗಾರಗಳ ಕಣಗಳನ್ನು ಆರಿಸಿ ಕೊಳ್ಳು

ವರು. ಕೆಲವರು ಮಳೆಗಾಲದ ಪ್ರವಾಹಗಳಲ್ಲಿಯೂ ಈ ಕಣಗಳನ್ನು ಹುಡುಕುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಪಿಂಜಾರರು.**

ಪಿಂಜಾರರು.—ಇವರು ಹಿಂದೂ ಪಿಂಜಾರರ ವಂಶದವರೆಂದು ಹೇಳುತ್ತಾರೆ. ಜಂತ್ರದ ಮೇಲೆ ನೂಲುವ ಹೋರೆಯು ವಿಲಾಯತಿಯ ನೂಲು ಬರುವದರಿಂದ ಮುರಿದ ಕಾರಣ ಇವರ ಹೋರೆಯು ಮುಗ್ಗುತ್ತ ನಡಿದದೆ. ಇವರ ಧರ್ಮಾಚರಣೆಯು ಬಕರ ಕಸಾಬರಂತೆ. ಹಳ್ಳಿಗಳಲ್ಲಿಯ ಪಿಂಜಾರರು ಮನೆಯಲ್ಲಿ ಕನ್ನಡ ಭಾಷೆಯನ್ನಾಡುವರು. ಇವರ ಮಕ್ಕಳು ಶಾಲೆಗೆ ಹೋಗುವದು ಅಪರೂಪ.

**ಶಿಕಲಗಾರರು.**

ಶಿಕಲಗಾರರು.—ಇವರು ಘಿಸಾಡಿಗಳ ಅಂದರೆ ಬೈಲುಗಂಬಾರರ, ವಂಶದವರೆಂದು ಹೇಳುತ್ತಾರೆ. ಆದರೆ ಇವರ ಸಂಖ್ಯೆಯು ಬಹು ಸ್ವಲ್ಪವಿರುತ್ತದೆ. ಇವರು ಮನೆಯಲ್ಲಿ ಬಹುತರ ಕನ್ನಡ ಭಾಷೆಯನ್ನೇ ಆಡುವರು; ಹಿಂದೂ ದೇವತೆಗಳಿಗೂ ಪೀರರಿಗೂ ನಡಕೊಳ್ಳುವರು. ಕತ್ತಿ, ಕಠಾರಿ, ಚೂರಿ, ಮುಂತಾದವುಗಳಿಗೆ ಶಿಕಲೀ ಮಾಡುವದೇ ಇವರ ಮುಖ್ಯ ಹೋರೆಯು. ಅದರಲ್ಲಿ ಇವರ ಹೊಟ್ಟೆ ತುಂಬುವದಿಲ್ಲಾದ ಕಾರಣ ಇವರು ಚಾಕರಿ ಮುಂತಾದ ಬೇರೆ ಹೋರೆಗಳನ್ನು ಮಾಡುವರು, ಇಲ್ಲವೆ ಭಿಕ್ಷೆ ಬೇಡುವರು. ಇವರ ಮಕ್ಕಳು ಶಾಲೆಗೆ ಪೋಗುವದಿಲ್ಲ.

**ಪಖಾಲಿಗಳು.**

ಪಖಾಲಿಗಳು.—ಇವರು ಇದೇ ಹೆಸರಿನ ಹಿಂದೂ ಜಾತಿಯ ವಂಶದವರಂತೆ;* ಇವರ ಪೂರ್ವಜರನ್ನು ಟೀಪೂನು ಮುಸಲ್ಮಾನರನ್ನು ಮಾಡಿದನೆಂದು ಹೇಳುತ್ತಾರೆ. ಇವರು ಮನೆಯಲ್ಲಿ ಹಿಂದುಸ್ತಾನಿಯನ್ನಾಗಲಿ ಕನ್ನಡವನ್ನಾಗಲಿ ಆಡುವರು. ಇವರು ಪಖಾಲಿಗಳಿಂದ ಮುಸಲ್ಮಾನರಿಗೂ ಖ್ರಿಸ್ತೀ ಜನರಿಗೂ ನೀರು ಹಾಕುವರು. ಇವರ ಧರ್ಮಾಚರಣೆಯು ಬಕರ ಕಸಾಬರಂತೆ, ಅಂದರೆ ಇವರು ಹಿಂದೂ ದೇವತೆಗಳಿಗೂ ಮುಸಲ್ಮಾನ ದೇವತೆಗಳಿಗೂ ನಡಕೊಳ್ಳುವರು, ಗೋಮಾಂಸ ತಿನ್ನುವದಿಲ್ಲ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಹಜಾಮರು.**

ಹಜಾಮರು.—ಇವರು ಹಿಂದೂ ನಾದಿಗರ ವಂಶದವರೆಂದು ಹೇಳುತ್ತಾರೆ. ಇವರು ಮನೆಯಲ್ಲಿ ಕನ್ನಡವನ್ನಾಗಲಿ ಹಿಂದುಸ್ತಾನಿಯನ್ನಾಗಲಿ ಆಡುವರು. ಇವರ ಹೆಂಗಸರು ಕೆಲವರು ಸೂಲಗಿತ್ತಿಯ ಕೆಲಸ ಮಾಡುತ್ತಾರೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಬಟ್ಯಾರರು.**

ಬಟ್ಯಾರರು, ಅಂದರೆ ಅಡಿಗೆಯವರು.—ಇವರು ಹಲವು ಹಿಂದೂ ಜಾತಿಗಳ ವಂಶದವರೆಂದು ಹೇಳುತ್ತಾರೆ. ದೊಡ್ಡ ಗ್ರಾಮಗಳಲ್ಲಿ ಮಾತ್ರ ಇವರು ಇರುತ್ತಾರೆ. ಅಡಿಗೆಯ ಹೋರೆಯನ್ನು ಇವರು ಪ್ರೊಳಗಡೆಯಲ್ಲಿ ಆರಂಭಿಸಿದ್ದಾರೆ. ರೊಟ್ಟಿ, ದೋಸಿ, ಪಲ್ಲೆ, ಅಡಿಗೆ ಮಾಡಿದ ಮಾಂಸ, ಇವುಗ

* ಪಖಾಲಿಯ ನೀರು ಹಿಂದೂ ಜನರ ಕೆಲಸಕ್ಕೆ ಬರುವದಿಲ್ಲಾದ ಕಾರಣ ಪಖಾಲಿಗಳೆಂಬ ಹಿಂದೂ ಜಾತಿ ಇದ್ದಂತೆ ತೋರುವದಿಲ್ಲ.

ಳನ್ನು ಇವರ ಹೆಂಗಸರು ಸಿಂದಿಯ ಅಂಗಡಿಗಳಲ್ಲಿಯೂ ಬಾಜಾರಿನಲ್ಲಿಯೂ ಮಾರುವರು. ಇವರಲ್ಲಿ ಹೊಲಸುತನ ಬಹಳ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಕಂಜಾರರು.**

ಕಂಜಾರರು.—ಇವರು ಹಿಂದೂ ಬೇಟೆಗಾರರ ವಂಶದವರೆಂದು ಹೇಳುತ್ತಾರೆ; ಮನೆಯಲ್ಲಿ ಹಿಂದುಸ್ತಾನೀ, ಮರಾಠೀ, ಕನ್ನಡ, ಕೂಡಿಸಿ ಆಡುವರು. ಇವರು ಕೋಳಿಗಳನ್ನು ಸಾಕಿ ಅವನ್ನೂ ಅವುಗಳ ತತ್ತಿಗಳನ್ನೂ ಮಾರುವರು; ನಾರು ಕಾತಿಗಳ ಹಗ್ಗಗಳನ್ನು ಮಾಡಿ ಮಾರುವರು; ಕೆಲವರು ಚಾಕರಿಗೆ ನಿಲ್ಲುವರು, ಇಲ್ಲವೆ ದಿನಗೂಲಿಗೆ ಹೋಗುವರು. ಹಿಂದೂ ದೇವತೆಗಳಿಗೂ ಇವರು ನಡಕೊಳ್ಳುತ್ತಾರೆಂದು ಹೇಳುತ್ತಾರೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಪೆಂಢಾರಿಗಳು.**

ಪೆಂಢಾರಿಗಳು, ಅಂದರೆ ಹುಲ್ಲು ಕೊಯ್ಯುವವರು.— ಇವರು ಹಲವು ಹಿಂದೂ ಜಾತಿಗಳ ವಂಶದವರೆಂದು ಹೇಳುತ್ತಾರೆ. ಇವರು ಕಟ್ಟಿಗೆ ಹುಲ್ಲುಗಳನ್ನು ತಂದು ಮಾರುವರು; ಕುದುರೆಗಳನ್ನು ಸಾಕಿ ಬಾಡಿಗೆಗೆ ಕೊಡುವರು; ಕೆಲವರು ಚಾಕರಿಯನ್ನೂ ದಿನಗೂಲಿಯನ್ನೂ ಮಾಡುವರು. ಪೇಶ್ವಾಯಿಯ ಕಡೆಯಲ್ಲಿ ಪೆಂಢಾರಿಗಳು ಬಹಳ ಪ್ರಬಲರಾಗಿ ದೇಶದ ತುಂಬ ಹಬ್ಬಿ ಕೊಲೆ ಸುಲಿಗೆಗಳನ್ನು ಮಾಡುತ್ತಿದ್ದರು; ಇವರಲ್ಲಿ ಮೂವರು ಶೂರರು ಕೆಲವು ರಾಜ್ಯವನ್ನು ಸಹ ಆಕ್ರಮಿಸಿದ್ದರು. ಆದರೆ ಇಂಗ್ಲಿಷರು ಇವರನ್ನು ಮುರಿದರು. ಇವರು ಮುಸಲ್ಮಾನ ಧರ್ಮದವರಾದಾಗ್ಯೂ ಹಿಂದೂ ದೇವತೆಗಳಿಗೆ ನಡಕೊಳ್ಳುವರು, ಹಿಂದೂ ಹಬ್ಬಗಳನ್ನು ಮಾಡುವರು, ಗೋಮಾಂಸ ತಿನ್ನುವದಿಲ್ಲ. ಕಲಾದಿಗಿಯಲ್ಲಿ ಪೆಂಢಾರಿಗಳು ಯೆಲ್ಲಮ್ಮನ ಗುಡಿಯನ್ನು ಕಟ್ಟಿಸಿದ್ದಾರೆ! ಯೆಲ್ಲಮ್ಮನಲ್ಲಿ ಇವರ ಭಕ್ತಿ ಬಹಳ. ಇವರ ಮಕ್ಕಳು ಅಪರೂಪವಾಗಿ ಶಾಲೆಗೆ ಹೋಗುತ್ತಾರೆ.

**ತಾಂಬೋಳಿಗಳು.**

ತಾಂಬೋಳಿಗಳು, ಅಂದರೆ ಯೆಲೆಗಾರರು.—ಇವರು ಯೆಲೆಗಾರರೆಂಬ ಹಿಂದೂ ವೊಕ್ಕಲಿಗರ ವಂಶದವರೆಂದು ಹೇಳುತ್ತಾರೆ. ಇವರು ವೀಳ್ಯದೆಲೆ, ಅಡಿಕೆ, ತಂಬಾಕ, ಇವುಗಳನ್ನು ಕೊಂಡು ಅಂಗಡಿ ಹಚ್ಚಿ ಮಾರುತ್ತಾರೆ; ಮನೆಯಲ್ಲಿ ಹಿಂದುಸ್ತಾನಿಯನ್ನಾಗಲಿ ಕನ್ನಡವನ್ನಾಗಲಿ ಆಡುವರು. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಬೋಜಗಾರರು.**

ಬೋಜಗಾರರು.—ಇವರು ಹಲವು ಹಿಂದೂ ಜಾತಿಗಳ ವಂಶದವರೆಂದು ತೋರುತ್ತದೆ; ಬೆಳಗಾವೀ ಜಿಲ್ಲೆಯಲ್ಲಿ ಇರುತ್ತಾರೆ. ಇವರು ಜೋಳದೊಳಗೆ ಅಮೃತಬಳ್ಳಿ, ಭಂಗಿ, ಕುಂಚಲಿ, ಅಂದರೆ ವಿಷಮುಷ್ಟಿಯ ಬೀಜ, ಇವುಗಳನ್ನು ಹಾಕಿ ಕುದಿಸಿ ಬೋಜವೆಂಬ ಸರಾಯಿಯನ್ನು ಮಾಡಿ, ಸುಮಾರು ಮೂರು ದುಡ್ಡಿಗೆ ವೊಂದು ಸೀಸೆಯಂತೆ ಮಾರುವರು, ಇವರಲ್ಲಿ ಹೊಲಸುತನ, ಆಲಸ್ಯ, ದುರ್ವ್ಯಸನ, ಇವೆಲ್ಲ ಮನೆ ಮಾಡಿ ಕೊಂಡಿರುತ್ತವೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

ಧೋಬಿಗಳು, ಅಂದರೆ ಅಗಸರು.—ಇವರು ಹಿಂದೂ ಅಗಸರ ವಂಶದವರೆಂದು ಹೇಳುತ್ತಾರೆ; ಇವರನ್ನು ಹೈದರ ಅಲ್ಲಿಯು ಮುಸಲ್ಮಾನರನ್ನು ಮಾಡಿದನಂತೆ. ಇವರು ಹೆಚ್ಚಾಗಿ ಯುರೋಪಿಯನ್ನರ ಅರಿವೆಗಳನ್ನೂ ಮುಸಲ್ಮಾನರ ಅರಿವೆಗಳನ್ನೂ ಒಗೆಯುವರು. ಆದರೆ ಇವರು ಹೆಸರಿಗೆ ಮಾತ್ರ ಮುಸಲ್ಮಾನರು, ಗಂಡು ಮಕ್ಕಳ ಸುಂತಿಯನ್ನಷ್ಟು ಮಾಡುವರು. ಆದರೆ ಮಶೀದಿಗೆ ಪ್ರಾರ್ಥನೆಗೆ ಹೋಗುವದಿಲ್ಲ; ರಮ್ಜಾನ ತಿಂಗಳಲ್ಲಿ ಉಪವಾಸ ಮಾಡುವದಿಲ್ಲ; ಹಿಂದೂ ದೇವತೆಗಳಿಗೆ ನಡಕೊಳ್ಳುವರು, ಹಿಂದೂ ಹಬ್ಬಗಳನ್ನೂ ಉಪವಾಸಗಳನ್ನೂ ಮಾಡುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಧೋಬಿಗಳು.**

**ಲಾಡಕಸಾಬರು.** ಲಾಡಕಸಾಬರು.—ಇವರೂ ಬಕರಕಸಾಬರೂ ಒಂದೇ.

ರಂಗಾರಿಗಳು.—ಇವರು ಹಲವು ಹಿಂದೂ ಜಾತಿಗಳ ವಂಶದವರು. ವಸ್ತ್ರಗಳಿಗೆ ಕುಸಂಬಿ ಮುಂತಾದ ಬಣ್ಣಗಳನ್ನು ಕೊಡುವ ಹೋರೆ ಮಾಡುವರು. ಮುಸಲ್ಮಾನರ ಲಗ್ನದ ದಿವಸಗಳಲ್ಲಿ ಇವರ ಕೆಲಸವು ಬಹಳ ನಡಿಯುತ್ತದೆ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ರಂಗಾರಿಗಳು.**

ಮಾಪಿಳ್ಳರು.—ಇವರು ಮಲಿಯಾಳ ಶೀಮೆಯಿಂದ ಬಂದು ಕಾನಡಾ ಜಿಲ್ಲೆಯ ಕುಮಟಾ, ಹೊನ್ನಾವರ ತಾಲೂಕುಗಳಲ್ಲಿ ವಾಸಿಸುತ್ತಾರೆ; ಮಲಿಯಾಳೀ ಭಾಷೆಯನ್ನಾಡುವರು. ಇವರು ಕಪ್ಪು ಮೈಬಣ್ಣದವರು, ದಪ್ಪ ಮೈಯವರು, ಗಿಡ್ಡರು, ಘಟ್ಟಿಗರು. ಲುಂಗಿಯಂತೆ ಕಚ್ಚೆ ಹಾಕದೆ ಪಂಜೆಯನ್ನುಟ್ಟು ಮೈಯಲ್ಲಿ ಗಿಡ್ಡಂಗಿಯ ಹಾಕಿ ಕೊಂಡು, ತಲೆಗೆ ಕೆಂಪು ರುಮಾಲ ಸುತ್ತುವರು. ಇವರ ಹೆಂಗಸರಿಗೆ ಬುರಿಕೆ ಇಲ್ಲ. ಮಾಪಿಳ್ಳರು ಶ್ರಮಕ್ಕೆ ಮೆಚ್ಚಿದವರಾದಾಗ್ಯೂ ಉದ್ಧಟ ಸ್ವಭಾವದವರು. ಇವರು ತೋಟಗಳಲ್ಲಿಯೂ ಬೇರೆ ಕಡೆಯಲ್ಲಿಯೂ ಕೂಲಿಯ ಹೋರೆ ಮಾಡುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

**ಮಾಪಿಳ್ಳರು.**

ಗುಲಾಮರು.—ಇವರು ಪೂರ್ವದಲ್ಲಿ ದೆಕ್ಕನೀ ಮುಸಲ್ಮಾನರಲ್ಲಿಯೂ ನವಾಯತರಲ್ಲಿಯೂ ಶರೆಯಾಳುಗಳಾಗಿದ್ದರು; ಈಗ ಕಾರವಾಡ ತಾಲೂಕಿನಲ್ಲಿ ಇರುತ್ತಾರೆ. ಇವರು ಸೋಮಾರಿಗಳೂ ಶಿಟ್ಟಿನ ಸ್ವಭಾವದವರೂ ಆದಾಗ್ಯೂ ನಿಜಸ್ತಿಕೆಯುಳ್ಳವರು. ಇವರಲ್ಲಿ ಕೆಲವರು ಡೋಣಿಗಳನ್ನು ನಡಿಸುವರು; ಕೆಲವರು ವ್ಯಾಪಾರ, ಒಕ್ಕಲತನ, ಕೂಲಿ, ಮುಂತಾದ ಹೋರೆಗಳನ್ನು ಮಾಡುವರು.

**ಗುಲಾಮರು.**

ಸಿದ್ದಿಗಳು.—ಇವರು ಆಫ್ರಿಕದ ಸಿದ್ದೀ ಕುಲದವರ ವಂಶದವರು, ಗೋಮಂತಕ ಶೀಮೆಯಿಂದ ತಮ್ಮ ಒಡೆಯರನ್ನು ತಪ್ಪಿಸಿಕೊಂಡು ಬಂದು ಕಾನಡಾ ಜಿಲ್ಲೆಯ ಸುಪಾ, ಯೆಲ್ಲಾಪುರ ತಾಲೂಕುಗಳಲ್ಲಿ ಇರುತ್ತಾರೆ. ಇವರ ನಿಲಿವಿಕೆ ಯೆತ್ತರ, ಮೈಕಟ್ಟು ಬಲವಾದದ್ದು, ಮೈಬಣ್ಣ ಬಹಳ ಕಪ್ಪು, ತಲೆ ಕೂದಲು ಗಡ್ಡ ಉಂಗರಗೂದಲೂ, ಹಣೆ ಹಿಂದಕ್ಕೆ ಶಟದದ್ದು, ತುಟಿ ದಪ್ಪ.

**ಸಿದ್ದಿಗಳು.**

ಸಿದ್ದಿಗಳು ಶ್ರಮ ಮಾಡುವವರೂ ಉದ್ಧಟರೂ ಇರುತ್ತಾರೆ; ಕೂಲಿಯಿಂದ ಹೊಟ್ಟೆ ತುಂಬಿಕೊಳ್ಳುವರು.

ಕಸಬಿಣಿಗಳು.

**ಕಸಬಿಣಿಗಳು.**—ಇವರ ನಡಾವಳಿಗಳು ವಾಡಿಕೆಯಾಗಿ ಹಿಂದೂ ಕಸಬಿಣಿಗಳಂತೆ ಇರುತ್ತವೆ. ಇವರು ಮುಸಲ್ಮಾನರಾದಾಗ್ಯೂ ಕುಂಕುಮ ಹಚ್ಚುವರು, ಕಚ್ಚೆ ಹಾಕಿ ಶೀರೆ ಉಡುವರು. ಮೊಹರಮಿನಲ್ಲಿ ಮಾತ್ರ ಇವರು ಭಕ್ತಿಯಿಂದ ಪಂಜಾಗಳನ್ನು ಪೂಜಿಸುವರು.

ನಗಾರ್ಚಿಗಳು.

**ನಗಾರ್ಚಿಗಳು**, ಅಂದರೆ ನಗಾರೆಗಳನ್ನು ಬಾರಿಸುವವರು.—ಇವರು ವಾಡಿಕೆಯಾಗಿ ವ್ರೊಕ್ಕಲತನ, ಚಾಕರಿ, ಕೂಲಿಗಳಿಂದ ಹೊಟ್ಟೆ ತುಂಬಿಕೊಳ್ಳುವರು; ಹಿಂದೂ ದೇವತೆಗಳಿಗೆ ನಡಕೊಳ್ಳುವರು, ಗೋಮಾಂಸ ತಿನ್ನುವದಿಲ್ಲ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

ತಾಸ್‌ಚಿಗಳು.

**ತಾಸ್‌ಚಿಗಳು**, ಅಂದರೆ ತಾಸೆಗಳನ್ನು ಬಾರಿಸುವವರು.—ಇವರಲ್ಲಿ ತಾಸೆ ಬಾರಿಸುವ ಹೋರೆಯನ್ನೇ ಮಾಡುವವರು ಬಹು ಸ್ವಲ್ಪ ಜನರು. ಉಳಿದವರು ಕೂಲಿ, ಚಾಕರಿ, ಮುಂತಾದ ಹೋರೆಗಳನ್ನು ಮಾಡುವರು. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

ದರವೇಶಿಗಳು.

**ದರವೇಶಿಗಳು.**—ಇವರು ಶಿಕಾರಿಗಳೆಂಬ ಹಿಂದೂ ಜಾತಿಯವರ ವಂಶದವರೆಂದು ತೋರುತ್ತದೆ. ಭಿಕ್ಷೆ ಬೇಡುವದೇ ಇವರ ಹೋರೆ; ಆದರೆ ಬಹುತರ ಬರಿಗೈಯಿಂದ ಭಿಕ್ಷೆ ಬೇಡುವದಿಲ್ಲ. ಹುಲಿ, ಕರಡಿಗಳ ಮರಿಗಳನ್ನು ಸಾಕಿ, ಅವುಗಳಿಗೆ ಹಲ ಕೆಲವು ಆಟಗಳನ್ನು ಕಲಿಸಿ, ದೊಡ್ಡವಾದ ಬಳಿಕ ಮನೆ ಮನೆಗೆ ಅವುಗಳನ್ನು ಆಡಿಸುತ್ತ ಭಿಕ್ಷೆ ಬೇಡುತ್ತ ತಿರುಗುವರು. ಈ ಹೋರೆಯಲ್ಲಿ ಇವರ ಹೊಟ್ಟೆ ತುಂಬುವದಿಲ್ಲಾದ ಕಾರಣ ಇವರು ಕೂಲಿ ಮುಂತಾದ ಬೇರೆ ಹೋರೆಗಳನ್ನು ಮಾಡ ಹತ್ತಿದ್ದಾರೆ.

ಗಾರುಡಿಗರು.

**ಗಾರುಡಿಗರು.**—ಇವರು ಹಿಂದೂ ಗಾರುಡಿಗರ ವಂಶದವರೆಂದು ಹೇಳುತ್ತಾರೆ. ಮೀರಶಮಸುದ್ದೀನನೆಂಬ ವಲ್ಲಿಯು ಇವನ್ನು ಹದಿನಾರನೇ ಶತಕದಲ್ಲಿ ಮುಸಲ್ಮಾನರನ್ನು ಮಾಡಿದನು. ಅವನ ಗೋರಿಯು ಮಿರ್ಜಿಯಲ್ಲಿ ಇರುತ್ತದೆ. ಅದಕ್ಕೆ ಮೀರಾಶಮನಾನ ಗೋರಿಯೆಂದೆನ್ನುವರು. ಗಾರುಡಿಗರು ಮಿರ್ಜಿಯಲ್ಲಿಯೇ ವಿಶೇಷವಾಗಿ ಇದ್ದು ಕೊಂಡು ಆ ಗೋರಿಗೆ ಭಕ್ತಿಯಿಂದ ನಡಕೊಳ್ಳುತ್ತಾರೆ. ಆದರೆ ಬೇರೆ ಯಾವ ರೀತಿಯಿಂದಲೂ ಇವರು ಮುಸಲ್ಮಾನ ಧರ್ಮವನ್ನು ಪಾಲಿಸುವದಿಲ್ಲ. ಲಗ್ನಕ್ಕೆ ಕಾಜಿಯನ್ನು ಮಾತ್ರ ಕರಿಯುವರು. ಹಾವುಗಳನ್ನು ಹಿಡಿದು ಆಡಿಸಿ, ನಾನಾ ಪ್ರಕಾರದ ಕಣ್ಣು ಕಟ್ಟಿನ ವಿದ್ಯಗಳನ್ನು ತೋರಿಸಿ ಇವರು ಹೊಟ್ಟೆ ತುಂಬಕೊಳ್ಳುವರು. ಆದರೆ ಈ ಹೋರೆಯಲ್ಲಿ ಇವರ ಹೊಟ್ಟೆ ತುಂಬುವದಿಲ್ಲ. ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

ಹಲಾಲಖೋರರು, ಅಥವಾ ಭಂಗಿಗಳು.—ಇವರು ಹೈದರ ಅಲ್ಲಿಯಿಂದ ಮುಸಲ್ಮಾನ ಧರ್ಮಕ್ಕೆ ಶೇರಿಸಲ್ಪಟ್ಟ ಹಿಂದೂ ಭಂಗಿಗಳ ವಂಶದವರೆಂದು ಹೇಳುತ್ತಾರೆ.

**ಹಲಾಲಖೋರರು.**

ಇವರು ಗಂಡು ಮಕ್ಕಳ ಸುಂತಿಯನ್ನು ಮಾತ್ರ ಮಾಡುವರು. ಇಷ್ಟರ ಹೊರ್ತು ಇವರು ಮುಸಲ್ಮಾನ ಧರ್ಮವನ್ನು ಯೆಷ್ಟು ಮಾತ್ರವೂ ಅರಿಯರೆಂದು ಹೇಳ ಬಹುದು. ಇವರನ್ನು ಮುಸಲ್ಮಾನರು ಮಶೀದೆಯೊಳಗೆ ಹೋಗಗೊಡುವದಿಲ್ಲ. ಕಾಜಿಯು ಇವರ ಮನೆಗೆ ಹೋಗುವದಿಲ್ಲ. ಇವರು ಮರಿಯಮ್ಮನ ಪೂಜೆಯನ್ನು ಮಾಡುವರು, ಇವರ ಮಕ್ಕಳು ಶಾಲೆಗೆ ಹೋಗುವದಿಲ್ಲ.

## ದೇಶೀ ಖ್ರಿಸ್ತಿಯನ್ನರು.

ದೇಶೀ ಖ್ರಿಸ್ತೀ ಜನರೊಳಗೆ ಕ್ಯಾಥೊಲಿಕರೆಂತಲೂ ಪ್ರಾಟೆಸ್ಟಂಟರೆಂತಲೂ ಯೆರಡು ಮುಖ್ಯ ವರ್ಗಗಳಿವೆ. ಕ್ಯಾಥೊಲಿಕರೊಳಗೆ ಗೋಮಂತಕದ ಕ್ಯಾಥೊಲಿಕರೆಂತಲೂ ಮದ್ರಾಸೀ ಕ್ಯಾಥೊಲಿಕರೆಂತಲೂ ಯೆರಡು ವೊಳಭೇದಗಳಿವೆ. ಇವರ ವಿವರ ಹ್ಯಾಗಂದರೆ—

| | ಕ್ಯಾಥೊಲಿಕರು. | ಪ್ರಾಟೆಸ್ಟಂಟರು. |
|---|---|---|
| ವಿಜಾಪುರ ....... | ೨೨ | ೧೪೬ |
| ಬೆಳಗಾವಿ ....... | ೪೫೦೦ | ೫೦೦ |
| ಧಾರವಾಡ ....... | ೧೯೦೦ | ೩೦೪ |
| ಕಾನಡಾ ........ | ೧೨೦೦೦ | ೦ |
| | ೧೮೪೨೨ | ೯೫೦ |

ಗೋಮಂತಕದ ಕ್ಯಾಥೊಲಿಕರು.—೧೮ನೇ ಶತಕದ ಆರಂಭದಲ್ಲಿ ದಕ್ಷಿಣದಲ್ಲಿ ಮುಸಲ್ಮಾನರ ಅಮಲು ಹಿಮ್ಮೆಟ್ಟಲಾಗಿ ಪೋರ್ತುಗೀಸರು ಸ್ವಾದೆ, ಬೆದನೂರು (ನಗರ) ಈ ಎರಡು ಸಂಸ್ಥಾನಗಳ ಅರಸರ ಸ್ನೇಹವನ್ನು ಸಂಪಾದಿಸಿ ಕೊಂಡು, ಬಹು ಜನರನ್ನು ಬಲಾತ್ಕಾರದಿಂದ ಖ್ರಿಸ್ತೀ ಧರ್ಮಕ್ಕೆ ಶೇರಿಸಿ, ಆ ಧರ್ಮವನ್ನು ಬಲಿಸಿದರು. ಆದರೆ ಮುಂದೆ ಸ್ವಲ್ಪ ದಿವಸದೊಳಗೆ ಹೈದರ ಅಲ್ಲಿಯು ಈ ಯೆರಡೂ ಸಂಸ್ಥಾನಗಳನ್ನು ಮುರಿಯಲಾಗಿ ಈ ಧರ್ಮದ ಬೆಳುವಣಿಗೆ ಕಟ್ಟಾಯಿತು. ಆದರೂ ಪಶ್ಚಿಮ ಸಮುದ್ರತೀರದಲ್ಲಿ ಮಾತ್ರವಲ್ಲದೆ, ಆ ಯೆರಡೂ ಸಂಸ್ಥಾನಗಳ ಶೀಮೆಗಳಲ್ಲಿ ಸಹ ಕುಲಗೆಟ್ಟ ಖ್ರಿಸ್ತೀ ಜನರ ದೊಡ್ಡ ದೊಡ್ಡ ಸಮುದಾಯಗಳು ಅಲ್ಲಲ್ಲಿಗೆ ಸ್ಥಿರವಾಗಿ ನೆಲೆಗೊಂಡಿದ್ದವು. ಅವರ ಗುಡಿಗಳಿಗೂ ಧರ್ಮೋಪದೇಶಕರಿಗೂ ಆತಂಕವೇನು ಇದ್ದಿಲ್ಲ. ಆದರೆ ಹೈದರನು ಸನ್ ೧೭೮೩ನೇ ವರ್ಷದ ಸುಮಾರಿನಲ್ಲಿ ಮರಣ ಹೊಂದಲಾಗಿ, ಅವನ ಮಗ ಟೀಪೂನು ಅವನ ಪಟ್ಟವೇರಿದನು. ಆ ಕಾಲಕ್ಕೆ ಈಗಿನ ಉತ್ತರ ದಕ್ಷಿಣ ಕಾನಡಾ ಜಿಲ್ಲೆಗಳಲ್ಲಿ ಕೂಡಿ ಖ್ರಿಸ್ತೀ ಜನರ ಸಂಖ್ಯವು

**ಮೂಲಾರಂಭ.**

ಸುಮಾರು ೮೦೦೦೦ ಇತ್ತು. ಇದೇ ಸಂಧಿಯಲ್ಲಿ ಇಗ್ಲಿಷರು ಪಶ್ಚಿಮ ಸಮುದ್ರತೀರವನ್ನು ಕೈವಶ ಮಾಡಿ ಕೊಂಡು, ಬೆದನೂರಿನ ವರೆಗೂ ತಮ್ಮ ಅಮಲು ಬಹು ಬೇಗ ಕೂಡ್ರಿಸಿದರು. ಮುಂದೆ ವೊಂದೆರಡು ವರ್ಷದೊಳಗೇ ಟೀಪೂನು ಪಶ್ಚಿಮ ಸಮುದ್ರತೀರವನ್ನು ಇಂಗ್ಲಿಷರ ಕೈಯಿಂದ ಕಸುಕೊಂಡು ಅವರನ್ನು ಹಿಂದಕ್ಕಟ್ಟಿದ ಬಳಿಕ, ಈ ಶೀಮೆಯಲ್ಲಿ ಇರುತ್ತಿದ್ದ ಖ್ರಿಸ್ತೀ ಜನರ ಆಶ್ರಯದಿಂದಲೇ ಇಂಗ್ಲಿಷರ ಅಮಲು ಬೇಗ ನೆಲೆಗೊಂಡಿತೆಂದು ಗ್ರಹಿಸಿ, ಅವನು ಖ್ರಿಸ್ತೀ ಜನರನ್ನು ನಿರ್ಮೂಲ ಮಾಡುವ ಆಲೋಚನೇ ಮಾಡಿದನು. ಅವನು ಮೊದಲು ಖ್ರಿಸ್ತೀ ಜನರನ್ನು ಗುಪ್ತವಾಗಿ ಯೆಣಿಸಿಕೊಂಡು, ತನ್ನ ದಂಡಿನ ಪಟಾಲಂಮುಗಳನ್ನು ಏಕ ಕಾಲಕ್ಕೆ ರವಾನೆ ಮಾಡಿ, ಆ ಪಟಾಲಂಮುಗಳ ಮುಖ್ಯಸ್ಥರ ಕೈಯಲ್ಲಿ ಮೊಹರ ಬಂದಮಾಡಿದ ಹುಕುಮುಗಳನ್ನು ಕೊಟ್ಟು, ಇಂಥಾ ತಾರೀಖಿನಲ್ಲಿ ಬೆಳಿಗ್ಗೆ ದೇವರ ಪ್ರಾರ್ಥನೆಯನ್ನು ಮಾಡಿದ ಕೂಡಲೆ ಈ ಲಖೋಟಿಗಳನ್ನು ವೊಡಿದು, ಹುಕುಮಿನಲ್ಲಿ ಬರಿದಂತೆ ಅದೇ ದಿವಸ ಅಮಲು ನಡಿಸಲಿಕ್ಕೆ ಬೇಕೆಂದು ಹೇಳಿದನು. ಆ ದಳವಾಯಿಗಳು ಟೀಪೂನ ಅಪ್ಪಣೆಯ ಪ್ರಕಾರ ಪಶ್ಚಿಮ ಸಮುದ್ರತೀರದ ಬೇರೆ ಬೇರೆ ಪ್ರದೇಶಗಳಿಗೆ ಹೋಗಿ ಅವನು ಹೇಳಿದಂತೆ ಲಖೋಟಿಗಳನ್ನು ವೊಡಿದು ನೋಡಲಾಗಿ, ಶಿಕ್ಕಷ್ಟು ಖ್ರಿಸ್ತೀ ಜನರನ್ನು ಶರೆ ಹಿಡಿದು ತಕ್ಕೊಂಡು ಬನ್ನಿರೆಂದು ಹುಕುಮಿನಲ್ಲಿ ಬರಿದಿತ್ತು. ಆ ದಿವಸ ಸಂಜೆಯೊಳಗೆ ಸುಮಾರು ೬೦೦೦೦ ಖ್ರಿಸ್ತೀ ಜನರನ್ನು ಶರೆ ಹಿಡಿದು ಆ ದಂಡಿನವರು ಶ್ರೀರಂಗ ಪಟ್ಟಣಕ್ಕೆ ತಕ್ಕೊಂಡು ಹೋದರು; ಕೆಲವರು ೩೦೦೦೦ ಜನರನ್ನು ತಕ್ಕೊಂಡು ಹೋದರೆಂದು ಹೇಳುತ್ತಾರೆ. ಇದಲ್ಲದೆ ಆ ದಂಡಿನವರು ಖ್ರಿಸ್ತೀ ಗುಡಿಗಳನ್ನು ಕೆಡಹಿ ಹಾಳು ಮಾಡಿ ಖ್ರಿಸ್ತೀ ಧರ್ಮದ ಕುರುಹು ಸಹ ಉಳಿಯದಂತೆ ಮಾಡಿ ಹೋದರು. ಶ್ರೀರಂಗ ಪಟ್ಟಣಕ್ಕೆ ಹೋದ ಬಳಿಕ ಟೀಪೂನು ಶರೆಯುವರಲ್ಲಿ ಸಶಕ್ತರನ್ನು ಆರಿಸಿ ಐಯ್ಯೆನೂರ ಜನರ ಪಟಾಲಂಮುಗಳನ್ನು ಮಾಡಿ, ತನ್ನ ದಂಡಿನವರಲ್ಲಿ ಕುರಾಣವನ್ನು ವೊಳಿತಾಗಿ ಬಲ್ಲಂಥ ದಳವಾಯಿಗಳನ್ನು ಆರಿಸಿ ವೊಬ್ಬೊಬ್ಬನ ಕೈಯಲ್ಲಿ ವೊಂದೊಂದು ಖ್ರಿಸ್ತೀ ಪಟಾಲಂಮು ಕೊಟ್ಟು ಬೇರೆ ಬೇರೆ ಗ್ರಾಮಗಳ ಕಾವಲಿಗೆ ಕಳಿಸಿ, ಆ ಖ್ರಿಸ್ತೀ ಜನರಿಗೆ ಕುರಾಣ ಕಲಿಸಿ, ಅವರನ್ನು ಮುಸಲ್ಮಾನರನ್ನು ಮಾಡ ಹೇಳಿದನು. ಆ ಕಾಲಕ್ಕೆ ಬಹು ಜನ ತರುಣಿಯರಾದ ಖ್ರಿಸ್ತೀ ಹೆಂಗಸರು ಆ ದಂಡಿನವರ ತೊತ್ತುಗಳಾದರು. ಮುಂದೆ ವೊಂದೇ ವರ್ಷದೊಳಗೆ ಹವೆಯ ಕಾರಣದಿಂದಲೂ ದಂಡಿನವರ ಬಾಧೆಯಿಂದಲೂ ೧೦೦೦೦ ಜನ ಖ್ರಿಸ್ತಿಯನ್ನರು ಮಡಿದರೆಂದು ಹೇಳುತ್ತಾರೆ. ಕಡೆಯಲ್ಲಿ ಸನ್ ೧೭೯೯ರಲ್ಲಿ ಟೀಪೂನು ಮರಣ ಹೊಂದಿದ ಬಳಿಕ ಮಂಗಳೂರು ಜಿಲ್ಲೆಗೆ ಸುಮಾರು ೧೫೦೦೦ ಜನ, ಕಾರವಾಡ ಜಿಲ್ಲೆಗೆ ೩೦೦೦ ಜನ ಖ್ರಿಸ್ತಿಯನ್ನರು ಮರಳಿ ಬಂದರು.

ಈಗಿನ ಖ್ರಿಸ್ತೀ ಜನರಲ್ಲಿ ಬಾಂಬನರು (ಶೇಣವೀ ಬ್ರಾಹ್ಮಣರ ವಂಶದವರು) ಚರೋಡ (ಇದೇ ಹೆಂಗಸರಿನ ಕುಲದವರ ವಂಶದವರು), ಸೂದಿರ (ಶೂದ್ರರು), ರೆಂಡರ, ಗವಿಡ (ಗೌಡರೆಂಬ ಕುಲದವರ ವಂಶದವರು), ಮೊಡವಾಳ (ಮಡಿವಾಳರ

ವಂಶದವರು), ಕಾಫ್ರಿ (ಸಿದ್ದೀ ಕುಲದವರ ವಂಶದವರು), ಕುಂಬಾರ (ಕುಂಬಾರರ ವಂಶದವರು), ಈ ಪ್ರಕಾರ ೮ ವೊಳಜಾತಿಗಳಿವೆ. ಇವರಲ್ಲಿ ಮೊದಲಿನ ಯೆರಡು ಉತ್ತಮ ಕುಲಗಳ ಜನರಿಗೆ ಪೋರ್ತುಗೀಸರ ಅಮಲಿನ ಕಾಲದಲ್ಲಿ ಯುರೋಪದ ಹೆಂಗಸರನ್ನು ಲಗ್ನ ಮಾಡಿ ಕೊಳ್ಳಲಿಕ್ಕೆ ಅಡ್ಡಿ ಇದ್ದಿಲ್ಲ; ಅವರಿಗೆ ದೊಡ್ಡ ದೊಡ್ಡ ಅಧಿಕಾರಗಳನ್ನು ಕೊಟ್ಟು, ಅವರನ್ನು ಮಾನದಿಂದ ನಡಿಸಿಕೊಳ್ಳುವರು. ಬಾಂಬನರು, ಚರೋಡರು, ಇವರ ಮೈಬಣ್ಣ ಕೆಂಪು, ನಿಲಿವಿಕೆ ಮಧ್ಯಮ, ಮುಖ ಮುದ್ರೆ ಸುಲಕ್ಷಣ, ಮೈಕಟ್ಟು ತೆಳವು. ಕಾಫ್ರಿ ಅಂದರೆ ಸಿದ್ದೀ ಜನರ ನಿಲಿವಿಕೆ ಯೆತ್ತರ, ಮೈಬಣ್ಣ ಕಪ್ಪು, ಹಣೆ ಹಿಂದಕ್ಕೆ ಶಟಿದದ್ದು, ಉಂಗರಗೂದಲೂ, ತುಟಿ ದಪ್ಪ, ಉಳಿದ ೫ ಜಾತಿಗಳ ಲಕ್ಷಣಗಳು ಸಾಮಾನ್ಯ ಜನರಂತೆ. ಈ ಯೆಂಟೂ ಜಾತಿಗಳ ಜನರು ಕೊಂಕಣೀ ಭಾಷೆಯನ್ನಾಡುವರು. ಮೊದಲಿನ ಯೆರಡು ಜಾತಿಗಳು ಹೊರ್ತಾಗಿ ಉಳಿದವರ ಭಾಷೆಯಲ್ಲಿ ಕನ್ನಡ ಶಬ್ದಗಳೂ ಪೋರ್ತುಗೀಸ ಶಬ್ದಗಳೂ ಬಹಳ ಬರುತ್ತವೆ. ಬಾಂಬನರೂ ಚರೋಡರೂ ಮಾತ್ರ ಬೇಕಾದವರ ಕೂಡ ಶರೀರ ಸಂಬಂಧ ಮಾಡುವರು; ಉಳಿದವರು ತಮ್ಮ ತಮ್ಮೊಳಗೇ ಶರೀರ ಸಂಬಂಧ ಮಾಡುವರು. ಆದರೆ ಈ ಯಾವತ್ತು ಜಾತಿಗಳಲ್ಲಿ ಪರಸ್ಪರ ಊಟದ ಬಳಿಕೆಗೆ ಯೆಷ್ಟು ಮಾತ್ರವೂ ಅಡ್ಡಿ ಇಲ್ಲ.

**ವೊಳ ಜಾತಿಗಳು.**

ಖ್ರಿಸ್ತೀ ಜನರ ಉಡಿಗೆಗಳು ವಾಡಿಕೆಯಾಗಿ ಅವರವರ ಮೂಲ ಜಾತಿಗಳ ಉಡಿಗೆಗಳಂತೆ ಇರುತ್ತವೆ. ಆದರೆ ಬ್ರಾಹ್ಮಣರಂತೆ ದೋತ್ರವನ್ನು ಯಾರೂ ಉಡುವದಿಲ್ಲ. ಅನುಕೂಲವಿದ್ದವರು ಇಜಾರುಗಳನ್ನು ಹಾಕಿ ಕೊಳ್ಳುವರು, ಇಲ್ಲವೆ ಫಡಿಕೆಗಳನ್ನು ಉಡುವರು. ಇವರ ಮನೆಯಲ್ಲಿಯ ಸಾಮಾನುಗಳು ದೇಶೀ ಜನರವುಗಳಂತೆಯೇ ವಾಡಿಕೆಯಾಗಿ ಇರುವವು. ಅನುಕೂಲವಿದ್ದವರು ಖುರ್ಚಿ, ಮೇಜು, ಪಲಂಗ, ಮುಂತಾದ ಕಟ್ಟಿಗೇ ಸಾಮಾನುಗಳನ್ನು ಸಂಗ್ರಹಿಸುವರು. ಆದರೂ ಯುರೋಪದವರಂತೆ ಮನೆಮಾರಿನ ವ್ಯವಸ್ಥೆ ಕಾದುಕೊಳ್ಳಲಿಕ್ಕೆ ಇವರು ಬಹುತರ ಮೆಚ್ಚುವದಿಲ್ಲ. ಬಡ ಜನರು ಕೊಂಕಣದ ಹಿಂದೂ ಬಡ ಜನರಂತೆ ಲಂಗೋಟ ಹಾಕುವರು. ಅವರು ಖ್ರಿಸ್ತೀ ಮತದವರೆಂಬುವ ಕುರುಹು ತೋರಿಕೆಯಲ್ಲಿ ಯೇನೂ ಇರುವದಿಲ್ಲೆಂದು ಹೇಳ ಬಹುದು. ಹಿಂದೂ ಜನರು ಖ್ರಿಸ್ತಿಗಳನ್ನು ನಿರಾತಂಕವಾಗಿ ಮುಟ್ಟಿಸಿಕೊಳ್ಳುವರು, ತಮ್ಮ ಮನೆಗಳಲ್ಲಿ ಬರಗೊಡುವರು. ಹೆಂಗಸರು ಕೊಂಕಣದ ಹಿಂದೂ ಹೆಂಗಸರಂತೆ ತಲೆಯಲ್ಲಿ ಅಲಂಕಾರಗಳನ್ನು ಹಾಕಿ ಕೊಂಡು ಹೂ ಮುಡಿಯುವರು.

**ಉಡಿಗೆಗಳು.**

ಖ್ರಿಸ್ತೀ ಜಾತಿಗಳಿಗೆ ಯಾವತ್ತು ಪ್ರಕಾರದ ಮಾಂಸವನ್ನೂ ಮೀನುಗಳನ್ನೂ ಯಾವತ್ತು ಪ್ರಕಾರದ ಮದ್ಯವನ್ನೂ ತಕ್ಕೊಳ್ಳಲಿಕ್ಕೆ ಅಡ್ಡಿ ಇಲ್ಲ. ಆದರೂ ಕೆಲವರು ಗೋಮಾಂಸ, ಹಂದಿಯ ಮಾಂಸ, ಮದ್ಯ, ಇವುಗಳನ್ನು ಮುಟ್ಟುವದಿಲ್ಲ. ಯಾವತ್ತು ಜಾತಿಗಳ ಜನರು ಬೆಳಿಗ್ಗೆ ಅಕ್ಕೀ ಗಂಜಿಯನ್ನು ತಕ್ಕೊಳ್ಳುವರು; ಮಧ್ಯಾಹ್ನದ ಊಟಕ್ಕೂ ಸಂಜೆಯ ಊಟಕ್ಕೂ ಅನ್ನ, ಪಲ್ಲೆಗಳು, ಮೀನುಗಳು,

**ಆಹಾರ.**

ಅಲ್ಲದೆ ಶಕ್ತ್ಯನುಸಾರ ಮದ್ಯ ಮಾಂಸಗಳನ್ನು ತಕ್ಕೊಳ್ಳುವರು. ಅನುಕೂಲವಿದ್ದವರು ಬೆಳಿಗ್ಯೂ ಸಂಜೆಗೂ ಚಹಾ ಕಾಫಿಗಳನ್ನು ತಕ್ಕೊಳ್ಳುವರು. ಬಡ ಜನರು, ಕ್ರಿಸ್ತೀ ಹಬ್ಬಗಳಲ್ಲಿ ಮಾತ್ರ ಮಾಂಸ ತಕ್ಕೊಳ್ಳುವರು. ಹಿಂದೂ ಜನರಂತೆ ಕ್ರಿಸ್ತಿಗಳಲ್ಲಿಯೂ ಬಹು ಜನ ಶರೆ ಬಡಕರನ್ನು ಕಾಣ ಬಹುದು. ಬಡ ಜನರು ಸಿಂದಿಯನ್ನೇ ಕುಡಿಯುವರು. ಹಬ್ಬ ಹುಣ್ಣಿವೆಗಳಲ್ಲಿ ಬಹುತರ ಕೊಂಕಣದ ಪಕ್ವಾನ್ನಗಳನ್ನೇ ಯೆಲ್ಲರೂ ಮಾಡುವರು; ಕೆಲವರು ಯುರೋಪದ ಪದ್ಧತಿಯ ಪಕ್ವಾನ್ನಗಳನ್ನು ಮಾಡುವರು.

ಬಾಂಬನರಲ್ಲಿಯೂ ಚರೋಡರಲ್ಲಿಯೂ ಹಲ ಕೆಲವರು ವಿಧ್ಯಾಭ್ಯಾಸ ಮಾಡಿ ಸರಕಾರೀ ನೌಕರಿಗಳನ್ನು ಸಂಪಾದಿಸುವರು; ಕಲಿಯದವರು ವ್ರೊಕ್ಕಲತನ ಮಾಡುವರು.

**ಹೋರೆಗಳು.** ಹೆಸರಾದ ವ್ಯಾಪಾರಸ್ಥರು ಕ್ರಿಸ್ತಿಗಳಲ್ಲಿ ಬಹುತರ ಇಲ್ಲ. ಸೂದಿರರು ಸಿಂಪಿಗರ ಹೋರೆಯನ್ನೂ ಬಡಿಗರ ಹೋರೆಯನ್ನೂ ಮಾಡುವರು; ಕೆಲವರು ಕೂಲಿಗೆ ಹೋಗುವರು. ರೆಂಡರರು ಈಚಲ ರಸ ತೆಗಿದು ಮಾರುವರು. ಗವಿಡರು ಉಪ್ಪು ಮಾಡುವರು. ಮೊಡವಾಳರು ಬಟ್ಟೆಗಳನ್ನು ವ್ರೊಗಿಯುವರು. ಕುಂಬಾರರು ಮಣ್ಣಿನ ಪಾತ್ರೆಗಳನ್ನು ಮಾಡುವರು. ಕಾಫ್ರಿಗಳು ಕೂಲೀ ಮಾಡುವರು, ಇಲ್ಲವೆ ಚಾಕರಿಗೆ ನಿಲ್ಲುವರು. ಕಾನಡಾ ಜಿಲ್ಲೆಯು ಮದ್ರಾಸ ಇಲಾಖೆಗೆ ಶೇರಿದ್ದಾಗ ಸರಕಾರೀ ದೊಡ್ಡ ಅಧಿಕಾರದ ಕೆಲಸಗಳನ್ನು ಕ್ರಿಸ್ತೀ ಜನರೇ ಆಕ್ರಮಿಸಿದ್ದರು. ಬೇಕಾದವರು ಬೇಕಾದ ಹೋರೆಯನ್ನು ಮಾಡಲಿಕ್ಕೆ ಅಡ್ಡಿ ಇಲ್ಲ. ಆದರೆ ಚರ್ಮ ಮಿದು ಮಾಡುವ ಹೋರೆಯನ್ನಾಗಲಿ ಚರ್ಮ ಹೊಲಿಯುವ ಹೋರೆಯನ್ನಾಗಲಿ ಯಾರು ಮಾಡುವದಿಲ್ಲ. ಮೊಡವಾಳರೂ ಕುಂಬಾರರೂ ಹೊರ್ತಾಗಿ ಅವರ ಹೋರೆಯೊಳಗೆ ಬೇರೆ ಜನರು ಶೇರುವದಿಲ್ಲ. ಕಡಿಮೇ ಜಾತಿಗಳ ಹೆಂಗಸರು ಕೂಲಿಗೆ ಹೋಗುವರು.

ಬಹು ಜನರ ವಸ್ತಿ ಇದ್ದ ಗ್ರಾಮಗಳಲ್ಲಿ ಚರ್ಚವೆಂಬ ಪ್ರಾರ್ಥನಾಲಯವಿರುತ್ತದೆ; ಸಣ್ಣ ಗ್ರಾಮಗಳಲ್ಲಿ ಚಾಪೆಲ್ಲೆಂಬ ಸಣ್ಣ ಪ್ರಾರ್ಥನಾಲಯವಿರುತ್ತದೆ; ಚರ್ಚಗಳಲ್ಲಿ ಪ್ರಾರ್ಥ-

**ಧರ್ಮ.** ನೆಯ ಕಾಲಕ್ಕೆ ಗಾಯನ ಮಾಡುವ ಜನರನ್ನೂ ಹುಡುಗರನ್ನೂ ನೇಮಿಸಿರುತ್ತಾರೆ. ಚರ್ಚದ ಮುಖ್ಯ ಪೀಠದ ಮೇಲೆ ಕ್ರೂಸದ ಮೇಲೆ ಯೇರಿಸಿದ ಯೇಸೂ ಕ್ರಿಸ್ತನ ಮೂರ್ತಿಯನ್ನೂ ಯಾವ ಸತ್ಪುರುಷನಿಗೆ ಚರ್ಚವನ್ನು ಅರ್ಪಿಸಿರುವರೋ ಅವನ ಮೂರ್ತಿಯನ್ನೂ ಬೇರೆ ಕೆಲವು ಸತ್ಪುರುಷರ ಮೂರ್ತಿಗಳನ್ನೂ ಇಟ್ಟಿರುವರು. ಪ್ರತಿ ವ್ರೊಂದು ಚರ್ಚಕ್ಕೆ "ಬ್ರದರಹುಡ್" ಯೆಂಬ ಹೆಸರಿನ ಸ್ತ್ರೀ ಪುರುಷರ ಸಂಘಗಳು ಶೇರಿರುವವು. ಈ ಸಂಘದವರು ಅಲ್ಪ ಸ್ವಲ್ಪ ವರ್ಗಣಿಯನ್ನು ಪ್ರತಿ ವರ್ಷ ಕೊಡುವರು; ಇವರಿಗೆ ಹಲಕೆಲವು ಹಕ್ಕುಗಳೂ ಇರುತ್ತವೆ. ಈ ಸಂಘದವರು ಶುಕ್ರವಾರ ಶನಿವಾರಗಳಲ್ಲಿ ಮಾಂಸ ತಿನ್ನುವದಿಲ್ಲ; ರವಿವಾರದಲ್ಲಿ ಚರ್ಚಕ್ಕೆ ಪ್ರಾರ್ಥನೆಗೆ ಹೋಗಲಿಕ್ಕೆ ಬೇಕು; ವರ್ಷದಲ್ಲಿ ನಿಕೃಷ್ಟ ವ್ರೊಮ್ಮೆ ಪ್ರತಿಯೊಬ್ಬನು ತಾನು ಮಾಡಿದ ಪಾಪಗಳನ್ನು ಧರ್ಮೋಪದೇಶಕನ ಕಿವಿಯೊಳಗೆ ಹೇಳಿ ಕ್ಷಮೆಯನ್ನು ಪಡಿಯಲಿಕ್ಕೆ ಬೇಕು; ಒಬ್ಬನು ಸತ್ತರೆ ಸಂಘದವರೆಲ್ಲರು ಅವನನ್ನು ಹುಗಿಯಲಿಕ್ಕೆ ಹೋಗ

ಬೇಕು ಇತ್ಯಾದಿ. ರವಿವಾರಗಳ ಹೊರ್ತು ಹಬ್ಬದ ದಿವಸಗಳಲ್ಲಿಯೂ ಸಂಘದವರು ಚರ್ಚಕ್ಕೆ ಹೋಗಲಿಕ್ಕೆ ಬೇಕು. ಹಬ್ಬದ ದಿವಸಗಳು—೨೫ನೇ ದಶಂಬರು, ೧ನೇ ಜನವರಿ, ಇವೆರಡು ದೊಡ್ಡ ಹಬ್ಬಗಳಲ್ಲದೆ, ಫೆಬ್ರುವಾರಿ, ಮಾರ್ಚ, ಎಪ್ರಿಲ್, ಆಗಷ್ಟ, ಸಪಟಂಬರು, ಡಿಸೆಂಬರು, ಈ ತಿಂಗಳುಗಳಲ್ಲಿ ಬೇರೆ ಬೇರೆ ಹಬ್ಬಗಳು ಬರುವವು. ಇದಲ್ಲದೆ "ಗೂಡ್ ಫ್ರ್ಯಾಡೆ" ಅಂದರೆ ಯೇಸು ಖ್ರಿಸ್ತನನ್ನು ಕ್ರೂಸದ ಮೇಲೆ ಯೇರಿಸಿದ ದಿವಸವು ಮಾರ್ಚ್ ಯೆಪ್ರಿಲ್ ತಿಂಗಳಲ್ಲಿ ಬರುವದು. ಆ ದಿವಸದ ಸಮಾರಂಭದಲ್ಲಿ ಖ್ರಿಸ್ತಿಗಳು ಬಹಳ ದುಃಖವನ್ನು ತೋರಿಸುವರು. ಇವಲ್ಲದೆ "ಪ್ಯಾರಿಶ್ ಫೀಸ್ಟ" ಯೆಂಬದೊಂದು ಹಬ್ಬವು ವರ್ಷಕ್ಕೊಮ್ಮೆ ಬರುವದು. ಅದರ ಸಮಾರಂಭವು ೯ ದಿವಸ ನಡಿಯುತ್ತದೆ. ಧರ್ಮ ಸಂಬಂಧದ ಶೀಮೆಯ ವಿಭಾಗಗಳಿಗೆ ಪ್ಯಾರಿಶಗಳೆಂದೆನ್ನುತ್ತಾರು. ಬೇರೆ ಬೇರೆ ಪ್ಯಾರಿಶದವರು ಬೇರೆ ಬೇರೆ ತಿಂಗಳಲ್ಲಿ ತಮ್ಮ ಫೀಸ್ಟದ ಹಬ್ಬವನ್ನು ಮಾಡುವರು. ಗೋಮಂತಕದ ಕ್ಯಾಥೊಲಿಕರೆಲ್ಲರು ಗೋವೆಯ ಆರ್ಚ ಬಿಶಪನೆಂಬ ಧರ್ಮಾಧ್ಯಕ್ಷನಿಗಾಗಲಿ, ಮಂಗಳೂರಿನ ಬಿಶಪನೆಂಬ ಧರ್ಮಾಧ್ಯಕ್ಷನಿಗಾಗಲಿ ಅಂಕಿತರಾಗಿರುವರು. ಈ ಖ್ರಿಸ್ತಿಗಳು ತಮ್ಮ ಮನೆಗಳಲ್ಲಿ ಮನೆತನದ ಗುರುವೆಂದೆಣಿಸಲ್ಪಟ್ಟ ಸತ್ಪುರುಷನ ಮೂರ್ತಿಯನ್ನು ಜಗಲಿಯ ಮೇಲೆ ಇಟ್ಟು ಇಲ್ಲವೆ ಗೋಡೆಯೊಳಗೆ ನಡಿಸಿ ಪೂಜಿಸುವರು. ಈ ಮೂರ್ತಿಯ ಸಂಗಡ ಕೆಲವರು ಯೇಸೂ ಖ್ರಿಸ್ತನ ಮೂರ್ತಿಯನ್ನೂ ಅವನ ತಾಯಿಯಾದ ಮೇರಿಯ ಮೂರ್ತಿಯನ್ನೂ ಪೂಜಿಸುವರು. ಈ ಮೂರ್ತಿಗಳು ವಾಡಿಕೆಯಾಗಿ ಆನೇ ಹಲ್ಲಿನವು ಇಲ್ಲವೆ ಕಟ್ಟಿಗೆಯವು ಇರುವವು. ಧಾರ್ಮಿಕರಾದವರು ಪ್ರತಿ ದಿವಸ ಬೆಳಿಗ್ಗೆ ಹಾಸಿಗೆಯಿಂದೆದ್ದ ಕೂಡಲೆ ವೊಮ್ಮೆ, ಮಧ್ಯಾಹ್ನದಲ್ಲಿ ವೊಮ್ಮೆ, ಹೊತ್ತು ಮುಳುಗುವಾಗ ವೊಮ್ಮೆ, ಸಂಜೆಯ ಊಟದ ಪೂರ್ವದಲ್ಲಿ ವೊಮ್ಮೆ, ಮಲಗುವಾಗ ವೊಮ್ಮೆ, ಹೀಗೆ ಐದು ಸಾರಿ ದೇವರ ಸ್ತೋತ್ರಗಳನ್ನು ಅಂದು ಪ್ರಾರ್ಥನೇ ಮಾಡುವರು.

ಹೆಣ್ಣು ಮಕ್ಕಳ ಲಗ್ನವನ್ನು ಹನ್ನೆರಡು ವರ್ಷ ತುಂಬಿದ ಬಳಿಕ ಗಂಡು ಮಕ್ಕಳ ಲಗ್ನವನ್ನು ಹದಿನಾರು ವರ್ಷ ತುಂಬಿದ ಬಳಿಕ ಮಾಡುವರು. ಇದರ ಪೂರ್ವದಲ್ಲಿ ಮಾಡ ಬೇಕಾದರೆ ಧರ್ಮ ಗುರುವಿನ ಅಪ್ಪಣೆ ಬೇಕು. ವಿಧವೆಗಳ ಲಗ್ನಕ್ಕೆ ಅಡ್ಡಿ ಇಲ್ಲ; ಆದರೆ ವಿಧವೆಗಳು ಬಹುತರ ಲಗ್ನ ಮಾಡಿ ಕೊಳ್ಳುವದಿಲ್ಲ. ಶರಗು ಹರಿಯುವ ನಡಾವಳಿಯು ಗೊತ್ತೇ ಇಲ್ಲ. ಲಗ್ನದ ಮಾತು ಕಥೆಗಳು ಗೊತ್ತಾದ ಬಳಿಕ, ಮದಿಮಕ್ಕಳು ಬಳಗದವರೊಡನೆ ಚರ್ಚಕ್ಕೆ ಹೋಗುವರು. ಅಲ್ಲಿ ಧರ್ಮೋಪದೇಶಕನು, ನೀವಿಬ್ಬರೂ ಪರಸ್ಪರರನ್ನು ಲಗ್ನ ಮಾಡಿ ಕೊಳ್ಳಲಿಕ್ಕೆ ವೊಡಂಬಡುತ್ತೀರೋ, ಯೆಂದು ಇಬ್ಬರು ಸಂಭಾವಿತರ ಸಮಕ್ಷ ಮದಿಮಕ್ಕಳನ್ನು ಕೇಳಿ, ಅವರಿಬ್ಬರ ಸಂಮತಿಯ ಉತ್ತರಗಳನ್ನು ಬೇರೆ ಬೇರೆಯಾಗಿ ಯೆಲ್ಲರ ಸಮಕ್ಷ ಕೇಳಿ ಕೊಂಡು, ಈ ಲಗ್ನಕ್ಕೆ ಯಾರದಾದರೂ ಅಡ್ಡಿ ಇದ್ದರೆ, ಅವರು ತಿಳಿಸ ಬೇಕೆಂದು ಕೂಡಿದ ಜನರಿಗೆ ಕೂಗಿ ಹೇಳುವನು. ಈ ಪ್ರಕಾರ ಮೂರು ರವಿವಾರಗಳಲ್ಲಿ ಚರ್ಚದಲ್ಲಿ ಲಗ್ನವು ಪ್ರಸಿದ್ಧವಾದ ಬಳಿಕ ಲಗ್ನದ ದಿವಸವು ಗೊತ್ತಾಗುತ್ತದೆ. ಆ ದಿವಸ ಮದಿಮಕ್ಕಳು ತಾಯಿ ತಂದೆ ಮುಂತಾದ ಬಳಗದವರನ್ನೂ

ಸ್ನೇಹಿತರನ್ನೂ ವೊಡಗೊಂಡು ಶೃಂಗಾರದ ವಸ್ತ್ರಾಲಂಕಾರಗಳನ್ನು ಧರಿಸಿಕೊಂಡು ಲಗ್ನ ಮಾಡಿ ಕೊಳ್ಳಲಿಕ್ಕೆ ಚರ್ಚಕ್ಕೆ ಹೋಗುವರು. ಅಲ್ಲಿ ಧರ್ಮೋಪದೇಶಕನು ಮತ್ತೊಮ್ಮೆ ಅವರ ಸಮ್ಮತಿಯನ್ನು ಸಂಭಾವಿತರ ಸಮಕ್ಷ ಕೇಳಿ ಅವರ ವೊಪ್ಪಿಗೆಯನ್ನು ರಜಿಷ್ಟರಿನಲ್ಲಿ ಬರಿದು ಇಡುವನು. ಬಳಿಕವನು ವಧೂವರರ ಬಲಗೈಗಳನ್ನು ತನ್ನ ಕೈಯಲ್ಲಿ ಜೋಡಿಸಿ ಹಿಡಿದು, ದೇವರು, ಅವನ ಮಗ, ಪವಿತ್ರ ಆತ್ಮ, ಇವರ ಹೆಸರಿನಿಂದ ನಾನು ನಿಮ್ಮ ಲಗ್ನ ಸಂಬಂಧವನ್ನು ಜೋಡಿಸುತ್ತೇನೆ, ಯೆಂದು ನುಡಿದು ಇಬ್ಬರ ಕೈಗಳ ಮೇಲೆ ಪವಿತ್ರ ತೀರ್ಥವನ್ನು ಹಾಕುವನು. ಬಳಿಕ ಮದಿಮಕ್ಕಳು ವೊಂದೊಂದು ಉಂಗುರವನ್ನು ಧರ್ಮೋಪದೇಶಕನ ಕೈಯಲ್ಲಿ ಕೊಡುವರು. ಅವುಗಳ ಮೇಲೆ ಅವನು ಪವಿತ್ರ ತೀರ್ಥ ವನ್ನು ಹಾಕಿ ಆಶೀರ್ವಾದ ಕೊಟ್ಟು ಅವರಿಗೆ ಹಿಂದಕ್ಕೆ ಕೊಟ್ಟ ಬಳಿಕ, ಮದಿಮಗಳು ತನ್ನ ಉಂಗುರವನ್ನು ಮದಿಮಗನ ಬಲಗೈ ಅನಾಮಿಕೆಯಲ್ಲಿ, ಮದಿಮಗನು ತನ್ನದನ್ನು ಮದಿಮಗಳ ಯೆಡಗೈ ಅನಾಮಿಕೆಯಲ್ಲಿ ಇಡಿಸುವನು. ಇದೇ ಲಗ್ನದ ಮುಖ್ಯ ಸಂಸ್ಕಾ ರವು. ಇದಾದ ಬಳಿಕ, ದೇವರ ಪ್ರಾರ್ಥನೆಯಾಗುವ ವರೆಗೆ ಚರ್ಚದಲ್ಲಿ ನಿಂತು, ಮದಿ ಮಕ್ಕಳು ಮರಳಿ ಮದಿಮಗಳ ಮನೆಗೆ ಹೋಗುವರು. ಆದರೆ ಇಷ್ಟರಿಂದ ಲಗ್ನದ ವಿಧಿ ಯು ತೀರಲಿಲ್ಲ. ಮನೆಗೆ ಹೋದ ಬಳಿಕ ಮದಿಮಕ್ಕಳಿಗೆ ಮುತ್ತೈದಿಯರು ಯೆರಿಯುವ ಹೂಸುವ ನಡಾವಳಿ, ಮದಿಮಗಳಿಗೆ ಮಂಗಳ ಸೂತ್ರ ಕಟ್ಟುವದು, ಕೂಸು ವೊಪ್ಪಿಸುವ ದು, ಮೆರುವಣಿಗೆ, ಇವೆಲ್ಲ ಹಿಂದೂ ಜನರಂತೆ ನಾಲ್ಕೈದು ದಿವಸ ನಡಿಯುತ್ತವೆ. ಮಂಗ ಳ ಸೂತ್ರವನ್ನು ಮದಿಮಗನ ತಾಯಿ ಕಟ್ಟುವಳು. ದೈವುಳ್ಳವರು ನೂರಿನ್ನೂರು ಬೆಲೆ ಬಾಳುವ ಚಿನ್ನದ ಮಂಗಳಸೂತ್ರ ಕಟ್ಟುವರು. ಆ ಸರದ ನಡುವೆ ಹಿಂದೂ ಪದ್ಧತಿಯ ಮಂಗಳಸೂತ್ರವನ್ನು ಹಾಕದೆ, ಕ್ರೂಸದ (✠) ಆಕಾರದಂಥ ಚಿನ್ನದ ಪದಕವನ್ನು ಹಾಕುವರು. ಬಡವರು ವೊಕ್ಕಲಿಗರ ಗುಳದಾಳಿಯಂಥ ಚಿನ್ನದ ಗುಂಡು ಕರಿಮಣಿಯೊ ಳಗೆ ಪೋಣಿಸಿ ಕಟ್ಟುವರು.

ಬಸುರು ಹೆಂಗಸರಿಗೆ ಯೇಳನೇ ತಿಂಗಳಲ್ಲಿ ಮನೆಯವರೂ ಬಳಗದವರೂ ಕುಬ್ಬುಸ ಮಾಡುವ ನಡಾವಳಿಯು ಹಿಂದೂ ಜನರಂತೆ ನಡಿಯುತ್ತದೆ. ವೊದಲನೇ ಬಾಣಂತಿತನ ವು ತಂದೆಯ ಮನೆಯಲ್ಲಿಯೇ ವಾಡಿಕೆಯಾಗಿ ಆಗತಕ್ಕದ್ದು.

**ಜನ್ಮ, ಬಾಪ್ತಿಸ್ಮ.**

ಹಡಿದ ಬಳಿಕ ಮೂರು ದಿವಸಗಳಾಗುವ ವರೆಗೆ ಕೂಸಿಗೂ ಬಾಣತಿಗೂ ಅಕ್ಕೀ ಗಂಜಿಯೊಳಗೆ ಸಕ್ಕರೆ ಇಲ್ಲವೆ ಬೆಲ್ಲ ಹಾಕಿ ಕುಡಿಸುವರು; ಬಾಣತಿ ಯು ಕೂಸಿಗೆ ಮೊಲೆ ಕೊಡುವದಿಲ್ಲ. ನಾಲ್ಕನೇ ದಿವಸ ಬಾಣತಿಗೆ ಪಾಯಸ ಮುಂತಾ ದ ಸುಗ್ರಾಸ ಭೋಜನ ಹಾಕಿದ ಬಳಿಕ ಆಕೆ ಕೂಸಿಗೆ ಮೊಲೆ ಕೊಡುವಳು. ಆರನೇ ದಿವಸ ಗವಿಡರು ಮುಂತಾದ ಕಡಿಮೇ ಜಾತಿಯವರು ಸಟಿವೆಯ ಪೂಜೆ ಮಾಡದಿ ದ್ದಾಗ್ಯೂ ಬೆಳತನಕ ಮನೆಯವರು ಯೆಚ್ಚರದಿಂದ ಕೂಸನ್ನು ಕಾಯುವರು. ಎಂಟನೇ ದಿವಸ ಕೂಸನ್ನು ಚರ್ಚಕ್ಕೆ ತಕ್ಕೊಂಡು ಹೋಗಿ ಅದಕ್ಕೆ ಬಾಪ್ತಿಸ್ಮದ ಸಂಸ್ಕಾರ ಮಾಡು ವರು. ಆದರ ವಿಧಾನ ಹ್ಯಾಗಂದರೆ, ಕೂಸಿನ ಪರಿವಾರದವರು ಅದನ್ನು ತಕ್ಕೊಂಡು

ಚರ್ಚದೊಳಗೆ ಹೋಗುವ ಪೂರ್ವದಲ್ಲಿ ಧರ್ಮೋಪದೇಶಕನು ಹೊರಗೆ ಬಂದು ಕೂಸಿಗೆ ಹೆಸರಿಡುವನು; ಅದನ್ನು ತಾಯಿ ತಂದೆಗಳಾಗಲಿ ಬೇರೆ ಹಿರಿ ಮನುಷ್ಯರಾಗಲಿ ಕೂಸಿಗೆ ಕಿವಿಯೊಳಗೆ ಹೇಳುವರು. ಬಳಿಕ ಧರ್ಮೋಪದೇಶಕನು ಕೂಸಿನ ಬಾಯಿಯೊಳಗೆ ಮೂರು ಸಾರಿ ಊದಿ, ದೆವ್ವಿನ ಸಂಚಾರವನ್ನು ತೆಗಿದು ಹಾಕಿ ಪವಿತ್ರ ಆತ್ಮಕ್ಕೆ ಸ್ಥಳ ಮಾಡುವನು. ಬಳಿಕವನು ಕೂಸಿನ ಹಣೆಯ ಮೇಲೂ ಯೆದೆಯ ಮೇಲೂ (✠) ಈ ಪ್ರಕಾರ ಕ್ರೂಸದ ಆಕಾರವನ್ನು ಬೊಟ್ಟಿನಿಂದ ಬರೆದು ಅದರ ತಲೆಯ ಮೇಲೆ ತನ್ನ ಬಲಗೈ ಇಡುವನು. ತರುವಾಯ ಕೂಸಿನ ಬಾಯಿಯೊಳಗೆ ಸ್ವಲ್ಪ ಉಪ್ಪು ಹಾಕಿ, ಮತ್ತೊಮ್ಮೆ ಕ್ರೂಸದ ಆಕಾರ ಬರಿದು ತನ್ನ ಅಂಗಿಯ ಶರಗು ಕೂಸಿನ ಮೇಲೆ ಹೊಚ್ಚಿ, ಅವನು ಅದನ್ನು ಚರ್ಚದೊಳಗೆ ತಕ್ಕೊಂಡು ಹೋಗುವನು. ಆಗ ಅವನೂ ಇತರ ಜನರೂ ದೇವರ ಸ್ತೋತ್ರವನ್ನು ಅನ್ನುವರು. ಚರ್ಚದೊಳಗೆ ಹೋದ ಬಳಿಕ ಧರ್ಮೋಪದೇಶಕನು ತನ್ನ ಹೆಬ್ಬೆರಳಿಗೆ ಉಗುಳು ಹಚ್ಚಿ ಆ ಬೆರಳನ್ನು ಕೂಸಿನ ಕಿವಿಗೂ ಹೊಳ್ಳೆಗಳಿಗೂ ಹಚ್ಚುವನು. ತರುವಾಯ ಅವನು ದೆವ್ವಿಗೆ ಆ ಕೂಸನ್ನು ಬಿಟ್ಟು ಹೋಗೆಂದು ಆಜ್ಞಾಪಿಸಿ ಕೂಸಿನ ಕೊರಳಿನ ಕೆಳಗಿನ ಯೆಲುವಿಗೂ ಬೆನ್ನ ಹುರಿಯ ಕೆಳದುದಿಗೂ ಸ್ವಲ್ಪ ಯೆಣ್ಣೆ ಹಚ್ಚಿ ತಿಕ್ಕುವನು. ಆ ಯೆಣ್ಣೆಯನ್ನು ಅರಳೆಯಿಂದ ವೊರಿಸಿ ತೆಗಿಯುವರು ಇಷ್ಟಾದ ಬಳಿಕ ಧರ್ಮೋಪದೇಶಕನು ಕೂಸಿನ ತಲೆಗೆ ಯೆಣ್ಣೆ ಹಚ್ಚಿ, ಆ ತಲೆಯ ಮೇಲೆ ಮೂರು ಸಾರಿ ತಣ್ಣೀರು ಯೆರಚುವನು; ಹೀಗೆ ನೀರು ಹಾಕುವಾಗ ಅವನು "ದೇವರು, ಅವನ ಮಗ, ಪವಿತ್ರ ಆತ್ಮ, ಇವರ ಹೆಸರಿನಿಂದ ನಾನು ನಿನಗೆ ಬಾಪ್ತಿಸ್ಮದ ಸಂಸ್ಕಾರ ಮಾಡುತ್ತೇನೆ" ಯೆಂದು ನುಡಿಯುವನು. ಬಳಿಕ ಕೂಸಿನ ತಲೆಯ ಮೇಲೆ ಬಿಳಿ ಅರಿವೆಯನ್ನು ಹೊಚ್ಚಿ ಧರ್ಮೋಪದೇಶಕನು ವೊಂದು ಮೇಣ ಬತ್ತಿಗೆ ದೀಪ ಹಚ್ಚಿ ಅದನ್ನು ಕೂಸಿನ ಬಲಗೈಯಲ್ಲಿ ಹಿಡಿಸಿ, ಲಾಟಿನ ಭಾಷೆಯಲ್ಲಿ ಕೆಲವು ಮಂತ್ರಗಳನ್ನು ಅಂದು ದೇವರನ್ನು ಪ್ರಾರ್ಥಿಸುವನು. ಈ ಪ್ರಕಾರ ಬಾಪ್ತಿಸ್ಮದ ಸಂಸ್ಕಾರವಾದ ಬಳಿಕ ಕೂಸಿನ ಪರಿವಾರದವರು ಅದನ್ನು ತಕ್ಕೊಂಡು ಮನೆಗೆ ಹೋಗಿ ಬಳಗದವರಿಗೂ ಸ್ನೇಹಿತರಿಗೂ ಊಟ ಹಾಕುವರು, ಇಲ್ಲವೆ ಮಿಠಾಯಿಯನ್ನು ಹಂಚುವರು.

ಮರಣದ ಸಂಧಿಯಲ್ಲಿ ಧರ್ಮೋಪದೇಶಕನನ್ನು ಕರೆಕಳುಹುವರು. ಅವನು ಬಂದ ಬಳಿಕ ಸಾಯುವ ಮನುಷ್ಯನು ಅವನ ಮುಂದೆ ತಾನು ಮಾಡಿದ ಪಾಪಗಳನ್ನು ಉಚ್ಚರಿಸಿ, ಕ್ಷಮೆಯನ್ನು ಪಡಿಯುವನು. ಅವನಿಗೆ ಧರ್ಮೋಪದೇಶಕನು ಪವಿತ್ರವಾದ ಯೆಣ್ಣೆಯನ್ನು ಹಚ್ಚುವನು. ಸತ್ತ ಬಳಿಕ ಹೆಣಕ್ಕೆ ಸ್ನಾನ ಹಾಕಿ ಹೊಸ ವಸ್ತ್ರ ಉಡಿಸಿ ಬಿಳಿ ಅರಿವೆಯ ಮೇಲೆ ಮಲಗಿಸಿ, ಅದರ ಕೈಯಲ್ಲಿ ಕ್ರೂಸಿಫಿಕ್ಸ (ಅಂದರೆ ಕ್ರೂಸದ ಮೇಲೆ ಯೇರಿಸಿದ ಯೇಸೂ ಕ್ರಿಸ್ತನ ಮೂರ್ತಿಯನ್ನು) ಇಟ್ಟು, ಯೆರಡೂ ಕೈಗಳನ್ನು ಯೆದೆಯ ಮೇಲೆ ಕಟ್ಟಿ, ಅದರ ತಲೆಯ ಹತ್ತರ ಬೇರೊಂದು ದೊಡ್ಡ ಕ್ರೂಸಿಫಿಕ್ಸವನ್ನಿಟ್ಟು, ಯೆರಡು ಮೇಣ ಬತ್ತಿಗಳನ್ನು ಹಚ್ಚಿಡುವರು. ಬಳಿಕ ತಳವಾರನಂಥ ಜಾತಿಯ ಪರಿಚಾರಕನು ಊರವರನ್ನು ಕರಿಯಲಾಗಿ

**ಮರಣ.**

ಅವರು ಗೊತ್ತು ಮಾಡಿದ ವ್ಯಾಖ್ಯಕ್ಕೆ ಕೂಡುವರು. ತರುವಾಯ ಹೆಣವನ್ನು ಕಾಫಿನ್ ಯೆಂಬ ಪೆಟ್ಟಿಗೆಯೊಳಗೆ, ಇಲ್ಲವೆ ಬಾಯರ ಯೆಂಬ ಸದಿಗೆಯ ಮೇಲೆ ಹಾಕಿ ನಾಲ್ವರು ಹೊತ್ತು ಕೊಂಡು ಧರ್ಮೋಪದೇಶಕ ಸಹಿತ ಯಾವತ್ತು ಪರಿವಾರದೊಡನೆ ಚರ್ಚಕ್ಕೆ ಹೋಗುವರು. ಹೆಣ ಹೊರಟ ಕೂಡಲೆ ಸತ್ತವನ ಹೆಂಡತಿಯ ಮಂಗಳಸೂತ್ರ, ಕಿವಿ ಯೊಳಗಿನ ಅಲಂಕಾರಗಳು, ಕಾಜಿನ ಬಳೆ, ಇವುಗಳನ್ನು ತೆಗಿಯುವರು. ಹೆಣವು ಚರ್ಚಕ್ಕೆ ಹೋದ ಬಳಿಕ ಅಲ್ಲಿ ಮರಣೋಕ್ತ ಪ್ರಾರ್ಥನೆಗಳನ್ನು ಮಾಡಿ ಅದನ್ನು ಚರ್ಚ ದ ಹೊರಗಿನ ಲೋವಿಯಲ್ಲಾಗಲಿ, ಬೇರೆ ಸ್ಮಶಾನ ಭೂಮಿಯಲ್ಲಾಗಲಿ ಹುಗಿಯುವರು. ಯೇಳನೇ ದಿವಸ ಬಳಗದವರು ಚರ್ಚದಲ್ಲಿ ಕೂಡಿ ಪ್ರಾರ್ಥನೆ ಮಾಡಿ ಸತ್ತವನ ಮನೆ ಯಲ್ಲಿ ಉಣ್ಣುವರು. ಇದೇ ಪ್ರಕಾರ ೩೦ನೇ ದಿವಸವೂ ವರ್ಷದ ದಿವಸವೂ ವಿಧಾನ ವಾಗುತ್ತದೆ. ಮುಂದೆ ಪ್ರತಿ ವರ್ಷ ಸತ್ತ ದಿವಸ ದೇವರ ಪ್ರಾರ್ಥನೆಯಾಗುತ್ತಿರುತ್ತದೆ. ಸತ್ತ ಬಳಿಕ ವೊಂದು ವರ್ಷದ ವರೆಗೆ ಮನೆಯವರಿಗೆ ಸೂತಕವಿರುವದು. ಈ ವರ್ಷ ದಲ್ಲಿ ಮನೆಯೊಳಗೆ ಲಗ್ನ ಮುಂತಾದ ಶುಭ ಕಾರ್ಯಗಳಾಗ ಕೂಡದು.

ಜಾತಿ ಸಂಬಂಧದ ವ್ಯಾಜ್ಯಗಳ ನಿರ್ಣಯವನ್ನು ಬುದ್ಧಿವಂತರೆಂಬ ಪಂಚರು ಮಾಡಿ, ಅವಶ್ಯವಿದ್ದಲ್ಲಿ ಧರ್ಮಗುರುವಿನ ಅಪ್ಪಣೆಯನ್ನು ಕೇಳುವರು. ಉತ್ತಮ ಕುಲದವರ ಮಕ್ಕಳು ಶಾಲೆಗೆ ಹೋಗಿ ಇಂಗ್ಲಿಷ ಭಾಷೆಯ ಅಭ್ಯಾಸ ಮಾಡುವರು.

**ಮದ್ರಾಸಿ ಕ್ಯಾಥೊಲಿಕರು.**

**ಮದ್ರಾಸಿ ಕ್ಯಾಥೊಲಿಕರು.**—ಇವರು ಮದ್ರಾಸದ ದಂಡು ಈ ಶೀಮೆಗೆ ಬಂದ ಕಾಲಕ್ಕೆ ಬಂದರು. ಇವರೆಲ್ಲರು ಬಹುತರ ಚಾಕರಿಯ ನಿಮಿತ್ತದಿಂದ ಬಂದವರು; ಮುಂ ಬಯಿಯಲ್ಲಿ ಇರುವ ಜಸೂಟ ಬಿಶಪನೆಂಬ ಧರ್ಮಾಧ್ಯ ಕ್ಷನಿಗೆ ಅಂಕಿತರಾಗಿದ್ದಾರೆ. ಇವರ ಧರ್ಮ ಸಂಬಂಧದ ಆಚರಣೆಗಳೆಲ್ಲ ಗೋಮಂತಕದ ಕ್ಯಾಥೊಲಿಕರಂತೆ ಇರುತ್ತವೆ. ಇವರು ಹೆಣ್ಣು ಮಕ್ಕಳ ಲಗ್ನವನ್ನು ಹದಿನೈದು ವರ್ಷದ ಸುಮಾರಿನಲ್ಲಿ, ಗಂಡು ಮಕ್ಕಳ ಲಗ್ನವನ್ನು ಇಪ್ಪತ್ತು ವರ್ಷದ ಸುಮಾರಿನಲ್ಲಿ ಮಾಡುವರು. ಇವರು ಮಕ್ಕಳಿಗೆ ಮನೆಯಲ್ಲಿ ತಮಿಳ ಭಾಷೆ ಯನ್ನು ಕಲಿಸುವರು; ಕೆಲವರು ಶಾಲೆಗೂ ಕಳಿಸುವರು.

**ದೇಶೀ ಪ್ರಾಟೆಸ್ಟಂಟ ಕ್ರಿಸ್ತಿಯನ್ನರು.**

**ದೇಶೀ ಪ್ರಾಟೆಸ್ಟಂಟ ಕ್ರಿಸ್ತಿಯನ್ನರು.**—ಇವರಲ್ಲಿಯೂ ಕೆಲವರು ಮದ್ರಾಸ ದಿಂದ ಬಂದ ತಮಿಳರೂ ಕೆಲವರು ಇದೇ ಶೀಮೆಯವರೂ ಉಂಟು. ಇಂಗ್ಲಿಷ, ಜರ್ಮ ನ್, ಮಿಶನರಿಗಳು, ಈ ಶೀಮೆಯ ಬ್ರಾಹ್ಮಣರು, ಲಿಂಗವಂತ ರು, ಮುಂತಾದವರನ್ನು ಕುಲಗೆಡಿಸಿ ಕ್ರಿಸ್ತೀ ಧರ್ಮಕ್ಕೆ ಶೇರಿಸಿ ದಂಥ ಸ್ವಲ್ಪ ಜನರು ಈ ಶೀಮೆಯ ಪ್ರಾಟೆಸ್ಟಂಟರೆನಿಸುತ್ತಾರೆ. ಇವರ ನಡೆನುಡಿಗಳು ಅವರವರ ಕುಲದವರಂತೆ ಇರುತ್ತವೆ. ಮದ್ರಾಸದವರು ಮದ್ಯ ಮಾಂಸಗಳನ್ನು ನಿರಾತಂಕವಾಗಿ ತಕ್ಕೊಳ್ಳುವರು; ಆದರೆ ಈ ಶೀಮೆಯವರು ಮಿತ ದಿಂದ ತಕ್ಕೊಳ್ಳುವರು; ಅವರಲ್ಲಿ ಮದ್ಯ ಮಾಂಸಗಳನ್ನು ಯೆಂದೆಂದು ಮುಟ್ಟದಂಥವರು

ಕೆಲವರುಂಟು. ಮದ್ರಾಸಿಗಳು ವಿಶೇಷವಾಗಿ ಯುರೋಪಿಯನ್ನರ ಚಾಕರರಿದ್ದಾರೆ. ಈ ಶೀಮೆಯರಲ್ಲಿ ಕೆಲವರು ಸರಕಾರೀ ನೌಕರಿಯನ್ನು ಮಾಡುವರು, ಕೆಲವರು ಮಿಶನರಿಗಳ ಧರ್ಮೋಪದೇಶದ ನೌಕರಿಯನ್ನು ಮಾಡುವರು, ಕೆಲವರು ತಮ್ಮ ಕುಲದ ಹೋರೆಗಳನ್ನು ಮಾಡುವರು. ಮದ್ರಾಸದವರಿಗೂ ಈ ಶೀಮೆಯವರಿಗೂ ಊಟದ ಬಳಿಕೆಯಾಗುತ್ತದೆ, ಶರೀರ ಸಂಬಂಧವಾಗುವದಿಲ್ಲ. ಈ ಶೀಮೆಯವರು ತಮ್ಮ ತಮ್ಮೊಳಗೆ ಜಾತಿಭೇದದ ಸಂಬಂಧವಿಡದೆ ಶರೀರ ಸಂಬಂಧವನ್ನು ಯಥೇಚ್ಛವಾಗಿ ಮಾಡುವರು. ಈ ಖ್ರಿಸ್ತಿಯನ್ನರೆಲ್ಲರು ರವಿವಾರ, ವರ್ಷದ ಪ್ರಥಮ ದಿವಸ, ಗೂಡ್ ಫ್ರ್ಯಾಡೆ, ಖ್ರಿಸ್ತಮಾಸಡೇ, (೨೫ನೇ ದಿಜಂಬರು), ಈ ದಿವಸಗಳಲ್ಲಿ ಚರ್ಚಕ್ಕೆ ಪ್ರಾರ್ಥನೆಗೆ ಹೋಗುವರು. ಬಾಪ್ತಿಸ್ಮದ ಸಂಸ್ಕಾರವು ಕ್ಯಾಥೊಲಿಕರಂತೆ ಕೂಸು ಹುಟ್ಟಿದ ಬಳಿಕ ಸ್ವಲ್ಪ ದಿವಸದೊಳಗೆ ಚರ್ಚದಲ್ಲಿ ಆಗುವದು. ಲಗ್ನವಾದರೂ ಚರ್ಚದಲ್ಲಿಯೇ ಆಗುವದು. ಈ ಪ್ರಾಟಿಸ್ಟಂಟರ ಧರ್ಮಾಚರಣೆಗೂ ಕ್ಯಾಥೊಲಿಕರ ಧರ್ಮಾಚರಣೆಗೂ ಸ್ವಲ್ಪವೇ ಅಭ್ಯಂತರವಿರುತ್ತದೆ. ಇವರು ಮೇರಿ ಮುಂತಾದವರ ಮೂರ್ತಿಗಳನ್ನು ಪೂಜಿಸುವದಿಲ್ಲ; ಕ್ಯಾಥೊಲಿಕರಷ್ಟು ಧರ್ಮೋಪದೇಶಕರನ್ನು ಅವಲಂಬಿಸಿ ನಡಿಯುವದಿಲ್ಲ; ಧರ್ಮೋಪದೇಶಕನ ಬಳಿಯಲ್ಲಿ ಪಾಪಗಳನ್ನು ಉಚ್ಚರಿಸುವ ಪ್ರಯೋಜನವಿಲ್ಲ. ಈ ಖ್ರಿಸ್ತಿಯನ್ನರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ತುರ್ಕ ಬಾಬಿ.**

ತುರ್ಕ ಬಾಬಿ ಯೆಂಬ ಕುಲಗೆಟ್ಟ ಕೊಂಕಣೀ ಸೊನ್ನಗಾರರು.—ಇವರು ಕಾನಡಾ ಜಿಲ್ಲೆಯ ಹೊನ್ನಾವರ ತಾಲೂಕಿನ ಮುರುಡೇಶ್ವರವೆಂಬ ಗ್ರಾಮದಲ್ಲಿ ಮಾತ್ರ ಇರುತ್ತಾರೆ. ಇವರ ಸಂಖ್ಯೆವು ಗಂಡು ಹೆಣ್ಣು ಕೂಡಿ ೬೫ಕ್ಕಿಂತ ಹೆಚ್ಚಿಲ್ಲ. ಈ ಕುಲದ ಮೂಲ ಪುರುಷನಾದ ಬಾಬೀ ಯೆಂಬವನನ್ನು ಟೀಪು ಸುಲ್ತಾನನು ಬಲಾತ್ಕಾರದಿಂದ ಮುಸಲ್ಮಾನನನ್ನು ಮಾಡಿದ್ದನು. ಟೀಪೂ ಮರಣ ಹೊಂದಿದ ಬಳಿಕ ಬಾಬಿಯು ಮತ್ತೆ ಹಿಂದೂ ಆಗಿ ತನ್ನ ಕುಲದ ನಡಾವಳಿಯಂತೆ ನಡಿಯ ಹತ್ತಿದನು. ಆದರೆ ಅವನ ಕುಲದವರು ಅವನನ್ನು ತಮ್ಮೊಳಗೆ ಕೂಡಿಸಿಕೊಳ್ಳಲಿಲ್ಲವಾದ್ದರಿಂದ ಬಾಬಿಯ ವಂಶದವರು "ತುರ್ಕ ಬಾಬಿ" ಯೆಂಬ ಹೊಸ ಕುಲದವರಾದರು. ಈ ಕುಲದವರು ಕುಲಗೆಟ್ಟಂಥ ಸೊನ್ನಗಾರರ ಹೆಣ್ಣುಗಳನ್ನು ಲಗ್ನ ಮಾಡಿಕೊಳ್ಳುತ್ತಾರೆ. ಇವರು ಮೀನುಗಳನ್ನು ಮಾತ್ರ ತಿನ್ನುವರು; ಮದ್ಯ ಮಾಂಸ ಮುಟ್ಟುವದಿಲ್ಲ. ಇವರಲ್ಲಿಯ ಜನ್ಮ, ಮುಂಜಿ, ಲಗ್ನ, ಮರಣ, ಮುಂತಾದವುಗಳ ಸಂಸ್ಕಾರಗಳು ಕುಶಸ್ಥಳಿಗಳಂತೆ ನಡಿಯುತ್ತವೆ. ಹೈಗ ಬ್ರಾಹ್ಮಣರು ಇವರ ಉಪಾಧ್ಯಾಯರು; ಶೃಂಗೇರಿಯ ಸ್ವಾಮಿಯು ಇವರ ಧರ್ಮಗುರು. ಇವರಲ್ಲಿ ವಿಧವೆಗಳ ಕ್ಷೌರ ಮಾಡಿಸುವರು, ಹೆಣ್ಣು ಮಕ್ಕಳ ಲಗ್ನವನ್ನು ಹತ್ತು ವರ್ಷದೊಳಗೆ ಮಾಡುವರು. ಇವರು ಸಣ್ಣ ಪುಟ್ಟ ಮಾರಾಟಗಳನ್ನೂ ವೊಕ್ಕಲತನವನ್ನೂ ಮಾಡಿ ಕೊಂಡು ಸುಖದಿಂದ ಜೀವಿಸುತ್ತಾರೆ. ಇವರ ಮಕ್ಕಳು ಶಾಲೆಗೆ ಹೋಗುತ್ತಾರೆ.

**ಪಾರ್ಸಿಗಳು.**—ಇವರು ಮುಂಬಯಿಯಿಂದ ವ್ಯಾಪಾರದ ನಿಮಿತ್ತವಾಗಿ ಬಂದು

ವಿಜಾಪುರ ಹೊರ್ತಾಗಿ ಉಳಿದ ಮೂರು ಜಿಲ್ಲೆಗಳಲ್ಲಿ ಹಲ ಕೆಲವರು ಮನೆಗಳನ್ನು ಮಾಡಿಕೊಂಡು ನಿಂತಿದ್ದಾರೆ; ಮನೆಯಲ್ಲಿ ಗುಜರಾಥೀ ಭಾಷೆಯನ್ನಾಡುವರು. ಪಾರ್ಸೀ ಜನರು ಅಗ್ನಿಯನ್ನು ಪೂಜಿಸುವರು; "ಅಗ್ಯಾರಿ" (ಅಗ್ನ್ಯಾಗಾರ) ಯೆಂಬ ಅಗ್ನಿಯ ಗುಡಿಯಲ್ಲಿ ಇವರು ಲಗ್ನಾದಿ ಶುಭ ಕಾರ್ಯಗಳನ್ನು ಮಾಡುವರು. ಒಂದು ಬಾವಿಯ ಅಗಿದು, ಅದರ ಸುತ್ತ್ರೂ ಮುತ್ತು ಯೆತ್ತರವಾದದ್ದೊಂದು ಹೂಡೆಯ ಕಟ್ಟಿ, ಅದರಲ್ಲಿ ಹೆಣಗಳನ್ನು ಇಡಲಿಕ್ಕೆ ಸ್ಥಳವನ್ನು ಮಾಡುವರು. ಸತ್ತವರ ಹೆಣಗಳನ್ನು ಅಲ್ಲಿ ಇಟ್ಟ ಬಳಿಕ ಪಕ್ಷಿಗಳು ಅವುಗಳನ್ನು ತಿನ್ನುತ್ತ ಹೋದ ಹಾಗೆ ಅಸ್ಥಿಗಳು ಬಾವಿಯೊಳಗೆ ಬೀಳುತ್ತವೆ. ಈ ಶೀಮೆಯಲ್ಲಿ ಅಗ್ಯಾರಿಗಳಿಲ್ಲದ್ದರಿಂದ ಪಾರ್ಸೀ ಜನರು ಪುಣೆಗಾಗಲಿ ಮುಂಬಯಿಗಾಗಲಿ ಹೋಗಿ ಲಗ್ನ ಕಾರ್ಯಗಳನ್ನು ಮಾಡಿ ಕೊಂಡು ಬರುವರು. ಹೆಣಗಳನ್ನು ಇಡಲಿಕ್ಕೆ ಮೇಲೆ ಹೇಳಿದಂಥ ಹೂಡೆಗಳಿಲ್ಲದ್ದರಿಂದ ಅವುಗಳನ್ನು ಹುಗಿಯುವರು.

**ಪಾರ್ಸಿಗಳು.**

**ಬೆನಿ ಇಝ್ರಾಯಲರು ಅಥವಾ ಯಹೂದಿಯರು.**— ಇವರು ಮುಂಬಯಿಯಿಂದ ದಂಡಿನ ಕೂಡ ಇಲ್ಲವೆ ವ್ಯಾಪಾರದ ಸಲುವಾಗಿ ಬಂದು ಬೆಳಗಾವಿ ಕಾನಡಾ ಜಿಲ್ಲೆಗಳಲ್ಲಿ ಇರುತ್ತಾರೆ. ಇವರು ಮುಸಲ್ಮಾನರಂತೆ ನಿರಾಕಾರನಾದ ದೇವರನ್ನು ಆರಾಧಿಸುವರು; ತೋರಿಕೆಯಲ್ಲಿ ಸುರೂಪಿಗಳು, ಉದ್ಯೋಗಿಗಳು; ಕೈಗೆ ಸಿಕ್ಕ ಹೋರೆಯ ಮಾಡಿ ತಕ್ಕಮಟ್ಟಿಗೆ ಸುಖದಿಂದ ಜೀವಿಸುವರು. ಇವರು ಮಕ್ಕಳನ್ನು ಇಂಗ್ಲಿಷ ಶಾಲೆಗಳಿಗೆ ಕಳಿಸುವರು.

**ಬೆನಿ ಇಝ್ರಾಯಲರು.**

**ಚಿನಯಿ ಜನರು.**— ಇವರು ಸುಮಾರು ೨೫ ಜನರು ಕಾರವಾಡದಲ್ಲಿ ಇರುತ್ತಾರೆ. ಚೀನಾ ದೇಶದಲ್ಲಿ ಟಾಪೂ ಶಿಕ್ಷೆಯ ಹೊಂದಿದವರನ್ನು ಸರಕಾರದವರು ಕಾರವಾಡದಲ್ಲಿ ತಂದು ಇಟ್ಟಿದ್ದಾರೆ; ಇವರಲ್ಲಿ ಕೆಲವರು ರೋಮನ್ ಕ್ಯಾಥೊಲಿಕ ಧರ್ಮವನ್ನು ಸ್ವೀಕರಿಸಿದ್ದಾರೆ; ಕೆಲವರು ತಮ್ಮ ಪೂರ್ವದ ಬೌದ್ಧ ಧರ್ಮವನ್ನೇ ಪಾಲಿಸುತ್ತಾರೆ. ಖ್ರಿಸ್ತೀ ಆದವರು ಗೋವೆಯ ಖ್ರಿಸ್ತೀ ಹೆಣ್ಣುಗಳನ್ನು ಲಗ್ನ ಮಾಡಿ ಕೊಳ್ಳುವರು. ಇವರು ಕಲ್ಲು ಹೊಡಿಯುವರು, ಬಿದುರ ಬೆತ್ತಗಳನ್ನು ಹೆಣೆಯುವರು; ಓಣಿಗಳನ್ನು ಉಡುಗುವದು, ಮುಂತಾದ ಹೋರೆಗಳನ್ನು ಮಾಡುವರು; ಕೆಲವರು ತೋಟಗಳಲ್ಲಿ ಕೂಲಿಗೆ ಹೋಗುವರು. ಇವರಿಗೆ ಶಿಟ್ಟು ಬಹಳ; ಇವರು ತುಡುಗು ಕಳವು ಮಾಡುತ್ತಾರೆಂಬ ಸಂಶಯವಿದ್ದ ಕಾರಣ ಪೋಲೀಸರ ನಜರು ಇವರ ಮೇಲೆ ಯಾವಾಗಲೂ ಇರುತ್ತದೆ.

**ಚಿನಯಿ ಜನರು.**